ಶ್ರೀ ಸ್ವಾಮಿ ವಿವೇಕಾನಂದರ

# ಜ್ಞಾನಯೋಗ

ಅನುವಾದಕರು

ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು



ಆಧ್ಯಾತ್ಮ ಪ್ರಕಾಶ ಕಾರ್ಯಾಲಯ

ಹೋಳೆನರಸೀಪುರ - 573 211

# ಶ್ರೀ ರಾಮಕೃಷ್ಣ – ವಿವೇಕಾನಂದಸ್ವಾಮಿಗಳು

## (ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸ್ವಾಮಿಗಳು)

ಶ್ರೀ ರಾಮಕೃಷ್ಣ ಪರಮಹಂಸರು ಪುರಾತನ ಭರತಖಂಡದ ಸಂಸ್ಕೃತಿಯ ಹೆಗ್ಗುರುತಾದ ಅಧ್ಯಾತ್ಮವಿದ್ಯೆಯ ಜೀವಾಳವನ್ನು ದೇವಿಯ ಉಪಾಸನೆಯ ಮೂಲಕ ಕಂಡುಕೊಂಡು ತಮ್ಮ ಅನುಭವವನ್ನು ಜಗತ್ತಿಗೆಲ್ಲ ಬೀರಿದ ಮಹಾತ್ಮರು: ಸೂರ್ಯನು ಸುತ್ತಲೂ ತನ್ನ ಬೆಳಕನ್ನೂ ಬಿಸಿಯನ್ನೂ ಪಸರಿಸುತ್ತ ಲೋಕಜೀವಿಗಳಿಗೆ ಉಪಕಾರ ಮಾಡುವಂತೆ, ಕಲಕತ್ತೆಯ ದಕ್ಷಿಣೇಶ್ವರದ ಕಾಳಿಯ ಗುಡಿಯಲ್ಲಿದ್ದುಕೊಂಡು ಲೋಕವನ್ನೆಲ್ಲ ಉದ್ಧಾರಮಾಡಿದ ಮಹಾಮಹಿಮರು.

ಶ್ರೀ ವಿವೇಕಾನಂದಸ್ವಾಮಿಗಳವರು ಪರಮಹಂಸರ ಪ್ರಭಾವವನ್ನು ಪ್ರಪಂಚದ ಎಲ್ಲೆಡೆ ಒಯ್ದು, ಈಗಿನ ನವನಾಗರಿಕರಿಗೆ ತಿಳಿಯುವಂತೆ ಅವರ ಭಾಷೆಯಲ್ಲಿ, ಅವರಿಗೆ ಮೆಚ್ಚಾಗುವ ಶೈಲಿಯಲ್ಲಿ, ಎಲ್ಲರಿಗೂ ಪಂಚಿ ಜನರಲ್ಲಿ ನವಚೈತನ್ಯವನ್ನು ಎಬ್ಬಿಸಿದ ಧೀರರು : ಅನಾದಿಕಾಲದಿಂದ ಭರತಖಂಡದ ಮಹರ್ಷಿಗಳು ತಮ್ಮ ಹೃದಯದಲ್ಲಿ ಬಚ್ಚಿಟ್ಟಿದ್ದ ಧರ್ಮಾನುಷ್ಠಾನವೆಂಬ ಬೆಲೆಯುಳ್ಳ ಚಿನ್ನವನ್ನು ತಕ್ಕಂತೆ ಕಾಸಿ ಪುಟವಿಟ್ಟು ಈಗಿನ ನಾಗರಿಕತೆಯ ಪಡಿಯಚ್ಚಿನಲ್ಲಿ ಹೊಯ್ದು ಮಾನವ ಲೋಕಕ್ಕೆ ಒಪ್ಪಾದ ಒಡವೆಗಳನ್ನು ಮಾಡಿಕೊಟ್ಟ ಕುಶಲವಿದ್ಯೆಯ ಚತುರರು.

ಶ್ರೀ ರಾಮಕೃಷ್ಣ, ವಿವೇಕಾನಂದ – ಹೀಗೆ ಇಬ್ಬರು ಬೇರೆ ಬೇರೆ ವ್ಯಕ್ತಿಗಳಲ್ಲ ; ಒಬ್ಬನೇ ದೇವರಿಗೆ ಒಂದು ಮೂಲ ಮೂರ್ತಿಯೂ ಒಂದು ಉತ್ಸವಮೂರ್ತಿಯೂ ಇರುವಂತೆ, ಎರಡು ಆಕಾರವನ್ನು ಪಡೆದುಕೊಂಡ ಒಂದೇ ವಸ್ತು. ಈ ಮಹಾಮಹಿಮರಿಂದ ನಮಗೆ ಆದ ಉಪಕಾರಗಳಲ್ಲಿ ಮುಖ್ಯವಾದವುಗಳನ್ನು ಇಲ್ಲಿ ತಿಳಿಸುವೆವು.

1. ನಾನು ನನ್ನದು ಎಂಬ ಅಭಿಮಾನವನ್ನು ಪೂರ್ಣವಾಗಿ ಕಿತ್ತೊಗೆಯುವ ಸಂನ್ಯಾಸವು ಲೋಕಕುಟುಂಬಿಯಾಗುವದಕ್ಕೆ ಮೊದಲನೆಯ ಮೆಟ್ಟಿಲು ಎಂಬುದನ್ನು ನಡತೆಯಲ್ಲಿ ತೋರಿಸಿಕೊಟ್ಟಿದ್ದು.

2. ಧರ್ಮವೆಂದರೆ ಸಾಕ್ಷಾತ್ಕಾರವೇ ಹೊರತು ಹೊರಗಿನ ಆಚಾರವಲ್ಲ, ಗ್ರಂಥದ ಗಡಿಬಿಡಿಯೂ ಅಲ್ಲ – ಎಂಬುದನ್ನು ಜ್ಞಾಪಿಸಿದ್ದು.

3. ಎಲ್ಲಾ ಮತಗಳೂ ಒಬ್ಬ ಪರಮಾತ್ಮನನ್ನೇ ಸೇರುವದಕ್ಕೆ ಹೊರಟಿರುವ ಬೇರೆ ಬೇರೆ ದಾರಿಗಳೆಂಬುದನ್ನು ತಿಳಿಸಿ, ಮತಗಳ ಬಡಿದಾಟದ ಬಲವನ್ನು ಮುರಿದದ್ದು.

ಶ್ರೀ ವಿವೇಕಾನಂದ ಸ್ವಾಮಿಗಳು ಆತ್ಮಸ್ವರೂಪವನ್ನು ಎಲ್ಲರಿಗೂ ಬೋಧಿಸುವದರಿಂದ ಜನರಲ್ಲಿ ಧೈರ್ಯವೂ, ಶಕ್ತಿಯೂ, ಒಗ್ಗಟ್ಟೂ ತಮಗೆ ತಾವೇ ಕೈವಶವಾಗುವದೆಂದು, ಅಧ್ಯಾತ್ಮ ವಿದ್ಯೆಯೇ ಭರತಖಂಡದ ಜೀವಾಳವೆಂದೂ ಅದರ ಮೂಲಕವಾಗಿಯೇ ಸಮಾಜ ಸಂಸ್ಕಾರ, ರಾಜಕೀಯ ಸುಧಾರಣೆಗಳೆಲ್ಲವನ್ನೂ, ಇಂಡಿಯಾ ಜನರು ಪಡೆಯಬಹುದೆಂದೂ, ಅದು ಲೋಕದ ಲಕಲ್ಯಾಣಕ್ಕೂ ಕಾರಣವೆಂದೂ, ಜನರು ಹೊಟ್ಟೆಗಿಲ್ಲದೆ ಸಾಯುತ್ತಿರುವ ಕಾಲದಲ್ಲಿ ದರಿದ್ರನಾರಾಯಣರ ಸೇವೆಯೇ ವೇದಾಂತದ ಸಾರವೆಂತಲೂ ಉಪದೇಶಿಸುತ್ತಿದ್ದರು ; ಅದು ಅವರ ಜೀವಮಾನದ ಗುರಿಯಾಗಿತ್ತು.

ಶ್ರೀ ವಿವೇಕಾನಂದಸ್ವಾಮಿಗಳವರ

# ಜ್ಞಾನಯೋಗ

ಅನುವಾದಕರು :

ಶ್ರೀ ಶ್ರೀಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು

ಪೂರ್ವಾಶ್ರಮದ ಯಲ್ಲಂಬಳಸೆ ಸುಬ್ರಹ್ಮಣ್ಯ ಶರ್ಮ,

(ವೈ. ಸುಬ್ಬರಾವ್)

ಕ್ರಮಾಂಕ : 229

ಪ್ರಕಾಶಕರು :

ಅಧ್ಯಾತ್ಮ ಪ್ರಕಾಶ ಕಾರ್ಯಾಲಯ

ಪಬ್ಲಿಕ್ ಛಾರಿಟಬಲ್ ಟ್ರಸ್ಟ್

ಹೊಳೆನರಸೀಪುರ – 573211

ದೂರವಾಣಿ : 08175 – 273820

2008

ಮೊದಲನೆಯ ಮುದ್ರಣ : 1936 (1ನೇ ಭಾಗ) – 500 ಪ್ರತಿಗಳು
1940 (2ನೇ ಭಾಗ) – 500 ಪ್ರತಿಗಳು

ಎರಡನೆಯ ಮುದ್ರಣ : (ಎರಡು ಭಾಗಗಳೂ ಸೇರಿ) 2006–1000

ಮೂರನೆ ಮುದ್ರಣ : (ಎರಡು ಭಾಗಗಳೂ ಸೇರಿ) 2008–1000

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮ ಪ್ರಕಾಶ ಕಾರ್ಯಾಲಯದವು

ಜ್ಞಾನಯೋಗ

ಪುಟಗಳು : viii + 236

ಬೆಲೆ : 60 ರೂ.

ಅಕ್ಷರ ಜೋಡಣೆ : arka
ಕ್ರಿಯೇಶನ್ಸ್
98807 25199

ಮುದ್ರಕರು : ಸ್ಟಾಂಡರ್ಡ್ ಪ್ರಿಂಟರ್ಸ್,
ಶಂಕರಮಠ ರಸ್ತೆ,
ಬೆಂಗಳೂರು – 560 004
ದೂ : 2242 1527

# ಆಶೀರ್ವಚನ / ಮುನ್ನುಡಿ

ಸ್ವಾಮಿ ವಿವೇಕಾನಂದರು ನಾಲ್ಕು ಯೋಗಗಳನ್ನು ಕುರಿತು ಮಾಡಿರುವ ಉಪನ್ಯಾಸಗಳು ಸುಪ್ರಸಿದ್ಧ. ಅವುಗಳಲ್ಲಿ ಜ್ಞಾನಯೋಗದ ಉಪನ್ಯಾಸಗಳು ವೇದಾಂತದ ಮೂಲತತ್ತ್ವಗಳನ್ನು ಸರಳವಾಗಿ ಆಕರ್ಷಕವಾಗಿ ನಿರೂಪಿಸಿರುವುದಲ್ಲದೆ ಅಲ್ಲಲ್ಲಿ ಹೊಸ ಬೆಳಕನ್ನು ಚೆಲ್ಲಿವೆ.

ಆದುದರಿಂದಲೇ ಶ್ರೀ ಯಲ್ಲಂಬಳಸೆ ಸುಬ್ರಹ್ಮಣ್ಯ ಶರ್ಮಾ–ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳ ಪೂರ್ವಾಶ್ರಮದ ನಾಮಧೇಯ – ಅವರು ಈ ಉಪನ್ಯಾಸಮಾಲಿಕೆಯನ್ನು ಇಂಗ್ಲಿಷಿನಿಂದ ಕನ್ನಡಕ್ಕೆ, ಇಂಗ್ಲಿಷಿನ ಪರಿಚಯವಿಲ್ಲದ ಕನ್ನಡ ವೇದಾಂತ ಸಾಧಕರ ಆನುಕೂಲ್ಯಕ್ಕಾಗಿ, ಅನುವಾದಿಸಿ 1940 ರಲ್ಲೇ ಪ್ರಕಟಿಸಿದ್ದರು.

ಅನುವಾದವು ನಿರ್ದುಷ್ಟವಾದುದರಿಂದಲೂ, ಬಹುಕಾಲದಿಂದ ಪುಸ್ತಕವು ಅಚ್ಚಾಗದೆ ಸಿಗದುದರಿಂದಲೂ ಅಧ್ಯಾತ್ಮಪ್ರಕಾಶಕಾರ್ಯಾಲಯವು ಅದನ್ನು ಪುನರ್ಮುದ್ರಣ ಮಾಡಲು ನಿಶ್ಚಯಿಸಿರುವುದು ಸಂತೋಷದ ಸಂಗತಿ.

ಈ ಪುನರ್ಮುದ್ರಿತ ಗ್ರಂಥವೂ ವೇದಾಂತ ಜಿಜ್ಞಾಸುಗಳಿಗೆ ಪ್ರಿಯವಾಗಿ ಉಪಯುಕ್ತವಾಗುವುದೆಂದು ಹಾರಯಿಸುತ್ತೇವೆ.

ವ್ಯಯ ಸಂವತ್ಸರ
ಕಾರ್ತೀಕ ಬಹುಳ ಪಂಚಮೀ
10–11–06

ಸ್ವಾಮಿ ಹರ್ಷಾನಂದಪುರೀ
ರಾಮಕೃಷ್ಣಮಠ
ಬೆಂಗಳೂರು–19

# 1936, 1940 ರಲ್ಲಿ ಪ್ರಕಟವಾದ ಎರಡು ಭಾಗಗಳಿಗೆ ಶ್ರೀ ಶ್ರೀ ಗಳವರು ಬರೆದ ಪೀಠಿಕೆ

ಶ್ರೀ ವಿವೇಕಾನಂದಸ್ವಾಮಿಗಳವರ ಜ್ಞಾನಯೋಗದ ಉಪನ್ಯಾಸಗಳಲ್ಲಿ ಹನ್ನೆರಡನ್ನು ಈ ಪುಸ್ತಕದಲ್ಲಿ ಹೊರಕ್ಕೆ ತಂದಿರುತ್ತದೆ. ಈ ಭಾಗವು ಅಧ್ಯಾತ್ಮಪ್ರಕಾಶ ಪತ್ರಿಕೆಯಲ್ಲಿ ಪ್ರಕಟವಾದ ಭಾಗದಿಂದ ತೆಗೆದಚ್ಚುಗಳ ಸಂಗ್ರಹವಾಗಿರುತ್ತದೆ. ಉಪನ್ಯಾಸಗಳನ್ನು ಶ್ರೀವಿವೇಕಾನಂದಸ್ವಾಮಿಗಳವರ ಪೂರ್ಣಗ್ರಂಥಸಂಗ್ರಹ (Complete Works of Swami Vivekananda) ಎಂಬ ಮಾಯಾವತಿಯ ಅದ್ವೈತಾಶ್ರಮ (Advaita Ashrama, Mayavati, Almora, Himalayas) ಸಂಸ್ಕರಣದಿಂದ ಕನ್ನಡಿಸಿರುತ್ತದೆ.

ಈ ಭಾಗದಲ್ಲಿರುವ ಉಪನ್ಯಾಸಗಳನ್ನೂ, ಟಿಪ್ಪಣಿಗಳನ್ನು ವಿಜ್ಞರು, ವಿಮರ್ಶಾತ್ಮಕದೃಷ್ಟಿಯಿಂದ ಓದಿನೋಡಿ ಯುಕ್ತವೆಂದು ತೋರುವ ಸೂಚನೆಗಳನ್ನು ಕೊಟ್ಟರೆ ಕೃತಜ್ಞತೆಯಿಂದ ಮುಂದಿನ ಭಾಗದ ಅನುವಾದದಲ್ಲಿ ಅವುಗಳ ಪ್ರಯೋಜನವನ್ನು ಮಾಡಿಕೊಳ್ಳುವದಕ್ಕೆ ಸಿದ್ಧನಾಗಿರುತ್ತೇನೆ.

ಒಟ್ಟು ಗ್ರಂಥವು ಅಚ್ಚಾದ ಮೇಲೆ ಈ ಉಪನ್ಯಾಸಗಳ ಸಂಬಂಧವಾಗಿ ವಾಚಕರಿಗೆ ಅವಶ್ಯವಾಗಿರುವ ಕೆಲವು ವಿಚಾರಗಳನ್ನೊಳಗೊಂಡ ಒಂದು ಪ್ರವೇಶಿಕೆಯನ್ನು ಬರೆಯಬೇಕೆಂದಿರುವೆನು.

ಬೆಂಗಳೂರು,
ಧಾತು, ಭಾದ್ರಪದ ಶುಕ್ಲ ತೃತೀಯಾ. ಅನುವಾದಕ

# ಪ್ರಕಾಶಕರ ನಿವೇದನೆ

ಶ್ರೀ ಶ್ರೀ ಗಳವರ ಪೂರ್ವಾಶ್ರಮದಲ್ಲಿ – ಶ್ರೀ ವೈ. ಸುಬ್ಬರಾಯರು, ದಾವಣಗೆರೆಯಲ್ಲಿ ಶಾಲಾ ಉಪಾಧ್ಯಾಯರಾಗಿರುವಾಗ, ಅಲ್ಲಿಯ ಸಾಹುಕಾರರೂ, ನಡೆಯಲ್ಲಿಯೂ, ಅಂತರಂಗದಲ್ಲಿಯೂ ದೊಡ್ಡಮನುಷ್ಯರಾಗಿದ್ದ ಶ್ರೀ ಮಾಗಾನಹಳ್ಳಿ ದೊಡ್ಡ ಬಸಪ್ಪನೆಂಬವರ ಪರಿಚಯವಾಯಿತು. ಅವರಿಗೆ ಶ್ರೀ ಸುಬ್ಬರಾಯರ ಮೇಲೆ ಬಹಳ ವಿಶ್ವಾಸ, ಗೌರವ ಮೂಡಿತು. ಅದರ ಫಲವಾಗಿ, ಅವರು ಕಳೂರುಕಟ್ಟೆ (ಹೊಸನಗರ) ಯಲ್ಲಿ ತೊಂದರೆಯಲ್ಲಿದ್ದ ಶ್ರೀ ಸುಬ್ಬರಾಯರನ್ನು ದಾವಣಗೆರೆಗೆ ಕರೆಸಿಕೊಂಡು, ಅವರಿಗೆ ದ್ರವ್ಯ ಸಹಾಯವನ್ನೂ ನೀಡಿ ಅವರಿಗಾಗಿ ಮಾಡಿದ ಮನೆಯೊಂದರಲ್ಲಿ ಉಳಿಸಿದರು ; ಅವರಿಗೆ ಕೊಟ್ಟ ಕೆಲಸವೆಂದರೆ ಶ್ರೀ ವಿವೇಕಾನಂದ ಸ್ವಾಮಿಗಳವರ ಪುಸ್ತಕಗಳನ್ನು – ಪ್ರಧಾನವಾಗಿ ರಾಜಯೋಗವನ್ನು ಕನ್ನಡಕ್ಕೆ ಅನುವಾದ ಮಾಡುವದೇ. ಅದಕ್ಕಾಗಿ ಅವರೊಡನೆ Complete Works of Swami Vivekananda ಪುಸ್ತಕವೊಂದನ್ನು ಬಿಟ್ಟಿದ್ದರು. ಅದರಿಂದ ಉತ್ತೇಜಿತರಾದ ಸುಬ್ಬರಾಯರು 'ರಾಜಯೋಗ' ವನ್ನು ಸುಮಾರು 1914 ರಲ್ಲಿ ಅಚ್ಚುಮಾಡಿಸಿದರು, (ಹಾಗೆಯೇ ಭಕ್ತಿಯೋಗವೂ ಬಂತು. ಇದರ ಮುದ್ರಣದ ಖರ್ಚನ್ನು ಶ್ರೀ ದೊಡ್ಡ ಬಸಪ್ಪನವರೇ ವಹಿಸಿಕೊಂಡಿದ್ದರು). ಅಲ್ಲಿಂದ ಮುಂದೆ 'ಜ್ಞಾನಯೋಗ' ದಲ್ಲಿನ 18 ಉಪನ್ಯಾಸಗಳಲ್ಲಿ ಆರನ್ನು ಮೊದಲ ಸಂಪುಟವಾಗಿ 1936 ರಲ್ಲಿ, ಅನಂತರ 7 ರಿಂದ 12ರ ಆರು ಅಧ್ಯಾಯಗಳ ಎರಡನೆಯ ಸಂಪುಟವನ್ನು 1940 ರಲ್ಲಿ ಪ್ರಕಟಿಸಿದರು. ಈ ಮುಂಚೆ ಇವು 'ಅಧ್ಯಾತ್ಮ ಪ್ರಕಾಶ' ಪತ್ರಿಕೆಯಲ್ಲೂ (1935–36 ರ ಏಳನೇ ಸಂಪುಟದಲ್ಲೂ, 1939–40 ರ ಹತ್ತರಲ್ಲೂ, ಪ್ರಕಟವಾಗಿವೆ) ಪ್ರಕಾಶಿತವಾಗಿ, ಅದರ ಪಡಿಯಚ್ಚೇ, ಮುದ್ರಿತ ಪುಸ್ತಕವಾಗಿ ಬಂದಿತು. ಕೊನೆಯ ಆರು ಉಪನ್ಯಾಸಗಳನ್ನೂ ಶ್ರೀ ಶ್ರೀ ಗಳು ಅನುವಾದ ಮಾಡಿ, ಜೊತೆಗೆ ಒಂದು ಪ್ರವೇಶಿಕೆಯನ್ನೂ ಬರೆಯುವ ಉದ್ದೇಶವನ್ನಿಟ್ಟುಕೊಂಡಿದ್ದರು. ಅದು ಇದ್ದರೆ ಮುಂದಿನ ಭಾಗವಾಗಿ ಪ್ರಕಟಿಸಲಾಗುವದು.

ಈ ಮೊದಲ ಮುದ್ರಣದ ಪುಸ್ತಕಗಳ ಪ್ರತಿಗಳು ಮುಗಿದರೂ, ಬಹಳ ಕಾಲ ಎರಡನೆಯ ಮುದ್ರಣವಾಗಿರಲಿಲ್ಲ. ಕಾರಣ, ಅವರ ಈ ಪುಸ್ತಕಗಳು ದೊರೆತದ್ದೇ ಬಹಳ ತಡವಾಗಿ. ಅವುಗಳಲ್ಲಿ ಒಂದೊಂದು ಪ್ರತಿ ಹಳೆಯ ಪುಸ್ತಕಗಳು ಕಾರ್ಯಾಲಯದಲ್ಲಿ ದೊರೆತಾಗ, ಮೊದಲು 2004 ರಲ್ಲಿ ಭಕ್ತಿಯೋಗವನ್ನು ಪ್ರಕಟಿಸಿತು. ಈಗ 2006 ರಲ್ಲಿ ಜ್ಞಾನಯೋಗದ ಮೊದಲಿನೆರಡು ಸಂಪುಟಗಳೂ ಸೇರಿ ಒಂದೇ ಪುಸ್ತಕವಾಗಿ ಹೊರಬರುತ್ತಿದೆ.

ಸಾಧ್ಯವಾದರೆ, ಇದೇ ಸಾಲಿಗೆ ಸೇರಿದ ರಾಜಯೋಗ, ಕರ್ಮಯೋಗಗಳನ್ನೂ ಪುನಃ ಮುದ್ರಣ ಮಾಡುವ ಅಭಿಪ್ರಾಯವಿದ್ದರೂ 1914 ಮತ್ತು ಕೆಲವು ವರ್ಷಗಳ ಅಂತರದೊಳಗೆ ಪ್ರಕಟವಾದ ಪುಸ್ತಕಗಳ ಪ್ರತಿಗಳು ಕಾರ್ಯಾಲಯದಲ್ಲಿ ಸದ್ಯಕ್ಕೆ ದೊರಕುತ್ತಿಲ್ಲ. ಯಾರಲ್ಲಾದರೂ ಇದ್ದರೆ, ಅವರು ಕೃಪೆಯಿಂದ ಕಳಿಸಿಕೊಟ್ಟರೆ ಉಪಕಾರವಾಗುತ್ತದೆ. ಇದೇ ಸಾಲಿನ ಈ ನಾಲ್ಕಾರು ಪುಸ್ತಕಗಳು ಉತ್ತಮ ವಾದವೆಂದು ಪರಿಗಣಿಸಲ್ಪಟ್ಟಿದ್ದರೂ, ಅದೇಕೋ ಓದುವವರ ಸಂಖ್ಯೆ ಬಹಳ ಕಡಿಮೆಯೇ ಎನಿಸುತ್ತದೆ.

ಈ ಶ್ರೇಷ್ಠ ಪುಸ್ತಕದ ಮೌಲ್ಯಕ್ಕನುಗುಣವಾದ, ಮುನ್ನುಡಿಯನ್ನು, ತಾವೇ ತಮ್ಮ ಸ್ವಂತ ಹಕ್ಕಿನಲ್ಲಿ ಅಪರೂಪದ, ಅತ್ಯುತ್ತಮ, ಶ್ರೇಷ್ಠ ವಿದ್ವಾಂಸರುಗಳ ಸಾಲಿಗೆ ಸೇರಿದ, ಸರಳ ಸಂಪನ್ನರಾದ, ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರೂ, ತಮ್ಮ ಅನೇಕ ಗ್ರಂಥಗಳಲ್ಲಿ ಮಹತ್ ಕೃತಿಯಾದ 'ಹಿಂದೂ ಧರ್ಮದ ವಿಶ್ವಕೋಶ' ದ ಗ್ರಂಥಕರ್ತರೂ ಆದ, ಶ್ರೀ ಸ್ವಾಮಿ ಹರ್ಷಾನಂದಜಿಯವರು ದಯಪಾಲಿಸಿದ್ದಾರೆ. ಸ್ವಾಮೀಜಿಯವರಿಗೆ ದೇಹಾಲಸ್ಯವಿದ್ದರೂ, ಕಾರ್ಯಾಲಯದ ಪ್ರಾರ್ಥನೆಯನ್ನು ಶ್ರೀ ಶ್ರೀ ಗಳವರ ಮೇಲಿನ ಗೌರವ, ಕಾರ್ಯಾಲಯಕ್ಕಿರುವ ತಮ್ಮ ಅಭಿಮಾನದಿಂದ ಕೂಡಲೇ ಒಪ್ಪಿ ಬರೆದಿದ್ದಾರೆ. ಈ ಸೌಜನ್ಯ ಯತಿಶ್ರೇಷ್ಠರಿಗೆ ಕಾರ್ಯಾಲಯದ ಹೃತ್ಪೂರ್ವಕ ಕೃತಜ್ಞತೆಗಳು. ಹಾಗೆಯೇ ಶ್ರೀ ಸ್ವಾಮಿ ವಿವೇಕಾನಂದರಲ್ಲಿನ ಅತುಳ ಗೌರವದಿಂದ ಬೆಂಗಳೂರು, ಅಲಸೂರು ಪೇಟೆಯ ಶ್ರೀ ರಾಮಕೃಷ್ಣಮಠದ ಶ್ರೀ ಸ್ವಾಮಿ ತ್ಯಾಗೀಶ್ವರಾನಂದಜಿ ಯವರು ಪುಸ್ತಕದ ಪರಿಚಯ ಬಿಡುಗಡೆಯನ್ನು ಮಾಡಲು ಕೃಪೆಯಿಂದ ಒಪ್ಪಿದ್ದಾರೆ. ಇದೆಲ್ಲವೂ ಕಾರ್ಯಾಲಯದ ಸೌಭಾಗ್ಯ, ಅವರಿಗೂ ಕೃತಜ್ಞತೆಯ ವಂದನೆಗಳು.

ಈ ಪುಸ್ತಕಕ್ಕಾಗಿ ಅಕ್ಷರ ಜೋಡಣೆಯನ್ನು ಶ್ರೀ ಸುರೇಶ್, ಶ್ರೀಮತಿ ಭಾರ್ಗವಿ ದಂಪತಿಗಳು ಸುಂದರವಾಗಿ ಮಾಡಿಕೊಟ್ಟಿದ್ದಾರೆ. ಹಾಗೆಯೇ, ಬಹು ಶೀಘ್ರ ಕಾಲದಲ್ಲಿ ಮುದ್ರಿತ ಪುಸ್ತಕವನ್ನು ಸ್ಟಾಂಡರ್ಡ್ ಪ್ರೆಸ್‌ನ ಶ್ರೀ ನಾಗರಾಜ್‌ರು ತಂದಿರುವದೂ ಗಮನಾರ್ಹ ಉಪಕಾರ. ಇವರೆಲ್ಲರಿಗೂ ಕಾರ್ಯಾಲಯದ ವಂದನೆಗಳು. ಅವರ ಪ್ರಗತಿ ಮತ್ತು ಯಶಸ್ಸಿಗೆ ಶ್ರೀ ಶ್ರೀ ಗಳವರ ಆಶೀರ್ವಾದವನ್ನು ಬೇಡಿದೆ.

ಬೆಂಗಳೂರು, 19-11-06

ಪ್ರಕಾಶಕರು,

ಅ. ಪ್ರ. ಕಾ. ಹೊಳೆನರಸೀಪುರ

# ಉಪನ್ಯಾಸಗಳ ಅನುಕ್ರಮಣಿಕೆ


| ವಿಷಯ | ಪುಟ |
|---|---|
| 1. ಧರ್ಮದ ಅವಶ್ಯಕತೆ | 1 |
| 2. ಮಾನವನ ಪರಮಾರ್ಥಸ್ವರೂಪ | 18 |
| 3. ಮಾಯೆಯೂ ಇಂದ್ರಜಾಲವೂ | 43 |
| 4. ಮಾಯೆಯೂ ಈಶ್ವರಭಾವನೆಯ ವಿಕಾಸವೂ | 67 |
| 5. ಮಾಯೆಯೂ ಮುಕ್ತಿಯೂ | 85 |
| 6. ಬ್ರಹ್ಮವೂ ಸೃಷ್ಟಿಯೂ | 101 |
| 7. ಎಲ್ಲದರಲ್ಲಿಯೂ ಈಶ್ವರನು | 121 |
| 8. ಸಾಕ್ಷಾತ್ಕಾರ | 135 |
| 9. ನಾನಾತ್ವದಲ್ಲಿರುವ ಏಕತ್ವ | 165 |
| 10. ಆತ್ಮಸ್ವಾತಂತ್ರ್ಯ | 184 |
| 11. ಪ್ರಪಂಚ : ಬ್ರಹ್ಮಾಂಡ | 204 |
| 12. ಪ್ರಪಂಚ : ಪಿಂಡಾಂಡ | 216 |


ಈ ಉಪನ್ಯಾಸಗಳನ್ನು ಶ್ರೀ ಸ್ವಾಮಿ ವಿವೇಕಾನಂದರು 1896 ರ ಅಕ್ಟೋಬರ್ – ನವೆಂಬರ್‌ನಲ್ಲಿ ಮೊದಲ ಹತ್ತನ್ನು ಲಂಡನ್‌ನಲ್ಲಿ, 1896 ಜನವರಿಯಲ್ಲಿ ಕೊನೆಯ ಎರಡನ್ನು (11, 12) ನ್ಯೂಯಾರ್ಕ್‌ನಲ್ಲಿ ನೀಡಿದ್ದರು. ಅವುಗಳ ಕನ್ನಡಾನುವಾದಗಳು ಇಲ್ಲಿವೆ.

## ಶ್ರೀ ವಿವೇಕಾನಂದಸ್ವಾಮಿಗಳವರ ಬೆಳಕಿನ ಕಿರಣಗಳು :

ಶ್ರೀ ವಿವೇಕಾನಂದ ಸ್ವಾಮಿಗಳು ಆತ್ಮಸ್ವರೂಪವನ್ನು ಎಲ್ಲರಿಗೂ ಬೋಧಿಸುವದರಿಂದ ಜನರಲ್ಲಿ ಧೈರ್ಯವೂ ಶಕ್ತಿಯೂ ಒಗ್ಗಟ್ಟೂ ತಮಗೆ ತಾವೇ ಕೈವಶವಾಗುವವೆಂದು ಹೇಳುತ್ತಿದ್ದರು. ಅಧ್ಯಾತ್ಮ ವಿದ್ಯೆಯೇ ಭರತಖಂಡದ ಜೀವಾಳವೆಂದೂ ಅದರ ಮೂಲಕವಾಗಿಯೇ ಸಮಾಜ ಸಂಸ್ಕಾರ, ರಾಜಕೀಯ ಸುಧಾರಣೆಗಳೆಲ್ಲವನ್ನೂ ಇಂಡಿಯಾ ಜನರು ಪಡೆಯಬಹುದೆಂದೂ ಅದು ಲೋಕದ ಕಲ್ಯಾಣಕ್ಕೂ ಕಾರಣವೆಂದೂ, ಜನರು ಹೊಟ್ಟೆಗಿಲ್ಲದೆ ಸಾಯುತ್ತಿರುವ ಕಾಲದಲ್ಲಿ ದರಿದ್ರನಾರಾಯಣರ ಸೇವೆ ವೇದಾಂತದ ಸಾರವೆಂತಲೂ ಉಪದೇಶಿಸುತ್ತಿದ್ದರು.

ಪ್ರತಿಯೊಂದು ಧರ್ಮದಲ್ಲಿಯೂ ಮೂರು ಭೂಮಿಕೆಗಳಿರುವುವು; ಮೊದಲು ದೇವರು ಅತ್ಯಂತ ದೂರದಲ್ಲಿರುವನೆಂದು ತೋರುವದು, ಆಮೇಲೆ ನಾವು ಆತನ ಹತ್ತಿರ ಹತ್ತಿರಕ್ಕೆ ಬಂದು ಅವನಿಗೆ ಸರ್ವ ವ್ಯಾಪಕತ್ವವನ್ನು ಕೊಡುವೆವು, ಆಗ ನಾವು ಆತನಲ್ಲಿಯೇ ಇದ್ದುಕೊಂಡಿರುವೆವು, ಕೊನೆಗೆ ನಾವೇ ಆತನೆಂಬುದನ್ನು ಕಂಡುಕೊಳ್ಳುವೆವು. ಹೊರಗೆ ದೇವರಿದ್ದಾನೆಂಬ ಭಾವನೆಯೇನೂ ಸುಳ್ಳಲ್ಲ. ನಾನೇ ದೇವರಾಗಿದ್ದರೆ ನನ್ನ ಅಂತಃಕರಣವು ದೇವಾಲಯ, ನನ್ನ ಪ್ರತಿಯೊಂದು ವ್ಯಾಪಾರವೂ ಆರಾಧನೆ - ಹೀಗೆ ನಮ್ಮ ಧರ್ಮವೆಂದರೆ ವಿಕಾಸವಾಗುವದು, ಸಾಕ್ಷಾತ್ಕರಿಸುವದು, ನೇರಾಗಿ ಕಂಡುಕೊಳ್ಳುವದು, ಸುಮ್ಮನೆ ಮಾತುಗಳನ್ನು ಮಣಗುಟ್ಟುವದಲ್ಲ ಮೊಳಕಾಲು ಮಡಿಯುವದಲ್ಲ. ಮಾನವನು ದಿನದಿನಕ್ಕೂ ಈಶ್ವರತ್ವವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾ ಅನಂತಕಾಲದ ಅಭ್ಯಾಸದಿಂದ ಪರಮೇಶ್ವರನಾಗತಕ್ಕದ್ದು.

– ಸ್ವಾಮಿ ವಿವೇಕಾನಂದ.

# ಜ್ಞಾನಯೋಗದ ಉಪನ್ಯಾಸಗಳು

# 1

# ಜ್ಞಾನಯೋಗ

## 1. ಧರ್ಮದ ಆವಶ್ಯಕತೆ

ಮನುಷ್ಯನ ಆಗುಹೋಗುಗಳನ್ನು ಸೂಚಿಸುವದರಲ್ಲಿ ಹಿಂದೆ ಕೆಲಸಮಾಡಿಸುವ ಈಗಲೂ ಕೆಲಸಮಾಡುತ್ತಿರುವ ಶಕ್ತಿಗಳಲ್ಲೆಲ್ಲ, ನಾವು ಯಾವುದರ ವ್ಯಕ್ತಿಸ್ಥಿತಿಯನ್ನು ಧರ್ಮವೆನ್ನುವೆವೋ ಅದಕ್ಕಿಂತ ಪ್ರಬಲವಾದದ್ದು ಮತ್ತೊಂದಿರುವುದಿಲ್ಲ. ಸಮಾಜ ಸಂಘಟನೆಗಳಿಗೆಲ್ಲ, ಎಲ್ಲಿಯಾದರೂ ಒಂದು ಕಡೆಯಲ್ಲಿ ಈ ಶಕ್ತಿ ವಿಶೇಷದ ವ್ಯಾಪಾರಗಳೇ ಭಿತ್ತಿಯಾಗಿರುವುವು; ನವವ್ಯಕ್ತಿಗಳನ್ನು ಕೂಡಿಸುವ ಅತ್ಯಂತ ಬಲವಾದ ಸ್ನೇಹಾಕರ್ಷಣ ಶಕ್ತಿಯೆಂಬುದು ಈ ಶಕ್ತಿಯಿಂದಲೇ ಒಡೆದು ಬಂದದ್ದಾಗಿರುತ್ತದೆ. ಎಷ್ಟೋ ಸಂದರ್ಭಗಳಲ್ಲಿ ಧರ್ಮಸಂಬಂಧಗಳೇ ಕುಲ, ದೇಶ ಅಥವಾ ವಂಶ-ಇವುಗಳ ಸಂಬಂಧಗಳಿಗಿಂತಲೂ ಮಿಗಿಲಾಗಿ ಬಿಟ್ಟವೆಂಬುದು ನಮಗೆಲ್ಲರಿಗೂ ಸ್ಫುಟವಾಗಿರುವ ವಿಷಯವಾಗಿದೆ. ಒಬ್ಬನೇ ದೇವರನ್ನು ಪೂಜಿಸುವರಾಗಿ ಒಂದೇ ಧರ್ಮದಲ್ಲಿ ನಂಬಿಕೆಯಿರುವವರು, ಅದೇ ವಂಶಕ್ಕೆ ಸೇರಿದವರಿಗಿಂತಲೂ, ಅಷ್ಟೇಕೆ, ಅಣ್ಣ ತಮ್ಮಂದಿರಿಗಿಂತಲೂ ಪರಸ್ಪರ ಸಹಾಯಕರಾಗಿರುವದು ಸುಪ್ರಸಿದ್ಧವಾದ ಸಂಗತಿಯಾಗಿರುತ್ತದೆ.

ಧರ್ಮದ ಉತ್ಪತ್ತಿಯು ಹೇಗಾಯಿತೆಂಬುದನ್ನು ಗೊತ್ತು ಪಡಿಸುವದಕ್ಕೆ ಬಗೆಬಗೆಯ ಪ್ರಯತ್ನಗಳನ್ನು ಇದುವರೆಗೆ ಮಾಡಿರುತ್ತಾರೆ, ಈಗ್ಗೆ ನಮ್ಮವರೆಗೂ ಪಡೆದುಕೊಂಡು ಬಂದಿರುವ ಮತಗಳಲ್ಲೆಲ್ಲ ಒಂದಾನೊಂದು ವಿಶೇಷವನ್ನು ಹೇಳಿಕೊಂಡು ಬಂದಿದೆ. ಅದೇನೆಂದರೆ ತಾವು ಅಪ್ರಾಕೃತವೆಂದು ಅವುಗಳೆಲ್ಲ ಹೇಳಿಕೊಂಡಿದೆ; ಅವು ಮಾನವನ ಮೆದುಳಿನಲ್ಲಿ ಉತ್ಪನ್ನವಾಗಲಿಲ್ಲವೆಂದೂ ಅದರ ಹೊರಗೆ ಮತ್ತೆಲ್ಲಿಂದಲೋ ಅವು ಬಂದಿರುವವೆಂದು ಆಯಾ ಮತಸ್ಥರು ಹೇಳಿಕೊಂಡಿರುತ್ತಾರೆ. ಈಗಿನ ವಿದ್ವಾಂಸರಿಗೆ ಎರಡು ಸಿದ್ಧಾಂತಗಳು ಸ್ವಲ್ಪ ಮಟ್ಟಿಗೆ ಒಪ್ಪಾಗಿರುತ್ತವೆ. ಇವುಗಳಲ್ಲಿ ಪ್ರೇತಾತ್ಮವಾದದಿಂದ ಧರ್ಮವನ್ನು ಕಲ್ಪನೆಮಾಡುವುದು ಒಂದು, ಅನಂತವೆಂಬ ಭಾವನೆಯ ವಿಕಾಸವನ್ನು ವಿವರಿಸುವದು ಮತ್ತೊಂದು. ಪಿತೃಪೂಜೆಯೇ ಧಾರ್ಮಿಕ ಭಾವನೆಗಳಿಗೆ ಮೂಲವೆಂದು ಒಂದು ಪಂಗಡದವರು ಹೇಳುತ್ತಾರೆ; ಪ್ರಕೃತಿಯ ಶಕ್ತಿವಿಶೇಷಗಳನ್ನು ಪುರುಷರಾಗಿ ಭಾವಿಸುವದರಿಂದ ಧರ್ಮವು ಉತ್ಪನ್ನವಾಗಿರುವದೆಂದು ಮತ್ತೊಂದು ಪಂಗಡದವರು ಹೇಳುತ್ತಾರೆ. ಮನುಷ್ಯನು ಮೃತರಾದ ತನ್ನ ಬಂಧುಗಳ ನೆನಪು ತನಗೆ ಉಳಿಯಲೇಬೇಕೆಂದು ಬಯಸುತ್ತಾನೆ. ಶರೀರವು ಕಳಚಿಹೋದ ಮೇಲೂ ಅವರು ಇನ್ನೂ

ಬದುಕಿರುವರೆಂದು ಅವನ ಭಾವನೆ. ಆದ್ದರಿಂದ ಅವರಿಗೆ ಆಹಾರವನ್ನು ಕೊಡಬೇಕು, ಅವರನ್ನು ಒಂದು ಬಗೆಯಿಂದ ಗೌರವಿಸಬೇಕು ಎಂದು ಅಭಿಲಾಷೆ ಇರುತ್ತದೆ. ಇದರಿಂದ ನಾವೀಗ ಧರ್ಮವೆಂದು ಕರೆಯುತ್ತಿರುವದು ಬೆಳೆದುಕೊಂಡಿರುತ್ತದೆ. ಈಜಿಪ್ಟಿನವರು, ಬ್ಯಾಬಿಲೋನಿಯದವರು, ಚೀನದವರು ಅಮೇರಿಕದಲ್ಲಿಯೂ ಮತ್ತೆ ಬೇರೆ ಕಡೆಯಲ್ಲಿಯೂ ಇರುವ ಇನ್ನೂ ಬೇರೆ ಬೇರೆ ಕಾಲದವರು ಇವರುಗಳ ಆಚಾರವನ್ನು ಲಕ್ಷ್ಯವಿಟ್ಟು ನೋಡಿದರೆ ಈ ಪಿತೃಪೂಜೆಯೇ ಧರ್ಮಕ್ಕೆ ಹೇಗೆ ಮೂಲಕಾರಣವಾಯಿತೆಂಬುದಕ್ಕೆ ಬಹುಸ್ಫುಟವಾದ ಹೆಗ್ಗುರುತುಗಳು ಕಂಡುಬರುತ್ತವೆ. ಪ್ರಾಚೀನ ಈಜಿಪ್ಟದಲ್ಲಿ ಮೊಟ್ಟ ಮೊದಲು ಇದ್ದ ಜೀವಭಾವನೆಯು ಪ್ರತಿಬಿಂಬವಾದವನ್ನವಲಂಬಿಸಿತ್ತು. ಪ್ರತಿಯೊಂದು ಮಾನವಶರೀರಕ್ಕೂ ಬಹುಮಟ್ಟಿಗೆ ಅದನ್ನು ಹೋಲುವ ಮತ್ತೊಂದು ಶರೀರವಿರುವದೆಂದೂ ಮನುಷ್ಯನು ಸತ್ತ ಮೇಲೆ ಅವನ ಈ ಪ್ರತಿಬಿಂಬ ಜೀವವು ಶರೀರವನ್ನು ಬಿಟ್ಟು ಹೋಗುವದಾದರೂ ಬದುಕಿಯೇ ಇರುವದೆಂದೂ ಅವರು ಭಾವಿಸಿದ್ದರು. ಆದರೆ ಸತ್ತವನ ಶವವು ಸರಿಯಾದ ಸ್ಥಿತಿಯಲ್ಲಿರುವವರೆಗೆ ಮಾತ್ರವೇ ಈ ಪ್ರತಿಬಿಂಬವು ಜೀವಿಸಿರುತ್ತದೆಯೆಂದು ಅವರು ಎಣಿಸಿದ್ದ ಕಾರಣ ಅವರು ಈಗ ನಮಗೆ ಕಾಣಿಸುತ್ತಿರುವ ದೊಡ್ಡ ದೊಡ್ಡ ಪಿರಮಿಡ್ಡು (ಗಳೆಂಬ ರಕ್ಷಣಾಸ್ಥಾನ)ಗಳನ್ನು ಕಟ್ಟಿಸಿ ಶರೀರಗಳನ್ನು ಕಾಪಾಡುತ್ತಾ ಬಂದರು. ಹೊರಗಿನ ಶರೀರದ ಯಾವದಾದರೊಂದು ಭಾಗಕ್ಕೆ ಅಪಾಯವಾದರೆ ಈ ಪ್ರತಿಬಿಂಬಶರೀರದಲ್ಲಿಯೂ ಆಯಾ ಭಾಗಕ್ಕೆ ಅಪಾಯವಾಗುತ್ತದೆಯೆಂದು ಅವರ ಭಾವನೆ. ಇದು ಪೂರ್ವಿಕರ ಪೂಜೆಯೆಂಬುದು ಸ್ಪಷ್ಟವಾಗಿರುತ್ತದೆ. ಬಾಬಿಲೋನಿಯ ಜನರಲ್ಲಿಯೂ ಈ ಪ್ರತಿಬಿಂಬ ಭಾವನೆಯು ಕಂಡುಬರುತ್ತದೆ; ಆದರೆ ಅದರಲ್ಲಿ ಸ್ವಲ್ಪ ವಿಶೇಷವುಂಟು. ಅವರ ಮತದಲ್ಲಿ ಈ ಪ್ರತಿಬಿಂಬದಲ್ಲಿ ಪ್ರೇಮವೆಂಬುದು ಒಂದಿಷ್ಟೂ ಇಲ್ಲದಂತೆ ಹೋಗಿಬಿಡುತ್ತದೆ. ಅದು ತನಗೆ ಅನ್ನ ಪಾನಗಳನ್ನು ಮಾಡಬೇಕೆಂದೂ ಇನ್ನು ಬೇರೆ ರೀತಿಯಲ್ಲಿ ಸಹಾಯ ಮಾಡಬೇಕೆಂದೂ ಬಂಧುಗಳನ್ನು ಬೆದರಿಸುತ್ತದೆ. ಅದಕ್ಕೆ ತನ್ನ ಹೆಂಡಿರುಮಕ್ಕಳಲ್ಲಿ ಕೂಡ ಪ್ರೇಮವಿರುವುದಿಲ್ಲ. ಪ್ರಾಚೀನ ಹಿಂದುಗಳಲ್ಲಿಯೂ ಈ ಪಿತೃಪೂಜೆಯ ಕೆಲವು ಗುರುತುಗಳು ಕಂಡುಬರುತ್ತವೆ. ಚೀನ ದೇಶದವರಲ್ಲಿ ಅವರ ಮತದ ಆಧಾರವೇ ಪಿತೃಪೂಜೆಯೆಂದು ಹೇಳಬಹುದಾಗಿರುತ್ತದೆ; ಆ ವಿಸ್ತಾರವಾದ ದೇಶದಲ್ಲಿ ಎಲ್ಲೆಲ್ಲಿಯೂ ಅದು ಈಗಲೂ ವ್ಯಾಪಿಸಿರುತ್ತದೆ. ನಿಜವಾಗಿ ನೋಡಿದರೆ, ಚೀನದಲ್ಲಿ ಈಗ ನಿಜವಾಗಿರುವ ಮತವೆಂದರೆ ಪೂರ್ವಿಕರ ಪೂಜೆಯೇ ಎಂದು ಹೇಳಬಹುದಾಗಿರುತ್ತದೆ. ಹೀಗೆ ಒಂದು ಬಗೆಯಲ್ಲಿ ನೋಡಿದರೆ ಪಿತೃಪೂಜೆಯೇ

ಧರ್ಮಕ್ಕೆ ಮೂಲವೆಂದು ಹೇಳುವವರ ಪಕ್ಷಕ್ಕೆ ಒಳ್ಳೆಯ ಬೆಂಬಲವೂ ಸಿಕ್ಕ ಹಾಗೆ ಕಾಣುತ್ತದೆ.

ಆದರೆ ಮತ್ತೊಂದು ಪಂಗಡದ ವಿದ್ವಾಂಸರು ಆರ್ಯರ ವಾಙ್ಮಯವನ್ನು ಶೋಧಿಸಿ ಧರ್ಮವೆಂಬುದು ಪ್ರಕೃತಿ ಪೂಜೆಯಿಂದಲೇ ಹುಟ್ಟಿತೆಂಬುದನ್ನು ತೋರಿಸಿಕೊಡುತ್ತಿದ್ದಾರೆ. ಇಂಡಿಯ ದೇಶದಲ್ಲಿ ಪಿತೃಪೂಜೆಗೆ ಆಧಾರಗಳು ಎಲ್ಲೆಲ್ಲಿಯೂ ಕಂಡುಬರುತ್ತವೆಯಾದರೂ ಅತ್ಯಂತ ಪುರಾತನ ಗ್ರಂಥಗಳಲ್ಲಿ ಅದರ ಸೆಲೆಯೇ ಇರುವದಿಲ್ಲ. ಆರ್ಯಕುಲದವರ ಅತ್ಯಂತ ಪ್ರಾಚೀನಗ್ರಂಥವಾದ **ಋಗ್ವೇದಸಂಹಿತೆ**ಯಲ್ಲಿ ಅದರ ಚಿಹ್ನೆಯು ಒಂದಿಷ್ಟೂ ಕಾಣಬರುವದಿಲ್ಲ. ಅದರಲ್ಲಿ ಪ್ರಕೃತಿಪೂಜೆಯೇ ಕಂಡುಬರುತ್ತದೆಯೆಂದು ಆಧುನಿಕ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಅಲ್ಲಿ ನೋಡಿದರೆ ಹೊರಗೆ ಕಾಣುವ ದೃಶ್ಯಗಳ ಹಿಂದೆ ಏನಿದೆಯೋ ಇಣಿಕಿ ನೋಡಬೇಕೆಂದು ಮಾನವನ ಮನಸ್ಸು ತವಕಿಸುತ್ತಿರುವಂತೆ ಕಾಣುವದು. ಉಷಃಕಾಲ, ಸಂಧ್ಯಾಕಾಲ, ಬಿರುಗಾಳಿ, ಪ್ರಕೃತಿಯ ಮಹತ್ತಮವಾದ ಅದ್ಭುತ ಶಕ್ತಿಗಳು, ಅದರ ಸೌಂದರ್ಯ–ಇವು ಮಾನವನ ಮನಸ್ಸಿಗೆ ತಕ್ಕಷ್ಟು ಕೆಲಸವನ್ನು ಕೊಟ್ಟದ್ದಾಗಿದೆ. ಅದು ಅವುಗಳನ್ನು ದಾಟಿಹೋಗಬೇಕೆಂದೂ ಅವುಗಳ ವಿಚಾರದಲ್ಲಿ ಏನಾದರೂ ತಿಳಿದುಕೊಳ್ಳಬೇಕೆಂದೂ ಅಭಿಲಾಷೆಪಡುತ್ತಿದೆ. ಈ ಹೆಣಗಾಟದಲ್ಲಿ ಈ ದೃಶ್ಯಗಳಿಗೆ ಪುರುಷನ ವಿಶೇಷಣಗಳನ್ನು ಕೊಟ್ಟಿರುತ್ತಾರೆ; ಅವುಗಳಿಗೆ ಆತ್ಮಶರೀರಗಳು ಉಂಟೆಂದೂ ಇವುಗಳು ಕಲ್ಯಾಣತರವಾಗಿರುವವೆಂದು ಒಮ್ಮೆ, ಅತೀಂದ್ರಿಯವಾಗಿರುವವೆಂದು ಮತ್ತೊಮ್ಮೆ – ಹೀಗೆಲ್ಲ ಕಲ್ಪಿಸಿರುತ್ತಾರೆ. ಇವುಗಳನ್ನು ಪುರುಷರೆಂತ ರೂಪಿಸಲಿ, ಬಿಡಲಿ, ಪ್ರತಿಯೊಂದು ಪ್ರಯತ್ನವೂ ಈ ದೃಶ್ಯಗಳನ್ನು ಸ್ವತಂತ್ರವಾಗಿರುವ ಭಾವಗಳೆಂದು ಕಲ್ಪಿಸಿಯೇ ಕೊನೆಗಾಣುವದು. ಪ್ರಾಚೀನ ಗ್ರೀಕರಲ್ಲಿಯೂ ಹೀಗೆಯೇ ಆಗಿರುವದೆಂದು ಕಂಡುಬರುತ್ತದೆ; ಅವರ ಪುರಾಣದಲ್ಲೆಲ್ಲ ಹೀಗೆ ಪ್ರಕೃತಿಯನ್ನು ಪೃಥಕ್ಕರಿಸಿ ಕಲ್ಪಿಸಿದ ಭಾವಗಳ ಅರ್ಚನೆಯೇ ಇರುವದು. ಪುರಾತನ ಜರ್ಮನರು, ಸ್ಕ್ಯಾಂಡಿನೇವಿಯನ್ ಜನರು ಮುಂತಾದ ಆರ್ಯ ಕುಲದವರಲ್ಲೆಲ್ಲ ಹೀಗೆಯೇ ಕಂಡುಬರುತ್ತದೆ. ಈ ರೀತಿಯಲ್ಲಿ ನೋಡಿದರೆ ಈ ಪಕ್ಷಕ್ಕೂ ಪರ ಬಲವು ದೊರೆಯುತ್ತದೆ; ಪ್ರಕೃತಿಯ ಶಕ್ತಿಗಳನ್ನು ಪುರುಷರಾಗಿ ಭಾವಿಸುವದೇ ಧರ್ಮಕ್ಕೆ ಮೂಲವೆಂದು ಏರ್ಪಡುತ್ತದೆ.

ಈ ಎರಡು ಅಭಿಪ್ರಾಯಗಳೂ ಒಂದಕ್ಕೊಂದು ವಿರುದ್ಧವಾಗಿರುವಂತೆ ತೋರಿದರೂ ಮೂರನೆಯದೊಂದು ಆಧಾರದ ಮೇಲಿಂದ ಇವೆರಡನ್ನೂ ಸಮರಸ ಮಾಡಬಹುದಾಗಿರುತ್ತದೆ; ಇದೇ ಧರ್ಮದ ನಿಜವಾದ ಬೀಜವೆಂದು ನನ್ನ ಅಭಿಪ್ರಾಯವಿರುವದು. ಇಂದ್ರಿಯಗಳ ಕ್ಲಿಪ್ತಿಯನ್ನು ಮೀರುವ ಹೋರಾಟವೆಂದು

ಇದಕ್ಕೆ ನಾನು ಹೆಸರಿಡಬೇಕೆಂದಿರುವೆನು. ಮನುಷ್ಯನು ತನ್ನ ಪೂರ್ವಿಕರ ಪ್ರೇತ ಜೀವಗಳನ್ನು, ಸತ್ತವರ ಜೀವಗಳನ್ನು ಹುಡುಕಿಕೊಂಡು ಹೋಗುತ್ತಾನೆ; ಎಂದರೆ ಶರೀರವು ನಾಶವಾದ ಬಳಿಕ ಉಳಿಯುವದೇನೆಂಬುದನ್ನು ಒಂದಿಷ್ಟು ನೋಡಬೇಕೆಂದು ಇಚ್ಛೆಪಡುತ್ತಾನೆ. ಇಲ್ಲವೆ, ಪ್ರಕೃತಿಯು ಅದ್ಭುತದೃಶ್ಯವಿಶೇಷಗಳ ಹಿಂಗಡೆಯಲ್ಲಿ ಕೆಲಸಮಾಡುತ್ತಿರುವ ಶಕ್ತಿಯ ಸ್ವರೂಪವನ್ನು ತಿಳಿದುಕೊಳ್ಳಬೇಕೆಂದು ಇಚ್ಛೆಪಡುತ್ತಾನೆ. ಇವೆರಡರಲ್ಲಿ ಯಾವದೊಂದನ್ನೇ ಅವನು ಪ್ರಯತ್ನಿಸಿದನೆಂಬುದು ನಿಜವಾಗಲಿ, ಇಷ್ಟು ಮಾತ್ರ ಖಂಡಿತ; ಇಂದ್ರಿಯಗಳ ಪರಿಚ್ಛೇದವನ್ನು ದಾಟಿ ಹೋಗುವದಕ್ಕೆ ಅವನು ಯತ್ನಿಸುತ್ತಿರುತ್ತಾನೆ. ತನ್ನ ಇಂದ್ರಿಯಗಳಿಂದಲೇ ತೃಪ್ತನಾಗಿರುವುದು ಅವನಿಂದ ಆಗಲಾರದು, ಅವನು ಅವುಗಳನ್ನು ದಾಟಿ ಹೋಗಬೇಕು. ಇವುಗಳನ್ನು ಬಿಡಿಸಿ ಹೇಳುವದಕ್ಕೆ ರಹಸ್ಯವೇನೂ ಬೇಕಿರುವುದಿಲ್ಲ. ಧರ್ಮದ ಮೊಟ್ಟಮೊದಲನೆಯ ಕುಡಿನೋಟವು ಕನಸುಗಳ ಮೂಲಕವಾಗಿ ದೊರೆಯುವದು ತೀರ ಸ್ವಾಭಾವಿಕವೆಂದು ನನಗೆ ತೋರುತ್ತದೆ. ಅಮೃತತ್ವದ ಮೊದಲನೆಯ ಭಾವನೆಯು ಮನುಷ್ಯನಿಗೆ ಕನಸಿನಿಂದಲೇ ಧಾರಾಳವಾಗಿ ಬರಬಹುದಾಗಿರುತ್ತದೆ. ಅದೊಂದು ಅತ್ಯಂತ ವಿಚಿತ್ರವಾದ ಅವಸ್ಥೆಯಲ್ಲವೆ? ಮಕ್ಕಳೂ ಏನೂ ತಿಳಿಯದವರೂ ತಮ್ಮ ಕನಸಿಗೂ ಎಚ್ಚರಕ್ಕೂ ಏನೂ ತಾರತಮ್ಯವಿಲ್ಲವೆಂದೇ ಭಾವಿಸುತ್ತಾರೆಂಬುದು ತಿಳಿದೇ ಇದೆ. ನಿದ್ರಾವಸ್ಥೆಯಲ್ಲಿ ಶರೀರವು ಸತ್ತಂತೆ ಆಗಿದ್ದರೂ ಮನಸ್ಸು ತನ್ನ ಸೂಕ್ಷ್ಮವ್ಯಾಪಾರಗಳನ್ನು ಅಲ್ಲಿಯೂ ನಡೆಯಿಸುತ್ತಲೇ ಇರುವದೆಂಬುದೇ ಅವರಿಗೆ ಯುಕ್ತಿಯುಕ್ತವಾಗಿ ತೋರುವ ದೆಂಬುದಕ್ಕಿಂತ ಸ್ವಾಭಾವಿಕವಾದದ್ದು ಮತ್ತೇನಿದ್ದೀತು? ಈ ಶರೀರವು ಸಂಪೂರ್ಣವಾಗಿ ನಾಶವಾದಾಗಲೂ ಇದೇ ವ್ಯಾಪಾರವೇ ನಡೆಯುತ್ತಿರುವದೆಂದು ಅವರು ನಿರ್ಣಯಿಸಿದರೆ ಅದರಲ್ಲಿ ಆಶ್ಚರ್ಯವೇನು? ಅಪ್ರಾಕೃತವಿಚಾರವು ಹುಟ್ಟಿದ ಬಗೆಯನ್ನು ಈ ರೀತಿ ವರ್ಣಿಸುವದು ಹೆಚ್ಚು ಸ್ವಾಭಾವಿಕವಿರುತ್ತದೆಂದು ನನ್ನ ಅಭಿಪ್ರಾಯ. ಈ ಕನಸಿನ ಭಾವನೆಯಿಂದ ಮಾನವನ ಮನಸ್ಸು ಇನ್ನೂ ಹೆಚ್ಚು ಹೆಚ್ಚಿನ ಕಲ್ಪನೆಗಳನ್ನು ಮಾಡುತ್ತಾ ಹೋಗುತ್ತದೆ. ಈ ಕನಸುಗಳನ್ನು ತಮ್ಮ ತಮ್ಮ ಎಚ್ಚರಕ್ಕೆ ತಾಳೇ ಹಾಕಿ* ನೋಡುವದಕ್ಕೆ ಆಗಲಾರದೆಂದೂ ಕನಸಿನಲ್ಲಿ

ಈ ಸಂದರ್ಭದಲ್ಲಿ ಮೂಢರ ಕಲ್ಪನೆಯೇ ವಿವೇಕಿಗಳೆಂಬವರ ಕಲ್ಪನೆಗಿಂತ ಹೆಚ್ಚು ಬೆಲೆಯುಳ್ಳದ್ದಾಗಿರುವದು. ಏಕೆಂದರೆ ಎಚ್ಚರವೇ ನಿಜವೆಂಬ ದೃಢಭಾವನೆಯನ್ನಿಟ್ಟುಕೊಂಡು ಎಚ್ಚರದ ದೃಷ್ಟಿಯಿಂದ ನೋಡಿದರೆ ಕನಸುಗಳು ಕೀಳುತರದ ಇರವಿನವಾಗಿ ಕಂಡು ಬಂದರೂ ಆಯಾ ಅವಸ್ಥೆಯ ಕಣ್ಣಿಂದ ನೋಡಿದರೆ ಕನಸಿನಷ್ಟೇ ಬೆಲೆಯು ಎಚ್ಚರಕ್ಕೂ ಇರುವದು. ಇದು ಎಚ್ಚರವೆಂದು ಯಾವದೊಂದು ಅವಸ್ಥೆಯನ್ನೂ ಗೊತ್ತುಪಡಿಸುವದಕ್ಕೇ ಬರುವಂತಿರುವದಿಲ್ಲ. ಆದ್ದರಿಂದ ಎಚ್ಚರದಭಿಮಾನದಿಂದ ಕನಸು ಸಾಪೇಕ್ಷಾವಸ್ಥೆಯಾಗಿ ಕಂಡರೂ ನಿಜವಾಗಿ ನೋಡಿದರೆ ಕನಸು ಸ್ವತಂತ್ರವಾದ ಅವಸ್ಥೆಯೇ ಆಗಿರುತ್ತದೆ. ಇಲ್ಲಿ ಸ್ವಾಮಿಗಳವರು ಕೊಟ್ಟಿರುವ ದೃಷ್ಟಾಂತವು ಎಚ್ಚರಭಿಮಾನವುಳ್ಳ ವ್ಯವಹಾರಿಕ ದೃಷ್ಟಿಯಿಂದಲೆಂಬುದು ಸ್ಪಷ್ಟವಾಗಿರುತ್ತದೆ.

ಮನುಷ್ಯನಿಗೆ ಹೊಸದೊಂದು ಜನ್ಮವೇನೂ ಬರುವದಿಲ್ಲವೆಂದೂ ಎಚ್ಚರದ ಅನುಭವಗಳನ್ನೇ ಅಲ್ಲಿ ನೆನಸಿಕೊಳ್ಳುತ್ತಾನೆಂದೂ ಕಾಲಕ್ರಮದಲ್ಲಿ ಬಹು ಜನರು ಕಂಡುಕೊಂಡರೆಂಬುದನ್ನು ಹೇಳಬೇಕಾದದ್ದೇ ಇಲ್ಲ.

ಆದರೆ ಇಷ್ಟು ಹೊತ್ತಿನೊಳಗಾಗಿ ಅನ್ವೇಷಣೆಯು ಪ್ರಾರಂಭವಾಗಿಬಿಟ್ಟಿತ್ತು. ಈ ಅನ್ವೇಷಣೆಯು ಒಳಮುಖವಾಗಿತ್ತು; ಜನರು ಮನಸ್ಸಿನ ಬೇರೆ ಬೇರೆ ಅವಸ್ಥೆಗಳನ್ನು ಇನ್ನೂ ಒಳಹೊಕ್ಕು ವಿಚಾರ ಮಾಡುತ್ತಮಾಡುತ್ತಾ ಹೋಗಲು ಎಚ್ಚರ ಕನಸುಗಳಿಗಿಂಲೂ ಹೆಚ್ಚಿನ ಅವಸ್ಥೆಗಳೂ ಕಂಡುಬಂದವು. ಪರಮಾನಂದ ಸ್ಥಿತಿ (ecstasy) ಅಥವಾ ಆವೇಶ (inspiration)- ಎಂಬ ಹೆಸರಿನ ಈ ಅವಸ್ಥೆಯೊಂದಿರುವದೆಂಬುದು ಪ್ರಪಂಚದ ಎಲ್ಲಾ ವ್ಯವಸ್ಥಿತಧರ್ಮಗಳಲ್ಲಿಯೂ ಕಂಡುಬರುತ್ತದೆ. ವ್ಯವಸ್ಥಿತವಾದ ಧರ್ಮಗಳಲ್ಲೆಲ್ಲ ಅವುಗಳ ಸ್ಥಾಪಕರು ಪ್ರವಾದಿಗಳು ಅಥವಾ ಸಂದೇಶಹಾರಕರು ಎಚ್ಚರವೂ ಅಲ್ಲದ ನಿದ್ರೆಯೂ ಅಲ್ಲದ ಒಂದಾನೊಂದು ಸ್ಥಿತಿಗೆ ಹೋಗಿದ್ದರೆಂದೂ ಅಲ್ಲಿ ಅವರಿಗೆ ಆಧ್ಯಾತ್ಮ ರಾಜ್ಯಕ್ಕೆ ಸೇರಿದ ಕೆಲವು ನವೀನವಿಷಯಗಳು ಸಾಕ್ಷಾತ್ತಾಗಿ ಗೋಚರವಾದವೆಂದೂ ತಿಳಿಯಬರುತ್ತದೆ. ನಮಗೆ ಎಚ್ಚರದ ಸ್ಥಿತಿಯಲ್ಲಿ ನಮ್ಮ ಸುತ್ತಲಿನ ಅಂಶಗಳು ಕಂಡುಬರುವದಕ್ಕಿಂತಲೂ ಸ್ಪಷ್ಟವಾಗಿ ಅಲ್ಲಿ ಅವರಿಗೆ ತತ್ತ್ವಗಳು ಅನುಭವಕ್ಕೆ ಬರುವವಂತೆ. ಉದಾಹರಣೆಗೆ ಬ್ರಾಹ್ಮಣರ ಧರ್ಮವನ್ನು ತೆಗೆದುಕೊಳ್ಳಿ. ವೇದಗಳು ಋಷಿಗಳಿಂದ ಬಂದವುಗಳೆಂದು ಅವರು ಹೇಳುತ್ತಾರೆ. ಈ ಋಷಿಗಳು ಕೆಲವು ತತ್ತ್ವಗಳನ್ನು ಸಾಕ್ಷಾತ್ಕರಿಸಿಕೊಂಡ ತಪಸ್ವಿಗಳು. ಋಷಿಯೆಂಬ ಸಂಸ್ಕೃತಶಬ್ದದ ಸರಿಯಾದ ಅಭಿಪ್ರಾಯವಾರ್ಥವೇನೆಂದರೆ ಮಂತ್ರವನ್ನು ಕಂಡುಕೊಂಡಾತನು. ವೇದ ಮಂತ್ರಗಳಲ್ಲಿರುವ ವಿಚಾರಗಳನ್ನು ಕಂಡುಕೊಂಡಾತನು. ಈ ಜನರು ತಾವು ಕೆಲ ಕೆಲವು ತತ್ತ್ವಗಳನ್ನು ಸಾಕ್ಷಾತ್ಕಾರಮಾಡಿಕೊಂಡದ್ದಾಗಿ, ಕಂಡುಕೊಂಡದ್ದಾಗಿ (ಅತೀಂದ್ರಿಯ ವಿಚಾರದಲ್ಲಿ ಈ ಶಬ್ದವನ್ನು ಉಪಯೋಗಿಸಬಹುದೇ?)-ಸಾರಿದರು. ಈ ತತ್ತ್ವಗಳನ್ನು ಅವರು ತಮ್ಮ ಗ್ರಂಥದಲ್ಲಿಡುವದಕ್ಕೆ ಹೊರಟರು. ಯಹೂದ್ಯರಲ್ಲಿಯೂ, ಕ್ರಿಸ್ತಿಯನರಲ್ಲಿಯೂ ಇದೇ ಅಭಿಪ್ರಾಯವನ್ನು ಪ್ರಕಟಿಸಿರುವದು ಕಂಡುಬರುತ್ತದೆ.

ದಾಕ್ಷಿಣಾತ್ಯಬೌದ್ಧರ ವಿಷಯದಲ್ಲಿ ಈ ವಿಚಾರದಲ್ಲಿ ಒಂದು ಆಕ್ಷೇಪವನ್ನು ಮಾಡಬಹುದು. ಬೌದ್ಧರು ದೇವರನ್ನಾಗಲಿ ಆತ್ಮನನ್ನಾಗಲಿ ನಂಬುವುದಿಲ್ಲವಾದರೆ ಅವರ ಮತವು ಈ ಅತೀಂದ್ರಿಯಾವಸ್ಥೆಯಲ್ಲಿ ಕಂಡುಹಿಡಿದದ್ದೆಂದು ಹೇಗೆ

ಹೇಳಲಾದೀತು? - ಎಂದು ಯಾರಾದರೂ ಕೇಳಬಹುದು. ಇದಕ್ಕೆ ಉತ್ತರವೇನೆಂದರೆ, ಬೌದ್ಧರು ಕೂಡ ಒಂದಾನೊಂದು ಶಾಶ್ವತ ಧರ್ಮವನ್ನು ಕಂಡುಕೊಂಡಿರುತ್ತಾರೆ. ಆ ಧರ್ಮವೆಂಬುದನ್ನು ನಾವು ಹೇಳುವ ಅರ್ಥದ ಯುಕ್ತಿಯಿಂದ ಕಂಡಿಹಿಡಿದಿರುವದಿಲ್ಲ. ಬುದ್ಧನು ಒಂದಾನೊಂದು ಅತೀಂದ್ರಿಯಾವಸ್ಥೆಯಲ್ಲಿ ಕಂಡುಕೊಂಡನು, ಪರಿಶೋಧನೆ ಮಾಡಿ ಗೊತ್ತುಪಡಿಸಿಕೊಂಡನು. ನಿಮ್ಮಲ್ಲಿ **"ಏಷಿಯದ ಬೆಳಕು"** (The Light of Asia) ಎಂಬ ಸುಂದರಕಾವ್ಯದಲ್ಲಿ ಕೊಟ್ಟಿರುವ ಸಂಕ್ಷೇಪ ರೀತಿಯಿಂದ ಬುದ್ಧನ ಚರಿತೆಯನ್ನು ಓದಿರುವವರು ಕೂಡ ಬುದ್ಧನು **ಬೋಧಿವೃಕ್ಷ**ದ ಕೆಳಗೆ ಕುಳಿತು ಕೊನೆಗೆ ಆ ಸಮಾಧಿಯನ್ನು ಪಡೆದನೆಂದು ಅಲ್ಲಿ ಬರೆದಿರುವದನ್ನು ಬಲ್ಲಿರಿ. ಆತನ ಉಪದೇಶಗಳೆಲ್ಲ ಇದರಿಂದ ಬಂದವೇ ಹೊರತು ಮಾನವತರ್ಕದಿಂದ ಬರಲಿಲ್ಲ.

ಈ ರೀತಿಯಲ್ಲಿ ನೋಡಿದರೆ ಎಲ್ಲಾ ಧರ್ಮಗಳಲ್ಲಿಯೂ ಒಂದಾನೊಂದು ಅದ್ಭುತವಾದವನ್ನು ಮುಂದಿಟ್ಟಿರುತ್ತದೆ. ಅದೇನೆಂದರೆ ಕೆಲಕೆಲವು ಸಮಯಗಳಲ್ಲಿ ಮಾನವನ ಅಂತಃಕರಣವು ಇಂದ್ರಿಯಗಳ ಪರಿಚ್ಛೇದವನ್ನು ಮಾತ್ರವಲ್ಲದೆ ಯುಕ್ತಿ ಬಲವನ್ನೂ ಮೀರಿ ಹೋಗುತ್ತದೆ, ಆಗ ಅದು ಎಂದಿಗೂ ಇಂದ್ರಿಯಗಳಿಂದ ಅನುಭವಿಸಲಾರದೆ ಇದ್ದ, ಎಂದಿಗೂ ಯುಕ್ತಿಯಿಂದ ಸಿದ್ಧಪಡಿಸಲಾರದೆ ಇದ್ದ ಸಂಗತಿಗಳನ್ನೂ ಸಾಕ್ಷಾತ್ತಾಗಿ ಕಂಡುಕೊಳ್ಳುತ್ತದೆ. ಈ ಸಂಗತಿಗಳೇ ಪ್ರಪಂಚದ ಎಲ್ಲಾ ಧರ್ಮಗಳ ಆಧಾರವು, ಈ ವಿಷಯಗಳನ್ನು ಸರಿಯೋ ತಪ್ಪೋ ಎಂದು ಪರೀಕ್ಷಿಸುವ, ಅವುಗಳನ್ನು ಯುಕ್ತಿಯಿಂದ ಒರೆಹಚ್ಚಿ ನೋಡುವ, ಹಕ್ಕು ನಮಗೆ ಇದ್ದೇ ಇದೆಯೆಂದು ಹೇಳಬೇಕಾದದ್ದಿಲ್ಲ; ಹೀಗಿದ್ದರೂ ಪ್ರಪಂಚದಲ್ಲಿ ಈಗ ಇರುವ ಧರ್ಮಗಳಲ್ಲೆಲ್ಲ ಮಾನವನ ಅಂತಃಕರಣಕ್ಕೆ ಇಂದ್ರಿಯಗಳ ಪರಿಚ್ಛೇದವನ್ನೂ ಯುಕ್ತಿಯ ಪರಿಚ್ಛೇದವನ್ನೂ ದಾಟಿಹೋಗುವ ಈ ಅಸಾಧಾರಣ ಶಕ್ತಿಯು ಇರುವದೆಂದು ಹೇಳಿಕೊಂಡಿರುತ್ತದೆ. ಈ ಶಕ್ತಿಯೆಂಬುದು ನಿಜವಾಗಿರುವ ಸಂಗತಿಯೆಂದು ಅವುಗಳೆಲ್ಲ ಸಾರುತ್ತಲಿವೆ.

ಮತಗಳು ಹೇಳಿಕೊಳ್ಳುತ್ತಲಿರುವ ಈ ಸಂಗತಿಗಳು ಎಷ್ಟರಮಟ್ಟಿಗೆ ನಿಜವೆಂಬ ವಿಚಾರವು ಹಾಗಿರಲಿ, ಅವುಗಳಿಗೆಲ್ಲ ಸಮಾನವಾಗಿರುವ ಒಂದಾನೊಂದು ವಿಶೇಷ ಧರ್ಮವಿದೆ. ಪದಾರ್ಥ ವಿಜ್ಞಾನಶಾಸ್ತ್ರವೇ ಮುಂತಾದ ಭೌತಿಕಶಾಸ್ತ್ರಗಳ

ಶೋಧನೆಗಳಂತೆ ಅವು ವಸ್ತುರೂಪವಾಗಿರದೆ, ಅವೆಲ್ಲ ಕೇವಲ ಭಾವರೂಪ* ವಾಗಿರುತ್ತವೆ. ತುಂಬ ಸುವ್ಯಸ್ಥಿತವಾದ ಮತಗಳಲ್ಲಂತೂ ಅವುಗಳು ಏಕತತ್ತ್ವದ ಭಾವರೂಪವಾಗಿರುತ್ತವೆ; ಎಂದರೆ ಸರ್ವವ್ಯಾಪಕವಾದ ಸತ್ತೆಯೆಂಬ ರೂಪದ ಭಾವರೂಪವಾದ ಅಸ್ತಿತ್ವವು, ದೇವರೆಂಬ ಒಂದಾನೊಂದು ಭಾವರೂಪ ಪುರುಷ ಅಥವಾ ಒಂದಾನೊಂದು ಧರ್ಮಕಾರ್ಯ, ಅಥವಾ ಪ್ರತಿಯೊಂದು ವಸ್ತುವಿಗೆ ಆಧಾರವಾಗಿರುವ ಭಾವರೂಪಸಾರ- ಈ ರೂಪದಲ್ಲಿರುತ್ತವೆ. ಈಚೆಗೆ ಮನಸ್ಸಿನ ಅತೀಂದ್ರಿಯ ಸ್ಥಿತಿಯನ್ನು ಆಧಾರವಾಗಿಟ್ಟುಕೊಳ್ಳದೆಯೇ ಮತವನ್ನು ಬೋಧಿಸುವದಕ್ಕೆ ಪ್ರಯತ್ನಪಟ್ಟವರು ಕೂಡ ಪೂರ್ವಿಕರ ಈ ಭಾವರೂಪತತ್ತ್ವಗಳನ್ನು ಅಂಗೀಕರಿಸಿ ಅವಕ್ಕೆ 'ಧರ್ಮತತ್ತ್ವ', (Moral Law) 'ಪರಮೈಕತ್ವ' (Ideal Unity) – ಎಂದು ಮುಂತಾಗಿ ಬೇರೆ ಬೇರೆ ಹೆಸರುಗಳನ್ನು ಕೊಡುತ್ತಾ ಬಂದಿರುತ್ತಾರೆ; ಇದರಿಂದಲೂ ಇವುಗಳು ಇಂದ್ರಿಯ ಗೋಚರವಲ್ಲವೆಂದು ಸಿದ್ಧವಾಗುತ್ತದೆ. 'ಪರಿಪೂರ್ಣ ಮಾನವ' ತತ್ತ್ವವನ್ನು ನಾವು ಯಾರೂ ಇನ್ನೂ ಕಂಡಿರುವದಿಲ್ಲ, ಆದರೂ ಅಂಥ ಪದಾರ್ಥವನ್ನು ನಂಬಬೇಕೆನ್ನುತ್ತಿದ್ದಾರೆ. ಎಲ್ಲಾಬಗೆಯಿಂದಲೂ ಪರಿಪೂರ್ಣನಾಗಿರುವ ಮನುಷ್ಯನನ್ನು ನಾವು ಯಾರೂ ನೋಡಿಯೇ ಇಲ್ಲ, ಹೀಗಿದ್ದರೂ ಈ ಧ್ಯೇಯವೊಂದಿಲ್ಲದೆ ನಾವು ಮುಂದುವರಿಯುವದಕ್ಕೇ ಆಗುವಂತಿಲ್ಲ. ಹೀಗೆ ನೋಡಿದರೆ ಈ ಬೇರೆ ಮತಗಳಲ್ಲಿ ಒಂದಾನೊಂದು ಭಾವರೂಪವಾದ ಏಕತತ್ತ್ವವನ್ನು, ಸಗುಣಪುರುಷನೆಂದೋ ನಿರ್ಗುಣ ಪುರುಷನೆಂದೋ, ಧರ್ಮನಿಯಮವೆಂದೋ, ಒಂದಾನೊಂದು ವ್ಯಾಪಕಸತ್ತೆಯೆಂದೋ, ಸಾರವೆಂದೋ ನಮ್ಮ ಮುಂದೆ ಇಟ್ಟಿರುತ್ತದೆಯೆಂದು ಏರ್ಪಡುತ್ತದೆ.

---

* ಇಲ್ಲಿ ಭಾವರೂಪವೆಂದು ಕನ್ನಡಿಸಿರುವ ಮಾತು ಇಂಗ್ಲಿಷಿನಲ್ಲಿ (Abstraction) ಎಂದಿದೆ, ಈ ಮಾತಿಗೆ ಪೃಥಕ್ಕರಣ, ವಿವೇಚನ – ಎಂದು ಅಕ್ಷರಾರ್ಥವಾಗುತ್ತದೆ. ಹಸುರು ಎಳೆ, ಹಸುರು ಹುಲ್ಲು, ಹಸುರು ಮಣಿ – ಎಂದು ಹಸುರಾಗಿರುವ ವಸ್ತುಗಳಲ್ಲೆಲ್ಲ 'ಹಸುರು' ಎಂಬ ಒಂದಾನೊಂದು ಬಣ್ಣವು ಸಮಾನವಾಗಿರುವದೆಂದು ನಮ್ಮ ಮನಸ್ಸು ಭಾವಿಸಿ ಆ ಬಣ್ಣವನ್ನೇ ಪೃಥಕ್ಕರಿಸಿ ಅದರ ವಿಷಯವಾಗಿ ವಿಚಾರ ಮಾಡುವಂತೆ ಮತಗಳಲ್ಲಿ ಸತ್ತಾ, ಧರ್ಮ, ಸಾರ – ಎಂದು ಮುಂತಾಗಿ ವಸ್ತುಗಳಿಂದ ಪೃಥಕ್ಕರಿಸಿದ ತತ್ತ್ವವೇ ಧರ್ಮಕ್ಕೆ ವಿಷಯವೆಂದು ಈ ವಿಚಾರ ಸರಣಿಯಲ್ಲಿ ಏರ್ಪಡುತ್ತದೆ. ಮತಗಳು ಹುಟ್ಟಿ ಬೆಳೆದ ಇತಿಹಾಸವನ್ನು ಶೋಧಿಸುವವರ ದೃಷ್ಟಿಯಿಂದ ಈ ಸಿದ್ಧಾಂತಕ್ಕೆ ಎಷ್ಟೇ ಬೆಲೆ ಇರಲಿ, ವೇದಾಂತದಲ್ಲಿ ಹೇಳಿರುವ ಆತ್ಮವಸ್ತುವು ಹೀಗೆ ದೃಶ್ಯವಿಶೇಷಗಳಿಂದ ಪೃಥಕ್ಕರಿಸಿದ ಪರಸಾಮಾನ್ಯವಲ್ಲವೆಂಬುದನ್ನು ನೆನಪಿಡುವದು ಅತ್ಯಂತ ಅವಶ್ಯವು, ಏಕೆಂದರೆ ಆತ್ಮನು ಚೈತನ್ಯ ರೂಪನಾಗಿರುತ್ತಾನೆ, ಸಾಮಾನ್ಯ ವಿಶೇಷಗಳೆಲ್ಲ ಆ ಚೈತನ್ಯಕ್ಕೆ ವಿಷಯವಾಗಿರುತ್ತವೆ, ಆದ್ದರಿಂದ ವಿಷಯಿಯಾದ ಆತ್ಮ ಚೈತನ್ಯವು ಸಾಮಾನ್ಯವೂ ಅಲ್ಲ, ವಿಶೇಷವೂ ಅಲ್ಲ.

ಈ ಹೆಗ್ಗುರಿಯ ಬಳಿಗೆ ಏರಬೇಕೆಂಬುದೇ ನಮ್ಮೆಲ್ಲರ ಪ್ರಯತ್ನವಾಗಿರುತ್ತದೆ. ಪ್ರತಿಯೊಬ್ಬ ಮಾನವನೂ, ಅವನು ಯಾರೇ ಆಗಿರಲಿ, ಎಲ್ಲಿಯೇ ಇರಲಿ, ಒಂದಾನೊಂದು ಅನಂತಶಕ್ತಿಯ ಧ್ಯೇಯವನ್ನಿಟ್ಟುಕೊಂಡಿರುತ್ತಾನೆ. ನಮ್ಮ ಸುತ್ತಲೂ ಕಾಣಬರುವ ವ್ಯಾಪಾರಗಳೆಲ್ಲ, ಎಲ್ಲೆಲ್ಲಿಯೂ ಕಾಣಬರುತ್ತಿರುವ ಪ್ರವೃತ್ತಿಗಳೆಲ್ಲ, ಈ ಅನಂತ ಶಕ್ತಿಗಾಗಿ ಈ ಅನಂತಾನಂದಕ್ಕಾಗಿ, ಹೆಣಗಾಡುತ್ತಿರುವದರಿಂದಲೇ ಉಂಟಾದ ಪ್ರತಿಫಲವಾಗಿರುತ್ತವೆ. ಆದರೆ ಕೆಲವರಿಗೆ ಮಾತ್ರ, ತಾವು ಅನಂತ ಶಕ್ತಿಗಾಗಿ ಹೋರಾಡುತ್ತಿರುವೆವಾದರೂ ಅದನ್ನು ಇಂದ್ರಿಯ ಶಕ್ತಿಗಳ ಮೂಲಕ ಪಡೆದುಕೊಳ್ಳುವದಾಗಲಾರದು-ಎಂಬುದು ಬೇಗನೆ ಗೊತ್ತಾಗಿ ಬಿಡುತ್ತದೆ; ಆ ಅನಂತಾನಂದವು ಇಂದ್ರಿಯಗಳ ಮೂಲಕ ದೊರೆಯಲಾರದೆಂಬುದು ಅವರಿಗೆ ಬಲುಬೇಗನೆ ಗೊತ್ತಾಗಿಬಿಡುತ್ತದೆ, ಅಂದರೆ ಇಂದ್ರಿಯಗಳು ಪೂರ ಪರಿಚ್ಛಿನ್ನವಾಗಿರುವದರಿಂದ, ಶರೀರವು ಪೂರ ಪರಿಚ್ಛಿನ್ನವಾಗಿರುವದರಿಂದ, ಈ ಅನಂತವನ್ನು ಹೊರಗೆಡಹಲಾರದು. ಪರಿಚ್ಛಿನ್ನವಾದದ್ದರ ಮೂಲಕ ಅನಂತವಾದದ್ದನ್ನು ಹೊರಗೆಡಹುವದು ಆಗದ ಕೆಲಸ, ಆದ್ದರಿಂದ ಅನಂತವಾದದ್ದನ್ನು ಸಾಂತವಾದದ್ದರ ಮೂಲಕ ಹೊರಗೆಡಹುವ ಪ್ರಯತ್ನವನ್ನು ಬಿಟ್ಟುಬಿಡಬೇಕೆಂಬುದನ್ನು ಮಾನವನು ಒಂದಲ್ಲದಿದ್ದರೆ ಒಂದು ದಿನ ಕಲಿತು ಕೊಂಡೇ ತೀರುವನು. ಈ ಬಿಟ್ಟುಬಿಡುವಿಕೆಯೇ, ಈ ಪ್ರಯತ್ನದ ಪರಿತ್ಯಾಗವೇ, ನೀತಿಗೆ ಆಧಾರವು. ನೀತಿಯು ನಿಂತಿರುವ ಅಡಿಗಟ್ಟೇ ವೈರಾಗ್ಯವು. ವೈರಾಗ್ಯವನ್ನು ಆಧಾರವಾಗಿ ಮಾಡಿಕೊಳ್ಳದೆ ನೀತಿಯನ್ನು ಉಪದೇಶಿಸಿದ್ದೆಂಬುದು ಎಂದೂ ಕಂಡದ್ದಿಲ್ಲ.

ನೀತಿಯು 'ನಾನಲ್ಲ, ನೀನು' ಎಂದೇ ಯಾವಾಗಲೂ ಅನ್ನುತ್ತಿರುವುದು. 'ತಾನಲ್ಲ, ಮತ್ತೊಬ್ಬರು' ಎಂಬುದೇ ಅದಕ್ಕೆ ಸೂತ್ರವು. ಆ ಅನಂತ ಶಕ್ತಿಯನ್ನು ಅಥವಾ ಆ ಅನಂತಾನಂದವನ್ನು ಇಂದ್ರಿಯಗಳ ಮೂಲಕವೇ ಕಂಡು ಹಿಡಿಯಬೇಕೆಂದು ಮನುಷ್ಯನು ಪ್ರಯತ್ನಿಸುತ್ತಿರುವಾಗ ನಾನುನಾನೆಂದು ಅವನು ಪಟ್ಟು ಹಿಡಿದಿರುವ ವ್ಯಕ್ತಿ ಭಾವನೆಗಳೆಲ್ಲ ವ್ಯರ್ಥವು, ಅವುಗಳನ್ನೆಲ್ಲ ಬಿಟ್ಟುಬಿಡಲೇಬೇಕು – ಎಂದು ನೀತಿ ನಿಯಮಗಳು ಸಾರುವವು. ನಿಮ್ಮ ವಿಚಾರವನ್ನು ತೀರ ಕಡೆಗೆ ಇಟ್ಟುಕೊಳ್ಳಬೇಕು. ಮತ್ತೊಬ್ಬರನ್ನೇ ನಿಮಗಿಂತ ಮೊದಲಿನ ಸ್ಥಾನಕ್ಕೆ ಇಡಬೇಕು. ಇಂದ್ರಿಯಗಳು 'ಮೊದಲು ನಾನು' ಎನ್ನುತ್ತವೆ; 'ನಾನು ತೀರ ಕೊನೆಗೆ' ಎಂದು ನೀತಿಯು ಅನ್ನುತ್ತದೆ. ಹೀಗೆ ನೀತಿಯ ಕಟ್ಟುಕಟ್ಟಲೆಗಳೆಲ್ಲ ಈ ತ್ಯಾಗದ ಆಧಾರದಿಂದಲೇ ಹುಟ್ಟಿರುತ್ತವೆ. ಈ ಭೋಗಭೂಮಿಕೆಯ ವ್ಯಕ್ತಿಯನ್ನು ನಾಶನಮಾಡುವದೇ ನೀತಿಯು, ಅದನ್ನು

ಪೋಷಿಸುವದಲ್ಲ. ಆ ಅನಂತವೆಂಬುದು ಈ ಭೋಗಭೂಮಿಕೆಯಲ್ಲಿ ಎಂದಿಗೂ ಹೊರಬೀಳುವದಿಲ್ಲ, ಹೊರಬೀಳುವದು ಸಾಧ್ಯವೂ ಅಲ್ಲ. ಅದನ್ನು ಮನಸ್ಸಿನಲ್ಲಿ ಕಲ್ಪಿಸುವದು ಕೂಡ ಆಗುವ ಹಾಗಿಲ್ಲ.

ಆದ್ದರಿಂದ ಮನುಷ್ಯನು ಈ ಭೌತಿಕಭೂಮಿಕೆಯನ್ನು ಬಿಟ್ಟುಬೇರೆ ಭೂಮಿಕೆಗಳನ್ನೇರಿಯೇ ಆ ಅನಂತವು ಇನ್ನೂ ಹೆಚ್ಚಾಗಿ ಪ್ರಕಟವಾಗುವದನ್ನು ಕಂಡುಕೊಳ್ಳಬೇಕಾಗಿರುತ್ತದೆ. ಈ ರೀತಿಯಲ್ಲಿಯೇ ಬೇರೆ ಬೇರೆ ನೀತಿಯ ನಿಯಮಗಳು ಏರ್ಪಡುತ್ತಲಿವೆ; ಆದರೆ ಇವುಗಳಿಗೆಲ್ಲ ನಿತ್ಯಸ್ವಾರ್ಥತ್ಯಾಗವೆಂಬ ಆ ಒಂದೇ ಒಂದು ಕೇಂದ್ರಸ್ಥಾನೀಯ ಭಾವನೆಯಾಗಿರುತ್ತದೆ. ಸಂಪೂರ್ಣವಾಗಿ ಅಹಂತೆಯನ್ನು ನಾಶಗೊಳಿಸುವದೇ ನೀತಿಯ ಗುರಿಯು. ನಿಮ್ಮ ನಿಮ್ಮ ವ್ಯಕ್ತಿತ್ವವನ್ನು ಕುರಿತು ಯೋಚಿಸದಿರಿ–ಎಂದರೆ ಜನರು ಬೆಚ್ಚಿಬೀಳುತ್ತಾರೆ. ಅಯ್ಯೋ ನಮ್ಮ ಆತ್ಮನಾಶವೇ ಆಗುವದಲ್ಲ! – ಎಂಬ ಅಂಜಿಕೆಯು ಅವರನ್ನು ಹಿಡಿದುಕೊಂಡಿರುವಂತೆ ಕಾಣಿಸುತ್ತದೆ. ಹೀಗಿದ್ದರೂ ಅದೇ ಜನರೇ ನೀತಿಯ ಅತ್ಯಂತ ಉನ್ನತ ಭಾವನೆಗಳು ಕೂಡ ಸರಿಯೆಂದು ಸಾರುತ್ತಿರುವರು. ನೀತಿಯ ಕ್ಷೇತ್ರವೂ ಗುರಿಯೂ ಭಾವನೆಯೂ ವ್ಯಕ್ತಿತ್ವವನ್ನು ನಾಶಗೊಳಿಸುವದೇ ಹೊರತು ಪೋಷಣೆಮಾಡುವದಿಲ್ಲವೆಂಬುದು ಮಾತ್ರ ಅವರಿಗೆ ಒಂದು ಕ್ಷಣವೂ ಹೊಳೆಯುವಂತಿಲ್ಲ.

ಪ್ರಯೋಜನದ ಸೂತ್ರಗಳನ್ನಿಟ್ಟುಕೊಂಡು ಜನರಲ್ಲಿರುವ ನೀತಿಭಾವನೆಗೆ ಕಾರಣವನ್ನು ಹೇಳುವದಕ್ಕೆ ಬರುವದೇ ಇಲ್ಲ. ಏಕೆಂದರೆ ಮೊದಲನೆಯದಾಗಿ ಪ್ರಯೋಜನವನ್ನು ಲಕ್ಷ್ಯದಲ್ಲಿಟ್ಟುಕೊಂಡು ವಿಚಾರಮಾಡಿದರೆ ಯಾವ ನೀತಿನಿಯಮಗಳೂ ಸಿದ್ಧವಾಗುವದೇ ಇಲ್ಲ. ಅಪ್ರಾಕೃತವಾದ ವ್ಯವಸ್ಥೆಯಿಲ್ಲದೆ ನೀತಿಯೆಂಬುದೇ ಇರಲಾರದು; ಇದನ್ನು ಅಪ್ರಾಕೃತಶಾಸನವೆನ್ನುವದಕ್ಕಿಂತ ಅತಿಸಂವೇದನಾವಸ್ಥೆಯ ಅನುಭವವೆಂದು ಕರೆಯುವದು ಉತ್ತಮವೆಂದು ನನ್ನ ಮತವು. ಅನಂತವಾದದ್ದರ ಕಡೆಗೆ ಹೋಗುವದಕ್ಕೆ ಪ್ರಯತ್ನಮಾಡದೇ ಇರುವಾಗ ಯಾವದೊಂದು ಗುರಿಯೂ ಇರುವ ಸಂಭವವೇ ಇಲ್ಲ. ಜನರನ್ನು ಅವರವರ ಸಮಾಜದ ಎಲ್ಲೆಕಟ್ಟುಗಳೊಳಗೇ ನಿರ್ಬಂಧಿಸಿಡಬೇಕೆಂದು ಪ್ರಯತ್ನಿಸುವ ಯಾವ ಸಿದ್ಧಾಂತವೇ ಆಗಲಿ, ಮಾನವರಲ್ಲಿರುವ ನೀತಿನಿಯಮಗಳಿಗೆ ಆಧಾರವೇನೆಂಬುದನ್ನು ಕಂಡುಹಿಡಿಯಲಾರದು. ಉಪಯೋಗವಾದಿಯು* 'ಅನಂತವಾದ

* ಸಮಾಜದಲ್ಲಿರುವ ಬಹುಜನರಿಗೆ ಆದಷ್ಟು ನಿರತಿಶಯವಾದ ಸುಖವಾಗಬೇಕೆಂಬುದೇ ಪರಮಪುರುಷಾರ್ಥವು; ಅದಕ್ಕಾಗಿಯೇ ನೀತಿಯು ಏರ್ಪಟ್ಟಿದೆ – ಎಂಬುದನ್ನು ಪಾಶ್ಚಾತ್ಯರು 'ಉಪಯೋಗವಾದ' (Utilitarian Theory) ಎಂದು ಕರೆಯುತ್ತಾರೆ.

ತತ್ತ್ವವನ್ನು ಪಡೆಯುವದಕ್ಕೆ ಪ್ರಯತ್ನಮಾಡಬೇಡಿರಿ, ಅತಿ ಸಂವೇದನಾವಸ್ಥೆಯನ್ನು ಹೊಂದುವದಕ್ಕೆಂದು ಕೈನೀಡಬೇಡಿರಿ; ಅದನ್ನು ಕೈವಶಮಾಡಿಕೊಳ್ಳುವದು ಎಂದಿಗೂ ಆಗದ ಮಾತು, ಅದು ಅತ್ಯಂತ ಉಪಹಾಸ್ಯವಾದ ಪ್ರಯತ್ನವು' ಎಂದು ಹೇಳುತ್ತಾನಲ್ಲದೆ ಅದೇ ಉಸಿರಿನಲ್ಲಿ 'ನೀತಿಯನ್ನನುಸರಿಸಿರಿ, ಪರೋಪಕಾರವನ್ನು ಮಾಡಿರಿ' ಎಂದು ಉಪದೇಶಿಸುತ್ತಾನೆ. ಆದರೆ ಪರೋಪಕಾರವನ್ನೇಕೆ ಮಾಡಬೇಕು? ಪರೋಪಕಾರವೆಂಬುದು ಅಮುಖ್ಯವಾದ ಎರಡನೆಯ ವಿಚಾರವು. ನಮಗೆ ಒಂದಾನೊಂದು ಹೆಗ್ಗುರಿಯಿರಬೇಕು. ನೀತಿಯೇ ಪುರುಷಾರ್ಥವಲ್ಲ, ಅದು ಪುರುಷಾರ್ಥಕ್ಕೆ ಸಾಧನ – ಅಷ್ಟೆ. ಮೊದಲು ಪುರುಷಾರ್ಥವೇ ಇಲ್ಲದ ಮೇಲೆ ನಾವು ನೀತಿಯುಕ್ತರಾಗಿರಬೇಕೆಂಬುದಾದರೂ ಏಕೆ? ಮತ್ತೊಬ್ಬರಿಗೆ ನಾನು ಉಪಕಾರವನ್ನೇ ಮಾಡಬೇಕೆಂಬುದೇಕೆ? ಅವರಿಗೆ ಅಪಕಾರವನ್ನೇಕೆ ಮಾಡಬಾರದು? ಮಾನವ ಜಾತಿಗೆ ಸುಖವೇ ಪರಮಪುರುಷಾರ್ಥವಾಗಿದ್ದರೆ ನಾನು ಸುಖವಾಗಿದ್ದು ಮತ್ತೊಬ್ಬರನ್ನು ದುಃಖಿಗಳಾಗಿ ಏತಕ್ಕೆ ಮಾಡಬಾರದು? ಹೀಗೆ ಮಾಡುವದಕ್ಕೆ ನನಗಿರುವ ಪ್ರತಿಬಂಧಕವೇನು? ಇದಲ್ಲದೆ ಈ ಉಪಯೋಗಕ್ಕೆ ಆಧಾರವೂ ಅತಿ ಸಂಕುಚಿತವಾಗಿರುತ್ತದೆ. ಈಗ ಆಚರಣೆಯಲ್ಲಿರುವ ಸಮಾಜ ನಿಯಮಗಳೂ ಕ್ರಮಗಳೂ ಈಗಿನ ಸಮಾಜದ ಆಧಾರದಿಂದ ಹುಟ್ಟಿರುತ್ತವೆ. ಆದರೆ ಈ ಸಮಾಜವು ಹೀಗೆಯೇ ಶಾಶ್ವತವಾಗಿರುವದೆಂದು ಇಟ್ಟುಕೊಳ್ಳುವದಕ್ಕೆ ಉಪಯೋಗವಾದಿಗೆ ಪ್ರಮಾಣವೇನಿದೆ? ಅನೇಕ ಯುಗಗಳ ಹಿಂದೆ ಸಮಾಜವೆಂಬುದೇ ಇರಲಿಲ್ಲ, ಎಷ್ಟೋ ಯುಗಗಳಾದ ಮೇಲೆ ಮುಂದೆಯೂ ಇಲ್ಲದೆ ಹೋಗಬಹುದು. ಒಂದು ವೇಳೆ ಇದಕ್ಕಿಂತ ಉತ್ತಮವಾದ ವಿಕಾಸ ಸ್ಥಿತಿಯನ್ನು ಮುಟ್ಟುವದಕ್ಕೆಂದು ನಾವು ಈ ಅಂತಸ್ತಿನ ಮೂಲಕ ಹೋಗುತ್ತಿರಲೂಬಹುದು. ಹೀಗಿರುವದರಿಂದ ಬರಿಯ ಸಮಾಜದ ಆಧಾರದಿಂದಲೇ ಏರ್ಪಡಿಸಿದ ನಿಯಮವು ಶಾಶ್ವತವಾಗಿರಲಾರದು, ಮನುಷ್ಯನ ಸ್ವಭಾವವನ್ನೆಲ್ಲ ವ್ಯಾಪಿಸಲಾರದು. ಆದ್ದರಿಂದ ಈ ಉಪಯೋಗವಾದದ ಸಿದ್ಧಾಂತಗಳು ಈಗಿನ ಸಮಾಜಸ್ಥಿತಿಯಲ್ಲಿ ಮಾತ್ರ ಪ್ರಯೋಜನಕರವಾದರೂ ಆಗಬಹುದು, ಅಷ್ಟೆ. ಇದಕ್ಕಿಂತ ಆಚೆ ಹೋದರೆ ಅವಕ್ಕೇನೂ ಬೆಲೆಯೇ ಇರುವುದಿಲ್ಲ. ಆದರೆ ಧರ್ಮದ ಮತ್ತು ಆಧ್ಯಾತ್ಮಿಕ ಸ್ವಭಾವದ ಆಧಾರದಿಂದ ಏರ್ಪಡಿಸಿದ ನೀತಿಗೆ ಅಥವಾ ನೀತಿ ಶಾಸ್ತ್ರಕ್ಕೆ ಅನಂತವಾದ ಮಾನವಸ್ವಭಾವವೇ ವ್ಯಾಪ್ಯಕ್ಷೇತ್ರವಾಗಿರುತ್ತದೆ. ಅದು ವ್ಯಕ್ತಿಯನ್ನು ಕುರಿತು ಹೊರಟಿರುವದು ನಿಜ, ಆದರೆ ಅದರ ಸಂಬಂಧವು ಅನಂತವಾದ ತತ್ತ್ವಕ್ಕೆ; ಇದು ಸಮಾಜಕ್ಕೂ ಅನ್ವಯಿಸುತ್ತದೆ, ಏಕೆಂದರೆ ಸಮಾಜವೆಂದರೆ ಈ ವ್ಯಕ್ತಿಗಳಲ್ಲನೇಕವನ್ನು

ಒಟ್ಟುಗೂಡಿಸಿದ ಗುಂಪೇ ಹೊರತು ಬೇರಲ್ಲ. ವ್ಯಕ್ತಿಗೂ ಆತನ ಶಾಶ್ವತ ಸಂಬಂಧಗಳಿಗೂ ಇದು ಅನ್ವಯಿಸುವದರಿಂದ ಒಟ್ಟು ಸಮಾಜಕ್ಕೂ, ಅದು ಯಾವದೊಂದು ಕಾಲದಲ್ಲಿ ಯಾವದಾದರೂ ಸ್ಥಿತಿಯಲ್ಲಿರಲಿ, ಅನ್ವಯಿಸಿಯೇ ತೀರಬೇಕು. ಈ ರೀತಿಯಲ್ಲಿ ನೋಡಿದರೆ ಮಾನವ ಜಾತಿಗೆ ಆಧ್ಯಾತ್ಮಿಕ ಧರ್ಮದ ಅವಶ್ಯಕತೆಯು ಯಾವಾಗಲೂ ಇದ್ದೇ ಇರುವದೆಂದು ಕಂಡುಬರುತ್ತದೆ. ಭೌತಿಕವಿಚಾರವನ್ನು ಮಾಡುವದು ಎಷ್ಟೇ ಪ್ರಿಯವಾಗಿರಲಿ, ಮಾನವನು ಯಾವಾಗಲೂ ಅದರಲ್ಲಿಯೇ ಮಗ್ನನಾಗಿರುವದಕ್ಕೆ ಆಗುವದೇ ಇಲ್ಲ.

ಆಧ್ಯಾತ್ಮಿಕ ವಿಚಾರದಲ್ಲಿಯೇ ಹೆಚ್ಚು ಅವಧಾನವನ್ನಿಟ್ಟರೆ ಈ ಲೋಕದಲ್ಲಿ ನಮ್ಮ ವ್ಯವಹಾರಕ್ಕೆ ಧಕ್ಕೆ ತಗಲುವದೆಂದು ಕೆಲವರು ಹೇಳುತ್ತಾರೆ. ಚೈನಾ ದೇಶದ ಮಹಾತ್ಮನಾದ ಕನ್ಫೂಷಿಯಸಿನ ಕಾಲದಷ್ಟು ಹಿಂದಿನ ಕಾಲದಲ್ಲಿಯೇ "ಮೊದಲು ಈ ಲೋಕದ ವಿಚಾರವನ್ನು ಮಾಡಿಕೊಳ್ಳೋಣ. ಆಮೇಲೆ, ಈ ಲೋಕ ವಿಚಾರವನ್ನು ಮುಗಿಸಿದ ಮೇಲೆ, ಮಿಕ್ಕ ಲೋಕಗಳ ವಿಚಾರಕ್ಕೆ ಹೋಗೋಣವಂತೆ" ಎಂಬ ಅಭಿಪ್ರಾಯವು ಹೊರಟಿತ್ತು. ಈ ಲೋಕದ ವಿಚಾರವನ್ನು ಮಾಡಿಕೊಳ್ಳಬೇಕೆಂಬುದೇನೋ ಸರಿಯೇ; ಆದರೆ ಆಧ್ಯಾತ್ಮಿಕ ವಿಚಾರದಲ್ಲಿ ಅತಿಯಾಗಿ ಅವಧಾನವನ್ನಿಟ್ಟರೆ ನಮ್ಮ ವ್ಯವಹಾರಕ್ಕೆ ಒಂದಿಷ್ಟು ಧಕ್ಕೆ ತಗಲುವದು ನಿಜವಾದರೆ ವ್ಯವಹಾರದಲ್ಲಿಯೇ ಅತಿಯಾಗಿ ಅವಧಾನವನ್ನಿಟ್ಟರೆ ಇಹದಲ್ಲಿಯೂ ಪರದಲ್ಲಿಯೂ ನಮಗೆ ತೊಂದರೆಯೇ ಆಗುತ್ತದೆ. ಅದು ನಮ್ಮನ್ನು ಚಾರ್ವಾಕರನ್ನಾಗಿ ಮಾಡಿಬಿಡುತ್ತದೆ. ಮನುಷ್ಯನು ಪ್ರಕೃತಿಯೇ ತನ್ನ ಪರಮಗತಿಯೆಂದು ಭಾವಿಸಕೂಡದು, ಅದಕ್ಕಿಂತ ಹೆಚ್ಚಿನದೇನೋ ಒಂದು ಗತಿಯಿದೆಯೆಂದು ಭಾವಿಸಿಕೊಂಡಿರಬೇಕು.

ಪ್ರಕೃತಿಯನ್ನು ಮೀರುವದಕ್ಕೆ ಪ್ರಯತ್ನಪಡುತ್ತಿರುವವರೆಗೇ ಮನುಷ್ಯನ ಮನುಷ್ಯತ್ವವು ಇರುವದು. ಈ ಪ್ರಕೃತಿಯು ಆಧ್ಯಾತ್ಮಿಕವೂ ಆಗಿರುತ್ತದೆ, ಆದಿಭೌತಿಕವೂ ಆಗಿರುತ್ತದೆ. ಇದರಲ್ಲಿ ನಮ್ಮ ಹೊರಗಿನ ಮತ್ತು ನಮ್ಮ ಶರೀರದಲ್ಲಿರುವ ಭೌತಿಕ ವಸ್ತುವಿನ ಅಣುಗಳಿಗೆ ಸಂಬಂಧಪಟ್ಟ ನಿಮಯಗಳು ಮಾತ್ರವಲ್ಲ; ಅದಕ್ಕಿಂತಲೂ ಸೂಕ್ಷ್ಮವಾಗಿರುವ ಒಳಗಿನ ಪ್ರಕೃತಿಯನ್ನೂ ಅದು ಒಳಗೊಂಡಿರುತ್ತದೆ. ಈ ಪ್ರಕೃತಿಯೇ ಹೊರಗಿನ ಪ್ರಕೃತಿಯನ್ನು ಆಳುವ ಚಾಲಕಶಕ್ತಿಯಾಗಿರುತ್ತದೆ. ಹೊರಗಿನ ಪ್ರಕೃತಿಯನ್ನು ಗೆಲ್ಲುವದು ಒಳ್ಳೆಯದು, ಬಹಳ ಅತಿಶಯವಾದದ್ದು; ಆದರೆ ನಮ್ಮೊಳಗಿನ ಪ್ರಕೃತಿಯನ್ನು ಗೆಲ್ಲುವದು ಮತ್ತೂ ಅತಿಶಯವಾದದ್ದು. ನಕ್ಷತ್ರಗಳಿಗೂ ಗ್ರಹಗಳಿಗೂ ಸಂಬಂಧಿಸಿರುವ

ನಿಯಮಗಳನ್ನು ತಿಳಿಯುವದು ಹೆಚ್ಚಿನದು, ಒಳ್ಳೆಯದು : ಆದರೆ ಮಾನವಜಾತಿಯ ಭಾವಗಳಿಗೂ ರಾಗದ್ವೇಷಗಳಿಗೂ ಸಂಕಲ್ಪಗಳಿಗೂ ಸಂಬಂಧಿಸಿರುವ ನಿಯಮಗಳನ್ನು ತಿಳಿಯುವದು ಅದಕ್ಕಿಂತಲೂ ಎಷ್ಟೋ ಅತಿಶಯವಾದದ್ದು, ಎಷ್ಟೋ ಉತ್ತಮವಾದದ್ದು. ಈ ಒಳಗಿನ ಮಾನವನನ್ನು ಜಯಿಸುವದು, ಮಾನವನ ಮನಸ್ಸಿನೊಳಗಿನ ಸೂಕ್ಷ್ಮ ವ್ಯಾಪಾರಗಳ ರಹಸ್ಯವನ್ನು ಅರಿತುಕೊಳ್ಳುವದು, ಅದರ ಆಶ್ಚರ್ಯಕರವಾದ ರಹಸ್ಯಗಳನ್ನು ತಿಳಿದುಕೊಳ್ಳುವದು – ಸಂಪೂರ್ಣವಾಗಿ ಧರ್ಮಕ್ಕೇ ಸೇರಿದ್ದಾಗಿದೆ. ಮನುಷ್ಯನ ಸ್ವಭಾವಕ್ಕೆ–ಎಂದರೆ ಸಾಮಾನ್ಯವಾದ ಮನುಷ್ಯನ ಸ್ವಭಾವಕ್ಕೆ–ದೊಡ್ಡ ದೊಡ್ಡ ಭೌತಿಕವಿಷಯಗಳನ್ನು ಕಂಡರೆ ಬಲು ಅಕ್ಕರೆ, ಸಾಮಾನ್ಯ ಮನುಷ್ಯನಿಗೆ ಸೂಕ್ಷ್ಮವಾದದ್ದು ಯಾವದೂ ತಿಳಿಯುವದೇ ಇಲ್ಲ. ಪೃಥ್ವಗ್ಜನರು ಸಾವಿರಾರು ಕುರಿಮರಿಗಳನ್ನು ಕೊಲ್ಲುವ ಸಿಂಹವನ್ನು ಮೆಚ್ಚುತ್ತಾರೆಯೋ ಹೊರತು, ಸಿಂಹಕ್ಕೆ ತಾತ್ಕಾಲಿಕ ಜಯವಾದರೂ ಕುರಿಮರಿಗಳಿಗೆ ಮರಣ ಸಂಕಟವಾಗುತ್ತದೆಯೆಂಬುದನ್ನು ಮಾತ್ರ ಒಂದು ಕ್ಷಣವಾದರೂ ಮನಸ್ಸಿಗೆ ತಂದುಕೊಳ್ಳುವದಿಲ್ಲ–ಎಂದು ಒಂದು ಸುಭಾಷಿತವುಂಟು. ಇದೇ ಸರಿ. ಏಕೆಂದರೆ ಅಂಥ ಜನರಿಗೆ ಶಾರೀರಿಕ ಬಲದ ಪ್ರದರ್ಶನವನ್ನು ನೋಡುವದರಲ್ಲಿಯೇ ಬಹಳ ಪ್ರೀತಿ. ಸಾಮಾನ್ಯ ಜನರ ರೀತಿಯೇ ಹೀಗೆ. ಅವರಿಗೆ ಹೊರಗಿನ ವಿಷಯವೊಂದೇ ತಿಳಿಯುತ್ತದೆ, ಅದರಲ್ಲಿಯೇ ಅವರಿಗೆ ಸುಖವು ಕಂಡುಬರುತ್ತದೆ. ಆದರೆ ಪ್ರತಿಯೊಂದು ಸಮಾಜದಲ್ಲಿಯೂ ಇಂದ್ರಿಯ ಭೋಗದಿಂದಲೇ ತೃಪ್ತರಾಗದೆ ಇಂದ್ರಿಯಗಳಿಗೆ ಅತೀತವಾಗಿರುವದೇ ಸುಖವೆಂದು ಬಗೆಯುವವರು ಕೆಲವರು ಇರುತ್ತಾರೆ, ಅವರಿಗೆ ಭೌತಿಕ ವಸ್ತುವಿಗಿಂತ ಹೆಚ್ಚಿನ ಯಾವದೋ ಒಂದು ಇದೆಯೆಂಬುದು ಆಗಾಗ್ಗೆ ಹೊಳೆಯುತ್ತಲೇ ಇರುವದರಿಂದ ಅವರು ಅದನ್ನು ಪಡೆದುಕೊಳ್ಳುವದಕ್ಕೆ ಪ್ರಯತ್ನಿಸುತ್ತಿರುವರು. ಜನಾಂಗಗಳ ಇತಿಹಾಸವನ್ನು ಒಳಹೊಕ್ಕು ನೋಡಿದರೆ ಇಂಥ ಜನರ ಸಂಖ್ಯೆಯು ಹೆಚ್ಚಿದಾಗಲೇ ಆಯಾ ಜನಾಂಗವು ಉನ್ನತಿಗೇರುವದೆಂದೂ, ಈ ಅನಂತತತ್ತ್ವವನ್ನೇ ಹುಡುಕಿಕೊಂಡು ಹೋಗುವ ಯತ್ನವು ನಿರರ್ಥಕವೆಂದು ಉಪಯೋಗವಾದಿಗಳು ಎಷ್ಟೇ ಸಾರುತ್ತಿರಲಿ, ಅದು ನಿಂತ ಕೂಡಲೆ ಆ ಜನಾಂಗದ ಪತನವು ಪ್ರಾರಂಭವಾಗುವದೆಂದೂ ತಿಳಿಯಬರುತ್ತದೆ. ಅಂದರೆ ಪ್ರತಿಯೊಂದು ಜನಾಂಗದ ಬಲದ ಮರ್ಮಸ್ಥಾನವು ಅದರ ಆಧ್ಯಾತ್ಮಿಕ ಶಕ್ತಿಯಲ್ಲಿರುವದು. ಆ ಜನಾಂಗದಲ್ಲಿ ಅಧ್ಯಾತ್ಮಪ್ರವಣತೆಯು ಕಡಿಮೆಯಾಗಿ ಚಾರ್ವಾಕಮತವು ಎಂದು ಪ್ರಬಲವಾಗುತ್ತದೆಯೋ ಅಂದೇ ಅವರ ಮರಣವು ಪ್ರಾರಂಭವಾಗುತ್ತದೆ.

ಈ ರೀತಿಯಲ್ಲಿ ನೋಡಿದರೆ ಧರ್ಮದಿಂದ ನಮಗೆ ಸಿಕ್ಕಬಹುದಾದ

ಪರಮಾರ್ಥವಾದ ವಿಷಯಗಳ ಮತ್ತು ತತ್ತ್ವಗಳ ಮಾತು ಒತ್ತಟ್ಟಿಗಿರಲಿ, ಅದರಿಂದ ನಮಗೆ ಉಂಟಾಗಬಹುದಾದ ಮನಸ್ಸಮಾಧಾನದ ಮಾತೂ ಒತ್ತಟ್ಟಿಗಿರಲಿ, ಧರ್ಮವನ್ನು ಕೇವಲ ಶಾಸ್ತ್ರವೆಂದು ಅದೊಂದು ವಿಚಾರಕ್ಕೆ ತಕ್ಕ ವಿಷಯವೆಂದು ಇಟ್ಟುಕೊಂಡು ನೋಡಿದರೂ ಮಾನವನ ಮನಸ್ಸಿಗೆ ಸಿಕ್ಕುವ ಸಂಸ್ಕಾರಗಳಲ್ಲೆಲ್ಲ ಅತ್ಯಂತ ಹೆಚ್ಚಿನ ಅತ್ಯಂತ ಉತ್ತಮ ವರ್ಗದ ಸಂಸ್ಕಾರವು ಇದರಿಂದ ಉಂಟಾಗುತ್ತದೆ. ಈ ಅನಂತತತ್ತ್ವದ ಅನ್ವೇಷಣೆಯೇ, ಅನಂತವಾದ ತತ್ತ್ವವನ್ನು ಗ್ರಹಿಸಿಕೊಳ್ಳಬೇಕೆಂದು ಮಾಡುವ ಈ ಮಹಾಪ್ರಯತ್ನವೇ, ಮನುಷ್ಯನು ಮಾಡಬಹುದಾದ ಪ್ರಯತ್ನಗಳಲ್ಲೆಲ್ಲ ಅತ್ಯದ್ಭುತವಾದದ್ದು, ಅತ್ಯಂತ ಘನವಾದದ್ದು.

ಕೆಲವರಿಗೆ ತಿನ್ನುವದೆಂದರೆ ಅತ್ಯಂತ ಸಂತೋಷ. ಅದು ಸರಿಯಲ್ಲವೆಂದು ಅವರಿಗೆ ಹೇಳುವದಕ್ಕೆ ನಮಗೆ ಯಾವ ಹಕ್ಕೂ ಇರುವದಿಲ್ಲ. ಆದರೆ ಯಾವನಿಗೆ ಅಧ್ಯಾತ್ಮ ಚಿಂತನೆಯಲ್ಲಿಯೇ ಅತ್ಯಂತ ಸಂತೋಷವಾಗುವದೋ ಅವನನ್ನು ಕಂಡು ಇದು ಸರಿಯಲ್ಲ! ಎನ್ನುವದಕ್ಕೆ ಅವರಿಗೂ ಹಕ್ಕಿರುವದಿಲ್ಲ. ಪ್ರಾಣಿವರ್ಗದಲ್ಲಿ ಎಷ್ಟೆಷ್ಟು ಕೆಳಗಿನ ಅಂತಸ್ತಿಗೆ ಹೋದರೆ ಅಷ್ಟಷ್ಟು ಇಂದ್ರಿಯಭೋಗದ ರತಿಯು ಕಂಡುಬರುತ್ತದೆ. ನಾಯಿಯಾಗಲಿ, ತೋಳವಾಗಲಿ ತಿನ್ನುವ ಹಾಗೆ ಅಷ್ಟೇ ಪ್ರೀತಿಯಿಂದ ಆಹಾರವನ್ನು ಸವಿದುಣ್ಣುವ ಜನರು ಅತಿ ವಿರಳ. ಯಾವ ಜನಾಂಗದಲ್ಲಿಯೇ ಆಗಲಿ ಕೆಳಗಿನ ಅಂತಸ್ತಿನ ಜನರಿಗೆ ಇಂದ್ರಿಯದಲ್ಲಿಯೇ ರತಿಯಿರುತ್ತದೆ. ಆದರೆ ಸಂಸ್ಕೃತರೂ ವಿದ್ಯಾವಂತರೂ ಆಗಿರುವವರಿಗೆ ವಿಚಾರ, ತತ್ತ್ವಶಾಸ್ತ್ರ, ಭೌತಿಕ ವಿಜ್ಞಾನ, ಕಲೆಗಳು-ಇವುಗಳಲ್ಲಿಯೇ ಪ್ರೀತಿಯಿರುತ್ತದೆ. ಅಧ್ಯಾತ್ಮರತಿಯೆಂಬುದು ಇನ್ನೂ ಮೇಲಿನ ಅಂತಸ್ತು. ಅದರ ವಿಷಯವು ಅನಂತವಾಗಿರುವದರಿಂದ ಆ ಅಂತಸ್ತು ಎಲ್ಲಕ್ಕೂ ಮೇಲಿನದಾಗಿರುತ್ತದೆ, ಅದರಲ್ಲಿರುವ ಆನಂದವೂ ಅದನ್ನು ಬಲ್ಲವರಿಗೆ ಎಲ್ಲಕ್ಕೂ ಹೆಚ್ಚಿನದಾಗಿರುತ್ತದೆ, ಈ ರೀತಿಯಲ್ಲಿ ಮನುಷ್ಯನು ಸುಖಕ್ಕಾಗಿಯೇ ಹೊಡೆದಾಡಬೇಕೆಂಬ ಉಪಯೋಗವಾದಿಗಳ ದೃಷ್ಟಿಯಿಂದ ಕೂಡ ಧಾರ್ಮಿಕ ವಿಚಾರವನ್ನು ಮಾಡಬೇಕೆಂದಾಗುವದು. ಏಕೆಂದರೆ ಅದೇ ಎಲ್ಲದಕ್ಕಿಂತಲೂ ಹೆಚ್ಚಿನ ಸುಖವಾಗಿರುತ್ತದೆ.

ಈ ರೀತಿಯಿಂದ ನೋಡಿದರೆ ಧರ್ಮ ವಿಚಾರವು ಅತ್ಯಂತ ಅವಶ್ಯವಾಗಿರುವದೆಂದು ನನಗೆ ತೋರುತ್ತದೆ. ಇದು ಅದರಿಂದಾಗುವ ಫಲಗಳಿಂದಲೂ ಗೊತ್ತಾಗುತ್ತದೆ. ಮಾನವನ ಮನಸ್ಸನ್ನು ಕದಲಿಸುವ ಚಾಲಕಶಕ್ತಿಗಳಲ್ಲೆಲ್ಲ ಇದೇ ಅತ್ಯಂತ ಹೆಚ್ಚಿನದು. ಆಧ್ಯಾತ್ಮಿಕಧ್ಯೇಯವು ನಮ್ಮಲ್ಲಿ ಎಷ್ಟು ಶಕ್ತಿಯ ಆಧಾನವನ್ನು ಮಾಡುವದೋ ಅಷ್ಟು ಶಕ್ತಿಯನ್ನು ಮತ್ತೆ ಯಾವ ಧ್ಯೇಯವೂ ಆಧಾನಮಾಡಲಾರದು. ಮಾನವನ

ಇತಿಹಾಸವನ್ನು ಇದುವರೆಗೆ ನೋಡಿದ್ದರಲ್ಲಿ ಹೀಗೆಯೇ ನಡೆದಿರುವದೆಂದೂ, ಅದರ ಶಕ್ತಿಗಳು ಇನ್ನೂ ನಷ್ಟವಾಗಿಲ್ಲವೆಂದೂ* ನಮಗೆಲ್ಲರಿಗೂ ಸ್ಪಷ್ಟವಾಗಿ ಗೊತ್ತಾಗುತ್ತದೆ. ಈ ಉಪಯೋಗವಾದದ ಆಧಾರದಿಂದಲೂ ಜನರು ಒಳ್ಳೆಯವರಾಗಿಯೂ ನೀತಿವಂತರಾಗಿಯೂ ಇರಲಾರರೆಂದೇನೂ ನಾನು ಹೇಳುವದಿಲ್ಲ. ಬರಿಯ ಉಪಯೋಗವಾದದ ಆಧಾರದ ಮೇಲೆಯೇ ನಿಂತು ನಿರ್ದುಷ್ಟರಾಗಿ ನೀತಿವಂತರಾಗಿ ಒಳ್ಳೆಯವರಾಗಿದ್ದ ಎಷ್ಟೋ ಮಹನೀಯರು ಈ ಲೋಕದಲ್ಲಿ ಆಗಿಹೋಗಿರುತ್ತಾರೆ. ಆದರೆ ವಿಶ್ವಚಾಲಕರು, ಈ ಲೋಕದೊಳಕ್ಕೆ ಮಹಾಶಕ್ತಿರಾಶಿಯನ್ನು ತಂದವರಂತೆ ಬಂದು ತಮ್ಮ ಜೀವನದಿಂದ ಮತ್ತೊಬ್ಬರಲ್ಲಿಯೂ ಆಧ್ಯಾತ್ಮಿಕವಾದ ಅಗ್ನಿಯು ಪ್ರಜ್ವಲಿಸುವಂತೆ ಮಾಡಿದವರು ಮಾತ್ರ, ಆ ಆಧ್ಯಾತ್ಮದ ಆಧಾರದ ಮೇಲೆಯೇ ನಿಂತಿದ್ದರೆಂದು ನಮಗೆ ಯಾವಾಗಲೂ ಕಂಡುಬಂದಿರುತ್ತದೆ. ಅವರಲ್ಲಿರುವ ಚಾಲಕ ಶಕ್ತಿಯು ಧರ್ಮದಿಂದಲೇ ಬಂದಿತು. ಪ್ರತಿಯೊಬ್ಬನಿಗೂ ಜನ್ಮಸಿದ್ಧವಾದ ಹಕ್ಕು ಎನಿಸಿರುವ, ಪ್ರತಿಯೊಬ್ಬನ ಸ್ವರೂಪವೇ ಆಗಿರುವ, ಅನಂತಶಕ್ತಿಯನ್ನು ಕಂಡುಕೊಳ್ಳಬೇಕೆಂಬ ಸಂಕಲ್ಪವನ್ನು ಹುಟ್ಟಿಸುವ ನಿರತಿಶಯವಾದ ಪ್ರವರ್ತಕಶಕ್ತಿಯೆಂದರೆ ಧರ್ಮವೇ. ಯೋಗ್ಯತೆಯನ್ನು ಸಂಪಾದಿಸುವದಕ್ಕೂ, ಒಳ್ಳೆಯದೂ ಮಹತ್ತ್ವದ್ದೂ ಎನಿಸಿರುವ ಯಾವದಾದರೊಂದು ಫಲವನ್ನು ಸಂಪಾದಿಸುವದಕ್ಕೂ, ಮತ್ತೊಬ್ಬರಿಗೆ ಶಾಂತಿಯನ್ನುಂಟುಮಾಡುವದಕ್ಕೂ ತನಗೂ ಶಾಂತಿಯನ್ನು ಸಂಪಾದಿಸಿ ಕೊಳ್ಳುವದಕ್ಕೂ, ಧರ್ಮವೇ ಅತ್ಯಂತ ಹೆಚ್ಚಿನ ಪ್ರವರ್ತಕ ಶಕ್ತಿಯಾಗಿರುವದು. ಆದ್ದರಿಂದ ಈ ದೃಷ್ಟಿಯಿಂದ ಅದನ್ನು ಅವಶ್ಯವಾಗಿ ಪರಿಶೀಲನೆ ಮಾಡಬೇಕು. ಧರ್ಮವನ್ನು ನಾವು ಹಿಂದೆ ಪರಿಶೀಲನೆ ಮಾಡುತ್ತಿದ್ದದ್ದಕ್ಕಿಂತಲೂ ವಿಶಾಲತರವಾದ ಆಧಾರವನ್ನಿಟ್ಟುಕೊಂಡು ಈಗ ವಿಚಾರ ಮಾಡಬೇಕು. ಧರ್ಮದ ವಿಷಯದಲ್ಲಿ ನಮಗೆ ಇದ್ದ ಸಂಕುಚಿತವಾದ ಪರಿಚ್ಛಿನ್ನವಾದ ಕಾದಾಟದ ಭಾವನೆಗಳೆಲ್ಲ ತೊಲಗಬೇಕು. ಧರ್ಮವು ಒಂದಾನೊಂದು ಪಂಗಡಕ್ಕೆ ಸೇರಿದ್ದೆಂಬ, ಒಂದಾನೊಂದು ಕುಲಕ್ಕೆ ಸೇರಿದ್ದೆಂಬ, ಅಥವಾ ಒಂದಾನೊಂದು ಜನಾಂಗಕ್ಕೆ ಸೇರಿದ್ದೆಂಬ ಭಾವನೆಗಳನ್ನೆಲ್ಲ ನಾವು ಬಿಟ್ಟುಬಿಡಬೇಕು. ಒಂದೊಂದು ಕುಲಕ್ಕೂ ಒಂದೊಂದು ಜನಾಂಗಕ್ಕೂ ಅದರದರ ಅಸಾಧಾರಣ ದೇವರು ಇರಬೇಕೆಂಬುದೂ ಮತ್ತೊಬ್ಬರ ಭಾವನೆಯೆಲ್ಲ ತಪ್ಪೆಂಬುದೂ ಮೂಢಭಕ್ತಿಯು, ಅದು ಭೂತ ಕಾಲಕ್ಕೆ ಸೇರಿದ್ದಾಗಬೇಕು. ಇಂಥ ಭಾವನೆಗಳನ್ನೆಲ್ಲ ನಾವು ಸಂಪೂರ್ಣವಾಗಿ ಕೈಬಿಟ್ಟುಬಿಡಬೇಕು.

ಮನುಷ್ಯನ ಮನಸ್ಸು ವಿಶಾಲವಾದಂತೆಲ್ಲ ಅದರ ಆಧ್ಯಾತ್ಮಿಕ ಸೋಪಾನಗಳೂ

* ಪ್ರಕೃತಕಾಲದಲ್ಲಿ ಧರ್ಮದಲ್ಲಿ ಅನಾದರವಿದ್ದವರು ಕೂಡ ಮತ್ತೆ ಧರ್ಮವಿಚಾರದಲ್ಲಿ ತೊಡಗಿರುವದನ್ನು ನೋಡಿದರೆ ಸ್ವಾಮಿಗಳ ಈ ವಾಣಿಯ ಬಲವು ಸ್ಪಷ್ಟವಾಗುವದು.

ವಿಶಾಲತರವಾಗುತ್ತವೆ. ಒಬ್ಬನು ಒಂದು ವಿಚಾರವನ್ನು ಒಂದು ಕಡೆ ಬರೆದಿಟ್ಟರೆ ಅದು ಭೂಲೋಕದ ಮೂಲೆಮೂಲೆಗೂ ಹೋಗಿ ಮುಟ್ಟದೆ ಇರುವಹಾಗೆಂಬುದೇ ಇಲ್ಲ–ಎಂಬಂಥ ಕಾಲವು ಆಗಲೆ ಬಂದು ಬಿಟ್ಟಿರುವದು. ಕೇವಲ ಭೌತಿಕ ಸಾಧನಗಳಿಂದಲೇ ಈಗ ನಾವು ಅಖಿಲಭೂಮಂಡಲದ ಸಂಪರ್ಕವುಳ್ಳವರಾಗಿ ಬಿಟ್ಟಿರುತ್ತೇವೆ.* ಆದ್ದರಿಂದ ಇನ್ನು ಮೇಲೆ ಭೂಮಂಡಲದ ಮೇಲೆ ಇರುವ ಧರ್ಮಗಳೂ ಅಷ್ಟೇ ವ್ಯಾಪಕವಾಗಿರಬೇಕು, ಅಷ್ಟೇ ವಿಶಾಲವಾಗಿರಬೇಕು. ಇನ್ನು ಮುಂದಿನ ಧಾರ್ಮಿಕಧ್ಯೇಯಗಳು ಭೂಮಂಡಲದಲ್ಲಿರುವ ಒಳ್ಳೆಯ ಮಹತ್ತ್ವದ ತತ್ತ್ವಗಳನ್ನೆಲ್ಲ ತಮ್ಮೊಳಗಡಗಿಸಿಕೊಂಡಿರಬೇಕಲ್ಲದೆ ಇನ್ನೂ ಮುಂದೆ ಬೆಳೆಯುವದಕ್ಕೂ ಬೇಕಾದಷ್ಟು ಅವಕಾಶವುಳ್ಳವಾಗಿರಬೇಕು. ಹಿಂದಿನ ಧ್ಯೇಯದಲ್ಲಿ ಏನೇನು ಒಳ್ಳೆಯದಿತ್ತೋ ಅದನ್ನೆಲ್ಲ ಇಟ್ಟುಕೊಳ್ಳಬೇಕು ಮತ್ತು ಈಗ ಕೂಡಿಹಾಕಿರುವದಕ್ಕೆ ಮುಂದೆ ಸೇರಿಸಿಕೊಳ್ಳಬಹುದಾದ ತತ್ತ್ವಗಳಿಗ ಅವಕಾಶವಿರುವಂತೆ ಹೆಬ್ಬಾಗಿಲನ್ನು ತೆರೆದಿಡಬೇಕು. ಧರ್ಮಗಳು ಪರಸ್ಪರ ಸಹಾನುಭೂತಿಯುಳ್ಳವಾಗಿರಬೇಕೇ ಹೊರತು ತಮ್ಮ ತಮ್ಮ ಈಶ್ವರಭಾವನೆಗಳು ಬೇರೆ ಬೇರೆಂಬಾಗಿವೆಂಬೆಂಬ ಕಾರಣದಿಂದ ಒಂದನ್ನೊಂದು ತಿರಸ್ಕಾರಭಾವದಿಂದ ಕಾಣಬಾರದು. ನನ್ನ ಜೀವಮಾನದಲ್ಲಿ ನಾನು ಎಷ್ಟೋ ಜನಧಾರ್ಮಿಕ ಜನರನ್ನೂ ಎಷ್ಟೋ ಜನ ವಿವೇಕಿಗಳನ್ನೂ ನೋಡಿರುತ್ತೇನೆ; ಆದರೆ ಅವರಲ್ಲಿ ಕೆಲವರಿಗೆ ದೇವರಲ್ಲಿ ನಂಬಿಕೆಯೇ ಇರಲಿಲ್ಲ, ಎಂದರೆ ದೇವರು ಎಂಬಮಾತಿಗೆ ನಾವು ಇಟ್ಟುಕೊಂಡಿರುವ ಅರ್ಥದಲ್ಲಿ ಅವರಿಗೆ ನಂಬಿಕೆಯಿರಲಿಲ್ಲ. ಒಂದು ವೇಳೆ ನಮಗೆ ಮುಂದೆ ಕೂಡ ದೇವರ ಜ್ಞಾನವಾಗಬಹುದಾದ್ದಕ್ಕಿಂತಲೂ ಹೆಚ್ಚಿನ ಜ್ಞಾನವು ಅವರಿಗೆ ಇದ್ದರೂ ಇರಬಹುದು. ದೇವರು ಸಗುಣನೆಂಬುದು, ನಿರ್ಗುಣನೆಂಬುದು, ಅನಂತನೆಂಬುದು, ಧರ್ಮತತ್ತ್ವವೆಂಬುದು, ಪರಿಪೂರ್ಣಪುರುಷನೆಂಬುದು – ಈ ಭಾವನೆಗಳೆಲ್ಲ ಧರ್ಮವೆಂಬದರ ಲಕ್ಷಣ ವಾಕ್ಯದಲ್ಲಿ ಸೇರಿರಬೇಕು. ಧರ್ಮಗಳು ಹೀಗೆ ವಿಶಾಲವಾದರೆ ಅವುಗಳಿಗಿರುವ ಉಪಕಾರಶಕ್ತಿಯು ಶತಗುಣವಾಗಿ ಹೆಚ್ಚುವದು.

ಧರ್ಮಗಳಲ್ಲಿ ಅದ್ಭುತಶಕ್ತಿಯಿರುತ್ತಿದ್ದರೂ ಅವು ಲೋಕಕ್ಕೆ ಉಪಕಾರಕ್ಕಿಂತಲೂ ಅಪಕಾರವನ್ನೇ ಅನೇಕ ಸಂದರ್ಭಗಳಲ್ಲಿ ಮಾಡಿರುವದಕ್ಕೆ ಅವುಗಳ ಸಂಕುಚಿತಭಾವ, ಪರಿಚ್ಛೇದಗಳು – ಇವೇ ಕಾರಣವು. ಈಗಿನ ಕಾಲದಲ್ಲಿ ಕೂಡ ಎಷ್ಟೋ ಪಂಗಡಗಳೂ ಸಮಾಜಗಳೂ ಸ್ವಲ್ಪ ಹೆಚ್ಚುಕಡಿಮೆ ಒಂದೇ ಅಭಿಪ್ರಾಯಗಳುಳ್ಳವಾಗಿರುತ್ತಿದ್ದರೂ ಒಂದರೊಡನೊಂದು ಕಚ್ಚಾಡುತ್ತಿರುವ

* ಸ್ವಾಮಿಗಳವರ ಕಾಲದಿಂದೀಚೆಗೆ ತಂತಿಇಲ್ಲದೆ ಸುದ್ದಿಗಳನ್ನು ಕಳುಹಿಸುವದು, ವಾತಯಂತ್ರಗಳು, ಆಕಾಶಯಾನಗಳು, ಧ್ವನಿಯನ್ನೂ ರೂಪವನ್ನೂ ಅತ್ಯಂತ ದೂರ ಪ್ರದೇಶಗಳಿಗೂ ಸಾಗಿಸುವ ಸಾಧನಗಳು – ಮುಂತಾದ ಭೌತಿಕ ಸಾಧನಗಳೂ ಉಂಟಾಗಿವೆ. ಆದ್ದರಿಂದ ಈ ಅಭಿಪ್ರಾಯಕ್ಕೆ ಈಗ ಇನ್ನಷ್ಟು ಪುಷ್ಟಿ ಬಂದಿರುತ್ತದೆ.

ದೇಕೆಂದರೆ ಈ ಅಭಿಪ್ರಾಯಗಳನ್ನು ಒಂದು ಧರ್ಮವು ಹೇಗೆ ವಿವರಿಸುವದೋ ಅದೇ ರೀತಿಯಲ್ಲಿ ಅವುಗಳನ್ನು ತಿಳಿಸುವದಕ್ಕೆ ಮತ್ತೊಂದು ಧರ್ಮವು ಇಷ್ಟಪಡುವದಿಲ್ಲ. ಆದ್ದರಿಂದ ಧರ್ಮಗಳು ವಿಶಾಲವಾಗಬೇಕು. ಧಾರ್ಮಿಕ ಭಾವನೆಗಳು ವ್ಯಾಪಕವಾಗಿಯೂ ವಿಶಾಲತಮವಾಗಿಯೂ ಅಪರಿಚ್ಛಿನ್ನವಾಗಿಯೂ ಆಗಬೇಕು. ಆಗಲೇ ಧರ್ಮವು ಪರಿಪೂರ್ಣವಾಗಿ ತನ್ನ ಕೆಲಸವನ್ನು ಮಾಡುವದು. ಏಕೆಂದರೆ ಧರ್ಮದ ಶಕ್ತಿಯು ಇನ್ನೂ ಈಗತಾನೆ ಲೋಕದಲ್ಲಿ ವ್ಯಕ್ತವಾಗುವದಕ್ಕೆ ಮೊದಲುಮಾಡಿರುತ್ತದೆ. ಧರ್ಮಗಳು ನಾಶವಾಗುತ್ತಿವೆಯೆಂದೂ, ಆಧ್ಯಾತ್ಮಿಕ ಭಾವನೆಗಳು ಈ ಲೋಕವನ್ನು ಬಿಟ್ಟು ಕಣ್ಮರೆಯಾಗುತ್ತಿವೆಯೆಂದೂ ಕೆಲವರು ಹೇಳುವದುಂಟು. ಇವು ಇನ್ನೂ ಈಗ ತಾನೆ ಬೆಳೆಯುವದಕ್ಕೆ ಮೊದಲು ಮಾಡುತ್ತಿವೆಯೆಂದು ನನಗೆ ತೋರುತ್ತಿದೆ. ಧರ್ಮಶಕ್ತಿಯನ್ನು ವಿಶಾಲಗೊಳಿಸಿ ಪರಿಶುದ್ಧಗೊಳಿಸಿದ ಮೇಲೆ ಅದು ಮಾನವ ಜೀವನದ ಒಂದೊಂದು ಭಾಗವನ್ನೂ ವ್ಯಾಪಿಸಿಕೊಳ್ಳುವದು. ಎಲ್ಲಿಯವರೆಗೆ ಧರ್ಮವು ಎಲ್ಲಿಯೋ ಕೆಲವು ಆರಿಸಿದ ಜನರ ಕೈಯ್ಯಲ್ಲಿದ್ದಿತೋ, ಎಂದರೆ ಕೆಲವರು ಪುರೋಹಿತರ ವಶದಲ್ಲಿ ಮಾತ್ರ ಇದ್ದಿತೋ, ಅಲ್ಲಿಯವರೆಗೂ ಅದು ಗುಡಿಗಳಲ್ಲಿಯೂ ಚರ್ಚುಗಳಲ್ಲಿಯೂ ಗ್ರಂಥಗಳಲ್ಲಿಯೂ ಉಪದೇಶವಾಕ್ಯಗಳಲ್ಲಿಯೂ ವಿಧಿಗಳಲ್ಲಿಯೂ ಬಾಹ್ಯಾಚಾರಗಳಲ್ಲಿಯೂ ಕರ್ಮಗಳಲ್ಲಿಯೂ ಇದ್ದಿತು. ಆದರೆ ನಾವು ನಿಜವಾಗಿಯೂ ಆಧ್ಯಾತ್ಮಿಕವಾದ ವ್ಯಾಪಕ ಭಾವನೆಗೆ ಬಂದು ಮುಟ್ಟಿದೆವೆಂದರೆ ಆಗಲೇ ಧರ್ಮವು ನಿಜವಾಗಿ ಸಜೀವವಾಗಿ ಮಾರ್ಪಡುವದು. ಆಗ ಅದು ನಮ್ಮ ಸ್ವಭಾವದೊಳಕ್ಕೇ ಬಂದು ಬಿಡುವದು, ನಮ್ಮ ಒಂದೊಂದು ಚಲನೆಯಲ್ಲಿಯೂ ಜೀವಿಸಿರುವದು, ನಮ್ಮ ಸಮಾಜದ ಒಂದೊಂದು ರೋಮಕೂಪವನ್ನೂ ಒಳಹೊಗುವದು, ಇದಕ್ಕಿಂತ ಮೊದಲು ಅದು ಮಾಡಿರುವ ಉಪಕಾರಕ್ಕಿಂತ ಎಷ್ಟೋ ಹೆಚ್ಚಿನ ಉಪಕಾರವನ್ನು ಮಾಡುವ ಶಕ್ತಿಯಾಗುವದು.

ಈಗ ಬೇಕಾಗಿರುವದೇನೆಂದರೆ ಬೇರೆ ಬೇರೆ ಮಾದರಿಯ ಧರ್ಮಗಳಲ್ಲಿ ಸಹಾನುಭೂತಿಯು; ಏಕೆಂದರೆ ಅವುಗಳೆಲ್ಲ ಜೊತೆಯಲ್ಲಿಯೇ ನಿಂತುಕೊಳ್ಳ ಬೇಕಾಗಿದೆ, ಇಲ್ಲದಿದ್ದರೆ ಜೊತೆಯಲ್ಲಿಯೇ ಬೀಳಬೇಕಾಗಿದೆ. ಈ ಸಹಾನುಭೂತಿ ಯೆಂಬುದು ಪರಸ್ಪರೋತ್ಕರ್ಷಜ್ಞಾನದಿಂದಲೂ ಪರಸ್ಪರ ಗೌರವಭಾವನೆಯಿಂದಲೂ ಉಂಟಾದದ್ದಾಗಿರಬೇಕು; ಈಗಿನ ಕಾಲದಲ್ಲಿ ನಮ್ಮ ದುರದೃಷ್ಟದಿಂದ ಬಹುಜನರಲ್ಲಿ ವಾಡಿಕೆಯಲ್ಲಿರುವ 'ಹೌದು, ಇದು ಕೆಟ್ಟದ್ದಲ್ಲ' ಎಂಬ ಭಾವನೆಯಿಂದ ಆಶ್ರಯದಾತರಾಗಿ ತೋರಿಸಿಕೊಳ್ಳುವ ಲೋಭಿತನದ ಸದಭಿಪ್ರಾಯವಿದ್ದರೆ ಸಾಲದು, ಎಲ್ಲಕ್ಕೂ ಮೇಲಾಗಿ ಮಾನಸದೃಶ್ಯಗಳನ್ನು ಪರಿಶೀಲನಮಾಡಿ – ನಮ್ಮ

ದುರದೃಷ್ಟದಿಂದ ಈಗಲೂ ಕೂಡ ತಾವೇ ಧರ್ಮವೆಂದು ಹೇಳಿಕೊಳ್ಳುತ್ತಿವೆಯಲ್ಲ, ಆ ಬಗೆಯು ಧರ್ಮ ವ್ಯಕ್ತಿಗಳಿಗೂ ಮತ್ತು ತಮ್ಮ ತಲೆಗಳನ್ನು ಸ್ವರ್ಗದ ರಹಸ್ಯಗಳನ್ನೆಲ್ಲ ನುಗ್ಗಿ ತಿಳಿಯುವಂತೆ ಮಾಡಿದ್ದರೂ ತಮ್ಮ ಪಾದಗಳನ್ನು ಮಾತ್ರ ಭೂಮಿಗೇ ಅಂಟಿಕೊಂಡಿರುವ ಧರ್ಮವ್ಯಕ್ತಿಗಳಿಗೂ, ಎಂದರೆ – ಭೌತಿಕ ವಿಜ್ಞಾನ ಶಾಸ್ತ್ರಗಳೆಂದು ಕರೆಯುತ್ತಾರಲ್ಲ, ಆ ಬಗೆಯು – ಧರ್ಮವ್ಯಕ್ತಿಗಳಿಗೂ* ಈ ಸಹಾನುಭೂತಿಯು ಮುಖ್ಯವಾಗಿರಬೇಕಾಗುತ್ತದೆ. ಈ ಸಾಮರಸ್ಯವುಂಟಾಗಬೇಕಾದರೆ ಇಬ್ಬರೂ ಕೆಲವು ರಿಯಾಯಿತಿಗಳನ್ನು ಮಾಡಬೇಕಾಗಿರುವದು; ಕೆಲವು ವೇಳೆ ಈ ರಿಯಾಯಿತಿಗಳು ಬಲು ಮಹತ್ತ್ವದವಾಗಿರಬೇಕಾಗುವದು; ಅಷ್ಟೇ ಅಲ್ಲ, ಕೆಲವು ವೇಳೆ ಬಹು ಕಷ್ಟದಿಂದ ಮಾಡತಕ್ಕವುಗಳೂ ಆಗಿರಬೇಕಾಗುವದು. ಆದರೆ ಈ ಸ್ವಾರ್ಥ ತ್ಯಾಗದಿಂದ ಇಬ್ಬರಿಗೂ ಮೊದಲಿಗಿಂತ ಹೆಚ್ಚಿನ ಪ್ರಯೋಜನವೇ ಆಗುತ್ತದೆಂದು ಕಂಡುಬರುವದು. ಕೊನೆಯಲ್ಲಿ ಕಾಲದೇಶಗಳ ಎಲ್ಲೆಯಲ್ಲಿ ಕಟ್ಟು ಬಿದ್ದಿರುವ ತಿಳಿವಳಿಕೆಯು ಇವುಗಳೆರಡನ್ನೂ ಮೀರಿರುವ ತಿಳಿವಳಿಕೆಯನ್ನು ಸಂಧಿಸಿ, ಅದರೊಡನೆ ಐಕ್ಯವಾಗಿಬಿಡುವದು; ಅದನ್ನು ಇಂದ್ರಿಯಗಳಾಗಲಿ ಮನಸ್ಸಾಗಲಿ ಮುಟ್ಟಲಾರವು. ಅದೇ ತನಗೆರಡನೆಯದಿಲ್ಲ ಏಕ ಮಾತ್ರವಾದ ಅನಂತಬ್ರಹ್ಮತತ್ತ್ವವು.

-----

* ಮತಗಳು, ಭೌತಿಕಶಾಸ್ತ್ರ – ಎಂದು ಎರಡು ಬೇರೆ ಬೇರೆಯ ಶಾಸ್ತ್ರಗಳೆಂದು ಭಾವಿಸಿರುವದರಿಂದ ಪಾಶ್ಚಾತ್ಯ ದೇಶಗಳಲ್ಲಿ ಭೌತಿಕತತ್ತ್ವ ವಿಚಾರಕರಿಗೂ ಮತಾಭಿಮಾನಿಗಳಿಗೂ ಹೊಡೆದಾಟವು ಆಗುತ್ತಲೇ ಇರುವದು. ಧರ್ಮದ ವಿಚಾರವನ್ನು ಮಾಡುವದಕ್ಕೆ ಭೌತಿಕ ವಿಚಾರಕರಿಗೆ ಯಾವ ಹಕ್ಕೂ ಇರುವದಿಲ್ಲವೆಂದು ಮತಗಳು ಹೇಳುತ್ತಿವೆ. ಧರ್ಮತತ್ತ್ವವನ್ನೆಲ್ಲ ಭೌತಿಕವಿಜ್ಞಾನದಲ್ಲಿಯೇ ಅಡಕಮಾಡಿಬಿಡಬಹುದೆಂದು ಭೌತಿಕ ವಿಚಾರಕರು ಹೇಳುತ್ತಿದ್ದಾರೆ. ನಿಜವಾಗಿ ನೋಡಿದರೆ ಇಬ್ಬರೂ ದುರಭಿಮಾನದಿಂದಲೇ ಕೂಡಿರುತ್ತಾರೆನ್ನಬೇಕು; ಏಕೆಂದರೆ ಒಂದೇ ಅದ್ವಿತೀಯವಾದ ಚೈತನ್ಯವೇ ಮನಸ್ಸೆಂಬ ಸೂಕ್ಷ್ಮರೂಪದಲ್ಲಿಯೂ ಭೌತಿಕ ವಿಷಯವೆಂಬ ಸ್ಥೂಲರೂಪದಲ್ಲಿಯೂ ತೋರಿಕೊಳ್ಳುತ್ತಿರುವದು. ಇವರಿಬ್ಬರೂ ಒಂದೇ ಒಂದು ಪರಮಾರ್ಥದ ಎರಡು ವ್ಯಕ್ತಾಕಾರಗಳನ್ನು ಕುರಿತು ವಿಚಾರ ಮಾಡುತ್ತಿರುವರು – ಎಂಬುದನ್ನು ಸ್ವಾಮಿಗಳು ಇಲ್ಲಿ ಪ್ರತಿಪಾದಿಸಿರುತ್ತಾರೆ.

## 2. ಮಾನವನ ಪರಮಾರ್ಥಸ್ವರೂಪ

ಮನುಷ್ಯನು ಇಂದ್ರಿಯಗಳನ್ನು ಬಿಡನೆಂದು ಬಹುಬಲವಾಗಿ ಪಟ್ಟು ಹಿಡಿದಿರುತ್ತಾನೆ. ತಾನು ವಾಸಮಾಡಿಕೊಂಡು ವ್ಯವಹಾರಮಾಡುತ್ತಿರುವ ಹೊರಗಿನ ಪ್ರಪಂಚವು ಎಷ್ಟು ಸಾರವತ್ತಾದದ್ದೆಂದು ಅವನು ತಿಳಿದುಕೊಂಡಿದ್ದರೂ ವ್ಯಕ್ತಿಗಳ ಮತ್ತು ಮಾನವ ಕುಲಗಳ ಜೀವನದಲ್ಲಿ 'ಇದು ಸತ್ಯವೆ?' ಎಂದು ಅನಿಚ್ಛಾಪೂರ್ವಕವಾಗಿಯೇ ಕೇಳುವ ಕಾಲವೊಂದು ಬಂದೇ ಬರುತ್ತದೆ. ತನ್ನ ಇಂದ್ರಿಯಗಳು ತಿಳಿಸುವದು ಸತ್ಯವೆ ? – ಎಂದು ಸಂಶಯಪಡುವದಕ್ಕೆ ಒಂದು ಕ್ಷಣವೂ ವಿರಾಮವಿಲ್ಲದೆ ಪ್ರತಿಯೊಂದು ಕ್ಷಣವನ್ನೂ ಇಂದ್ರಿಯಭೋಗದಲ್ಲಿಯೇ ಕಳೆಯುತ್ತಿರುವವನಿಗೆ ಕೂಡ ಸಾವು ಬರುತ್ತದೆ; ಆಗ ಅವನೂ "ಇದು ಸತ್ಯವೇ" ಎಂದು ಕೇಳಲೇಬೇಕಾಗುತ್ತದೆ. ಧರ್ಮವೆಂಬುದು ಈ ಪ್ರಶ್ನೆಯಲ್ಲಿ ಮೊದಲಾಗಿ ಇದಕ್ಕೆ ಉತ್ತರವನ್ನು ಕಂಡುಕೊಳ್ಳುವದರಲ್ಲಿ ಕೊನೆಗಾಣುವದು. ಇತಿಹಾಸದ ಸಹಾಯದಿಂದ ಕೂಡ ಅರಿಯುವದಕ್ಕಾಗದೆ ಪುರಾಣಗಳ ಅತಿಗಹನವಾದ ಬೆಳಕಿಗೆ ಮಾತ್ರ ಗೋಚರವಾಗಿರುವ, ನಾಗರಿಕತೆಯು ಇನ್ನೂ ಉದಯವಾಗದ ನಸುಗತ್ತಲೆಯ ಮಬ್ಬು ಮಬ್ಬು ಬೆಳಕಿನಲ್ಲಿದ್ದ ಅತ್ಯಂತ ಪ್ರಾಚೀನ ಕಾಲದಲ್ಲಿ ಕೂಡ "ಇದೆಲ್ಲ ಮುಂದೇನಾಗುವದು? ಯಾವದು ಸತ್ಯವು?" ಎಂಬ ಇದೇ ಪ್ರಶ್ನೆಯನ್ನು ಹಾಕಿರುವದು ಕಂಡುಬರುತ್ತದೆ.

ಅತ್ಯುತ್ತಮ ಕಾವ್ಯರೂಪವಾಗಿರುವ ಉಪನಿಷತ್ತುಗಳಲ್ಲಿ ಒಂದಾದ **ಕಠೋಪನಿಷತ್ತಿನ ಪ್ರಾರಂಭ**ದಲ್ಲಿ ಈ ಪ್ರಶ್ನೆಯಿದೆ. "ಮನುಷ್ಯನು ಸಾಯುವನಷ್ಟೇ, ಅವನ ವಿಷಯದಲ್ಲಿ ವಿವಾದವುಂಟು. ಕೆಲವರು ಅವನು ಹೋಗಿಯೇ ಬಿಟ್ಟನೆನ್ನುತ್ತಾರೆ, ಅವನು ಇನ್ನೂ ಇದ್ದೇ ಇರುವನೆಂದು ಮತ್ತೆ ಕೆಲವರು ವಾದಿಸುತ್ತಾರೆ. ಇದರಲ್ಲಿ ಯಾವದು ನಿಜ?" ಇದಕ್ಕೆ ಬಗೆಬಗೆಯ ಉತ್ತರಗಳನ್ನು ಕೊಟ್ಟಿರುತ್ತಾರೆ, ಅತಿ ಭೌತಿಕಶಾಸ್ತ್ರ (Metaphysics) ತತ್ತ್ವವಿಚಾರಶಾಸ್ತ್ರ, ಧರ್ಮ–ಇವುಗಳಲ್ಲೆಲ್ಲ ಈ ಪ್ರಶ್ನೆಗೆ ಕೊಟ್ಟಿರುವ ಬಗೆಬಗೆಯ ಉತ್ತರಗಳು ತುಂಬಿರುವವು. ಇದರ ಜೊತೆಗೆ ಕೆಲವರು ಇದನ್ನು ಅಲ್ಲಿಯೇ ತಡೆಗಟ್ಟುವದಕ್ಕೂ, "ಆಚೆಗೆ ಇರುವದೇನು? ಸತ್ಯವಾದದ್ದು ಯಾವುದು?" ಎಂದು ಕೇಳುವ ಮನಸ್ಸಿನ ತಳಮಳವನ್ನು ಅಲ್ಲಿಯೇ ನಿಲ್ಲಿಸುವದಕ್ಕೂ ಪ್ರಯತ್ನಗಳನ್ನು ಮಾಡಿರುತ್ತಾರೆ. ಆದರೆ ಎಲ್ಲಿಯವರೆಗೆ ಮರಣವೆಂಬುದೊಂದು ಇರುವದೋ, ಅಲ್ಲಿಯವರೆಗೆ

ಈ ಬಾಯಿ ಕಟ್ಟುವ ಪ್ರಯತ್ನಗಳು ಯಾವಾಗಲೂ ನಿಷ್ಫಲವಾಗುವವು. ನಾವುಗಳು "ಆಚೆಗೆ ಏನೂ ಕಾಣಿಸುವದಲ್ಲ, ನಮ್ಮ ಆಸೆಗಳನ್ನೂ ಇಷ್ಟಾರ್ಥಗಳನ್ನೂ ಈಗಿನ ಕಾಲಕ್ಕೆ ಕ್ಲಿಪ್ತಿಪಡಿಸಿಕೊಂಡಿರೋಣ" ಎನ್ನಬಹುದು, ಇಂದ್ರಿಯಗಳ ಪ್ರಪಂಚದಿಂದಾಚೆಗೆ ಇರುವುದರ ಯೋಚನೆಯ ಗೊಡವೆಗೇ ಹೋಗಬಾರದೆಂದು ಕಷ್ಟಪಟ್ಟು ಪ್ರಯತ್ನ ಗೈಯಲೂಬಹುದು. ಹೊರಗೆ ಕಾಣುವ ಪ್ರತಿಯೊಂದೂ ತನ್ನತನ್ನ ಸಂಕುಚಿತಕ್ಷೇತ್ರದಲ್ಲಿಯೇ ನಮ್ಮನ್ನಿಟ್ಟಿರುವದಕ್ಕೆ ಸಹಾಯವಾಡಿಯೂ ಮಾಡುತ್ತದೆಯೆಂದಿಟ್ಟುಕೊಳ್ಳಿ. ಆದರೆ ಈಗಿನ ಕಾಲದಿಂದಾಚೆಗೆ ಹಿಗ್ಗದಂತೆ ನಮ್ಮನ್ನು ತಡೆಗಟ್ಟುವದಕ್ಕೆ ಇಡಿಯ ಭೂಮಂಡಲವೇ ಒಗ್ಗಟ್ಟಾಗಲಿ, ಸಾವೆಂಬುದೊಂದು ಇರುವತನಕ ಈ ಪ್ರಶ್ನೆಯು ಮತ್ತೆ ಮತ್ತೆ ಮುಂದೆ ಬಂದೇಬರುವುದು; ಸತ್ಯಗಳಲ್ಲೆಲ್ಲ ಸತ್ಯವೆಂದೂ ಸಾರವಾದದ್ದರಲ್ಲೆಲ್ಲ ಸಾರವಾದುವಗಳೆಂದೂ ನಾವು ನಂಬಿಕೊಂಡಿರುವೆವಲ್ಲ, ಈ ವಸ್ತುಗಳಿಗೆ ಮರಣವೇ ಪರಿಸಮಾಪ್ತಿಯೇ?" ಪ್ರಪಂಚವು ಒಂದೇ ಕ್ಷಣದಲ್ಲಿ ಮರೆಯಾಗಿ ಹೋಗಿಬಿಡುತ್ತದೆ. ಒಂದು ದೊಡ್ಡ ಪರ್ವತ ಶಿಖರದ ಮೇಲೆ ನಿಂತುಕೊಂಡು ಆಚೆಗೆ ಅನಂತವಾದ ಗರ್ತವೊಂದು(ಗುಂಡಿ-ಪ್ರಪಾತ) ಬಾಯಿತೆರೆದುಕೊಂಡಿರುವದನ್ನು ಕಾಣುವಾಗ ಪ್ರತಿಯೊಬ್ಬನೂ ಎಷ್ಟೇ ಗಟ್ಟಿ ಮನಸ್ಸಿನವನಾಗಿರಲಿ, ಸ್ವಲ್ಪ ಹಿಂಜರಿದು "ಇದು ಸತ್ಯವೇ?" ಎಂದು ಕೇಳಿಯೇ ತೀರುವನು. ಮಹಾಬುದ್ಧಿಶಕ್ತಿಯಿಂದ ಸ್ವಲ್ಪಸ್ವಲ್ಪವಾಗಿ ಕೂಡಿಹಾಕಿದ ಇಡಿಯ ಜೀವಮಾನದ ಕೋರಿಕೆಗಳೆಲ್ಲ ಒಂದು ಕ್ಷಣಾರ್ಧದಲ್ಲಿ ಕಣ್ಮರೆಯಾಗುವವಲ್ಲ! ಇವು ಸತ್ಯವೇ? ಈ ಪ್ರಶ್ನೆಗೆ ಉತ್ತರವನ್ನು ಹೇಳಲೇಬೇಕು. ಕಾಲಾನುಕಾಲಕ್ಕೆ ಈ ಪ್ರಶ್ನೆಯು ದುರ್ಬಲವಾಗುವದಿಲ್ಲ, ಅದಕ್ಕೆ ಬದಲು ಇದು ಆಗ ಇನ್ನೂ ಬಲವಾಗುತ್ತದೆ.

ಇದಲ್ಲದೆ ಸುಖವಾಗಿರಬೇಕೆಂಬ ಇಚ್ಛೆಯೊಂದು ಇರುತ್ತದೆ. ಸುಖವಾಗಿರಬೇಕೆಂದೇ ಎಲ್ಲವನ್ನೂ ನಾವು ಹುಡುಕಿಕೊಂಡು ಹೋಗುವದು. ಹೊರಗಿನ ಇಂದ್ರಿಯ ಪ್ರಪಂಚದಲ್ಲಿಯೇ ನಾವು ಈ ಹುಚ್ಚಿನ ಬಾಳನ್ನು ನಡೆಸುತ್ತಾ ಇರುವೆವು. ಹಿಡಿದ ಪ್ರಯತ್ನಗಳೆಲ್ಲ ಚೆನ್ನಾಗಿ ಸಾಗುತ್ತಿರುವ ಯುವಕನನ್ನು ಕೇಳಿದರೆ 'ಇದೆಲ್ಲ ಸತ್ಯವೇ' ಎನ್ನುವನು. ನಿಜವಾಗಿಯೂ ಅವನ ಅಭಿಪ್ರಾಯವು ಹಾಗೆಯೇ ಇರುತ್ತದೆ. ಅವನೇ ವಯಸ್ಸಾಗುತ್ತಾ ಬಂದ ಹಾಗೆಲ್ಲ ಭಾಗ್ಯವು ಅವನ ಕೈಗೆ ಸಿಕ್ಕದೆ ತಪ್ಪಿಸಿಕೊಂಡು ಮುಂದುಮುಂದಕ್ಕೆ ಹೋಗುವದನ್ನು ಕಂಡು 'ಇದೆಲ್ಲ ನನ್ನ ಅದೃಷ್ಟವು' ಎನ್ನುವನು; ತನ್ನ ಕೋರಿಕೆಗಳೆಲ್ಲ ನೆರವೇರುವದಿಲ್ಲವೆಂಬುದು ಅವನಿಗೆ ಕೊನೆಗೆ ಕಂಡುಬರುತ್ತದೆ. ಅವನು ಎಲ್ಲಿಗೇ ಹೋಗಲಿ, ಇನ್ನು ಮುಂದೆ ದಾಟಲಿಕ್ಕಾಗದಂಥ ವಜ್ರಮಯವಾದ ಗೋಡೆಯೊಂದು ಅಡ್ಡ ನಿಂತಿರುವದೆಂದು ಅವನಿಗೆ ಕಂಡುಬರುತ್ತದೆ. ಪ್ರತಿಯೊಂದು ಇಂದ್ರಿಯಭೋಗಕ್ಕೂ ಪ್ರತಿಕ್ರಿಯೆಯೊಂದುಂಟಾಗುತ್ತದೆ. ಪ್ರತಿಯೊಂದೂ

ನಶ್ವರವಾಗಿರುತ್ತದೆ. ಸುಖ, ದುಃಖ, ವಿಲಾಸ, ಸಂಪತ್ತು, ಅಧಿಕಾರ, ಬಡತನ, ಕೊನೆಗೆ ಜೀವಿತವು ಕೂಡ ಅಶಾಶ್ವತವಾಗಿರುತ್ತವೆ.

ಮಾನವವರ್ಗದವರು ಎರಡು ಪಕ್ಷವನ್ನು ಅವಲಂಬಿಸಬಹುದಾಗಿದೆ. ಶೂನ್ಯ ವಾದಿಗಳ ಪಕ್ಷವನ್ನಾಶ್ರಯಿಸಿ ಎಲ್ಲವೂ ಶೂನ್ಯವು, ನಮಗೆ ಯಾವದೂ ತಿಳಿಯದು, ಮುಂದಿನ ವಿಚಾರದಲ್ಲಾಗಲಿ ಹಿಂದಿನ ವಿಚಾರದಲ್ಲಾಗಲಿ - ಕೊನೆಗೆ ಈಗಿನ ವಿಚಾರದಲ್ಲಾಗಲಿ - ನಮಗೆ ಏನೂ ತಿಳಿಯುವದಕ್ಕೆ ಸಾಧ್ಯವಿಲ್ಲ - ಎನ್ನುವದು ಒಂದು ಪಕ್ಷ. ಹಿಂದಿನ ವಿಚಾರವನ್ನೂ ಮುಂದಿನ ವಿಚಾರವನ್ನೂ ಅಲ್ಲಗಳೆದು ಈಗಿನ ಕಾಲಕ್ಕೇ ಅಂಟಿಕೊಂಡಿರುವೆನೆನ್ನುವವನು ಶುದ್ಧ ಹುಚ್ಚನೆನ್ನಬೇಕು; ಏಕೆಂದರೆ ಆಗ ತಂದೆಯಿಲ್ಲ, ತಾಯಿಯಿಲ್ಲ, ಆದರೆ ಮಗುವಿದೆಯೆಂದು ಕೂಡ ಹೇಳಬಹು ದಾಗುವದು; ಅದೂ ಅಷ್ಟೇ ಯುಕ್ತಿಯುಕ್ತವಾಗಿರುತ್ತದೆ. ಹಿಂದಿನ ಕಾಲವನ್ನೂ ಮುಂದಿನ ಕಾಲವನ್ನೂ ಇಲ್ಲವೆನ್ನಬೇಕಾದರೆ ಈಗಿನ ಕಾಲವನ್ನೂ ಇಲ್ಲವೆನ್ನಲೇ ಬೇಕಾಗುವದು ಅನಿವಾರ್ಯವಾಗಿರುತ್ತದೆ. ಅಂತೂ ಇದು ಒಂದು ಪಕ್ಷವು. ಇದು ಶೂನ್ಯವಾದಿಗಳ ಪಕ್ಷ. ಒಂದು ಕ್ಷಣವಾದರೂ ನಿಜವಾಗಿಯೂ ಶೂನ್ಯವಾದಿ ಯಾಗಬಲ್ಲಾತನನ್ನು ನಾನು ಎಂದೂ ಕಂಡದ್ದೇ ಇಲ್ಲ; ಅದು ಮಾತನಾಡು ವದಕ್ಕೇನೋ ಬಹು ಸುಲಭವಾಗಿರುತ್ತದೆ.

ಇನ್ನು ಮತ್ತೊಂದು ಪಕ್ಷವುಂಟು. ಇದಕ್ಕೆಲ್ಲ ಕಾರಣವೇನೆಂಬುದನ್ನು, ಯಾವದು ಸತ್ಯವೆಂಬುದನ್ನು ಹುಡುಕುವದೇ, ಎಡೆಬಿಡದೆ ಮಾರ್ಪಡುತ್ತಲೇ ಇರುವ ಈ ಅನಿತ್ಯಪ್ರಪಂಚದಲ್ಲಿ ಯಾವದಾದರೂ ಸತ್ಯವಾದದ್ದುಂಟೇ? ಎಂಬುದನ್ನು ಕಂಡುಕೊಳ್ಳುವದಕ್ಕೆ ಪ್ರಯತ್ನಿಸುವದೇ, ಈ ಎರಡನೆಯ ಪಕ್ಷವು. ಭೌತಿಕಾಣುಗಳ ಸಂಘಾತವಾಗಿರುವ ಈ ಶರೀರದಲ್ಲಿ ಸತ್ಯವಾಗಿರುವದು ಯಾವದಾದರೂ ಉಂಟೆ? ಮಾನವನ ಮನಸ್ಸಿನ ಇತಿಹಾಸದಲ್ಲೆಲ್ಲ ಇದೊಂದೇ ಅನ್ವೇಷಣೆಯು ನಡೆದಿರುತ್ತದೆ. ಅತ್ಯಂತ ಪ್ರಾಚೀನ ಕಾಲದಲ್ಲಿ ಕೂಡ ಆಗಾಗ್ಗೆ ಜನರ ಮನಸ್ಸಿಗೆ ತಿಳಿವಳಿಕೆಯ ಪ್ರಕಾಶದ ರಶ್ಮಿಗಳು ಬರುತ್ತಿತ್ತೆಂದು ಕಂಡುಬರುತ್ತದೆ. ಆಗಲೂ ಕೂಡ ಈ ಶರೀರವನ್ನು ಮೀರಿ ಮನುಷ್ಯನು ಒಂದಡಿಯಿಟ್ಟಿರುತ್ತಾನೆಂದೂ ಈ ಬಾಹ್ಯ ಶರೀರವಲ್ಲದೆ ಬಲುಮಟ್ಟಿಗೆ ಇದರಂತೆಯೇ ಇದ್ದ ಯಾವದೋ ಒಂದು ಇದೆಯೆಂದೂ ಅದು ಇದಕ್ಕಿಂತ ಪೂರ್ಣವಾಗಿರುವದು, ಇದಕ್ಕಿಂತಲೂ ನಿರ್ದುಷ್ಟವಾಗಿರುವದು, ಈ ಶರೀರವು ನಾಶವಾದ ಮೇಲೂ ಅದು ಇದ್ದುಕೊಂಡೇ ಇರುವದು - ಎಂದೂ ಅವನು ಕಂಡುಕೊಂಡಿರುವಂತೆ ತೋರುತ್ತದೆ. ಋಗ್ವೇದದಲ್ಲಿ ಶವವನ್ನು ದಹಿಸುತ್ತಿರುವ

ಅಗ್ನಿಯನ್ನು ಕುರಿತು ಈ ಅರ್ಥದ ಒಂದು ಮಂತ್ರವಿದೆ' "ಎಲೈ ಅಗ್ನಿಯೆ, ಇವನನ್ನು ಮೆಲ್ಲಗೆ ಎತ್ತಿಕೊ, ಇವನಿಗೆ ಸಂಪೂರ್ಣವಾದ ಶರೀರವನ್ನೂ ಥಳಥಳಿಸುವ ಶರೀರವನ್ನೂ ಕೊಡು; ಇವನನ್ನು ದುಃಖವೇ ಇಲ್ಲದ, ಮರಣವೇಇಲ್ಲದ ಪಿತೃಗಳ ನಿವಾಸಕ್ಕೆ ಕರೆದುಕೊಂಡು ಹೋಗು". ಇದೇ ಅಭಿಪ್ರಾಯವು ಪ್ರತಿಯೊಂದು ಮತದಲ್ಲಿಯೂ ಕಂಡುಬರುತ್ತದೆ.

ಇದರೊಡನೆ ಮತ್ತೊಂದು ಭಾವನೆಯೂ ಸಿಕ್ಕುತ್ತದೆ. ಒಂದೇ ಒಂದು ಪ್ರತಿಷೇಧವು ಕೂಡ ಇಲ್ಲದೆ ಪ್ರಪಂಚ ಮತಗಳಲ್ಲೆಲ್ಲ ಮನುಷ್ಯನು ಮೊದಲಿಗಿಂತ ಈಗ ಕೀಳು ಸ್ಥಿತಿಗೆ ಬಂದಿರುತ್ತಾನೆಂದೇ ಇಟ್ಟುಕೊಂಡಿರುತ್ತದೆ; ಈ ಅಭಿಪ್ರಾಯವನ್ನು ಕೆಲವು ಮತಗಳಲ್ಲಿ ಪೌರಾಣಿಕ ಭಾಷೆಯಲ್ಲಿಟ್ಟಿರುತ್ತದೆ, ಕೆಲವು ಮತಗಳಲ್ಲಿ ತತ್ತ್ವಶಾಸ್ತ್ರದ ಸ್ಪಷ್ಟಾಕ್ಷರದಲ್ಲಿ ತಿಳಿಸಿರುತ್ತದೆ, ಮತ್ತೆ ಕೆಲವು ಮತಗಳಲ್ಲಿ ಸುಂದರವಾದ ಕಾವ್ಯ ಭಾಷೆಯಲ್ಲಿ ಹೇಳಿರುತ್ತದೆ. ಪ್ರತಿಯೊಂದು ಮತಗ್ರಂಥದಲ್ಲಿಯೂ ಪ್ರತಿಯೊಂದು ಪೌರಾಣಿಕ ಗ್ರಂಥದಲ್ಲಿಯೂ ಈಗ ಇರುವ ಮಾನವನು ತಾನು ಮೊದಲಿಗಿದ್ದ ಸ್ಥಿತಿಯಿಂದ ಕೀಳುಸ್ಥಿತಿಗೆ ಬಂದಿರುತ್ತಾನೆ ಎಂಬ ಒಂದು ಅಂಶವು ಹೊರಟೇ ಹೊರಡುತ್ತದೆ. ಯಹೋದ್ಯರ ಧರ್ಮಗ್ರಂಥಗಳಲ್ಲಿ **ಆಡಾಮನ ಪತನದ*** ಕಥೆಯಿದೆಯಷ್ಟೇ, ಅದರ ತಿರುಳೇ ಇದು, ಹಿಂದುಗಳ ಧರ್ಮಗ್ರಂಥಗಳಲ್ಲಿ ಇದನ್ನು ಮತ್ತೆಮತ್ತೆ ಹೇಳಿರುತ್ತದೆ. ಕೃತ ಯುಗವೆಂದು ಅವರು ಊಹಿಸಿರುವ ಕಾಲದಲ್ಲಿ ಮನುಷ್ಯನಿಗೆ ಸ್ವೇಚ್ಛಾಮರಣವಿತ್ತಂತೆ, ತನ್ನ ಶರೀರವನ್ನು ಇಷ್ಟವಿದ್ದಷ್ಟುಕಾಲ ಇಟ್ಟುಕೊಳ್ಳಬಹುದಾಗಿದ್ದಿತಂತೆ, ಅವನ ಮನಸ್ಸೂ ಪರಿಶುದ್ಧವಾಗಿ ಬಲವಾಗಿತ್ತಂತೆ; ದುಃಖವಿರಲಿಲ್ಲವಂತೆ, ಸಂಕಟವಿರಲಿಲ್ಲವಂತೆ, ಆ ನಿರ್ದುಷ್ಟಸ್ಥಿತಿಯು ಕೆಟ್ಟು ಈ ಯುಗವಾಗಿರುವದಂತೆ. ಇದರ ಜೊತೆಗೆ ಜಲಪ್ರಲಯದ ಕಥೆಯೂ ಎಲ್ಲೆಲ್ಲಿಯೂ ಕಂಡುಬರುತ್ತದೆ. ಈಗಿನ ಯುಗವು ಹಿಂದಿನ ಯುಗವು ಕೆಟ್ಟಮೇಲೆ ಆದದ್ದೆಂದು ಪ್ರತಿಯೊಂದು ಮತದಲ್ಲಿಯೂ ಭಾವಿಸಿರುತ್ತದೆಯೆಂಬುದಕ್ಕೆ ಆ ಕಥೆಯೊಂದೇ ಸಾಕಾದ ಸಾಕ್ಷಿಯಾಗಿರುತ್ತದೆ. ಬರುಬರುತ್ತಾ ಆ ಕಾಲವು ತೀರ ಕೆಟ್ಟುಹೋಗಿ ಜಲ ಪ್ರಲಯವಾಯಿತು, ಆಮೇಲೆ ಮತ್ತೆ ಏರಿಕೆಗೆ ಪ್ರಾರಂಭವಾಯಿತು. ಈಗ ಮೆಲ್ಲಮೆಲ್ಲಗೆ ಮೇಲಕ್ಕೇರುತ್ತಿದೆ, ಕೊನೆಗೆ ಮತ್ತೆಯೂ ಆ ಹಿಂದಿನ ಪರಿಶುದ್ಧ

* ಆಡಾಮನೆಂಬುವನು ಮನುಷ್ಯರ ಮೂಲಪುರುಷನು, ದೇವರು ಆತನನ್ನು ಈಡೆನ್ ಎಂಬ ಒಂದು ದಿವ್ಯನಂದನವನದಲ್ಲಿಟ್ಟು ಅಲ್ಲಿದ್ದ ಒಂದಾನೊಂದು ಮರದ ಹಣ್ಣನ್ನು ಮಾತ್ರ ತಿನ್ನಕೂಡದೆಂದು ಅಪ್ಪಣೆಮಾಡಿರಲು ಸೈತಾನನ ದುರ್ಬೋಧನೆಯಿಂದ ಪ್ರೇರಿತಳಾದ ತನ್ನ ಹೆಂಡತಿಯ ಮಾತನ್ನು ಕೇಳಿ ಅವನು ಆ ಪ್ರತಿಷಿದ್ಧವಾದ ಫಲವನ್ನು ಭಕ್ಷಿಸಿಬಿಟ್ಟನು. ಅಂದಿನಿಂದ ದೇವರು ಸಶ್ರಮಜೀವನಮಾಡೆಂದು ಅವನನ್ನು ನಂದನವನದಿಂದ ಹೊರಕ್ಕೆ ಹಾಕಿಬಿಟ್ಟನು. ಆಡಾಮನ ವಂಶದವರಾದ ನಮ್ಮಗಳಿಗೆಲ್ಲ ಅವನ ಪಾಪವು ಈಗಲೂ ಗಂಟುಬಿದ್ದಿದೆ – ಎಂಬುದು ಬೈಬಲಿನ ಕಥೆ.

ಸ್ಥಿತಿಯನ್ನು ಮುಟ್ಟುವದು. **ಹಳೆಯ ಒಡಂಬಡಿಕೆಯಲ್ಲಿ*** ವರ್ಣಿತವಾಗಿರುವ ಜಲಪ್ರಲಯದ ಕಥೆಯು ನಿಮಗೆಲ್ಲ ತಿಳಿದೇ ಇದೆ. ಇದೇ ಕಥೆಯು ಪ್ರಾಚೀನಕಾಲದ ಬ್ಯಾಬಿಲೋನಿಯದವರು, ಈಜಿಪ್ಟಿನವರು, ಚೀನಾದೇಶದವರು, ಹಿಂದುಗಳು ಇವರಲ್ಲೆಲ್ಲ ಪ್ರಚಲಿತವಾಗಿದ್ದಿತು. ಪುರಾತನಕಾಲದ ಮಹಾತ್ಮನಾದ ಮನುವೆಂಬಾತನು ಗಂಗಾನದಿಯ ದಡದಲ್ಲಿ ಆಹ್ನಿಕವನ್ನು ಮಾಡುತ್ತಿರಲು ಒಂದಾನೊಂದು ಸಣ್ಣ ಮೀನು 'ನನ್ನನ್ನು ಕಾಪಾಡು' ಎಂದು ಅವನ ಬಳಿಗೆ ಬಂದಿತು. ಕೂಡಲೆ ಅವನು ಅದನ್ನು ತನ್ನ ಬಳಿಯಲ್ಲಿದ್ದ ಕಮಂಡಲುವಿನಲ್ಲಿ ಹಾಕಿ 'ನಿನಗೇನಾಗಬೇಕು?' ಎಂದು ಕೇಳಿದನು. 'ನನ್ನನ್ನು ಮತ್ತೊಂದು ದೊಡ್ಡ ಮೀನು ಓಡಿಸಿಕೊಂಡು ಬಂದಿರುತ್ತದೆ, ನೀನು ನನ್ನನ್ನು ಕಾಪಾಡಬೇಕು' ಎಂದಿತು. ಮನುವು ಆ ಮೀನನ್ನು ಮನೆಗೆ ತಂದನು. ಮಾರನೆಯ ದಿನ ಬೆಳಗಿನ ಹೊತ್ತಿಗೆ ಅದು ಕಮಂಡಲುವಿನ ಗಾತ್ರವಾಗಿಬಿಟ್ಟಿತ್ತು. 'ಇನ್ನು ನಾನು ಈ ಪಾತ್ರೆಯಲ್ಲಿರಲಾರೆನು' ಎಂದಿತು. ಆಗ ಮನುವು ಅದನ್ನು ಒಂದು ಕೊಳದೊಳಕ್ಕೆ ಬಿಟ್ಟನು. ಮಾರನೆಯ ದಿನ ಅದು ಕೊಳವನ್ನೆಲ್ಲ ತುಂಬಿಕೊಳ್ಳುವಷ್ಟು ಗಾತ್ರವಾಗಿಬಿಟ್ಟು 'ಇನ್ನು ನಾನಿಲ್ಲಿರಲಾರೆ' ಎಂದಿತು. ಆದ್ದರಿಂದ ಮನುವು ಅದನ್ನು ನದಿಗೆ ಬಿಡಬೇಕಾಯಿತು. ಮಾರನೆಯ ದಿನ ಅದು ನದಿಯನ್ನೂ ತುಂಬಿಕೊಂಡಿತು. ಆಮೇಲೆ ಮನುವು ಆ ಮೀನನ್ನು ಸಾಗರದೊಳಕ್ಕೆ ಬಿಟ್ಟನು. ಆ ಮೀನರಾಜನು 'ಮಗುವೆ, ನಾನು ವಿಶ್ವಕರ್ತನು, ಲೋಕವನ್ನೆಲ್ಲ ಜಗತ್ಪ್ರಲಯದಲ್ಲಿ ಮುಳುಗಿಸಿಬಿಡುವೆನೆಂದು ನಿನಗೆ ಮೊದಲೇ ತಿಳಿಸುವದಕ್ಕಾಗಿ ಈ ರೂಪವನ್ನು ತೆಗೆದುಕೊಂಡು ಬಂದಿರುತ್ತೇನೆ. ನೀನು ಒಂದು ದೋಣಿಯನ್ನು ಮಾಡಿಸಿ ಅದರಲ್ಲಿ ಪ್ರತಿಯೊಂದು ಬಗೆಯ ಪ್ರಾಣಿಯ ದಂಪತಿಗಳನ್ನೂ ಇರಿಸಿಕೊ; ಅದರೊಳಗೆ ನಿಮ್ಮ ಮನೆಯವರೆಲ್ಲ ಸೇರಿಕೊಳ್ಳಿರಿ. ಆಗ ನೀರಿನ ಮೇಲಕ್ಕೆ ನನ್ನ ಕೊಂಬು ಎದ್ದುಕೊಳ್ಳುವದು, ಅದಕ್ಕೆ ದೋಣಿಯನ್ನು ಬಿಗಿದು ಕಟ್ಟಿರಿ. ಪ್ರಲಯವು ಶಾಂತಿಯಾದ ಮೇಲೆ, ಹೊರಕ್ಕೆ ಬಂದು ಭೂಲೋಕದಲ್ಲಿ ವಾಸಮಾಡಿರಿ' ಎಂದಿತು. ಮುಂದೆ ಅದರಂತೆ ಪ್ರಲಯವೂ ಆಯಿತು. ಮನುವು ತನ್ನ ಮನೆಯವರನ್ನೂ ಜಂಗಮ ಪ್ರಾಣಿಗಳ ದ್ವಂದ್ವಗಳನ್ನೂ ಸ್ಥಾವರಗಳ ಬೀಜಗಳನ್ನೂ ದೋಣಿಯಲ್ಲಿಟ್ಟು ಕಾಪಾಡಿಕೊಂಡನು. ಪ್ರಲಯವಾಗಿ ಶಾಂತಿಯುಂಟಾದ ಮೇಲೆ ಭೂಲೋಕಕ್ಕೆ ಬಂದು ನೆಲಸಿದನು. ನಾವು ಆ ಮನುವಿನ ವಂಶದವರಾದ್ದರಿಂದ ನಮಗೆಲ್ಲ 'ಮನುಜ'ರು ಎಂಬ ಹೆಸರಾಗಿದೆ.

* ಬೈಬಲಿನ ಮೊದಲಿನ ಭಾಗಕ್ಕೆ ಹಳೆಯ ಒಡಂಬಡಿಕೆಯೆಂದು ಹೆಸರು. ಅದರಲ್ಲಿ ಜಲಪ್ರಲಯವಾದ ಕ್ರಮವೂ ದೇವರು 'ನೋವ' ಎಂಬಾತನನ್ನು ಒಂದು ದೋಣಿಯಲ್ಲಿಟ್ಟು ಕಾಪಾಡಿದ ರೀತಿಯೂ ವರ್ಣಿತವಾಗಿದೆ.

ಮಾನವ ಭಾಷೆಯೆಂಬುದು ನಮ್ಮೊಳಗಿನ ತತ್ತ್ವವನ್ನು ತಿಳಿಸುವ ಪ್ರಯತ್ನವು; ನನ್ನ ಪೂರ್ಣವಿಶ್ವಾಸವೇನೆಂದರೆ ನಮಗೆ ಏನೇನೂ ಅರ್ಥವಾಗದಂಥ ಧ್ವನಿಗಳಿಂದಲೇ ಆಗಿರುವ ಭಾಷೆಯು ಎಳೆಗೂಸು ಕೂಡ ಅತ್ಯಂತ ಉತ್ಕೃಷ್ಟತತ್ತ್ವಜ್ಞಾನವನ್ನೇ ತಿಳಿಸಬೇಕೆಂದು ಪ್ರಯತ್ನಮಾಡುತ್ತಿರುತ್ತದೆ; ಆದರೆ ಇದಕ್ಕೆ ಬೇಕಾದ ಇಂದ್ರಿಯಗಳಾಗಲಿ ಸಾಧನಗಳಾಗಲಿ ಅದಕ್ಕೆ ಇರುವುದಿಲ್ಲ, ಅಷ್ಟೆ. ಅತ್ಯಂತ ಪರಮಜ್ಞಾನಿಗಳ ಭಾಷೆಗೂ ಮಕ್ಕಳ ಮಾತಿಗೂ ಇರುವ ತಾರತಮ್ಯವು ಅವಸ್ಥಾಭೇದದಿಂದಾಗಿರುವದೇ ಹೊರತು, ಸ್ವರೂಪಭೇದದಿಂದಲ್ಲ. ಈಗಿನ ಕಾಲದ ಅತ್ಯಂತಶುದ್ಧವಾದ, ಸುವ್ಯವಸ್ಥಿತವಾದ, ನಿಕರವಾದ, ಭಾಷೆಯೆಂದು ನೀವು ಕರೆದುಕೊಳ್ಳುತ್ತಿರುವ ಭಾಷೆಗೂ ಪ್ರಾಚೀನದ ಸಂಕೀರ್ಣವಾದ, ರಹಸ್ಯಾನುಭವ ಪ್ರಧಾನವಾದ, ಪೌರಾಣಿಕ ಭಾಷೆಗೂ ಅವಸ್ಥಾಬೇದದಿಂದಲೇ ತಾರತಮ್ಯವುಂಟಾಗಿರುತ್ತದೆ. ಅವರೆಲ್ಲರೂ ಯಾವದೋ ಒಂದು ಘನವಾದ ಭಾವವನ್ನು ಇಟ್ಟುಕೊಂಡು ಅದನ್ನು ತಿಳಿಸುವದಕ್ಕೆ ಒದ್ದಾಡುತ್ತಿರುತ್ತಾರೆ. ಎಷ್ಟೋ ಸಂದರ್ಭಗಳಲ್ಲಿ ಈ ಪ್ರಾಚೀನ ಪೌರಾಣಿಕ ಕಥೆಗಳಿಗೆ ಆಧಾರವಾಗಿ ಘನವಾದ ತತ್ತ್ವದ ಚಿನ್ನದ ಗಟ್ಟಿಗಳಿರುವವು, ಎಷ್ಟೋ ಸಂದರ್ಭಗಳಲ್ಲಿ ಈಗಿನವರ ಸೊಗಸಾದ ಮೆರುಗಿನ ವಚನವ್ಯಕ್ತಿಗಳಿಗೆ ಆಧಾರವಾಗಿ ಅತ್ಯಂತ ತುಚ್ಛಭಾವನೆಗಳಿರುವವೆಂದೂ ವಿಷಾದ ಪೂರ್ವಕವಾಗಿ ಹೇಳಬೇಕಾಗಿದೆ. ಹೀಗಿರುವದರಿಂದ ಯಾವದಾದರೊಂದು ತತ್ತ್ವವನ್ನು ಪೌರಾಣಿಕ ಭಾಷೆಯಲ್ಲಿಟ್ಟಿದೆ, ಅದು ಈಗಿನ ಕಾಲದ ಶ್ರೀಯುತ ಇಂಥವನಿಗೆ ಅಥವಾ ಶ್ರೀಮತಿ ಇಂಥಾಕೆಗೆ ಒಗ್ಗುವುದಿಲ್ಲ ಎಂಬಿಷ್ಟೇ ಕಾರಣದಿಂದ ಅದನ್ನು ನಾವು ಆಚೆಗೆ ತಳ್ಳಿಹಾಕಬೇಕಾದದ್ದೇನೂ ಇರುವದಿಲ್ಲ. ಇಂಥಿಂಥ ಮತಾಚಾರ್ಯನು ಹೇಳಿದ ಪೌರಾಣಿಕ ಕಥೆಗಳನ್ನು ನಂಬಬೇಕು – ಎಂದೇ ಅನೇಕ ಧರ್ಮಗಳು ಹೇಳಿರುತ್ತವೆಯೆಂಬ ಕಾರಣದಿಂದ ಧರ್ಮವನ್ನು ಜನರು ಉಪಹಾಸ್ಯಮಾಡುವದು ಸರಿಯಾದರೆ ಈ ಆಧುನಿಕರನ್ನು ನೋಡಿ ಇನ್ನಷ್ಟು ಉಪಹಾಸ್ಯಮಾಡಬೇಕಾಗಿರುತ್ತದೆ. ಈಗಿನ ಕಾಲದಲ್ಲಿ ಮೋಸಸ್ಸನ ವಚನವನ್ನಾಗಲಿ ಬುದ್ಧನ ವಚನವನ್ನಾಗಲಿ ಕ್ರೈಸ್ತನ ವಚನವನ್ನಾಗಲಿ ಯಾರಾದರೂ ಪ್ರಮಾಣವಾಗಿ ಉದಾಹರಿಸಿದರೆ ಅವನನ್ನು ಜನರು ಪರಿಹಾಸ ಮಾಡುತ್ತಾರೆ; ಆದರೆ ಅದೇ ಮನುಷ್ಯನು **ಹಕ್ಸ್ಲಿ, ಟಿಂಡಾಲ್, ಡಾರ್ವಿನ್*** – ಇಂಥವರ ಹೆಸರನ್ನು ಹೇಳಿದರೆ ಸಾಕು, ಜನರು ಕಂಕಿಂ ಎನ್ನದೆ ಅದೆಲ್ಲಕ್ಕೂ ಹೂಗುಟ್ಟಿಬಿಡುತ್ತಾರೆ. ಅನೇಕರಿಗೆ "ಹಕ್ಸ್ಲಿಯು ಹೀಗೆಂದಿರುತ್ತಾನೆ" ಎಂದರೆ

* ಹಕ್ಸ್ಲಿ ಮೊದಲಾದವರೆಲ್ಲರೂ ಪ್ರಸಿದ್ಧರಾದ ಭೌತಿಕ ವಿಜ್ಞಾನ ವಿಶಾರದರು.

ಅಷ್ಟೇ ಸಾಕಾಗಿರುವದು. ನಾವೀಗ ನಿಜವಾಗಿಯೂ ಮೂಢವಿಶ್ವಾಸಗಳಿಂದ ಬಿಡುಗಡೆಯಾಗಿದ್ದೇವೆಯಲ್ಲವೆ! ಅದು ಧರ್ಮದ ಮೂಢವಿಶ್ವಾಸವಾಗಿತ್ತು, ಇದು ವಿಜ್ಞಾನ ಶಾಸ್ತ್ರದ ಮೂಢ ವಿಶ್ವಾಸವಾಗಿರುತ್ತದೆ, ಅಷ್ಟೇ. ಆದರೆ ಒಂದು ವಿಶೇಷವುಂಟು : ಆ ಮೂಢಭಕ್ತಿಯಲ್ಲಿ, ಆ ಮೂಢಭಕ್ತಿಯಿಂದ, ಜೀವಶಕ್ತಿಯನ್ನು ಕೊಡುವ ಆಧ್ಯಾತ್ಮಿಕ ಭಾವನೆಗಳು ಉಂಟಾದವು; ಈ ಆಧುನಿಕ ಮೂಢವಿಶ್ವಾಸದಲ್ಲಿಯೋ, ಈ ಮೂಢವಿಶ್ವಾಸದ ಮೂಲಕವೋ-ಎಂದರೆ ಕಾಮವೂ ಲೋಭವೂ ಉಂಟಾಗುವವು. ಆ ಮೂಢವಿಶ್ವಾಸವು ಈಶ್ವರಾರಾಧನೆಯಾಗಿತ್ತು; ಈ ಮೂಢವಿಶ್ವಾಸವೋ – ಎಂದರೆ ಕಶ್ಮಲವಾದ ಕಾಸಿನ, ಹೆಸರುವಾಸಿಯ, ಅಧಿಕಾರದ ಆರಾಧನೆಯಾಗಿರುತ್ತದೆ. ಇದೊಂದೇ ಇವೆರಡಕ್ಕೂ ಇರುವ ಭೇದವು.

ಇದಿರಲಿ, ಪುರಾಣವಿಚಾರದತ್ತ ಹಿಂತಿರುಗೋಣ. ಈ ಕಥೆಗಳಿಗೆಲ್ಲ ಆಧಾರವಾಗಿ ಒಂದೇ ಒಂದು ತತ್ತ್ವವು ಭದ್ರವಾಗಿ ನಿಂತಿರುತ್ತದೆ. ಮಾನವನು ಮೊದಲಿದ್ದ ಸ್ಥಿತಿಯಿಂದ ಭ್ರಷ್ಟನಾಗಿ ಈಗಿನ ಸ್ಥಿತಿಗೆ ಇಳಿದಿರುತ್ತಾನೆಂಬುದೆ ಆ ತತ್ತ್ವವು. ಈಗಿನ ಕಾಲದ ಸ್ಥಿತಿಯನ್ನು ನೋಡಿದರೆ ಆಧುನಿಕ ಸಂಶೋಧವು ಈ ಭಾವವನ್ನು ಸಂಪೂರ್ಣವಾಗಿ ತಿರಸ್ಕರಿಸುವಂತೆ ಕಾಣುತ್ತದೆ. ವಿಕಾಸವಾದಿಗಳು (Evolutionists) ಈ ಅಭಿಪ್ರಾಯವನ್ನು ಪೂರ್ಣವಾಗಿಯೂ ತಿರಸ್ಕರಿಸುವಂತೆ ತೋರುತ್ತಿದೆ. ಅವರ ಅಭಿಪ್ರಾಯದಲ್ಲಿ ಮನುಷ್ಯನು ಕೋಮಲ ಶರೀರ ಪ್ರಾಣಿಯಿಂದ (mollusc)* ಹುಟ್ಟಿರುತ್ತಾನೆ, ಆದ್ದರಿಂದ ಪುರಾಣದಲ್ಲಿ ಹೇಳಿರುವದು ನಿಜವಾಗಿರಲಾರದೆಂದು ಹೇಳಬಹುದು. ಆದರೆ ಭರತಖಂಡದ ಒಂದಾನೊಂದು ಪುರಾಣ ಕಥೆಯಂತೆ ಈ ಎರಡು ವಾದಗಳನ್ನೂ ಒಂದಕ್ಕೊಂದನ್ನು ಹೊಂದಿಸುವದಕ್ಕೆ ಆಗುವಂತಿದೆ. ಭರತಖಂಡದ ಪುರಾಣದಲ್ಲಿ ಕಲ್ಪಗಳ ವಾದವೊಂದಿದೆ, ಮುಂದುವರೆಯುವದೆಲ್ಲ ತರಂಗ ನ್ಯಾಯದಿಂದ ಸಾಗುವದೆಂಬುದೇ ಆ ವಾದವು. ಒಂದೊಂದು ಅಲೆಯು ಏರಿಕೆಯಾದ ಮೇಲೂ ಇಳಿತವಾಗಲೇಬೇಕು, ಆ ಮುಂದಿನ ಕ್ಷಣದಲ್ಲಿ ಮತ್ತೊಂದು ಏರಿಕೆ, ಮತ್ತೊಂದು ಕ್ಷಣದಲ್ಲಿ ಬೀಳು, ಆಮೇಲೆ ಮತ್ತೊಂದು ಏಳು – ಹೀಗೆ ಚಲನೆಯು ಕಲ್ಪಕಲ್ಪಗಳಾಗಿ ನಡೆಯುತ್ತಿರುವದೆಂದು ಆ ವಾದವು ಹೇಳುವದು. ಈಗಿನವರ ಶೋಧನೆಯನ್ನೇ ಇಟ್ಟುಕೊಂಡರೂ ಮನುಷ್ಯನು ಕೇವಲ ವಿಕಾಸವಾಗಿರಲಾರನೆಂಬುದೇ

# (mollusc) (ಮೋಲಸ್ಕ್) ಎಂಬುದೊಂದು ಕೋಮಲ ಶರೀರದ ಗಟ್ಟಿಚಿಪ್ಪಿನ ಪ್ರಾಣಿಗಳ ವರ್ಗವು. ಈ ವರ್ಗದ ಪ್ರಾಣಿಯಿಂದ ಬರುಬರುತ್ತಾ ವಿಕಾಸ ಕ್ರಮದಿಂದ ಮನುಷ್ಯನು ಹುಟ್ಟಿರುತ್ತಾನೆಂದು ವಿಕಾಸವಾದಿಗಳ ಹೇಳಿಕೆ.

ಖಂಡಿತವಾಗುತ್ತದೆ. ಒಂದೊಂದು ವಿಕಾಸಕ್ಕೂ ಒಂದೊಂದು ಸಂಕೋಚವೂ ಇದ್ದೇತೀರಬೇಕು. ಈಗಿನ ವಿಜ್ಞಾನ ಶಾಸ್ತ್ರಜ್ಞನನ್ನು ಕೇಳಿದರೆ ಯಾವದಾದರೊಂದು ಯಂತ್ರದಲ್ಲಿ ನೀವು ಮೊದಲು ಎಷ್ಟು ಶಕ್ತಿಯನ್ನು ಆಧಾನವಾಡಿರುವಿರೋ ಅಷ್ಟು ಶಕ್ತಿಯನ್ನು ಮಾತ್ರವೇ ಅದರಿಂದ ಹೊರಕ್ಕೆ ತೆಗೆಯಬಹುದು – ಎನ್ನುತ್ತಾನೆ. ಅಭಾವದಿಂದ ಭಾವ ಎಂದಿಗೂ ಉಂಟಾಗಲಾರದು. ಮನುಷ್ಯನು **ಮೋಲಸ್ಕ** ಪ್ರಾಣಿಯ ವಿಕಾಸವೆಂಬುದು ನಿಜವಾದರೆ ಪೂರ್ಣಮಾನವನ, ಬುದ್ಧರೂಪನಾದ ಅಥವಾ ಕ್ರಿಸ್ತ ರೂಪನಾದ ಮಾನವನು ಅದೇ ಪ್ರಾಣಿಯಲ್ಲಿ ಸಂಕುಚಿತವಾಗಿ ಅವ್ಯಕ್ತವಾಗಿದ್ದೇ ತೀರಬೇಕು. ಹಾಗಿಲ್ಲದಿದ್ದರೆ ಈ ಅದ್ಭುತಪುರುಷ ವಿಶೇಷಗಳು ಬಂದದ್ದು ಎಲ್ಲಿಂದ? ಅಭಾವದಿಂದ ಭಾವವು ಎಂದಿಗೂ ಉಂಟಾಗಲಾರದಲ್ಲ! ಈ ರೀತಿಯಲ್ಲಿ ನಾವು ಮತಗ್ರಂಥಗಳಿಗೂ ಆಧುನಿಕ ವಿಜ್ಞಾನಕ್ಕೂ ಹೊಂದಿಸಿಕೊಳ್ಳಬಹುದಾಗಿರುತ್ತದೆ. ಯಾವ ಶಕ್ತಿಯು ಬೇರೆ ಬೇರೆ ಅಂತಸ್ತುಗಳನ್ನು ಹೊಂದಿ ಮೆಲ್ಲಮೆಲ್ಲಗೆ ಹೊರತೋರಿಕೊಳ್ಳುತ್ತಾ ಕೊನೆಗೆ ಪರಿಪೂರ್ಣ ಮಾನವನಾಗುವದೋ ಆ ಶಕ್ತಿಯು ಅಭಾವದಿಂದ ಎಂದಿಗೂ ಉಂಟಾಗಿರಲಾರದು. ಅದು ಎಲ್ಲಿಯೋ ಒಂದು ಕಡೆ ಇದ್ದೇ ತೀರಬೇಕು. ಮೊಲಸ್ಕ ಪ್ರಾಣಿಯು ಅಥವಾ ಜೀವಾಣುವು **(protoplasm)*** ಅದರ ಮೂಲರೂಪವೆಂದು ನೀವು ಹುಡುಕಿ ಕಂಡು ಹಿಡಿಯಬಹುದಾದರೆ ಈ ಜೀವಾಣುವಿನಲ್ಲಿ ಹೇಗೋ ಈ ಶಕ್ತಿಯು ಇದ್ದುಕೊಂಡೇತೀರಬೇಕಾಗುವದು. ಈಗ ಒಂದು ಚರ್ಚೆಯು ನಡೆಯುತ್ತಾ ಇದೆ; ನಾವು ಶರೀರವೆಂದು ಕರೆಯುವ ಭೌತಿಕ ಸಂಘಾತವು ನಾವು ಜೀವ, ಚೈತನ್ಯ ಎಂದು ಮುಂತಾಗಿ ಕರೆಯುತ್ತಿರುವ ಶಕ್ತಿಯು ತೋರುವಿಕೆಗೆ ಕಾರಣವೆ, ಅಥವಾ ಚೈತನ್ಯವೇ ಈ ಶರೀರದ ತೋರಿಕೆಗೆ ಕಾರಣವೇ ಎಂಬುದೀಗ ಚರ್ಚೆಯ ವಿಷಯವು. ಜಗತ್ತಿನಲ್ಲಿರುವ ಧರ್ಮಗಳು ಚೈತನ್ಯವೇ ಶರೀರದ ತೋರಿಕೆಗೆ ಕಾರಣವೆಂದೂ ಇದರ ವಿರುದ್ಧವಾದ ಕಾರ್ಯ ಕಾರಣಭಾವವಿಲ್ಲವೆಂದೂ ಅಭಿಪ್ರಾಯಪಡುತ್ತವೆಂದು ಹೇಳಬೇಕಾದದ್ದೇ ಇಲ್ಲ. ಈಗಿನ ವಿಚಾರಕರ ಪಂಥಗಳಲ್ಲಿ ಕೆಲವರುನಾವು ಚೈತನ್ಯವೆಂದು ಕರೆಯುತ್ತಿರುವದೆಲ್ಲ ಶರೀರವೆಂಬ ಯಂತ್ರದ ಭಾಗಗಳು ಒಂದಕ್ಕೊಂದು ಹೊಂದಿಕೊಳ್ಳುವಾಗ ಉಂಟಾಗುವ ಫಲವೇ ಹೊರತು ಬೇರೆಯಲ್ಲವೆಂದು ಅಭಿಪ್ರಾಯಪಡುತ್ತಿರುವರು. ಇಲ್ಲಿ ಎರಡನೆಯ ಪಕ್ಷವನ್ನು–ಜೀವವು ಅಥವಾ ಜ್ಞಾನ ರಾಶಿಯು, ಅಥವಾ

* ಆಮ್ಲಜನಕ, ಜಲಜನಕ, ಇಂಗಾಲ, ಸಾರಜನಕ, ಇವುಗಳಿಂದಾಗಿರುವ ದ್ರವಾಭಾಸವಾದ ಸ್ವಚ್ಛಕಲ್ಪಪದಾರ್ಥವೊಂದು ಪ್ರಾಣಿಗಳಲ್ಲಿಯೂ ಮರಗಿಡಗಳಲ್ಲಿಯೂ ಇರುವ ಪ್ರಾಣದ ಮೂಲಾಧಾರವೆಂದು ವಿಕಾಸವಾದಿಗಳು ಹೇಳುವರು; ಇದಕ್ಕೆ ಜೀವಾಣು (protoplasm) ಎಂದು ಹೆಸರು

ಅದನ್ನು ಮತ್ತೆ ಯಾವ ಹೆಸರಿನಿಂದ ಕರೆಯುತ್ತೀರೋ ಆ ಚೈತನ್ಯವು. ಈ ಯಂತ್ರದ ಫಲವು; ಶರೀರವೂ ಮೊದಳೂ ಆಗಿರುವ ರಾಸಾಯನಿಕ ಮತ್ತು ಪ್ರಾಕೃತಿಕ ಸಂಯೋಗಗಳ ಫಲವು ಎಂಬ ವಾದವನ್ನು- ವಿಮರ್ಶೆಗೆ ತೆಗೆದುಕೊಂಡರೆ 'ಶರೀರವು ಏತರಿಂದಾಗುವದು?' ಎಂಬ ಪ್ರಶ್ನೆಗೆ ಉತ್ತರವಿಲ್ಲದೆ ಹೋಗುತ್ತದೆ. ಅಣುಗಳನ್ನು ಶರೀರದ ರೂಪಕ್ಕೆ ರೂಪಿಸಿರುವ ಶಕ್ತಿ ಯಾವದು? ನಮ್ಮ ಸುತ್ತಲೂ ಇರುವ ಭೌತಿಕವಸ್ತು ರಾಶಿಯಲ್ಲಿ ತನಗೆ ಬೇಕಾದ, ದ್ರವ್ಯಭಾಗವನ್ನು ತೆಗೆದುಕೊಂಡು ನನ್ನ ಶರೀರವನ್ನು ಒಂದು ರೀತಿಯಲ್ಲಿ, ಮತ್ತೊಂದು ಶರೀರವನ್ನು ಮತ್ತೊಂದು ಬಗೆಯಲ್ಲಿ - ಹೀಗೆಲ್ಲ ರೂಪಿಸುವ ಶಕ್ತಿಯಾವದು? ಈ ಅನಂತ ಭೇದಗಳನ್ನುಂಟುಮಾಡುವದು ಯಾವದು? ಚೇತನವೆಂಬ ಶಕ್ತಿಯು ಶರೀರದ ಅಣುಗಳ ಸಂಯೋಗದ ಕಾರ್ಯವೆಂದು ಹೇಳಿದರೆ ಎತ್ತು ಹಾರುವ ಮುಂಚೆ ಗೋಣಿಯು ಹಾರುವದೆಂದಂತೆ ಆಗುವದು. ಏಕೆಂದರೆ ಈ ಸಂಯೋಗಗಳು ಉಂಟಾದದ್ದು ಹೇಗೆ, ಅವುಗಳನ್ನುಂಟುಮಾಡುವ ಶಕ್ತಿಯು ಎಲ್ಲಿತ್ತು? ಈ ಸಂಯೋಗಗಳಿಗೆ ಬೇರೆ ಒಂದು ಶಕ್ತಿಯು ಕಾರಣವಾಯಿತೆಂದೂ ಆ ಭೌತಿಕವಸ್ತುವಿನಿಂದ ಚೈತನ್ಯವುಂಟಾಯಿತೆಂದೂ ಮೊದಲು ಭೌತಿಕ ವಸ್ತುಭಾಗವನ್ನು ಸಂಯೋಗದಿಂದ ಉಂಟುಮಾಡಿದ ಚೈತನ್ಯವೂ ಹೀಗೆಯೇ ಬೇರೆ ಸಂಯೋಗದಿಂದ ಉಂಟಾಯಿತೆಂದೂ ನೀವು ಹೇಳಬಹುದು ; ಆದರೆ ಅದು ಸರಿಯಾದ ಉತ್ತರವಲ್ಲ. ಯಾವ ಕಲ್ಪನೆಯು ಇದುವರೆಗೆ ಅಂಗೀಕೃತವಾಗಿರುವ ಬೇರೆ ಕಲ್ಪನೆಗಳಿಗೆ ವಿರೋಧವಿಲ್ಲದಂತೆ ಎಲ್ಲಾ ಘಟನೆಗಳನ್ನೂ ಅಲ್ಲದಿದ್ದರೆ ಅನೇಕ ಘಟನೆಗಳನ್ನಾದರೂ ಕಾರಣವನ್ನು ಕೊಟ್ಟು ವಿವರಿಸುವದೋ ಅದನ್ನೇ ಒಪ್ಪುವದು ಯುಕ್ತವು. ಆದ್ದರಿಂದ ಭೌತಿಕವಸ್ತುವನ್ನು ತೆಗೆದುಕೊಂಡು ಶರೀರವನ್ನು ರೂಪಿಸುವ ಶಕ್ತಿಯು ಆ ಶರೀರದ ಮೂಲಕ ಕಾಣಿಸಿಕೊಳ್ಳುತ್ತಿರುವ ಶಕ್ತಿಯೇ ಹೊರತು ಬೇರೆಯಲ್ಲ - ಎಂದು ಹೇಳುವದೇ ಹೆಚ್ಚು ಯುಕ್ತಿಯುಕ್ತವಾಗಿರುತ್ತದೆ. ಆದ್ದರಿಂದ ಶರೀರದಲ್ಲಿ ಕಾಣಬರುವ ಜ್ಞಾನ ಶಕ್ತಿಗಳು ಅಣುಗಳ ವಿನ್ಯಾಸಕ್ರಮದ ಫಲವೆಂದೂ ಅವಕ್ಕೆ ಸ್ವತಂತ್ರವಾದ ಇರವು ಇಲ್ಲವೆಂದೂ ಹೇಳುವ ಮಾತಿಗೆ ಅರ್ಥವಿಲ್ಲ; ಭೌತಿಕವಸ್ತುವಿನಿಂದ ಶಕ್ತಿಯು ವಿಕಾಸವಾಗಿಬರುವದೂ ಸಾಧ್ಯವಿಲ್ಲ. ಇನ್ನೂ ಇದಕ್ಕಿಂತಲೂ ನಾವು ಭೌತಿಕವಸ್ತುವೆಂದು ಕರೆಯುತ್ತಿರುವೆವಲ್ಲ, ಅದು ಇರುವದೇ ಇಲ್ಲವೆಂದು ಕೂಡ ಉಪಪಾದನೆ ಮಾಡುವದು ಸಾಧ್ಯವಾಗಿರುತ್ತದೆ. ಅದು ಶಕ್ತಿಯ ಒಂದಾನೊಂದು ಸ್ಥಿತಿಯೇ ಹೊರತು ಬೇರೆಯಲ್ಲ. ಘನತ್ವ, ಕಠಿನತ್ವ, ಅಥವಾ ಭೌತಿಕವಸ್ತುವಿನ ಮತ್ತೆ ಯಾವ ಸ್ಥಿತಿಯೇ ಆಗಲಿ ಅದು, ಚಲನೆಯ ಫಲವೆಂದು ತೋರಿಸಿಕೊಡಬಹುದಾಗಿರುತ್ತದೆ. ದ್ರವವಸ್ತುಗಳಲ್ಲಿ ಆವರ್ತ

ಚಲನೆಯು ವೇಗವನ್ನು ಹೆಚ್ಚಿಸಿದರೆ ಅವಕ್ಕೆ ಘನಶಕ್ತಿಯು ಬರುತ್ತದೆ: ಸುಂಟರುಗಾಳಿಯಂತೆ ಆವರ್ತಜಲನೆಯಲ್ಲಿರುವ ವಾಯುರಾಶಿಯು ಘನೀಭೂತವಾದಂತಾಗಿ ತನ್ನ ಸಂಸರ್ಗದಿಂದ ಘನವಸ್ತುಗಳನ್ನೂ ಮುರಿದು ಹಾಕುತ್ತದೆ, ಅಥವಾ ಕತ್ತರಿಸಿಬಿಡುತ್ತದೆ. ಜೇಡರ ಹುಳುವಿನ ಬಲೆಯ ನೂಲನ್ನು ನಿರತಿಶಯಕಲ್ಪ ವೇಗದಿಂದ ಚಲಿಸುವಂತೆ ಮಾಡುವದು ಸಾಧ್ಯವಾದರೆ ಅದು ಕಬ್ಬಿಣದ ಸರಪಳಿಯಷ್ಟೇ ಬಲವಾದೀತು, ಬಾನವೃಕ್ಷ (Oak tree)ವನ್ನಾದರೂ ಕತ್ತರಿಸೀತು. ಈ ದೃಷ್ಟಿಯಿಂದ ನೋಡಿದರೆ ಭೌತಿಕ ವಸ್ತುವೆಂಬುದು ಇಲ್ಲವೇ ಇಲ್ಲವೆಂದು ತೋರಿಸಿಕೊಡುವದು ಸುಲಭತರವಾಗಿರುವದು. ಆದರೆ ಇದಕ್ಕೆ ಪ್ರತಿಯಾಗಿ (ಶಕ್ತಿಯೆಂಬುದು ಇಲ್ಲವೇ ಇಲ್ಲವೆಂದು) ತೋರಿಸಿಕೊಡುವದಕ್ಕೆ ಆಗುವಂತಿಲ್ಲ.

ಶರೀರದ ಮೂಲಕ ತೋರಿಕೊಳ್ಳುತ್ತಿರುವ ಶಕ್ತಿಯು ಯಾವದು? ಆ ಶಕ್ತಿಯು ಯಾವದೇ ಆಗಿರಲಿ, ಅದು ಅಣುಗಳನ್ನು ತೆಗೆದುಕೊಂಡು ಅದರಿಂದ ಆಕಾರ ವಿಶೇಷವನ್ನು-ಮಾನವಶರೀರವನ್ನು-ರೂಪಿಸುತ್ತಿರುವದೆಂಬುದು ನಮಗೆಲ್ಲರಿಗೂ ಸ್ಪಷ್ಟವಾಗಿ ತಿಳಿದಿರುವ ಸಂಗತಿಯಾಗಿದೆ. ನಿಮಗೂ ನಮಗೂ ಶರೀರಗಳನ್ನು ಸಜ್ಜುಗೊಳಿಸುವದಕ್ಕೆ ಮತ್ತೆ ಯಾರೂ ಬಂದಿರುವದಿಲ್ಲ. ನನ್ನ ಆಹಾರವನ್ನು ನನಗಾಗಿ ಮತ್ತೆ ಯಾರಾದರೂ ತಿಂದುಕೊಟ್ಟದ್ದು ನನ್ನ ಅನುಭವಕ್ಕೆ ಬಂದದ್ದೇ ಇಲ್ಲ. ನಾನೇ ಅದನ್ನು ಅರಗಿಸಿಕೊಳ್ಳಬೇಕು, ನಾನೇ ಆ ಆಹಾರದಿಂದ ರಕ್ತವನ್ನೂ ಎಲುಬನ್ನೂ ಎಲ್ಲವನ್ನೂ ಮಾಡಿಕೊಳ್ಳಬೇಕು. ಈ ರಹಸ್ಯವಾದ ಶಕ್ತಿ ಯಾವದು? ಮುಂದಿನ ಕಾಲದ ಮತ್ತು ಹಿಂದಿನ ಕಾಲದ ವಿಷಯವಾದ ವಿಚಾರಗಳೆಂದರೆ ಅನೇಕರು ಭಯಪಡುವಂತೆ ತೋರುತ್ತದೆ; ಎಷ್ಟೋ ಜನರಿಗೆ ಅವೆಲ್ಲ ಬರಿಯ ಊಹೆಯೆಂದು ತೋರುವವು.* ಪ್ರಕೃತ ವಿಚಾರವನ್ನು ತೆಗೆದುಕೊಳ್ಳೋಣ. ಈಗ ನಮ್ಮ ಮೂಲಕವಾಗಿ ವ್ಯಾಪಾರ ಮಾಡುತ್ತಿರುವ ಈ ಶಕ್ತಿಯೆಂಬುದು ಯಾವದು? ಪುರಾತನ ಕಾಲದಲ್ಲಿ ಪ್ರಾಚೀನ ಧರ್ಮ ಗ್ರಂಥಗಳಲ್ಲೆಲ್ಲ ಈ ಶಕ್ತಿ ವಿಶೇಷವು ಈ ಶರೀರದಂತೆಯೇ ರೂಪವುಳ್ಳ ಒಂದಾನೊಂದು ತೇಜೋ ದ್ರವ್ಯದ#

* ಇಲ್ಲಿ ಈ ವಾಕ್ಯದ ಸಂಬಂಧವೇನೆಂಬುದು ತಿಳಿಯಲಿಲ್ಲ

\# ನಮ್ಮ ದೇಶದಲ್ಲಿ ಇದನ್ನು 'ಸೂಕ್ಷ್ಮದೇಹ'ವೆಂದು ಕರೆದಿರುತ್ತಾರೆ; ಆದರೆ ಸೂಕ್ಷ್ಮ ದೇಹವು ಸ್ಥೂಲದೇಹದ ಆಕಾರವನ್ನೇ ತಳೆದಿರುವದೆಂಬುದು ನಮ್ಮ ಗ್ರಂಥಗಳಲ್ಲಿದ್ದಂತೆ ಕಾಣುವದಿಲ್ಲ. ನಮ್ಮ ದೇಶದವರಿಗೆ ಜನ್ಮಾಂತರದಲ್ಲಿ ನಂಬಿಕೆಯಿರುವದರಿಂದ ಒಂದೊಂದು ಜನ್ಮಕ್ಕೆ ಒಂದೊಂದು ಬಗೆಯಾಗುವ ಸ್ಥೂಲಶರೀರದ ರೂಪವನ್ನು ಸೂಕ್ಷ್ಮ ಶರೀರವು ಅನುಕರಿಸುವದು ಸಾಧ್ಯವೆಂದು ನಂಬುವದೂ ಕಷ್ಟವಾಗಿರುವದು. ಈ ಉಪನ್ಯಾಸವನ್ನು ಕನ್ನಡಿಸುವಾಗ ಮೂಲದಲ್ಲಿರುವ 'ತೇಜಃಶರೀರ' (bright body) ಎಂಬ ಮಾತನ್ನು ಸೂಕ್ಷ್ಮ ಶರೀರ ಎಂದೇ ಪರಿವರ್ತಿಸಿರುತ್ತದೆ.

ಪ್ರಾಕಟ್ಯವೆಂದೂ ಅದು ಈ ಶರೀರವು ಬಿದ್ದುಹೋದ ಮೇಲೂ ಇದ್ದು ಕೊಂಡಿರುವದೆಂದೂ ಭಾವಿಸಲಾಗಿತ್ತೆಂಬುದು ನಮಗೆ ತಿಳಿದೇ ಇದೆ. ಆದರೆ ಕಾಲಕ್ರಮದಲ್ಲಿ ಇದಕ್ಕಿಂತಲೂ ಉತ್ಕೃಷ್ಟವಾದ ಭಾವನೆಯೊಂದು ಉತ್ಪನ್ನವಾದದ್ದು ಕಂಡುಬರುತ್ತದೆ; ಅದೇನೆಂದರೆ, ಈ ತೇಜಃಶರೀರವೇ ಮುಖ್ಯ ಶಕ್ತಿಯಲ್ಲ, ಏಕೆಂದರೆ ಯಾವಯಾವದಕ್ಕೆ ಆಕಾರವಿರುವದೋ ಅದೆಲ್ಲ ಅಣು ಸಂಯೋಗದಿಂದ ಆಗಿರಲೇಬೇಕು, ಆದ್ದರಿಂದ ಅದನ್ನು ಸವ್ಯಾಪಾರವಾಗಿ ಮಾಡುವದಕ್ಕೆ ಮತ್ತೊಂದು ಶಕ್ತಿಯು ಬೇಕಾಗಿರುತ್ತದೆ. ಈ ಸ್ಥೂಲ ಶರೀರವನ್ನು ರೂಪಿಸುವದಕ್ಕೆ ಶರೀರವಲ್ಲದ್ದೊಂದು ಬೇಕಾಗಿರುವದಾದರೆ ತೇಜಃ ಶರೀರಕ್ಕೂ ಅದೇ ಕಾರಣದಿಂದಲೇ ತನ್ನನ್ನು ರೂಪಿಸುವದಕ್ಕೆ ತನಗಿಂತ ಬೇರೆಯಾದದ್ದೊಂದರ ಆವಶ್ಯಕತೆಯುಂಟಾಗುತ್ತದೆ. ಆದಕಾರಣ ಈ ಯಾವದೋ ಒಂದನ್ನು ಜೀವನು, (Soul)* ಎಂದು ಕರೆದರು. ಸಂಸ್ಕೃತದಲ್ಲಿ ಇದನ್ನು ಆತ್ಮನು ಎಂದು ಕರೆಯುತ್ತಾರೆ. ಈ ಆತ್ಮನೇ ಆ ಸೂಕ್ಷ್ಮ ಶರೀರದ ಮೂಲಕ ಸ್ಥೂಲಶರೀರವನ್ನು ಸವ್ಯಾಪರಗೊಳಿಸುವದು. ಸೂಕ್ಷ್ಮಶರೀರವು ಮನಸ್ಸಿಗೆ ಆಶ್ರಯವೆಂದೂ ಆತ್ಮನು ಅದಕ್ಕೂ ಆಚೆ ಇರುವದೆಂದೂ ಭಾವಿಸಲ್ಪಟ್ಟಿರುತ್ತದೆ. ಅದು ಮನಸ್ಸೂ ಅಲ್ಲ, ಅದು ಮನಸ್ಸಿನ ವ್ಯಾಪಾರಕ್ಕೂ ಮನಸ್ಸಿನ ಮೂಲಕ ಶರೀರದ ವ್ಯಾಪಾರಕ್ಕೂ ಕಾರಣವಾಗಿರುತ್ತದೆ. ನನಗೆ ಒಂದು ಆತ್ಮ, ನಿನಗೊಂದು ಆತ್ಮ – ಹೀಗೆ ನಮ್ಮಲ್ಲಿ ಪ್ರತಿಯೊಬ್ಬನಿಗೂ ಒಂದೊಂದು ಬೇರೆ ಬೇರೆ ಆತ್ಮನೂ ಒಂದೊಂದು ಬೇರೆ ಬೇರೆ ಸೂಕ್ಷ್ಮ ಶರೀರವೂ ಇವೆ; ಅದರ ಮೂಲಕವಾಗಿ ನಾವು ಹೊರಗಿನ ಸ್ಥೂಲಶರೀರವನ್ನು ಸವ್ಯಾಪಾರವಾಗಿ ಮಾಡುತ್ತಿರುವೆವು.

ಆಮೇಲೆ ಈ ಆತ್ಮನ ವಿಷಯದಲ್ಲಿ, ಇದರ ಸ್ವಭಾವವೇನೆಂಬ ವಿಷಯದಲ್ಲಿ

* ಇಂಗ್ಲೀಷಿನಲ್ಲಿ ಜೀವಾತ್ಮನನ್ನು 'ಸೋಲ್" (soul) ಎಂದು ಕರೆಯುತ್ತಾರೆ. ಪಾಶ್ಚಾತ್ಯರಲ್ಲಿ ಸೋಲ್ ಎಂಬ ಶಬ್ದಕ್ಕಿರುವ ಸರಿಯಾದ ಅರ್ಥವನ್ನು ಹೇಳುವದು ಕಷ್ಟ. ಚೇತನಾ ಚೇತನಪದಾರ್ಥಗಳು ಎಂದು ನಾವು ವಿಭಾಗಮಾಡುವಾಗ ಪ್ರಾಣಿಗಳಲ್ಲಿರುವ ಶಕ್ತಿಯನ್ನು ಚೇತನವೆಂದು ಕರೆಯುವಂತೆ ಪ್ರಾಣಿಯಲ್ಲಿರುವ ಪ್ರಾಣವನ್ನು ಅಥವಾ ಪ್ರಾಣಾಶ್ರಯತತ್ತ್ವವನ್ನು ಈ ಹೆಸರಿನಿಂದ ಕರೆದಿರುತ್ತಾರೆ. ಪ್ರಾಣಿಗಳಲ್ಲಿರುವ ಚೇತನಕ್ಕಿಂತ ಮಾನವರಲ್ಲಿ ಒಂದು ಅಧಿಕವಾದ ಶಕ್ತಿಯಿರುವದೆಂದೂ ಅದು ಭೌತಿಕವಲ್ಲ, ಶುದ್ಧವಾದದ್ದು, ಮಾನವನ ಜ್ಞಾನಶಕ್ತ್ಯಾದಿಗಳಿಗೆ ಕಾರಣವಾದದ್ದೆಂದೂ ನಂಬುತ್ತಾರೆ. ಇದನ್ನು (spirit) ಎಂದು ಕರೆಯುವರು. ಹೇಗೆ ಆಗಲಿ, ಪಾಶ್ಚಾತ್ಯರಲ್ಲಿ ಮನಸ್ಸಿಗಿಂತ ವ್ಯತಿರಿಕ್ತವಾಗಿರುವ ಆತ್ಮನೊಬ್ಬನು ಇದಾನೆಂಬುದನ್ನು ಸ್ಪಷ್ಟವಾಗಿ ವಿವರಿಸುವದು ಅಪೂರ್ವ. ವೇದಾಂತಪ್ರಸಿದ್ಧವಾದ ಆತ್ಮಭಾವನೆಯನ್ನು ಪಾಶ್ಚಾತ್ಯರಿಗೆ ತಂದುಕೊಡುವದಕ್ಕೆ ಗತ್ಯಂತರವಿಲ್ಲದೆ ಸ್ವಾಮಿಗಳು ಆ ದೇಶದಲ್ಲಿ ಪ್ರಸಿದ್ಧವಾಗಿರುವ ಸೋಲ್ ಎಂಬ ಶಬ್ದವನ್ನೇ ಇಲ್ಲಿ ಉಪಯೋಗಿಸಿರುತ್ತಾರೆ.

# ಆತ್ಮನು ಅಣುವೆಂಬ ವಾದವು ನಮ್ಮ ದೇಶದಲ್ಲಿದ್ದರೂ ಅದು ತರ್ಕವಿರುದ್ಧವೆಂದು ಸ್ವಾಮಿಗಳು ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳದೇ ಬಿಟ್ಟಿರಬಹುದು.

ಪ್ರಶ್ನೆಗಳನ್ನು ಕೇಳಲಾರಂಭಿಸಿದರು. ಶರೀರವೂ ಅಲ್ಲದ, ಮನಸ್ಸೂ ಅಲ್ಲದ, ಈ ಆತ್ಮನೆಂಬುದು ಯಾವದು, ಮನುಷ್ಯನ ಜೀವಾತ್ಮನೆಂಬುದು ಏನು? ಈ ವಿಷಯದಲ್ಲಿ ದೊಡ್ಡ ದೊಡ್ಡ ಚರ್ಚೆಗಳುಂಟಾದವು. ಎಷ್ಟೋ ತರ್ಕಗಳನ್ನು ಮಾಡಿದರು, ಬಗೆ ಬಗೆಯ ಜಿಜ್ಞಾಸಾಭೇದಗಳು ಉತ್ಪನ್ನವಾದವು. ಈ ಆತ್ಮನ ವಿಷಯದಲ್ಲಿ ಕೊನೆಗೆ ಮಾಡಿಕೊಂಡಿರುವ ಕೆಲವು ಸಿದ್ಧಾಂತಗಳನ್ನು ನಿಮ್ಮ ಮುಂದೆ ಇಡುವದಕ್ಕೆ ನಾನು ಪ್ರಯತ್ನಿಸುವೆನು. ಬೇರೆ ಬೇರೆಯಾಗಿರುವ ಈ ದರ್ಶನಗಳಲ್ಲಿ ಇಷ್ಟು ವಿಷಯದಲ್ಲಿ ಐಕಮತ್ಯವಿರುವಂತೆ ತೋರುತ್ತಿದೆ: ಈ ಆತ್ಮನೆಂಬುದು ಏನೇ ಆಗಿರಲಿ, ಇದಕ್ಕೆ ರೂಪವಿಲ್ಲ ಆಕಾರವಿಲ್ಲ, ಯಾವದಕ್ಕೆ ಆಕಾರವೂ ರೂಪವೂ ಇಲ್ಲವೋ ಅದು ಸರ್ವವ್ಯಾಪಿಯಾಗಿರಲೇಬೇಕು.# ಕಾಲವು ಮನಸ್ಸಿನೊಡನೆ ಪ್ರಾರಂಭವಾಗುತ್ತದೆ, ದೇಶವೆಂಬುದೂ ಮನಸ್ಸಿನಲ್ಲಿಯೇ ಇರುತ್ತದೆ. ನಿಮಿತ್ತವೆಂಬುದು ಕಾಲವಿಲ್ಲದೆ ಇರಲಾರದು, ಏಕೆಂದರೆ ಅನುಕ್ರಮಬುದ್ಧಿಯಿಲ್ಲದೆ ಕಾರಣಬುದ್ಧಿಯುಂಟಾಗುವ ಹಾಗೆಯೇ ಇಲ್ಲ. ಆದ್ದರಿಂದ ಕಾಲ, ದೇಶ, ನಿಮಿತ್ತಗಳು ಮನಸ್ಸಿನಲ್ಲಿರುತ್ತವೆ; ಈ ಆತ್ಮವು ಮನಸ್ಸನ್ನು ಮೀರಿ ಆಕಾರ ರಹಿತನಾಗಿರುವದರಿಂದ* ಅದು ಕಾಲಾತೀತವಾಗಿಯೂ ದೇಶಾತೀತವಾಗಿಯೂ ಕಾರ್ಯಕಾರಣಭಾವಾತೀತವಾಗಿಯೂ ಇರಬೇಕಾಯಿತು. ಹೀಗೆ ಅದು ದೇಶಕಾಲ ನಿಮಿತ್ತಗಳಿಂದಾಚೆ ಇರುವದಾದರೆ ಅದು ಅಪರಿಚ್ಛಿನ್ನವಾಗಿಯೇ ಇರಬೇಕಾಗುವದು.

ಈಗ ನಮ್ಮ ದರ್ಶನದಲ್ಲಿ ಅತ್ಯಂತ ಉತ್ಕೃಷ್ಟವಾದ ತರ್ಕವೊಂದು ಉಂಟಾಯಿತು. ಅಪರಿಚ್ಛಿನ್ನವಾದದ್ದು ಎರಡಿರಲಾರದು. ಆತ್ಮವು ಅಪರಿಚ್ಛಿನ್ನವಾಗಿದ್ದರೆ ಒಂದೇ ಒಂದು ಆತ್ಮನಿರಬಹುದಾಗುವದು, ಆದ್ದರಿಂದ ಬೇರೆಬೇರೆ ಆತ್ಮಗಳಿರುವವೆಂಬ-ನಿನಗೊಂದು ಆತ್ಮ, ನನಗೊಂದು ಆತ್ಮ, ಹೀಗೆಲ್ಲ ಇರುವದೆಂಬ-ಭಾವನೆಗಳು ಯಾವವೂ ನಿಜವಲ್ಲ. ಆದ ಕಾರಣ ನಿಜವಾದ

# ದೇಶಕಾಲನಿಮಿತ್ತಗಳಗೆ ಮನಸ್ಸೇ ಆಶ್ರಯವೆಂಬ ವಾದವನ್ನು ಜರ್ಮನಿಯ ಇಮಾನ್ಯುಅಲ್ ಕ್ಯಾಂಟ್ (Immaunel Kant) ಎಂಬಾತನು ತನ್ನ ಶುದ್ಧತರ್ಕವಿಮರ್ಶೆ (Critique of Pure Reason) ಎಂಬ ಗ್ರಂಥದಲ್ಲಿ ತರ್ಕದಿಂದ ಸಿದ್ಧಮಾಡಿಕೊಟ್ಟಿರುತ್ತಾನೆ; ಆತ್ಮನು ಮನಸ್ಸಿಗೆ ಅತೀತವಾಗಿರಬೇಕೆಂದು ಇಲ್ಲಿ ಸ್ವಾಮಿಗಳವರು ತಿಳಿಸಿರುವ ರೀತಿಯೂ ತರ್ಕ ಸಿದ್ಧವಾಗಿರುತ್ತದೆ. ಆದರೆ ತರ್ಕಕ್ಕೆ ನಿಲುಗಡೆ ಇಲ್ಲಿಗೇ ಎಂದು ಯಾರಿಗೂ ಹೇಳುವದಕ್ಕೆ ಬರುವದಿಲ್ಲ. ಆದ್ದರಿಂದಲೇ ಕ್ಯಾಂಟನ ತರ್ಕದಲ್ಲಿ ದೋಷವುಂಟೆಂದು ಹೇಳುವ ಪ್ರತಿವಾದಿಗಳು ಈಗಲೂ ದೊರೆಯುತ್ತಾರೆ. ಮನಸ್ಸಿಗಿಂತ ಬೇರೆಯಾಗಿ ಆತ್ಮನೊಬ್ಬನು ಇರಬೇಕಾದ್ದಿಲ್ಲವೆಂಬ ವಾದಿಗಳೂ ಇರುತ್ತಾರೆ. ಹೀಗಿದ್ದರೂ ಆತ್ಮನು ಅವಸ್ಥಾತ್ರಯ ಸಾಕ್ಷಿಯಾಗಿ ಸ್ವತಃ ಸಿದ್ಧವಾಗಿರುವನೆಂಬ ಅನುಭವವನ್ನು ಮನಗಂಡಾಗ ಸ್ವಾಮಿಗಳು ಆತ್ಮನು ಪರಮಾರ್ಥಸ್ವರೂಪದ ವಿಷಯದಲ್ಲಿ ಇಲ್ಲಿ ಹೇಳಿರುವದೆಲ್ಲವೂ ಅನುಭವಾನುಸಾರಿಯಾದದ್ದೇ ಎಂಬುದು ನಿಶ್ಚಯವಾಗುವದು. ವೇದಾಂತಕ್ಕೂ ಮಿಕ್ಕ ತರ್ಕಗಳಗೂ ಇರುವ ತಾರತಮ್ಯ ವ್ಯಕ್ತವಾಗುವದು.

ಮಾನವನು ಒಬ್ಬನೇ, ಅವನು ಅಪರಿಚ್ಛಿನ್ನ ವಾಗಿರುತ್ತಾನೆ, ಸರ್ವವ್ಯಾಪಕನಾದ ಚೈತನ್ಯನಾಗಿರುತ್ತಾನೆ; ತೋರಿಕೆಯಮಾನವನು ಆ ನಿಜವಾದ ಮಾನವನ ಪರಿಚ್ಛಿನ್ನರೂಪವಾಗಿರುತ್ತಾನೆ; ತೋರಿಕೆಯ ಮಾನವನು ಎಷ್ಟೇ ದೊಡ್ಡವನಾಗಿರಲಿ, ಅವನು ಇವನಿಗೂ ಆಧಾರನಾಗಿರುವ ಪರಮಾರ್ಥ ಮಾನವನ ಮಬ್ಬುಮಬ್ಬಾದ ಪ್ರತಿಬಿಂಬಮಾತ್ರವಾಗಿರುತ್ತಾನೆ-ಎಂದು ಹೇಳುವ ಪುರಾಣ ವಚನಗಳು ಈ ಅರ್ಥದಲ್ಲಿ ಸತ್ಯವಾಗಿರುತ್ತವೆ. ನಿಜವಾದ ಮಾನವನು, ಎಂದರೆ ಚೈತನ್ಯವು, ಕಾರ್ಯಕಾರಣಭಾವಕ್ಕೂ ಅತೀತವಾಗಿರುವದರಿಂದ ಕಾಲದೇಶಪರಿಚ್ಛಿನ್ನನಾಗದೆ ಇರುವದರಿಂದ, ಮುಕ್ತನಾಗಿರಬೇಕಾಯಿತು; ಅವನಿಗೆ ಬಂಧವೇ ಆದದ್ದಿಲ್ಲ, ಅವನಿಗೆ ಬಂಧವಾಗುವದೇ ಸಾಧ್ಯವಿಲ್ಲ. ಪ್ರತಿಬಿಂಬ ರೂಪನಾದ ತೋರಿಕೆಯ ಮನುಷ್ಯನು ದೇಶಕಾಲನಿಮಿತ್ತಪರಿಚ್ಛಿನ್ನನಾಗಿರುವದಿರಂದ ಬದ್ಧನಾಗಿರುತ್ತಾನೆ; ಅಥವಾ, ಇದನ್ನೇ ನಮ್ಮ ದಾರ್ಶನಿಕರು ಕೆಲವರು ಹೇಳುವ ಭಾಷೆಯಲ್ಲಿಟ್ಟರೆ, ಅವನು ಬದ್ಧನಾಗಿರುವಂತೆ ತೋರುವನೇ ಹೊರತು ನಿಜವಾಗಿ ಬದ್ಧನಾಗಿಲ್ಲವೆನ್ನಬೇಕಾಗುವದು. ಇದೇ, ಈ ಸರ್ವವ್ಯಾಪಕತ್ವವೇ, ಈ ಚೈತನ್ಯಸ್ವಭಾವವೇ, ಈ ಅಪರಿಚ್ಛಿನ್ನ ವಸ್ತುವೇ, ನಮ್ಮ ಜೀವಾತ್ಮರುಗಳ ಪರಮಾರ್ಥವು.

ಪ್ರತಿಯೊಬ್ಬ ಜೀವಾತ್ಮನೂ ಅಪರಿಚ್ಛಿನ್ನನಾಗಿರುತ್ತಾನೆ. ಆದ್ದರಿಂದ ಜನನ ಮರಣಗಳೆಂಬ ಮಾತೇ ಸರಿಯಲ್ಲ. ಕೆಲವು ಮಕ್ಕಳನ್ನು ಪರೀಕ್ಷೆಮಾಡುತ್ತಿದ್ದರು. ಪರೀಕ್ಷಕನು ಅವರಿಗೆ ಸ್ವಲ್ಪ ಕಷ್ಟವಾದ ಪ್ರಶ್ನೆಗಳನ್ನೇ ಹಾಕುತ್ತಿದ್ದನು. ಆ ಪ್ರಶ್ನೆಗಳಲ್ಲಿ "ಭೂಮಿ ಏಕೆ ಬೀಳುವದಿಲ್ಲ?" ಎಂಬುದು ಒಂದು. ಆಕರ್ಷಣಶಕ್ತಿಯ ವಿಷಯವಾಗಿ ಉತ್ತರಗಳನ್ನು ಹೊರಡಿಸಬೇಕೆಂದು ಆತನ ಇಚ್ಛೆ. ಎಷ್ಟೋ ಹುಡುಗರಿಗೆ ಉತ್ತರ ಹೇಳುವದಕ್ಕೆ ಆಗಲಿಲ್ಲ. ಕೆಲವರು ಆಕರ್ಷಣ ಶಕ್ತಿಯನ್ನೋ ಮತ್ತೇನನ್ನೋ ಕಾರಣವಾಗಿ ಹೇಳಿದರು. ಆದರೆ ಜಾಣೆಯಾದ ಒಬ್ಬ ಸಣ್ಣ ಹುಡುಗಿಯು ಇದಕ್ಕೆ ಉತ್ತರವಾಗಿ ಮತ್ತೊಂದು ಪ್ರಶ್ನೆ ಹಾಕಿದಳು. "ಅದು ಎಲ್ಲಿಗೆ ಬೀಳಬೇಕು?" ಎಂದಳು. ಪ್ರಶ್ನೆಯು ಅವಿವೇಕದ್ದು: ಭೂಮಿಯು ಎಲ್ಲಿಗೆ ಬೀಳಬೇಕು? ಭೂಮಿಗೆ ಬೀಳುವದಾಗಲಿ ಏಳುವದಾಗಲಿ ಇರುವದಿಲ್ಲ. ಅನಂತವಾದ ಆಕಾಶದಲ್ಲಿ ಮೇಲೆಂಬುದಾಗಲಿ ಕೆಳಗೆಂಬುದಾಗಲಿ ಇರುವದಿಲ್ಲ. ಮೇಲುಕೆಳಗೆಂಬುದು ಸಾಪೇಕ್ಷಕ್ಕೆ ಮಾತ್ರ ಸೇರಿದ್ದು. ಅನಂತವಾದದ್ದಕ್ಕೆ ಹೋಗುವದಾಗಲಿ ಬರುವದಾಗಲಿ ಎಲ್ಲಿರುವದು? ಅದು ಎಲ್ಲಿಂದ ಬರಬೇಕು, ಎಲ್ಲಿಗೆ ಹೋಗಬೇಕು? ಈ ರೀತಿಯಲ್ಲಿ ಜನರು ಭೂತಭವಿಷ್ಯತ್ತುಗಳ ವಿಚಾರವನ್ನು ಕೈಬಿಟ್ಟಾಗ, ಶರೀರವೇ ಬರುತ್ತಲೂ ಹೋಗುತ್ತಲೂ ಇದ್ದು ಪರಿಚ್ಛಿನ್ನ ವಾಗಿರುವದರಿಂದ ಈ ಶರೀರಭಾವನೆಯನ್ನು ಅವರು ಕೈಬಿಟ್ಟಾಗ, ಅವರು

ಇನ್ನೂ ಮೇಲಿನ ವಿಚಾರಭೂಮಿಕೆಗೆ ಏರುವರು. ಶರೀರವೇನೂ ನಿಜವಾದ ಮಾನವನಲ್ಲ; ಮನಸ್ಸೂ ಅಲ್ಲ, ಏಕೆಂದರೆ ಮನಸ್ಸಿಗೆ ವೃದ್ಧಿಕ್ಷಯಗಳುಂಟು, ಇವೆರಡಕ್ಕೂ ಅತೀತವಾಗಿರುವ ಚೈತನ್ಯವೇ ಎಂದೆಂದಿಗೂ ಇರಬಲ್ಲದ್ದು. ಶರೀರವೂ ಮನಸ್ಸೂ ಒಂದೇ ಸಮನೆ ಮಾರ್ಪಡುತ್ತಲೇ ಇರುತ್ತವೆ; ನಿಜವಾಗಿ ನೋಡಿದರೆ ಅವು ವಿಕಾರಶೀಲವಾದ ದೃಶ್ಯಸಂತಾನಗಳಿಗೇ ಹೆಸರಾಗಿವೆ. ನದಿಗಳಲ್ಲಿರುವ ನೀರು ಒಂದೇ ಸಮನೆ ಹರಿದು ಹೋಗುತ್ತಲೇ ಇದ್ದರೂ ಅವಿಚ್ಛಿನ್ನವಾದ ಪ್ರವಾಹವಾಗಿರುವಂತೆ ತೋರುವಂತೆಯೇ ಅವು ಏಕರೂಪವಾಗಿರುವಂತೆ ಕಾಣುತ್ತವೆ. ಈ ಶರೀರದಲ್ಲಿರುವ ಒಂದೊಂದು ಅಣುವೂ ಎಡೆಬಿಡದೆ ಮಾರ್ಪಡುತ್ತಿರುವದು; ಯಾವನೊಬ್ಬನಿಗೂ ಅನೇಕ ನಿಮಿಷಗಳವರೆಗೂ ಒಂದೇ ಶರೀರವು ಇದ್ದದ್ದಿಲ್ಲ. ಹೀಗಿದ್ದರೂ ನಾವು ಅದೇ ಶರೀರವಿದೆಂದು ಯೋಚಿಸಿಕೊಳ್ಳುತ್ತಿರುವೆವು. ಮನಸ್ಸಿನ ವಿಚಾರವೂ ಇಷ್ಟೇ; ಅದು ಒಂದು ಕ್ಷಣದಲ್ಲಿ ಸುಖಿಯಾಗಿರುವದು, ಮತ್ತೊಂದು ಕ್ಷಣದಲ್ಲಿ ದುಃಖಿಯಾಗಿರುವದು; ಒಂದು ಕ್ಷಣದಲ್ಲಿ ಬಲಿಷ್ಠವಾಗಿರುವದು, ಮತ್ತೊಂದು ಕ್ಷಣದಲ್ಲಿ ದುರ್ಬಲವಾಗಿರುವದು. ಹೀಗೆ ಎಂದೆಂದಿಗೂ ಮಾರ್ಪಡುತ್ತಲೇ ಇರುವ ನದಿಯ ಸುಳಿಯಾಗಿರುತ್ತದೆ. ಅದು ಅಪರಿಚ್ಛಿನ್ನವಾದ ಚೈತನ್ಯವಾಗಿರಲಾರದು, ಏಕೆಂದರೆ ಮಾರ್ಪಾಡೆಂಬುದು ಪರಿಚ್ಛಿನ್ನವಾದದ್ದರಲ್ಲಿ ಮಾತ್ರ ಇರುವದಕ್ಕಾಗುತ್ತದೆ, ಅಪರಿಚ್ಛಿನ್ನವಾದದ್ದು ಯಾವದಾದರೊಂದು ಬಗೆಯಲ್ಲಿ ಮಾರ್ಪಾಡನ್ನು ಹೊಂದುವದೆಂದು ಹೇಳುವುದು ಉಪಹಾಸ್ಯವಾಗಿರುತ್ತದೆ, ಅದು ಆಗದ ಮಾತು. ನಾವು ಪರಿಚ್ಛಿನ್ನವಾಗಿರುವೆವೆಂದು ಇಟ್ಟುಕೊಂಡರೆ ನಾನು ಚಲಿಸಬಹುದು, ನೀವೂ ಚಲಿಸಬಹುದು. ಈ ಪ್ರಪಂಚದಲ್ಲಿರುವ ಪ್ರತಿಯೊಂದು ಅಣುವೂ ಎಡೆಬಿಡದೆ ಚಲಿಸುತ್ತಲೇ ಇರುತ್ತದೆ. ಆದರೆ ಒಟ್ಟು ಪ್ರಪಂಚವನ್ನೇ ಒಂದೆಂದು, ಒಂದು ಪೂರ್ಣವೆಂದು ಇಟ್ಟುಕೊಂಡರೆ ಅದು ಚಲಿಸಲಾರದು, ಅದು ಮಾರ್ಪಡಲಾರದು. ಏಕೆಂದರೆ ಚಲನೆಯೆಂಬುದು ಯಾವಾಗಲೂ ಸಾಪೇಕ್ಷವಾಗಿರುತ್ತದೆ. ನಾನು ಚಲಿಸುವೆನೆಂಬುದು ಮತ್ತೊಂದರ ಅಪೇಕ್ಷೆಯಿಂದ, ಈ ಪ್ರಪಂಚದಲ್ಲಿರುವ ಯಾವದೊಂದು ಅಣುವೇ ಆಗಲಿ, ಮತ್ತೊಂದಣುವಿನ ಅಪೇಕ್ಷೆಯಿಂದ ಮಾರ್ಪಡಬಹುದಾಗಿರುವದು; ಆದರೆ ಇಡಿಯ ಪ್ರಪಂಚವನ್ನೇ ಒಂದೆಂದು ಭಾವಿಸಿದೆವೆಂದರೆ ಅದು ಯಾವದನ್ನವಧಿಯಾಗಿಟ್ಟುಕೊಂಡು ಚಲಿಸಬೇಕು? ಅದಲ್ಲದೆ ಮತ್ತೊಂದು ಇರುವದೇ ಇಲ್ಲ. ಆದ್ದರಿಂದ ಈ ಅಪರಿಚ್ಛಿನ್ನ ಏಕತ್ವವು ಅವಿಕಾರಿಯಾಗಿರುವದು, ಅಚಲವಾಗಿರುವದು, ನಿರಪೇಕ್ಷವಾಗಿರುವದು; ಇದೇ ಪರಮಾರ್ಥ ಮಾನವನು. ನಮ್ಮ ಪರಮಾರ್ಥಸ್ವರೂಪವೆಂಬುದು ವಿಶ್ವ ವ್ಯಾಪಕ ತತ್ತ್ವದಲ್ಲಿರುವದೇ ಹೊರತು

ಪರಿಚ್ಛಿನ್ನರೂಪದಲ್ಲಿರುವದಿಲ್ಲ. ನಾವು ಸಣ್ಣ ಪರಿಚ್ಛಿನ್ನಭಾವಗಳೆಂದು ಇಟ್ಟುಕೊಂಡಿರುವದು ಮನಸ್ಸಿಗೆ ಎಷ್ಟೇ ಒಪ್ಪವಾಗಿರಲಿ, ಇವೆಲ್ಲ ಹಳೆಯ ಮನಃಕಲ್ಪನಾಮಾತ್ರವಾಗಿರುತ್ತದೆ.

'ನೀವು ಎಲ್ಲೆಲ್ಲಿಯೂ ಇರುವ ವಿಶ್ವಾತ್ಮರು' ಎಂದರೆ ಜನರಿಗೆ ಅಂಜಿಕೆಯಾಗುವದು. ನೀವು ಎಲ್ಲದರ ಮೂಲಕವೂ ಕೆಲಸಮಾಡುತ್ತಿರುವಿರಿ. ಒಂದೊಂದು ಪಾದದಿಂದಲೂ ನೀವು ಸಂಚರಿಸುತ್ತಿರುವಿರಿ, ಒಂದೊಂದು ಬಾಯಿಯಿಂದಲೂ ನೀವು ಮಾತನಾಡುತ್ತಿರುವಿರಿ, ಒಂದೊಂದು ಹೃದಯದಲ್ಲಿಯೂ ನೀವು ಅನುಭವಿಸುತ್ತಿರುವಿರಿ–ಈ ಮಾತನ್ನು ಕೇಳಿದರೆ ಜನರು ಹೆದರಿಕೊಳ್ಳುತ್ತಾರೆ. 'ಹಾಗಾದರೆ ನಮ್ಮ ವ್ಯಕ್ತಿತ್ವವು ಇದ್ದುಕೊಂಡೇ ಇರುವದಿಲ್ಲವೇನು?' ಎಂದು ಮತ್ತೆ ಮತ್ತೆ ಅವರು ಕೇಳುತ್ತಿರುವರು. ವ್ಯಕ್ತಿತ್ವತೆಂದರೇನು? ನನಗೆ ಅದನ್ನು ಸ್ವಲ್ಪ ತೋರಿಸಿರಿ. ಮಗುವಿಗೆ ಮೀಸೆಯಿರುವದಿಲ್ಲ? ಅದು ದೊಡ್ಡವನಾಗುತ್ತಲೂ ಅದಕ್ಕೆ ಮೀಸೆಯೂ ಗಡ್ಡವೂ ಬರಬಹುದಷ್ಟೆ. ಇಲ್ಲಿ ಅದರ ವ್ಯಕ್ತಿತ್ವವೆಂಬುದು ಶರೀರದಲ್ಲಿಯೇ ಇದ್ದಿದ್ದರೆ ಅದು ಹೋಗಿಬಿಡಬೇಕಾಯಿತು. ನನಗೆ ಒಂದು ಕಣ್ಣು ಹೋದರೆ, ಅಥವಾ ಒಂದು ಕೈಹೋದರೆ, ಶರೀರದಲ್ಲಿಯೇ ವ್ಯಕ್ತಿತ್ವವಿದೆಯೆನ್ನುವರ ಪಕ್ಷದಲ್ಲಿ ನನ್ನ ವ್ಯಕ್ತಿತ್ವವೇ ಹೋಗಿಬಿಡಬೇಕು. ಇನ್ನು, ಕುಡುಕನು ಕುಡಿತವನ್ನು ಬಿಡಲೇ ಕೂಡದು, ಏಕೆಂದರೆ ಆಗ ಅವನ ವ್ಯಕ್ತಿತ್ವವೇ ಹೋಗಿಬಿಡುವದು. ಕಳ್ಳನು ಒಳ್ಳೆಯವನಾಗಕೂಡದು, ಏಕೆಂದರೆ ಅದರಿಂದ ಅವನ ವ್ಯಕ್ತಿತ್ವವೇ ಹೋಗಿಬಿಡುವದು. ಈ ಅಂಜಿಕೆಯಿಂದ ಯಾವ ಮನುಷ್ಯನೂ ತನ್ನ ನಡತೆಯನ್ನು ಬದಲಾಯಿಸಿಕೊಳ್ಳಬಾರದಾಗುವದು. ವ್ಯಕ್ತಿತ್ವವೆಂಬುದು ಅಪರಿಚ್ಛಿನ್ನದಲ್ಲಿರುವದೇ ಹೊರತು ಮತ್ತೇತರಲ್ಲಿಯೂ ಇರುವದಿಲ್ಲ. ಅದೊಂದೇ ಮಾರ್ಪಡದೆ ಇರುವ ಸ್ಥಿತಿಯು, ಮಿಕ್ಕದ್ದೆಲ್ಲವೂ ನಿತ್ಯ ಪ್ರವಾಹರೂಪವಾಗಿರುತ್ತದೆ. ನಮ್ಮ ನೆನಪನ್ನು ಅವಲಂಬಿಸಿಕೊಂಡೇ ನಮ್ಮ ವ್ಯಕ್ತಿತ್ವವಿರುವದು ಎಂದು ಹೇಳುವದಕ್ಕೂ ಬರುವಂತಿಲ್ಲ. ತಲೆಯ ಮೇಲೆ ಒಂದು ಏಟು ಬಿದ್ದದ್ದರಿಂದ ಹಿಂದೆ ನಡೆದದ್ದನ್ನೆಲ್ಲ ನಾನು ಮರೆತುಬಿಟ್ಟೆನೆಂದು ಇಟ್ಟುಕೊಳ್ಳಿರಿ; ಆಗ ನನ್ನ ವ್ಯಕ್ತಿತ್ವವೆಲ್ಲ ಹೋಗಿಬಿಟ್ಟಂತಾಯಿತು, ನಾನೇ ಇಲ್ಲದಂತಾಯಿತು. ನನ್ನ ಬಾಲ್ಯದಲ್ಲಿ ಎರಡು ಮೂರು ವರ್ಷಗಳ ಕಾಲದ ಸಂಗತಿಗಳು ನನಗೆ ನೆನಪಿನಲ್ಲಿರುವದಿಲ್ಲ; ನೆನಪೂ ಇರವೂ ಒಂದೇ ಆಗಿದ್ದರೆ ನಾನು ಮರೆತದ್ದೆಲ್ಲ ಹೋದಂತೆಯೇ, ಯಾವ ಜೀವನಭಾಗವು ನನ್ನ ನೆನಪಿನಲ್ಲಿಲ್ಲವೋ ಆ ಭಾಗವು ನಾನು ಬಾಳಿದ್ದೇ ಅಲ್ಲ – ಎಂದಾಗುವದು. ವ್ಯಕ್ತಿತ್ವದ ವಿಷಯದಲ್ಲಿ ಇದು ತೀರ ಸಂಕುಚಿತಭಾವನೆಯು.

ನಿಜವಾಗಿ ನಾವಿನ್ನೂ ವ್ಯಕ್ತಿಗಳಾಗಿಯೇ ಇರುವದಿಲ್ಲ, ನಾವು ವ್ಯಕ್ತಿತ್ವವನ್ನು ಪಡೆಯುವದಕ್ಕೆ ಹೆಣಗಾಡುತ್ತಿದ್ದೇವೆ, ಅಪರಿಚ್ಛಿನ್ನವಾಗಿರುವದೇ ಆ ವ್ಯಕ್ತಿತ್ವವು, ಅದೇ ಮಾನವನ ನಿಜವಾದ ಸ್ವಭಾವವು. ಯಾವಾತನ ಜೀವನವು ಇಡಿಯ ವಿಶ್ವದಲ್ಲಿಯೇ ಇರುವದೋ ಅವನೇ ನಿಜವಾಗಿ ಬದುಕಿರುತ್ತಾನೆ, ನಮ್ಮ ಜೀವನವನ್ನು ಪರಿಚ್ಛಿನ್ನವಸ್ತುಗಳ ಮೇಲೆ ಎಷ್ಟು ಮಟ್ಟಿಗೆ ನೆಡುವೆವೋ ಅಷ್ಟು ವೇಗದಿಂದ ನಾವು ಮರಣೋನ್ಮುಖರಾಗಿ ಹೋಗುತ್ತಿರುವೆವು, ಯಾವಾಗ ನಮ್ಮ ಜೀವನಗಳು ಪ್ರಪಂಚದಲ್ಲಿರುವವೋ, ಮತ್ತೊಬ್ಬರಲ್ಲಿರುವವೋ, ಆ ಕ್ಷಣಗಳೇ ನಾವು ನಿಜವಾಗಿ ಬದುಕಿರುವದು; ಈ ಸಣ್ಣ ಜೀವನವನ್ನು ಮಾಡಿಕೊಂಡಿರುವದೇ ಮರಣವು, ಕೇವಲ ಮರಣವು. ಆದ್ದರಿಂದಲೇ ಮರಣದ ಭಯವುಂಟಾ ಗುತ್ತಿರುವದು. ಈ ಪ್ರಪಂಚದಲ್ಲಿ ಒಂದು ಜೀವವಿರುವವರೆಗೂ ತಾನೂ ಬದುಕಿರುವೆನೆಂದು ಮನುಷ್ಯನು ಯಾವಾಗ ಮನಗಾಣುವನೋ ಆಗಲೇ ಮರಣಭೀತಿಯನ್ನು ಜಯಿಸುವದಕ್ಕೆ ಆಗುತ್ತದೆ. "ನಾನು ಪ್ರತಿಯೊಂದರಲ್ಲಿಯೂ ಇರುವೆನು, ಎಲ್ಲಾ ಜೀವನಗಳಲ್ಲಿಯೂ ಇರುವೆನು. ನಾನು ಇಡಿಯ ಬ್ರಹ್ಮಾಂಡವು" ಎಂದು ಯಾವಾಗ ಹೇಳಿಕೊಳ್ಳಲಾರನೋ ಆಗಲೇ ನಿರ್ಭೀತಿಯ ಸ್ಥಿತಿಯು ಬರುತ್ತದೆ. ಒಂದೇ ಸಮನೆ ಮಾರ್ಪಡುತ್ತಿರುವ ವಸ್ತುಗಳು ಅಮರ್ತ್ಯವೆನ್ನುವದು ನಗೆಗೀಡಾಗಿರುವದು. ಒಬ್ಬಾನೊಬ್ಬ ಸಂಸ್ಕೃತ ತತ್ತ್ವಜ್ಞನು(?) ಹೇಳಿರುವದೇನೆಂದರೆ, ಚೈತನ್ಯವೇ ನಿಜವಾಗಿ ವ್ಯಕ್ತಿಯಾಗಿರುತ್ತದೆ. ಏಕೆಂದರೆ ಅದು ಅಪರಿಚ್ಛಿನ್ನವಾಗಿರುತ್ತದೆ. ಅಪರಿಚ್ಛಿನ್ನವಾಗಿರುವದನ್ನು ವಿಭಾಗಿಸುವದಕ್ಕಾಗಲಾರದು, ಅಪರಿಚ್ಛಿನ್ನ ವಾಗಿರುವದನ್ನು ಬೇರೆ ಬೇರೆ ತುಂಡುಗಳಾಗಿ ಮಾಡುವದಕ್ಕಾಗಲಾರದು. ಅದು ಯಾವಾಗಲೂ ಏಕವಾಗಿ, ನಿತ್ಯನಿರಂತವಾಗಿರುವದು; ಇದೇ ಮಾನವನೆಂಬ ವ್ಯಕ್ತಿಯು, ನಿಜವಾದ ಮಾನವನು. ಪ್ರಾತೀತಿಕ ಮಾನವನೆಂಬುದು ಸರ್ವಾತೀತವಾಗಿರುವ ಈ ವ್ಯಕ್ತಿತ್ವವನ್ನು ವ್ಯಕ್ತಗೊಳಿಸಿ ಪ್ರಕಟಿಸುವದಕ್ಕೆ ಆಗುತ್ತಿರುವ ಹೆಣಗಾಟವು, ಅಷ್ಟೆ.

ಆದರೆ ವಿಕಾಸವೆಂಬುದು ಚೈತನ್ಯಕ್ಕಲ್ಲ, ಕೆಟ್ಟವನು ಒಳ್ಳೆಯವನಾಗುವದು, ಪ್ರಾಣಿಯು ಮನುಷ್ಯನಾಗುವದು–ಈ ಮಾರ್ಪಾಡುಗಳನ್ನು ನೀವು ಹೇಗಾದರೂ ಭಾವಿಸಿಕೊಳ್ಳಿರಿ, ಇವು ಚೈತನ್ಯದಲ್ಲಾಗುವದಿಲ್ಲ. ಅವು ಪ್ರಕೃತಿಯ ವಿಕಾಸ, ಪುರುಷಚೈತನ್ಯದ ವ್ಯಕ್ತೀಕರಣ. ನನಗೂ ನಿಮಗೂ ನಡುವೆ ಒಂದು ತೆರೆಯ ಮರೆಯಿದೆ ಎಂದಿಟ್ಟುಕೊಳ್ಳಿ. ಇದರಲ್ಲಿ ಒಂದು ಸಣ್ಣ ರಂಧ್ರವಿದ್ದರೆ ಅದರ ಮೂಲಕ ನನ್ನೆದುರಿಗೆ ಇರುವ ಕೆಲವರ ಮುಖವನ್ನು, ಎಲ್ಲಿಯೋ ಅತ್ಯಲ್ಪ ಜನರ ಮುಖವನ್ನು, ನಾನು ನೋಡಬಹುದಾಗಿರುವದು. ಈಗ ಈ ರಂಧ್ರವು ದೊಡ್ಡ

ದೊಡ್ಡದಾಗುತ್ತಾ ಬರುತ್ತದೆಯೆಂದಿಟ್ಟುಕೊಳ್ಳಿ; ಹಾಗೆ ಅದು ದೊಡ್ಡದಾದಂತೆಲ್ಲ ನನ್ನೆದುರಿನ ನೋಟವು ಹೆಚ್ಚುಹೆಚ್ಚಾಗಿ ಪ್ರಕಟವಾಗುವದು. ಕೊನೆಗೆ ತೆರೆಮರೆಯು ತೀರ ಹೋಗಿಬಿಟ್ಟರೆ ನಿಮ್ಮನ್ನೆಲ್ಲ ನೇರಾಗಿಯೇ ನಾನು ನೋಡಬಹುದಾಗಿರುತ್ತದೆ. ಅಲ್ಲವೆ? ಈ ದೃಷ್ಟಾಂತದಲ್ಲಿ ನಿಮ್ಮಲ್ಲಿ ಯಾವ ಮಾರ್ಪಾಡೂ ಆಗಲೇ ಇಲ್ಲ, ವಿಕಾಸವಾಗುತ್ತಲಿದ್ದದ್ದು ರಂಧ್ರವು; ಆ ಮೂಲಕ ನೀವು ಇಷ್ಟಿಷ್ಟೇ ಹೆಚ್ಚಾಗಿ ಪ್ರಕಟವಾಗುತ್ತಿದ್ದಿರಿ, ಅಷ್ಟೆ. ಚೈತನ್ಯದ ವಿಚಾರವೂ ಹೀಗೆಯೇ. ಇನ್ನು ಮುಂದೆ ಪರಿಪೂರ್ಣತೆಯನ್ನು ಹೊಂದಬೇಕಾದುದೇನೂ ಇರುವದಿಲ್ಲ. ಈಗಾಗಲೇ ನೀವು ಮುಕ್ತರಾಗಿಯೇ ಪರಿಪೂರ್ಣರಾಗಿಯೇ ಇದ್ದುಬಿಟ್ಟಿದ್ದೀರಿ. ಧರ್ಮ, ಈಶ್ವರ, ಪರಲೋಕಾನ್ವೇಷಣೆ–ಈ ಭಾವನೆಗಳ ಅರ್ಥವೇನು? ಮನುಷ್ಯನು ಈಶ್ವರನನ್ನೇಕೆ ಹುಡುಕಿಕೊಂಡು ಹೋಗುತ್ತಿದ್ದಾನೆ? ಪ್ರತಿಯೊಂದು ಜನಾಂಗದಲ್ಲಿಯೂ, ಸಮಾಜದ ಪ್ರತಿಯೊಂದು ಸ್ಥಿತಿಯಲ್ಲಿಯೂ ಮನುಷ್ಯನು ಮಾನವನ ರೂಪದಲ್ಲಿಯೋ* ಈಶ್ವರರೂಪದಲ್ಲಿಯೋ ಅಥವಾ ಮತ್ತೆ ಯಾವದಾದರೊಂದು ರೂಪದಲ್ಲಿಯೋ ಪರಿಪೂರ್ಣವಾದ ಹೆಗ್ಗುರಿಯನ್ನು ಬಯಸುತ್ತಿರುವದೇಕೆ? ಏಕೆಂದರೆ ಈ ಭಾವನೆಯು ನಿಮ್ಮೊಳಗೇ ಇದ್ದಕೊಂಡಿದೆ, ನಿಮ್ಮ ಹೃದಯವೇ ಬಡಿದುಕೊಳ್ಳುತ್ತಿದ್ದರೂ ಅದು ನಿಮಗೆ ತಿಳಯದೆ ಹೋಯಿತು. ಅದು ಯಾವದೋ ಒಂದು ಹೊರಗಿನ ವಸ್ತುವೆಂದು ಎಣಿಸಿಕೊಂಡಿರುವಿರಿ. ನಿಮ್ಮೊಳಗೇ ಇರುವ ಈಶ್ವರನೇ ನೀವು ಆತನನ್ನು ಹುಡುಕಿ ಸಾಕ್ಷಾತ್ಕಾರ ಮಾಡಿಕೊಳ್ಳುವಂತೆ ಪ್ರೇರಿಸುತ್ತಿದ್ದಾನೆ. ದೇವಾಲಯಗಳಲ್ಲಿ ಚರ್ಚುಗಳಲ್ಲಿ, ಭೂಮಿಗಳಲ್ಲಿ, ಸ್ವರ್ಗಗಳಲ್ಲಿ – ಹೀಗೆ ಅಲ್ಲಲ್ಲಿ ಸುದೀರ್ಘಕಾಲ ಹುಡುಹುಡುಕಿ ಕೊನೆಗೆ ನೀವು ಹೊರಟ ಸ್ಥಳಕ್ಕೇ ಬಂದು ಈ ವೃತ್ತವನ್ನು ಪೂರ್ಣಮಾಡುತ್ತೀರಿ. ಕೊನೆಗೆ ನಿಮ್ಮ ಆತ್ಮನ ಬಳಿಗೇ ನೀವು ಬಂದು ಯಾವಾತನನ್ನು ಪ್ರಪಂಚದಲ್ಲೆಲ್ಲ ಹುಡುಕುತ್ತಿದ್ದಿರೋ, ಯಾವಾತನಿಗಾಗಿ ಚರ್ಚುಗಳಲ್ಲಿಯೂ ದೇವಾಲಯಗಳಲ್ಲಿಯೂ ಅಳುತ್ತಲೂ ಕರೆಯುತ್ತಲೂ ಇದ್ದಿರೋ, ಯಾವಾತನನ್ನು ಎಲ್ಲಿಯೋ ಮೋಡಗಳಲ್ಲಿ ಮುಸುಕಿಕೊಂಡಿರುವ ಯಾವದೋ ಒಂದು ಪರಮರಹಸ್ಯವೆಂದು ಭಾವಿಸಿದ್ದಿರೋ, ಆತನು ನಿಮ್ಮ ಅತ್ಯಂತ ಸಮೀಪದಲ್ಲಿರುವನೆಂದೂ ನಿಮ್ಮ ಆತ್ಮನೇ ಎಂದೂ ನಿಮ್ಮ ದೇಹ ಪ್ರಾಣ ಮನಸ್ಸುಗಳ ಸಾರವೆಂದೂ ಕಂಡುಕೊಳ್ಳುವಿರಿ.

ಇದೇ ನಿಮ್ಮ ಸ್ವರೂಪವು. ಅದನ್ನು ನಮ್ಮದೆಂದುಕೊಳ್ಳಿರಿ, ಅದನ್ನು

* ಈಶ್ವರನನ್ನು ನಂಬದವರು ಕೂಡ ಪರಿಪೂರ್ಣವಾದವನೊಬ್ಬನು ಇರುವನೆಂದೋ ಮುಂದೆ ವಿಕಾಸವಾಗಿ ತೋರಿಕೊಳ್ಳವನೆಂದೋ ನಂಬುತ್ತಾರೆ. ಈ ನಂಬಿಕೆಗೆ ಆಧಾರವೇ ನಮ್ಮಲ್ಲಿರುವ ನಿತ್ಯಮುಕ್ತಾತ್ಮಸ್ವರೂಪವು – ಎಂದು ಭಾವ.

ಪ್ರಕಟಗೊಳಿಸಿರಿ. ನೀವು ಇನ್ನು ಮೇಲೆ ಪರಿಶುದ್ಧರಾಗಬೇಕಾಗಿರುವದಿಲ್ಲ, ಈಗಲೇ ಪರಿಶುದ್ಧರಾಗಿಬಿಟ್ಟಿರುವಿರಿ, ಇನ್ನು ಮೇಲೆ ಪರಿಪೂರ್ಣರಾಗಬೇಕಾಗಿರುವದಿಲ್ಲ, ಈಗಲೇ ಆಗಿಬಿಟ್ಟಿರುವಿರಿ. ಈ ಪ್ರಕೃತಿಯು ಇರುವ ವಸ್ತುವನ್ನು ಮರೆಮಾಡಿಕೊಂಡಿರುವ ತೆರೆಯಂತಿರುವದು. ನೀವು ಆಲೋಚನೆ ಮಾಡುವ ಅಥವಾ ಅನುಸರಿಸುವ ಪ್ರತಿಯೊಂದು ಉತ್ತಮಭಾವನೆಯೂ ಈ ಆವರಣವನ್ನು ಹರಿದುಹಾಕುತ್ತಿದೆ, ಅಷ್ಟೆ; ಇದರಿಂದ ಶುದ್ಧತ್ವವು, ಅಪರಿಚ್ಛಿನ್ನತ್ವವು, ಆಧಾರವಾದ ಈಶ್ವರತ್ವವು, ಹೆಚ್ಚು ಹೆಚ್ಚಾಗಿ ತೋರಿಕೊಳ್ಳುತ್ತಿರುವದು. ಮಾನವನ ಇತಿಹಾಸವೆಲ್ಲ ಇಷ್ಟೆ. ತೆರೆಯು, ಹೆಚ್ಚು ಹೆಚ್ಚು ತೆಳವಾಗುತ್ತಾಹೋಗುತ್ತಿದೆ, ಅದರ ಹಿಂದುಗಡೆ ಇರುವ ಪ್ರಕಾಶವು ಹೆಚ್ಚು ಹೆಚ್ಚಾಗಿ ಬೆಳಗುತ್ತಾ ಇದೆ, ಏಕೆಂದರೆ ಬೆಳಗುವದೇ ಅದರ ಸ್ವಭಾವವು.

ಅದನ್ನು ಅರಿತುಕೊಳ್ಳುವದಾಗುವದಿಲ್ಲ, ನಾವು ಅದನ್ನು ಅರಿತು ಕೊಳ್ಳಬೇಕೆಂದು ಮಾಡುವ ಪ್ರಯತ್ನವು ವ್ಯರ್ಥವು. ಅದು ನಿಜವಾಗಿಯೂ ಜ್ಞೇಯವಾಗಿದ್ದರೆ ಈಗಿನ ಸ್ವರೂಪವೇ ಅದಕ್ಕಿಲ್ಲದೆ ಹೋಗಿಬಿಡುತ್ತಿತ್ತು, ಏಕೆಂದರೆ ಅದು ನಿತ್ಯವಿಷಯಿಯಾಗಿರುತ್ತದೆ.* ಅರಿಯುವದೆಂಬುದೊಂದು ಪರಿಚ್ಛೇದವು, ಅರಿಯುವದೆಂದರೆ ವಿಷಯವಾಗಿ ಮಾಡಿಕೊಳ್ಳುವದೆಂದರ್ಥ. ಆತನು ಪ್ರತಿಯೊಂದಕ್ಕೆ ನಿತ್ಯವಿಷಯಿಯಾಗಿರುತ್ತಾನೆ. ಈ ಪ್ರಪಂಚದಲ್ಲಿರುವ ನಿತ್ಯಸಾಕ್ಷಿಯಾಗಿರುತ್ತಾನೆ, ನಿಮ್ಮ ಆತ್ಮನೇ ಆಗಿರುತ್ತಾನೆ. ಅರಿಯುವದೆಂಬುದು, ಇದಕ್ಕಿಂತ ಕಡಿಮೆಯ ಸ್ಥಿತಿ, ಆ ಸ್ಥಿತಿಯಿಂದ ಭ್ರಂಶವಾದದ್ದೇ* ಎಂದು ಹೇಳಬಹುದು. ನಾವು ಈ ನಿತ್ಯ ವಿಷಯಿಯಾಗಿಯೇ ಇದ್ದುಕೊಂಡಿರುವೆವು; ಹೀಗಿರುವಲ್ಲಿ ಅದನ್ನು ಅರಿತುಕೊಳ್ಳುವದೆಂಬುದು ಹೇಗೆ? ಅದು ಪ್ರತಿಯೊಬ್ಬನ ಪರಮಾರ್ಥಸ್ವರೂಪವೇ ಆಗಿರುವದರಿಂದ ಅದನ್ನು ಪ್ರಕಟಗೊಳಿಸುವದಕ್ಕೆಂದು ಅವನು ಬಗೆಬಗೆಯಾಗಿ ಹೆಣಗುತ್ತಲಿದ್ದಾನೆ. ಹಾಗಿಲ್ಲದಿದ್ದರೆ ಇಷ್ಟೊಂದು ನೀತಿನಿಯಮಗಳೇಕೆ ಆದವು? ನೀತಿ ಶಾಸ್ತ್ರಕ್ಕೆಲ್ಲ ಆಧಾರವಾದರೂ ಏನು? ನೀತಿ ಶಾಸ್ತ್ರ ಸಿದ್ಧಾಂತಗಳಿಗೆಲ್ಲ ಒಂದೇ ಒಂದು ಭಾವನೆಯು ಕೇಂದ್ರೀಭೂತವಾಗಿ ನಿಂತಿರುತ್ತದೆ, ಇದನ್ನೇ ಬೇರೆಬೇರೆಯ ರೂಪಗಳಲ್ಲಿ ತಿಳಿಸುತ್ತಿದ್ದಾರೆ. ಅದು ಯಾವದೆಂದರೆ ಪರೋಪಕಾರ, ಮಾನವರಲ್ಲಿ ದಯೆ, ಸಕಲ ಪ್ರಾಣಿಗಳಲ್ಲಿಯೂ

* ಅಂತಃಕರಣದಲ್ಲಿ ವೃತ್ತಿಯೆಂಬ ಹೆಸರಿನ ಮಾರ್ಪಾಡನ್ನೇ ನಾವು 'ಅರಿಯುವುದು' ಎಂದು ಕರೆಯುತ್ತೇವೆ. ವೃತ್ತಿಯೆಂಬ ಅಂತಃಕರಣವಿಕಾರವನ್ನೂ ನೋಡುವ ಸಾಕ್ಷಿಚೈತನ್ಯವನ್ನು ವೃತ್ತಿಯು ಹೇಗೆ ವಿಷಯಾಕರಿಸಿಕೊಂಡೀತು? ವೃತ್ತಿಜ್ಞಾನಕ್ಕೆ ಹೊರಗಿನದೆಲ್ಲವೂ ವಿಷಯ ವಾಗುವದು. ಆದರೆ ಸಾಕ್ಷಿಚೈತನ್ಯವು ಅದನ್ನೂ ವಿಷಯೀಕರಿಸಿಕೊಳ್ಳುವದು ಎಂದು ಭಾವ.

ದಯೆ ಎಂಬುದು ಮಾನವವರ್ಗದ ಮುಖ್ಯ ಉದ್ದೇಶವಾಗಿರಬೇಕು – ಎಂಬುದೇ ಅದು. ಆದರೆ ಇದೆಲ್ಲ 'ನಾನು ಇಡಿಯ ಬ್ರಹ್ಮಾಂಡವೇ, ಒಂದೇ ಒಂದು ತತ್ತ್ವವು' ಎಂಬ ನಿತ್ಯಸಿದ್ಧತತ್ತ್ವದ ರೂಪಾಂತರಗಳೇ ಹೊರತು ಬೇರೆಯಲ್ಲ. ಹಾಗಿಲ್ಲದಿದ್ದರೆ ಇದಕ್ಕೆ ಕಾರಣವೇನು? ನಾನು ಮತ್ತೊಬ್ಬರಿಗೆ ಏಕೆ ಉಪಕಾರಮಾಡಬೇಕು? ಹಾಗೆ ಮಾಡಲೇಬೇಕೆಂದು ನನ್ನನ್ನು ಬಲಾತ್ಕರಿಸುವದು ಯಾವದು? ಇದೇ ಸಹಾನುಭೂತಿಯು, ಎಲ್ಲೆಲ್ಲಿಯೂ ಇರುವ ಸಮಭಾವನೆಯು. ಅತ್ಯಂತ ಕಠಿನ ಹೃದಯರು ಕೂಡ ಕೆಲವು ವೇಳೆಗಳಲ್ಲಿ ಬೇರೆ ಪ್ರಾಣಿಗಳ ವಿಷಯದಲ್ಲಿ ಸಹಾನುಭೂತಿಯನ್ನು ತೋರಿಸುತ್ತಾರೆ. ಈ ಕಲ್ಪಿತ ವ್ಯಕ್ತಿಯು ಭ್ರಾಂತಿಯೆಂದೂ ಈ ತೋರಿಕೆಯ ವ್ಯಕ್ತಿತ್ವವನ್ನು ಬಿಡದೆ ಅದಕ್ಕೆ ಅಂಟಿಕೊಂಡಿರುವದು ಅನಾರ್ಯನೀತಿಯೆಂದೂ ಹೇಳಿದರೆ ಬೆಚ್ಚಿಬೀಳುವವನು ಕೂಡ, ನೀತಿಗೆಲ್ಲ ಸ್ವಾರ್ಥತ್ಯಾಗವೇ ಮೂಲವೆಂದು ತಾನೇ ಹೇಳುತ್ತಿರುತ್ತಾನೆ. ಆದರೆ ಪರಿಪೂರ್ಣವಾದ ಸ್ವಾರ್ಥತ್ಯಾಗವೆಂದರೆ ಯಾವದು? ಈ ತೋರಿಕೆಯ ಆತ್ಮನನ್ನು ಕೈಬಿಟ್ಟುಬಿಡುವದೇ, ಎಲ್ಲಾ ಬಗೆಯ ಸ್ವಾರ್ಥವನ್ನೂ ಬಿಟ್ಟುಬಿಡುವದೇ. ನಾನು, ನನ್ನದು ಎಂಬ ಈ ಅಹಂಕಾರ ಮಮಕಾರವು ಹಿಂದಿನ ಅಂಧವಿಶ್ವಾಸದ ಫಲವು. ಈಗಿನ ಈ ನಾನು ಎಷ್ಟೆಷ್ಟು ಹೋಗಿ ಬಿಡುವದೋ ಅಷ್ಟುಷ್ಟು ನಿಜವಾದ ನಾನು ಪ್ರಕಟವಾಗುವದು. ಇದೇ ನಿಜವಾದ ಸ್ವಾರ್ಥತ್ಯಾಗವು, ನೀತಿಬೋಧೆಗೆಲ್ಲ ಇದೇ ಕೇಂದ್ರವು, ಇದೇ ಆಧಾರವು, ಇದೇ ತಿರುಳು. ಮನುಷ್ಯನಿಗೆ ಇದು ತಿಳಿದಿರಲಿ, ತಿಳಿಯದಿರಲಿ, ಇಡಿಯ ಭೂಮಂಡಲವೇ ಆ ಕಡೆಗೆ ಹೋಗುತ್ತಿರುವದು, ಸ್ವಲ್ಪವಾದರೂ ಅದನ್ನೇ ಆಚರಣೆಯಲ್ಲಿ ತರುತ್ತಿರುವದು. ಆದರೆ ಮಾನವರಲ್ಲಿ ಬಹುಜನರು ಅದನ್ನು ಅರಿಯದೆ ಅನುಸರಿಸುತ್ತಿರುವರು, ಅಷ್ಟೆ. ಅದನ್ನು ಅರಿತು ಅನುಸರಿಸಲಿ; ಈ ಅಹಂಕಾರಮಮಕಾರವು ನಿಜವಾದ ಆತ್ಮನಲ್ಲ, ಪರಿಚ್ಛೇದ ಮಾತ್ರವಾಗಿರುತ್ತದೆ–ಎಂದು ತಿಳಿದು ಸ್ವಾರ್ಥತ್ಯಾಗವನ್ನು ಮಾಡಲಿ. ಎಲ್ಲಕ್ಕೂ ಆಚೆಯಿರುವ ಆ ಅನಂತಸತ್ತೆಯು ಎಲ್ಲಿಯೋ ಒಂದು ಝಳುಕು, ಎಲ್ಲವೂ ತಾನೇ ಆಗಿರುವ ಆ ಅನಂತಾಗ್ನಿಯು ಎಲ್ಲಿಯೋ ಒಂದು ಕಿಡಿಯು, ಈಗಿನ ಮಾನವನಾಗಿರುವದು; ಈ ಅನಂತವೇ ನಿಜವಾಗಿ ಅವನ ಪರಮಾರ್ಥ ಸ್ವರೂಪವಾಗಿರುತ್ತದೆ.

ಈ ತಿಳುವಳಿಕೆಯ ಉಪಯೋಗವು, ಕಾರ್ಯವು, ಅಂದರೆ ಫಲಿತಾಂಶವು, ಏನು? ಈಗಿನ ಕಾಲದಲ್ಲಿ ಪ್ರತಿಯೊಂದನ್ನೂ ಅದರ ಉಪಯೋಗದಿಂದ – ಎಂದರೆ ಅದರ ಬೆಲೆ ಎಷ್ಟು ಪೌಂಡು, ಷಿಲಿಂಗು, ಪೆನಿಗಳಾಗುವವೆಂಬದರಿಂದ

– ಅಳೆಯಬೇಕಾಗಿರುತ್ತದೆ. ಆದರೆ ತತ್ತ್ವದ ಯೋಗ್ಯತೆಯನ್ನು ಉಪಯೋಗದ ಅಥವಾ ಹಣದ ಮಾನದಿಂದ ಅಳೆದೇ ನಿರ್ಣಯಿಸಬೇಕೆಂದು ಕೇಳುವದಕ್ಕೆ ಕಾರಣವೇನು? ಅದಕ್ಕೆ ಉಪಯೋಗವೇ ಇಲ್ಲವೆಂದು ಇಟ್ಟುಕೊಳ್ಳೋಣ. ಆದ ಮಾತ್ರಕ್ಕೆ ಅದು ಅಪರಮಾರ್ಥವಾದೀತೇನು? ಉಪಯೋಗವೆಂಬುದೇನೂ ತತ್ತ್ವಕ್ಕೆ ಒರೆಗಲ್ಲಲ್ಲ. ಹೀಗಿದ್ದರೂ ಈ ಜ್ಞಾನದಿಂದ ಆಗುವ ಅತ್ಯಂತ ಹೆಚ್ಚಿನ ಪ್ರಯೋಜನವೂ ಇದೆ. ಹೇಗೆಂದರೆ, ಪ್ರತಿಯೊಬ್ಬನೂ ಸುಖವನ್ನೇ ಪಡೆಯಬೇಕೆಂದೇ ಹವಣಿಸುತ್ತಿದ್ದಾನೆಂಬುದು ತಿಳಿದೇ ಇದೆ; ಆದರೆ ಬಹುಜನರು ನಶ್ವರವಾಗಿರುವ ಅಸತ್ಯಪದಾರ್ಥಗಳಲ್ಲಿಯೇ ಅದು ಸಿಕ್ಕುವದೆಂದು ತಿಳಿದುಕೊಂಡಿರುತ್ತಾರೆ. ಇಂದ್ರಿಯಗಳಲ್ಲಿ ಎಂದಿಗೂ ಸುಖವು ಸಿಕ್ಕಿದ್ದಿಲ್ಲ; ಇಂದ್ರಿಯಗಳಲ್ಲಾಗಲಿ ಇಂದ್ರಿಯಭೋಗದಲ್ಲಾಗಲಿ ಸುಖವನ್ನು ಯಾರೂ ಎಂದಿಗೂ ಕಂಡದ್ದೇ ಇಲ್ಲ. ಸುಖವೆಂಬುದು ನಿಜವಾಗಿ ಆತ್ಮಚೈತನ್ಯದಲ್ಲಿಯೇ ಸಿಕ್ಕತಕ್ಕದ್ದು. ಆದ್ದರಿಂದ ಈ ಚೈತನ್ಯದಲ್ಲಿರುವ ಸುಖವನ್ನು ಕಂಡುಕೊಳ್ಳುವದರಿಂದ ಮಾನವನು ಅತ್ಯಂತ ಪರಮಪುರುಷಾರ್ಥವನ್ನು ಪಡೆದುಕೊಂಡಂತಾಗುವದು. ಇನ್ನೊಂದು ವಿಷಯವೇನೆಂದರೆ ಅಜ್ಞಾನವೆಂಬುದು ಸಕಲದುಃಖಕ್ಕೂ ತೌರುಮನೆಯಾಗಿರುತ್ತದೆ: ಅನಂತವಾಗಿರುವ ಪರಮಾತ್ಮನು ಅತ್ತೂ ಕರೆದೂ ಮಾಡುವನೆಂದೂ ಆತನು ಪರಿಚ್ಛಿನ್ನನಾಗಿರುವನೆಂದೂ ಎಣಿಸುವದೇ ಎಲ್ಲಕ್ಕೂ ಮೂಲವಾದ ಅಜ್ಞಾನವು. ಅಮೃತಸ್ವರೂಪರಾಗಿ ನಿತ್ಯಶುದ್ಧರಾಗಿ ನಿತ್ಯಮುಕ್ತ ಚೈತನ್ಯರಾಗಿರುವ ನಾವು ಅಲ್ಪಮಾತ್ರವಾದ ಮನಸ್ಸುಗಳೆಂದೂ ಅಲ್ಪಮಾತ್ರವಾದ ಶರೀರಗಳೆಂದೂ ಎಣಿಸಿಕೊಳ್ಳುತ್ತೇವಲ್ಲ, ಇದೇ ಎಲ್ಲಾ ಅಜ್ಞಾನಕ್ಕೂ ಅಡಿಗಟ್ಟು; ಇದೇ ಎಲ್ಲಾ ಬಗೆಯ ಸ್ವಾರ್ಥತೆಗೂ ತಾಯಿಯು. ನಾನು ಅಲ್ಪಮಾತ್ರವಾದ ಶರೀರನೆಂದು ಎಣಿಸಿಕೊಂಡಕೂಡಲೇ ಮಿಕ್ಕ ಶರೀರಗಳಿಗೆ ಹಿಂಸೆಯನ್ನಾದರೂ ಮಾಡಿ ಅದನ್ನು ನಿಲ್ಲಿಸಕೊಳ್ಳಬೇಕೆಂದೂ ಅದನ್ನು ಕಾಪಾಡಿಕೊಳ್ಳಬೇಕೆಂದೂ ಅದನ್ನು ಅಲಂಕರಿಸಿಕೊಳ್ಳಬೇಕೆಂದೂ ನನಗೆ ಇಚ್ಛೆಯಾಗುವದು. ಆಗ ನಾನೂ ನೀನೂ ಬೇರೆ ಬೇರೆಯಾಗುವೆವು. ಈ ಭೇದಬುದ್ಧಿಯು ಬಂದ ಒಡನೆ ಎಲ್ಲಾ ಬಗೆಯ ಅಸುರಕೃತ್ಯದ ಹೆಬ್ಬಾಗಿಲನ್ನೂ ತೆರೆದಂತಾಗುವದು, ಅದರಿಂದ ಎಲ್ಲಾ ಬಗೆಯ ದುಃಖವೂ ಉಂಟಾಗುವದು. ಇದೇ ಈ ಜ್ಞಾನದ ಪ್ರಯೋಜನವು; ಇಂದು ಬದುಕಿರುವ ಮಾನವ ಪ್ರಾಣಿಗಳಲ್ಲಿ ಬಹು ಸ್ವಲ್ಪ ಭಾಗದ ಜನರು ಕೂಡ ಸ್ವಾರ್ಥಬುದ್ಧಿಯನ್ನೂ ಸಂಕುಚಿತಬುದ್ಧಿಯನ್ನೂ ಅಲ್ಪತ್ವಬುದ್ಧಿಯನ್ನೂ ಬದಿಗಿಡ ಬಲ್ಲರಾದರೆ ಈ ಭೂಮಿಯು ನಾಳೆಯೇ ಸ್ವರ್ಗವಾಗುವದು; ಆದರೆ ಬರಿಯ ಯಂತ್ರಗಳನ್ನೂ ಭೌತಿಕ ವಿಜ್ಞಾನದ ತಿದ್ದುಪಾಟಗಳನ್ನೂ ನಂಬಿದರೆ ಅದು

ಎಂದಿಗೂ ಆಗುವ ಸಂಭವವೇ ಇರುವದಿಲ್ಲ. ಬೆಂಕಿಗೆ ಎಣ್ಣೆಯನ್ನು ಸುರಿದರೆ ಉರಿಯ ಜ್ವಾಲೆಗಳು ಮತ್ತಷ್ಟು ದೊಡ್ಡವಾಗುವಂತೆ ಇವುಗಳಿಂದ ದುಃಖವೇ ಹೆಚ್ಚುವದು. ಆತ್ಮಜ್ಞಾನವಿಲ್ಲದೆ ಇದ್ದರೆ ಭೌತಿಕವಿಜ್ಞಾನವು ಎಷ್ಟೇ ಬೆಳೆದರೂ ಅದೆಲ್ಲ ಬೆಂಕಿಗೆ ಇನ್ನಷ್ಟು ಕಟ್ಟಿಗೆಯನ್ನು ಹಾಕಿದಂತಾಗುವದು, ಸ್ವಾರ್ಥಪುರುಷನ ಕೈಗೆ ಮತ್ತೊಂದು ಆಯುಧವನ್ನು ಕೊಟ್ಟು ಮತ್ತೊಬ್ಬರ ಸ್ವತ್ತನ್ನು ಕಸಿದುಕೊಳ್ಳುವದಕ್ಕೂ ಮತ್ತೊಬ್ಬರಿಗಾಗಿ ತನ್ನ ಪ್ರಾಣವನ್ನು ಒಪ್ಪಿಸುವದರ ಬದಲು ಮತ್ತೊಬ್ಬರ ಪ್ರಾಣವನ್ನುಪಯೋಗಿಸಿಕೊಂಡು ತಾನು ಬದುಕಿರುವದಕ್ಕೆ ಸಹಾಯವಾಡಿದಂತಾಗುವದು ಅಷ್ಟೆ.

ಇದನ್ನು ಅನುಷ್ಠಾನಕ್ಕೆ ತರಬಹುದೆ? – ಎಂಬುದು ಮತ್ತೊಂದು ಪ್ರಶ್ನೆ. ಈಗಿನ ಸಮಾಜದಲ್ಲಿ ಇದನ್ನು ನಡೆವಳಿಗೆ ತರಬಹುದೆ? ಎಂದು ಜನರು ಕೇಳುತ್ತಾರೆ. ತತ್ತ್ವವೆಂಬುದು ಹಿಂದಿನ ಅಥವಾ ಈಗಿನ ಯಾವ ಸಮಾಜಕ್ಕೂ ತಲೆಬಾಗುವಂತಿಲ್ಲ; ಸಮಾಜವೇ ತತ್ತ್ವಕ್ಕೆ ತಲೆಬಾಗಬೇಕು, ಇಲ್ಲದಿದ್ದರೆ ಹಾಳಾಗಿ ಹೋಗಬೇಕು. ಸಮಾಜಗಳು ತತ್ತ್ವದ ಆಧಾರದ ಮೇಲೆ ರೂಪಿತವಾಗಬೇಕೇ ಹೊರತು ತತ್ತ್ವವು ಸಮಾಜಕ್ಕೆ ತಕ್ಕಂತೆ ಮಾರ್ಪಡಬೇಕಾದದ್ದೇನೂ ಇರುವದಿಲ್ಲ. ಅಸ್ವಾರ್ಥದಂಥ ಘನತತ್ತ್ವವನ್ನು ಸಮಾಜದಲ್ಲಿ ಆಚರಣೆಗೆ ತರುವದು ಆಗದೆ ಇದ್ದರೆ ಮನುಷ್ಯನು ಸಮಾಜವನ್ನು ಬಿಟ್ಟು ಕಾಡಿಗೆ ಹೋಗುವದು ಮೇಲು. ಅಂಥವನೇ ಧೀರನು. ಧೈರ್ಯದಲ್ಲಿ ಎರಡು ಬಗೆಯುಂಟು. ಗುಂಡಿನ ಎದುರಿನಲ್ಲಿ ನಿಲ್ಲುವ ಧೈರ್ಯವೊಂದು, ಆಧ್ಯಾತ್ಮಜ್ಞಾನ ನಿಷ್ಠೆಯಿಂದಾದ ಧೈರ್ಯವು ಮತ್ತೊಂದು. ಭರತಖಂಡದ ಮೇಲೆ ದಂಡಯಾತ್ರೆಯನ್ನು ಮಾಡಿದ ಒಬ್ಬಾನೊಬ್ಬ ಚಕ್ರವರ್ತಿಯು* ಗುರುವು ಅಲ್ಲಿರುವ ಕೆಲವು ಜನ ಋಷಿಗಳನ್ನು ನೋಡುವಂತೆ ಅವನಿಗೆ ಹೇಳಿದನು. ಬಹಳ ಹೊತ್ತು ಹುಡುಕಿದ ಮೇಲೆ ಒಂದು ಬಂಡೆಯ ಮೇಲೆ ಕುಳಿತಿದ್ದ ಒಬ್ಬ ಹಣ್ಣು ಹಣ್ಣು ಮುದುಕನು ಕಣ್ಣಿಗೆ ಬಿದ್ದನು. ಆತನೊಡನೆ ಸ್ವಲ್ಪಹೊತ್ತು ಸಂಭಾಷಣೆಯಾದ ಬಳಿಕ ಅವನ ಜ್ಞಾನವನ್ನು ಕಂಡು ಚಕ್ರವರ್ತಿಗೆ ತುಂಬ ಆಶ್ಚರ್ಯವಾಯಿತು. "ನನ್ನೊಡನೆ ನಮ್ಮ ದೇಶಕ್ಕೆ ಬರುವಿರಾ?" ಎಂದು ಕೇಳಲು ಆತನು "ಇಲ್ಲ, ನನ್ನ ಈ ಕಾಡೇ ನನಗೆ ಸಾಕು" ಎಂದನು. ಚಕ್ರವರ್ತಿಯು "ನಿಮಗೆ ಹಣವನ್ನೂ ಅಧಿಕಾರವನ್ನೂ ಸಂಪತ್ತನ್ನೂ ಕೊಡುವೆನು. ನಾನು ಭೂಮಂಡಲದ ಚಕ್ರಾಧಿಪತಿಯು" ಎಂದನು. ಇದಕ್ಕೆ ಆತನು "ಬೇಡ, ಆ ಪದಾರ್ಥಗಳು ಯಾವವೂ ನನಗೆ ಬೇಕಿರುವದಿಲ್ಲ" ಎಂದನು. ಆಗ ಚಕ್ರವರ್ತಿಯು "ನೀನು ಬರುವದಿಲ್ಲವಾದರೆ ನಿನ್ನನ್ನು ಕೊಂದು ಹಾಕುವೆನು" ಎನ್ನಲು ಆತನು

* ಈತನೇ ಜಗಜ್ಜೇತನೆಂದು ಪ್ರಸಿದ್ಧನಾಗಿದ್ದ ಅಲೆಕ್ಸಾಂಡರನು.

ಶಾಂತತೆಯಿಂದ ನಸುನಗುತ್ತಾ "ಚಕ್ರಾಧಿಪನೆ, ನೀನು ಇದಕ್ಕಿಂತ ಹೆಚ್ಚಿನ ಸುಳ್ಳನ್ನು ಎಂದೂ ಹೇಳಲಿಲ್ಲ. ಏಕೆಂದರೆನೀನು ನನ್ನನ್ನು ಕೊಲ್ಲುವದಕ್ಕಾಗುವಹಾಗಿಲ್ಲ. ನನ್ನನ್ನು ಬಿಸಿಲು ಒಣಗಿಸಲಾರದು, ಬೆಂಕಿಯು ಸುಡಲಾರದು, ಕತ್ತಿಯು ಕೊಲ್ಲಲಾರದು; ನಾನು ಜನನವಿಲ್ಲದ, ಮರಣವಿಲ್ಲದ, ಎಂದೆಂದಿಗೂ ಇರುವ, ಸರ್ವಶಕ್ತಸರ್ವವ್ಯಾಪಕ ಚೈತನ್ಯ ಮಾತ್ರವಾಗಿರುತ್ತೇನೆ" ಎಂದನು. ಇದೇ ಆಧ್ಯಾತ್ಮಿಕ ಧೈರ್ಯವು; ಇನ್ನೊಂದು ಬಗೆಯ ಧೈರ್ಯವನ್ನು ಹೇಳಿದೆನಲ್ಲ, ಅದು ಸಿಂಹದ ಅಥವಾ ಹುಲಿಯ ಧೈರ್ಯವು. ಕ್ರಿ.ಶ.1857ರಲ್ಲಿ ನಡೆದ ಸಿಪಾಯಿದಂಗೆಯಲ್ಲಿ ಒಬ್ಬ ಸ್ವಾಮಿಯನ್ನು, ಒಬ್ಬ ಮಹಾತ್ಮನನ್ನು, ಮಹಮ್ಮದೀಯ ದಂಗೇಕೋರನೊಬ್ಬನು ಬಲವಾಗಿ ತಿವಿದನು. ಹಿಂದು ದಂಗೆಕೋರರು ಅವನನ್ನು ಹಿಡಿದು ತಂದು "ಸ್ವಾಮಿ, ಇವನನ್ನು ಕೊಂದುಹಾಕುತ್ತೇವೆ" ಎಂದರು. ಆದರೆ ಆ ಸ್ವಾಮಿಯು ಶಾಂತತೆಯಿಂದ ಕತ್ತೆತ್ತಿ ನೋಡಿ, "ಅಣ್ಣ, ನೀನು ಆತನೆ, ನೀನು ಆತನೆ!" ಎಂದು ಪ್ರಾಣವನ್ನು ಬಿಟ್ಟನು. ಇದು ಮತ್ತೊಂದು ಉದಾಹರಣೆಯು. ತತ್ತ್ವವನ್ನು ನಿಮ್ಮ ಸಮಾಜಕ್ಕೆ ಹೊಂದಿಸಿಕೊಳ್ಳಲಾರದೆ ಇದ್ದರೆ, ಪರಮಾರ್ಥತತ್ತ್ವವು ಹೊಂದುಗಡೆಯಾಗುವಂಥ ಸಮಾಜವನ್ನು ನೀವು ರಚನೆ ಮಾಡಿಕೊಳ್ಳಲಾರದೆ ಇದ್ದರೆ, ನಿಮ್ಮ ಬಾಹು ಬಲವನ್ನೂ ನಿಮ್ಮ ಪಾಶ್ಚಾತ್ಯ ಸಂಸ್ಥೆಗಳ ಮೇಲ್ಮೆಯನ್ನೂ ಕೊಚ್ಚಿಕೊಳ್ಳುವದರಿಂದ ಪ್ರಯೋಜನವೇನು? ನೀವು ಎದ್ದು ನಿಂತು "ಈ ಧೈರ್ಯವನ್ನು ಅನುಷ್ಠಾನಕ್ಕೆ ತರುವದು ಆಗಲಾರದು" ಎಂದು ಹೇಳುವದಾದರೆ ನಿಮ್ಮ ಮಹಿಮೆಯನ್ನೂ ಮಾಹಾತ್ಮ್ಯೆಯನ್ನೂ ಹೆಮ್ಮೆಯಿಂದ ಕೊಂಡಾಡಿಕೊಳ್ಳುವದರ ಉಪಯೋಗವೇನು? ಪೌಂಡು, ಷಿಲಿಂಗು, ಪೆನಿ - ಇವುಗಳಲ್ಲದೆ ಮತ್ತೆ ಯಾವದೂ ಆಚರಣೆಗೆ ಬರತಕ್ಕದ್ದಲ್ಲವೇನು? ಹಾಗಿದ್ದರೆ ನಿಮ್ಮ ಸಮಾಜವನ್ನು ಹೊಗಳಿಕೊಳ್ಳುವಿರೇಕೆ? ಯಾವ ಸಮಾಜದಲ್ಲಿ ಅತ್ಯಂತ ಪರಮತತ್ತ್ವಗಳು ಆಚರಣೆಗೆ ಬರುವಹಾಗಿರುವವೋ? ಅದೇ ಅತ್ಯುತ್ತಮ ಸಮಾಜವು - ಇದೇ ನನ್ನ ಅಭಿಪ್ರಾಯವು. ಸಮಾಜವು ಅತ್ಯಂತ ಪರಮಾರ್ಥವಾದ ತತ್ತ್ವಗಳಿಗೆ ತಕ್ಕದ್ದಲ್ಲವಾಗಿದ್ದರೆ, ಅದನ್ನು ತಕ್ಕದ್ದನ್ನಾಗಿ ಮಾಡಿಕೊಳ್ಳಿರಿ; ಎಷ್ಟು ಬೇಗ ಮಾಡಿಕೊಂಡರೆ ಅಷ್ಟು ಒಳ್ಳೆಯದು. ಸ್ತ್ರೀಪುರುಷರೆಲ್ಲ ಈ ಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟುಕೊಂಡು ಎದ್ದು ನಿಲ್ಲಿರಿ. ಧೈರ್ಯದಿಂದ ತತ್ತ್ವವನ್ನು ನಂಬಿರಿ, ಧೈರ್ಯದಿಂದ ತತ್ತ್ವವನ್ನು ಅನುಷ್ಠಾನಕ್ಕೆ ತನ್ನಿರಿ. ಈ ಲೋಕಕ್ಕೆ ಕೆಲವು ನೂರು ಇಂಥ ಧೀರರಾದ ಪುರುಷರೂ ಸ್ತ್ರೀಯರೂ ಬೇಕಾಗಿದ್ದಾರೆ. ತತ್ತ್ವವನ್ನು ಧೈರ್ಯದಿಂದ ತಿಳಿಯುವದಕ್ಕೆ ಯತ್ನಿಸುವ. ಜೀವನದಲ್ಲಿ ತತ್ತ್ವವನ್ನು ಧೈರ್ಯದಿಂದ ಆಚರಣೆಗೆ ತಂದು ತೋರಿಸುವ,

ಮರಣವೆಂದರೆ ಗಡಗಡನೆ ನಡುಗದ – ಅಷ್ಟೇ ಅಲ್ಲ, ಮರಣವನ್ನು ಬಾರೆಂದು ಸ್ವಾಗತೀಕರಿಸುವ, "ನಾನು ಚೈತನ್ಯವು, ನನ್ನನ್ನು ಈ ವಿಶ್ವದಲ್ಲಿ ಯಾವದೊಂದು ಕೊಲ್ಲಲಾರದು" – ಎಂದು ಮಾನವನು ಅರಿತುಕೊಳ್ಳುವಂತೆ ಮಾಡುವಂಥ, ಧೈರ್ಯವನ್ನು ಅಭ್ಯಾಸದಲ್ಲಿಡಿರಿ. ಆಗ ನೀವು ಮುಕ್ತರಾಗುವಿರಿ, ಆಗ ನಿಮ್ಮ ನಿಜವಾದ ಆತ್ಮವನ್ನು ನೀವು ಅರಿತುಕೊಳ್ಳುವಿರಿ!

'ಈ ಆತ್ಮನನ್ನು ಮೊದಲು ಶ್ರವಣಮಾಡಬೇಕು, ಆಮೇಲೆ ಮನನ ಮಾಡಬೇಕು. ಆಮೇಲೆ ಚಿಂತನೆಮಾಡಬೇಕು.' ಈಗಿನ ಕಾಲದಲ್ಲಿ ಕೆಲಸವನ್ನು ಅತಿಯಾಗಿ ಹೊಗಳುವ, ವಿಚಾರವನ್ನು ಜರಿಯುವ, ಒಲವು ಬಹಳವಾಗಿ ಕಾಣಬರುತ್ತಿದೆ. ಕೆಲಸ ಮಾಡುವದೇನೋ ಒಳ್ಳೆಯದೆ, ಆದರೆ ಅದು ವಿಚಾರದಿಂದಲೇ ಬರಬೇಕಾಗಿರುತ್ತದೆ. ಮಾಂಸಖಂಡಗಳ ಮೂಲಕ ಹೊರತೋರುವ ಸಣ್ಣಸಣ್ಣ ಶಕ್ತಿವಿಶೇಷಗಳೇ ಕ್ರಿಯೆಯೆನಿಸುವವು. ಆದರೆ ಎಲ್ಲಿ ಮನನವಿಲ್ಲವೋ ಅಲ್ಲಿ ಕ್ರಿಯೆಯೂ ಇರುವದಿಲ್ಲ. ಆದ ಕಾರಣ ಮಹಾ ವಿಚಾರವನ್ನೂ ಅತ್ಯಂತ ಉನ್ನತವಾದ ಹೆಗ್ಗುರಿಗಳನ್ನೂ ನಿಮ್ಮ ಮೆದುಳಿನಲ್ಲಿ ತುಂಬಿಕೊಳ್ಳಿರಿ, ಹಗಲೂ ಇರುಳೂ ಅವುಗಳನ್ನು ನಿಮ್ಮ ಲಕ್ಷ್ಯದಲ್ಲಿಡಿರಿ. ಹೀಗೆ ಮಾಡಿದರೆ ಮಹಾಕ್ರಿಯೆಯು ಉತ್ಪನ್ನವಾಗುವದು. ಅಶುದ್ಧಿಯ ವಿಚಾರದಲ್ಲಿ ಮಾತನಾಡದಿರಿ, 'ನಾವು ಪರಿಶುದ್ಧರು' ಎಂದು ಕೊಳ್ಳುತ್ತಿರಿ. 'ನಾವು, ಅಲ್ಪರು, ನಾವು ಹುಟ್ಟಿರುವೆವು, ನಾವು ಸಾಯುವೆವು' ಎಂದು ನಿತ್ಯ ಭಯದ ಸ್ಥಿತಿಯಲ್ಲಿರುವಂತೆ ನಮಗೆ ನಾವು ಮಂತ್ರಹಾಕಿಕೊಂಡು ಬಿಟ್ಟಿರುತ್ತೇವೆ.

ಒಂದು ಹೆಣ್ಣು ಸಿಂಹದ ಕಥೆಯುಂಟು. ಅದು ಗರ್ಭಿಣಿಯಾಗಿರುವಾಗ ಆಹಾರವನ್ನು ಹುಡುಕಿಕ್ಕೊಂಡು ಹೋಗುತ್ತಿರಲು ದಾರಿಯಲ್ಲಿ ಒಂದು ಕುರಿಯ ಮಂದೆಯನ್ನು ಕಂಡು ಮೇಲೆ ಬಿದ್ದಿತು. ಆ ಪ್ರಯತ್ನದಲ್ಲಿ ಅದು ಸತ್ತು ಹೋಯಿತು, ಅದರ ಮರಿಯು ಹುಟ್ಟುತ್ತಲೇ ತಬ್ಬಲಿಯಾಯಿತು. ಕುರಿಗಳು ಆ ಮರಿಯನ್ನು ಸಾಕಿದವು. ಅವುಗಳ ಪೋಷಣೆಯಲ್ಲಿ ಬೆಳೆಯುತ್ತಾ ಅದು ಹುಲ್ಲನ್ನು ಮೇಯುತ್ತಾ ಕುರಿಗಳಂತೆಯೇ ಬ್ಯಾ, ಬ್ಯಾ! – ಎನ್ನುತ್ತಿತ್ತು. ಕಾಲಕ್ರಮದಲ್ಲಿ ಅದು ದೊಡ್ಡದಾಗಿ ಪೂರ್ಣಸಿಂಹವಾದರೂ ತಾನು ಕುರಿಯೆಂದೇ ಭಾವಿಸಿಕೊಂಡಿತ್ತು. ಒಂದು ದಿನ ಮತ್ತೊಂದು ಸಿಂಹವು ಆಹಾರಕ್ಕಾಗಿ ಅತ್ತ ಬಂದು ಈ ಕುರಿಯ ಹಿಂಡಿನಲ್ಲಿ ಒಂದು ಸಿಂಹವು ಇದ್ದುಕೊಂಡಿರುವದನ್ನೂ ತನಗೆ ಅಪಾಯವಾಗುವದೆಂದು ಕುರಿಗಳಂತೆಯೇ ಓಡುತ್ತಿರುವದನ್ನೂ ಕಂಡು ಬೆರಗಾಯಿತು. ಈ ಕುರಿ ಸಿಂಹದ ಹತ್ತಿರ ಹೋಗಿ 'ನೀನು ಕುರಿಯಲ್ಲ' –

ಎಂದು ಹೇಳೋಣವೆಂದು ಹತ್ತಿರಕ್ಕೆ ಹೋಗುತ್ತಲೂ ಆ ಬಡಪ್ರಾಣಿಯು ಅದು ಬರುತ್ತಿದ್ದ ಹಾಗೆಯೇ ಪಲಾಯನಮಾಡಿತು. ಆದರೂ ಸಿಂಹವು ಸಮಯವನ್ನು ಕಾಯುತ್ತಿತ್ತು. "ಒಂದು ದಿನ ಆ ಕುರಿಸಿಂಹವು ಮಲಗಿ ನಿದ್ರಿಸುತ್ತಿತ್ತು. ಅದರ ಬಳಿಗೆ ಬಂದು "ನೀನು ಸಿಂಹವಯ್ಯ." ಎಂದರೂ ಅದು "ನಾನು ಕುರಿಯೇ" ಎಂದು ತಾನು ಸಿಂಹವೆಂಬುದನ್ನು ನಂಬಲಾರದೆ ಬ್ಯಾ! ಬ್ಯಾ! ಎಂದಿತು. ಸಿಂಹವು ಒಂದು ಕೆರೆಯ ಬಳಿಗೆ ಅದನ್ನು ಎಳೆದುಕೊಂಡು ಹೋಗಿ "ಇಗೋ, ಇಲ್ಲಿ ನೋಡು! ಇದು ನನ್ನ ನೆರಳು, ಇದು ನಿನ್ನ ನೆರಳು" ಎಂದು ತೋರಿಸಿತು. ಆಗ ಸಾಮ್ಯವು ಮನಸ್ಸಿಗೆ ಹತ್ತಿತು. ಸಿಂಹವನ್ನೂ ತನ್ನ ನೆರಳನ್ನೂ ನೋಡಿದ ಒಂದು ಕ್ಷಣದೊಳಗಾಗಿ ಅದಕ್ಕೆ 'ನಾನು ಸಿಂಹವೇ' ಎಂಬ ಭಾವನೆಯು ಹೊಳೆಯಿತು. ಆಗ ಸಿಂಹವು ಗರ್ಜಿಸಿತು, ಬ್ಯಾ ಬ್ಯಾ ಧ್ವನಿಯು ಹೋಗಿಬಿಟ್ಟಿತು! ನೀವು ಸಿಂಹಗಳು, ನೀವು ಪರಿಶುದ್ಧರಾದ ಅನಂತರಾದ ನಿತ್ಯಮುಕ್ತರಾದ ಆತ್ಮರು. ಈ ವಿಶ್ವದ ಬಲವೆಲ್ಲ ನಿಮ್ಮೊಳಗಿರುತ್ತದೆ. "ಗೆಳೆಯನೆ, ಏಕೆ ಅಳುತ್ತಿರುವೆ? ನಿನಗೆ ಜನ್ಮವೂ ಇಲ್ಲ, ಮರಣವೂ ಇಲ್ಲ. ಏಕೆ ಅಳುತ್ತಿರುವೆ? ನಿನಗೆ ರೋಗವಿಲ್ಲ, ದುಃಖವಿಲ್ಲ, ನೀನು ಅನಂತವಾದ ಗಗನದಂತಿರುವೆ; ಬಗೆಬಗೆಯ ಬಣ್ಣದ ಮೋಡಗಳು ಬಂದು ಅಲ್ಲಿ ಒಂದು ಕ್ಷಣಹೊತ್ತು ಆಡುತ್ತಲಿದ್ದು ಆಮೇಲೆ ಮಾಯವಾಗುವುವು. ಆದರೆ ಆಕಾಶವು ಮಾತ್ರ ಎಂದೆಂದಿಗೂ ಆ ನಿತ್ಯ ನೀಲವಾದ ಆಕಾಶವೇ ಆಗಿರುತ್ತದೆ".*

ನಮಗೆ ಪ್ರಪಂಚದಲ್ಲಿ ಕೆಟ್ಟದೇಕೆ ತೋರುತ್ತಿದೆ? ಒಂದು ಮೋಟ ಮರವಿತ್ತು. ಕತ್ತಲೆಯಲ್ಲಿ ಆ ಕಡೆಗೆ ಬಂದ ಕಳ್ಳನೊಬ್ಬನು "ಇಗೋ, ಪೋಲೀಸಿನವನು" ಎಂದನು; ತನ್ನ ಪ್ರಿಯಳನ್ನು ನಿರೀಕ್ಷಿಸುತ್ತಿದ್ದ ತರುಣನೊಬ್ಬನು ಅದನ್ನು ಕಂಡು ತನ್ನ ನಲ್ಲೆಯೆಂದು ಭಾವಿಸಿಕೊಂಡನು; ದೆವ್ವದ ಕಥೆಗಳನ್ನು ಕೇಳಿದ್ದ ಒಂದು ಮಗುವು ಅದು ಒಂದು ಪಿಶಾಚಿಯೆಂದೆಣಿಸಿ ಕಿರಿಚುವದಕ್ಕೆ ಮೊದಲುಮಾಡಿತು. ಆದರೆ ಈ ಎಲ್ಲಾ ಕಾಲದಲ್ಲಿಯೂ ಅದು ಮೋಟು ಮರವೇ ಆಗಿದ್ದಿತು. ನಾವು ಹೇಗೆ ಇರುವೆವೋ ಪ್ರಪಂಚವೂ ನಮಗೆ ಹಾಗೆಯೇ, ಕಾಣಿಸುತ್ತದೆ. ಮೇಜಿನ ಮೇಲೆ ಸುವರ್ಣ ನಾಣ್ಯಗಳ ಥೈಲಿಯಿಟ್ಟಿರುವ ಕೋಣೆಯಲ್ಲಿ ಒಂದು ಮಗುವಿರುವದೆಂದೂ ಅಲ್ಲಿಗೆ ಒಬ್ಬ ಕಳ್ಳನು ಬಂದು ಅದನ್ನು ಕದ್ದು ಕೊಂಡು ಹೋಗುತ್ತಾನೆಂದೂ ಇಟ್ಟುಕೊಳ್ಳಿ; ಅದನ್ನು ಅವನು ಕದ್ದುಕೊಂಡು ಹೋದನೆಂಬುದು ಮಗುವಿಗೆ ತಿಳಿಯುವದೇನು? ನಮ್ಮೊಳಗೆ ಯಾವದಿದೆಯೋ

* ಇದು ಅವಧೂತಗೀತೆಯಲ್ಲಿರುವ ಕೆಲವು ಪದ್ಯಗಳ ಧ್ವನಿಮಾತ್ರವೆಂದು ತೋರುತ್ತದೆ.

ಅದೇ ಹೊರಗೂ ನಮಗೆ ಕಾಣಿಸುತ್ತದೆ. ಮಗುವಿನ ಒಳಗೆ ಕಳ್ಳನಿಲ್ಲ, ಆದ್ದರಿಂದ ಅದಕ್ಕೆ ಹೊರಗೂ ಕಳ್ಳನು ಕಾಣಿಸುವದಿಲ್ಲ. ಜ್ಞಾನವೆಂಬುದೆಲ್ಲ ಹೀಗೆಂಯೇ, ಪ್ರಪಂಚವೆಲ್ಲ ಕೆಟ್ಟುಹೋಗಿರುವದೆಂದೂ ಪಾಪಮಯವಾಗಿರುವದೆಂದೂ ಹೇಳದಿರಿ; ನಾನು ಇನ್ನೂ ದೋಷವನ್ನೇ ಕಾಣಬೇಕಾಗಿದೆಯಲ್ಲ! ಎಂದು ಶೋಕಿಸಿರಿ, ನಾನು ಇನ್ನೂ ಎಲ್ಲೆಲ್ಲಿಯೂ ಪಾಪವನ್ನೇ ಕಾಣಬೇಕಾಗಿರುವದಲ್ಲ! ಎಂದು ಶೋಕಿಸಿರಿ. ಪ್ರಪಂಚಕ್ಕೆ ಉಪಕಾರವಮಾಡಬೇಕೆಂದಿದ್ದರೆ ಅದನ್ನು ಬಯ್ಯಬೇಡಿ, ಅದನ್ನು ಇನ್ನಷ್ಟು ನಿರ್ಬಲ ಮಾಡಬೇಡಿರಿ. ಪಾಪವೆಂದರೇನು, ದುಃಖವೆಂದರೇನು? ಇದೆಲ್ಲ ದೌರ್ಬಲ್ಯದ ಫಲವಲ್ಲದೆ ಮತ್ತೇನು? ಇಂಥ ಉಪದೇಶಗಳಿಂದ ಲೋಕವು ದಿನದಿನವೂ ಹೆಚ್ಚು ಹೆಚ್ಚು ಬಲಹೀನವಾಗುತ್ತಿದೆ. 'ನೀವು ದುರ್ಬಲರು, ನೀವು ಪಾಪಿಗಳು' ಎಂದು ಜನರಿಗೆ ಬೋಧಿಸುತ್ತಿದ್ದಾರೆ. 'ನೀವು ಅಮೃತದ ಘನಪುತ್ರರು' ಎಂದು ಅವರಿಗೆ ಬೋಧಿಸಿರಿ; ಅದನ್ನು ವ್ಯಕ್ತಗೊಳಿಸಲು ಅತ್ಯಂತ ಅಶಕ್ತರಾಗಿರುವವರಿಗೆ ಕೂಡ ಹಾಗೆಂದೇ ಬೋಧಿಸಿರಿ. ವಿಧಿರೂಪವಾಗಿಯೂ ಬಲಾಧಾಯಕವಾಗಿಯೂ ಸಹಾಯಕವಾಗಿಯೂ ಇರುವ ವಿಚಾರವೇ ಬಾಲ್ಯದಿಂದಲೂ ಅವರ ಮೆದುಳುಗಳಲ್ಲಿ ಹೋಗಲಿ, ಇಂಥ ವಿಚಾರಗಳಿಗೇ ಅವಕಾಶಕೊಡಿರಿ, ದುರ್ಬಲರಾಗಿ ಮಾಡುವ, ತ್ರಾಣವಿಲ್ಲದಂತೆ ಮಾಡುವ, ವಿಚಾರಗಳಿಗೆ ಎಡೆಗೊಡದಿರಿ. ನಿಮ್ಮಲ್ಲಿ ನೀವು "ನಾನು ಆತನೇ, ನಾನು ಆತನೇ" ಎಂದುಕೊಳ್ಳಿ. ಹಗಲೂ ಇರುಳೂ ನಿಮ್ಮ ಮನಸ್ಸಿನಲ್ಲಿ ಅದು ಹಾಡಿನಂತೆ ಗುಂಯೆನ್ನುತ್ತಿರಲಿ, ಸಾಯುವ ಹೊತ್ತಿನಲ್ಲಿಯೂ "ನಾನು ಆತನೇ!: ಎನ್ನಿರಿ. ಇದೇ ಪರಮಾರ್ಥವು. ಈ ಲೋಕದ ಅನಂತವಾದ ಬಲವೆಲ್ಲ ನಿಮ್ಮದೇ. ನಿಮ್ಮ ಮನಸ್ಸನ್ನು ಮುಸುಕಿರುವ ಅಂಧವಿಶ್ವಾಸವನ್ನು ತೊಲಗಿಸಿಕೊಳ್ಳಿ. ಧೀರರಾಗಿರೋಣ. ನಿಜವನ್ನು ತಿಳಿಯೋಣ, ನಿಜವನ್ನು ಅನುಷ್ಠಾನಕ್ಕೆ ತರೋಣ! ಮಜಲು ದೂರದಲ್ಲಿರಬಹುದು, ಆದರೆ ಎಚ್ಚರಗೊಳ್ಳಿ, ಏಳಿ, ಮಜಲು ಮುಟ್ಟುವವರೆಗೂ ನಿಲ್ಲಬೇಡಿ.

--------

# ೩. ಮಾಯೆಯೂ ಇಂದ್ರಜಾಲವೂ

ನಿಮ್ಮಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಎಲ್ಲರೂ 'ಮಾಯೆ' ಎಂಬ ಮಾತನ್ನು ಕೇಳಿರುತ್ತೀರಿ. ಸಾಮಾನ್ಯವಾಗಿ ಅದನ್ನು ಇಂದ್ರಜಾಲ, ಭ್ರಾಂತಿ-ಎಂಬ ಬಗೆಯ ಅರ್ಥದಲ್ಲಿಯೇ ತಪ್ಪಾಗಿ ಉಪಯೋಗಿಸುತ್ತಿರುತ್ತಾರೆ. ಆದರೆ ಮಾಯಾವಾದ ವೆಂಬುದು ವೇದಾಂತಕ್ಕೆ ಬೇಕಾಗಿರುವ ಆಧಾರಸ್ಥಂಭಗಳಲ್ಲಿ ಒಂದಾಗಿರುತ್ತದೆ.* ಆದ್ದರಿಂದ ಅದನ್ನು ಚೆನ್ನಾಗಿ ತಿಳಿದುಕೊಳ್ಳತಕ್ಕದ್ದು ಅವಶ್ಯವಾಗಿರುತ್ತದೆ.

ನೀವು ಸ್ವಲ್ಪ ತಾಳ್ಮೆಯಿಂದ ಇದನ್ನು ಕೇಳಬೇಕು, ಏಕೆಂದರೆ ಈ ವಿಷಯದಲ್ಲಿ ತಪ್ಪ ತಿಳಿವಳಿಕೆಯಾಗುವ ಸಂಭವವೇ ಹೆಚ್ಚಾಗಿರುತ್ತದೆ. ವೈದಿಕವಾಙ್ಮಯದಲ್ಲಿ ಮಾಯೆಯೆಂದರೆ ಭ್ರಾಂತಿಯೆಂಬರ್ಥವೇ ಅತ್ಯಂತ ಪ್ರಾಚೀನವಾದದ್ದು; ಆದರೆ ನಿಜವಾದ ಮಾಯಾವಾದವೇನೂ ಆಗ ಏರ್ಪಾಡಾಗಿರಲಿಲ್ಲ. ಉದಾಹರಣೆಗೆ ಅಲ್ಲಿ "ಇಂದ್ರನು ಮಾಯೆಯಿಂದ ನಾನಾರೂಪಗಳನ್ನು ಪಡೆಯುತ್ತಾನೆ"# ಎಂಬುದೇ ಮುಂತಾದ ವಚನಗಳು ಕಂಡುಬರುತ್ತವೆ. ಇಲ್ಲಿ ಮಾಯೆಯೆಂಬ ಶಬ್ದಕ್ಕೆ ಇಂದ್ರಜಾಲದಂಥ ಯಾವದೋ ಒಂದು ಶಕ್ತಿಯೆಂಬರ್ಥವೇ ಇದೆಯೆಂಬುದು ನಿಜ; ಇದೇ ಅರ್ಥವಿರುವ ಇನ್ನೂ ಅನೇಕ ವಚನಗಳು ಅಲ್ಲಿ ಕಂಡು ಬರುತ್ತವೆ. ಆಮೇಲೆ ಮಾಯೆ ಎಂಬ ಶಬ್ದವೇ ಅದೃಶ್ಯವಾಗಿಬಿಟ್ಟಿತು. ಆದರೆ ಈ ನಡುವೆ ಮಾಯೆಯೆಂಬುದರ ಭಾವಾರ್ಥವು ಬೆಳೆಯುತ್ತಲೇ ಇತ್ತು. ಈಚೆಗೆ "ಈ ವಿಶ್ವದ ರಹಸ್ಯವನ್ನರಿಯುವದೇತಕ್ಕಾಗುವದಿಲ್ಲ?" ಎಂಬ ಪ್ರಶ್ನೆಯನ್ನು ಹಾಕಿದರು. ಇದಕ್ಕೆ ಕೊಟ್ಟ ಉತ್ತರವು ತುಂಬ ಸಾಭಿಪ್ರಾಯವಾಗಿರುತ್ತದೆ: "ಏಕೆಂದರೆ ನಾವು ಸುಮ್ಮನೆ ಹರಟುತ್ತಿರುತ್ತೇವೆ, ಇಂದ್ರಿಯಾರ್ಥಗಳಿಂದಲೇ ತೃಪ್ತರಾಗಿರುತ್ತೇವೆ, ಕಾಮಗಳನ್ನೇ ಹುಡುಕಿಕೊಂಡು ಹೋಗುತ್ತಿರುತ್ತೇವೆ; ಆದ್ದರಿಂದ ತತ್ತ್ವವನ್ನು ನಾವು ಮಂಜಿನಿಂದ ಮುಚ್ಚಿಬಿಟ್ಟಿರುತ್ತೇವೆಂದು ಹೇಳಬೇಕು" (?) ಇಲ್ಲಿ 'ಮಾಯೆ' ಶಬ್ದವನ್ನೇ ಉಪಯೋಗಿಸಿರುವದಿಲ್ಲ ನಮ್ಮ ಅಜ್ಞಾನಕ್ಕೆ ಕಾರಣವಾಗಿ ಒಂದು

* ಮಾಯಾವಾದವನ್ನು ಇಟ್ಟುಕೊಳ್ಳದ ವೇದಾಂತಸಿದ್ಧಾಂತವು ಸ್ಥಾಪಿತವಾಗಲಾರದೆಂಬುದು ಈ ವಾಕ್ಯದ ಧ್ವನಿಯಾಗಿದ್ದರೂ ಅಲ್ಲಿಯವರೆಗೆ ತಾತ್ಪರ್ಯವನ್ನು ಕಟ್ಟಬಾರದು. ಮಾಯವಾದಕಲ್ಪನೆಯನ್ನಿಟ್ಟುಕೊಂಡೇ ವೇದಾಂತಿಗಳು ಉಪದೇಶವನ್ನು ಮಾಡುತ್ತಾರೆ; ಇದು ಯುಕ್ತಿಗೂ ಅನುಭವಕ್ಕೂ ಹೊಂದಿಗೆಯಾಗಿಯೂ ಇರುತ್ತದೆ. ಪರಮಾರ್ಥವನ್ನು ತಿಳಿದ ಮೇಲೆ, ಆ ದೃಷ್ಟಿಯಿಂದ ಇಲ್ಲದೆ ಹೋಗುವುದರಿಂದ ಪ್ರಪಂಚವೆಲ್ಲವೂ ನಿಜವಾಗಿಯೂ ಮಾಯೆಯೆಂದೇ ಸಿದ್ಧಾಂತವಾಗುತ್ತದೆ - ಎಂದಿಷ್ಟು ತಿಳಿದುಕೊಂಡರೆ ಸಾಕಾಗಿದೆ.

# ಋಗ್ವೇದದಲ್ಲಿರುವ (6-47-18) ಒಂದು ಮಂತ್ರದ ಅನುವಾದವಿದು

ಬಗೆಯು ಕಾವಳವಿರುವವೆಂದೂ ಅದು ನಮಗೂ ತತ್ತ್ವಕ್ಕೂ ನಡುವೆಯಿರುವದೆಂದೂ ಇಲ್ಲಿ ಹೇಳಿದಂತೆ ಆಗಿರುತ್ತದೆ. ಇನ್ನೂ ಈಚೆಗೆ, ಅತ್ಯಂತ ಈಚಿನ ಉಪನಿಷತ್ತುಗಳಲ್ಲೊಂದರಲ್ಲಿ 'ಮಾಯೆ' ಎಂಬ ಮಾತು ಮತ್ತೆ ಕಾಣಿಸಿಕೊಂಡಿರುತ್ತದೆ. ಇಷ್ಟು ಹೊತ್ತಿಗೆ ಅದರಲ್ಲಿ ಎಷ್ಟೋ ರೂಪಾಂತರವಾಗಿ ಬಿಟ್ಟಿದೆ. ಈ ಮಾತಿಗೆ ಹೊಸ ಅರ್ಥವೂ ಬಂದು ಸೇರಿಕೊಂಡುಬಿಟ್ಟಿರುತ್ತದೆ. ಎಷ್ಟೋ ಕಲ್ಪನೆಗಳನ್ನು ಹೊರಕ್ಕೆ ತಂದು ಹಿಂದಕ್ಕೆ ತೆಗೆದುಕೊಂಡದ್ದಾಯಿತು, ಹೊಸ ಕಲ್ಪನೆಗಳನ್ನು ಅಂಗೀಕರಿಸಿದ್ದಾಯಿತು; ಕಟ್ಟ ಕಡೆಗೆ ಮಾಯೆಯೆಂಬುದರ ಅಭಿಪ್ರಾಯವು ಒಂದು ಕ್ಲಿಪ್ತಿಗೆ ಬಂದಿತು. ಶ್ವೇತಾಶ್ವತರೋಪನಿಷತ್ತಿನಲ್ಲಿ ಹೀಗೆಂದಿದೆ: "ಪ್ರಕೃತಿಯನ್ನು ಮಾಯೆಯೆಂದು ತಿಳಿಯಿರಿ, ಈ ಮಾಯೆಯ ಒಡೆಯನು ಮಹೇಶ್ವರನೇ". (4–10)

ಇನ್ನು ನಮ್ಮ ದರ್ಶನಕಾರರತ್ತ ತಿರುಗಿದರೆ ಈ ಮಾಯೆಯೆಂಬ ಶಬ್ದವನ್ನು ಒಬ್ಬೊಬ್ಬರು ಒಂದೊಂದರ್ಥದಲ್ಲಿ ಮಾರ್ಪಡಿಸಿರುತ್ತಾರೆಂದು ಕಂಡುಬರುತ್ತದೆ. ಕೊನೆಗೆ ಇದು ಸುಪ್ರಸಿದ್ಧ ಶಂಕರಾಚಾರ್ಯರ ವಶಕ್ಕೆ ಬಂದಿತು. ಬೌದ್ಧರು ಕೂಡ ಮಾಯಾವಾದವನ್ನು ಒಂದಿಷ್ಟು ಆಡಿಸಿದರು; ಆದರೆ ಬೌದ್ಧರ ಕೈಯಲ್ಲಿ ಅದು ವಿಜ್ಞಾನವಾದವೆನ್ನುತ್ತಾರಲ್ಲ, ಅದರಂತೆಯೇ ಬಹಳಮಟ್ಟಿಗೆ ಆಗಿಬಿಟ್ಟಿತು. ಈಗ ಮಾಯೆಯೆಂದರೆ ಈ ಅರ್ಥವನ್ನೇ ಸಾಮಾನ್ಯವಾಗಿ ಜನರು ಮಾಡಿಕೊಳ್ಳುತ್ತಾರೆ. ಪ್ರಪಂಚವು ಮಾಯೆ ಎಂದು ಹಿಂದುಗಳು ಹೇಳಿದರೆ ಕೂಡಲೆ ಪ್ರಪಂಚವು ಇಂದ್ರಜಾಲದ ತೋರಿಕೆ ಎಂಬರ್ಥವನ್ನೇ ಜನರು ಮಾಡಿಕೊಂಡುಬಿಡುತ್ತಾರೆ. ಬೌದ್ಧ ದಾರ್ಶನಿಕರ ಮೂಲಕ ಬಂದಿರುವಷ್ಟುಮಟ್ಟಿಗೆ ಈ ಅರ್ಥಮಾಡುವದಕ್ಕೆ ಸ್ವಲ್ಪ ಆಧಾರವೂ ಇದೆ; ಏಕೆಂದರೆ ಅವರಲ್ಲಿ ಒಂದು ಪಂಗಡದ ತತ್ತ್ವಜ್ಞರು ಹೊರಗಿನ ಪ್ರಪಂಚವೊಂದಿದೆಯೆಂದೇ ನಂಬುತ್ತಿರಲಿಲ್ಲ. ಆದರೆ ವೇದಾಂತದ ಮಾಯೆಯನ್ನು ಕಟ್ಟಕಡೆಗೆ ಪಕ್ವವಾದ ಅದರ ರೂಪಿನಲ್ಲಿ ನೋಡಿದರೆ ಅದು ವಿಜ್ಞಾನವಾದವೂ ಅಲ್ಲ, ವಿಷಯಸತ್ಯತ್ವವಾದವೂ ಅಲ್ಲ, ಅದೊಂದು ಕಲ್ಪನೆಯೂ ಅಲ್ಲ. ಅದೊಂದು ಇದ್ದ ಸಂಗತಿಗಳ ವಿಷಯದ ಹೇಳಿಕೆ. ನಮ್ಮ ಸ್ವರೂಪವೇನು, ನಮ್ಮ ಸುತ್ತಲೂ ಕಾಣಬರುವದೇನು – ಎಂಬುದರ ವಿಷಯದ ಹೇಳಿಕೆ, ಅಷ್ಟೆ.

ನಾನು ನಿಮಗೆ ಹಿಂದೆಯೇಹೇಳಿರುವಂತೆ ವೇದದ್ರಷ್ಟೃಗಳಾದವರ ಮನಸ್ಸುಗಳು ತತ್ತ್ವಗಳನ್ನು ಕಂಡುಹಿಡಿಯಬೇಕೆಂಬುದರಲ್ಲಿಯೇ, ತತ್ತ್ವಗಳನ್ನು ಅನುಸರಿಸಬೇಕೆಂಬುದರಲ್ಲಿಯೇ, ಮಗ್ನವಾಗಿದ್ದವು. ಒಳವಿವರಗಳನ್ನೆಲ್ಲ ಬಿಡಿಸುವದಕ್ಕಾಗಲಿ, ಅವುಗಳನ್ನು ಬಿಡಿಸುವವರೆಗೂ ಕಾದುಕೊಂಡಿರು ವದಕ್ಕಾಗಲಿ,

ಅವರಿಗೆ ಕಾಲವಿರಲಿಲ್ಲ; ಅವರಿಗೆ ವಿಷಯಗಳ ಅಂತರಂಗವನ್ನೇ ಹೋಗಬೇಕೆಂಬ ಅಭಿಲಾಷೆಯಿದ್ದಿತು. ಎಲ್ಲಕ್ಕೂ ಅತೀತವಾದ ಯಾವದೋ ಒಂದು ಅವರನ್ನು ಕೂಗಿ ಕರೆಯುತ್ತಿದ್ದಂತೆ ತೋರಿದ್ದರಿಂದ ಅವರು ಅಲ್ಲಿಯೇ ನಿಲ್ಲಲಾರದೆ ಹೋದರು. ಉಪನಿಷತ್ತುಗಳಲ್ಲಿ ಅಲ್ಲಲ್ಲಿ ಆಧುನಿಕಶಾಸ್ತ್ರಗಳೆಂದು ನಾವು ಕರೆಯುತ್ತಿರುವ ವಿಚಾರಗಳ ವಿವರಗಳು ಬಹಳ ತಪ್ಪಾಗಿರುವವೆಂದು ಕಂಡುಬರುತ್ತವೆ, ಆದರೆ ಅವರ ತತ್ತ್ವಗಳು ಮಾತ್ರ ಸರಿಯಾಗಿರುತ್ತವೆ. ಉದಾಹರಣೆಗೆ ಆಕಾಶಕಲ್ಪನೆಯು ಆಧುನಿಕ ವಿಜ್ಞಾನದ ಅತ್ಯಂತ ಅರ್ವಾಚೀನ ಶೋಧಗಳಲ್ಲಿ ಒಂದಷ್ಟೇ; .ಇದು ನಮ್ಮ ಪ್ರಾಚೀನ ವಾಙ್ಮಯದಲ್ಲಿ ಇಂದಿನ ಆಕಾಶವಾದದ ವೈಜ್ಞಾನಿಕ ಕಲ್ಪನೆಗಿಂತಲೂ ಇನ್ನೂ ಪಕ್ವವಾದ ರೂಪಗಳಲ್ಲಿ ಕಾಣಬರುತ್ತದೆ, ಆದರೆ ತತ್ತ್ವರೂಪದಲ್ಲಿ ಮಾತ್ರ ಅದು ಅಲ್ಲಿ ಕಾಣುತ್ತದೆ. ಆ ತತ್ತ್ವದ ವಿಶೇಷ ವಿವರಗಳನ್ನು ಉಪಪಾದನೆ ಮಾಡುವದಕ್ಕೆ ಹೊರಟಾಗ ಅವರು ಬಹಳ ತಪ್ಪುಗಳನ್ನು ಆಡಿದರು. ಸರ್ವ ವ್ಯಾಪಕವಾದ ಪ್ರಾಣ ತತ್ತ್ವವೊಂದಿದೆಯೆಂದೂ ಈ ವಿಶ್ವದಲ್ಲಿ ಕಾಣಬರುವ ಜೀವವಿಶೇಷಗಳೆಲ್ಲ ಅದರ ನಾನಾ ವ್ಯಕ್ತರೂಪ ಮಾತ್ರವೆಂದೂ ಹೇಳುವ ವಾದವು ವೈದಿಕ ಕಾಲದಲ್ಲಿ ತಿಳಿದಿತ್ತು; ಅದು ಬ್ರಾಹ್ಮಣಗಳಲ್ಲಿ ಕಂಡುಬರುತ್ತದೆ. ಸಕಲ ಪ್ರಾಣವೂ ಯಾವ ಪ್ರಾಣದ ವ್ಯಕ್ತರೂಪವೋ ಆ ಪ್ರಾಣನನ್ನು ಕೊಂಡಾಡುವ ಒಂದಾನೊಂದು ಅನುವಾದವು ಸಂಹಿತೆಯಲ್ಲಿ ಕಂಡುಬರುತ್ತದೆ. ಈ ಪ್ರಸಂಗದಲ್ಲಿ ಒಂದು ಮಾತು ನಿಮಗೆಲ್ಲ ಕುತೂಹಲವನ್ನುಂಟುಮಾಡಬಹುದು; ಈ ಭೂಲೋಕದಲ್ಲಿ ಜೀವವು ಹೇಗೆ ಹುಟ್ಟಿತೆಂಬದರ ಬಗ್ಗೆ ಈಗಿನ ಯೂರೋಪಿನ ವಿಜ್ಞಾನ ಶಾಸ್ತ್ರಜ್ಞರ ಕಲ್ಪನೆಗಳನ್ನೇ ಬಹುಮಟ್ಟಿಗೆ ಹೋಲುತ್ತಿರುವ ಕಲ್ಪನೆಗಳು ವೈದಿಕಶಾಸ್ತ್ರದಲ್ಲಿ ಇರುತ್ತವೆ. ಬೇರೆ ಯಾವದೋ ಗ್ರಹಗಳಿಂದ ಜೀವವು ಬಂದಿದೆಯೆಂಬ ವಾದವೊಂದಿದೆಯೆಂಬುದು ನಿಮಗೆಲ್ಲ ತಿಳಿದೇ ಇದೆಯಷ್ಟೆ; ಈ ರೀತಿಯಲ್ಲಿ ಚಂದ್ರನಿಂದಲೇ ಜೀವವು ಬಂದಿರುವದೆಂದು ಕೆಲವರು ವೈದಿಕತತ್ತ್ವ ಶಾಸ್ತ್ರಜ್ಞರು ಸಿದ್ಧಾಂತಮಾಡಿರುತ್ತಾರೆ.

ಈ ತತ್ತ್ವವಿಚಾರದ ಕಡೆಗೆ ತೆರಳಿದರೆ ಈ ವೈದಿಕ ತತ್ತ್ವಜ್ಞರು ಮಹಾಮಹಾ ಸಾಮಾನ್ಯನಿಯಮಗಳನ್ನು ಏರ್ಪಡಿಸುವದರಲ್ಲಿ ಮಹಾ ಧೈರ್ಯಶಾಲಿ ಗಳಾಗಿದ್ದರೆಂದೂ ಅವರ ದಿಟ್ಟತನವು ಅತ್ಯದ್ಭುತವಾಗಿತ್ತೆಂದೂ ಕಂಡುಬರುತ್ತದೆ. ಈ ವಿಶ್ವದ ರಹಸ್ಯವನ್ನು ಅವರು ಬಾಹ್ಯದೃಷ್ಟಿಯಿಂದ ಬಿಡಿಸಿರುವ ರೀತಿಯು ಎಷ್ಟು ತೃಪ್ತಿಕರವಾಗಿರಬಹುದೋ ಅಷ್ಟೂ ತೃಪ್ತಿಕರವಾಗಿತ್ತು. ಈಗಿನ ವಿಜ್ಞಾನ ಶಾಸ್ತ್ರವು ಅದರ ವಿವರವನ್ನೆಲ್ಲ ಇನ್ನು ಎಷ್ಟೇ ಬಿಚ್ಚಿಹೇಳಿದರೂ ಈ ರಹಸ್ಯ ಭೇದನೆಯಲ್ಲಿ ಒಂದು ಹೆಜ್ಜೆಯನ್ನೂ ಮುಂದಕ್ಕೆ ಹಾಕುವಂತಿಲ್ಲ, ಏಕೆಂದರೆ ಆ

ತತ್ತ್ವಗಳೇ ನಿಷ್ಫಲವೆಂದು ಗೊತ್ತಾಗಿಬಿಟ್ಟಿದೆ. ಪ್ರಾಚೀನಕಾಲದಲ್ಲಿ ಮುಂದಕ್ಕೆ ತಂದ ಆಕಾಶವಾದವು ವಿಶ್ವರಹಸ್ಯವನ್ನು ಭೇದಿಸಲಾರದೆ ಹೋದಮೇಲೆ ಆ ಆಕಾಶ ವಾದದ ವಿವರವನ್ನು ಮತ್ತುಷ್ಟು ಬಿಚ್ಚಿ ತೋರಿಸಿದ ಮಾತ್ರದಿಂದ ನಾವು ಮತ್ತೇನೂ ಹೆಚ್ಚಾಗಿ ನಿಜದ ಹತ್ತಿರಕ್ಕೆ ಹೋದಂತಾಗುವ ಹಾಗಿಲ್ಲ. ಸರ್ವವ್ಯಾಪಿಯಾದ ಪ್ರಾಣದ ಕಲ್ಪನೆಯು ಈ ವಿಶ್ವತತ್ತ್ವದ ಕಲ್ಪನೆಯೆಂಬುದು ಸರಿಯಾಗದೆ ಹೋದ ಮೇಲೆ, ಅದರ ವಿವರವನ್ನು ಮತ್ತಷ್ಟು ಬಿಚ್ಚಿದರೆ ಮೊದಲಿಗಿಂತ ಹೆಚ್ಚಿನ ಬೆಲೆಯೇನೂ ಅದಕ್ಕೆ ಬರಲಾರದು, ಏಕೆಂದರೆ ಈ ವಿವರಗಳು ವಿಶ್ವದ ತತ್ತ್ವವನ್ನೇನೂ ಬದಲಾಯಿಸುವ ಹಾಗಿಲ್ಲ. ಇಲ್ಲಿ ನನ್ನ ಅಭಿಪ್ರಾಯವಿಷ್ಟೆ, ತತ್ತ್ವವನ್ನು ಅನ್ವೇಷಣೆ ಮಾಡುವದರಲ್ಲಿ ಹಿಂದೂ ಜಿಜ್ಞಾಸುಗಳು ಈಗಿನವರಷ್ಟೇ ಧೀರರಾಗಿದ್ದರು; ಕೆಲವು ಸಂದರ್ಭಗಳಲ್ಲಿ ಇನ್ನೂ ಧೀರರಾಗಿದ್ದರು. ಅವರು ಏರ್ಪಡಿಸಿದ ಅತ್ಯದ್ಭುತವಾದ ಕೆಲವು ಸಾಮಾನ್ಯ ನಿಯಮಗಳಲ್ಲಿ ಕೆಲವು ಮಾತ್ರ ಈಗ ಸಿದ್ಧವಾಗಿರುತ್ತವೆ, ಮತ್ತೆ ಕೆಲವು ಬರಿಯ ಕಲ್ಪನೆಗಳಾಗಿ ನಿಂತಿವೆ; ಅವನ್ನು ಕೇವಲ ಕಲ್ಪನೆಗಳಾಗಿ ಕೂಡ ಆಧುನಿಕ ವಿಜ್ಞಾನ ಶಾಸ್ತ್ರವು ಇಟ್ಟುಕೊಳ್ಳದೆ ಇರುತ್ತದೆ. ಉದಾಹರಣೆಗೆ ನೋಡಿ, ಅವರು ಆಕಾಶ (ether) ಕಲ್ಪನೆಯನ್ನು ಮಾಡಿಕೊಂಡಿದ್ದರಲ್ಲದೆ ಅದನ್ನು ದಾಟಿ ಚಿತ್ತವೆಂಬುದೂ ಒಂದು ಇನ್ನೂ ಸೂಕ್ಷ್ಮವಾದ ಆಕಾಶವೆಂದು ವರ್ಗೀಕರಿಸಿದ್ದರು. ಅದನ್ನು ದಾಟಿ ಮತ್ತೊಂದು ಸೂಕ್ಷ್ಮಾಕಾಶವನ್ನೂ* ಅವರು ಕಂಡುಕೊಂಡಿದ್ದರು. ಆದರೇನು, ಅದರಿಂದ ತೊಡಕನ್ನು ಬಿಚ್ಚಿದಂತೆ ಆಗಲಿಲ್ಲ. ಬಾಹ್ಯಪ್ರಪಂಚದ ತಿಳಿವಳಿಕೆಯು ಎಷ್ಟೇ ಹೆಚ್ಚಲಿ, ಅದರಿಂದ ತೊಡಕೇನು ಬಿಚ್ಚುವಂತಿರುವದಿಲ್ಲ. ಭೌತಿಕವಿಜ್ಞಾನಿಯು "ಆದರೆ ನಮಗೆ ಈಗ ಎಲ್ಲಿಯೋ ಒಂದಿಷ್ಟು ಮಾತ್ರ ತಿಳಿಯುವದಕ್ಕೆ ಮೊದಲಾಗಿರುತ್ತದೆ; ಇನ್ನೂ ಕೆಲವು ಸಾವಿರ ವರ್ಷಗಳು ತಡೆಯಿರಿ, ನಮಗೆ ಇದರ ಮರ್ಮವು ಸಿಕ್ಕುವದು" ಎಂದು ಹೇಳಬಹುದು. ಇದಕ್ಕೆ ವೇದಾಂತಿಯು "ಅದಾಗಲಾರದು; ಏಕೆಂದರೆ ಮನಸ್ಸು ಪರಿಚ್ಛಿನ್ನವಾಗಿರುವದೆಂದೂ ಅದು ಕೆಲವು ಎಲ್ಲೆಕಟ್ಟುಗಳನ್ನು, ಎಂದರೆ ಕಾಲದೇಶ ನಿಮಿತ್ತಗಳನ್ನು,# ಬಿಟ್ಟು ಆಚೆ ಹೋಗಲಾರದೆಂದೂ ನಾವು ನಿಸ್ಸಂದೇಹವಾಗಿ ಸಿದ್ಧಮಾಡಿಬಿಟ್ಟಿರುತ್ತೇವೆ" ಎನ್ನುತ್ತಿದ್ದಾನೆ. ಯಾವನೂ ತನ್ನನ್ನು ಬಿಟ್ಟು ಹೊರಕ್ಕೆ ಹಾರಲಾರನು, ಇದರಂತೆ ಕಾಲದೇಶಗಳ ನಿಯಮಗಳಿಂದ ಆಗಿರುವ ಎಲ್ಲೆಕಟ್ಟನ್ನು ಮೀರುವದು

* ಇದು ಯಾವದೆಂಬುದು ತಿಳಿಯದು. ಜಗತ್ತಿಗೆಲ್ಲ ಕಾರಣವಾದ ಅವ್ಯಕ್ತವನ್ನು ಅವ್ಯಾಕೃತಾಕಾಶವೆಂದು ಕರೆಯುವ ರೂಢಿಯಿದೆ, ಒಂದು ವೇಳೆ ಸ್ವಾಮಿಗಳು ಇದನ್ನು ಇಲ್ಲಿ ಪರಮಾರ್ಶ ಮಾಡಿದ್ದರೂ ಮಾಡಿರಬಹುದು.

\# 28ನೆಯ ಪುಟದ # ಟಿಪ್ಪಣಿಯನ್ನು ನೋಡಿ.

ಯಾವನಿಂದಲೂ ಆಗಲಾರದು. ಕಾರ್ಯಕಾರಣ ಭಾವ, ಕಾಲ, ದೇಶ – ಈ ನಿಯಮಗಳ ಮರ್ಯವನ್ನು ಗೊತ್ತುಪಡಿಸುವ ಪ್ರತಿಯೊಂದು ಪ್ರಯತ್ನವೂ ನಿಷ್ಫಲವಾಗಿಯೇ ತೀರಬೇಕು; ಏಕೆಂದರೆ ಆ ಪ್ರಯತ್ನವೆಂಬುದೇ ಈ ಮೂರರ ಇರವನ್ನು ಸಿದ್ಧವತ್ತಾಗಿಟ್ಟುಕೊಂಡೇ ಹೊರಡಬೇಕಾಗಿರುವದು.

ಹಾಗಾದರೆ ಪ್ರಪಂಚವಿದೆಯೆಂದರೆ ಅರ್ಥವೇನು? "ಈ ಪ್ರಪಂಚವು ಇಲ್ಲವೇ ಇಲ್ಲ." ಇದರ ಅಭಿಪ್ರಾಯವೇನು? ಅದು ಸ್ವತಂತ್ರವಾಗಿರುವದಿಲ್ಲ ಎಂದರ್ಥ. ಅದು ನನ್ನ ಮನಸ್ಸಿಗೂ ನಿಮ್ಮ ಮನಸ್ಸಿಗೂ* ಮಿಕ್ಕ ಎಲ್ಲರ ಮನಸ್ಸಿಗೂ ಸಂಬಂಧಪಟ್ಟು ಮಾತ್ರ ಇರುತ್ತದೆ. ಈ ಪ್ರಪಂಚವನ್ನು ನಾವು ಐದು ಇಂದ್ರಿಯಗಳಿಂದ ನೋಡುತ್ತಿದ್ದೇವಷ್ಟೆ; ನಮಗೆ ಇನ್ನೂ ಒಂದು ಇಂದ್ರಿಯವಿದ್ದಿದ್ದರೆ ಆಗ ಇದು ಇನ್ನೊಂದು ಬೇರೆಯ ರೂಪದಿಂದಲೇ ನಮಗೆ ತೋರಿಬರುತ್ತಿತ್ತು. ಆದ್ದರಿಂದ ಇದಕ್ಕೆ ನಿಜವಾದ ಇರವು ಇಲ್ಲ. ಎಂದರೆ ಇದಕ್ಕೆ ಮಾರ್ಪಡದ ಅಚಲವಾದ ಅನಂತವಾದ ಇರವು ಇರುವದಿಲ್ಲ. ಆದರೂ ಇದು ಇಲ್ಲವೆನ್ನುವದಕ್ಕಿಲ್ಲ; ಏಕೆಂದರೆ ಇದು ಇರುತ್ತದೆ, ಅದರಲ್ಲಿದ್ದು ಅದರ ಮೂಲಕವೇ ನಾವು ವ್ಯವಹಾರ ಮಾಡಬೇಕಾಗಿರುತ್ತದೆ. ಆದ್ದರಿಂದ ಇದು ಸದಸತ್ತುಗಳ ಮಿಶ್ರವಾಗಿರುತ್ತದೆ.

ಈ ಒಣ ವಿಚಾರಗಳು ಹಾಗಿರಲಿ, ಸಾಮಾನ್ಯವಾದ ನಮ್ಮ ದೈನಂದಿನದ ಜೀವನದ ವಿವರವನ್ನೊಂದಿಷ್ಟು ನೋಡೋಣ. ಇಲ್ಲಿ ನೋಡಿದರೆ ನಮ್ಮ ಇಡಿಯ ಜೀವನವೇ ಈ ಸದಸತ್ತುಗಳ ವಿರೋಧಾಭಾಸದ ಮಿಶ್ರಣವಾಗಿರುವದೆಂದು ಕಂಡುಬರುತ್ತದೆ. ತಿಳಿವಳಿಕೆಯಲ್ಲಿಯೂ ಈ ವಿರೋಧಾಭಾಸವಿರುತ್ತದೆ. ಮನುಷ್ಯನು ತಿಳಿಯಬೇಕೆಂದು ಇಚ್ಛೆಪಟ್ಟರೆ ಎಲ್ಲವನ್ನೂ ತಿಳಿದುಕೊಳ್ಳಬಹುದೆಂದೇ ತೋರುವದು; ಆದರೆ ನಾಲ್ಕು ಹೆಜ್ಜೆಗಳನ್ನು ಮುಂದಿಡುಷ್ಟರಲ್ಲಿ ಅವನ ಮುಂದೆ ಒಂದು ವಜ್ರದ ಗೋಡೆಯಿರುವದೆಂದೂ ಅದನ್ನು ದಾಟುವದಕ್ಕೆ ಆಗುವದೇ ಇಲ್ಲವೆಂದೂ ಅವನಿಗೆ ತೋರುತ್ತದೆ. ಅವನ ವ್ಯವಹಾರವೆಲ್ಲ ಒಂದಾನೊಂದು ವೃತ್ತದೊಳಗೆ ಅಡಕವಾಗರುತ್ತದೆ. ಆ ವೃತ್ತದಿಂದಾಚೆಗೆ ಅವನು ಹೋಗಲಾರದೆ

* ಜಗತ್ತೆಂಬುದು ವಿಚಾರಕನಿಗೆ ಹೊರಗೆ ಕಾಣುವ ಚೇತನಾಚೇತನಾತ್ಮಕವಾದ ಒಟ್ಟು; ಇದರಲ್ಲಿ ತನ್ನ ಮನಃಶರೀರಾದಿಗಳೂ ಸೇರಿರುತ್ತವೆ, ಹೀಗಿರುವದರಿಂದ ಜಗತ್ತು ನಮ್ಮಗಳ ಮನಸ್ಸಿಗೆ·ಸಂಬಂಧಪಟ್ಟು ಮಾತ್ರ ಇರುತ್ತದೆ–ಎಂಬ ವಾದವು ಅಷ್ಟು ಸರಿಯಾಗಿ ಕಾಣುವದಿಲ್ಲ; ಆದರೂ ಮನಸ್ಸಿದ್ದರೇ ಜಗದ್ಬುದ್ಧಿಯಿರುವದು–ಎಂಬ ದೃಷ್ಟಿಯಿಂದ ಜಗತ್ತೆಲ್ಲ ಮನಃಸಾಪೇಕ್ಷವೆಂದು ಹೇಳಬಹುದಾಗಿದೆ. ಇಲ್ಲಿ ಜಗತ್ತಿನ ಅನುಭವವು ನಮಗೆ ವ್ಯವಹಾರದಲ್ಲಿ ಹೇಗೆ ಆಗುವದೆಂಬುದನ್ನೇ ವಿಚಾರಿಸುತ್ತಿದೇವಾದ್ದರಿಂದ ಇಷ್ಟು ಉಪಪಾದನೆಯೇ ಸಾಕಾಗಿರುವದು. ಜಗನ್ಮಿಥ್ಯಾತ್ವಸಿದ್ಧಾಂತಕ್ಕೆ ಮಾತ್ರ ಇದು ಸಾಲದು.

ಇರುತ್ತಾನೆ. ಅವನಿಗೆ ಅತ್ಯಂತ ಸಮೀಪದವುಗಳಾಗಿ ಅತ್ಯಂತ ಪ್ರಿಯವಾದವುಗಳಾಗಿರುವ ಸಮಸ್ಯೆಗಳು ಅವನನ್ನು ಮುಂದಕ್ಕೆ ತಳ್ಳುತ್ತಿರುತ್ತವೆ, ನಮಗೆ ಉತ್ತರವೇನು? ಎಂದು ಹಗಲೂ ಇರುಳೂ ಕೇಳುತ್ತಿರುತ್ತೇವೆ; ಆದರೆ ಅವನು ಆ ಸಮಸ್ಯೆಗಳನ್ನೇನೂ ಬಿಡಿಸಲಾರನು, ಏಕೆಂದರೆ ಅವನಿಗೆ ತನ್ನ ಬುದ್ಧಿಯನ್ನು ಮೀರುವದು ಆಗುವ ಹಾಗಿಲ್ಲ. ಹೀಗಿದ್ದರೂ ಅದನ್ನು ಮೀರಬೇಕೆಂಬ ಆಶೆಯು ಬಲವತ್ತರವಾಗಿ ಅವನಲ್ಲಿ ಬೇರೂರಿಕೊಂಡಿರುತ್ತದೆ. ಆ ಬುದ್ಧಿಯನ್ನು ಸ್ವಾಧೀನಪಡಿಸಿಕೊಳ್ಳುವದಿರಂದಲೇ, ಅದನ್ನು ನಿಗ್ರಹಮಾಡುತ್ತಿರುವದರಿಂದಲೇ ಪರಮಪುರುಷಾರ್ಥವುಂಟಾಗುವದೆಂದು ನಮಗೆಲ್ಲರಿಗೂ ತಿಳಿದೇ ಇದೆ.

ಒಂದೊಂದು ಸಲ ಉಸಿರುಬಿಡುವಾಗಲೂ ನಮ್ಮ ಹೃದಯದ ಪ್ರತಿಯೊಂದು ಪ್ರವೃತ್ತಿಯೂ 'ಸ್ವಾರ್ಥಪರರಾಗಿರಿ' ಎನ್ನುತ್ತಿರುವದು; ಹೀಗಿದ್ದರೂ ಅಸ್ವಾರ್ಥತೆಯೇ ಉತ್ತಮವಾದದ್ದೆಂದು ಹೇಳುತ್ತಿರುವ ಯಾವದೋ ಒಂದು ಶಕ್ತಿಯು ನಮ್ಮಾಚೆಗೆ ಇದ್ದುಕೊಂಡಿರುತ್ತದೆ. ಪ್ರತಿಯೊಂದು ಮಗುವೂ ಹುಟ್ಟುವಾಗ ಶುಭದೃಷ್ಟಿಯಾಗಿರುವದು.. ಅದಕ್ಕೆ ಆನಂದಮಯವಾದ ಕನಸುಗಳಾಗುತ್ತಿರುವವು. ಯೌವನವು ಬಂದಾಗ ಇನ್ನೂ ಹೆಚ್ಚಿನ ಶುಭದೃಷ್ಟಿಯುಂಟಾಗಿರುವದು. ಯುವಕನಾದವನಿಗೆ ಮರಣವೆಂಬುದೊಂದುಂಟೆಂತಲಾಗಲಿ, ಸೋಲು, ಅಪಮಾನ ಎಂಬವು ಉಂಟೆಂತಲಾಗಲಿ ನಂಬುವದು ಕಷ್ಟವಾಗಿರುತ್ತದೆ. ಮುಪ್ಪು ಬಂತೋ ಇಲ್ಲವೋ, ಜೀವನವೆಂಬುದೆಲ್ಲ ಹಾಳುಹಾಳು ಸುರಿಯುತ್ತಿರುವದು. ಆಗ ಹಿಂದಿನ ಕನಸುಗಳೆಲ್ಲ ಹಾರಿಹೋಗಿಬಿಡುತ್ತದೆ, ಆಗ ಮಾನವನು ಅಶುಭದೃಷ್ಟಿಯಾಗುತ್ತಾನೆ. ಈ ರೀತಿಯಲ್ಲಿ ಪ್ರಕೃತಿಯ ಹೊಡೆತಕ್ಕೆ ಸಿಲುಕಿ ಎಲ್ಲಿಗೆ ಹೋಗುವೆವೆಂಬುದನ್ನು ಕೂಡ ಅರಿಯದೆ ನಾವು ಒಂದು ಕೊನೆಯಿಂದ ಇನ್ನೊಂದು ಕೊನೆಗೆ ಹೋಗುತ್ತಿರುವೆವು. ಈ ಸಂದರ್ಭದಲ್ಲಿ ನನಗೆ **ಲಲಿತವಿಸ್ತರ** ಎಂಬ ಬುದ್ಧ ಚರಿತ್ರೆಯಲ್ಲಿರುವ ಒಂದಾನೊಂದು ಪ್ರಸಿದ್ಧಗಾಥೆಯನೆನಪು ಬರುತ್ತಿದೆ.ಆ ಕಾವ್ಯದಲ್ಲಿರುವದೇನೆಂದರೆ ಬುದ್ಧನು ಮಾನವರ ರಕ್ಷಣಾರ್ಥವಾಗಿ ಅವತಾರಮಾಡಿದ್ದನು; ಆದರೆ ಅರಮನೆಯ ವಿಲಾಸಗಳ ನಡುವೆ ಅವನು ತನ್ನ ಉದ್ದೇಶವನ್ನೇ ಮರೆತುಬಿಟ್ಟನು. ಕೆಲವು ದೇವತೆಗಳು ಬಂದು ಅವನನ್ನು ಎಚ್ಚರಗೊಳಿಸುವದಕ್ಕೆಂದು ಒಂದಾನೊಂದು ಗಾನವನ್ನು ಹಾಡಿದರು. ಆ ಹಾಡಿನ ಪಲ್ಲವಿಯೇನೆಂದರೆ ನಾವುಗಳೆಲ್ಲರೂ ಜೀವನ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುತ್ತಿರುವೆವು; ಆ ನದಿಯು ಎಡೆಬಿಡದೆ ಹರಿಯುತ್ತಿರುವದು, ಅದು ಎಲ್ಲಿಯೂ ವಿಚ್ಛೇದವಾಗುವದಿಲ್ಲ, ಎಲ್ಲಿಯೂ ನಿಲ್ಲುವದಿಲ್ಲ. ಹೀಗೆ ನಮ್ಮ ಜೀವನಗಳೆಲ್ಲ ಯಾವ ಬಗೆಯ ವಿಶ್ರಾಂತಿಯನ್ನೂ ಕಾಣದೆ ಮುಂದುಮುಂದಕ್ಕೆ

ಹೋಗುತ್ತಲೇ ಇರುವವು. ನಾವೇನು ಮಾಡಬೇಕು? ಯಾವನಿಗೆ ಅನ್ನಪಾನಗಳಿಗೆ ತಕ್ಕಷ್ಟಿರುವದೋ ಅವನು ಶುಭದೃಷ್ಟಿಯಾಗಿರುತ್ತಾನೆ. ಅವನಿಗೆ ಕಷ್ಟವೆಂಬ ಮಾತು ಕೇಳಿದರೆ ಅಂಜಿಕೆಯಾಗುವದರಿಂದ ಅವನು ಅದರ ಹೆಸರನ್ನೇ ಎತ್ತಗೊಡಿಸುವದಿಲ್ಲ. ಈ ಲೋಕದಲ್ಲಿರುವ ದುಃಖಗಳನ್ನೂ ಸಂಕಟಗಳನ್ನೂ ಅವನಿಗೆ ಹೇಳಕೂಡದು; ಅವನ ಹತ್ತಿರ ಹೋದಾಗ ಇದೆಲ್ಲ ಉತ್ಕೃಷ್ಟವಾಗಿದೆ ಎನ್ನಬೇಕು. ಅವನು "ನಾನು ನಿಜವಾಗಿಯೂ ಸುರಕ್ಷಿತವಾಗಿದ್ದೇನೆ. ಇಗೋ ನೋಡಿ, ನನಗೆ ವಾಸಕ್ಕೊಂದು ಉತ್ತಮವಾದ ಮನೆಯಿದೆ; ನನಗೆ ಚಳಿಯ ಅಂಜಿಕೆಯಾಗಲಿ ಹಸಿವಿನ ಅಂಜಿಕೆಯಾಗಲಿ ಇರುವುದಿಲ್ಲ. ಆದ್ದರಿಂದ ಇಂಥ ಭಯಂಕರವಾದ ವರ್ಣನೆಗಳನ್ನು ನನ್ನ ಬಳಿಗೆ ತಂದು ಹೇಳಬೇಡಿರಿ" ಎನ್ನುತ್ತಿರುತ್ತಾನೆ. ಇನ್ನೊಂದು ಕಡೆ ನೋಡಿದರೆ ಚಳಿಯಿಂದಲೂ ಹಸಿವಿನಿಂದಲೂ ಸಾಯುತ್ತಿರುವ ಬೇರೆ ಮಂದಿಯಿರುತ್ತಾರೆ. ಅವರ ಬಳಿಗೆ ಹೋಗಿ 'ಇದೆಲ್ಲ ಎಷ್ಟು ಸೊಗಸಾಗಿದೆ!' ಎಂದರೆ ಅವರು ಅದನ್ನು ಕಿವಿಗೇ ಹಾಕಿ ಕೊಳ್ಳುವಂತಿ-ರುವದಿಲ್ಲ. ಅವರು "ನಾವು ಕಷ್ಟಪಡುತ್ತಿರುವಾಗ ಮತ್ತೊಬ್ಬರು ಸುಖವಾಗಿರಲೆಂದು ಹಾರೈಸುವದು ಹೇಗೆ?" ಎನ್ನುತ್ತಿರುವರು. ಹೀಗೆ ನಾವು ಶುಭದೃಷ್ಟಿ, ಅಶುಭದೃಷ್ಟಿ **(Optimism and pessimism)** – ಇವೆರಡರ ನಡುವೆ ಅತ್ತಿತ್ತ ಅಲುಗಾಡುತ್ತಿರುವ ಗಡಿಯಾರದ ಲಂಬಕದಂತೆ ಇರುವೆವು.

ಇನ್ನು ಮರಣವೆಂಬುದೊಂದು ಅದ್ಭುತವಾದ ವಿಷಯವಾಗಿದೆ. ಇಡಿಯ ಭೂಮಂಡಲವೇ ಸಾವಿನೆಡೆಗೆ ಸಾಗುತ್ತಿದೆ; ಪ್ರತಿಯೊಂದೂ ಸಾಯುತ್ತದೆ. ನಮ್ಮ ಪ್ರಗತಿ, ನಮ್ಮ ಕುಣಿದಾಟಗಳು, ನಮ್ಮ ಸುಧಾರಣೆಗಳು, ನಮ್ಮ ವಿಲಾಸಗಳು, ನಮ್ಮ ಐಶ್ವರ್ಯ, ನಮ್ಮ ತಿಳಿವಳಿಕೆ – ಇವುಗಳಿಗೆಲ್ಲ ಒಂದೇ ಗತಿ, ಅದು ಯಾವದೆಂದರೆ ಸಾವು. ಇದೊಂದೇ ಕಡುಖಂಡಿತವಾಗಿರುವದು. ನಗರಿಗಳು ಬರುತ್ತವೆ ಹೋಗುತ್ತವೆ, ಸಾಮ್ರಾಜ್ಯಗಳು ಏಳುತ್ತವೆ, ಬೀಳುತ್ತವೆ; ಗ್ರಹಗಳು ತುಂಡುತುಂಡಾಗಿ ಪುಡಿಪುಡಿಯಾಗಿ ಧೂಳಾಗುತ್ತವೆ, ಅವುಗಳನ್ನು ಬೇರೆಯ ಗ್ರಹಗಳ ವಾಯು ವಿಶೇಷಗಳು ಅತ್ತಿತ್ತ ಹಾರಾಡಿಸಿಬಿಡುತ್ತವೆ. ಹೀಗಿಯೇ ಅನಾದಿ ಕಾಲದಿಂದಲೂ ನಡೆಯುತ್ತಿರುವದು. ಸಾವೇ ಪ್ರತಿಯೊಂದಕ್ಕೂ ಕೊನೆ. ಜೀವನ, ಸೌಂದರ್ಯ, ಅಧಿಕಾರ, ಕೊನೆಗೆ ಸದ್ಗುಣ–ಎಲ್ಲಕ್ಕೂ ಸಾವೇ ಕೊನೆ. ಧಾರ್ಮಿಕರೂ ಸಾಯುತ್ತಾರೆ, ಪಾಪಿಗಳೂ ಸಾಯುತ್ತಾರೆ, ಅರಸರೂ ಸಾಯುತ್ತಾರೆ, ತಿರುಕರೂ ಸಾಯುತ್ತಾರೆ. ಇವರೆಲ್ಲರೂ ಸತ್ತೇಸಾಯುತ್ತಾರೆ. ಹೀಗಿದ್ದರೂ ಬದುಕಿರಬೇಕೆಂಬ ಈ ಅದ್ಭುತವಾದ ಅಭಿನಿವೇಶವು ಇದ್ದುಕೊಂಡಿರುತ್ತದೆ. ಅದೇಕೋ, ಅದೇನು ಕಾರಣವೋ, ನಮಗೆ ತಿಳಿಯದು; ಅಂತೂ ನಮಗೆ ಬದುಕಿರುವದರಲ್ಲಿಯೇ

ಆಶೆಯಿದೆ; ನಾವು ಪ್ರಾಣವನ್ನು ಕೈಬಿಡಲಾರೆವು. ಇದೇ **ಮಾಯೆ.**

ತಾಯಿಯು ಮಗುವನ್ನು ಬಹಳ ಮಮತೆಯಿಂದ ಸಾಕುತ್ತಿರುತ್ತಾಳೆ; ಅವಳ ಮನಸ್ಸೆಲ್ಲ, ಅವಳ ಪ್ರಾಣವೆಲ್ಲ, ಆ ಮಗುವಿನಲ್ಲಿರುತ್ತದೆ. ಮಗುವು ದೊಡ್ಡದಾಗಿ ಮನುಷ್ಯನಾಗುತ್ತದೆ. ಆ ಮನುಷ್ಯನು ಒಂದು ವೇಳೆ ವಂಚಕನಾಗಿ ಪಶುವಾಗಿ ಒಂದೊಂದು ದಿನವೂ ಆಕೆಯನ್ನು ಒದೆಯಬಹುದು, ಹೊಡೆಯಬಹುದು. ಹೀಗಿದ್ದರೂ ತಾಯಿಗೆ ಮಗನಲ್ಲಿ ಮಮತೆಯು ಹೋಗುವದೇ ಇಲ್ಲ; ಇದೆಲ್ಲ ಸರಿಯೆ? ಎಂಬ ವಿಚಾರವು ಬಂದರೆ ಇದೆಲ್ಲ ಪ್ರೇಮವು ಎಂಬ ಭಾವನೆಯಿಂದ ಅದನ್ನು ಮುಚ್ಚಿಹಾಕುತ್ತಾಳೆ. ನಿಜವಾಗಿ ಅದು ಪ್ರೇಮವಲ್ಲ, ಹೇಗೋ ತನ್ನ ನಾಡಿಗಳನ್ನು ಹಿಡಿದಿರುವ ಒಂದಾನೊಂದು ಆವೇಶವು, ಅದನ್ನು ತಾನು ಕಿತ್ತೊಗೆಯಲಾರದೆ ಇದೇನೆ-ಎಂಬುದು ಅವಳಿಗೆ ಹೊಳೆಯುವದೇ ಇಲ್ಲ. ಅವಳು ಎಷ್ಟೇ ಪ್ರಯತ್ನಮಾಡಲಿ, ತನಗೆ ಕಟ್ಟುಬಿದ್ದಿರುವ ಆ ಬಂಧವನ್ನು ತಪ್ಪಿಸಿಕೊಳ್ಳುವದಕ್ಕೆ ಆಗುವಂತೆಯೇ ಇರುವದಿಲ್ಲ. ಇದೇ **ಮಾಯೆ.**

ನಾವೆಲ್ಲರೂ ಚಿನ್ನದ ತುಪಟವನ್ನು* ಹುಡುಕುತ್ತಿದ್ದೇವೆ. ಇದು ತನಗೇ ಸಿಕ್ಕುವದೆಂದು ಪ್ರತಿಯೊಬ್ಬನೂ ಎಂದುಕೊಳ್ಳುತ್ತಿದ್ದಾನೆ. ಇಪ್ಪತ್ತು ಕೋಟಿಯಲ್ಲಿ ಒಬ್ಬನಿಗೆ ಇಂಥ ಸೌಭಾಗ್ಯವು ದೊರಕುವ ಸಂಭವವಿರುವದೆಂದು ವಿಚಾರ ಪರರಾದರವರೆಲ್ಲರಿಗೂ ತಿಳಿದೇ ಇರುತ್ತದೆ; ಆದರೂ ಪ್ರತಿಯೊಬ್ಬನೂ ಅದಕ್ಕಾಗಿಯೇ ಹೆಣಗಾಡುತ್ತಿರುತ್ತಾನೆ. ಇದೇ **ಮಾಯೆ.**

ಹಗಲೂ ಇರುಳೂ ಮೃತ್ಯುವು ಈ ಮರ್ತ್ಯಲೋಕದಲ್ಲಿ ಸಂಚರಿಸುತ್ತಿರುವದು. ಆದರೂ ನಾವು ಶಾಶ್ವತವಾಗಿ ಬದುಕಿರುವೆವೆಂದು ಭಾವಿಸಿಕೊಳ್ಳುತ್ತಿರುವೆವು. ಯುಧಿಷ್ಠಿರರಾಜನನ್ನು ಒಮ್ಮೆ "ಈ ಲೋಕದಲ್ಲಿ ಅತ್ಯಂತ ಆಶ್ಚರ್ಯಕರವಾದದ್ದು ಯಾವದು?" ಎಂದು ಕೇಳಲು "ದಿನದಿನವೂ ಜನರು ನಮ್ಮ ಸುತ್ತಲೂ ಸಾಯುತ್ತಿದ್ದಾರೆ; ಆದರೂ ಜನರು ತಾವು ಎಂದಿಗೂ ಸಾಯುವದಿಲ್ಲವೆಂದೆಣಿಸಿ ಕೊಳ್ಳುವರು. ಇದೇ ಆಶ್ಚರ್ಯವು" ಎಂದು ಉತ್ತರವಿತ್ತನಂತೆ. ಇದೇ **ಮಾಯೆ.**

ಹೀಗೆ ನಮ್ಮ ಬುದ್ಧಿಯಲ್ಲಿಯೂ ತಿಳಿವಳಿಕೆಯಲ್ಲಿಯೂ, ಅಷ್ಟೇಕೆ? ನಮ್ಮ ಜೀವನದ ಪ್ರತಿಯೊಂದು ವಿಚಾರದಲ್ಲಿಯೂ ಇಂಥ ಅತ್ಯದ್ಭುತವಾದ ವಿರೋಧಾಭಾಸದ್ವಂದ್ವಗಳು ನಮ್ಮ ಸುತ್ತುಮುತ್ತಲೂ ಕಂಡು ಬರುತ್ತಲಿವೆ. ಒಬ್ಬ

* ಒಂದಾನೊಂದು ಟಗರಿನ ಮೈಮೇಲೆ ಬಂಗಾರದ ತುಪಟವು ಬೆಳೆಯುತ್ತಿತ್ತೆಂದೂ ಅದನ್ನು ಜೇಸನ್ ಎಂಬಾತನು ಕಂಡುಹಿಡಿದು ತಂದನೆಂದೂ ಗ್ರೀಕರ ಪುರಾಣದ ಕಥೆ.

ಸುಧಾರಕನು ಹುಟ್ಟಿ ಒಂದಾನೊಂದು ಸಮಾಜದಲ್ಲಿ ಕಂಡುಬರುವ ಕೆಲವು ದೋಷಗಳನ್ನು ಸರಿಪಡಿಸಬೇಕೆಂದು ಪ್ರಯತ್ನಿಸುತ್ತಾನೆ; ಅವು ಸರಿಯಾಗುವದರೊಳಗಾಗಿ ಇನ್ನು ಬೇರೆ ಒಂದು ಸಾವಿರ ದೋಷಗಳು ಮತ್ತೊಂದು ಕಡೆಯಲ್ಲಿ ಎದ್ದುಕೊಂಡಿರುತ್ತವೆ. ಇದು ಬೀಳುತ್ತಿರುವ ಹಳೇ ಮನೆಯಂತಿರುವದು; ಅದನ್ನು ಒಂದು ಕಡೆಯಲ್ಲಿ ಸರಿಪಡಿಸಿದರೆ ಇನ್ನೊಂದು ಕಡೆ ಬೀಳುವದಕ್ಕೆ ಮೊದಲಾಗುತ್ತದೆ. ಇಂಡಿಯದಲ್ಲಿ ನಮ್ಮ ಸುಧಾರಕರು ವಿಧವೆಯನ್ನು ಹಾಗೆಯೇ ನಿರ್ಬಂಧದಿಂದ ವಿವಾದಸ್ಥಿತಿಯಲ್ಲಿ ಇಟ್ಟಿರುವದರಿಂದಾಗುವ ಕೇಡುಗಳನ್ನು ನಿಂದಿಸಿ ಆ ಪದ್ಧತಿಯನ್ನು ವಿರೋಧಿಸಿ ಬೋಧಿಸುತ್ತಿರುತ್ತಾರೆ. ಪಶ್ಚಿಮದಲ್ಲಿ ಮದುವೆಯಿಲ್ಲದಿರುವದೇ ಒಂದು ದೊಡ್ಡ ದೋಷವಾಗಿಬಿಟ್ಟಿರುತ್ತದೆ. ಒಂದು ಕಡೆಯಲ್ಲಿ ಮದುವೆಯಿಲ್ಲದವರಿಗೆ ಸಹಾಯಮಾಡಬೇಕಾಗಿದೆ, ಅಲ್ಲಿ ಅವರು ಸಂಕಟಪಡುತ್ತಿದ್ದಾರೆ; ಇನ್ನೊಂದು ಕಡೆಯಲ್ಲಿ ವಿಧವೆಯರಿಗೆ ಸಹಾಯ ಮಾಡಬೇಕಾಗಿದೆ, ಅಲ್ಲಿ ಅವರು ಸಂಕಟಪಡುತ್ತಿದ್ದಾರೆ. ಇದೊಂದು ಬಗೆಯ ಹಳೆಯ ಹರಿವಾಯುವಿನಂತಿರುತ್ತದೆ; ತಲೆಯಿಂದ ಅದನ್ನು ನೂಕಿದರೆ ಅದು ಮೈಮೇಲಕ್ಕೆ ಬರುತ್ತದೆ, ಅಲ್ಲಿಂದಲೂ ತಳ್ಳಿದರೆ ಹೆಜ್ಜೆಗೆ ಇಳಿದುಕೊಳ್ಳುತ್ತದೆ. ಸುಧಾರಕರು ಹುಟ್ಟಿ ವಿದ್ಯೆಯೂ ಐಶ್ವರ್ಯವೂ ಸಂಸ್ಕೃತಿಯೂ ಎಲ್ಲಿಯೋ ಕೆಲವರು ಆರಿಸಿದ ಜನರಲ್ಲಿ ಇರಬಾರದೆಂದು ಬೋಧಿಸುತ್ತಾರೆ; ಅವುಗಳು ಎಲ್ಲರಿಗೂ ದೊರಕಲಿ ಎಂದು ತಮ್ಮ ಕೈಯಲ್ಲಾದ ಪ್ರಯತ್ನವನ್ನೆಲ್ಲ ಮಾಡುತ್ತಾರೆ. ಇವುಗಳಿಂದ ಕೆಲವರಿಗೆ ಸುಖವುಂಟಾಗಲೂ ಬಹುದು, ಆದರೆ ಸಂಸ್ಕೃತಿಯು ಬಂದಂತೆಲ್ಲ ಬಾಹ್ಯಸುಖವು ಕಡಿಮೆಯಾಗುತ್ತದೆ. ಸೌಖ್ಯದ ಅರಿವಿನೊಡನೆ ದುಃಖದ ಅರಿವೂ ಬರುತ್ತದೆ. ಹೀಗಿರುವಲ್ಲಿ ನಾವು ಎತ್ತಕಡೆ ಹೋಗೋಣ? ಈಗ ನಮ್ಮ ವಶದಲ್ಲಿರುವ ಅತ್ಯಲ್ಪವಿಷಯಭೋಗದಿಂದ ಕೂಡ ಮತ್ತೆಲ್ಲಿಯೋ ಒಂದು ಕಡೆಯಲ್ಲಿ ಅಷ್ಟೇ ದುಃಖವುಂಟಾಗುತ್ತಿರುವದು. ಇದೇ ನಿಯಮವು. ತರುಣರಿಗೆ ಇದು ಸ್ಪಷ್ಟವಾಗಿ ತಿಳಿಯದೆ ಹೋಗಬಹುದು, ಆದರೆ ಯಾರು ತಕ್ಕಷ್ಟು ವಯಸ್ಸಾಗಿರುವರೋ, ಯಾರು ತಕ್ಕಮಟ್ಟಿಗೆ ಕಷ್ಟಪಟ್ಟಿರುವರೋ, ಅವರಿಗೆ ಇದರ ಅರಿವಾಗಿರುತ್ತದೆ. ಇದೇ **ಮಾಯೆ.**

ಹಗಲೂ ಇರುಳೂ ಹೀಗೆಯೇ ನಡೆಯುತ್ತಿರುವದು. ಈ ಸಮಸ್ಯೆಯನ್ನು ಬಿಡಿಸುವದೆಂಬುದು ಆಗದ ಮಾತು. ಅದೇಕೆ? ಎಂದರೆ ಇದಕ್ಕೆ ಉತ್ತರವನ್ನು ಹೇಳುವದಕ್ಕೆ ಆಗುವಂತಿಲ್ಲ. ಏಕೆಂದರೆ ಪ್ರಶ್ನೆಯನ್ನೇ ತರ್ಕಸಮ್ಮತವಾಗಿ ಹಾಕುವದಕ್ಕೆ ಬರುವಹಾಗಿಲ್ಲ. ನಿಜವಾಗಿ ನೋಡಿದರೆ ಇಲ್ಲಿ 'ಹೇಗೆ?' – ಎಂಬುದೂ ಇಲ್ಲ, 'ಏಕೆ?' ಎಂಬುದೂ ಇಲ್ಲ; ಅದು ಹಾಗಿದೆ, ಅದನ್ನು ತಪ್ಪಿಸಿಕೊಳ್ಳುವದಕ್ಕೆ ಆಗುವಂತಿಲ್ಲ

– ಎಂಬುದಿಷ್ಟೇ ನಮಗೆ ತಿಳಿದಿರುವದು. ನಿಜವಾಗಿ ಅದನ್ನು ಸರಿಯಾಗಿ ಗ್ರಹಿಸುವದು ಕೂಡ ಅದರ ಯಥಾಸ್ಥಿತಿಚಿತ್ರವೊಂದನ್ನು ಮನಸ್ಸಿನಲ್ಲಿ ಕಲ್ಪಿಸಿಕೊಳ್ಳುವದು ಕೂಡ ನಮ್ಮ ಶಕ್ತಿಗೆ ಅತೀತವಾಗಿರುತ್ತದೆ. ಹೀಗಿರುವಲ್ಲಿ ಇದನ್ನು ಬಿಡಿಸುವದೆಲ್ಲಿ ಬಂತು?

ಮಾಯೆಯೆಂದರೆ ಈ ವಿಶ್ವದ ಸ್ಥಿತಿಯನ್ನೂ ಅದರ ಆಗುಹೋಗುಗಳನ್ನೂ ಕುರಿತ ಹೇಳಿಕೆಯು. ಈ ಮಾತನ್ನು ಕೇಳಿದರೆ ಜನರು ಹೆದರಿಕೊಳ್ಳುತ್ತಾರೆ. ಆದರೆ ನಾವು ಧೀರರಾಗಿರಬೇಕು. ವಿಷಯಗಳನ್ನು ಮುಚ್ಚಿಡುವದೇನೂ ಪರಿಹಾರವನ್ನು ಕಂಡುಹಿಡಿಯುವದಕ್ಕೆ ಉಪಾಯವಲ್ಲ. ಮೊಲವನ್ನು ನಾಯಿಗಳು ಓಡಿಸಿಕೊಂಡು ಬಂದರೆ ಅದು ತಲೆಯನ್ನು ತಗ್ಗಿಸಿಕೊಂಡು ಇನ್ನು ಸುಖವಾಗಿರುವೆನೆಂದುಕೊಳ್ಳುವದೆಂಬುದು ನಿಮಗೆಲ್ಲ ತಿಳಿದೇ ಇದೆಯಷ್ಟೇ; ಇದರಂತೆಯೇ ಶುಭದೃಷ್ಟಿಯನ್ನನುಸರಿಸುವಾಗ ನಾವೂ ಈ ಮೊಲದ ಅನುಕರಣವನ್ನೇ ಮಾಡಿದಂತಾಗುತ್ತದೆ. ಇದೇನೂ ಪರಿಹಾರವಲ್ಲ. ಇದರ ಮೇಲೆ ಕೆಲವು ಆಕ್ಷೇಪಗಳುಂಟು; ಆದರೆ ಈ ಆಕ್ಷೇಪಗಳನ್ನು ಮಾಡುವವರು ಜೀವನದ ಸುಖಸಾಮಗ್ರಿಗಳನ್ನಿಟ್ಟುಕೊಂಡಿರುವವರೆಂಬುದನ್ನು ನೀವು ನೆನಪಿನಲ್ಲಿಟ್ಟಿರಬೇಕು. ಈ ದೇಶದಲ್ಲಿ* ದುಃಖದರ್ಶಿಯಾಗುವದೆಂದರೆ ಬಲುಕಷ್ಟ. ಇಲ್ಲಿ ಯಾರನ್ನು ಕಂಡರೂ ಪ್ರಪಂಚವು ಎಷ್ಟು ವಿಚಿತ್ರವಾಗಿ ನಡೆಯುತ್ತಿದೆ, ಎಷ್ಟು ಪ್ರಗತಿಯುಳ್ಳದ್ದಾಗಿದೆ!– ಎನ್ನುತ್ತಿರುವರು; ಆದರೆ ತಾನು ಹೇಗಿರುವನೋ ತನ್ನ ಪ್ರಪಂಚವೂ ಹಾಗೆಯೇ ಇರುತ್ತದೆ. ಇಲ್ಲಿ ಕೆಲವು ಹಳೆಯ ವಿಚಾರಗಳು ತಲೆದೋರುತ್ತವೆ; ಕ್ರಿಸ್ತಿಯನ್ ಜನಾಂಗಗಳೇ ಮುಂದುವರಿಯುತ್ತಿರುವದರಿಂದ ಕ್ರಿಸ್ತಿಯನ್ ಮತವೇ ಪ್ರಪಂಚದ ಮತಗಳಲ್ಲೆಲ್ಲ ನಿಜವಾದ ಮತವಾಗಿರಬೇಕು –ಎಂದು ಕೆಲವರು ಹೇಳಬಹುದು. ಆದರೆ ಈ ಮಾತು ತನಗೆ ತಾನೇ ವಿರುದ್ಧವಾಗಿರುತ್ತದೆ, ಏಕೆಂದರೆ ಕ್ರಿಸ್ತಿಯನ್ ಜನಾಂಗದ ಅಭಿವೃದ್ಧಿಯು ಕ್ರಿಸ್ತಿಯನ್ನರಲ್ಲದವರ ದೌರ್ಭಾಗ್ಯವನ್ನವಲಂಬಿಸಿಕೊಂಡಿರುತ್ತದೆ. ಕ್ರಿಸ್ತಿಯನ್ನರಿಗೆ ಕಿತ್ತುಕೊಂಡು ತಿನ್ನುವದಕ್ಕೆ ಆಹಾರವಾಗಿ ಯಾರಾದರೂ ಇದ್ದೇ ಇರಬೇಕು. ಇಡಿಯ ಭೂಮಂಡಲವೇ ಕ್ರಿಸ್ತಿಯನ್ ಮತವನ್ನವಲಂಬಿಸಿತೆಂದು ಇಟ್ಟುಕೊಳ್ಳಿರಿ, ಆಗ ಕ್ರಿಸ್ತಿಯನ್ ಜನಾಂಗವು ಬಡವಾಗಬೇಕಾಗುವದು; ಏಕೆಂದರೆ ಆಗ ಅವರಿಗೆ ಬಡಿದು ಬಾಯಿಗೆ ಹಾಕಿಕೊಳ್ಳುವದಕ್ಕೆ ಯಾವ ಕ್ರಿಸ್ತಿಯನ್ನರಲ್ಲದ ಜನಾಂಗವೂ ಇರುವದಿಲ್ಲ# ಈ ರೀತಿಯಲ್ಲಿ ನೋಡಿದರೆ ಈ ವಾದವು ತನ್ನನ್ನು ತಾನೇ

---

* ಇಂಗ್ಲೆಂಡಿನಲ್ಲಿ

* ಎಲ್ಲರೂ ಕ್ರಿಸ್ತಿಯನ್ನರಾಗುವವರೆಗೂ ಕಾಯಬೇಕಾದದ್ದೇ ಇಲ್ಲವೆಂಬುದನ್ನು ಕಳೆದ ಮಹಾಯುದ್ಧದಲ್ಲಿ ಕ್ರಿಸ್ತಿಯನ್ನರು ಒಬ್ಬರನ್ನೊಬ್ಬರು ಕೊಂದು ತೋರಿಸಿಕೊಟ್ಟರು; ಈಗ ಇಟಲಿಯವರೂ ಅಬೀಸಿನಿಯದವರೂ ಅದನ್ನೇ ಸ್ಪಷ್ಟಗೊಳಿಸುತ್ತಿದ್ದಾರೆ.

ಖಂಡಿಸಿಕೊಳ್ಳುತ್ತಿದೆ. ಪ್ರಾಣಿಗಳು ಮರಗಿಡಗಳನ್ನು ತಿಂದು ಜೀವಿಸುತ್ತವೆ; ಮನುಷ್ಯರು ಪ್ರಾಣಿಗಳನ್ನು ತಿಂದು ಜೀವಿಸುತ್ತಿದ್ದಾರೆ, ಅಷ್ಟೇಕೆ? ಇದಕ್ಕಿಂತಲೂ ಕೀಳು ಕೆಲಸವನ್ನು ಅವರು ಮಾಡುತ್ತಿದ್ದಾರೆ; ಅವರು ಒಬ್ಬರನ್ನೊಬ್ಬರು, ಬಲ್ಲಿದರಾದವರು ದುರ್ಬಲರನ್ನು, ತಿಂದು ಜೀವಿಸುತ್ತಿದ್ದಾರೆ. ಇದಕ್ಕೇನು ಪರಿಹಾರವನ್ನು ಕಂಡು ಹಿಡಿಯುತ್ತೀರಿ? ಪ್ರತಿಯೊಂದು ದಿನವೂ ಇದಕ್ಕೆ ಎಷ್ಟೋ ಬಗೆಯ ಉತ್ತರಗಳು ಕೇಳಬರುತ್ತಿವೆ; ಕೊನೆಗೆ ಎಲ್ಲಾ ಸರಿಹೋಗುತ್ತದೆ ಎಂದು ಕೆಲವರು ಹೇಳುತ್ತಾರೆ. ಹೀಗೂ ಆಗಬಹುದೆಂದು ಒಪ್ಪಿಕೊಳ್ಳೋಣ, ಆದರೂ ಒಳ್ಳೆಯದನ್ನು ಮಾಡುವದಕ್ಕೆ ಈ ಪಿಶಾಚ ರೀತಿ ಏಕೆ? ಪಿಶಾಚಮಾರ್ಗಗಳನ್ನು ಬಿಟ್ಟು ಒಳ್ಳೆಯ ರೀತಿಯಿಂದಲೇ ಒಳ್ಳೆಯದನ್ನು ಮಾಡಬಾರದೇಕೆ? ಇಂದಿನ ಮಾನವರ ಮುಂದಿನ ವಂಶದವರು ಸುಖವಾಗಿರುವರೆನ್ನುವಿರಾ? ಅದಿರಲಿ. ಈಗ ಇಷ್ಟೊಂದು ಕಷ್ಟವಿರುವದು ಏತಕ್ಕೆ? ಇದಕ್ಕೆ ಯಾವ ಉತ್ತರವೂ ಇಲ್ಲವೇ ಇಲ್ಲ. ಇದೇ **ಮಾಯೆ**.

ಆಗಾಗ ಜನರು ಹೇಳುತ್ತಿರುವ ಇನ್ನೊಂದುವಾದವನ್ನು ಕೇಳಿರಿ, ವಿಕಾಸ ಕ್ರಮದಲ್ಲಿ ದುಃಖವನ್ನು ಕಡಿಮೆಮಾಡುವದೊಂದು ವಿಶೇಷವಿದೆಯಂತೆ. ಈ ದುಃಖವು ಪ್ರಪಂಚದಲ್ಲಿ ಒಂದೇ ಸಮನೆ ಕಡಿಮೆಯಾಗುತ್ತಲೇ ಇರುವದಂತೆ, ಕೊನೆಗೆ ಸುಖವೇ ಉಳಿದುಕೊಳ್ಳುವದಂತೆ! ಕೇಳುವದಕ್ಕೇನೋ ಇದು ಚೆನ್ನಾಗಿದೆ: ಈ ಲೋಕದ ಭೋಗ ಸಾಮಗ್ರಿಗಳು ತಕ್ಕಮಟ್ಟಿಗೆ ಯಾರಲ್ಲಿವೆಯೋ, ಪ್ರತಿದಿನವೂ ಹೆಣಗಾಡಬೇಕಾದ ಅವಶ್ಯಕತೆಯು ಯಾರಿಗಿಲ್ಲವೋ ಯಾರು ಈ ವಿಕಾಸವೆನ್ನುತ್ತಾರಲ್ಲ, ಅದರ ಚಕ್ರಕ್ಕೆ ಸಿಕ್ಕಿ ನುಗ್ಗುನುಚ್ಚಾಗುತ್ತಿಲ್ಲವೋ, ಅಂಥವರ ಹೆಮ್ಮೆಗೆ ಉತ್ತೇಜಕವಾಗಿಯೂ ಇರುತ್ತದೆ. ಇಂಥ ಸೌಭಾಗ್ಯವಂತರಿಗೆ ಇದು ಸೊಗಸಾಗಿ, ಪ್ರಿಯವಾಗಿಯೇ ಇರುತ್ತದೆ. ಪ್ರಾಕೃತರ ಗುಂಪಿನವರಿಗೆ ಕಷ್ಟವಾಗಿರಬಹುದು, ಆದಮಾತ್ರಕ್ಕೇನು? ಅವರು ಸಾಯಲಿ, ಅವರೇನು ಬಲುಮುಖ್ಯ? – ಎನ್ನುವದೇ ಇವರ ವಾದವಾಗಿರುತ್ತದೆ. ಇದೇನೋ ಬಲು ಚೆನ್ನಾಗಿದೆ, ಆದರೂ ಈ ವಾದದಲ್ಲಿ ಮೊದಲಿಂದ ಕೊನೆಯವರೆಗೂ ದೋಷವೇ ಇರುತ್ತದೆ. ಮೊದಲನೆಯದಾಗಿ ಈ ಪ್ರಪಂಚದಲ್ಲಿ ಅಭಿವ್ಯಕ್ತವಾಗಿರುವ ಸುಖವೂ ದುಃಖವೂ ಎರಡು ಸ್ವತಂತ್ರತತ್ತ್ವಗಳೆಂಬುದನ್ನು ಇದರಲ್ಲಿ ನಿರಾಧಾರವಾಗಿ ಕಲ್ಪಿಸಿಕೊಂಡಿರುತ್ತದೆ; ಎರಡನೆಯದಾಗಿ ಇದು ಮತ್ತೊಂದು ಅವಿವೇಕದ ಕಲ್ಪನೆಯನ್ನು ಮಾಡಿಕೊಂಡಿರುತ್ತದೆ; ಅದೇನೆಂದರೆ ಸುಖದ ರಾಶಿಯು ಹೆಚ್ಚುತ್ತಲೇ ಇರುವದೆಂದೂ ದುಃಖದ ರಾಶಿಯು ಕಡಿಮೆಯಾಗುತ್ತಲೇ ಇರುವದೆಂದೂ ಅದು ಒಪ್ಪಿಕೊಂಡಿರುತ್ತದೆ? ಹೀಗೆ ವಿಕಾಸಕ್ರಮವೆಂದು ಇವರು ಕರೆಯುತ್ತಿರುವ ನಿಯಮದಿಂದ ದುಃಖವು ಕಡಿಮೆಯಾಗುತ್ತಲೇ ಇದ್ದರೆ ಕೊನೆಗೆ ಬರಿಯ ಸುಖವೇ

ಉಳಿದುಕೊಂಡುಬಿಡುತ್ತದೆಯಲ್ಲವೆ ? ಇದು ಹೇಳುವದಕ್ಕೇನೋ ಬಹು ಸುಲಭವಾಗಿದೆ: ಆದರೆ ದುಃಖವೆಂಬುದು ಬರುಬರುತ್ತಾ ಕಡಿಮೆಯಾಗುತ್ತಿರುವದೆಂಬುದನ್ನು ತೋರಿಸಿಕೊಡುವದಕ್ಕೆ ಆಗುತ್ತದೆಯೆ? ಉದಾಹರಣೆಗೆ ಕಾಡಿನಲ್ಲಿಯೇ ಇದ್ದುಕೊಂಡು ಮನಸ್ಸನ್ನು ಸಂಸ್ಕಾರಗೊಳಿಸಲಾರದೆ ಇರುವವನಾಗಿಯೂ ಪುಸ್ತಕವನ್ನೋದಲಾರದೆಯೂ ಬರೆಯುವದೆಂಬುದಿದೆಯೆಂಬ ಸಮಾಚಾರವನ್ನೇ ಕೇಳದವನಾಗಿಯೂ ಇರುವವನೊಬ್ಬನನ್ನು ತೆಗೆದುಕೊಳ್ಳಿ. ಅವನಿಗೆ ಬಲವಾದ ಗಾಯವಾದರೂ ಅದು ಬಲು ಬೇಗನೆ ವಾಸಿಯಾಗಿಬಿಡುತ್ತದೆ. ಆದರೆ ನಮ್ಮನ್ನು ನೋಡಿ, ಸ್ವಲ್ಪ ಎಲ್ಲಾದರೂ ಮೈಯಲ್ಲಿ ಒಂದು ಸಣ್ಣ ಗೀರಾದರೆ ಸಾಕು, ಸಾಯುತ್ತೇವೆ. ಯಂತ್ರಗಳಿಂದ ಪದಾರ್ಥಗಳು ಅಗ್ಗವಾಗುತ್ತಿವೆ, ಇದರಿಂದ ಪ್ರಗತಿಯೂ ವಿಕಾಸವೂ ಆಗುತ್ತಿದೆ; ಆದರೆ ಒಬ್ಬನು ಹಣಗಾರನಾಗುವದಕ್ಕಾಗಿ ಕೋಟಿಗಟ್ಟಲೆಯ ಜನರು ಹಾಳಾಗುತ್ತಾರೆ, ಸಾವಿರಗಟ್ಟಲೆಯ ಜನರು ಬಡವರಾಗುತ್ತಾ ಹೋಗುತ್ತಿದ್ದಾರೆ, ಮಾನವರು ಹಿಂಡುಗಟ್ಟಲೆ ದಾಸರಾಗುತ್ತಿದ್ದಾರೆ. ಹೀಗೆಯೇ ನಡೆಯುತ್ತಿದೆ. ಪಶುಮಾನವನು ಇಂದ್ರಿಯಗಳಲ್ಲಿಯೇ ಜೀವಿಸುತ್ತಿರುತ್ತಾನೆ. ತಿನ್ನುವದಕ್ಕೆ ಸಾಕಾದಷ್ಟು ದೊರೆಯದಿದ್ದರೆ ಅವನಿಗೆ ದುಃಖವಾಗುತ್ತದೆ; ಅಥವಾ ಅವನ ಶರೀರಕ್ಕೇನಾದರೂ ಆದರೆ ಅವನಿಗೆ ದುಃಖವಾಗುತ್ತದೆ. ಅವನ ಸುಖವಾಗಲಿ ದುಃಖವಾಗಲಿ ಇಂದ್ರಿಯಗಳಲ್ಲಿಯೇ ಮೊದಲಾಗಿ ಇಂದ್ರಿಯಗಳಲ್ಲಿಯೇ ಕೊನೆಗಾಣುವದು. ಇವನು ಮುಂದುವರಿದನೋ ಇಲ್ಲವೋ, ಇವನ ಸುಖದ ದಿಗಂತವು ವಿಸ್ತರಿಸಿತೋ ಇಲ್ಲವೋ, ಅದಕ್ಕೆ ತಕ್ಕಷ್ಟು ಪ್ರಮಾಣದಲ್ಲಿ ದುಃಖದ ದಿಗಂತವೂ ವಿಸ್ತರಿಸುತ್ತದೆ. ಕಾಡಿನಲ್ಲಿರುವ ಮನುಷ್ಯನಿಗೆ ಪ್ರೇಮ ವಿಷಯದಲ್ಲಿ ಅಸೂಯೆಗೊಳ್ಳು ವದೆಂದರೇನೆಂಬುದಾಗಲಿ, ಕಾನೂನಿನ ಕೋರ್ಟುಗಳಿಗೆ ಹೋಗುವದೆಂದರೇನೆಂಬುದಾಗಲಿ ಕಂದಾಯವನ್ನು ತೆರುವದೆಂದರೇನೆಂಬುದಾಗಲಿ, ಸಮಾಜದ ನಿಂದೆಗೆ ಒಳಗಾಗುವದೆಂದರೇ ನೆಂಬುದಾಗಲಿ, ಹಗಲೂ ಇರುಳೂ ಪ್ರತಿಯೊಬ್ಬ ಮಾನವನ ಹೃದಯದಲ್ಲಿಯೂ ಒಳಹೊಕ್ಕು ಪರೀಕ್ಷಿಸಿ ನೋಡುವ ಮಾನವನು ಕಲ್ಪಿಸಿರುವ ಪೈಶಾಚ ರಾಜ್ಯದ ಅತ್ಯದ್ಭುತ ಪಾಳೆಯಗಾರರಿಗೆ ಸಿಕ್ಕಿ ನರಳುವದೆಂದರೇನೆಂಬುದಾಗಲಿ ಅವನಿಗೆ ತಿಳಿದಿರುವದಿಲ್ಲ. ಮಾನವನು ಎಷ್ಟೇ ಜ್ಞಾನವಂತನೆಂದು ಹೆಮ್ಮೆಕೊಚ್ಚಿಕೊಂಡರೂ ಎಷ್ಟೇ ಅಭಿಮಾನಪಟ್ಟರೂ ಮಿಕ್ಕ ಯಾವ ಪ್ರಾಣಿಗಿಂತಲೂ ಸಾವಿರಪಾಲು ಪೈಶಾಚವರ್ತನೆಯನ್ನನುಸರಿಸಬಲ್ಲನೆಂಬುದನ್ನು ಅವನು ಅರಿಯನು. ಈ ರೀತಿಯಲ್ಲಿ ನೋಡಿದರೆ ಇಂದ್ರಿಯಗಳಿಂದ ಹೊರಕ್ಕೆ ಬಂದ ಒಡನೆ ನಮಗೆ ಸುಖಸಾಧನದ ಉತ್ಕೃಷ್ಟಶಕ್ತಿ ವಿಶೇಷಗಳೂ ಏರ್ಪಡುವವೆಂತಲೂ ಅದರ ಜೊತೆಗೆ ದುಃಖ ಸಾಧನದ ಹೆಚ್ಚಿನ ಶಕ್ತಿವಿಶೇಷಗಳೂ ಏರ್ಪಟ್ಟೇ ತೀರಬೇಕೆಂತಲೂ ಹೇಳಬೇಕಾಗುವದು. ಆಗ ನಮ್ಮ ನರಗಳು ಹೆಚ್ಚು

ಸೂಕ್ಷ್ಮವಾಗುತ್ತವೆ, ಆದ್ದರಿಂದ ಹೆಚ್ಚು ದುಖಕ್ಕೆ ವಶವಾಗಬಲ್ಲವಾಗುತ್ತವೆ, ಯಾವ ಸಮಾಜದಲ್ಲಿಯೋ ಆಗಲಿ ಮೂಢನಾಗಿರುವ ಪ್ರಾಕೃತ ಮನುಷ್ಯನನ್ನು ಬಯ್ದರೆ ಅವನು ಅಷ್ಟೇನೂ ಅದನ್ನು ಹಚ್ಚಿಕೊಳ್ಳುವದಿಲ್ಲವೆಂದೂ ಬಲವಾಗಿ ಏಟುಕೊಟ್ಟರೆ ಮಾತ್ರ ಅವನಿಗೆ ಸಂಕಟವಾಗುತ್ತದೆಂಬೆಂದೂ ಕಂಡು ಬರುತ್ತದೆ. ಆದರೆ ಸಂಸ್ಕೃತನಾಗಿರುವವನು ಒಂದೇ ಒಂದು ಬೈಗುಳನ್ನು ಕೂಡ ತಡೆಯಲಾರನು; ಏಕೆಂದರೆ ಅವನ ನರಗಳು ಅಷ್ಟು ಸೂಕ್ಷ್ಮವಾಗಿಬಿಟ್ಟಿರುತ್ತವೆ. ಅವನಿಗೆ ಸುಖಕ್ಕೆ ಹೇಗೆ ಯೋಗ್ಯತೆಯು ಹೆಚ್ಚಿರುವದೋ ಅದರಂತೆ ಅದರೊಡನೆ ದುಃಖಯೋಗ್ಯತೆಯೂ ಹೆಚ್ಚಿರುತ್ತದೆ. ಇದನ್ನು ನೋಡಿದರೆ ವಿಕಾಸವಾದಕ್ಕೇನೂ ಬಲವಾದ ಪ್ರಮಾಣವು ದೊರೆಯುವದೆಂದು ಹೇಳುವಹಾಗಿರುವದಿಲ್ಲ. ನಮ್ಮಲ್ಲಿ ಸುಖವಾಗಿರುವದಕ್ಕೆ ತಕ್ಕ ಶಕ್ತಿಯು ಹೆಚ್ಚಿದಂತೆಲ್ಲ ದುಃಖಪಡುವದಕ್ಕೆ ತಕ್ಕ ಶಕ್ತಿಯೂ ಹೆಚ್ಚಿಯೇ ಹೆಚ್ಚುತ್ತದೆ; ಸುಖವಾಗಿರುವ ಯೋಗ್ಯತೆಯು ನಿಯತಾಂತರಶ್ರೇಣಿಯ ಕ್ರಮದಲ್ಲಿ* ಹೆಚ್ಚುತ್ತಿದ್ದರೆ ದುಃಖವಾಗಿರುವ ಯೋಗ್ಯತೆಯು ನಿಯತಗುಣೋತ್ತರ ಶ್ರೇಣಿಯ ಕ್ರಮದಲ್ಲಿ* ಹೆಚ್ಚುತ್ತಿರುವದೆಂದು ಸಹ ಕೆಲಕೆಲವು ವೇಳೆಗಳಲ್ಲಿ ನನಗೆ ತೋರುತ್ತಿರುತ್ತದೆ. ಅಭ್ಯುದಯದಲ್ಲಿರುವ ನಮ್ಮಗಳಿಗೆ ಎಷ್ಟೆಷ್ಟು ಅಭ್ಯುದಯವಾದರೆ ಅಷ್ಟಷ್ಟು ಸುಖಕ್ಕೂ ದುಃಖಕ್ಕೂ ದ್ವಾರಗಳು ತೆರೆದುಕೊಳ್ಳುವವೆಂಬುದು ಅನುಭವದಲ್ಲಿರುತ್ತದೆ. ಇದೇ **ಮಾಯೆ.**

ಈ ರೀತಿಯಲ್ಲಿ ನೋಡಿದಾಗ ಮಾಯೆಯೆಂಬುದು# ಪ್ರಪಂಚಕ್ಕೆ ಕಾರಣವನ್ನು ತಿಳಿಸುವದಕ್ಕಾಗಿ ಕಟ್ಟಿರುವ ಒಂದಾನೊಂದು ವಾದವಲ್ಲವೆಂದು ಗೊತ್ತಾಗುತ್ತದೆ. ಮಾಯೆಯೆಂಬುದು ಇರುವ ಅಂಶಗಳನ್ನು ಇದ್ದಂತೆ ತಿಳಿಸುವ

* 3, 5, 7, 9 – ಹೀಗೆ ಗೊತ್ತಾದ ಅಂತರದಲ್ಲಿ ಹೆಚ್ಚುವ ಸಂಖ್ಯೆಗಳ ಶ್ರೇಣಿಯನ್ನು ನಿಯತಾಂತರಶ್ರೇಣಿ (arithmeticl progression), 3, 6, 12, 24 – ಹೀಗೆ ಇಂತಿಷ್ಟೂ ಪಟ್ಟಾಗಿ ಹೆಚ್ಚುವದೆಂಬ ನಿಯಮದ ಸಂಖ್ಯೆಗಳ ಶ್ರೇಣಿಯನ್ನು ನಿಯತಗುಣೋತ್ತರ ಶ್ರೇಣಿ (geometrical progression) ಎಂದು ಕರೆಯುತ್ತಾರೆ.

# ಈ ಪ್ರಪಂಚವು ನಾಮರೂಪಾತ್ಮಕವಾಗಿರುವದರಿಂದ ಇದಕ್ಕೊಂದು ನಾಮರೂಪದ ಬೀಜವಿರಬೇಕೆಂದು ನಾವು ಕಲ್ಪಿಸಿಕೊಳ್ಳುವೆವು; ಆ ಬೀಜವನ್ನೇ ಅವ್ಯಾಕೃತ, ಅವ್ಯಕ್ತ, ಮಾಯೆ-ಎಂದು ಶ್ರುತಿಸ್ಮೃತಿಗಳಲ್ಲಿ ಕರೆದಿರುತ್ತದೆ. ಅದು ಅವಿದ್ಯಾಕಲ್ಪಿತವಾಗಿರುವುದರಿಂದ ಜ್ಞಾನವಾಗುವ ವರೆಗೂ ಪರಮಾರ್ಥಸ್ವರೂಪನಾದ ಅದ್ವಿತೀಯಾತ್ಮನನ್ನರಿಯುವದು ಆಗುವದಿಲ್ಲ. ಅಜ್ಞಾನದ ಸ್ಥಿತಿಯಲ್ಲಿರುವವರಿಗೆ ಈ ಮಾಯೆಯನ್ನೇ ಆತ್ಮನ ಶಕ್ತಿಯೆಂದೂ ಶಕ್ತಿಯಿಂದೊಡಗೂಡಿದ ಆತ್ಮನನ್ನೇ ಈಶ್ವರನೆಂದೂ ಶಾಸ್ತ್ರದಲ್ಲಿ ಉಪದೇಶಮಾಡಿರುತ್ತದೆ – ಎಂದು ಶ್ರೀಶಂಕರಾಚಾರ್ಯರು ತಮ್ಮ ಸೂತ್ರಭಾಷ್ಯ(2–1–14)ದಲ್ಲಿ ಬರೆದಿರುತ್ತಾರೆ. ಸ್ವಾಮಿಗಳವರು ಇಲ್ಲಿ ವರ್ಣಿಸಿರುವದು ಮೂಲವಾದ ಬೀಜರೂಪವಾದ ಮಾಯೆಯನ್ನಲ್ಲ; ಮಾಯಾಕಾರ್ಯವಾದ ಪ್ರಪಂಚವನ್ನೇ, ಬೆಳ್ಳಿಯಿಂದಾದ ವಸ್ತುಗಳೆಲ್ಲವೂ ಬೆಳ್ಳಿಯೇ ಆಗಿರುವಂತೆ ಮಾಯಾಕಾರ್ಯವಾದ ಪ್ರಪಂಚವೂ ಮಾಯಾರೂಪವಾಗಿಯೇ ಇರುತ್ತದೆ. ಇದರಲ್ಲಿ ತೋರುವ ಪರಸ್ಪರವಿರುದ್ಧವಾದ ಕೋಟಿಗಳ ದ್ವಂದ್ವಗಳನ್ನು ನೋಡಿದರೆ ಇದು ಅಜ್ಞಾನದ ಕಾರ್ಯವೆಂದೂ ಅನಿರ್ವಚನೀಯವೆಂದೂ ಸ್ಪಷ್ಟವಾಗುತ್ತದಯೆಂಬುದನ್ನು ಹೃದಯಂಗಮವಾದ ರೀತಿಯಲ್ಲಿ ಸ್ವಾಮಿಗಳು ವಿವರಿಸುತ್ತಾರೆ.

ಒಂದಾನೊಂದು ವಾಕ್ಯವಿಶೇಷವು, ಅಷ್ಟೆ; ನಮ್ಮ ಇರವಿನ ಅಡಿಗಟ್ಟೇ ವ್ಯಾಘಾತಮಯವಾಗಿರುವದೆಂದೂ ಈ ಅದ್ಭುತವಾದ ವ್ಯಾಘಾತದಲ್ಲಿಯೇ ನಾವು ಎಲ್ಲೆಲ್ಲಿಯೂ ಸಂಚರಿಸುತ್ತಿರಬೇಕಾಗಿದೆಯೆಂದೂ, ಎಂದರೆ - ಎಲ್ಲೆಲ್ಲಿ ಶುಭವಿದೆಯೋ ಅಲ್ಲಲ್ಲಿ ಅಶುಭವು ಇದ್ದೇ ಇರಬೇಕೆಂದೂ, ಎಲ್ಲೆಲ್ಲಿ ಅಶುಭವಿದೆಯೋ ಅಲ್ಲಲ್ಲಿ ಸ್ವಲ್ಪವಾದರೂ ಶುಭವಿದ್ದೇ ಇರಬೇಕೆಂದೂ, ಎಲ್ಲೆಲ್ಲಿ ಬದುಕಿರುವದೆಂಬುದಿದೆಯೋ ಅಲ್ಲಲ್ಲಿ ಸಾವೂ ಅದನ್ನು ನೆರಳಿನಂತೆ ಹಿಂಬಾಲಿಸಿಕೊಂಡೇ ಇರಬೇಕೆಂದೂ, ಯಾರು ಯಾರು ನಗುವರೋ ಅವರೆಲ್ಲ ಅಳಬೇಕಾಗುವದೆಂದೂ, ಯಾರು ಯಾರು ಅಳುವರೋ ಅವರೆಲ್ಲ ನಗಲೇಬೇಕೆಂದೂ - ತಿಳಿಸುವದೇ ಮಾಯೆಯ ಕೆಲಸವು. ಈ ವಸ್ತುಸ್ಥಿಯನ್ನು ಪರಿಹರಿಸುವದಕ್ಕೂ ಆಗುವಂತಿಲ್ಲ. 'ಒಂದಾನೊಂದು ಸ್ಥಳದಲ್ಲಿ ಶುಭವೊಂದೇ ಇರುವದು, ಅಶುಭವಿರುವದೇ ಇಲ್ಲ; ಅಲ್ಲಿ ನಾವು ನಗುತ್ತಲೇ ಇರುವೆವು, ಎಂದೆಂದಿಗೂ ಅಳುವದೇ ಇಲ್ಲ' ಎಂದು ನಾವು ಕಲ್ಪಿಸಿಕೊಳ್ಳಬಹುದು. ಆದರೆ ಹೀಗಿರುವದು ವಸ್ತುಸ್ವಭಾವದಿಂದಲೇ ಅಸಾಧ್ಯವಾಗಿರುತ್ತದೆ; ಏಕೆಂದರೆ ಉಪಾಧಿಗಳು ಎಲ್ಲೆಲ್ಲಿಯೂ ಒಂದೇ ಆಗಿರುತ್ತವೆ. ಎಲ್ಲೆಲ್ಲಿ ನಮ್ಮಲ್ಲೊಂದು ಮುಗುಳುನಗೆಯನ್ನುಂಟುಮಾಡುವ ಶಕ್ತಿಯಿರುವದೋ, ಅಲ್ಲಲ್ಲಿ ಕಣ್ಣೀರುಗಳನ್ನುಂಟುಮಾಡುವ ಶಕ್ತಿಯೂ ಅಡಗಿಕೊಂಡೇ ಇರುವದು, ಎಲ್ಲೆಲ್ಲಿ ಸುಖವನ್ನುಂಟುಮಾಡುವ ಶಕ್ತಿಯಿರುವದೋ ಅಲ್ಲಲ್ಲಿ ನಮಗೆ ದುಃಖವನ್ನುಂಟುಮಾಡುವ ಶಕ್ತಿಯೂ ಎಲ್ಲಿಯೋ ಒಂದು ಕಡೆ ಅವಿತುಕೊಂಡೇ ಇರುತ್ತದೆ.

ಈ ರೀತಿಯಲ್ಲಿ ನೋಡಿದರೆ ವೇದಾಂತಸಿದ್ಧಾಂತವು ಶುಭದೃಷ್ಟಿಯುಳ್ಳದ್ದೂ ಅಲ್ಲ, ಅಶುಭದೃಷ್ಟಿಯುಳ್ಳದ್ದೂ ಅಲ್ಲ. ಅದು ಈ ಎರಡು ದೃಷ್ಟಿಯ ಅಭಿಪ್ರಾಯಗಳನ್ನೂ ತಿಳಿಸಿ ವಸ್ತುಗಳು ಇದ್ದಂತೆ ಅವನ್ನು ಸ್ವೀಕರಿಸುತ್ತದೆ. ಈ ಪ್ರಪಂಚವು ಶುಭ ಅಶುಭ, ಸುಖ ದುಃಖ-ಈ ಎರಡರ ಮಿಶ್ರಣವೆಂದೂ ಇವೆರಡರಲ್ಲಿ ಒಂದನ್ನು ಹೆಚ್ಚಿಸಿದರೆ ಮತ್ತೊಂದು ಹೆಚ್ಚಿಯೇ ತೀರುವದೆಂದೂ ಅದು ಅಂಗೀಕರಿಸಿರುತ್ತದೆ. ಪೂರ್ಣವಾಗಿ ಉತ್ಕೃಷ್ಟವಾಗಿರುವ ಪ್ರಪಂಚವಾಗಲಿ, ಪೂರ್ಣವಾಗಿ ನಿಕೃಷ್ಟವಾದ ಪ್ರಪಂಚವಾಗಲಿ ಎಂದಿಗೂ ಇರುವದಿಲ್ಲ; ಏಕೆಂದರೆ ಹೀಗೆಂಬ ಭಾವನೆಯು ತನಗೇ ತಾನೇ ವಿರುದ್ಧವಾಗಿರುತ್ತದೆ. ಹೀಗೆ ಬಿಡಿಸಿ ತಿಳಿದುಕೊಂಡದ್ದರಿಂದ ಹೊರಡುವ ಒಂದು ಮಹಾರಹಸ್ಯವೇನೆಂದರೆ ಒಳ್ಳೆಯದು, ಕೆಟ್ಟದ್ದು - ಎಂಬಿವೆರಡೂ ಬೇರೆ ಬೇರೆಯ ಸ್ವತಂತ್ರಸತ್ತೆಗಳಲ್ಲ. ಈ ಲೋಕದಲ್ಲಿ ಇದು ಒಳ್ಳೆಯದು, ಬರಿಯ ಒಳ್ಳೆಯದೇ - ಎಂದು ಹೇಳುವದಕ್ಕೆ ಬರುವ ಪದಾರ್ಥವೂ ಇಲ್ಲ; ಇದು ಕೆಟ್ಟದು, ಬರಿಯ ಕೆಟ್ಟದೇ, ಬರಿಯ ಕೆಟ್ಟದೇ

ಎಂದು ಹೇಳುವದಕ್ಕೆ ಬರುವ ಪದಾರ್ಥವೂ ಈ ಲೋಕದಲ್ಲಿಲ್ಲ. ಯಾವ ದೃಶ್ಯವು ಇಂದು ಒಳ್ಳೆಯದಾಗಿ ತೋರುತ್ತಿರುವದೋ ಅದೇ ನಾಳಿನ ದಿನ ಕೆಟ್ಟದಾಗಿ ತೋರಬಹುದು. ಯಾವದು ಒಬ್ಬನಲ್ಲಿ ದುಃಖವನ್ನುಂಟು ಮಾಡುತ್ತಿರುವದೋ ಅದೇ ಮತ್ತೊಬ್ಬನಲ್ಲಿ ಸುಖವನ್ನುಂಟುಮಾಡಬಹುದು. ಮಗುವಿನ ಕೈಯನ್ನು ಸುಡುವ ಬೆಂಕಿಯೇ ಹಸಿವಿನಿಂದ ಸಾಯುತ್ತಿರುವ ಒಬ್ಬಾತನಿಗೆ ಮೃಷ್ಟಾನ್ನವನ್ನು ಮಾಡಿಕೊಡಬಹುದು. ಯಾವ ನಾಡಿಗಳು ದುಃಖವೇದನೆಗಳನ್ನು ನಮಗೆ ತಂದು ತಿಳಿಸುತ್ತಿರುವವೋ ಅವೇ ಸುಖಾತ್ಮಕವೇದನೆಗಳನ್ನೂ ತಿಳಿಸುತ್ತಿರುವವು. ಆದ್ದರಿಂದ ಕೆಟ್ಟದ್ದನ್ನು ನಿಲ್ಲಿಸುವದಕ್ಕೆ ಇರುವ ಒಂದೇ ಒಂದು ಉಪಾಯವು ಯಾವದೆಂದರೆ ಒಳ್ಳೆಯದನ್ನೂ ನಿಲ್ಲಿಸಿಬಿಡುವದು; ಇದಕ್ಕಿಂತ ಬೇರೆಯೇ ಉಪಾಯವಿಲ್ಲ. ಸಾವನ್ನು ನಿಲ್ಲಿಸಿ ಬಿಡಬೇಕಾದರೆ ಬದುಕನ್ನೂ ನಿಲ್ಲಿಸಬೇಕಾಗುವದು. ಸಾವಿಲ್ಲದ ಬದುಕೆಂಬುದೂ ದುಃಖವಿಲ್ಲದ ಸುಖವೆಂಬುದೂ ತನಗೆ ತಾನೆ ವಿರುದ್ಧವಾಗಿರುವದು; ಇವೆರಡರಲ್ಲಿ ಯಾವದೊಂದೂ ತಾನೊಂದೇ ಕಂಡುಬರುವದಿಲ್ಲ. ಏಕೆಂದರೆ ಇವುಗಳಲ್ಲಿ ಒಂದೊಂದೂ ಒಂದೇ ವಸ್ತುವಿನ ರೂಪಾಂತರ ಮಾತ್ರವಾಗಿರುತ್ತದೆ. ನಿನ್ನಿನ ದಿನ ಯಾವದನ್ನು ನಾನು ಒಳ್ಳೆಯದೆಂದೆಣಿಸಿದ್ದೆನೋ ಅದನ್ನು ಇಂದು ನಾನು ಒಳ್ಳೆಯದೆಂದು ಭಾವಿಸುವದಿಲ್ಲ. ನನ್ನ ಯಾವ ಯಾವ ಹೆಗ್ಗುರಿಗಳು ಇದ್ದವೆಂಬುದನ್ನು ಕಂಡುಕೊಂಡರೆ ಇದೇ ಸರಿಯೆಂದು ಗೊತ್ತಾಗುತ್ತದೆ. ಒಂದಾನೊಂದು ಕಾಲದಲ್ಲಿ ನನಗೆ ಎರಡು ಬಲಿಷ್ಠವಾದ ಕುದುರೆಗಳ ಗಾಡಿಯಲ್ಲಿ ಸವಾರಿಮಾಡಬೇಕೆಂಬ ಆಸೆಯಿತ್ತು; ಮತ್ತೊಂದು ವೇಳೆಯಲ್ಲಿ ಒಂದಾನೊಂದು ಬಗೆಯ ಮಿಠಾಯಿ ಮಾಡುವದಕ್ಕೆ ಬಂದರೆ ನನಗೆ ಪೂರ್ಣಸುಖವು ಸಿಕ್ಕುವದೆಂದೆಣಿಸಿಕೊಂಡಿದ್ದೆನು; ಇನ್ನೂ ಈಚೆಗೆ ನನಗೆ ಹೆಂಡಿರು ಮಕ್ಕಳೂ ಬೇಕಾದಷ್ಟು ಹಣಕಾಸೂ ಇದ್ದರೆ ಪೂರ್ಣತೃಪ್ತಿಯಾಗುವದೆಂದು ಭಾವಿಸಿಕೊಂಡೆನು. ಈಗ ನೋಡಿದರೆ ಈ ಗುರಿಗಳೆಲ್ಲ ಶುದ್ಧಹುಡುಗಾಟಿಕೆಯು ಅವಿವೇಕವೆಂದು ಅವೆಲ್ಲವನ್ನೂ ಹಾಸ್ಯಮಾಡುತ್ತಿದ್ದೇನೆ. ನಮ್ಮ ವ್ಯಕ್ತಿತ್ವವನ್ನು ಬಿಡಬೇಕಾಗುವದಲ್ಲ! - ಎಂದು ಅಂಜಿಕೊಳ್ಳುವಂತೆ ಮಾಡುವ, ನಮ್ಮ ಧ್ಯೇಯಗಳನ್ನೆಲ್ಲ ನೋಡಿ ನಗುವಂಥ ಒಂದಾನೊಂದು ಕಾಲವು ಬಂದೇ ತೀರುವದೆಂದು ವೇದಾಂತವು ಹೇಳುತ್ತದೆ. ನಮ್ಮಲ್ಲಿ ಒಬ್ಬೊಬ್ಬರೂ ಈ ಶರೀರವು ಬೇಕಾದಷ್ಟು ಕಾಲದವರೆಗೆ ಇರಬೇಕೆಂದು ಬಯಸುತ್ತಿರುವೆವು. ಹಾಗಾದರೆ ನಾವು ಸುಖವಾಗಿರುವೆವೆಂದು ನಾವು ಯೋಚಿಸಿಕೊಳ್ಳುತ್ತಿರುವೆವು. ಆದರೆ ಈ ಅಭಿಪ್ರಾಯವನ್ನು ಕಂಡು ನಗುವಂಥ ಒಂದು ಕಾಲವು ಬಂದೇ ತೀರುವದು.

ಒಳ್ಳೆಯದು, ಇದೇ ನಿಜವಾಗಿದ್ದರೆ, ನಾವು ಅತ್ಯಂತ ವಿಪ್ರತಿಷಿದ್ಧಸ್ಥಿತಿಗೆ ಬಂದು ಇಳಿದಂತಾಗುವದು; ಈ ಜಗತ್ತು ಇರವೂ ಅಲ್ಲ, ಇಲ್ಲದಿರುವಿಕೆಯೂ ಅಲ್ಲ; ದುಃಖವೂ ಅಲ್ಲ, ಸುಖವೂ ಅಲ್ಲ – ಇವೆರಡರ ಬೆರಕೆಯೇ ಎಂದಾಗುವದು. ಹಾಗಾದರೆ ವೇದಾಂತದಿಂದಾಗಲಿ ಮಿಕ್ಕ ಎಲ್ಲಾ ತತ್ತ್ವಶಾಸ್ತ್ರಗಳಿಂದಲಾಗಲಿ ಧರ್ಮಗಳಿಂದಲಾಗಲಿ ಆಗಬೇಕಾದದ್ದೇನು? ಎಲ್ಲಕ್ಕೂ ಮೊದಲು ಪರೋಪಕಾರದಿಂದ ಆಗಬೇಕಾದದ್ದೇನು? ಇದೊಂದು ಪ್ರಶ್ನೆಯು ಮನಸ್ಸಿಗೆ ಹತ್ತಿಕೊಳ್ಳುತ್ತದೆ. ಕೆಟ್ಟದನ್ನು ಮಾಡದೆ ಒಳ್ಳೆಯದನ್ನು ಮಾಡುವದಕ್ಕೇ ಆಗದೆ ಇರುವದಾದರೆ, ಯಾವಾಗ ಸುಖವನ್ನುಂಟುಮಾಡೋಣವೆಂದು ಪ್ರಯತ್ನಿಸುವೆವೋ ಆಗಲೆಲ್ಲ ದುಃಖವೇ ಇದ್ದೇ ಇರುವದಾದರೆ, ಪರೋಪಕಾರದಿಂದ ಆಗಬೇಕಾದದ್ದೇನು? – ಎಂದು ಜನರು ಕೇಳಬಹುದು. ಇದಕ್ಕೆ ಉತ್ತರವೇನೆಂದರೆ, ಲೋಕದಲ್ಲಿ ದುಃಖವನ್ನು ಕಡಿಮೆಮಾಡುವದಕ್ಕೇ ಪ್ರಯತ್ನಮಾಡುತ್ತಿರಬೇಕು; ಏಕೆಂದರೆ ಮೊದಲನೆಯದಾಗಿ ನಾವು ಸುಖವಾಗಿರುವದಕ್ಕೆ ಇದೊಂದೇ ಉಪಾಯವು. ನಮ್ಮ ಜೀವಮಾನದಲ್ಲಿ ಒಂದಲ್ಲ ಒಂದು ದಿನ ನಮಗೆಲ್ಲರಿಗೂ ಈ ವಿಷಯವು ಮನವರಿಕೆಯಾಗುವದು. ಜಾಣರಾದವರಿಗೆ ಇದು ಸ್ವಲ್ಪ ಮುಂಚೆ ತಿಳಿದುಬರುವದು. ದಡ್ಡರಿಗೆ ಸ್ವಲ್ಪ ತಡವಾಗಿ ತಿಳಿಯುವದು. ಇದನ್ನು ತಿಳಿದುಕೊಳ್ಳುವದಕ್ಕೆ ದಡ್ಡರಿಗೆ ತುಂಬ ಖರ್ಚುವೆಚ್ಚಗಳಾಗುವವು, ಜಾಣರಿಗೆ ಅಷ್ಟೊಂದು ಖರ್ಚಾಗುವದಿಲ್ಲ, ಅಷ್ಟೆ. ನಾವು ನಮ್ಮನಮ್ಮ ಕರ್ತವ್ಯವನ್ನು ನೆರವೇರಿಸಲೇಬೇಕೆಂಬುದಕ್ಕೆ ಎರಡನೆಯ ಕಾರಣವೇನೆಂದರೆ ಈ ಪರಸ್ಪರ ವಿರುದ್ಧವಾದ ದ್ವಂದ್ವಗಳ ಜೀವನದಿಂದ ಪಾರಾಗುವದಕ್ಕೆ ಅದೊಂದೇ ಮಾರ್ಗವು. ನಾವು ನಮ್ಮ ಕನಸುಗಳಿಂದ ಎಚ್ಚತ್ತು ಈ ಮಳಲಿನ ಕಪ್ಪೆಗೂಡು ಕಟ್ಟುವ ಕೆಲಸವನ್ನು ಬಿಟ್ಟುಬಿಡುವವರೆಗೂ ಈ ಒಳ್ಳೆಯ ಶಕ್ತಿವಿಶೇಷಗಳೂ ಕೆಟ್ಟ ಶಕ್ತಿವಿಶೇಷಗಳೂ ಈ ಜಗದ್ವ್ಯಾಪಾರವನ್ನು ನಮಗಾಗಿ ಸಾಗಿಸಿಕೊಡುತ್ತಲೇ ಇರುತ್ತವೆ. ಈ ತತ್ತ್ವವನ್ನು ನಾವು ತಿಳಿದುಕೊಳ್ಳಲೇಬೇಕು, ಇದನ್ನು ಮನಗಾಣುವದಕ್ಕೆ ಎಷ್ಟೋ ದೀರ್ಘಕಾಲವು ಬೇಕಾಗುವದು.

ಜರ್ಮನಿಯಲ್ಲಿ ಒಂದು ಹೊಸ ಸಿದ್ಧಾಂತವನ್ನು ಕಟ್ಟುವದಕ್ಕೆ ಪ್ರಯತ್ನಿಸಿರುತ್ತಾರೆ. ಅನಂತವಾದ ತತ್ತ್ವವು ಪರಿಚ್ಛಿನ್ನವಾಗಿದೆ ಎಂಬುದೇ ಅವರ ಸಿದ್ಧಾಂತಕ್ಕೆ ಆಧಾರವು. ಇಂಗ್ಲೆಂಡಿನಲ್ಲಿಯೂ ಇದೇ ಬಗೆಯ ಪ್ರಯತ್ನವನ್ನು ಮಾಡುತ್ತಿರುತ್ತಾರೆ. ಈ ತತ್ತ್ವವಿಚಾರಕರ ಅಭಿಪ್ರಾಯವನ್ನು ಬಿಡಿಸಿನೋಡಿದರೆ ಏರ್ಪಡುವದೇನೆಂದರೆ ಅನಂತವಾದ ತತ್ತ್ವವು ಈ ವಿಶ್ವದಲ್ಲಿ ಪ್ರಕಟವಾಗುವದಕ್ಕೆ

ಯತ್ನಿಸುತ್ತಿದೆ; ಒಂದಾನೊಂದು ಕಾಲದಲ್ಲಿ ಅದು ಸಂಪೂರ್ಣವಾಗಿ ಹೀಗೆ ಪ್ರಕಟವಾಗಿಬಿಡುವದು. ಇದೇನೋ ಕೇಳುವದಕ್ಕೆ ಬಲುಸೊಗಸಾಗಿದೆ. 'ಅನಂತ', 'ಪ್ರಾಕಟ್ಯ', 'ವ್ಯಕ್ತೀಕರಣ', – ಎಂದು ಮುಂತಾದ ಪಾರಿಭಾಷಿಕ ಶಬ್ದಗಳನ್ನೂ ಉಪಯೋಗಿಸಿದಂತಾಗಿದೆ; ಆದರೆ ಪರಿಚ್ಛಿನ್ನವಾದದ್ದು ಅನಂತವಾದದ್ದನ್ನು ಪೂರ್ಣವಾಗಿ ವ್ಯಕ್ತಗೊಳಿಸುವದೆಂಬುದಕ್ಕೆ ತರ್ಕಸಮ್ಮತವಾದ ಆಧಾರವನ್ನು ಕೊಡಿರಿ ಎಂದು – ಈ ಮತದವರನ್ನು ತತ್ತ್ವವಿಚಾರಕರು ಕೇಳುವದು ಸಹಜವಾಗಿರುತ್ತದೆ. ನಿರಪೇಕ್ಷವೂ ಅನಂತವೂ ಆದದ್ದು ಈ ವಿಶ್ವವಾಗಬೇಕಾದರೆ ಅದಕ್ಕೆ ಪರಿಚ್ಛಿತ್ತಿಯಾಗಿಯೇ ತೀರಬೇಕು. ಇಂದ್ರಿಯಗಳ ಮೂಲಕವಾಗಲಿ ಮನಸ್ಸಿನ ಮೂಲಕವಾಗಲಿ ಬುದ್ಧಿಯ ಮೂಲಕವಾಗಿಯಾಗಲಿ ಬರುವದೆಲ್ಲೂ ಪರಿಚ್ಛಿನ್ನವಾಗಿಯೇ ಇರಬೇಕು; ಈ ಪರಿಚ್ಛಿನ್ನವಾದದ್ದು ಅಪರಿಚ್ಛಿನ್ನವಾಗುವದೆಂಬುದು ಕೇವಲ ಉಪಹಾಸ್ಯವಾಗಿರುತ್ತದೆ. ಇದು ಎಂದಿಗೂ ಆಗದ ಮಾತು.* ಇನ್ನು ವೇದಾಂತವು ಹೇಳುವದೇನೆಂದರೆ ನಿರಪೇಕ್ಷವೂ ಅನಂತವೂ ಆಗಿರುವ ಪರಮಾರ್ಥವು ಪರಿಚ್ಛಿನ್ನವಾಗಿಯೇ ವ್ಯಕ್ತವಾಗಬೇಕೆಂದು ಪ್ರಯತ್ನಿಸುತ್ತಿರುವದೆಂಬುದೇನೋ ನಿಜವೆ. ಆದರೆ ಒಂದಾನೊಂದು ಕಾಲಕ್ಕೆ ಇದು ಆಗದ ಮಾತೆಂದು ಅದು ಕಂಡುಕೊಳ್ಳುತ್ತದೆ; ಆಗ ಅದು ಹಿಂತಿರುಗುತ್ತದೆ. ಹೀಗೆ ಹಿಂತಿರುಗುವದೆಂಬುದೇ ವೈರಾಗ್ಯವು. ಇದೇ ಧರ್ಮಕ್ಕೆ ಪ್ರಾರಂಭವು.

ಈಗಿನ ಕಾಲದಲ್ಲಿ ವೈರಾಗ್ಯವನ್ನು ಕುರಿತು ಮಾತನಾಡುವದು ಕೂಡ ಕಷ್ಟವಾಗಿರುತ್ತದೆ. ಅಮೆರಿಕದಲ್ಲಿ ಜನರು ನನ್ನನ್ನು 'ಈತನು ಈಗ ಐದು ಸಾವಿರ ವರ್ಷಗಳಿಂದ ಸತ್ತು ಸಮಾಧಿಯಾಗಿದ್ದ ಒಂದು ದೇಶದಿಂದ ಬಂದಿರುತ್ತಾನೆ, ಆದ್ದರಿಂದ ವೈರಾಗ್ಯದ ಮಾತುಗಳನ್ನು ಆಡುತ್ತಿದ್ದಾನೆ' ಎಂದರು. ಇಂಗ್ಲಿಷು ತತ್ತ್ವವಿಚಾರಕರೂ ಹಾಗೆಯೇ ಎನ್ನಬಹುದು. ಹೀಗಿದ್ದರೂ ಧರ್ಮಕ್ಕೆ ಇದೊಂದೇ ಮಾರ್ಗವೆಂಬದೇ ದಿಟ. ತ್ಯಜಿಸಿರಿ, ಬಿಟ್ಟುಬಿಡಿರಿ! ಕ್ರೈಸ್ತನು ಏನು ಹೇಳಿದ್ದಾನೆ, ನೋಡಿರಿ; "ನನಗಾಗಿ ಯಾರು ತನ್ನ ಜೀವನವನ್ನು ಕಳೆದುಕೊಳ್ಳುವನೋ ಅವನಿಗೇ ಅದು ದಕ್ಕುವದು" (ಬೈ.) ಪೂರ್ಣಸಿದ್ಧನಾಗುವದಕ್ಕೆ ವೈರಾಗ್ಯವೇ ಏಕೋಪಾಯವೆಂದು ಆತನು ಮತ್ತೆಮತ್ತೆ ಬೋಧಿಸಿರುತ್ತಾನೆ. ಮನಸ್ಸು ದೀರ್ಘವಾದ ನಿಸ್ಸಾರ ಸ್ವಪ್ನದಿಂದ ಎಚ್ಚರುವ ಕಾಲವು ಬಂದೇ ಬರುತ್ತದೆ; ಮಗುವು ತನ್ನ ಆಟವನ್ನು ಬಿಟ್ಟು ತನ್ನ ತಾಯಿ ಬಳಿಗೆ ಹೋಗುವ ಕಾಲವು ಬಂದೇ ಬರುತ್ತದೆ.

* ಈ ಜಗತ್ತೆಲ್ಲವೂ ಪರಮಾತ್ಮನ ಒಂದು ಅಂಶಮಾತ್ರವು. ಇದಕ್ಕಿಂತಲೂ ಹೆಚ್ಚಿನ ಪರಮಾರ್ಥಸ್ವರೂಪವೊಂದು ಇದೆ – ಎಂಬ ಪುರುಷಸೂಕ್ತದ ಮತ್ತು ಗೀತೆಯ ವಚನಗಳನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬಹುದು.

"ಕಾಮವೆಂಬುದು ಕಾಮಗಳ ಉಪಭೋಗದಿಂದ ಶಾಂತಿಯಾಗುವದಿಲ್ಲ, ತುಪ್ಪವನ್ನು ಹೋಮವಮಾಡಿದ ಅಗ್ನಿಯಂತೆ ಉಪಭೋಗದಿಂದ ಅದು ಮತ್ತೂ ಹೆಚ್ಚುತ್ತದೆ" (ಮನು.) ಎಂಬ ವಾಕ್ಯದ ಅರ್ಥವನ್ನು ಅದು ಆಗ ತಿಳಿದುಕೊಳ್ಳುತ್ತದೆ. ಎಲ್ಲಾ ಬಗೆಯ ಇಂದ್ರಿಯೋಪಭೋಗಗಳಿಗೂ ಎಲ್ಲಾ ಬೌದ್ಧಿಕೋಪಭೋಗಗಳಿಗೂ ಮನುಷ್ಯನ ಮನಸ್ಸಿಗೆ ಯಾವಯಾವ ಬಗೆಯ ಉಪಭೋಗವು ದಕ್ಕಬಹುದೋ ಆ ಎಲ್ಲಾ ಬಗೆಯ ಉಪಭೋಗಗಳಿಗೂ ಇದು ಅನ್ವಯಿಸುತ್ತದೆ. ಅವೆಲ್ಲವೂ ಶೂನ್ಯಪ್ರಾಯವಾಗಿರುವವು; ಈ ಮಾಯೆಯಲ್ಲಿಯೋ, ನಾವು ತಪ್ಪಿಸಿಕೊಂಡು ಹೋಗದಂತೆ ಸಿಕ್ಕಿಕೊಂಡಿರುವ ಈ ಬಲೆಯಲ್ಲಿಯೋ, ಇರುವೆವು. ಇದರೊಳಗಿದ್ದುಕೊಂಡು ನಾವು ಅನಂತಕಾಲ ಸಂಚರಿಸಿದರೂ ಇದಕ್ಕೆ ಕೊನೆಯಿರುವದಿಲ್ಲ; ಯಾವಯಾವಾಗ ಒಂದಿಷ್ಟು ಭೋಗವನ್ನು ಪಡೆಯಬೇಕೆಂದು ಯತ್ನಿಸುವೆವೋ ಆಗಲೆಲ್ಲ ದುಃಖರಾಶಿಯೇ ನಮ್ಮ ಮೇಲೆ ಬೀಳುತ್ತಿರುವದು. ಇದು ಎಷ್ಟು ಭಯಂಕರವಾಗಿರುವದು! ಇದನ್ನೆಲ್ಲ ಆಲೋಚಿಸಿದರೆ ಈ ಮಾಯಾವಾದವೇ, ಇದೆಲ್ಲವೂ ಮಾಯೆಯೆಂಬ ಹೇಳಿಕೆಯೇ, ಏಕಮಾತ್ರವಾದ ಅತ್ಯುತ್ತಮ ಕಾರಣ ಪ್ರತಿಪಾದನೆಯೆಂದು ಭಾವನೆಯಾಗುತ್ತಿರುವದೇ ಹೊರತು ಗತ್ಯಂತರವು ತೋರುವದಿಲ್ಲ. ಈ ಲೋಕದಲ್ಲಿ ಎಷ್ಟೊಂದು ದುಃಖವಿರುವದು! ಬೇರೆ ಬೇರೆ ಜನಾಂಗದವರಿರುವಲ್ಲಿಗೆ ಹೋಗಿ ನೋಡಿದರೆ ಒಂದು ಜನಾಂಗದವರು ತಮ್ಮಲ್ಲಿರುವ ದೋಷಗಳನ್ನು ಒಂದು ರೀತಿಯಿಂದಲೂ ಮತ್ತೊಂದು ಜನಾಂಗದವರು ಮತ್ತೊಂದು ರೀತಿಯಿಂದಲೂ ಪರಿಹರಿಸಿಕೊಳ್ಳುವದಕ್ಕೆ ಯತ್ನಿಸುತ್ತಿರುವವರೆಂದು ಕಂಡು ಬರುತ್ತದೆ. ಅದೇ ದೋಷವನ್ನೇ ಬೇರೆ ಬೇರೆ ಜನಗಳು ಬೇರೆ ಬೇರೆಯ ರೀತಿಗಳಲ್ಲಿ ಅಡ್ಡಗಟ್ಟುವದಕ್ಕೆ ಪ್ರಯತ್ನಿಸಿತ್ತಾರಾದರೂ ಯಾವದೊಂದು ಜನಾಂಗದ ಪ್ರಯತ್ನವೂ ಈ ವಿಷಯದಲ್ಲಿ ಸಫಲವಾಗಿರುವದಿಲ್ಲ. ಒಂದು ಕಡೆ ಇದು ಸ್ವಲ್ಪ ಕಡಿಮೆಯಾದರೆ ಇನ್ನೊಂದು ಕಡೆ ದೋಷವು ರಾಶಿರಾಶಿಯಾಗಿ ಕೂಡಿಕೊಂಡಿರುತ್ತದೆ. ಹೀಗೆಯೇ ನಡೆಯುತ್ತಿರುವದು! ಹಿಂದುಗಳು ತಮ್ಮ ಕುಲದಲ್ಲಿ ಪಾವಿತ್ರ್ಯವು ಉತ್ತಮಸ್ಥಿತಿಯಲ್ಲಿರಲೆಂಬ ಉದ್ದೇಶದಿಂದ ಬಾಲವಿವಾಹವನ್ನು ಒಪ್ಪಿರುತ್ತಾರೆ; ಕೊನೆಗೆ ಅದು ಅವರ ಕುಲವನ್ನೇ ಅವನತಿಗೆ ತಂದುಬಿಟ್ಟಿರುತ್ತದೆ. ಹೀಗಿದ್ದರೂ ಈ ಬಾಲವಿವಾಹದಿಂದ ಈ ಜನರು ಹೆಚ್ಚು ಪವಿತ್ರಾಚಾರವುಳ್ಳವರಾಗಿರುತ್ತಾರೆಂಬುದನ್ನು ಮಾತ್ರ ಇಲ್ಲವೆನ್ನುವದಕ್ಕಿಲ್ಲ. ಯಾವದನ್ನು ಆರಿಸಿಕೊಳ್ಳೋಣ? ಜನಾಂಗವು ಹೆಚ್ಚು ಪರಿಶುದ್ಧವಾಗಿರಬೇಕೆಂದರೆ ಗಂಡಸರನ್ನೂ ಹೆಂಗಸರನ್ನೂ ಬಾಲವಿವಾಹದಿಂದ ನಿಶ್ಶಕ್ತರಾಗಿ ಮಾಡಬೇಕಾಗುವದು. ಇತ್ತನೋಡಿದರೆ

ಇಂಗ್ಲೆಂಡಿನಲ್ಲಿರುವ ನೀವಾದರೂ ಅವರಿಗಿಂತ ಉತ್ತಮಸ್ಥಿತಿಯಲ್ಲಿರುವಿರೇನು? ಇಲ್ಲ. ಏಕೆಂದರೆ ಪಾವಿತ್ರ್ಯವೇ ಜನಾಂಗದ ಪ್ರಾಣವು. ಇತಿಹಾಸವನ್ನು ನೋಡಿದರೆ ಯಾವದಾದರೊಂದು ಜನಾಂಗದ ನಾಶಕ್ಕೆ ವ್ಯಭಿಚಾರವೇ ಗುರುತಾಗಿರುವದೆಂದು ಕಂಡುಬರುವದಲ್ಲವೆ? ಅದು ಒಳಹೊಕ್ಕಿತೆಂದರೆ ಸರಿ,ಕುಲವು ಕೊನೆಗೊಂಡಿತೆಂಬುದು ಕಂಡುಬಂದಿದೆ. ಹಾಗಾದರೆ ಈ ದುಃಖಗಳಿಗೆ ಪರಿಹಾರವು ಎಲ್ಲಿ ದೊರೆಯುವದು? ತಂದೆತಾಯಿಗಳೇ ತಮ್ಮ ತಮ್ಮ ಮಕ್ಕಳಿಗೆ ಗಂಡಂದಿರನ್ನೂ ಹೆಂಡತಿಯರನ್ನೂ ಆರಿಸುವದಾದರೆ ಈ ದೋಷವು ಸ್ವಲ್ಪ ಕಡಿಮೆಯಾಗುವದು. ಇಂಡಿಯದ ಹೆಣ್ಣುಮಕ್ಕಳು ಭಾವಪ್ರಧಾನ ವಾಗಿರುವದಕ್ಕಿಂತಲೂ ಹೆಚ್ಚಾಗಿ ಕೃತಿಪ್ರಧಾನರಾಗಿರುತ್ತಾರೆ; ಆದರೆ ಅವರ ಜೀವನಗಳಲ್ಲಿ ರಸವೆಂಬುದೇ ಇಲ್ಲದಂತಾಗಿದೆ. ಇನ್ನು ಜನರು ತಮ್ಮತಮ್ಮ ಗಂಡಂದಿರನ್ನೂ ಹೆಂಡತಿಯರನ್ನೂ ತಾವೇ ಆರಿಸಿಕೊಳ್ಳುವದಾದರೆ ಅದರಿಂದಲೂ ಬಹಳ ಸೌಖ್ಯವೇನೂ ಆಗುವಂತೆ ಕಾಣುವದಿಲ್ಲ. ಇಂಡಿಯಾದಲ್ಲಿ ಸ್ತ್ರೀಯರು ಸಾಮಾನ್ಯವಾಗಿ ಬಹಳ ಸುಖಿಗಳಾಗಿರುತ್ತಾರೆ; ಅಲ್ಲಿ ಗಂಡ ಹೆಂಡಂದಿರ ವ್ಯಾಜ್ಯಗಳು ಅಷ್ಟೇನೂ ಹೆಚ್ಚಾಗಿರುವದಿಲ್ಲ. ಇದಕ್ಕೆ ಬದಲು ಮದುವೆಯ ವಿಚಾರದಲ್ಲಿ ಅತ್ಯಂತ ಹೆಚ್ಚಿನ ಸ್ವಾತಂತ್ರ್ಯವಿರುವ ಸಂಯುಕ್ತಸಂಸ್ಥಾನಗಳಲ್ಲಿ ನೋಡಿರಿ, ಅಲ್ಲಿ ದೌರ್ಭಾಗ್ಯದ ಕುಟುಂಬಗಳೂ ವಿವಾಹಗಳೂ ಹೇರಳವಾಗಿವೆ. ಎಲ್ಲೆಲ್ಲಿ ನೋಡಿದರೂ ಅಸೌಖ್ಯವೇ. ಇದರಿಂದೇನು ಗೊತ್ತಾಗುವದು? ಯಾವ ಧ್ಯೇಯಗಳನ್ನೇ ತೆಗೆದುಕೊಂಡರೂ ಅಷ್ಟೇನೂ ಸೌಖ್ಯವನ್ನು ಪಡೆದಂತಾಗಿರುವದಿಲ್ಲ. ನಾವೆಲ್ಲರೂ ಸುಖಕ್ಕೆಂದೇ ಹೊಡೆದಾಡುತ್ತಿರುತ್ತೇವೆ; ಒಂದು ಕಡೆಯಲ್ಲಿ ಒಂದಿಷ್ಟು ಸುಖವು ಬಂತೋ ಇಲ್ಲವೋ, ಮತ್ತೊಂದು ಕಡೆಯಲ್ಲಿ ದುಃಖವು ಬಂದುಬಿಡುತ್ತದೆ.

ಹಾಗಾದರೆ ಪರೋಪಕಾರಕ್ಕಾಗಿ ಕೆಲಸಮಾಡಬಾರದೇನು? ಮಾಡಬೇಕು, ಎಂದಿಗಿಂತಲೂ ಉತ್ಸಾಹದಿಂದಲೇ ಮಾಡಬೇಕು; ಆದರೆ ಈ ತಿಳಿವಳಿಕೆಯಿಂದ ನಮಗೆ ಆಗುವ ಪ್ರಯೋಜನವೇನೆಂದರೆ ನಮ್ಮ ದುರಭಿಮಾನವನ್ನು ನಾಶಗೊಳಿಸುವದು. ಇದನ್ನು ತಿಳಿದುಕೊಂಡರೆ ಇಂಗ್ಲಿಷಿನವನು ದುರಭಿಮಾನದಿಂದ ಹಿಂದುಗಳನ್ನು ಬಯ್ಯುವದನ್ನು ಬಿಟ್ಟುಬಿಡುತ್ತಾನೆ? ಬೇರೆಬೇರೆ ಜನಾಂಗಗಳ ಆಚಾರಗಳನ್ನು ಗೌರವಿಸಬೇಕೆಂದು ಅರಿತುಕೊಳ್ಳುತ್ತಾನೆ. ದುರಭಿಮಾನವು ತಗ್ಗುತ್ತದೆ, ನಿಜವಾದ ಕೆಲಸವು ಹೆಚ್ಚುತ್ತದೆ. ದುರಭಿಮಾನಿಗಳು ಕೆಲಸಮಾಡಲೇ ಆರರು, ಏಕೆಂದರೆ ಅವು ತಮ್ಮ ಶಕ್ತಿಯಲ್ಲಿ ಮುಕ್ಕಾಲುಪಾಲನ್ನು ಹಾಳುಮಾಡಿಬಿಡುತ್ತಾರೆ. ಯಾವಾತನು ಸಮಬುದ್ಧಿಯಾಗಿ ಶಾಂತನಾಗಿ ಅನುಷ್ಠಾನಪರನಾಗಿರುವನೋ ಅವನೇ ಕೆಲಸಮಾಡುವವನು. ಹೀಗಿರುವದರಿಂದ ಈ ಅಭಿಪ್ರಾಯವನ್ನು ತಿಳಿದರೆ

ಕೆಲಸಮಾಡುವ ಶಕ್ತಿಯು ಹೆಚ್ಚುವದು. ಇದೇ ವಸ್ತುಸ್ಥಿತಿಯೆಂದು ತಿಳಿದ ಬಳಿಕ ತಾಳ್ಮೆಯು ಹೆಚ್ಚಾಗುವದು. ಎಲ್ಲಿಯಾದರೂ ದುಃಖವನ್ನಾಗಲಿ ದೋಷವನ್ನಾಗಲಿ ಕಂಡರೆ ನಮ್ಮ ಸಮತೆಯು ಹೋಗುವದಿಲ್ಲ. ಬರಿಯ ನೆಳಲುಗಳನ್ನು ಹುಡುಕಿಕೊಂಡು ಅವುಗಳ ಬೆನ್ನುಹತ್ತುವಂತೆ ಆಗುವದಿಲ್ಲ. ಆದ್ದರಿಂದ ಪ್ರಪಂಚವು ಹೀಗೆಯೇ ಸಾಗುತ್ತಿರಬೇಕೆಂದು ತಿಳಿಯುವದರಿಂದ ನಮಗೆ ತಾಳ್ಮೆಯುಂಟಾಗುವದು. ಉದಾಹರಣೆಗೆ ಜನರೆಲ್ಲರೂ ಒಳ್ಳೆಯವರಾಗಿ ಬಿಟ್ಟರೆಂದರೆ ಅಷ್ಟರಲ್ಲಿ ತಿರ್ಯಕ್ಪ್ರಾಣಿಗಳು ಮನಷ್ಯರಾಗಿಬಿಟ್ಟಿರುವದರಿಂದ ಅವೂ ಅದೇ ಸ್ಥಿತಿಗಳನ್ನು ದಾಟಬೇಕಾಗಿಬರುವದು; ಗಿಡಮರಗಳ ವಿಚಾರವೂ ಇಷ್ಟೇ. ಆದರೆ ಒಂದೇ ಒಂದು ವಿಷಯವು ಖಂಡಿತವು; ಈ ಮಹಾನದಿಯು ಸಾಗರದ ಕಡೆಗೆ ನುಗ್ಗಿ ಹರಿಯುತ್ತಿದೆ, ಅದರ ಪ್ರವಾಹದಲ್ಲಿರುವ ಬಿಂದುಗಳೆಲ್ಲವೂ ಅನಂತವಾದ ಸಾಗರದೊಳಕ್ಕೇ ಕಾಲಾನುಕ್ರಮದಲ್ಲಿ ಹೋಗಿ ಸೇರಿಕೊಂಡು ಬಿಡುತ್ತದೆ. ಆದ್ದರಿಂದ ಎಷ್ಟೇ ಕಷ್ಟನಿಷ್ಠುರಗಳಿರಲಿ, ಎಷ್ಟೇ ಸುಖಸಂತೋಷಗಳೂ ದುಃಖಾಶ್ರುಗಳೂ ಇರಲಿ, ಒಂದು ವಿಷಯವು ಮಾತ್ರ ಕಡುಖಂಡಿತವಾಗಿರುತ್ತದೆ: ಎಲ್ಲಾ ವಸ್ತುಗಳೂ ಪರಾಕಾಷ್ಠವನ್ನು ಮುಟ್ಟುವದಕ್ಕೇ ಹೋಗುತ್ತಲಿವೆ, ಕಾಲಾನುಕಾಲಕ್ಕೆ ನಾನು, ನೀವು, ಪ್ರಾಣಿಗಳು, ಸಸ್ಯಗಳು ಮುಂತಾಗಿ ಇರುವ ಒಂದೊಂದು ಜೀವಾಣುವೂ ಪರಿಪೂರ್ಣವಾದ ಅನಂತಸಾಗರವನ್ನು ಸೇರಿ, ನಿತ್ಯಮುಕ್ತನಾದ ಈಶ್ವರನ ಸಾಯುಜ್ಯವನ್ನು ಹೊಂದಲೇಬೇಕು.

ವೇದಾಂತದೃಷ್ಟಿಯು ಶುಭದೃಷ್ಟಿಯೂ ಅಲ್ಲ, ಅಶುಭದೃಷ್ಟಿಯೂ ಅಲ್ಲ - ಎಂಬುದನ್ನು ಮತ್ತೊಂದು ಬಾರಿ ಹೇಳುವದಕ್ಕೆ ಅನುಮತಿಕೊಡಿರಿ. ಈ ಪ್ರಪಂಚವೆಲ್ಲ ಕೆಟ್ಟದ್ದೇ ಆಗಿರುವದೆಂದಾಗಲಿ ಎಲ್ಲಾ ಒಳ್ಳೆಯದೇ ಆಗಿರುವದೆಂದಾಗಲಿ ಅದು ಹೇಳುವದಿಲ್ಲ. ನಮಗೆ ಆಗುವ ಒಳ್ಳೆಯದಕ್ಕಿಂತ ನಮಗೆ ಆಗುವ ಕೆಟ್ಟದ್ದಕ್ಕೇನೂ ಕಡಿಮೆಯ ಬೆಲೆಯಿಲ್ಲವೆಂದೂ ಕೆಟ್ಟದ್ದಕ್ಕಿಂತ ಒಳ್ಳೆಯದಕ್ಕೇನೂ ಹೆಚ್ಚು ಬೆಲೆಯಿಲ್ಲವೆಂದೂ ಅದು ಹೇಳುತ್ತದೆ. ಅವರೆಡೂ ಜೊತೆಜೊತೆಯಲ್ಲಿಯೇ ಇರುವವು, ಇದೇ ಪ್ರಪಂಚವು. ಇದನ್ನು ತಿಳಿದುಕೊಂಡು ತಾಳ್ಮೆಯಿಂದ ಕೆಲಸ ಮಾಡಿರಿ. ಏತಕ್ಕೆ? ಏತಕ್ಕೆ ಕೆಲಸಮಾಡಬೇಕು? ವಸ್ತುಸ್ಥಿತಿಯು ಹೀಗೆಯೇ ಇರುವದಾದರೆ ನಾವು ಮಾಡತಕ್ಕದ್ದೇನಿದೆ? ಅಜ್ಞಾನವಾದಿಗಳೇಕೆ* ಆಗಬಾರದು? ಈಗಿನ ಸಂಶಯವಾದಿಗಳಿಗೂ ಈ ಸಮಸ್ಯೆಗೆ ಪರಿಹಾರವಿಲ್ಲವೆಂಬುದು ತಿಳಿದಿದೆ;

* ಹೊರಗೆ ಕಾಣುವ ಭೌತಿಕಪ್ರಪಂಚಕ್ಕಿಂತ ಆಚೆ ಅದಕ್ಕೆ ಆಧಾರವಾಗಿರುವ ಚೈತನ್ಯ ತತ್ವವು ಯಾವದೊಂದು ಮಾನವನಿಗೆ ತಿಳಿದಿರುವದಿಲ್ಲ. ತಿಳಿಯುವ ಸಂಭವವೂ ಇಲ್ಲ - ಎಂಬುದೇ ಅಜ್ಞಾವಾದಿಗಳ(agnostics) ಮತವು.

ನಾವು ಮಾಡುತ್ತಿರುವುದು ಬರಿಯ ಭ್ರಾಂತಿಯೆನ್ನುತ್ತಿದ್ದೇವೆ ಎಂಬುದಲ್ಲ, ಇದನ್ನು ತಪ್ಪಿಸಿಕೊಳ್ಳುವದಕ್ಕೆ ಆಗುವದಿಲ್ಲವೆಂಬುದು ತಿಳಿದಿದೆ; ಆದ್ದರಿಂದ ಅವರು ತೃಪ್ತರಾಗಿ ಇದ್ದಷ್ಟಕ್ಕೆ ಜೀವನವನ್ನು ಅನುಭವಿಸಿ ಸುಖವಾಗಿರಿ ಎನ್ನುತ್ತಿದ್ದಾರೆ. ಇಗೋ ಇಲ್ಲಿ ಮತ್ತೊಂದು ದೋಷವಿರುತ್ತದೆ. ಒಂದು ಅದ್ಭುತವಾದ ದೋಷವಿರುತ್ತದೆ. ಅತ್ಯಂತ ತರ್ಕವಿರುದ್ಧವಾದ ದೋಷವಿರುತ್ತದೆ. ಅದೇನೆಂದರೆ, ಜೀವನವೆಂದರೇನು? ಬರಿಯ ಇಂದ್ರಿಯಗಳ ಜೀವನವೇ? ಆ ವಿಷಯದಲ್ಲಿ ನಮಗೂ ಪಶ್ವಾದಿಗಳಿಗೂ ಅತ್ಯಲ್ಪಭೇದವಿರುತ್ತದೆ. ಇಲ್ಲಿ ಬಂದಿರುವ ನಿಮ್ಮಲ್ಲಿ ಯಾರೊಬ್ಬರಿಗೂ ಜೀವನವೆಂಬುದು ಬರಿಯ ಇಂದ್ರಿಯಗಳಲ್ಲಿದೆಯೆಂದು ನಾನು ನಂಬಲಾರೆ. ಹೀಗಿರುವದರಿಂದ ಈ ತಾತ್ಕಾಲಿಕ ಜೀವನವೆಂದರೆ ಅದಕ್ಕಿಂತ ಹೆಚ್ಚಿನದೆಂದೇ ಆಯಿತು. ನಮ್ಮ ಭಾವಗಳು, ವಿಚಾರಗಳು, ಆಸೆಗಳು – ಇವೆಲ್ಲವೂ ನಮ್ಮ ಜೀವನದಲ್ಲಿ ಒಂದಂಶವಾಗಿ ಅದರಲ್ಲಿ ಸೇರಿಕೊಂಡೇ ಇರುತ್ತವೆ; ಇದಲ್ಲದೆ ಪರಿಪೂರ್ಣತೆಯೆಂಬ ಮಹಾ ಪುರುಷಾರ್ಥವನ್ನು ಹೊಂದುವದಕ್ಕೆಂದು ಮಾಡುವ ಮಹಾಪ್ರಯತ್ನವೆಂಬುದು ನಾವು ಜೀವನವೆಂದು ಕರೆಯುತ್ತಿರುವದರ ಒಂದು ಅತ್ಯಂತ ಮುಖ್ಯಭಾಗವಲ್ಲವೆ? ಅಜ್ಞಾನವಾದಿಗಳು ಈ ಜೀವನವನ್ನು ಇದ್ದದ್ದು ಇದ್ದಂತೆಯೇ ಅನುಭವಿಸುತ್ತಾ ಸುಖದಿಂದಿರಬೇಕೆಂದು ಹೇಳುತ್ತಿದ್ದಾರೆ. ಆದರೆ ಈ ಜೀವನವೆಂದರೆ ಮುಖ್ಯವಾಗಿ ಪರಮಧ್ಯೇಯದ ಈ ಅನ್ವೇಷಣೆಯೇ ಆಗಿರುತ್ತದೆ; ಜೀವನದ ಸಾರವೆಂದರೆ ಪರಿಪೂರ್ಣತೆಯನ್ನು ಪಡೆಯುವದಕ್ಕೆ ಮಾಡುವ ಸಾಧನವೇ ಆಗಿರುತ್ತದೆ. ನಮಗೆ ಅದು ಆಗಲೇಬೇಕು, ಆದ್ದರಿಂದ ನಾವು ಅಜ್ಞಾನವಾದಿಗಳಾಗಿರುವದಕ್ಕೆ ಆಗುವಹಾಗಿಲ್ಲ, ಪ್ರಪಂಚವುಹೇಗೆ ತೋರುತ್ತಿರುವದೋ ಹಾಗೆಯೇ ಸರಿಯೆಂದು ಇಟ್ಟುಕೊಳ್ಳುವದೂ ಆಗುವಹಾಗಿಲ್ಲ. ಅಜ್ಞಾನವಾದಿಗಳ ಪಕ್ಷದಲ್ಲಿ ಈ ಜೀವನದಲ್ಲಿ ಧ್ಯೇಯಾಂಶವನ್ನು ಕೈಬಿಟ್ಟು ಉಳಿದದ್ದೊಂದೇ ಸರ್ವಸ್ವವೆಂದು ಇಟ್ಟುಕೊಂಡಿರುತ್ತದೆ. ಈ ಧ್ಯೇಯಾಂಶವು ಸಿಕ್ಕತಕ್ಕದ್ದಲ್ಲವೆಂಬುದು ಅಜ್ಞಾನವಾದಿಯ ಸಿದ್ಧಾಂತ; ಆದ್ದರಿಂದ ಅದನ್ನು ಹುಡುಕುವದನ್ನು ಬಿಟ್ಟುಬಿಡಬೇಕು– ಎಂದು ಅವನು ಹೇಳುತ್ತಿದ್ದಾನೆ. ಈ ಪ್ರಕೃತಿಯೇ, ಈ ವಿಶ್ವವೇ, ಮಾಯೆಯೆಂಬುದು. ಧರ್ಮಗಳೆಲ್ಲ – ಅತ್ಯಂತ ಕೀಳು ಸ್ಥಿತಿಯ ಧರ್ಮಗಳಾಗಲಿ ಅಥವಾ ಪರಿಪಕ್ವದಶೆಯಲ್ಲಿರುವ ಧರ್ಮಗಳಾಗಲಿ, ಪುರಾಣಗಳಿಂದಲೂ ಸಂಕೇತಗಳಿಂದಲೂ ದೇವತೆಗಳ ಅಥವಾ ಅಸುರರ ಕಥೆಗಳಿಂದಲೂ ಋಷಿಗಳು, ಮಹಾತ್ಮರು, ಪ್ರವಾದಿಗಳು – ಮುಂತಾದವರ ಕಥೆಗಳಿಂದಲೂ, ಇಲ್ಲದಿದ್ದರೆ ತತ್ತ್ವವಿಚಾರದ ತರ್ಕವಿತರ್ಕಗಳಿಂದಲೂ ಹೊರಟಿರುವ ಧರ್ಮಗಳೆಲ್ಲ–ಈ ಒಂದೇ ಒಂದು ಉದ್ದೇಶದಿಂದ ಹೊರಟಿರುತ್ತವೆ.

ಅವೆಲ್ಲವೂ ಈ ಪರಿಚ್ಛೇದಗಳನ್ನು ಮೀರಬೇಕೆಂದೇ ಪ್ರಯತ್ನಮಾಡುತ್ತಿರುವೆವು. ಒಂದೇ ಮಾತಿನಲ್ಲಿ ಹೇಳಿದರೆ ಅವೆಲ್ಲವೂ ಮುಕ್ತಿಗಾಗಿಯೇ ಹೊಡೆದಾಡುತ್ತಿರುವವು. ಮಾನವನಿಗೆ ತಿಳಿದೋ ತಿಳಿಯದೆಯೋ ತಾನು ಬದ್ಧನೆಂಬ ಭಾವನೆಯುಂಟಾಗಿರುತ್ತದೆ; ತಾನು ಹೇಗಿರಬೇಕೆಂಬ ಇಚ್ಛೆಯುಳ್ಳವನಾಗಿರುವನೋ ಹಾಗೆ ಇಲ್ಲವೆಂದೆನಿಸಿರುತ್ತದೆ. ಅವನು ಸುತ್ತಲೂ ನೋಡುವದಕ್ಕೆ ಯಾವಾಗ ಮೊದಲು ಮಾಡಿದನೋ ಆ ಕ್ಷಣದಲ್ಲಿಯೇ ಇದು ಉಪದಿಷ್ಟವಾಯಿತು. ಆ ಕ್ಷಣದಲ್ಲಿಯೇ ತಾನು ಬದ್ಧನಾಗಿರುವೆನೆಂದು ತಿಳಿಯಬಂತು; ತನ್ನಲ್ಲಿ ಯಾವದೋ ಒಂದು ಅಂಶವು ಹಾರಿಹೋಗಿ ದೇಹವೂ ಹಿಂಬಾಲಿಸಲಾಗದ ಆಚೆಯ ಸ್ಥಾನವನ್ನು ಪಡೆಯಲಿಚ್ಛಿಸುತ್ತಿರುವದೆಂದೂ ಆದರೆ ಸದ್ಯಕ್ಕೆ ಅದು ಈ ಪರಿಚ್ಛೇದಕ್ಕೆ ಕಟ್ಟುಬಿದ್ದಿರುವದೆಂದೂ ಅವನಿಗೆ ಕಂಡುಬಂತು. ಬಹುಮಟ್ಟಿಗೆ ಹಿಂಸಾತ್ಮಕರೂ ಕ್ರೂರಿಗಳೂ ಆಗಿದ್ದ ಸತ್ತವರ ಪ್ರೇತಗಳೂ, ಭೂತಗಳೂ ತಮ್ಮ ತಮ್ಮ ಮಿತ್ರರ ಮನೆಗಳ ಹತ್ತಿರ ಅವಿತುಕೊಂಡಿರುವವೆಂದೂ ಅವುಗಳಿಗೆ ರಕ್ತಪಾತವೂ ಮದ್ಯಪಾನವೂ ಇಷ್ಟವೆಂದೂ ಎಣಿಸಿ ಅವುಗಳನ್ನು ಪೂಜಿಸುವಂಥ ಅತ್ಯಂತ ಕೀಳುಭಾವನೆಯ ಧರ್ಮಗಳಲ್ಲಿ ಕೂಡ, ಈ ಸ್ವಾತಂತ್ರ್ಯವೆಂಬ ಸರ್ವ ಸಮಾನವಿಚಾರವು ಕಂಡುಬರುತ್ತದೆ. ದೇವತೆಗಳನ್ನು ಪೂಜಿಸಬೇಕೆನ್ನುವವನಿಗೆ ಮುಖ್ಯವಾಗಿ ಅವರಲ್ಲಿ ತನಗಿಂತಲೂ ಹೆಚ್ಚಿನ ಸ್ವಾತಂತ್ರ್ಯವಿರುವದೆಂಬ ಭಾವನೆಯಿರುತ್ತದೆ. ಬಾಗಿಲನ್ನು ಮುಚ್ಚಿದ್ದರೂ ದೇವತೆಗಳು ಒಳಕ್ಕೆ ಬರಬಲ್ಲರೆಂದೂ ಗೋಡೆಗಳಿಂದ ಅವರಿಗೆ ಯಾವ ಪ್ರತಿಬಂಧಕವೂ ಇಲ್ಲವೆಂದೂ ಅವನ ಭಾವನೆಯಿರುತ್ತದೆ. ಈ ಸ್ವಾತಂತ್ರ್ಯದ ಭಾವನೆಯು ಹೆಚ್ಚುತ್ತ ಹೆಚ್ಚುತ್ತಾ ಕೊನೆಗೆ ಸಗುಣೇಶ್ವರ ಭಾವನೆಗೆ ಬಂದು ನಿಲ್ಲುತ್ತದೆ. ಈ ಭಾವನೆಯಲ್ಲಿರುವ ಮುಖ್ಯವಾದ ಅರಿವೇನೆಂದರೆ ಆತನು ಪ್ರಕೃತಿಯ ಅಥವಾ ಮಾಯೆಯ ಪರಿಚ್ಛೇದವನ್ನು ಮೀರಿರುವನೆಂಬುದೇ. ಆಗಿನ ಕಾಲದ ಕಾಡಿನಲ್ಲಿದ್ದ ಆಶ್ರಮಗಳಲ್ಲಿ ಹಿಂದಿನ ಭರತಖಂಡದ ಋಷಿಗಳು ಈ ವಿಚಾರವನ್ನು ಈಗಲೂ ಚರ್ಚೆಮಾಡುತ್ತಿರುವಂತೆ ನನಗೆ ಭಾಸವಾಗುತ್ತದೆ. ಇಂಥ ಚರ್ಚೆಗಳಲ್ಲೊಂದರಲ್ಲಿ ಅತ್ಯಂತ ವೃದ್ಧರೂ ಅತ್ಯಂತ ಪವಿತ್ರಾತ್ಮರೂ ಆದವರಿಗೂ ಏನೂ ತೋಚದೆ ಇರುವಲ್ಲಿ ಒಬ್ಬ ಯುವಕನು ಅವರ ನಡುವೆ ಎದ್ದುನಿಂತು "ಕೇಳಿರಯ್ಯ ಅಮೃತದ ಪುತ್ರರಿರ, ಅತ್ಯುನ್ನತವಾದ ಲೋಕಗಳಲ್ಲಿ ವಾಸಮಾಡಿಕೊಂಡಿರುವವರೆ, ಕೇಳಿರಿ; ನನಗೆ ಈ ಮಾರ್ಗವು ಗೊತ್ತಾಗಿರುವದು. ತಮಸ್ಸಿಗೆ ಆಚೆ ಇರುವಾತನನ್ನು ಅರಿತುಕೊಂಡರೆ ನಾವು ಮರಣವನ್ನು ದಾಟಬಹುದು." (ಶ್ವೇ)

ಈ ಮಾಯೆಯು ಎಲ್ಲೆಲ್ಲಿಯೂ ಇದ್ದುಕೊಂಡಿರುವದು. ಇದು ಅತಿ ಭೀಕರವಾಗಿರುವದು; ಆದರೂ ಇದರಲ್ಲಿಯೇ ನಾವು ಕೆಲಸಮಾಡಬೇಕಾಗಿರುತ್ತದೆ. ಈ ಪ್ರಪಂಚವೆಲ್ಲ ಸರಿಯಾದ ಮೇಲೆ ಕೆಲಸಮಾಡಿ ಸುಖಪಡುವೆನು - ಎನ್ನುವವನ ಮನೋರಥವು ನೆರವೇರುವದು, ಗಂಗಾನದಿಯ ದಡದಲ್ಲಿ ಕುಳಿತು "ಈ ನೀರೆಲ್ಲ ಸಾಗರಕ್ಕೆ ಹರಿದುಹೋದಮೇಲೆ ನದಿಯನ್ನು ದಾಟುವೆನು" ಎಂಬುವನ ಮನೋರಥವು ಪೂರ್ಣವಾಗುವಷ್ಟೇ ಸಂಭಾವ್ಯವಾಗಿರುತ್ತದೆ. ನಾವು ಹೋಗಬೇಕಾಗಿರುವದು ಈ ಮಾಯೆಯ ಜೊತೆಗಲ್ಲ, ಅದಕ್ಕೆ ಎದುರಾಗಿ. ಇದು ನಾವು ತಿಳಿದುಕೊಳ್ಳಬೇಕಾದ ಮತ್ತೊಂದು ವಿಷಯವು. ನಾವು ಹುಟ್ಟಿರುವದು ಪ್ರಕೃತಿಗೆ ನೆರವಾಗುವದಕ್ಕಲ್ಲ, ಅದರೊಡನೆ ಪೈಪೋಟಿಯಿಂದ ಕೆಲಸಮಾಡುವದಕ್ಕೆ. ನಾವು ಅದಕ್ಕೆ ಅರಸರಾಗಿ ಹುಟ್ಟಿರುತ್ತೇವೆ, ಆದರೆ ಅದಕ್ಕೆ ಅಡಿಯಾಳಾಗುತ್ತಿದ್ದೇವೆ. ಇಲ್ಲಿ ಈ ಮನೆಯಾದದ್ದು ಹೇಗೆ? ಪ್ರಕೃತಿಯೇನೂ ಇದನ್ನು ಕಟ್ಟಲಿಲ್ಲ. ಪ್ರಕೃತಿಯು 'ಕಾಡಿನಲ್ಲಿ ಹೋಗಿ ವಾಸವಾಗಿರು' ಎನ್ನುತ್ತಿರುವದು. ಮನುಷ್ಯನು "ನಾನೊಂದು ಮನೆಯನ್ನು ಕಟ್ಟಿಕೊಳ್ಳುವೆನು, ಈ ಪ್ರಕೃತಿಯೊಡನೆ ಹೋರಾಡುವೆನು' ಎನ್ನುತ್ತಾನೆ. ಹಾಗೇ ಮಾಡುತ್ತಾನೆ. ಮಾನವವರ್ಗದ ಇತಿಹಾಸವೆಲ್ಲ ಪ್ರಕೃತಿಯು ನಿಯಮಗಳು ಎನ್ನುತ್ತಾರಲ್ಲ, ಅವುಗಳ ವಿರುದ್ಧವಾಗಿ ಕಾದಾಡುತ್ತಿರುವದೇ ಅಗಿದೆ; ಕೊನೆಗೆ ಮಾನವನೇ ಗೆಲ್ಲುತ್ತಾನೆ. ಒಳಗಿನ ಪ್ರಪಂಚಕ್ಕೆ ಬಂದರೂ, ಅಲ್ಲಿಯೂ ಇದೇ ಕಾದಾಟವೇ ನಡೆಯುತ್ತಿರುವದು; ಪಶುಮಾನವನಿಗೂ ಅಧ್ಯಾತ್ಮಮಾನವನಿಗೂ, ಕತ್ತಲೆಗೂ ಬೆಳಕಿಗೂ, ಕಾದಾಟವಾಗುತ್ತಿರುವದು. ಇಲ್ಲಿಯೂ ಮಾನವನೇ ಜಯಶೀಲನಾಗುತ್ತಾನೆ. ಅವನು ಪ್ರಕೃತಿಯಲ್ಲಿ ತನ್ನ ದಾರಿಯನ್ನು ಅಲ್ಲಲ್ಲಿ ಕತ್ತರಿಸಿ ಸರಿಪಡಿಸಿಕೊಂಡು ಮುಕ್ತಿಯನ್ನು ಪಡೆಯುವದಕ್ಕೆ ಹೋಗುತ್ತಿದ್ದಾನೆ - ಎನ್ನಬಹುದಾಗಿದೆ.

ಈ ರೀತಿಯಲ್ಲಿ ನೋಡಿದರೆ ಈ ಮಾಯೆಯ ಆಚೆಯ ಕಡೆಯಲ್ಲಿ ಮಾಯಾಬದ್ಧವಲ್ಲದ ಯಾವದೋ ಒಂದು ತತ್ತ್ವವಿದೆಯೆಂಬುದನ್ನು ವೇದಾಂತಿಗಳು ಕಂಡು ಹಿಡಿದಿರುತ್ತಾರೆಂದು ಕಂಡುಬರುವದು. ಈ ಭಾವವು ಒಂದಲ್ಲದಿದ್ದರೆ ಒಂದು ರೂಪದಲ್ಲಿ ಧರ್ಮಗಳಿಗೆಲ್ಲ ಸಮಾನವಾಗಿಯೇ ಸೇರಿರುವದಾಗಿರುತ್ತದೆ. ಆದರೆ ವೇದಾಂತದಲ್ಲಿಯೋ ಎಂದರೆ ಅದು ಧರ್ಮದ ಆದಿಯೇ ಹೊರತು ಅಂತ್ಯವಲ್ಲ. ಈ ವಿಶ್ವವನ್ನು ಸೃಷ್ಟಿಸಿ ಆಳುತ್ತಿರುವ ಎಂದರೆ ಮಾಯೆಯನ್ನು ಆಳುವ ಮಾಯಿಯಾದ ಸಗುಣೇಶ್ವರ ಭಾವನೆಯು ವೇದಾಂತ ಸಿದ್ಧಾಂತ ಕೊನೆಯಲ್ಲ, ಅದು ಇನ್ನೂ ಪ್ರಾರಂಭವು. ಈ ಭಾವನೆಯು ಬೆಳೆಯುತ್ತ

ಬೆಳೆಯುತ್ತಾ ಹೋಗಿ ಕೊನೆಗೆ ವೇದಾಂತಿಗೆ "ಯಾವನು ಇದರ ಹೊರಗೆ ನಿಂತಿರುವವನೆಂದು ಭಾವಿಸಿದ್ದೆವೋ ಅವನು ನಿಜವಾಗಿ ಒಳಗೇ ಇರುವನು, ಆತನೇ ನಿತ್ಯಮುಕ್ತನಾಗಿದ್ದರೂ ಉಪಾಧಿಯ ಪರಿಚ್ಛೇದದಿಂದ ತಾನು ಬದ್ಧನಾಗಿರುವೆನೆಂದು ತಿಳಿದುಕೊಂಡಿದ್ದನು" ಎಂಬುದು ಮನವರಿಕೆಯಾಗುವದು.

---------

# 4. ಮಾಯೆಯೂ ಈಶ್ವರಭಾವನೆಯ ವಿಕಾಸವೂ

ಅದ್ವೈತವೇದಾಂತದ ಅಡಿಗಟ್ಟಿನ ಕಲ್ಪನೆಗಳಲ್ಲಿ ಒಂದಾದ ಮಾಯೆಯ ಭಾವನೆಯು ಬೀಜರೂಪದಲ್ಲಿ ಸಂಹಿತೆಗಳಲ್ಲಿಯೂ ಇರುವದೆಂದೂ ನಿಜವಾಗಿನೋಡಿದರೆ ಉಪನಿಷತ್ತುಗಳಲ್ಲಿ ಪರಿಪಕ್ವವಾಗಿ ಕಂಡುಬರುವ ಭಾವನೆಗಳೆಲ್ಲವೂ ಸಂಹಿತೆಗಳಲ್ಲಿ ಒಂದಲ್ಲದಿದ್ದರೆ ಒಂದು ರೂಪದಲ್ಲಿ ಕಂಡುಬರುತ್ತದೆಯೆಂದು ಮನಗಂಡದ್ದಾಗಿರುತ್ತದೆ. ಮಾಯೆಯೆಂಬುದರ ಅಭಿಪ್ರಾಯವು ತಕ್ಕಮಟ್ಟಿಗೆ ನಿಮ್ಮಲ್ಲನೇಕರಿಗೆ ಈಗ ತಿಳಿದಿರುತ್ತದೆ. ಅದಕ್ಕೆ ಕಣ್ಣು ಕಟ್ಟು ಎಂದು ಕೆಲವು ವೇಳೆ ತಪ್ಪಾಗಿ ಅರ್ಥಮಾಡುತ್ತಾರೆಂಬುದೂ ಆದ್ದರಿಂದಲೇ ವಿಶ್ವವೆಲ್ಲವೂ ಮಾಯೆಯೆಂದರೆ ಅದೂ ಕಣ್ಣು ಕಟ್ಟಿನ ಮಾಯೆಯೆಂದು ಅರ್ಥಮಾಡಬೇಕಾಗಿಬಂದಿರುತ್ತದೆಯೆಂಬದೂ ನಿಮಗೆ ತಿಳಿದಿರುತ್ತದೆ. ಈ ಶಬ್ದವನ್ನು ಹೀಗೆ ಪರಿವರ್ತನೆ ಮಾಡಿರುವದು ಅಷ್ಟು ಹಿತವಾಗಿಯೂ ಇಲ್ಲ, ಸರಿಯಾಗಿಯೂ ಇರುವದಿಲ್ಲ. ಮಾಯೆಯೆಂಬುದೊಂದು ಕಲ್ಪನಾವಾದವಲ್ಲ, ವಿಶ್ವವು ಇದ್ದದ್ದು ಇರುವಂತೆ ತಿಳಿಸುವ ಒಂದಾನೊಂದು ವಾಕ್ಯ ವಿಶೇಷವು. ಮಾಯೆಯೆಂದರೇನೆಂಬುದನ್ನು ತಿಳಿಯಬೇಕಾದರೆ ನಾವು ಸಂಹಿತೆಗಳ ಕಡೆಗೆ ತಿರುಗಿ ಈ ಅಭಿಪ್ರಾಯದ ಬೀಜರೂಪದಿಂದಲೂ ವಿಚಾರಮಾಡಿ ನೋಡಬೇಕು.

ದೇವತೆಗಳೆಂಬ ಭಾವನೆಯು ಹೇಗೆ ಹುಟ್ಟಿತೆಂಬುದು ಆಗಲೇ ಗೊತ್ತಾಗಿದೆ. ಇದಲ್ಲದೆ ಈ ದೇವತೆಗಳೆಂಬವರು ಮೊದಮೊದಲು ಬಲಶಾಲಿಗಳಾದ ಸತ್ತ್ವವಿಶೇಷಗಳಾಗಿದ್ದರೇ ಹೊರತು ಮತ್ತೇನೂ ಇಲ್ಲವೆಂದು ನಮಗೆ ತಿಳಿದಿದೆ. ಗ್ರೀಕರ, ಯಹೂದ್ಯರ, ಪರ್ಷಿಯನ್ನರ, ಅಥವಾ ಮತ್ತೆ ಯಾವ ಜನಾಂಗದವರ ಪ್ರಾಚೀನ ಧರ್ಮಗ್ರಂಥಗಳನ್ನು ಓದಿ ನೋಡಿದರೂ ಹಿಂದಿನ ಕಾಲದ ದೇವತೆಗಳು ನಮಗೆ ತುಂಬ ಅಸಹ್ಯವೆಂದು ತೋರುವ ಕೃತ್ಯಗಳನ್ನೂ ಮಾಡುತ್ತಿದ್ದರೆಂಬುದನ್ನು ಕಂಡು ನಿಮ್ಮಲ್ಲನೇಕರಿಗೆ ವಿಸ್ಮಯವಾಗಬಹುದು. ಆದರೆ ಈ ಗ್ರಂಥಗಳನ್ನು ಓದುವಾಗ ನಾವು ಹತ್ತೊಂಬತ್ತನೆಯ ಶತಮಾನದವರೆಂಬುದನ್ನೂ ಈ ದೇವತೆಗಳು ಸಾವಿರಾರು ವರ್ಷಗಳ ಕೆಳಗೆ ಇದ್ದವರೆಂಬುದನ್ನೂ ನಾವು ಪೂರ್ಣವಾಗಿ ಮರೆತುಬಿಡುತ್ತೇವೆ. ಇದಲ್ಲದೆ ಈ ದೇವತೆಗಳನ್ನು ಆರಾಧಿಸುತ್ತಿದ್ದ ಜನರಿಗೆ ಬಹಳಮಟ್ಟಿಗೆ ತಮ್ಮಂತೆಯೇ ಆ ದೇವತೆಗಳು ಇದ್ದದ್ದರಿಂದ ಅವರ

ನಡವಳಿಕೆಯಲ್ಲಿ ಏನೂ ವೈಷಮ್ಯವು ಕಂಡುಬರಲಿಲ್ಲವೆಂಬುದನ್ನೂ ಭಯಾನಕವಾಗಿ ತೋರುವಂಥದೇನೂ ಕಂಡುಬರಲಿಲ್ಲವೆಂಬುದನ್ನೂ ನಾವು ಮರೆತು ಬಿಡುತ್ತೇವೆ.

ಇನ್ನೊಂದು ವಿಷಯವನ್ನೂ ಇಲ್ಲಿ ಹೇಳಬಹುದಾಗಿರುತ್ತದೆ. ನಮ್ಮ ಜೀವಮಾನದಲ್ಲಿ ಇದೊಂದು ನಾವು ತಿಳಿದುಕೊಳ್ಳಬೇಕಾಗಿರುವ ಮಹಾತತ್ತ್ವವು. ಏಕೆಂದರೆ ಮತ್ತೊಬ್ಬರ ವಿಷಯದಲ್ಲಿ ನಮ್ಮ ಅಭಿಪ್ರಾಯವನ್ನು ಕೊಡುವಾಗ ಅವರನ್ನು ನಾವು ನಮ್ಮ ಧ್ಯೇಯಗಳ ಅಳತೆಯಿಂದಲೇ ಅಳೆದು ನೋಡುತ್ತೇವೆ; ಇದು ಸರಿಯಲ್ಲ. ಒಬ್ಬೊಬ್ಬನನ್ನೂ ಅವನವನ ಧ್ಯೇಯಕ್ಕೆ ತಕ್ಕಂತೆ ಅಳೆದು ನೋಡಬೇಕೇ ಹೊರತು ಮತ್ತೊಬ್ಬರ ಧ್ಯೇಯದಿಂದ ಅಳೆಯುವದಕ್ಕೆ ಹೋಗಬಾರದು. ನಮ್ಮ ಒಡನಾಡಿಗಳೊಡನೆ ನಾವು ಮಾಡುವ ವ್ಯವಹಾರದಲ್ಲಿ, ನಾವು ಮತ್ತೆ ಮತ್ತೆ ಇದೇ ತಪ್ಪನ್ನೇ ಮಾಡುತ್ತಿರುವೆವು. ಬಹುಮಟ್ಟಿಗೆ ನಮ್ಮೊಳಗೆ ಆಗುವ ಪರಸ್ಪರಕಲಹಗಳೆಲ್ಲ, ಮತ್ತೊಬ್ಬರ ದೇವತೆಗಳನ್ನು ನಮ್ಮ ದೇವತೆಗಳ ದೃಷ್ಟಿಯಿಂದಲೂ ನೋಡುತ್ತೇವೆಂಬ ಈ ಒಂದೇ ಕಾರಣದಿಂದಲೇ ಉಂಟಾಗುತ್ತಿರುವವೆಂದು ನನ್ನ ಅಭಿಪ್ರಾಯವು. ಕೆಲಕೆಲವು ಸಂದರ್ಭಗಳಲ್ಲಿ ನಾನು ಒಂದಾನೊಂದು ಬಗೆಯಲ್ಲಿ ನಡೆದುಕೊಳ್ಳುತ್ತಿರಬಹುದು; ಇನ್ನೊಬ್ಬನೂ ಹೀಗೆಯೇ ಮಾಡುತ್ತಿರುವದನ್ನು ಕಂಡೆನೋ ಇಲ್ಲವೋ, ಅವನಿಗೂ ಅದೇ ಉದ್ದೇಶವಿರಬೇಕೆಂದು ನಾನು ಯೋಚಿಸಿಕೊಳ್ಳುತ್ತೇನೆ; ಕಾರ್ಯವೇನೋ ಅದೇ ಆಗಿದ್ದರೂ ಇನ್ನು ಬೇರೆ ಅನೇಕ ಕಾರಣಗಳು ಅವನ್ನುಂಟುಮಾಡಬಹುದೆಂಬುದು ಮಾತ್ರ ನನಗೆ ಕನಸಿನಲ್ಲಿಯೂ ಹೊಳೆಯುವದಿಲ್ಲ. ನಾನು ಆ ಕೆಲಸವನ್ನು ಮಾಡುವದಕ್ಕೆ ನನಗೆ ಯಾವ ಉದ್ದೇಶವು ಉತ್ತೇಜಕವಾಗಿತ್ತೋ ಅದಕ್ಕಿಂತ ಅತ್ಯಂತ ಭಿನ್ನವಾದ ಉದ್ದೇಶದಿಂದ ಅವನು ಮಾಡಿರಬಹುದಾಗಿದೆ. ಹೀಗಿರುವದರಿಂದ ಆ ಧರ್ಮಗಳ ವಿಷಯವಾಗಿ ನಮ್ಮ ಅಭಿಪ್ರಾಯವನ್ನು ಕೊಡುವಾಗ ನಮಗೆ ಯಾವ ದೃಷ್ಟಿಯಲ್ಲಿ ಅಭಿಮಾನವಿರುವದೋ ಅದನ್ನೇ ಅನುಸರಿಸುವದಕ್ಕೆ ಹೋಗಬಾರದು; ಅವರ ದೃಷ್ಟಿಯನ್ನೇ ಅನುಸರಿಸಬೇಕು. ಆ ಪ್ರಾಚೀನಕಾಲದಲ್ಲಿದ್ದ ವಿಚಾರಕ್ರಮವನ್ನೇ ಜೀವನಕ್ರಮವನ್ನೇ ಮನಸ್ಸಿಗೆ ತಂದುಕೊಳ್ಳಬೇಕು. ಹಳೆಯ ಒಡಂಬಡಿಕೆಯಲ್ಲಿರುವ ಜೆಹೋವನು ಕ್ರೂರಿಯೂ ನಿಷ್ಕರಣಿಯೂ ಆಗಿರುವನೆಂಬ ಭಾವನೆಯು ಅನೇಕರನ್ನು ದಿಗಿಲುಬೀಳುವಂತೆ ಮಾಡಿರುತ್ತದೆ! ಆದರೆ ಹೀಗೇಕೆ ದಿಗಲುಬೀಳಬೇಕು? ಹಿಂದಿನ ಯಹೂದ್ಯರ ಜೆಹೋವನು ಈಗಿನ ಕಾಲದ ವ್ಯವಹಾರದಲ್ಲಿರುವ ಈಶ್ವರಭಾವನೆಗೆ ತಕ್ಕಂತೆ ಇರಬೇಕೆಂದು ಇಟ್ಟಕೊಳ್ಳುವದಕ್ಕೆ ಅವರಿಗೆ ಅಧಿಕಾರವೆಲ್ಲಿದೆ? ಇದೂ ಅಲ್ಲದೆ

ನಾವು ಹೇಗೆ ಆ ಹಿಂದಿನವರ ದೈವ ಭಾವನೆಯನ್ನು ನೋಡಿ ನಗುತ್ತಿರುವೆವೋ ಇದರಂತೆಯೇ ನಮ್ಮ ತರುವಾಯ ಬರುವ ಜನರೂ ನಮ್ಮ ಧರ್ಮ, ಈಶ್ವರ – ಈ ಭಾವನೆಗಳನ್ನು ನೋಡಿ ನಗುವರೆಂಬುದನ್ನು ನಾವು ಮರೆಯಬಾರದು.

ಹೀಗಿದ್ದರೂ ಈ ಬಗೆಬಗೆಯ ಭಾವನೆಗಳಲ್ಲೆಲ್ಲ ಅನುಸ್ಯೂತವಾಗಿರುವ ಒಂದೇ ಒಂದು ಸುವರ್ಣಸೂತ್ರವಿರುವದು. ಈ ಸೂತ್ರವು ಯಾವದೆಂಬುದನ್ನು ಕಂಡುಹಿಡಿಯುವದೇ ವೇದಾಂತದ ಉದ್ದೇಶವು. "ಈ ಬಗೆಬಗೆಯ ಭಾವನೆಗಳಲ್ಲೆಲ್ಲ ಅನುಸ್ಯೂತವಾಗಿರುವ ದಾರವೇ ನಾನು, ಅವುಗಳಲ್ಲಿ ಒಂದೊಂದೂ, ಒಂದೊಂದು ಮುತ್ತಿನಂತೆ ನನ್ನಲ್ಲಿ ಪೋಣಿಸಿಕೊಂಡಿರುತ್ತದೆ" (ಗೀ.7–7) ಎಂದು ಶ್ರೀಕೃಷ್ಣಭಗವಂತನು ಎಂದಿರುತ್ತಾನೆ. ಈ ಭಾವನೆಗಳನ್ನು ಇಂದಿನ ದೃಷ್ಟಿಯಿಂದ ನೋಡಿದಾಗ ಅವು ಎಷ್ಟೇ ವಿಕಾರವಾಗಿ, ಎಷ್ಟೇ ಅಸಹ್ಯವಾಗಿ ಕಾಣಲಿ, ಇವುಗಳಲ್ಲೆಲ್ಲ ಸಂಬಂಧಿಸಿಕೊಂಡಿರುವ ಈ ದಾರವನ್ನು ನಿರ್ಣಯಿಸುವದೇ ವೇದಾಂತದ ಕರ್ತವ್ಯವು. ಹಿಂದಿನ ಕಾಲದ ಚೌಕಟ್ಟಿನಲ್ಲಿಟ್ಟಾಗ ಈ ಭಾವನೆಗಳೆಲ್ಲ ಹೊಂದಿಗೆಯಾಗಿಯೇ ಇದ್ದವು.; ನಮ್ಮ ಈಗಿನ ಭಾವನೆಗಳಿಗಿಂತ ಅವೇನೂ ಹೆಚ್ಚು ವಿಕರಾಳವಾಗಿರಲಿಲ್ಲ. ಅವುಗಳನ್ನು ತಮ್ಮ ತಮ್ಮ ಚೌಕಟ್ಟಿನಿಂದ ಕಿತ್ತು ಈಗಿನ ನಮ್ಮ ಸನ್ನಿವೇಶಗಳಿಗೆ ಹೊಂದಿಸಿದಾಗ ಮಾತ್ರ ಅವುಗಳು ವಿಕರಾಳುವೆಂಬುದು ವ್ಯಕ್ತವಾಗುತ್ತದೆ. ಏಕೆಂದರೆ ಪ್ರಾಚೀನ ಸನ್ನಿವೇಶಗಳು ನಷ್ಟವಾಗಿ ಕಣ್ಮರೆಯಾಗಿಬಿಟ್ಟಿವೆ. ಹೇಗೆ ಪ್ರಾಚೀನದ ಯಹೂದ್ಯನು ಬೆಳೆದು ಸೂಕ್ಷ್ಮಮತಿಯೂ ಕುಶಾಗ್ರಬುದ್ಧಿಯೂ ಆಗಿರುವ ಈಗಿನ ಯಹೂದ್ಯನಾಗಿರುವನೋ, ಪ್ರಾಚೀನ ಆರ್ಯನು ಹೇಗೆ ಕುಶಲನಾದ ಹಿಂದುವಾಗಿರುವನೋ, ಇದರಂತೆಯೇ ಜೆಹೋವನೂ ದೊಡ್ಡವನಾಗಿರುತ್ತಾನೆ, ದೇವತೆಗಳೂ ಉತ್ಕೃಷ್ಟರಾಗಿರುತ್ತಾರೆ. ಪೂಜಕರು ವಿಕಾಸಹೊಂದಿರುವರೆಂಬುದನ್ನು ಒಪ್ಪಿ ಪೂಜ್ಯನಲ್ಲಿ ವಿಕಾಸವಾಗಿದೆಯೆಂಬುದನ್ನು ಒಪ್ಪದೆ ಇರುವದೇ ನಮ್ಮ ಮಹಾದೋಷವು. ಭಕ್ತರು ಮುಂದುವರಿಯಬಹುದಂತೆ, ಆತನಿಗೆ ಮಾತ್ರ ಈ ಪ್ರಗತಿಯು ಇಲ್ಲವಂತೆ! ಅಂದರೇನು? ನೀವೂ ನಾನೂ ಹೇಗೆ ಭಾವನಾ ಪ್ರಪಂಚದಲ್ಲಿ ವೃದ್ಧಿಹೊಂದಿರುತ್ತೇವೋ ಅದರಂತೆಯೇ ಈ ದೇವತೆಗಳೆಂಬ ಭಾವನೆಗಳೂ ವೃದ್ಧಿಹೊಂದಿಕೊಂಡಿರುತ್ತವೆಯೆಂದಾಯಿತು. ದೇವರು ವೃದ್ಧಿಯಾಗುವನೆಂಬ ಈ ಮಾತು ನಿಮಗೆ ಸ್ವಲ್ಪ ವಿಲಕ್ಷಣವಾಗಿ ತೋರಬಹುದು. ನಿಜ, ಅವನು ಬೆಳೆಯಲಾರನು. ಅವನು ನಿರ್ವಿಕಾರಿ. ಇದರಂತೆಯೇ ಪರಮಾರ್ಥ ಮಾನವನೂ ವೃದ್ಧಿಯಾಗುವದಿಲ್ಲ. ಆದರೆ ದೇವರ ವಿಷಯದಲ್ಲಿರುವ ಮನುಷ್ಯನ ಭಾವನೆಗಳು ಎಡೆಬಿಡದೆ ಮಾರ್ಪಡುತ್ತಿರುವವು, ಹಿಗ್ಗುತ್ತಿರುವವು. ಈ ಒಂದೊಂದು ಮಾನವ ರೂಪಕ್ಕೂ ಆಧಾರವಾಗಿರುವ

ನಿಜವಾದ ಮಾನವನು ಅಚಲನೂ ನಿರ್ವಿಕಾರಿಯೂ ಶುದ್ಧನೂ ನಿತ್ಯ ಪರಿಪೂರ್ಣನೂ ಆಗಿರುವನೆಂಬುದು ಮುಂದೆ ಗೊತ್ತಾಗುವದು. ಇದರಂತೆಯೇ ಈಶ್ವರನ ವಿಷಯದಲ್ಲಿ ನಾವು ಮಾಡಿಕೊಳ್ಳುತ್ತಿರುವ ಭಾವನೆಯೂ ಬರಿಯ ಆಕಾರ ಮಾತ್ರವಾಗಿರುತ್ತದೆ, ನಾವು ನಾವೇ ಮಾಡಿಕೊಂಡಿರುವ ಕಲ್ಪನೆಯಾಗಿರುತ್ತದೆ. ಇದಕ್ಕೆ ಆಧಾರವಾಗಿ ನಿಜವಾದ ಈಶ್ವರನು ಇರುತ್ತಾನೆ. ಆತನು ಎಂದಿಗೂ ಮಾರ್ಪಡುವದಿಲ್ಲ. ನಿತ್ಯ ಶುದ್ಧನಾಗಿರುತ್ತಾನೆ. ಆದರೆ ಆತನ ಹೊರಗಿನ ರೂಪವು ಮಾತ್ರ ಯಾವಾಗಲೂ ಮಾರ್ಪಡುತ್ತಲೇ, ತನಗೆ ಆಧಾರವಾಗಿರುವ ಪರಮಾರ್ಥಸ್ವರೂಪವನ್ನು ಹೆಚ್ಚುಹೆಚ್ಚಾಗಿ ವಿಕಾಸಗೊಳಿಸುತ್ತಲೇ, ಇರುವದು. ಆಧಾರತತ್ತ್ವವನ್ನು ಒಂದಿಷ್ಟು ಹೆಚ್ಚಾಗಿ ಪ್ರಕಟಗೊಳಿಸಿದರೆ ಅದಕ್ಕೆ ಪ್ರಗತಿ, ಮುಂದುವರಿಕೆ ಎಂದು ಹೆಸರು. ಆ ತತ್ತ್ವವನ್ನು ಒಂದಿಷ್ಟು ಹೆಚ್ಚಾಗಿ ಮರೆಮಾಡಿದರೆ ಅದಕ್ಕೆ ಪರಾಗತಿ, ಹಿಮ್ಮೆಟ್ಟುವಿಕೆ ಎಂದು ಹೆಸರು. ಈ ರೀತಿಯಲ್ಲಿ ನೋಡಿದರೆ ನಾವು ಹೇಗೆ ಬೆಳೆಯುತ್ತಿರುವೆವೋ ದೇವತೆಗಳೂ ಹಾಗೆಯೇ ಬೆಳೆಯುತ್ತಲಿದ್ದಾರೆ. ಸಾಮಾನ್ಯ ದೃಷ್ಟಿಕೋನದಿಂದ ನೋಡಿದಾಗ ನಾವು ಹೇಗೆ ಪ್ರಕಟವಾಗುತ್ತಿರುವೆವೋ, ನಾವು ಹೇಗೆ ವಿಕಾಸವಾಗುತ್ತಿರುವೆವೋ, ಅದರಂತೆಯೇ ದೇವತೆಗಳೂ ಪ್ರಕಟವಾಗುತ್ತಿರುವರು, ವಿಕಾಸವಾಗುತ್ತಿರುವರು.

ಈಗ ಮಾಯಾವಾದವನ್ನು ತಿಳಿಯುವದಕ್ಕೆ ಸಾಧ್ಯವಾಗುತ್ತದೆ. ಈ ಪ್ರಪಂಚದ ಧರ್ಮಗಳನ್ನೆಲ್ಲ ನೋಡಿದರೆ, ಅವು ಚರ್ಚೆಗೆ ತೆಗೆದುಕೊಂಡಿರುವ ಒಂದೇ ಒಂದು ತತ್ತ್ವವು ಯಾವದೆಂದರೆ ಈ ಪ್ರಪಂಚದಲ್ಲಿ ಹೊಂದುಗಡೆ ಇಲ್ಲದೆ ಇರುವದೇಕೆ? ಪ್ರಪಂಚದಲ್ಲಿ ಈ ದುಃಖವಿರುವದೇಕೆ? – ಎಂಬುದೇ. ಮೊದಲು ಮೊದಲು ಧಾರ್ಮಿಕ ಭಾವನೆಗಳುಂಟಾದಾಗ ಈ ಪ್ರಶ್ನೆಯು ಕಂಡುಬರುವದಿಲ್ಲ, ಏಕೆಂದರೆ ಪ್ರಾಚೀನಕಾಲದಲ್ಲಿ ಮನುಷ್ಯನಿಗೆ ಪ್ರಪಂಚದಲ್ಲಿ ಹೊಂದಿಗೆಯಿಲ್ಲವೆಂಬುದೇ ಹೊಳೆಯಲಿಲ್ಲ. ಅವನಿಗೆ ಸನ್ನಿವೇಶಗಳು ಹೊಂದುಗಡೆಯಿಲ್ಲದೆ ಇದ್ದಂತೆ ತೋರುತ್ತಿರಲಿಲ್ಲ, ಅಭಿಪ್ರಾಯಗಳು ಒಂದಕ್ಕೊಂದು ವಿರುದ್ಧವಾಗಿ ಹೊಡೆದಾಡುತ್ತಿದ್ದಂತೆ ತೋರುತ್ತಿರಲಿಲ್ಲ. ತನ್ನ ಹೃದಯದಲ್ಲಿಯೇ ಏನೋ ಒಂದು 'ಮಾಡು' ಎನ್ನುತ್ತಿದೆಯೆಂದೂ ಮತ್ತೆ ಯಾವದೋ ಒಂದು 'ಮಾಡಬೇಡ' ಎನ್ನುತ್ತಿದೆಯೆಂದೂ ತೋಚುತ್ತಿತ್ತು, ಅಷ್ಟೇ. ಅತಿ ಪ್ರಾಚೀನಯುಗದ ಮನುಷ್ಯನು ತನಗೆ ತೋಚಿದಂತೆ ಮಾಡುವವನಾಗಿದ್ದನು, ತನಗೆ ಏನು ಮಾಡಬೇಕೆಂದು ತೋರಿದರೆಅದನ್ನು ಮಾಡಿಬಿಡುತ್ತಿದ್ದನು, ತನ್ನ ಮನಸ್ಸಿನೊಳಕ್ಕೆ ಯಾವ ಯೋಚನೆಯು ಬಂದರೂ ಅದನ್ನು ಕೈಯಿಂದ ಮಾಡುವದಕ್ಕೆ ಯತ್ನಿಸುತ್ತಿದ್ದನೇ ಹೊರತು ಅದರ ಯುಕ್ತಾಯುಕ್ತವಿವೇಕಕ್ಕೆಂದು ಕೂರುತ್ತಿರಲಿಲ್ಲ,

ತನ್ನ ಮನಃಪ್ರವೃತ್ತಿಗಳನ್ನು ತಡೆಯುವದಕ್ಕೆ ಪ್ರಯತ್ನವಮಾಡುತ್ತಿದ್ದದ್ದಂತೂ ಅಪೂರ್ವವಾಗಿತ್ತು. ಆಗಿನ ದೇವತೆಗಳೂ ಹಾಗೆಯೇ; ಅವರೂ ತತ್ಕಾಲದ ಮನಃ ಪ್ರವೃತ್ತಿಗೆ ಅಡಿಯಾಳುಗಳೇ ಆಗಿರುತ್ತಿದ್ದರು. ಇಂದ್ರನು ಬಂದನೆಂದರೆ ಅಸುರರ ಪಡೆಗಳನ್ನು ನುಗ್ಗನುಚ್ಚುಮಾಡಿಬಿಡುತ್ತಾನೆ. ಜೆಹೋವನಿಗೆ ಒಬ್ಬನನ್ನು ಕಂಡರೆ ಆಗುತ್ತದೆ, ಮತ್ತೊಬ್ಬನನ್ನು ಕಂಡರೆ ಆಗದು. ಅದೇತಕ್ಕೆಂಬುದು ಯಾರಿಗೂ ತಿಳಿಯದು. ಕೇಳುವವರೂ ಯಾರೂ ಇಲ್ಲ. ಆಗ ವಿಚಾರಮಾಡುವ ಅಭ್ಯಾಸವೇ ಇಲ್ಲದ್ದರಿಂದ ಆತನು ಮಾಡಿದ್ದೆಲ್ಲ ಸರಿಯೆಂದೇ ಭಾವನೆಯಾಗುತ್ತಿತ್ತು. ಕೃತ್ಯಾಕೃತ್ಯಗಳ ಭಾನೆಯೇ ಆಗ ಇರಲಿಲ್ಲ. ಈಗ ನಾವು ಅಕೃತ್ಯಗಳೆಂದು ಭಾವಿಸುವ ಎಷ್ಟೋ ಕೆಲಸಗಳನ್ನು ದೇವತೆಗಳು ಮಾಡುತ್ತಿದ್ದರು; ಇಂದ್ರನೇ ಮುಂತಾದ ದೇವತೆಗಳು ದುಷ್ಕೃತ್ಯಗಳನ್ನೇ ಮಾಡುತ್ತಿದ್ದರು. ಆದರೆ ಇಂದ್ರಾರಾಧಕರಿಗೆ ಅದು ಕೆಟ್ಟದ್ದೆಂಬ ಭಾವನೆಯೇ ಹೊಳೆಯಲಿಲ್ಲವಾದ್ದರಿಂದ ಹೀಗೇಕೆಂದು ಅವರು ಕೇಳುತ್ತಿರಲಿಲ್ಲ.

ನೀತಿಭಾವನೆಗಳು ಮುಂದುವರಿಯಲು ಕಾಲಗವು ಪ್ರಾರಂಭವಾಯಿತು. ಮನುಷ್ಯನಲ್ಲಿ ಒಂದಾನೊಂದು ಭಾವನೆಯು ಮೂಡಿತು; ಅದಕ್ಕೆ ಬೇರೆ ಬೇರೆ ದೈವವಾಣಿಯೆಂದಾಗಲಿ ಪೂರ್ವಸಂಸ್ಕೃತಿಯ ಫಲವೆಂದಾಗಲಿ ಮತ್ತೆ ಯಾವ ಹೆಸರಿನಿಂದಾಗಲಿ ಕರೆಯಿರಿ; ಅದರಿಂದಾದ ಪರಿಣಾಮವೇನೋ ಇಷ್ಟು. ಮನುಷ್ಯನ ಸ್ವಾಭಾವಿಕ ಪ್ರವೃತ್ತಿಗಳನ್ನೆಲ್ಲ ನಿಗ್ರಹಿಸುವ ಶಕ್ತಿವಿಶೇಷವೇ ಅದಾಯಿತು. ನಮ್ಮ ಮನಸ್ಸಿನಲ್ಲಿ ಒಂದು ಪ್ರವೃತ್ತಿಯು 'ಮಾಡು' ಎನ್ನುತ್ತಿರುವದು; ಅದರ ಹಿಂದೆಯೇ ಮತ್ತೊಂದು ದನಿಯು ಎದ್ದುಕೊಂಡು 'ಬೇಡ' ಎನ್ನುತ್ತಿರುದು. ನಮ್ಮಲ್ಲಿರುವ ಒಂದು ರಾಶಿಯ ಭಾವನೆಗಳು ಇಂದ್ರಿಯಗಳ ಮೂಲಕವಾಗಿ ಹೊರಕ್ಕೆ ಬರಬೇಕೆಂದು ಯಾವಾಗಲೂ ಹೋರಾಡುತ್ತಿರುವವು; ಇದರ ಹಿಂದುಗಡೆಯಲ್ಲಿ ಬಹು ಸೂಕ್ಷ್ಮವಾಗಿ ನಿರ್ಬಲವಾಗಿರುವ ತೀರತಗ್ಗಿದ ಕಿರುದನಿಯೊಂದು ಇದೆ, ಅದು 'ಹೊರಕ್ಕೆ ಹೋಗಬೇಡ' ಎನ್ನುತ್ತಿರುವದು. ಈ ದೃಶ್ಯ ವಿಶೇಷಗಳನ್ನು ತಿಳಿಸುವದಕ್ಕೆ ಸಂಸ್ಕೃತದಲ್ಲಿ ಎರಡು ಸುಂದರವಾದ ಶಬ್ದಗಳಿವೆ : 'ಪ್ರವೃತ್ತಿ' (ಮುಂದಕ್ಕೆ ಉರುಳಿಕೊಂಡು ಹೋಗುವದು), 'ನಿವೃತ್ತಿ' (ಹಿಂದಕ್ಕೆ ಉರುಳಿಕೊಂಡು ಬರುತ್ತಿರುವದು) – ಎಂಬಿವೇ ಆ ಶಬ್ದಗಳು. ನಮ್ಮ ಕರ್ಮಗಳಿಗೆಲ್ಲ ಪ್ರವೃತ್ತಿಯೇ ಕಾರಣವಾಗಿರುತ್ತದೆ. ಧರ್ಮವೆಂಬುದು ನಿವೃತ್ತಿಯಿಂದಲೇ ಪ್ರಾರಂಭವಾಗುತ್ತದೆ. ಈ 'ಬೇಡ'ವೆನ್ನುವದು ತಲೆದೋರುತ್ತಲೂ ಧರ್ಮವು ಮೊದಲಾಗುತ್ತದೆ, ಈ 'ಬೇಡ'ವೆನ್ನುವದು ತಲೆದೋರುತ್ತಲೂ ಆಧ್ಯಾತ್ಮಿಕ ಜೀವನವು ಮೊದಲಾಗುತ್ತದೆ. 'ಬೇಡ'ವೆಂಬುದಿಲ್ಲದಿದ್ದರೆ ಧರ್ಮವು ಇನ್ನೂ

ಉತ್ಪತ್ತಿಯೇ ಆಗಿರುವದಿಲ್ಲ. ಈ 'ಬೇಡ'ವೆಂಬುದು ತಲೆದೋರಿತೋ ಇಲ್ಲವೋ, ಮನುಷ್ಯರ ಭಾವನೆಗಳು ಬೆಳೆಯುವಂತಾಯಿತು. ಅವರು ಅಲ್ಲಿಯವರೆಗೂ ಅರ್ಚನೆಮಾಡುತ್ತಿದ್ದ ಕಲಹಪ್ರಿಯರಾದ ದೇವತೆಗಳನ್ನೂ ಲೆಕ್ಕಿಸದೆ ಭಾವನೆಗಳು ಬೆಳೆಯುವದಕ್ಕೆ ಮೊದಲಾದವು.

ಮಾನವ ಜಾತಿಯ ಹೃದಯದಲ್ಲಿ ಒಂದಿಷ್ಟು ಪ್ರೇಮವು ಅಂಕುರಿಸಿತು. ಅದು ತೀರ ಅಲ್ಪವಾಗಿದ್ದಿತು; ಈಗಲೂ ಅದು ಅಷ್ಟೇನೂ ಹೆಚ್ಚಿರುವದಿಲ್ಲ. ಮೊದಮೊದಲು ಒಂದೊಂದು ತಂಡದವರಲ್ಲಿ ಮಾತ್ರ ಅದು ಇರುತ್ತಿತ್ತು. ತಮ್ಮ ತಮ್ಮ ತಂಡಕ್ಕೆ ಸೇರಿದವರ ಮೇಲೆಲ್ಲ ಪ್ರೀತಿಯಿರುತ್ತಿತ್ತು. ಈ ದೇವತೆಗಳಿಗೂ ತಮ್ಮ ತಮ್ಮ ತಂಡದವರ ಮೇಲೆ ಅಕ್ಕರೆ. ಒಂದೊಂದು ದೇವತೆಯೂ ಕುಲದೇವತೆಯಾಗಿತ್ತು, ಆಯಾ ಕುಲಕ್ಕೆ ರಕ್ಷಕ ದೇವತೆಯಾಗಿತ್ತು. ಬೇರೆ ಬೇರೆ ಜನಾಂಗಗಳಲ್ಲಿರುವ ಬೇರೆ ಬೇರೆ ಗೋತ್ರದವರು ಆಯಾ ಗೋತ್ರಸ್ಥಾಪಕನ ವಂಶದಲ್ಲಿಯೇ ತಾವು ಹುಟ್ಟಿದವರೆಂದು ಭಾವಿಸುವಂತೆ, ಕೆಲಕೆಲವು ವೇಳೆಗಳಲ್ಲಿ ಒಂದೊಂದು ಕುಲದವರು ಆಯಾ ಕುಲದೇವತೆಯ ವಂಶದವರೇ ತಾವೆಂದೂ ಭಾವಿಸಿಕೊಳ್ಳುತ್ತಿದ್ದರು. ಈ ಕುಲದೇವತೆಗಳಿಂದ ಮಾತ್ರವೇ ಅಲ್ಲ, ಸೂರ್ಯ ಚಂದ್ರರ ವಂಶದವರು ತಾವೆಂದು ಹೇಳಿಕೊಳ್ಳುವ ಜನರೂ ಪ್ರಾಚೀನ ಕಾಲದಲ್ಲಿರುತ್ತಿದ್ದರು, ಈಗಲೂ ಇರುತ್ತಾರೆ. ಹಿಂದಿನ ಕಾಲದ ಸಂಸ್ಕೃತಗ್ರಂಥಗಳಲ್ಲಿ ಸೂರ್ಯ ವಂಶದ ಮಹಾವೀರರಾದ ಚಕ್ರವರ್ತಿಗಳ ಕಥೆಯು ಕಂಡುಬರುತ್ತದೆ. ಇಂಥವರು ಮೊದಲು ಸೂರ್ಯಚಂದ್ರರ ಆರಾಧಕರಾಗಿದ್ದರು; ಬರಬರುತ್ತಾ ತಾವು ಸೂರ್ಯನ ಅಥವಾ ಚಂದ್ರನ ವಂಶದವರೆಂದು ಭಾವಿಸಿಕೊಂಡರು. ಹೀಗೆ ಈ ಕುಲಭಾವನೆಗಳು ಬೆಳೆದುಕೊಳ್ಳುವದಕ್ಕೆ ಪ್ರಾರಂಭಿಸಲಾಗಿ ಒಂದಿಷ್ಟು ಪ್ರೇಮವು ತಲೆದೋರಿತು, ಒಬ್ಬರಿಗೊಬ್ಬರು ಹೇಗೆ ನಡೆದುಕೊಳ್ಳಬೇಕೆಂಬ ಬಗ್ಗೆ ಒಂದಿಷ್ಟು ಭಾವನೆಯು, ಒಂದಿಷ್ಟು ಸಮಾಜಭಾವನೆಯು, ಉದ್ಭವವಾಯಿತು. ಆಗ "ಒಬ್ಬರ ವಿಷಯದಲ್ಲೊಬ್ಬರಿಗೆ ಸಹನೆಯೂ ತಾಳ್ಮೆಯೂ ಇಲ್ಲದಿದ್ದರೆ ನಾವು ಜೊತೆಯಲ್ಲಿದ್ದುಕೊಂಡು ಜೀವನಮಾಡುವುದು ಹೇಗೆ?" ಎಂಬ ಯೋಚನೆಯು ಸಹಜವಾಗಿ ಹುಟ್ಟಿಕೊಂಡಿತು. ಯಾವಾಗಲಾದರೊಮ್ಮೆ ತನುಮನಃ ಪ್ರವೃತ್ತಿಗಳನ್ನು ತಡೆದುಕೊಳ್ಳದೆ, ತನ್ನನ್ನು ತಾನು ಹಿಡಿದು ನಿಲ್ಲಿಸಿಕೊಳ್ಳದೆ, ತನ್ನ ಮನಸ್ಸು ಮಾಡೆಂದು ಹೇಳುವದನ್ನೆಲ್ಲ ಮಾಡದೆ, ಇರುವದಾಗದಿದ್ದರೆ ಒಬ್ಬನು ಇನ್ನೊಬ್ಬನೊಡನೆ ಬಾಳುವದಾದರೂ ಹೇಗೆ? ಅದು ಖಂಡಿತ ಆಗುವ ಮಾತಲ್ಲ. ಸಂಯಮವೆಂಬ ಭಾವನೆಯು ಈ ರೀತಿ ಹುಟ್ಟಿತು. ಸಮಾಜ ಭಾವನೆಯೆಂಬ ಕಟ್ಟಡವೇ ಈ ತನ್ನನ್ನು ತಾನು ಬಿಗಿಹಿಡಿದುಕೊಳ್ಳುವ ಸಂಯಮದ ಅಡಿಗಟ್ಟಿನ

ಮೇಲೆ ನಿಂತಿರುತ್ತದೆ. ಸಹನೆಯೂ ತಾಳ್ಮೆಯೂ ಇರಬೇಕೆಂಬುದನ್ನು ತಿಳಿಯದ ಗಂಡಸಾಗಲಿ ಹೆಂಗಸಾಗಲಿ ಅತ್ಯಂತ ದುಃಖವನ್ನನುಭವಿಸುತ್ತಾ ಬಾಳ ಬೇಕಾಗುವದೆಂಬುದು ನಮಗೆಲ್ಲ ತಿಳಿದೇ ಇದೆ.

ಈ ಧಾರ್ಮಿಕ ಭಾವನೆಗಳು ಬರುತ್ತಲೂ ಇನ್ನೊಂದಿಷ್ಟು ಉತ್ಕೃಷ್ಟವಾದ ಇನ್ನೂ ಹೆಚ್ಚಿನ ನೈತಿಕ ದೃಷ್ಟಿಯು ಝಳುಕೊಂದು ಮಾನವನ ಅಂತಃಕರಣದಲ್ಲಿ ಮಿಂಚಿತು. ಆಗ ಪ್ರಾಚೀನ ದೇವತೆಗಳು ಸರಿಯಾಗಿರುವಂತೆ ತೋರಲಿಲ್ಲ. ಪೂರ್ವಿಕರ ದೇವತೆಗಳು ಬಹು ಗದ್ದಲದವರೂ ಕಲಹಪ್ರಿಯರೂ ಪಾನಪ್ರಿಯರೂ ಆಗಿರುತ್ತಿದ್ದರು; ಅವರಿಗೆ ಸುಟ್ಟ ಮಾಂಸದ ಕಮ್ಮನೆಯ ವಾಸನೆಯಲ್ಲಿ ಆಸಕ್ತಿಯಿತ್ತು, ಮಾದಕ ದ್ರವ್ಯಗಳ ಪಾನದಲ್ಲಿ ಅಕ್ಕರೆಯಿತ್ತು. ಕೆಲವು ವೇಳೆಗಳಲ್ಲಿ ಇಂದ್ರನು ಸ್ವೇಚ್ಛೆಯಿಂದ ಬೇಕಾದಷ್ಟು ಕುಡಿದು ನೆಲದ ಮೇಲೆ ಬಿದ್ದುಕೊಂಡು ಅರ್ಥವಿಲ್ಲದ ಮಾತುಗಳನ್ನಾಡುತ್ತಿದ್ದನು. ಇಂಥ ದೇವತೆಗಳು ಈಗ ಜನರಿಗೆ ಒಗ್ಗಲಿಲ್ಲ. ಉದ್ದೇಶಗಳ ವಿಚಾರಮಾಡಬೇಕೆಂಬ ಅಭಿಪ್ರಾಯವು ಹುಟ್ಟಿಬಿಟ್ಟಿತ್ತಾದ್ದರಿಂದ ಆ ವಿಚಾರಕ್ಕೆ ದೇವತೆಗಳೂ ಸಿಕ್ಕಿಬಿದ್ದರು. ಇಂಥ ದೇವತೆಯು ಹೀಗೇಕೆ ನಡೆದನು, ಹೀಗೇಕೆ ನಡೆದನು? ಎಂದು ಕೇಳುವದಕ್ಕೆ ಹೊರಟರು, ಅಂಥ ಕಾರಣವೇನೂ ತೋರಲಿಲ್ಲ. ಆದ್ದರಿಂದ ಜನರು ಈ ದೇವತೆಗಳನ್ನು ಬಿಟ್ಟುಬಿಟ್ಟರು; ಅಥವಾ ಬಿಟ್ಟರೆನ್ನುವದಕ್ಕಿಂತ ಆ ದೇವತೆಗಳ ವಿಷಯದಲ್ಲಿ ಅವರಿಗೆ ಇನ್ನೂ ಉತ್ತಮವಾದ ಅಭಿಪ್ರಾಯಗಳುಂಟಾದವು, ಎಂದು ಹೇಳುವದು ಉಚಿತವಾಗಿರುವದು. ದೇವತೆಗಳ ನಡತೆಯನ್ನೆಲ್ಲ, ಗುಣಗಳನ್ನೆಲ್ಲ, ಪರೀಕ್ಷೆ ಮಾಡಿ ಯಾವಯಾವದನ್ನು ಹೊಂದಿಸುವದಕ್ಕಾಗಲಾರದೆ ಹೋಯಿತೋ ಅವುಗಳನ್ನೆಲ್ಲ ತೆಗೆದುಹಾಕಿ ತಮಗೆ ಒಪ್ಪಾಗುವವುಗಳನ್ನೆಲ್ಲ ಇಟ್ಟುಕೊಂಡು, ಅವುಗಳನ್ನೆಲ್ಲ ಒಕ್ಕಡೆಗೆ ಸೇರಿಸಿ, ಆ ಒಟ್ಟಿಗೆ **"ದೇವದೇವ"** ಎಂದರೆ ದೇವತೆಗಳಿಗೆಲ್ಲ ದೇವನು ಎಂಬ ಒಂದು ಹೆಸರನ್ನು ಇಟ್ಟರು. ಈಗ ಅವರು ಪೂಜಿಸುವ ದೇವರು ಬರಿಯ ಶಕ್ತಿಯ ಪ್ರತೀಕವಾಗಿರಲಿಲ್ಲ. ಅವರಿಗೆ ಈಗ ಅದಕ್ಕಿಂತ ಹೆಚ್ಚಿನದೊಂದು ಬೇಕಾಗಿದ್ದಿತು. ಆ ದೇವನು ನೀತಿವಂತನಾದನು. ಅವನು ಜನರನ್ನು ಪ್ರೀತಿಸುತ್ತಾನೆ,ಜನರಿಗೆಲ್ಲ ಉಪಕಾರಮಾಡುತ್ತಾನೆ, ಎಂದು ಅವರು ಭಾವಿಸುವದಕ್ಕೆ ಹೊರಟರು. ದೇವತೆಯೆಂಬ ಭಾವನೆಯೇನೋ ಇನ್ನೂ ಹಾಗೇ ಉಳಿದುಕೊಂಡಿತು. ದೇವರ ನೀತಿಯ ಅಂತಸ್ತನ್ನು ಹೆಚ್ಚಿಸಿದರು, ಆತನ ಶಕ್ತಿಯನ್ನು ಹೆಚ್ಚಿಸಿದರು. ಆತನು ಸರ್ವಶಕ್ತಕಲ್ಪನೂ ಆದದ್ದಲ್ಲದೆ ಪ್ರಪಂಚದಲ್ಲೆಲ್ಲ ಅತ್ಯಂತ ನೀತಿವಂತನೂ ಆದನು.

ಆದರೆ ಈ ತೇಪೆಯ ಕೆಲಸವು ಎಷ್ಟು ನಡೆದರೂ ಸಾಕಾಗಲಿಲ್ಲ. ಪರಿಹಾರವು

ವಿಸ್ತೃತವಾಗುತ್ತಾ ಬಂದಂತೆಲ್ಲ ಅದರಿಂದ ತೊಲಗಬೇಕಾದ ಸಮಸ್ಯೆಯೂ ಸಂದೇಹವೂ ಮತ್ತಷ್ಟು ಹೆಚ್ಚಿತು. ದೇವರ ಗುಣಗಳು ನಿಯುತಾಂತರ ಶ್ರೇಣಿಯ ಕ್ರಮದಲ್ಲಿ ಹೆಚ್ಚಿದರೆ ಸಮಸ್ಯೆಯೂ ಸಂದೇಹವೂ ನಿಯುತಗುಣೋತ್ತರ ಶ್ರೇಣಿಯ ಕ್ರಮದಲ್ಲಿ ಹೆಚ್ಚಿದವು. ಜೆಹೋವನ ಸಮಸ್ಯೆಯನ್ನು ಪ್ರಪಂಚದ ಈಶ್ವರನ ಸಮಸ್ಯೆಗೆ ಹೋಲಿಸಿದರೆ ಅದು ತೀರ ಅಲ್ಪವಾಗಿತ್ತೆಂದು ಹೇಳಬೇಕಾಗುತ್ತದೆ; ಈ ಕಷ್ಟವು ಇಂದಿಗೂ ಇದ್ದುಕೊಂಡೇ ಇರುವದು. ಪ್ರಪಂಚದ ಈಶ್ವರನು ಸರ್ವಶಕ್ತನೂ ದಯಾಮಯನೂ ಆಗಿರುವಲ್ಲಿ ಆತನ ರಾಜ್ಯದಲ್ಲಿ ಪೈಶಾಚಿಕ ಘಟನೆಗಳಿಗೇಕೆ ಅವಕಾಶವಿರಬೇಕು? ಸುಖಕ್ಕಿಂತ ಕಷ್ಟವೇ ಏಕೆ ಹೆಚ್ಚಾಗಿರಬೇಕು? ಉಪಕಾರಕ್ಕಿಂತಲೂ ಅಪಕಾರವೇ ಏಕೆ ಹೆಚ್ಚಾಗಿರಬೇಕು? ಇವುಗಳನ್ನೆಲ್ಲ ನೋಡದಂತೆ ನಾವು ಕಣ್ಣುಮುಚ್ಚಿಕೊಳ್ಳಬಹುದು; ಆದರೇನು? ಈ ಪ್ರಪಂಚವು ಭಯಂಕರ ಪ್ರಪಂಚವೆಂಬುದೇನೋ ನಿಜವಾಗಿರುತ್ತದೆ.ಅದನ್ನು ನಾವೆಷ್ಟು ಹೊಗಳಿದರೂ ಅದೊಂದು ಟಾಂಟಲಸ್ಸನ* ನರಕವಾಗಿರುತ್ತದೆ. ಇಲ್ಲಿ ನೋಡಿ, ನಮ್ಮಲ್ಲಿ ಬಲವಾದ ಪ್ರವರ್ತಕ ಸ್ವಭಾವಗಳಿರುತ್ತವೆ, ವಿಷಯ ಭೋಗಗಳನ್ನು ಪಡೆಯಬೇಕೆಂಬ ಪ್ರಬಲತರವಾದ ಬಯಕೆಗಳಿರುತ್ತವೆ; ಆದರೆ ಅವುಗಳನ್ನೇ ತೃಪ್ತಿಗೊಳಿಸುವದು ನಮ್ಮಿಂದಾಗದು. ನಾವು ಎಷ್ಟೇ ಬೇಡವೆಂದರೂ ಒಂದಾನೊಂದು ಅಲೆಯು ಎದ್ದುಕೊಂಡು ನಮ್ಮನ್ನು ಮುಂದಕ್ಕೆ ನೂಕುತ್ತದೆ; ಒಂದು ಹೆಜ್ಜೆ ಮುಂದಕ್ಕಿಟ್ಟೆವೊ ಇಲ್ಲವೋ, ಘಟ್ಟೆಂದು ಒಂದು ಏಟು ಬೀಳುತ್ತದೆ. ನಾವೆಲ್ಲರೂ ಟಾಂಟಲಸ್ಸ ನಂತೆಯೇ ಇಲ್ಲಿ ವಾಸವಮಾಡಿಕೊಂಡಿರಬೇಕಾಗಿದೆ. ನಮಗೆ ಇಂದ್ರಿಯಗಳ ಎಲ್ಲೆಕಟ್ಟನ್ನು ಬಹುಮಟ್ಟಿಗೆ ದಾಟಿ ಎಷ್ಟೋ ಆಚೆಗೆ ಇರುವ ಧ್ಯೇಯಗಳು ನಮ್ಮ ಮನಸ್ಸಿನಲ್ಲಿ ತೂರಿಕೊಳ್ಳುತ್ತವೆ; ಆದರೆ ಅವನ್ನು ಆಚರಣೆಗೆ ತರಬೇಕೆಂದು ಯತ್ನಿಸಿದರೆ ಮಾತ್ರ ಆಗುವದಿಲ್ಲ. ಇದಕ್ಕೆ ಬದಲು ನಮ್ಮ ಸುತ್ತಲೂ ಭೋರ್ಗರೆಯುತ್ತಿರುವ ಜಲಾಶಯವು ನಮ್ಮ ಮೇಲೆ ಬಂದು ನುಗ್ಗುತ್ತಿರುವದು. ಹೀಗಿದ್ದರೂ ಈ ಪರಮಧ್ಯೇಯದ ವಿಚಾರವನ್ನೇ ಕೈಬಿಟ್ಟು ಈ ಲೋಕದ ವ್ಯವಹಾರವನ್ನೇ ಹೇಗೋ ಹೆಣಗಾಡುತ್ತಾ ನಡೆಯಿಸಿಕೊಂಡು ಹೋದರೆ ನನ್ನ ಬಾಳು ಪಶುವಿನ ಬಾಳಾಗುವದು, ಆಗ ನಾನು ಹೀನ ಸ್ಥಿತಿಗೆ ಬಂದು

---

* ಟಾಂಟಲಸ್ (Tantalus) ಎಂಬುವನು ಸಿಯಸ್ (Zeus) ಎಂಬ ದೇವತೆಗಳೊಡೆಯ ಮತ್ತು ಪ್ಲೂಟೋ (Pluto) ಎಂಬ ಅಪ್ಸರಸ್ತ್ರೀ – ಇವರು ಮಗನು. ಸಿಯಸ್ಸಿನ ರಹಸ್ಯಗಳನ್ನು ಹೊರಗೆಡವಿದ ತಪ್ಪಿತಕ್ಕಾಗಿ ಅವನನ್ನು ಕತ್ತಿನವರೆಗೂ ನೀರು ಬರುವಂತೆ ಮುಳುಗಿಸಲಾಯಿತು; ಅವನ ತಲೆಯ ಮೇಲೆ ಅತ್ಯಂತ ರುಚಿಕರವಾದ ಹಣ್ಣುಗಳು ಜೋತುಬಿದ್ದಿದ್ದವು. ಆದರೆ ಅವನು ಹಣ್ಣು ತಿನ್ನಬೇಕೆಂದಾಗಲಿ ನೀರು ಕುಡಿಯಬೇಕೆಂದಾಗಲಿ ಪ್ರಯತ್ನಿಸಿದಾಗ ಮಾತ್ರ ಅವು ಹಿಂದಕ್ಕೆ ಸರಿಯುತ್ತಿದ್ದವು.

ಕೀಳಾಗುವೆನು. ಈ ಎರಡು ಹಾದಿಗಳಲ್ಲಿಯೂ ಸುಖವಿರುವದಿಲ್ಲ. ಯಾರು ತಾವು ಹುಟ್ಟಿದಂತೆಯೇ ಈ ಲೋಕದಲ್ಲಿದ್ದುಕೊಂಡಿರುವೆವೆನ್ನುವರೋ ಅವರಿಗೆ ದುಃಖವೇ ಗತಿ; ಇನ್ನು ಯಾರು ತಮಗೆ ತತ್ತ್ವವೂ ಉತ್ತಮ ವಿಚಾರಗಳೂ ಬೇಕೆಂದು, ಬರಿಯ ಪಶುವೃತ್ತಿಗಿಂತ ಮೇಲಾದದ್ದೇನಾದರೂ ತಮಗೆ ಬೇಕೆಂದು, ಕೇಳುವ ದಿಟ್ಟರಾಗಿರುವರೋ ಅವರಿಗೆ ಇದರ ಸಾವಿರಪಾಲು ದುಖವು ಬಂದೊದಗುವದು. ಇರುವ ಸಂಗತಿಯೇನೋ ಇಷ್ಟು, ಇದಕ್ಕೆ ಕಾರಣವೇನೆಂಬುದನ್ನು ಹೇಳುವದಕ್ಕಾಗುವಂತಿಲ್ಲ. ಇದೇಕೆಂಬುದನ್ನು ಹೇಳುವದಕ್ಕೇ ಆಗುವಂತಿಲ್ಲವಾದರೂ ವೇದಾಂತದಲ್ಲಿ ಇದರಿಂದ ತಪ್ಪಿಸಿಕೊಳ್ಳುವ ಮಾರ್ಗವನ್ನು ತಿಳಿಸಿರುತ್ತದೆ. ಇದನ್ನು ನೀವು ನೆನಪಿನಲ್ಲಿಡಬೇಕು. ನಿಮಗೆ ಕೆಲವು ವೇಳೆ ಅಂಜಿಕೆಯನ್ನುಂಟುಮಾಡುವ ಅಂಶಗಳನ್ನೂ ನಾನು ಹೇಳಬೇಕಾಗುವದು; ಆದರೆ ನಾನು ಹೇಳುವದನ್ನು ನೀವು ನೆನಪಿನಲ್ಲಿಟ್ಟುಕೊಂಡರೆ, ಅದನ್ನೇ ಮನನಮಾಡಿ ಅರಗಿಸಿಕೊಂಡರೆ ಅದು ನಿಮ್ಮನ್ನು ಮೇಲಕ್ಕೆತ್ತುವದು; ನಿಜವನ್ನು ತಿಳಿದುಕೊಂಡು ಅದರಲ್ಲಿಯೇ ನಿಷ್ಠೆಯನ್ನು ಪಡೆಯುವ ಯೋಗ್ಯತೆಯನ್ನು ಕೊಡುವದು.

ಈ ಪ್ರಪಂಚವು ಟಾಂಟಲಸ್ಸನ ನರಕವೆಂಬುದು ಯಥಾರ್ಥ ವಿಷಯವನ್ನು ತಿಳಿಸುವ ವಾಕ್ಯವು. ಈ ಪ್ರಪಂಚದ ವಿಷಯದಲ್ಲಿ ನಮಗೆ ಏನೇನೂ ತಿಳಿಯದು, ಆದರೂ ನಮಗೆ ಏನೂ ತಿಳಿಯದೆಂದೂ ಹೇಳುವದಕ್ಕೆ ಬರುವದಿಲ್ಲ. ಇದನ್ನು ನಾನು ಅರಿಯೆನೆಂಬುದನ್ನು ಮನದಂದರೆ ಈ ಸರಪಳಿಯು* ಇದೆಯೆಂದು ಹೇಳುವದಕ್ಕಾಗುವದಿಲ್ಲ. ಇದೆಲ್ಲವೂ ನನ್ನ ಮೆದುಳಿನ ಭ್ರಾಂತಿಯಾಗಿರಬಹುದು, ಇದನ್ನು ಅರಿಯುವಾಗಲೆಲ್ಲ ನನಗೆ ಕನಸೇ ಆಗಿರಬಹುದು. ನಾನು ನಿಮ್ಮೊಡನೆ ಮಾತನಾಡುತ್ತಿರುವೆನೆಂದೂ ನೀವು ನಾನು ಹೇಳುವದನ್ನು ಕೇಳುತ್ತಿರುವಿರೆಂದೂ ನನಗೆ ಕನಸಾಗುತ್ತಿರಬಹುದು. ಇದು ಕನಸ್ಸಲ್ಲವೆಂದು ಯಾರೊಬ್ಬರೂ ಸಾಧಿಸುವದಕ್ಕೆ ಆಗುವ ಹಾಗಿಲ್ಲ, ನನ್ನ ಮೆದುಳೆಂಬುದೇ ಒಂದು ಕನಸಾಗಿರಬಹುದು. ಇನ್ನೂ ಒಳಹೊಕ್ಕು ನೋಡಿದರೆ ಯಾವನೊಬ್ಬನೂ, ತನ್ನ ಮೆದುಳನ್ನು ತಾನು ನೋಡಿದ್ದೇ ಇಲ್ಲ. ಅದೊಂದು ಇದೆಯೆಂದು ನಾವೆಲ್ಲರೂ ಇಟ್ಟುಕೊಂಡು ಬಿಟ್ಟಿದ್ದೇವೆ. ಪ್ರತಿಯೊಂದೂ ಹೀಗೆಯೇ, ನನ್ನ ಶರೀರವೆಂಬುದೂ ಇದೆಯೆಂದು ನಾನು ಕಲ್ಪಿಸಿಕೊಂಡಿರುವದೇ. ಹೀಗಿದ್ದರೂ ನನಗೆ ಇದರ ಅರಿವು ಇಲ್ಲವೆಂದೂ ಹೇಳಲಾಗುವದಿಲ್ಲ. ಹೀಗೆ ಜ್ಞಾನಾಜ್ಞಾನಗಳ ನಡುವೆ

* ಪ್ರಪಂಚವು ಕಾರ್ಯಕಾರಣಗಳೆಂಬ ಕೊಂಡಿಗಳ ಪರಂಪರೆಯಿಂದಾಗಿರುವ ಒಂದು ಸರಪಳಿಯಾಗಿಗೆ.

ನಿಂತಿರುವದನ್ನು,# ಈ ಸತ್ಯಾನೃತಗಳು ಹೇಗೋ ಬೆರೆಕೆಯಾಗಿರುವ ಬಗೆಯನ್ನು, ಅವರೆಡೂ ಎಲ್ಲಿ ಸೇರಿವೆಯೆಂಬುದನ್ನು, ಯಾರೊಬ್ಬರೂ ಅರಿಯರು. ನಾವು ಅರ್ಧನಿದ್ರೆಮಾಡುತ್ತಾ ಅರ್ಧ ಎಚ್ಚರವಾಗಿದ್ದುಕೊಂಡು ಒಂದಾನೊಂದು ಕನಸಿನಲ್ಲಿ ವಿಹರಿಸುತ್ತಿರುವೆವು; ನಮ್ಮ ಜೀವಮಾನವೆಲ್ಲ ಒಂದಾನೊಂದು ಕಾವಳದಲ್ಲಿ ಕಳೆಯುತ್ತಿರುವದು. ನಮ್ಮಲ್ಲಿ ಪ್ರತಿಯೊಬ್ಬರದೂ ಇದೇ ಗತಿ. ಇಂದ್ರಿಯಜ್ಞಾನಕ್ಕೆಲ್ಲ ಇದೇ ಗತಿ. ನಾವು ಜಂಭಕೊಚ್ಚಿಕೊಳ್ಳುತ್ತಿರುವ ತತ್ತ್ವಶಾಸ್ತ್ರಕ್ಕೆಲ್ಲ, ನಾವು ಜಂಭಕೊಚ್ಚಿಕೊಳ್ಳುತ್ತಿರುವ ಭೌತಿಕಶಾಸ್ತ್ರಕ್ಕೆಲ್ಲ, ನಾವು ಜಂಭಕೊಚ್ಚಿಕೊಳ್ಳುತ್ತಿರುವ ಮಾನವಜ್ಞಾನಕ್ಕೆಲ್ಲ, ಇದೇ ಗತಿ. ಪ್ರಪಂಚವೆಂದರೆ ಇಂಥದ್ದು.

ಭೌತಿಕ ವಸ್ತುವೆಂದು, ಮನಸ್ಸೆಂದು ಅಥವಾ ಮತ್ತೊಂದೆಂದು, ನೀವು ಕರೆಯುವದೆಲ್ಲ ಹೀಗೆಯೇ ಇರುವದು; ಇವು ಇರುವದೆಂದೂ ಹೇಳುವದಕ್ಕೆ ಬರುವದಿಲ್ಲ, ಇಲ್ಲವೆಂದೂ ಹೇಳುವದಕ್ಕೆ ಬರುವದಿಲ್ಲ. ಅವು ಒಂದೆಂದೂ ಹೇಳುವದಕ್ಕೆ ಬರುವದಿಲ್ಲ, ಅನೇಕವೆಂದೂ ಹೇಳುವದಕ್ಕೆ ಬರುವದಿಲ್ಲ. ಹೀಗೆ ವಿಂಗಡಿಸಿ ಅರಿಯುವದಕ್ಕೆ ಬಾರದ, ಇದು ಇಂಥದ್ದೆಂದು ಗೊತ್ತುಹಚ್ಚುವದಕ್ಕಾಗದ, ಒಂದರಿಂದೊಂದನ್ನು ಬೇರ್ಪಡಿಸುವದಕ್ಕಾಗದ ಈ ಕತ್ತಲೆ ಬೆಳಕುಗಳ ನಿತ್ಯ ಲೀಲೆಯು ನಡೆಯುತ್ತಲೇ ಇದೆ. ಇರುವ ವಿಷಯ, ಆದರೂ ಇರುವದಲ್ಲ; ಎಚ್ಚರವಾಗಿದೇವೆ, ಆದರೂ ನಿದ್ರಿಸುತ್ತಿದೇವೆ. ಇದೊಂದು ಇದ್ದ ಸಂಗತಿಗಳನ್ನು ಇದ್ದಂತೆ ತಿಳಿಸುವ ಹೇಳಿಕೆಯು, ಇದನ್ನೇ **ಮಾಯೆ**ಯೆಂದು ಕರೆಯುತ್ತಾರೆ. ನಾವು ಈ **ಮಾಯೆ**ಯಲ್ಲಿಯೇ ಹುಟ್ಟಿರುತ್ತೇವೆ, ಅದರಲ್ಲಿಯೇ ಬಾಳುತ್ತಿದೇವೆ, ಅದರಲ್ಲಿಯೇ ವಿಚಾರ ಮಾಡುತ್ತಿದೇವೆ, ಅದರಲ್ಲಿಯೇ ಕನಸುಕಾಣುತ್ತಿದೇವೆ. ತತ್ತ್ವಜಿಜ್ಞಾಸುಗಳಾಗಿರುವದೂ ಇದರಲ್ಲಿಯೇ, ನಾವು ಅಧ್ಯಾತ್ಮ ನಿಷ್ಠರಾಗಿರುವದೂ ಇದರಲ್ಲಿಯೇ; ಇಷ್ಟೇ ಅಲ್ಲ, ನಾವು ಪಿಶಾಚಿಗಳಾಗಿರುವದೂ ಈ ಮಾಯೆಯಲ್ಲಿಯೇ, ದೇವತೆಗಳಾಗಿರುವದೂ ಈ ಮಾಯೆಯಲ್ಲಿಯೇ. ನಿಮ್ಮ ವಿಚಾರಗಳನ್ನು ಎಷ್ಟು ಬೇಕಾದರೂ ಹಿಗ್ಗಿಸಿರಿ, ಅವುಗಳನ್ನು ಎಷ್ಟೆಷ್ಟು ಉತ್ಕೃಷ್ಟವಾಗಿಯಾದರೂ ಮಾಡಿಕೊಳ್ಳಿರಿ, ಅವುಗಳನ್ನು ಅನಂತವೆಂದಾಗಲಿ ಅಥವಾ ನಿಮಗೆ ಇಷ್ಟವಾದ ಮತ್ತೆ ಯಾವ ಹೆಸರಿನಿಂದಾಗಲಿ ಕರೆದುಕೊಳ್ಳಿರಿ, ಈ ವಿಚಾರಗಳು ಕೂಡ ಈ ಮಾಯೆಯಲ್ಲಿಯೇ ಇರುವವು. ಇದು ಹೀಗಲ್ಲದೆ ಬೇರೊಂದು ಬಗೆಯಲ್ಲಿರುವದಕ್ಕೆ ಸಾಧ್ಯವೇ ಇಲ್ಲ, ಮಾನವನ ಒಟ್ಟು

# ಪ್ರತ್ಯಕ್ಷಾದಿ ಪ್ರಮಾಣ ಪ್ರಮೇಯ ವ್ಯವಹಾರವು ಅಧ್ಯಾಸರೂಪವಾಗಿರುವದೆಂಬ ವೇದಾಂತ ಸಿದ್ಧಾಂತವನ್ನು ಸುಲಭವಾದ ಭಾಷೆಯಲ್ಲಿ ಸ್ವಾಮಿಗಳು ಇಲ್ಲಿ ವಿವರಿಸಿದ್ದಾರೆ.

ವಿಜ್ಞಾನವೆಂಬುದು ಈ ಮಾಯೆಯು ಹೇಗೆ ತೋರುವದೋ ಹಾಗೆಯೇ ಅರಿಯಬೇಕೆಂದು ಪ್ರಯತ್ನಿಸುತ್ತಿರುವದಿಂದಾಗುವ ನಿಯಮಗಳೇ ಹೊರತು ಬೇರೆಯಲ್ಲ. ಇದೆಲ್ಲವೂ ನಾಮರೂಪಕಾರ್ಯವೇ. ಯಾವಯಾವದಕ್ಕೆ ರೂಪವುಂಟೋ ಯಾವಯಾವದರಿಂದ ನಿಮ್ಮ ಮನಸ್ಸಿನಲ್ಲಿ ಒಂದೊಂದು ಭಾವನೆಯುಂಟಾಗುತ್ತಿರುವದೋ ಅದೆಲ್ಲವೂ **ಮಾಯೆಯೊಳಗೇ** ಇದ್ದು ಕೊಂಡಿರುವದು; ಏಕೆಂದರೆ ಕಾಲದೇಶ ನಿಮಿತ್ತಗಳ ನಿಯಮಗಳಿಂದ ಪರಿಚ್ಛಿನ್ನವಾಗಿರುವದೆಲ್ಲವೂ **ಮಾಯೆಯೊಳಗೇ** ಇದ್ದುಕೊಂಡಿರುವದು.

ಈಗ ಆ ಪುರಾತನವಾದ ಈಶ್ವರಭಾವನೆಗಳ ಕಡೆಗೆ ಮತ್ತೊಮ್ಮೆ ಸ್ವಲ್ಪ ಹೊತ್ತು ತಿರುಗಿ ಅವುಗಳ ಗತಿಯೇನಾಯಿತೆಂಬುದನ್ನು ಕಂಡುಕೊಳ್ಳೋಣ. ಈಶ್ವರನೆಂದರೆ ನಿತ್ಯವಾಗಿ ನಮ್ಮನ್ನು ಪ್ರೀತಿಸುತ್ತ, ಎಂದೆಂದಿಗೂ ಅಸ್ವಾರ್ಥನಾಗಿ, ಸರ್ವಶಕ್ತನಾಗಿ, ಈ ಪ್ರಪಂಚವನ್ನು ಆಳುತ್ತಿರುವಯಾವದೋ ಒಂದು ತತ್ತ್ವವೆಂಬ ಭಾವನೆಯು ಅವರಿಗೆ ತೃಪ್ತಿಯನ್ನುಂಟುಮಾಡಲಾರದೆ ಹೋಯಿತೆಂಬುದು ಕೂಡಲೆ ನಮಗೆ ಹೊಳೆಯುತ್ತದೆ. ತತ್ತ್ವಜಿಜ್ಞಾಸುವಾದವನು ಹೀಗೆಂದು ಕೇಳುವದಕ್ಕೆ ಪ್ರಾರಂಭಿಸಿದನು: ನ್ಯಾಯಶೀಲನೂ ಕರುಣಾಮಯನೂ ಆದ ಈಶ್ವರನು ಎಲ್ಲಿರುವನು? ಮನುಷ್ಯರ ಮತ್ತು ಪಶ್ವಾದಿಗಳ ರೂಪದಲ್ಲಿ ಕೋಟ್ಯನು ಕೋಟಿಯಾಗಿ ತನ್ನ ಮಕ್ಕಳು ಸಾಯುತ್ತಿರುವರೆಂಬುದು ಆತನಿಗೆ ಕಾಣದೇನು? ಮತ್ತೊಬ್ಬನನ್ನು ಕೊಲ್ಲದೆ ಒಂದು ಕ್ಷಣವಾದರೂ ಇಲ್ಲಿ ಯಾರು ತಾನೆ ಬಾಳಲಾದೀತು? ಸಾವಿರಾರು ಪ್ರಾಣಿಗಳನ್ನು ನಾಶಗೊಳಿಸದೆ ಒಂದು ಉಸಿರನ್ನಾದರೂ ತೆಗೆದುಕೊಳ್ಳುವದಕ್ಕಾದೀತೆ? ಕೋಟಿಗಟ್ಟಲೆಯಾಗಿ ಪ್ರಾಣಿಗಳು ಸಾಯುತ್ತಿರುವದರಿಂದಲೇ ನೀವು ಬದುಕಿರುವಿರಿ. ನಿಮ್ಮ ಜೀವನದಲ್ಲಿ ಪ್ರತಿಯೊಂದು ಕ್ಷಣವೂ, ನೀವು ತೆಗೆದುಕೊಳ್ಳುತ್ತಿರುವ ಪ್ರತಿಯೊಂದು ಉಚ್ಛ್ವಾಸವೂ, ಸಾವಿರಗಟ್ಟಲೆಯ ಪ್ರಾಣಿಗಳಿಗೆ ಸಾವಾಗಿರುವದು; ನೀವು ಮಾಡುತ್ತಿರುವ ಪ್ರತಿಯೊಂದು ಚಲನೆಯೂ ಕೋಟಿಗಟ್ಟಲೆ ಪ್ರಾಣಿಗಳಿಗೆ ಸಾವಾಗಿರುವದು; ನೀವು ತಿನ್ನುತ್ತಿರುವ ಪ್ರತಿಯೊಂದು ತುತ್ತೂ ಕೋಟಿಗಟ್ಟಲೆ ಪ್ರಾಣಿಗಳಿಗೆ ಸಾವಾಗಿರುವದು. ಅವುಗಳೇಕೆ ಸಾಯಬೇಕು? ಅವುಗಳೆಲ್ಲ ಕೀಳು ಪ್ರಾಣಿಗಳು ಎಂಬುದೊಂದು ಹಳೆಯ ಯುಕ್ತ್ಯಾಭಾಸವುಂಟು. ಅವು ಕೀಳುಪ್ರಾಣಿಗಳೆಂದೇ ಇಟ್ಟುಕೊಳ್ಳೋಣ, ಇದು ವಾದಗ್ರಸ್ತ ವಿಷಯವೇ ಆಗಿರುತ್ತದೆ, ಏಕೆಂದರೆ ಇರುವೆಯು ಮನುಷ್ಯನಿಗಿಂತ ಹೆಚ್ಚಿನದೋ, ಮನುಷ್ಯನು ಇರುವೆಗಿಂತ ಹೆಚ್ಚಿನವನೋ, ಯಾರು ಬಲ್ಲರು? ಈ ಪ್ರಶ್ನೆಯು ಹಾಗಿರಲಿ, ಇವು ಬಹಳ ಕೀಳು ಪ್ರಾಣಿಗಳೆಂದೇ ಇಟ್ಟುಕೊಳ್ಳೋಣ– ಹಾಗಿದ್ದರೂ ಅವೇಕೆ ಸಾಯಬೇಕು? ಅವು ಕೀಳಾಗಿದ್ದರೆ ಅವು

ಬದುಕಿರಬೇಕೆಂಬುದಕ್ಕೆ ಹೆಚ್ಚು ಕಾರಣವಿದೆಯೆಂದಾಯಿತು. ಅದೇಕಾಗದು? ಅವು ನಮ್ಮಗಳಿಗಿಂತಲೂ ಹೆಚ್ಚು ಇಂದ್ರಿಯಗಳಲ್ಲಿ ಜೀವಿಸುತ್ತವೆ. ಅವಕ್ಕೆ ಸುಖವೂ ದುಃಖವೂ ನಮ್ಮಗಳಿಗಿಂತ ಸಾವಿರಪಟ್ಟು ಹೆಚ್ಚಾಗಿ ಆಗುತ್ತದೆ. ನಾಯಿಯಾಗಲಿ ತೋಳನಾಗಲಿ, ತಿನ್ನುವಂತೆ ಸವಿಸವಿದು ಚಪ್ಪರಿಸಿಕೊಂಡು ನಮ್ಮಲ್ಲಿ ಯಾರು ತಿನ್ನುವರು? ಯಾರೂ ಇಲ್ಲ. ಏಕೆಂದರೆ ನಮ್ಮ ಶಕ್ತಿ ವಿಶೇಷಗಳು ಇಂದ್ರಿಯಗಳಲ್ಲಿರುವದಿಲ್ಲ; ಅವು ಬುದ್ಧಿಯಲ್ಲಿವೆ, ಹೃದಯದಲ್ಲಿವೆ. ಆದರೆ ಪಶ್ವಾದಿಗಳಲ್ಲಿಯೋ ಎಂದರೆ ಅವುಗಳ ಮನಸ್ಸೆಲ್ಲ ಇಂದ್ರಿಯಗಳಲ್ಲಿಯೇ ಇರುತ್ತದೆ; ಅವು ಹುಚ್ಚು ಹುಚ್ಚಾಗಿ, ಮನುಷ್ಯರಾದ ನಾವುಗಳು ಕನಸಿನಲ್ಲಿಯೂ ಕಂಡರಿಯದ ರೀತಿಯ ಭೋಗಗಳನ್ನು ಅನುಭವಿಸುತ್ತವೆ. ಅವುಗಳ ದುಃಖವೂ ಸುಖಕ್ಕೆ ತಕ್ಕ ಪರಿಣಾಮದಲ್ಲಿ ಆಗುತ್ತದೆ. ಸುಖವೂ ದುಃಖವೂ ಒಂದೇ ಅಳತೆಯಲ್ಲಿ ಲಭಿಸುತ್ತವೆ. ಪಶ್ವಾದಿಗಳಿಗುಂಟಾಗುವ ಸುಖವು ಮನುಷ್ಯನಿಗಾಗುವ ಸುಖಕ್ಕಿಂತ ಅಷ್ಟೊಂದು ಜೋರಾಗಿರುವದಾದರೆ ಆ ಪಶ್ವಾದಿಗಳಿಗೆ ಮನುಷ್ಯನಿಗಾಗುವಷ್ಟೇ ಜೋರಾಗಿ, ಅಥವಾ ಇನ್ನೂ ಜೋರಾಗಿ, ದುಃಖಾನುಭವುಂಟಾಗುವದೆಂದು ತಾನೇ ಸಿದ್ಧವಾಗುತ್ತದೆ. ಹೀಗಿರುವದರಿಂದ ಮನುಷ್ಯರಿಗೆ ಸಾಯುವಾಗ ಆಗುವ ದುಃಖವೂ ಸಂಕಟವೂ ಪ್ರಾಣಿಗಳಿಗೆ ಎಂಥ ಸಂಕಟವಾಗವವೆಂಬುದು ವಸ್ತುಸ್ಥಿತಿಯು; ಹೀಗಿದ್ದರೂ ಅವುಗಳಿಗೆ ಎಂಥ ಸಂಕಟವಾಗಬಹುದೆಂಬುದನ್ನು ಒಂದಿಷ್ಟೂ ಲೆಕ್ಕಕ್ಕೆ ತೆಗೆದುಕೊಳ್ಳದೆ ನಾವು ಅವುಗಳನ್ನು ಕೊಲ್ಲುತ್ತಿದ್ದೇವೆ. ಇದೇ **ಮಾಯೆಯು**. ಮನುಷ್ಯನಂತೆ ಸಗುಣನಾಗಿರುವ ಒಬ್ಬನೊಬ್ಬ ದೇವರು ಇದಾನೆಂದೂ ಅವನು ಎಲ್ಲವನೂ ಸೃಷ್ಟಿಸಿರುವನೆಂದೂ ನಾವು ಇಟ್ಟುಕೊಂಡರೆ, ಕಷ್ಟದಿಂದ ಒಳ್ಳೆಯದೇ ಆಗುವದೆಂದು ತೋರಿಸಿಕೊಡುವದಕ್ಕೆ ಹೋಗುವ ವ್ಯಾಖ್ಯಾನುಗಳೂ ಕಲ್ಪನೆಗಳೂ ಇವೆಯಲ್ಲ – ಅವು ಯಾವವೂ ಸಾಕೆನಿಸುವದಿಲ್ಲ. ಇಪ್ಪತ್ತು ಸಾವಿರ ಒಳ್ಳೆಯ ಫಲಗಳುಂಟಾಗಲಿ, ಆದರೆ ಅವು ದುಃಖದಿಂದಲೇ ಏತಕ್ಕೆ ಉಂಟಾಗಬೇಕು? ಈ ತತ್ತ್ವವನ್ನು ಆಧಾರವಾಗಿ ಇಟ್ಟುಕೊಳ್ಳುವದಾದರೆ ನಾನು ಮಿಕ್ಕವರನ್ನೆಲ್ಲ ತಲೆಹೊಡೆಯಬಹುದಾಗುವದು; ಏಕೆಂದರೆ ನನಗೆ ಪಂಚೇಂದ್ರಿಯಗಳಿಗೂ ಪೂರ್ಣಸುಖವಾಗಬೇಕೆಂಬ ಆಸೆಯಿರುತ್ತದೆ. ಆದ್ದರಿಂದ ಇದೇನೂ ಸರಿಯಾದ ಕಾರಣವಲ್ಲ. ಒಳ್ಳೆಯದು ದುಃಖದ ಮೂಲಕವಾಗಿಯೇ ಏತಕ್ಕೆ ಉಂಟಾಗಬೇಕು? ಈ ತತ್ತ್ವವನ್ನು ಆಧಾರವಾಗಿಟ್ಟುಕೊಳ್ಳವದಾದರೆ ನಾನು ಮಿಕ್ಕವರನ್ನೆಲ್ಲ ತಲೆಹೊಡೆಯಬಹುದಾಗುವದು; ಏಕೆಂದರೆ ನನಗೆ ಪಂಚೇಂದ್ರಿಯಗಳಿಗೂ ಪೂರ್ಣಸುಖವಾಗಬೇಕೆಂಬ ಆಸೆಯಿರುತ್ತದೆ. ಆದ್ದರಿಂದ ಇದೇನೂ ಸರಿಯಾದ ಕಾರಣವಲ್ಲ. ಒಳ್ಳೆಯದು ದುಃಖದ ಮೂಲಕವಾಗಿಯೇ

ಏತಕ್ಕೆ ಉಂಟಾಗಬೇಕು? ಈ ಪ್ರಶ್ನೆಗೆ ಉತ್ತರ ಹೇಳುವದು ನಿಂತೇ ನಿಲ್ಲುತ್ತದೆ; ಆದರೆ ಇದಕ್ಕೆ ಉತ್ತರ ಹೇಳುವದು ಆಗುವಂತೆಯೇ ಇರುವದಿಲ್ಲ. ಭರತಖಂಡದ ತತ್ತ್ವಶಾಸ್ತ್ರವು ಇದನ್ನು ಒಪ್ಪಲೇಬೇಕೆಂಬುದನ್ನು ಕಂಡುಕೊಂಡಿತು.

ವೇದಾಂತವೆಂಬುದು ಪ್ರಪಂಚದ ಧರ್ಮಗಳಲ್ಲೆಲ್ಲ ಅತ್ಯಂತ ಧೈರ್ಯವಂತವಾದ ಧರ್ಮವಾಗಿದ್ದಿತು. ಅದು ಈಗಲೂ ಹಾಗೆಯೇ ಇದೆ. ಅದು ಇಂಥಲ್ಲಿಗೆ ನಿಲ್ಲಬೇಕೆಂಬ ನಿರ್ಬಂಧವನ್ನೇ ಇಟ್ಟುಕೊಳ್ಳಲಿಲ್ಲ. ಅದಕ್ಕೆ ಒಂದು ಸೌಕರ್ಯವಿದ್ದಿತು. ಅದೇನೆಂದರೆ ನಿಜವನ್ನು ಹೇಳಿದವರ ಬಾಯಿ ಮುಚ್ಚುವದಕ್ಕೆ ಪ್ರಯತ್ನಿಸುವಂಥ ಯಾವ ಪುರೋಹಿತರೂ ಆಗ ಇರಲಿಲ್ಲ. ಧರ್ಮ ವಿಚಾರದಲ್ಲಿ ಯಾವಾಗಲೂ ನಿರಂಕುಶವಾದ ಸ್ವಾತಂತ್ರ್ಯವಿದ್ದಿತು. ಇಂಡಿಯದಲ್ಲಿ ಮೂಢ ವಿಶ್ವಾಸದ ಬಂಧವೆಂಬುದು ಸಮಾಜಕ್ಕೆ ಸೇರಿದ್ದು; ಈ ಪಶ್ಚಿಮ ದೇಶದಲ್ಲಿ ಸಮಾಜವು ಬಹು ಸ್ವತಂತ್ರವಾಗಿರುತ್ತದೆ. ಇಂಡಿಯದಲ್ಲಿ ಸಮಾಜ ವಿಚಾರಗಳಲ್ಲಿ ಬಹಳ ಕಟ್ಟು ಇದೆ, ಆದರೆ ಧರ್ಮ ವಿಚಾರದಲ್ಲಿ ಮಾತ್ರ ಸ್ವಾತಂತ್ರ್ಯವಿರುತ್ತದೆ. ಇಂಗ್ಲಂಡಿನಲ್ಲಿ ಯಾರು ಎಂಥ ಉಡುಪನ್ನಾದರೂ ಧರಿಸಬಹುದು, ಯಾರು ಏನು ಬೇಕಾದರೂ ತಿನ್ನಬಹುದು – ಅದಕ್ಕೆ ಯಾರ ಆಕ್ಷೇಪವೂ ಇರುವದಿಲ್ಲ; ಆದರೆ ಚರ್ಚಿಗೆ* ಹೋಗುವದನ್ನು ಮಾತ್ರ ಬಿಡಲಿ, ಕೂಡಲೆ ನೆರೆಮನೆಯವರು ಆಕ್ಷೇಪಿಸಿ ಬಿಡುತ್ತಾರೆ. ಯಾವನೇ ಆಗಲಿ ಸಮಾಜವು ಮತವಿಚಾರದಲ್ಲಿ ಏನು ಹೇಳತ್ತದೆಯೋ ಅದರಂತೆ ಮೊದಲು ನಡೆದುಕೊಳ್ಳಬೇಕು, ಆಮೇಲೆ ತತ್ತ್ವ ವಿಚಾರವನ್ನು ಮಾಡಬಹುದಾಗಿರುತ್ತದೆ. ಇಂಡಿಯದಲ್ಲಿ ಹೀಗಿಲ್ಲ. ಯಾವನಾದರೂ ತನ್ನ ಜಾತಿಯವನಲ್ಲದ ಮತ್ತೊಬ್ಬನೊಡನೆ ಸಹಭೋಜನವನ್ನಾಚರಿಸಿದರೆ ಸಮಾಜವು ತನ್ನ ಉಗ್ರಶಕ್ತಿಯನ್ನೆಲ್ಲ ಉಪಯೋಗಿಸಿಕೊಂಡು ಅವನ ಮೇಲೆ ಬಿದ್ದು ಅವನನ್ನು ಕೂಡಲೇ ಅಪ್ಪಳಿಸಿ ಹಾಕಿಬಿಡುತ್ತದೆ. ಬಹು ಪುರಾತನ ಕಾಲದಲ್ಲಿ ತನ್ನ ಪೂರ್ವಿಕರು ಹಾಕಿಕೊಳ್ಳುತ್ತಿದ್ದ ಉಡುಪಿಗಿಂತ ಸ್ವಲ್ಪ ಬೇರೆಯೇ ಉಡುಪನ್ನು ಹಾಕಿಕೊಂಡರೆ ಸಾಕು, ಅವನ ಗತಿ ಆಯಿತು.# ಮೊಟ್ಟಮೊದಲು ರೈಲು ಬಂದಾಗ ಒಬ್ಬ ಮನುಷ್ಯನು ಎಷ್ಟೋ ಮೈಲಿಗಳ ದೂರ ನಡೆದುಕೊಂಡು ಹೋದದ್ದಕ್ಕಾಗಿ ಸಮಾಜದವರು ಅವನಿಗೆ ಬಹಿಷ್ಕಾರ ಹಾಕಿದರಂತೆ! ಇರಲಿ, ಒಂದು ವೇಳೆ ಇದು ನಿಜವಾಗಿರಲಾರದೆಂದೇ ಇಟ್ಟುಕೊಳ್ಳೋಣ! ಧರ್ಮ ವಿಚಾರದಲ್ಲಿ ಮಾತ್ರ

* ಕ್ರಿಸ್ತಿಯರ ಪ್ರಾರ್ಥನಾಮಂದಿರಗಳಿಗೆ ಚರ್ಚುಗಳೆಂದು ಹೆಸರು.

# ಸಮಾಜವನ್ನು ಅನಾದರಮಾಡಿ ಸ್ವೇಚ್ಛೆಯಿಂದ ನಡೆಯುವವರು ಹೆಚ್ಚಿರುವ ಈ ಕಾಲದಲ್ಲಿ ಕೂಡ ಸಮಾಜದ ಕಟ್ಟು ಇದ್ದುಕೊಂಡೇ ಇರುತ್ತದೆ.

ಹಾಗಲ್ಲ. ನಾಸ್ತಿಕರು, ಚಾರ್ವಾಕರು, ಬೌದ್ಧರು – ಪ್ರತಿಯೊಂದು ಬಗೆಯ ಪ್ರತಿಯೊಂದು ಜಾತಿಯ ಅಭಿಪ್ರಾಯದವರೂ (ಅವರಲ್ಲಿ ಕೆಲವರು ಅತ್ಯಂತ ಭಯಂಕರವಾದ ಅಭಿಪ್ರಾಯದವರೂ ಕೂಡ ಇರುತ್ತಿದ್ದರು. ಇವರೆಲ್ಲರೂ) ಒಟ್ಟಿಗೆ ಇರುವದು ಕಂಡುಬರುತ್ತದೆ. ಪ್ರತಿಯೊಂದು ಪಂಗಡದ ಉಪದೇಶಕರೂ ತಮ್ಮ ತಮ್ಮ ಮತತತ್ತ್ವಗಳನ್ನು ಬೋಧಿಸುತ್ತಾ ಹೋಗುತ್ತಾರೆ, ಅವರಿಗೆ ಜನರು ಶಿಷ್ಯರೂ ಆಗುತ್ತಾರೆ; ದೇವಾಲಯಗಳ ಬಾಗಿಲ ಮುಂದೆಯೇ ಚಾರ್ವಾಕರು ನಿಂತು ತಮ್ಮ ಅಭಿಪ್ರಾಯವನ್ನು ತಿಳಿಸಿದರೂ ಬ್ರಾಹ್ಮಣರು ಅವಕಾಶ ಕೊಡುತ್ತಾರೆ – ಇದೀಗ ಬ್ರಾಹ್ಮಣರ ವಿಶೇಷಗುಣವು.

ಬುದ್ಧನು ಹಣ್ಣು ಹಣ್ಣು ಮುದುಕನಾಗಿ ಕಾಲವಾದನು. ಅಮೆರಿಕದಲ್ಲಿ ಮಹಾವಿಜ್ಞಾನ ಶಾಸ್ತ್ರಜ್ಞರೆಂದೆನಿಸಿಕೊಂಡಿರುವ ನನ್ನ ಮಿತ್ರರೊಬ್ಬರಿಗೆ ಆತನ ಜೀವನ ಚರಿತ್ರೆಯನ್ನು ಓದುವದೆಂದರೆ ಬಲು ಅಕ್ಕರೆ. ಆದರೆ ಬುದ್ಧನ ಮರಣವು ಮಾತ್ರ ಅವರಿಗೆ ಮೆಚ್ಚಲಾಗಲಿಲ್ಲ, ಏಕೆಂದರೆ ಅವನನ್ನು ಯಾರೂ ಶಿಲುಬೆಗೆ, ಹಾಕಲಿಲ್ಲ!* ಎಂಥ ತಪ್ಪುಭಾವನೆ! ಯಾವನಾದರೂ ದೊಡ್ಡವನೆನಿಸಿ ಕೊಳ್ಳಬೇಕಾದರೆ ಅವನು ಖೂನಿಯಾಗಿರಬೇಕೆ? ಇಂಡಿಯದಲ್ಲಿ ಇಂಥ ಭಾವನೆಗಳು ಎಂದೂ ಉಂಟಾಗಿರುವದಿಲ್ಲ. ಈ ಪ್ರಸಿದ್ಧನಾದ ಬುದ್ಧನು ಇಂಡಿಯದ ದೇವತೆಗಳನ್ನೂ – ಅಷ್ಟೇ ಅಲ್ಲ, ಪ್ರಪಂಚದ ಪರಮೇಶ್ವರನನ್ನು ಕೂಡ – ತಿರಸ್ಕರಿಸುತ್ತಾ ಆ ದೇಶದಲ್ಲೆಲ್ಲ ಸಂಚರಿಸುತ್ತಿದ್ದನು. ಹೀಗಿದ್ದರೂ ಅವನು ತುಂಬ ವಯಸ್ಸಾಗುವ ವರೆಗೂ ಬದುಕಿದ್ದನು. ಅವನು ಎಂಬತ್ತು ವರ್ಷಗಳವರೆಗೆ ಬದುಕಿದ್ದನು, ಅರ್ಧದೇಶವನ್ನೇ ತನ್ನ ಮತಕ್ಕೆ ತಿರುಗಿಸಿಕೊಂಡಿದ್ದನು.

ಇದಲ್ಲದೆ ಚಾರ್ವಾಕರೆಂಬುವರೂ ಇದ್ದರು. ಅವರು ಅತ್ಯಂತ ಅಸಹ್ಯವಾದ ಸ್ವಲ್ಪವೂ ಮುಚ್ಚುಮರೆಯಿಲ್ಲದ, ಭೌತಿಕವಾದವನ್ನೇ ಹೂಡಿದ್ದರು. ಈ ಹತ್ತೊಂಬತ್ತನೆಯ ಶತಮಾನದಲ್ಲಿ ಬಹಿರಂಗವಾಗಿ ಅದನ್ನು ಬೋಧನೆ ಮಾಡುವದಕ್ಕೆ ಯಾರಿಗೂ ಎದೆ ಬರಲಾರದು. ಅಂಥ ವಿಷಯ ಭೋಗವಾದವದು! ಈ ಚಾರ್ವಾಕರು ಒಂದು ದೇವಾಲಯದಿಂದ ಮತ್ತೊಂದು ದೇವಾಲಯಕ್ಕೂ ಒಂದು ನಗರದಿಂದ ಮತ್ತೊಂದು ನಗರಕ್ಕೂ ಸಂಚರಿಸುತ್ತಾ 'ಧರ್ಮವೆಂಬುದು ಅವಿವೇಕವು; ಇದೆಲ್ಲ ಬ್ರಾಹ್ಮಣರ ಕಲ್ಪನೆಯು; ವೇದವೆಂಬುದು ಭಂಡರೂ ಧೂರ್ತರೂ ಪಿಶಾಚಿಗಳೂ ಬರೆದ ಗ್ರಂಥಗಳು; ದೇವರೂ ಇಲ್ಲ, ನಿತ್ಯನಾದ

* ಕ್ರೈಸ್ತನನ್ನು ಯಹೂದ್ಯರು ತಮ್ಮ ಮತಕ್ಕೆ ವಿರೋಧಿಯೆಂದು ಶಿಲುಬೆಗೆ ಹಾಕಿ ಕೊಂದು ಹಾಕಿದರು; ಅವನಂತೆ ಸಹನೆಯಿಂದ ಮರಣಕ್ಕೆ ಸಿದ್ಧನಾದವನೇ ಮಹಾತ್ಮನೆಂಬುದು ಈ ಅಮೆರಿಕ ಮಹಾಶಯರ ಅಭಿಪ್ರಾಯವಾಗಿರಬೇಕು.

ಆತ್ಮನೂ ಇಲ್ಲ'-ಎಂದು ಬೋಧಿಸುತ್ತಾ ಹೋಗುತ್ತಿದ್ದರು. ಅವರಿಗೂ ಅವಕಾಶವಿತ್ತು. ಜೀವಾತ್ಮವೆಂಬುದು ಬೇರೆ ಇದ್ದರೆ ಅದು ಮರಣಾನಂತರದಲ್ಲಿಯೂ ಹೆಂಡತಿಮಕ್ಕಳ ಪ್ರೀತಿಯಿಂದ ಮತ್ತೇತಕ್ಕೆ ಹಿಂದಕ್ಕೆ ಬರುವದಿಲ್ಲ?- ಎಂದು ಅವರು ಕೇಳುತ್ತಿದ್ದರು. ಅವರ ಅಭಿಪ್ರಾಯವೇನೆಂದರೆ ಜೀವವೆಂಬುದೊಂದು ಬೇರೆಯಾಗಿ ಇದ್ದರೆ ಸತ್ತಮೇಲೂ ಅದಕ್ಕೆ ಪ್ರೇಮವಿರಬೇಕು, ಅದಕ್ಕೆ ರುಚಿಯಾದ ಆಹಾರವು ಇಷ್ಟವಾಗಿರಬೇಕು, ಅದಕ್ಕೆ ಸುಂದರವಾದ ಬಟ್ಟೆಬರೆಗಳು ಬೇಕಾಗಿರಬೇಕು. ಹೀಗೆಲ್ಲ ಅನ್ನುತ್ತಿದ್ದರೂ ಈ ಚಾರ್ವಾಕರನ್ನು ಯಾರೊಬ್ಬರೂ ಹಿಂಸೆಪಡಿಸಲಿಲ್ಲ.

ಅಂತೂ ಇಂಡಿಯದಲ್ಲಿ ಮತಸ್ವಾತಂತ್ರ್ಯವೆಂಬ ಈ ಉತ್ತಮಭಾವನೆಯು ಯಾವಾಗಿನಿಂದಲೂ ಇದ್ದುಕೊಂಡೇ ಇರುತ್ತದೆ. ಸ್ವಾತಂತ್ರ್ಯವೇ ಅಭಿವೃದ್ಧಿಗೆ ಬೇಕಾದ ಮೊಟ್ಟಮೊದಲನೆಯ ಹೇತುವೆಂಬುದನ್ನು ನೆನಪಿನಲ್ಲಿಟ್ಟಿರಬೇಕು. ನೀವು ಯಾವದಕ್ಕೆ ಸ್ವಾತಂತ್ರ್ಯವನ್ನು ಕೊಡುವದಿಲ್ಲವೋ ಅದು ಎಂದಿಗೂ ಬೆಳೆಯಲೇ ಆರದು. ಮತ್ತೊಬ್ಬರು ಬೆಳೆಯುವಂತೆ ಮಾಡಬಹುದೆಂದೂ ಅವರ ಬೆಳವಣಿಗೆಗೆ ನಾವು ಸಹಾಯ ಮಾಡಬಹುದೆಂದೂ ಅವರಿಗೆ ಮಾರ್ಗದರ್ಶಕರಾಗಿದ್ದುಕೊಂಡು ಹೀಗೆ ಹೀಗೆ ನಡೆಯಬೇಕೆಂಬುದನ್ನು ತಿಳಿಸಿಕೊಟ್ಟು ಯಾವಾಗಲೂ ಗುರುವಾಗಿರುವ ಸ್ವಾತಂತ್ರ್ಯವನ್ನು ನಾವು ಇಟ್ಟುಕೊಂಡಿರಬಹುದೆಂದೂ ಭಾವಿಸುವದು ಅವಿವೇಕ, ಅನರ್ಥಕರವಾದ ಸುಳ್ಳು; ಇದರಿಂದ ಈ ಲೋಕದಲ್ಲಿ ಲಕ್ಷಗಟ್ಟಲೆಯ ಪ್ರಾಣಿಗಳ ಬೆಳವಣಿಗೆಗೆ ಅಡಚಣೆಯಾಗಿರುತ್ತದೆ. ಜನರಿಗೆ ಸ್ವಾತಂತ್ರ್ಯದ ಬೆಳಕಿರಬೇಕು, ಇದೊಂದೇ ಬೆಳವಣಿಗೆಗೆ ಕಾರಣವಾಗುತ್ತದೆ.

ಭರತಖಂಡದವರಾದ ನಾವು ಅಧ್ಯಾತ್ಮ ವಿಚಾರಗಳಲ್ಲಿ ಸ್ವಾತಂತ್ರ್ಯವನ್ನು ಕೊಟ್ಟೆವು; ಅದರಿಂದ ನಮ್ಮಲ್ಲಿ ಇಂದಿಗೂ ಧರ್ಮಸಂಬಂಧವಾದ ಅದ್ಭುತ ಆಧ್ಯಾತ್ಮಿಕ ಶಕ್ತಿಯಿರುತ್ತದೆ. ನೀವು ಸಮಾಜ ವಿಚಾರದಲ್ಲಿ ಅಷ್ಟೇ ಸ್ವಾತಂತ್ರ್ಯವನ್ನು ಕೊಟ್ಟಿರುತ್ತೀರಿ, ಆದ್ದರಿಂದ ನಿಮ್ಮಲ್ಲಿ ಉತ್ಕೃಷ್ಟವಾದ ಸಮಾಜ ರಚನೆಯಾಗಿರುತ್ತದೆ. ನಾವು ಸಾಮಾಜಿಕ ವಿಷಯಗಳು ವಿಕಾಸವಾಗುವದಕ್ಕೆ ಸ್ವಲ್ಪವೂ ಅವಕಾಶವನ್ನು ಕೊಟ್ಟಿರುವದಿಲ್ಲ; ಆದ್ದರಿಂದ ನಮ್ಮ ಸಮಾಜವು ಬಹು ಸಂಕುಚಿತವಾಗಿರುತ್ತದೆ. ನೀವು ಧಾರ್ಮಿಕ ವಿಚಾರಗಳಲ್ಲಿ ಒಂದಿಷ್ಟೂ ಸ್ವಾತಂತ್ರ್ಯವನ್ನು ಕೊಟ್ಟಿರುವದಿಲ್ಲ, ನಿಮ್ಮ ನಂಬಿಕೆಗಳನ್ನು ಕತ್ತಿಕಠಾರಿಗಳ ಬಲದಿಂದ ಒತ್ತಾಯವಾಗಿ ಜನರ ಮೇಲೆ ಹಾಕಿರುತ್ತೀರಿ; ಇದರ ಫಲಿತವಾಗಿ ಯುರೋಪಿಯನರ ಮನಸ್ಸಿನಲ್ಲಿ ಧರ್ಮವೆಂಬುದು ಕುರುಟುಬಿದ್ದ ಹೀನಸ್ಥಿತಿಯಲ್ಲಿರುವ ವನಸ್ಪತಿಯಾಗಿರುತ್ತದೆ.

ಇಂಡಿಯದಲ್ಲಿ ನಾವು ಸಮಾಜದ ಬೇಡಿಗಳನ್ನು ತೆಗೆದುಹಾಕಬೇಕಾಗಿದೆ, ಯುರೋಪಿನಲ್ಲಿ ಅಧ್ಯಾತ್ಮ ಪ್ರಗತಿಯ ಕಾಲುಗಳ ಸಂಕಲೆಯನ್ನು ಕಿತ್ತೊಗೆಯಬೇಕಾಗಿದೆ. ಹಾಗಾದರೆ ಮಾನವನು ಅದ್ಭುತ ರೀತಿಯಿಂದ ಬೆಳೆದು ವಿಕಾಸವಾಗುವನು. ಅಧ್ಯಾತ್ಮಿಕ, ನೈತಿಕ ಮತ್ತು ಸಾಮಾಜಿಕ ಎಂಬ ಈ ಎಲ್ಲಾ ವಿಕಾಸಗಳಲ್ಲಿಯೂ ಅನುಸ್ಯೂತವಾಗಿರುವ ಒಂದು ತತ್ತ್ವವಿದೆಯೆಂಬುದನ್ನು ನಾವು ಕಂಡುಕೊಂಡರೆ, ಪರಮಾರ್ಥವಾದ ಧರ್ಮವೆಂಬುದು ಸಮಾಜದೊಳಕ್ಕೆ ಬರಬೇಕು, ನಮ್ಮ ದೈನಂದಿನದ ವ್ಯವಹಾರದೊಳಕ್ಕೆ ಪ್ರವೇಶಿಸಬೇಕು – ಎಂದು ಸ್ಪಷ್ಟವಾಗಿ ಕಂಡುಬರುವದು. ವೇದಾಂತ ದೃಷ್ಟಿಯಿಂದ ನೋಡಿದರೆ ವಿಜ್ಞಾನ ಶಾಸ್ತ್ರಗಳೆಲ್ಲ ಧರ್ಮದ ವಿಭೂತಿ ಮಾತ್ರಗಳೆಂದೂ ಈ ಲೋಕದಲ್ಲಿರುವ ಪ್ರತಿಯೊಂದೂ ಅಂಥ ವಿಭೂತಿಯೇ ಎಂದೂ ತಿಳಿಯಬರುತ್ತದೆ.

ಸ್ವಾತಂತ್ರ್ಯದಿಂದಲೇ ವಿಜ್ಞಾನ ಶಾಸ್ತ್ರಗಳು ಏರ್ಪಟ್ಟಿವೆ ಎಂಬುದು ಈಗ ಗೊತ್ತಾಯಿತಷ್ಟೆ. ಇವುಗಳಲ್ಲಿ ಎರಡು ಅಭಿಪ್ರಾಯ ರಾಶಿಗಳಿವೆ. ಇವುಗಳಲ್ಲಿ ಒಂದು ಚಾರ್ವಾಕವಾದವು, ತಿರಸ್ಕಾರ ಪ್ರಧಾನವಾದದ್ದು; ಮತ್ತೊಂದು ವಿಧಿಮುಖವಾಗಿದೆ, ರಚನಾತ್ಮಕವಾಗಿದೆ. ಒಂದೊಂದು ಸಮಾಜದಲ್ಲಿಯೂ ಇವೆರಡೂ ಇವೆಯೆಂಬುದು ವಿಚಿತ್ರವಾದ ಸಂಗತಿಯಾಗಿದೆ. ಸಮಾಜದಲ್ಲಿ ಏನಾದರೋ ದೋಷವಿದೆಯೆಂದು ಇಟ್ಟುಕೊಳ್ಳಿ; ಆಗ ಕೂಡಲೆ ಒಂದು ಪಂಗಡದವರು ಎದ್ದುನಿಂತು ಸೇಡುತೀರಿಸಿಕೊಳ್ಳುವವರಂತೆ ಅದನ್ನು ನಿಂದಿಸುತ್ತಾರೆ. ಈ ಭಾವನೆಯು ಕೆಲವು ವೇಳೆ ಒಂದು ಬಗೆಯ ದುರಭಿಮಾನವಾಗುವವರೆಗೂ ಕೀಳಾಗಿ ಹೋಗಬಹುದು. ಪ್ರತಿಯೊಂದು ಸಮಾಜದಲ್ಲಿಯೂ ದುರಭಿಮಾನಿಗಳು ಇದ್ದೇ ಇರುತ್ತಾರೆ; ಹೆಂಗಸರು ಸ್ವಭಾವದಿಂದಲೇ ತಾತ್ಕಾಲಿಕವಾದ ಉತ್ತೇಜನಗಳಿಗೆ ಒಳಗಾಗುವವರಾದ್ದರಿಂದ ಅವರು ಈ ಗುಲ್ಲೆಬ್ಬಿಸುವದರಲ್ಲಿ ಸೇರುವದು ಬಹಳ. ಯಾವ ದುರಭಿಮಾನಿಯು ಎದ್ದುನಿಂತು ಯಾವದನ್ನಾದರೂ ತೆಗಳಿದರೂ ಅವನನ್ನು ಹಿಂಬಾಲಿಸುವದಕ್ಕೆ ಜನರು ಸಿಕ್ಕಿಯೇ ಸಿಕ್ಕುತ್ತಾರೆ. ಮುಂದಿಕ್ಕುವದು, ಬಹು ಸುಲಭ; ಹುಚ್ಚನಾದವನು ಯಾವದನ್ನು ಬೇಕಾದರೂ ಮುರಿದಿಕ್ಕಬಹುದು, ಆದರೆ ಏನಾದರೂ ಹೊಸದಾಗಿ ಕಟ್ಟಬೇಕೆಂದರೆ ಅವನಿಗೆ ಏನೋ ಒಂದಿಷ್ಟು ಒಳ್ಳೆಯದನ್ನು ಮಾಡಬಹುದು; ಆದರೆ ಅವರಿಂದ ಕೇಡಾಗುವದೇ ಬಹಳ. ಏಕೆಂದರೆ ಸಮಾಜ ಸಂಸ್ಥೆಗಳು ಒಂದು ದಿನಕ್ಕೆ ಏರ್ಪಡುವಹಾಗಿಲ್ಲ, ಅವುಗಳನ್ನು ಮಾರ್ಪಡಿಸಬೇಕಾದರೆ ಕಾರಣವನ್ನೇ ತೆಗೆದುಹಾಕಬೇಕಾಗುವದು. ಯಾವದಾದರೂ ಒಂದು ದೋಷವಿದೆಯೆಂದಿಟ್ಟುಕೊಳ್ಳಿ, ಸುಮ್ಮನೆ ಅದನ್ನು ಬಯ್ದರೆ ಅದು ಹೋಗುವದಿಲ್ಲ, ಅದರ ಬೇರನ್ನೇ ಕಿತ್ತುಹಾಕುವ ವ್ಯಾಪಾರವನ್ನು

ಮಾಡಬೇಕಾಗುವದು. ಮೊದಲು ಕಾರಣವನ್ನು ಕಂಡುಹಿಡಿದು ಅದನ್ನು ತೆಗೆದು ಹಾಕಿದರೆ ಕಾರ್ಯವೂ ತಾನೇ ತೊಲಗುವದು. ಬರಿಯ ಗಲಾಟೆಯಿಂದ ಯಾವ ಫಲವೂ ಆಗುವದಿಲ್ಲ; ಒಂದು ವೇಳೆ ಅದರಿಂದ ಏನಾದರೂ ಅನರ್ಥವಾದರೂ ಆದೀತು, ಅಷ್ಟೆ.

ಇವರಿಗಿಂತ ಬೇರೆಯ ತೆರದವರಾಗಿ ಹೃದಯದಲ್ಲಿ ಸಹಾನುಭೂತಿಯುಳ್ಳವರೂ ಕಾರಣದವರೆಗೂ ಹೋಗಿಯೇ ದೋಷವನ್ನು ತೆಗೆಯಬೇಕೆಂದು ಬಲ್ಲವರೂ ಆದ ಜನರೂ ಇದ್ದರು. ಇವರೇ ಮಹಾ ಆಚಾರ್ಯರು. ಪ್ರಪಂಚದ ಆಚಾರ್ಯರೆಲ್ಲರೂ 'ನಾವು ನಾಶಮಾಡುವದಕ್ಕೆ ಬಂದಿಲ್ಲ, ಪರಿಪೂರ್ಣ ಗೊಳಿಸುವದಕ್ಕೆ ಬಂದಿರುತ್ತೇವೆ' ಎಂದು ಹೇಳಿಕೊಂಡಿರುತ್ತಾರೆಂಬುದನ್ನು ನೀವು ನೆನಪಿನಲ್ಲಿಡಬೇಕು. ಎಷ್ಟೋ ವೇಳೆ ಜನರು ಇದರರ್ಥವನ್ನು ತಿಳಿಯದೆ ಹೋಗಿರುತ್ತಾರೆ. ಅವರ ಸಹನೆಯು ತತ್ಕಾಲದ ಪ್ರಾಕೃತ ಜನರ ಅಭಿಪ್ರಾಯಕ್ಕೆ ಕೊಟ್ಟ ಅಯೋಗ್ಯವಾದ ಒಪ್ಪಿಗೆಯ ಫಲ - ಎಂದು ಜನರು ಎಣಿಸಿಬಿಟ್ಟಿರುತ್ತಾರೆ. ಈ ಪ್ರವಾದಿಗಳೂ ಮಹಾ ಆಚಾರ್ಯರೂ ಸ್ವಲ್ಪಮಟ್ಟಿಗೆ ಹೇಡಿಗಳಾಗಿರಬೇಕೆಂದೂ ತಮಗೆ ಸರಿಯೆಂದು ತೋರಿದ್ದನ್ನು ಧೈರ್ಯದಿಂದ ಹೇಳಲಾರದೆಯೂ ಮಾಡಲಾರದೆಯೂ ಹೋದರೆಂದೂ ಈಗಲೂ ಜನರು ಆಡಿಕೊಳ್ಳುವದು ಕೇಳಿಬರುತ್ತದೆ; ಆದರೆ ಅದು ನಿಜವಲ್ಲ. ಈ ಮಹಾಋಷಿಗಳ ಹೃದಯದಲ್ಲಿದ್ದ ಪ್ರೇಮದ ಪ್ರಭಾವವು ದುರಭಿಮಾನಿಗಳಿಗೆ ಒಂದಿಷ್ಟೂ ತಿಳಿಯಲಾರದು; ಆ ಮಹಾತ್ಮರಿಗೆ ಈ ಲೋಕದ ಜನರೆಲ್ಲ ತಮ್ಮ ಮಕ್ಕಳೆಂಬ ಭಾವನೆಯಿತ್ತು. ಅವರೇ ನಿಜವಾದ ತಂದೆಗಳು, ನಿಜವಾದ ದೇವತೆಗಳಾಗಿದ್ದರು; ಅವರಿಗೆ ಪ್ರತಿಯೊಬ್ಬರಲ್ಲಿಯೂ ಅಪರಿಮಿತವಾದ ಸಹಾನುಭೂತಿಯಿತ್ತು, ಸಹನೆಯಿತ್ತು; ಅವರು ಸಹಿಸಿಕೊಳ್ಳುವದಕ್ಕೂ ಕ್ಷಮಿಸುವದಕ್ಕೂ ಸಿದ್ಧರಾಗಿದ್ದರು. ಮಾನವ ಸಮಾಜವು ಹೇಗೆ ಬೆಳೆಯಬೇಕೆಂಬುದು ಅವರಿಗೆ ತಿಳಿದಿತ್ತು; ಆದ್ದರಿಂದ ತಾಳ್ಮೆಯಿಂದ ಮೆಲ್ಲಗೆ ಒಂದೇ ಸಮನೆ ತಮ್ಮ ಪರಿಹಾರೋಪಾಯಗಳನ್ನು ಪ್ರಯೋಗಿಸುತ್ತಾ ಬಂದರು; ಆ ಉಪಾಯವು ಜನರನ್ನು ಬಯ್ಯುವದಲ್ಲ, ಹೆದರಿಸುವದಲ್ಲ, ಅವರನ್ನು ಹೆಜ್ಜೆಹೆಜ್ಜೆಯಾಗಿ ಮೆಲ್ಲಗೆ ಕರುಣೆಯಿಂದ ನಡೆಸುವದೇ ಆಗಿತ್ತು. ಉಪನಿಷತ್ತುಗಳನ್ನು ರಚಿಸಿದವರು ಇಂಥವರು. ಹಿಂದಿನ ಈಶ್ವರಭಾವನೆಗಳನ್ನು ತಮ್ಮ ಕಾಲದ ನೀತಿ ಭಾವನೆಗಳಿಗೆ ಹೊಂದಿಸುವದಕ್ಕೆ ಆಗುವವಾಗಿಲ್ಲವೆಂಬುದು ಅವರಿಗೆ ಚೆನ್ನಾಗಿ ತಿಳಿದಿತ್ತು. ನಾಸ್ತಿಕರು ಹೇಳುತ್ತಿರುವ ವಾದಗಳಲ್ಲಿ ಎಷ್ಟೋ ನಿಜದ ಅಂಶವೂ ಇದೆಯೆಂಬುದು- ಎಷ್ಟೋ ಏಕೆ, ನಿಜದ ಚೊಕ್ಕ ಚಿನ್ನದ ದೊಡ್ಡದೊಡ್ಡ ಗಟ್ಟಿಗಳೇ ಇರುವವೆಂಬುದು - ಅವರಿಗೆ

ಚೆನ್ನಾಗಿ ತಿಳಿದಿತ್ತು; ಆದರೆ ಮಣಿಗಳನ್ನೆಲ್ಲ ಕೂಡಿಸಿರುವ ದಾರವನ್ನು ಯಾರು ಕತ್ತರಿಸಬೇಕೆನ್ನುವರೋ, ಯಾರು ಅಂತರಿಕ್ಷದಲ್ಲಿ ಒಂದು ಹೊಸ ಸಮಾಜವನ್ನು ಕಟ್ಟಬೇಕೆನ್ನುವರೋ, ಅವರ ಪ್ರಯತ್ನವು ಸಂಪೂರ್ಣವಾಗಿ ವಿಫಲವಾಗುವದೆಂಬುದೂ ಅವರಿಗೆ ಚೆನ್ನಾಗಿ ತಿಳಿದಿತ್ತು.

ನಾವು ಸಂಪೂರ್ಣ ಹೊಸದಾಗಿ ಕಟ್ಟುವದೆಂಬುದು ಎಂದಿಗೂ ಆಗದ ಮಾತು; ನಾವು ಸುಮ್ಮನೆ ಸ್ಥಳಾಂತರಮಾಡುತ್ತಿರುತ್ತೇವೆ, ಅಷ್ಟೆ. ಬೀಜವು ತಾಳ್ಮೆಯಿಂದ ಮೆಲ್ಲಗೆ ಮರವಾಗುತ್ತದೆ, ನಮ್ಮ ಶಕ್ತಿಯೆಲ್ಲ ನಿಜದ ಕಡೆಗೆ ವಿನಿಯೋಗವಾಗಬೇಕು, ಇರುವ ನಿಜವನ್ನು ಪೂರ್ಣಗೊಳಿಸಬೇಕು, ಹೊಸ ತತ್ತ್ವಗಳನ್ನು ಏರ್ಪಡಿಸುವದಕ್ಕೆ ಹೋಗಬಾರದು. ಆದ್ದರಿಂದ ಈ ಪುರಾತನ ಋಷಿಗಳು ಈ ಹಳೆಯ ಈಶ್ವರಭಾವನೆಗಳನ್ನು ಈಗಿನ ಕಾಲಕ್ಕೆ ಅಯೋಗ್ಯ ವಾಗಿರುವದೆಂದು ದೂಷಿಸಲಿಲ್ಲ, ಆ ಪುರಾತನ ಋಷಿಗಳು ಅವುಗಳಲ್ಲಿರುವ ಪರಮಾರ್ಥವನ್ನು ಕಂಡುಹಿಡಿಯುವದಕ್ಕೆ ಮೊದಲುಮಾಡಿದರು. ಇದರ ಫಲಿತಾಂಶವಾಗಿ ವೇದಾಂತಶಾಸ್ತ್ರವು ಏರ್ಪಟ್ಟಿತು; ಪ್ರಾಚೀನ ದೇವತೆಗಳ ಆಧಾರದಿಂದಲೂ ಜಗದೀಶ್ವರನಾದ ಏಕೇಶ್ವರನ ಭಾವನೆಯ ಆಧಾರದಿಂದಲೂ ಅವರು ಇನ್ನೂ ಹೆಚ್ಚು ಹೆಚ್ಚಿನ ಭಾವನೆಗಳನ್ನು ಕಂಡುಕೊಂಡು **ನಿರ್ಗುಣಪರಬ್ರಹ್ಮ**ನೆಂಬ ಭಾವನೆಯನ್ನು ಕಂಡುಕೊಂಡರು; ಇಡಿಯ ವಿಶ್ವದಲ್ಲಿಯೇ ಐಕ್ಯವನ್ನು ಕಂಡುಕೊಂಡನು.

ಯಾವನಿಗೆ ಈ ನಾನಾರೂಪವಾದ ಪ್ರಪಂಚದಲ್ಲಿ ಸರ್ವಾನುಸ್ಯೂತವಾದ ಆ ಏಕತತ್ತ್ವವು ಕಾಣಿಸುವದೋ, ಯಾವನು ಈ ಮರ್ತ್ಯ ಪ್ರಪಂಚದಲ್ಲಿ ಆ ಏಕಮಾತ್ರನಾದ ಅನಂತಪ್ರಾಣವನ್ನು ಕಂಡುಕೊಳ್ಳುವನೋ, ಈ ಅಚೇತನ ಮೋಹಾತ್ಮಕ ಪ್ರಪಂಚದಲ್ಲಿ ಯಾವನು ಆ ಏಕಮಾತ್ರ ಪ್ರಕಾಶವನ್ನೂ ಚೈತನ್ಯವನ್ನೂ ಕಂಡುಕೊಳ್ಳವನೋ, ಆತನಿಗೇ ಶಾಶ್ವತ ಶಾಂತಿಯು ದೊರಕುವದು, ಮಿಕ್ಕವರಿಗೆ ದೊರಕದು, ಮಿಕ್ಕವರಿಗೆ ದೊರಕದು.

———————

# ೫. ಮಾಯೆಯೂ ಮುಕ್ತಿಯೂ

"ಮಹಿಮೆಯ ಮೇಘಮಾಲೆಯಾಗಿ ನಾವು ಬರುತ್ತೇವೆ" ಎಂಬುದೊಂದು ಕವಿವಚನ. ಆದರೆ ನಾವೆಲ್ಲರೂ ಮಹಿಮೆಯ ಮೇಘಮಾಲೆಯಾಗಿಯೇ ಬರುವದಿಲ್ಲ; ನಮ್ಮಲ್ಲಿ ಕೆಲವರು ಕವಿದಿರುವ ಕಪ್ಪುಕಾವಳವಾಗಿ ಬಂದಿರುತ್ತೇವೆ; ಆ ವಿಷಯದಲ್ಲಿ ಸಂಶವೇನೂ ಇಲ್ಲ. ಆದರೂ ನಾವೆಲ್ಲರೂ ಈ ಲೋಕದಲ್ಲಿ ರಣರಂಗಕ್ಕೆ ಬಂದವರಂತೆ ಕಾದಾಡುವದಕ್ಕೇ ಬಂದಿರುತ್ತೇವೆ. ಇಲ್ಲಿಗೆ ನಾವು ಅಳುತ್ತಾ ಬರುತ್ತೇವೆ, ಕೈಯಲ್ಲಾದ ಮಟ್ಟಿಗೆ ನುಗ್ಗಿ ಹೊಡೆದಾಡಿಕೊಂಡು ಮುಂದುವರಿಯುತ್ತೇವೆ; ಈ ಅನಂತವಾದ ಸಂಸಾರ ಸಾಗರದಲ್ಲಿ ನಮ್ಮದೇ ಒಂದು ದಾರಿಯನ್ನು ಮಾಡಿಕೊಂಡು ಮುಂದಕ್ಕೆ ಹೋಗುತ್ತೇವೆ. ಹಿಂದಕ್ಕೆ ಎಷ್ಟೋ ಕಾಲ, ಆಚೆಗೆ ಅಪರಿಮಿತವಾದ ವಿಸ್ತಾರ ಕ್ಷೇತ್ರ – ಹೀಗಿಟ್ಟುಕೊಂಡು ಮುಂದಕ್ಕೆ ತೆರಳುತ್ತಿರುತ್ತೇವೆ. ಹೀಗೆಯೇ ಮುಂದುಮುಂದಕ್ಕೆ ಹೋಗುತ್ತಿರುವಲ್ಲಿ ಸಾವು ಬಂದು ನಮ್ಮನ್ನು ರಣರಂಗದಿಂದ ಆಚೆಗೆ ಒಯ್ದು ಬಿಡುತ್ತದೆ. ಆಗ ಗೆದ್ದು ಹೋಗುತ್ತೇವೋ, ಸೋತು ಹೋಗುತ್ತೇವೋ ನಾವರಿಯೆವು, ಇದೇ ಮಾಯೆ.

ಮಕ್ಕಳ ಹೃದಯದಲ್ಲಿ ಪ್ರತ್ಯಾಶೆಯೇ ಬಲವಾಗಿರುತ್ತದೆ. ಆಗ ತಾನೆ ಕಣ್ಣು ತೆರೆದ ಮಗುವಿನ ಕಣ್ಣಿಗೆ ಇಡಿಯ ಜಗತ್ತೇ ಸ್ವರ್ಣಮಯವಾಗಿ ತೋರುವದು; ತನ್ನ ಸಂಕಲ್ಪವು ಸ್ವತಂತ್ರವಾಗಿರುವದೆಂದು ಅದಕ್ಕೆ ತೋರುತ್ತಿರುವದು. ಮುಂದು ಮುಂದಕ್ಕೆ ಹೋದಂತೆ ಒಂದೊಂದು ಹೆಜ್ಜೆಗೂ ಪ್ರಕೃತಿಯು ವಜ್ರದ ಗೋಡೆಯಂತೆ ಅಡ್ಡನಿಲ್ಲುವದು, ಮುಂದಕ್ಕೆ ಅಡಿಯಿಡದಂತೆ ತಡೆಗಟ್ಟುತ್ತಿರುವದು. ಅವನು ಹೇಗೋ ಅದನ್ನು ಒಡೆದುಕೊಂಡು ಮುಂದಕ್ಕೆ ಹೋಗಬೇಕೆಂದು ಅದಕ್ಕೆ ಮತ್ತೆ ಮತ್ತೆ ಪ್ರತಿಘಾತವನ್ನು ಕೊಡಬಹುದು. ಆದರೆ ಎಷ್ಟು ಮುಂದಕ್ಕೆ ಹೋದನೆಂದರೆ ಧ್ಯೇಯವು ಅಷ್ಟು ಹಿಂದಕ್ಕೆ ಸರಿಯುವದು; ಕೊನೆಗೆ ಮರಣವು ಬರುವದು, ಒಂದು ವೇಳೆ ಆಗ ವಿಶ್ರಾಂತಿಯಾಗಬಹುದು. ಇದೇ ಮಾಯೆ.

ಒಬ್ಬ ವಿಜ್ಞಾನಶಾಸ್ತ್ರ ರಸಿಕನು ಉದಯಿಸುತ್ತಾನೆ. ಅವನಿಗೆ ಜ್ಞಾನದ ತೃಷ್ಣೆಯು ಬಲವಾಗಿರುತ್ತದೆ. ಅವನು ಎಂಥ ಸ್ವಾರ್ಥ ತ್ಯಾಗವನ್ನಾದರೂ ಮಾಡುವದಕ್ಕೆ ಸಿದ್ಧವಾಗಿರುತ್ತಾನೆ, ಅವನಿಗೆ ಅತ್ಯಂತ ಪ್ರತ್ಯಾಶಾರಹಿತಾದ ಪ್ರಯತ್ನವೆಂಬುದೇ

ಇರುವದಿಲ್ಲ. ಅವನು ಪ್ರಕೃತಿಯ ರಹಸ್ಯಗಳನ್ನು ಒಂದೊಂದಾಗಿ ಶೋಧನ ಮಾಡುತ್ತಾ ಮುಂದುಮುಂದಕ್ಕೆ ಹೋಗುತ್ತಾನೆ. ಅದರ ತೀರ ಅಂತರಂಗದ ರಹಸ್ಯಗಳನ್ನು ಕೂಡ ಭೇದಿಸುವದಕ್ಕೆ ಹೊರಡುತ್ತಾನೆ. ಏಕೆ? ಇಷ್ಟೆಲ್ಲ ಏತಕ್ಕೆ? ನಾವು ಆತನನ್ನು ಕೊಂಡಾಡಬೇಕಾದದ್ದೇಕೆ? ಆತನಿಗೆ ಕೀರ್ತಿಯೇಕೆ ಬರಬೇಕು? ಎಂಥ ಮಾನವನೇ ಆಗಲಿ ಮಾಡಬಹುದಾದ್ದಕ್ಕಿಂತಲೂ ಎಷ್ಟೋ ಮಿಗಿಲಾಗಿ ಪ್ರಕೃತಿಯು ಮಾಡುವದಿಲ್ಲವೆ? ಪ್ರಕೃತಿಯೆಂಬುದು ಜಡ, ಅಚೇತನ. ಈ ಜಡವನ್ನು, ಈ ಅಚೇತನವನ್ನು, ಅನುಕರಣೆಮಾಡಿದರೆ ಅದರಲ್ಲಿ ಮಹತ್ವವಿರಬೇಕಾದದ್ದೇನು? ಪ್ರಕೃತಿ ಎಷ್ಟು ದೊಡ್ಡ ಸಿಡಿಲನ್ನಾದರೂ ಎಷ್ಟು ದೂರಕ್ಕಾದರೂ ಎಸೆಯಬಲ್ಲದು. ಒಬ್ಬ ಮನುಷ್ಯನು ಇದರಲ್ಲಿ ಒಂದು ಅಲ್ಪಾಂಶವನ್ನು ಎಸೆದರೂ ಸಾಕು, ನಾವು ಅವನನ್ನು ಹೊಗಳಿ ಕೊಂಡಾಡಿ ಅಟ್ಟಕ್ಕೇರಿಸುವೆವು. ಅದೇಕೆ? ಪ್ರಕೃತಿಯನ್ನು ಅನುಕರಣಮಾಡಿದ್ದಕ್ಕಾಗಿ, ಮೃತ್ಯುವನ್ನು ಅನುಕರಣಮಾಡಿದ್ದಕ್ಕಾಗಿ, ಜಡವನ್ನು ಅನುಕರಣಮಾಡಿದ್ದಕ್ಕಾಗಿ, ಅವನನ್ನೇಕೆ ಹೊಗಳಬೇಕು? ಆಕರ್ಷಣ ಶಕ್ತಿಯು ಪ್ರಪಂಚದಲ್ಲಿರುವ ಅತ್ಯಂತ ದೊಡ್ಡ ವಸ್ತುರಾಶಿಯನ್ನಾದರೂ ಚೂರುಚೂರುಮಾಡಬಲ್ಲದು; ಆದರೂ ಅದು ಅಚೇತನವೇ. ಇಂಥ ಅಚೇತನವನ್ನು ಅನುಕರಣಮಾಡುವದರಲ್ಲಿ ಮಹತ್ವವೇನು? ಹೀಗಿದ್ದರೂ ನಾವು ಇದನ್ನು ಮಾಡುವದಕ್ಕೇ ಒದ್ದಾಡುತ್ತಿರುವೆವು. ಇದೇ ಮಾಯೆ.

ಇಂದ್ರಿಯಗಳು ಮಾನವಜೀವನನ್ನು ಹೊರಕ್ಕೆ ಎಳೆಯುತ್ತಿರುವವು. ಮಾನವನು ಎಲ್ಲಿ ಭೋಗವೂ ಸುಖವೂ ಸಿಕ್ಕಲೇ ಆರದ ಅಲ್ಲಿಯೇ ಅದನ್ನು ಹುಡುಕಿಕೊಂಡು ಹೋಗುತ್ತಿದ್ದಾನೆ. ಅಗಣಿತಯುಗಗಳಿಂದಲೂ ಇದು ನಿರರ್ಥಕವೆಂದೂ ವ್ಯರ್ಥಪ್ರಯಾಸವೆಂದೂ ನಮಗೆಲ್ಲರಿಗೂ ಉಪದೇಶಮಾಡುತ್ತಲೇ ಬಂದಿರುತ್ತಾರೆ, ಇಲ್ಲಿ ಸುಖವಿಲ್ಲವೆಂಬುದನ್ನು ತಿಳಿಸುತ್ತಲೇ ಇರುತ್ತಾರೆ. ಆದರೆ ಆ ವಿಷಯವನ್ನು ನಾವು ಅರಿತುಕೊಳ್ಳಲಾರದೆ ಇದೇವೆ; ನಾವೇ ಅನುಭವದಿಂದ ಕಂಡುಕೊಂಡ ಹೊರತು ಇವನ್ನು ಅರಿತುಕೊಳ್ಳುವದೆಂಬುದು ಅಸಾಧ್ಯವಾಗಿರುತ್ತದೆ. ಸ್ವಲ್ಪ ನೋಡೋಣವೆಂದು ಹೋದರೆ ಒಂದು ಪೆಟ್ಟು ಬೀಳುತ್ತದೆ. ಆಗ ಅರಿತುಕೊಳ್ಳುವೆವೇನು? ಆಗಲೂ ಇಲ್ಲ. ಉರಿಯುವ ದೀಪಕ್ಕೆ ಎರಗುವ ಪತಂಗದ ಹುಳುಗಳಂತೆ ನಾವು ಮತ್ತೆಮತ್ತೆ ಇಂದ್ರಿಯಭೋಗಗಳಿಗೇ ಎರಗುತ್ತಿರುವೆವು, ಅಲ್ಲಿ ನಮ್ಮ ಸಂತೃಪ್ತಿಯಾಗುವದೆಂದು ಭಾವಿಸಿರುವೆವು. ಮತ್ತೆ ಮತ್ತೆ ದಣಿವು ಆರಿಸಿಕೊಂಡು ಜೋರಿನಿಂದ ಬಂದು ಬಂದು ಬೀಳುತ್ತೇವೆ, ಕೊನೆಗೆ ಕೈಕಾಲು ಮುರಿದು ಮೋಸಹೋಗಿ, ಸಾಯುತ್ತೇವೆ. ಇದೇ ಮಾಯೆ.

ನಮ್ಮ ಬುದ್ಧಿಶಕ್ತಿಯು ವಿಚಾರವು ಹೀಗೆಯೇ. ವಿಶ್ವದ ರಹಸ್ಯಗಳನ್ನು ಭೇದಿಸಬೇಕೆಂಬ ತವಕವಿರುವದರಿಂದ ನಮಗೆ ವಿಚಾರ ಮಾಡದೆ ಸುಮ್ಮನಿರುವದೆಂಬುದು ಆಗದ ಮಾತಾಗಿದೆ. ನಮಗೆ ತಿಳಿದೇ ತೀರುವದೆಂಬ ಭಾವನೆಯು ನಮಗೆ ಬಂದಿರುತ್ತದೆ, ನಮಗೆ ಯಾವದೊಂದು ಜ್ಞಾನವೂ ಉಂಟಾಗಲಾರದೆಂದರೆ ನಮಗೆ ಅದರಲ್ಲಿ ನಂಬಿಕೆಯೇ ಆಗುವಹಾಗಿಲ್ಲ. ಕೆಲವು ಹೆಜ್ಜೆಗಳನ್ನು ಮುಂದಿಟ್ಟೆವೋ ಇಲ್ಲವೋ, ಅನಾದ್ಯನಂತವಾದ ಕಾಲದ ದುರ್ಗವೊಂದು ಮುಂದೆ ನಿಂತಿರುತ್ತದೆ; ಅದನ್ನು ದಾಟುವದಕ್ಕೆ ಆಗುವಂತೆಯೇ ಇರುವದಿಲ್ಲ. ಇದೂ ಅಲ್ಲದೆ ಎಲ್ಲಕ್ಕೂ ಕಾರ್ಯಕಾರಣಗಳೆಂಬ ಗೋಡೆಗಳು ಎಲ್ಲೆಕಟ್ಟಾಗಿರುತ್ತವೆ; ಅವುಗಳನ್ನು ದಾಟುವದಕ್ಕೂ ಆಗುವಂತಿರುವದಿಲ್ಲ. ಆದರೂ ನಾವು ಹೆಣಗಾಡುತ್ತೇವೆ, ಯಾವಾಗಲೂ ಹೀಗೆ ಹೆಣಗಾಡುತ್ತಲೇ ಇರಬೇಕಾಗಿದೆ. ಇದೇ ಮಾಯೆ.

ಒಂದೊಂದು ಸಲ ಉಸಿರುಬಿಡುವಾಗಲೂ, ಒಂದೊಂದು ಸಲ ನಮ್ಮ ಹೃದಯವು ಬಡಿದುಕೊಳ್ಳುವಾಗಲೂ, ಒಂದೊಂದು ಸಲ ಕೈಕಾಲು ಅಲುಗಾಡಿಸುವಾಗಲೂ ನಮಗೆ ನಾವು ಸ್ವತಂತ್ರರೆಂದೇ ಭಾವನೆ ಯುಂಟಾಗುತ್ತಿರುವದು; ಹೀಗಿದ್ದರೂ ನಾವು ಸ್ವತಂತ್ರರಲ್ಲವೆಂಬುದು ನಮಗೆ ಮನವರಿಕೆಯಾಗುತ್ತಲೇ ಇರುತ್ತದೆ. ಸಂಕಲೆಹಾಕಿದ ದಾಸರಾಗಿ, ಶರೀರದಲ್ಲಿಯೂ ಮನಸ್ಸಿನಲ್ಲಿಯೂ ನಮ್ಮ ಎಲ್ಲಾ ಬಗೆಯ ವಿಚಾರಗಳಲ್ಲಿಯೂ ಎಲ್ಲಾ ಬಗೆಯ ಭಾವನೆಗಳಲ್ಲಿಯೂ ಪ್ರಕೃತಿಯ ಗರ್ಭದಾಸರಾಗಿರುವೆವೆಂಬುದು ಮನವರಿಕೆಯಾಗುತ್ತಲೇ ಇರುತ್ತದೆ. ಇದೇ ಮಾಯೆ.

ತನ್ನ ಮಗುವು ಹುಟ್ಟುತ್ತಲೇ ಸರ್ವಜ್ಞನಾಗಿರುವದೆಂದು ಎಣಿಸಿಕೊಳ್ಳದ ತಾಯಿಯೇ ಇಲ್ಲ; ಅದು ಇದುವರೆಗೆ ಹುಟ್ಟಿದ ಮಕ್ಕಳಲ್ಲೆಲ್ಲ ಅತ್ಯಂತ ಚುರುಕಾದ ಬುದ್ಧಿಯ ಮಗುವೆಂದು ಅವಳು ಭಾವಿಸಿರುತ್ತಾಳೆ. ತನ್ನ ಮಗುವಿನ ಮೇಲೆ ಅವಳಿಗೆ ಅತ್ಯಂತ ವ್ಯಾಮೋಹವಿರುತ್ತದೆ, ಅವಳ ಆತ್ಮವೆಲ್ಲ ಮಗುವಿನಲ್ಲಿಯೇ ಇರುತ್ತದೆ. ಮಗುವು ದೊಡ್ಡದಾಗಿ ಕುಡುಕನಾಗಿಯೋ ಕ್ರೂರಿಯಾಗಿಯೋ ಆಗಬಹುದು, ತಾಯಿಯ ವಿಷಯದಲ್ಲಿ ಕ್ರೌರ್ಯದಿಂದಲೂ ನಡೆದುಕೊಳ್ಳಬಹುದು, ಅವನು ಎಷ್ಟೆಷ್ಟು ಅನಾದರಮಾಡುವನೋ ಅವಳ ಪ್ರೇಮವೂ ಅಷ್ಟಷ್ಟು ಹೆಚ್ಚುತ್ತದೆ. ಇದು ತಾಯಿಯ ಅಸ್ವಾರ್ಥಪ್ರೇಮವೆಂದು ಜಗತ್ತಿನವರು ಕೊಂಡಾಡುತ್ತಾರೆ, ಆ ತಾಯಿಯು ಗರ್ಭದಾಸಳಾಗಿರುತ್ತಾಳೆಂಬುದನ್ನೂ ಹಾಗಲ್ಲದೆ ಬೇರೊಂದು ಬಗೆಯಲ್ಲಿ ನಡೆಯಲು ಅವಳಿಗೆ ಆಗುವ ಹಾಗೆಯೇ ಇಲ್ಲವೆಂಬುದನ್ನೂ ಅವರು

ಕನಸಿನಲ್ಲಿಯೂ ಅರಿಯರು. ಈ ಹೊರೆಯನ್ನು ಆಚೆಗೆ ಎಸೆದುಬಿಟ್ಟರೆ ಆದೀತೆಂದು ಅವಳಿಗೆ ಸಾವಿರ ಸಲ ಅನ್ನಿಸಿರುತ್ತದೆ, ಆದ್ದರಿಂದ ಇದರ ಮೇಲೆ ಒಂದಿಷ್ಟು ಹೂಗಳನ್ನು ಹಾಕಿ ಮುಚ್ಚಿ, ಇದೆಲ್ಲಕ್ಕೂ ಅದ್ಭುತ ಪ್ರೇಮ ಎಂಬ ಹೆಸರನ್ನಿಡುತ್ತಾಳೆ. ಇದೇ ಮಾಯೆ

ಈ ಲೋಕದಲ್ಲಿ ನಾವೆಲ್ಲರೂ ಹೀಗೆಯೇ ಇರುತ್ತೇವೆ. ಒಂದು ಕಥೆಯುಂಟು. ನಾರದರು ಒಮ್ಮೆ ಕೃಷ್ಣನನ್ನು ಕುರಿತು 'ಭಗವಂತನೇ, ನನಗೆ ಮಾಯೆಯನ್ನು ತೋರಿಸು' ಎಂದು ಕೇಳಿಕೊಂಡರಂತೆ. ಕೆಲವು ದಿನಗಳಾದ ಮೇಲೆ ಕೃಷ್ಣನು ನಾರದರನ್ನು ಕರೆದುಕೊಂಡು ಒಂದಾನೊಂದು ಮರುಭೂಮಿಯ ಕಡೆಗೆ ಹೊರಟನು; ಎಷ್ಟೋ ಮೈಲಿಗಳ ದೂರ ನಡೆದಮೇಲೆ, "ನಾರದರೆ, ನನಗೆ ತುಂಬ ನೀರಡಿಕೆಯಾಗಿದೆ; ಸ್ವಲ್ಪ ನೀರು ತಂದುಕೊಡುತ್ತೀರ?" ಎಂದು ಕೇಳಿದನು. ನಾರದರು, 'ಸ್ವಾಮಿಯೇ, ಈಗಲೇ ಹೋಗಿ ನೀರು ತರುವೆನು' ಎಂದು ಹೊರಟರು. ಸ್ವಲ್ಪದೂರ ಹೋಗುವದರಲ್ಲಿ ಅಲ್ಲಿ ಒಂದು ಹಳ್ಳಿ; ನೀರಿಗಾಗಿ ಆವೂರೊಳಕ್ಕೆ ಹೋಗಿ ಅವರು ಒಂದು ಮನೆಯ ಕದವನ್ನು ತಟ್ಟಿದರು. ಕೂಡಲೇ ಒಬ್ಬ ದಿವ್ಯ ಸುಂದರಿಯಾದ ಹರೆಯದ ಹುಡುಗಿಯು ಕದವನ್ನು ತೆರೆದಳು. ಅವಳನ್ನು ಕಂಡರೋ ಇಲ್ಲವೋ, ನಾರದರಿಗೆ ಸ್ವಾಮಿಯು ನೀರಿಗಾಗಿ ಕಾದುಕೊಂಡಿರುವನೆಂಬುದೂ ನೀರಿಲ್ಲದೆ ಸಂಕಟಪಡುತ್ತಾ ಇರುವನೆಂಬುದೂ ಮರೆತೇಹೋಯಿತು. ಎಲ್ಲವನ್ನೂ ಮರೆತು ಆ ಹುಡುಗಿಯೊಡನೆ ಸಂಭಾಷಣೆಗೆ ಪ್ರಾರಂಭಿಸಿದರು. ಆ ದಿನವೆಲ್ಲ ಅವರು ಭಗವಂತನ ಬಳಿಗೆ ಬರಲೇ ಇಲ್ಲ. ಮಾರನೆಯ ದಿನ ಮತ್ತೆ ಅದೇ ಮನೆಗೆ ಬಂದು ಹುಡುಗಿಯೊಡನೆ ಮಾತಾಡುವದಕ್ಕೆ ಮೊದಲು ಮಾಡಿದರು. ಆ ಮಾತು ಬರುತ್ತಬರುತ್ತಾ ಪ್ರೇಮವಾಯಿತು; ಅವಳ ತಂದೆಯನ್ನು ನಿನ್ನ ಮಗಳನ್ನು ನನಗೆ ಮದುವೆಮಾಡಿಕೊಡೆಂದು ಕೇಳಿಕೊಂಡರು. ಮದುವೆಯಾಯಿತು, ಸಂಸಾರಮಾಡಿಕೊಂಡಿದ್ದರು, ಮಕ್ಕಳೂ ಆದರು. ಹೀಗೆ ಹನ್ನರೆಡು ವರ್ಷಗಳು ಕಳೆದುಹೋದವು. ಮಾವನು ಸತ್ತುಹೋಗಲು ಅವನ ಆಸ್ತಿಯು ಇವರಿಗೇ ಬಂತು. ಹೆಂಡಿರು, ಮಕ್ಕಳು, ಹೊಲಮನೆ, ದನಕರು – ಮುಂತಾದವುಗಳಿಂದೊಡಗೂಡಿ ಈಗ ನಾನು ಸುಖವಾಗಿ ಸಂಸಾರ ಮಾಡಿಕೊಂಡಿರುವೆನೆಂದು ನಾರದರು ಭಾವಿಸಿಕೊಳ್ಳುತ್ತಿದ್ದರು. ಇಷ್ಟರಲ್ಲಿ ನದಿಯ ಪ್ರವಾಹವು ಮೇಲಕ್ಕೇರಿತು. ಒಂದು ದಿನ ರಾತ್ರಿ ಹೊಳೆ ಬಂದು ದಡದ ಮೇಲಕ್ಕೆ ಉಕ್ಕೇರಿ ಊರಿಗೆ ಊರೇ ಪ್ರವಾಹಕ್ಕೆ ಸಿಕ್ಕಿಬಿತ್ತು. ಎಷ್ಟೋ ಮನೆಗಳು ಉರುಳಿಕೊಂಡವು, ಮನುಷ್ಯರೂ ದನಕರುಗಳೂ ಕೊಚ್ಚಿಕೊಂಡು ಹೋಗಿ ಪ್ರಾಣವನ್ನು ಬಿಟ್ಟವು, ಪ್ರವಾಹದಲ್ಲಿ ಎಲ್ಲವೂ ತೇಲಾಡುವದಕ್ಕೆ ಪ್ರಾರಂಭವಾಯಿತು.

ಈಗ ನಾರದರು ತಪ್ಪಿಸಿಕೊಳ್ಳಬೇಕಾಗಿ ಬಂತು. ಒಂದು ಕೈಯಲ್ಲಿ ಹೆಂಡತಿಯನ್ನೂ ಇನ್ನೊಂದರಲ್ಲಿ ಎರಡು ಮಕ್ಕಳನ್ನೂ ಹಿಡಿದುಕೊಂಡರು; ಇನ್ನೊಂದು ಮಗುವನ್ನು ಹೆಗಲಮೇಲೆ ಕೂರಿಸಿಕೊಂಡರು; ಹೀಗೆ ಈ ಅದ್ಭುತ ಪ್ರವಾಹವನ್ನು ದಾಟಿಹೋಗುವದಕ್ಕೆ ಪ್ರಯತ್ನವಾಡುತ್ತಿದ್ದರು. ಒಂದೆರಡು ಹೆಜ್ಜೆಗಳು ಮುಂದೆ ಹೋಗಲು ಸೆಳವು ಬಲು ಜೋರಾಗಿ ಕಂಡುಬಂತು; ಹೆಗಲ ಮೇಲಿದ್ದ ಮಗು ಕೆಳಕ್ಕೆ ಬಿದ್ದು ಕೊಚ್ಚಿಕೊಂಡು ಹೋಯಿತು. ನಾರದರು "ಅಯ್ಯೋ!" ಎಂದು ಆ ಮಗುವನ್ನು ಹಿಡಿದುಕೊಳ್ಳುವದಕ್ಕೆ ಹೋಗುವಷ್ಟರಲ್ಲಿ ಇನ್ನೊಂದು ಮಗುವನ್ನು ಕೈಬಿಟ್ಟರು, ಅದೂ ಹೋಯಿತು. ಕೊನೆಗೆ ತನ್ನ ಬಲವನ್ನೆಲ್ಲ ವಿನಿಯೋಗಿಸಿಕೊಂಡು ಅವುಚಿಕೊಂಡಿದ್ದ ಹೆಂಡತಿಯು ಕೂಡ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿಬಿಟ್ಟಳು; ಅವರು ದಡದ ಮೇಲೆ ಬಂದು ಬಿದ್ದರು. 'ಹುಯ್ಯೋ ಮೊರೆಯೊ!' ಎಂದು ಗೋಳಿಡುತ್ತಿದ್ದರು. ಹೀಗಿರುವಲ್ಲಿ ಹಿಂದುಗಡೆಯಿಂದ ಒಂದು ಮೆಲ್ಲನಿಂಪೆದ್ದಿತು. "ವತ್ಸ, ನೀರೆಲ್ಲಿ? ಒಂದು ತಂಬಿಗೆ ನೀರು ತರುತ್ತೇನೆಂದು ಹೊರಟೆಯಲ್ಲ, ನಿನ್ನನ್ನೇ ನೋಡುತ್ತಾ ಕುಳಿತಿದ್ದೇನೆ. ನೀನು ಹೋಗಿ ಆಗಲೆ ಅರ್ಧಘಂಟೆಯಾಯಿತಲ್ಲ!" ಎಂಬ ಮಾತು ಕೇಳಿಬಂತು. ನಾರದರು 'ಅರ್ಧಘಂಟೆಯೆ!' ಎಂದರು. ಈ ಅರ್ಧಘಂಟೆಯಲ್ಲಿ ಅವರ ಮನಸ್ಸಿಗೆ ಹನ್ನೆರಡು ವರ್ಷಗಳಾಗಿ ಈ ದೃಶ್ಯಗಳೆಲ್ಲ ಕಂಡು ಬಂದಿದ್ದವು! ಇದೇ ಮಾಯೆ.

ನಾವೆಲ್ಲರೂ ಯಾವದಾದರೊಂದು ರೂಪದಲ್ಲಿ ಇದಕ್ಕೆ ಸಿಕ್ಕಿಬಿದ್ದಿರುತ್ತೇವೆ. ಇದನ್ನು ತಿಳಿದುಕೊಳ್ಳುವದು ಅತ್ಯಂತ ಕಷ್ಟ. ಅತ್ಯಂತ ದುರ್ಗಮ. ಇದನ್ನು ಪ್ರತಿಯೊಂದು ದೇಶದಲ್ಲಿಯೂ ಬೋಧಿಸಿರುತ್ತಾರೆ, ಎಲ್ಲೆಲ್ಲಿಯೂ ಉಪದೇಶ ಮಾಡಿರುತ್ತಾರೆ; ಆದರೆ ಇದನ್ನು ನಂಬುವವರು ಎಲ್ಲಿಯೋ ಕೆಲವು ಮಂದಿ ಮಾತ್ರವೇ, ಏಕೆಂದರೆ ನಮಗೇ ಈ ಅನುಭವಗಳು ಉಂಟಾಗುವವರೆಗೂ ನಮಗೆ ಅದರಲ್ಲಿ ನಂಬಿಕೆಯುಂಟಾಗುವದಿಲ್ಲ. ಇದರಿಂದ ಏನು ತಿಳಿಯುಬರುತ್ತದೆ? ಇದೇನೋ ಒಂದು ಭಯಂಕರವಾದದ್ದೆಂದು ಹೇಳಬೇಕಾಗಿದೆ. ಏಕೆಂದರೆ ಏನು ಮಾಡಿದರೂ ಇದರ ಮುಂದೆ ನಡೆಯುವ ಹಾಗಿಲ್ಲ.

ಪ್ರತಿಯೊಂದರ ಮೇಲೂ ಸೇಡುತೀರಿಸಿಕೊಳ್ಳುವ ಕಾಲನು ಬಂದನೋ ಇಲ್ಲವೋ, ಯಾವದೊಂದೂ ಉಳಿಯುವದಿಲ್ಲ. ಕಾಲನು ಮಹಾತ್ಮನನ್ನೂ ಪಾಪಿಯನ್ನೂ, ಆಳನ್ನೂ ಅರಸನನ್ನೂ, ಸುಂದರನನ್ನೂ ಕುರೂಪಿಯನ್ನೂ – ಎಲ್ಲರನ್ನೂ ನುಂಗಿಹಾಕಿ ಬಿಡುತ್ತಾನೆ; ಯಾವದೊಂದನ್ನೂ ಉಳಿಸುವದಿಲ್ಲ. ಪ್ರತಿಯೊಂದೂ ನಾಶವೆಂಬ ಆವೊಂದು ಗತಿಯನ್ನೇ ಹೊಂದುವದಕ್ಕೆಂದು

ಓಡೋಡಿ ಹೋಗುತ್ತಿರುವದು. ನಮ್ಮ ಜ್ಞಾನ, ನಮ್ಮ ಕಲೆಗಳು, ನಮ್ಮ ವಿಜ್ಞಾನ ಶಾಸ್ತ್ರಗಳು – ಪ್ರತಿಯೊಂದೂ ಅದರ ಕಡೆಗೇ ಓಡಿಹೋಗುತ್ತಿದೆ. ಈ ತರಂಗಗಳನ್ನು ಹಿಮ್ಮೆಟ್ಟಿಸುವದಕ್ಕೆ ಯಾರೊಬ್ಬರಿಂದಲೂ ಆಗುವಂತಿಲ್ಲ, ಒಂದು ಕ್ಷಣಹೊತ್ತಾದರೂ ಅದನ್ನು ಹಿಂದಕ್ಕೆ ಜಗ್ಗಿ ನಿಲ್ಲಿಸುವದಕ್ಕೆ ಯಾರೊಬ್ಬರಿಂದಲೂ ಆಗುವಂತಿಲ್ಲ. ಪ್ಲೇಗು ವ್ಯಾಪಿಸಿರುವ ನಗರದವರು ಕುಡಿಯುವದು, ಕುಣಿಯುವದು – ಮುಂತಾದ ವ್ಯರ್ಥಪ್ರಯತ್ನಗಳಿಂದ ಅದನ್ನು ಮರೆತು ಕುಂಠಿತರಾಗುವಂತೆ ನಾವೂ ಅದನ್ನು ಮರೆಯುವದಕ್ಕೆ ಪ್ರಯತ್ನಮಾಡಬಹುದು. ಹಾಗೆ ಮರೆಯುವದಕ್ಕೆ ನಾವು ಪ್ರಯತ್ನ ಮಾಡುತ್ತಲೇ ಇದೇವೆ, ಬಗೆಬಗೆಯ ಇಂದ್ರಿಯಾರ್ಥಗಳ ಭೋಗಗಳಿಂದ ಮರವೆಯನ್ನು ಮೇಲೆ ಹಾಕಿಕೊಳ್ಳುವದಕ್ಕೆ ಪ್ರಯತ್ನಮಾಡುತ್ತಲೇ ಇದೇವೆ. ಇದೇ ಮಾಯೆ.

ಇದಕ್ಕೆ ಎರಡು ಮಾರ್ಗಗಳನ್ನು ಜನರು ಸೂಚಿಸಿರುತ್ತಾರೆ. ಒಂದು ಉಪಾಯವು ಎಲ್ಲರಿಗೂ ತಿಳಿದಿರುವದು, ಅದು ಸುಪ್ರಸಿದ್ಧವಾಗಿರುತ್ತದೆ. ಅದೇನೆಂದರೆ, "ಇದೆಲ್ಲ ಖಂಡಿತವಾಗಿಯೂ ನಿಜವೇ ಆಗಿರಬಹುದು, ಆದರೆ ಅದರ ವಿಚಾರವನ್ನು ಹತ್ತಿಸಿಕೊಳ್ಳಬೇಡಿರಿ. 'ಗಾಳಿ ಬಂದಾಗ ತೂರಿಕೊಳ್ಳಿ' ಎಂಬ ಗಾದೆಯನ್ನನುಸರಿಸಿರಿ. ಇದೆಲ್ಲ ನಿಜವೆ, ಇದು ಇದ್ದ ಸಂಗತಿಯೇ ಸರಿ; ಆದರೂ ಅದನ್ನು ಲಕ್ಷ್ಯಮಾಡಬೇಡಿ. ನಿಮಗೆ ಸಿಕ್ಕಷ್ಟು ಭೋಗಗಳನ್ನು ಅನುಭವಿಸಿರಿ, ನಿಮ್ಮ ಕೈಲಾದದ್ದನ್ನು ಮಾಡಿಬಿಡಿರಿ. ಅಶುಭ ಭಾಗವನ್ನು ನೋಡಬೇಡಿರಿ, ಯಾವಾಗಲೂ ಶುಭಭಾಗವನ್ನೇ, ಆಗಬಹುದಾದದ್ದನ್ನೇ, ನೋಡಿರಿ". ಇದೊಂದು ಉಪಾಯವು. ಇದರಲ್ಲಿರುಯೂ ಒಂದಂಶ ನಿಜವಿದೆ. ಆದರೆ ಇದರಲ್ಲಿ ಅಪಾಯವೂ ಇದೆ. ಆದರೆ ಇದರಲ್ಲಿರುವ ನಿಜದ ಅಂಶವು ಯಾವದೆಂದರೆ ಇದೊಂದು ಉತ್ತಮ ಉತ್ತೇಜಕ ಶಕ್ತಿಯಾಗಿರುತ್ತದೆ. ಭರವಸೆಯಿಟ್ಟುಕೊಂಡಿರುವದೂ, ಆಗುವದನ್ನೇ ಲಕ್ಷ್ಯದಲ್ಲಿಟ್ಟಿರುವದೂ, ನಮ್ಮ ಜೀವಿತದಲ್ಲಿ ಒಳ್ಳೆಯ ಉತ್ತೇಜಕ ಶಕ್ತಿಗಳಾಗಿರುತ್ತವೆ; ಆದರೆ ಇವುಗಳಲ್ಲಿ ಸ್ವಲ್ಪ ಅಪಾಯವೂ ಇದೆ. ಅಪಾಯವೇನೆಂದರೆ ನಾವು ನಿರಾಶರಾಗಿ ಹೆಣಗಾಟವನ್ನೇ ಬಿಟ್ಟುಬಿಡಬಹುದು. "ಪ್ರಪಂಚವು ಹೇಗೆ ತೋರುವದೋ ಹಾಗೆಯೇ ಅದನ್ನು ಸ್ವೀಕರಿಸಿರಿ; ಆದಷ್ಟು ಶಾಂತರಾಗಿ ಆದಷ್ಟು ಸೌಕರ್ಯವನ್ನು ಕಲ್ಪಿಸಿಕೊಂಡು ಕೂತುಕೊಳ್ಳಿರಿ; ಈ ಕಷ್ಟಗಳೆಲ್ಲವೂ ಒದಗಿದರೂ ಯತ್ನವಿಲ್ಲವೆಂದು ಸುಮ್ಮನೆ ಇರಿ, ನಿಮಗೆ ಪೆಟ್ಟುಗಳು ಬಿದ್ದರೆ 'ಇವು ಪೆಟ್ಟುಗಳಲ್ಲ, ಹೂಗಳು' ಎನ್ನಿರಿ; ನಿಮ್ಮನ್ನು ಗುಲಾಮರಂತೆ ಘಟನೆಗಳು ಅತ್ತಿತ್ತ ಓಡಾಡಿಸಿದರೆ, 'ನಾವು ಸ್ವತಂತ್ರರಾಗಿದ್ದೇವೆ' ಎನ್ನಿರಿ; ಹಗಲೂ ಇರುಳೂ ಮತ್ತೊಬ್ಬರಿಗೂ ನಿಮ್ಮ ಆತ್ಮಕ್ಕೂ ಸುಳ್ಳುಗಳನ್ನು ಹೇಳುತ್ತಲೇ ಇರಿ, ಏಕೆಂದರೆ ಇದೊಂದೇ ಸುಖಜೀವನಕ್ಕೆ ಮಾರ್ಗವು" ಎಂದು ಯಾರು ಉಪದೇಶಿಸುತ್ತಿರುವರೋ ಅವರಿಗೆಲ್ಲ ಇದೇ

ಗತಿ. ಇದನ್ನೇ ವ್ಯಾವಹಾರಿಕ ಜ್ಞಾನವೆಂದು ಕರೆಯುವರು. ಈ ಹತ್ತೊಂಬತ್ತನೆಯ ಶತಮಾನಕ್ಕಿಂತಲೂ ಪೂರ್ವದಲ್ಲಿ ಮತ್ತೆ ಯಾವಾಗಲೂ ಇದು ಇಷ್ಟು ಪ್ರಚಾರವಾಗಿರಲಿಲ್ಲ. ಏಕೆಂದರೆ ಈಗಿನ ಕಾಲಕ್ಕಿಂತ ಹೆಚ್ಚು ಬಲವಾದ ಪೆಟ್ಟುಗಳು ಮತ್ತೆ ಯಾವಾಗಲೂ ಬಿದ್ದಿರಲಿಲ್ಲ; ಪೈಪೋಟಿಯು ಇದಕ್ಕಿಂತ ಮತ್ತೆ ಯಾವಾಗಲೂ ಹೆಚ್ಚಾಗಿರಲಿಲ್ಲ; ಜನರು ತಮ್ಮ ನೆರೆಯವರ ವಿಷಯಕ್ಕೆ ಇಷ್ಟು ಕ್ರೂರಿಗಳಾಗಿ ಯಾವಾಗಲೂ ಇರಲಿಲ್ಲ; ಆದ್ದರಿಂದಲೇ ಈ ಮನಃಸಮಾಧಾನವನ್ನು ಹೇಳುವದು ಈಗ ಅವಶ್ಯವಾಗಿರುತ್ತದೆ. ಇದನ್ನು ಈಗಿನ ಕಾಲದಲ್ಲಿ ಅತ್ಯಂತ ಪ್ರಬಲರೀತಿಯಿಂದ ಮುಂದಕ್ಕೆ ತಂದೊಡ್ಡಿರುತ್ತಾರೆ; ಆದರೆ ಅದು ನಿಲ್ಲುವದಿಲ್ಲ, ಏಕೆಂದರೆ ಅದು ಎಂದಿಗೂ ನಿಲ್ಲುವ ಮಾತಲ್ಲ. ಸತ್ತ ಪ್ರಾಣಿಯ ಕೊಳೆತ ಮಾಂಸವನ್ನು ಗುಲಾಬಿಹೂಗಳಿಂದ ಮುಚ್ಚಿಡುವದಕ್ಕೆ ಎಂದಿಗೂ ಆಗುವಹಾಗಿಲ್ಲ; ಅದು ಅಸಾಧ್ಯವಾಗಿರುತ್ತದೆ. ಅದು ಬಹುಕಾಲ ಸಾಗುವದಲ್ಲ; ಏಕೆಂದರೆ ಕೆಲವು ದಿನಗಳಲ್ಲಿಯೇ ಗುಲಾಬಿಹೂಗಳು ಬಾಡಿಹೋಗುವವು. ಮಾಂಸವು ಮೊದಲಿಗಿಂತಲೂ ಹೆಚ್ಚಾಗಿ ನಾತ ಬಡಿಯಲಾರಂಭಿಸುವದು. ನಮ್ಮ ಜೀವಿತಗಳೂ ಹೀಗೆಯೇ. ನಮ್ಮ ಕೀತುಬಾತಿರುವ ಹಳೇ ಹುಣ್ಣುಗಳ ಮೇಲೆ ಜರತಾರಿ ಬಟ್ಟೆಯನ್ನು ಮುಚ್ಚಿಡೋಣವೆಂದು ನಾವು ಪ್ರಯತ್ನಿಸಬಹುದು; ಆದರೆ ಒಂದಲ್ಲದಿದ್ದರೆ ಒಂದು ದಿನ ಈ ಜರತಾರಿ ಬಟ್ಟೆಯನ್ನು ತೆಗೆಯಬೇಕಾಗುವದು, ಅತ್ಯಂತ ಅಸಹ್ಯವಾದ ಆ ಹುಣ್ಣು ಎಲ್ಲರ ಕಣ್ಣಿಗೂ ಬಿದ್ದೇಬೀಳುತ್ತದೆ.

ಹಾಗಾದರೆ ಪ್ರತ್ಯಾಶೆಯೇ ಇಲ್ಲವೇನು? ನಾವೆಲ್ಲರೂ ಮಾಯೆಗೆ ಅಡಿಯಾಳಾಗಿರುವೆವೆಂಬದೂ ಮಾಯೆಯಲ್ಲಿಯೇ ಹುಟ್ಟಿ ಮಾಯೆಯಲ್ಲಿಯೇ ಬಾಳಿಕೊಂಡಿರುವೆವೆಂಬುದೂ ನಿಜವೇ. ಆದರೆ ಇದರಿಂದ ತಪ್ಪಿಸಿಕೊಳ್ಳುವದಕ್ಕೆ ಮಾರ್ಗವೇ ಇಲ್ಲವೆ, ತಪ್ಪಿಸಿಕೊಳ್ಳುವ ಪ್ರತ್ಯಾಶೆಯೇ ಇಲ್ಲವೇ? ನಾವೆಲ್ಲರೂ ದುಃಖಿಗಳಾಗಿರುವೆವೆಂಬುದೂ, ಈ ಲೋಕವು ನಿಜವಾಗಿ ಬಂಧನಾಗಾರವೇ ಎಂಬುದೂ, ನಮ್ಮ ಸೌಂದರ್ಯದ ಪ್ರಭಾವಶಾಲೆಯೂ ಬಂಧನಾಗಾರವೇ ಎಂಬುದೂ, ನಮ್ಮ ಮನೋಬುದ್ಧಿಗಳು ಕೂಡ ಬಂಧನಾಗಾರಗಳೇ ಎಂಬುದೂ ಎಷ್ಟೋ ಯುಗಗಳಿಂದಲೂ ಗೊತ್ತಾಗಿರುವ ವಿಷಯವು. ಏನೇ ಹೇಳಲಿ, ಇದನ್ನು ಒಂದಲ್ಲದಿದ್ದರೆ ಒಂದು ಸಮಯದಲ್ಲಿ ಮನಸ್ಸಿಗೆ ತಂದುಕೊಳ್ಳದೆ ಇರುವ ಮಾನವನೇ ಇಲ್ಲ, ಅಂಥ ಮಾನವಜೀವವೇ ಇಲ್ಲ. ಅದರಲ್ಲಿಯೂ ಮುದುಕರ ಮನಸ್ಸಿಗೆ ಇದು ಅತ್ಯಂತ ಪ್ರಬಲವಾಗಿ ತಟ್ಟುತ್ತದೆ; ಏಕೆಂದರೆ ಅವರಲ್ಲಿ ಒಂದು ಇಡಿಯ ಜೀವನದ ಒಟ್ಟು ಅನುಭವವು ರಾಶಿಹಾಕಿರುತ್ತದೆ, ಆದ್ದರಿಂದ ಅವರು ಈ ಪ್ರಕೃತಿಯ ಸುಳ್ಳುಗಳಿಗೆ ಮೋಸಹೋಗುವ ಹಾಗಿರುವದಿಲ್ಲ. ಇದರಿಂದ

ತಪ್ಪಿಸಿಕೊಳ್ಳುವದಕ್ಕೆ ಮಾರ್ಗವೇ ಇಲ್ಲವೆ? ಇಷ್ಟೆಲ್ಲಾ ಆದರೂ, ಈ ಭಯಂಕರವಾದ ಅಂಶವು ನಮ್ಮ ಎದುರಿಗೇ ಇರುತ್ತಿದ್ದರೂ, ನಾವು ಎಷ್ಟೇ ದುಃಖದಿಂದಲೂ ಸಂಕಟದಿಂದಲೂ ನರಳುತ್ತಿದ್ದರೂ, ಎಲ್ಲಿ ಬದುಕಿರುವದೆಂದರೂ ಸಾಯುವದೆಂದರೂ ಒಂದೇ ಆಗಿರುವದೋ ಅಂಥ ಈ ಲೋಕದಲ್ಲಿ ಕೂಡ - ಇಂಥಲ್ಲಿ ಕೂಡ, ಎಷ್ಟೋ ಯುಗಗಳಿಂದ ಎಲ್ಲಾ ದೇಶಗಳಲ್ಲಿಯೂ ಎಲ್ಲರ ಹೃದಯದಲ್ಲಿಯೂ ಒಂದಾನೊಂದು ಸದ್ದಿಲ್ಲದ ಕಿರಿದನಿಯು ಕೇಳಿಬರುತ್ತಲೇ ಇದೆಯೆಂದು ಕಂಡುಬರುತ್ತದೆ. "ಈ ಗುಣಮಯವಾದ ನನ್ನ ದೈವಮಾಯೆಯನ್ನು ದಾಟುವದು ಬಲುಕಷ್ಟ' ಆದರೂ ಯಾರು ನನ್ನನ್ನೇ ಶರಣುಹೊಂದುವರೋ ಅವರು ಈ ಜೀವನನದಿಯನ್ನು ದಾಟುವರು." (ಗೀ.7-14) "ಯಾರು ಯಾರು ಸಂಕಟಪಡುತ್ತಾ ಹೊರಲಾರದ ಹೊರೆಯನ್ನು ಹೊತ್ತಿರುವಿರೋ ಅವರೆಲ್ಲರೂ ನನ್ನ ಬಳಿಗೆ ಬನ್ನಿರಿ, ನಾನು ನಿಮಗೆ ವಿಶ್ರಾಂತಿಯನ್ನು ಕೊಡುವೆನು" (9ಬೈ.ಮಾತ್ಯು 2-28) ಈ ದನಿಯೇ ನಮ್ಮನ್ನು ಮುಂದಕ್ಕೆ ಕರೆದೊಯ್ಯುತ್ತಿರುವದು. ಮಾನವನ ಕಿವಿಗೆ ಅದು ಬಿದ್ದಿರುತ್ತದೆ, ಎಷ್ಟೋ ಯುಗಗಳಿಂದ ಅದು ಕಿವಿಗೆ ಬೀಳುತ್ತಲೇ ಇದೆ. ಎಲ್ಲವೂ ನಷ್ಟವಾಯಿತೆಂದು, ಇನ್ನೂ ಪ್ರತ್ಯಾಶೆಯೇ ಇಲ್ಲವೆಂದು, ತಮ್ಮ ತಮ್ಮ ಬಲವನ್ನೇ ನಂಬಿಕೊಂಡಿರುವದೊಂದೂ ಸಾಗದಂತೆ ಹಾಳಾಯಿತೆಂದು, ಎಲ್ಲವೂ ಕೈಮೀರಿತೆಂದು, ಜೀವಿತವೇ ಹಾಳಾಯಿತೆಂದು - ತೋರುವಂಥ ಕಾಲದಲ್ಲಿ ಮಾನವನಿಗೆ ಈ ದನಿಯು ಕೇಳಬರುವದು. ಆಗ ಅವನು ಅದನ್ನು ಆಲೈಸಿಕೇಳುವನು. ಇದಕ್ಕೆ ಧರ್ಮವೆಂದು ಹೆಸರು.

ಹೀಗೆ 'ಇದೆಲ್ಲ ಅವಿವೇಕ, ಇದೆಲ್ಲ ಮಾಯೆ' - ಎಂಬ ಧೈರ್ಯಯುಕ್ತವಾದ ಅಭಿಪ್ರಾಯವೊಂದು ಕಡೆ ಕಾಣುಬರುತ್ತದೆ. ಆದರೆ ಇದರೊಂದಿಗೆ 'ಮಾಯೆಯಿಂದಾಚೆಗೆ ಹೋಗುವ ಮಾರ್ಗವೂ ಇದೆ' ಎಂಬ ಅತ್ಯಂತ ಪ್ರತ್ಯಾಶಾಜನಕವಾದ ಅಭಿಪ್ರಾಯವೂ ಇರುತ್ತದೆ. ಇದಕ್ಕೆ ಪ್ರತಿಯಾಗಿ ವ್ಯವಹಾರ ಚತುರರಾದವರು "ಧರ್ಮ, ವೇದಾಂತ - ಮುಂತಾದ ಅವಿವೇಕವನ್ನು ಕಟ್ಟಿಕೊಂಡು ಇಲ್ಲದ ಯೋಚನೆಯನ್ನು ಹಚ್ಚಿಕೊಳ್ಳಬೇಡಿರಿ, ಮೊದಲು ಇಹಜೀವನವನ್ನು ನೋಡಿಕೊಳ್ಳಿರಿ. ಈ ಲೋಕದಲ್ಲಿ ಕಷ್ಟವಿರುವದು ನಿಜ, ಆದರೆ ಇದರಲ್ಲಿ ಆದಷ್ಟು ಸುಖವನ್ನು ಪಡೆದುಕೊಳ್ಳಿರಿ" ಎಂದು ಹೇಳುತ್ತಿರುವರು. ಇದ್ದದ್ದು ಇದ್ದಹಾಗೆ ಹೇಳುವ ಭಾಷೆಯಲ್ಲಿಟ್ಟರೆ, ಇದರ ಭಾವಾರ್ಥ ವೇನಾಗುವದೆಂದರೆ ನಟನೆಯ ಮಿಥ್ಯಾಜೀವನವನ್ನೇ ಇಟ್ಟುಕೊಂಡಿರಿ, ಒಂದೇ ಸಮನೆ ವಂಚನೆ ಮಾಡುತ್ತಿರುವ ಜೀವನವನ್ನೇ ಇಟ್ಟುಕೊಂಡಿರಿ, ಹುಣ್ಣುಗಳನ್ನೆಲ್ಲ ಆದಷ್ಟು ಮಟ್ಟಿಗೆ ಮುಚ್ಚಿಟ್ಟುಕೊಳ್ಳಿರಿ, ತೇಪೆಯ ಮೇಲೆ ತೇಪೆಯನ್ನು ಹಾಕುತ್ತ

ಎಲ್ಲವನ್ನೂ ಕಳೆದುಕೊಂಡು ತೇಪೆಯು ಕಂತೆಯಾಗಿಬಿಡಿರಿ. ಇದಕ್ಕೇ ವ್ಯವಹಾರ ಚಾತುರ್ಯವೆಂದು ಹೆಸರು. ಯಾರಿಗೆ ಈ ತೇಪೆಯ ಕೆಲಸವೇ ಸಾಕಾಗಿರುವದೋ ಅವರಿಗೆ ಧರ್ಮವು ಹತ್ತಿರ ಬರುವದಿಲ್ಲ. ಧರ್ಮವೆಂಬುದು ಬರಬೇಕಾದರೆ ಈಗಿನ ಸ್ಥಿತಿಯ ವಿಷಯಕ್ಕೆ, ಈಗಿನ ನಮ್ಮ ಜೀವನದ ವಿಷಯಕ್ಕೆ, ನಮಗೆ ಅತ್ಯಂತವಾದ ಅತೃಪ್ತಿಯಾಗಿರಬೇಕು; ಜೀವನಕ್ಕೆ ಹೀಗೆ ತೇಪೆ ಹಾಕುವದೆಂಬುದೇ ದ್ವೇಷಕ್ಕೆ ವಿಷಯವಾಗಿರಬೇಕು, ಅತ್ಯಂತವಿದ್ವಿಷ್ಟವಾಗಿರಬೇಕು; ಮೋಸ, ತಟವಟ, ಸುಳ್ಳು ಎಂದರೆ ಗಡಿಮಿತಿಯಿಲ್ಲದಷ್ಟು ಅಸಹ್ಯವಾಗಿರಬೇಕು. ಈ ವ್ಯವಹಾರದ ಭಾನೆಯು ಬಂದಾಗ **ಬೋಧಿವೃಕ್ಷದ*** ಕೆಳಗಿದ್ದ **ಬುದ್ಧನು** ಏನೆಂದನೋ, ಅದೇ ಮಾತನ್ನು ಹೇಳಬಲ್ಲ ಧೀರನೊಬ್ಬನು ಮಾತ್ರ ಧಾರ್ಮಿಕನಾಗುವನು. ಬುದ್ಧನಿಗೆ ಆಗ ಇದೆಲ್ಲ ಅವಿವೇಕವೆಂಬ ಭಾಸವೇನೋ ಆಯಿತು, ಆದರೆ ತಪ್ಪಿಸಿಕೊಳ್ಳುವ ಮಾರ್ಗವು ಮಾತ್ರ ಹೊಳೆದಿರಲಿಲ್ಲ. ತತ್ತ್ವಾನ್ವೇಷಣೆಯನ್ನು ಬಿಟ್ಟು ಮತ್ತೆ ಪ್ರಪಂಚಕ್ಕೇ ಹೋಗಿ ಹಿಂದಿನ ತಟವಟದ ಜೀವನವನ್ನೇ ಬಾಳಿಕೊಂಡು, ವಸ್ತುಗಳಿಗೆ ಒಪ್ಪದ ಬೇರೆಬೇರೆ ಹೆಸರನ್ನಿಟ್ಟುಕೊಂಡು ತನಗೂ ಮತ್ತೊಬ್ಬರಿಗೂ ಸುಳ್ಳನ್ನೇ ಹೇಳುತ್ತಾ ಏಕೆ ಇರಬಾರದೆಂಬ ಯೋಚನೆಯು ಹುಟ್ಟಿತೋ ಇಲ್ಲವೋ, ಆ ಮಹಾನುಭಾವನು ಅದನ್ನು ಹಿಮ್ಮೆಟ್ಟಿ "ಈ ಹಾಡಿದ್ದೇ ಹಾಡಿಕೊಂಡು ಬಾಳುವ ಮೂಢ ಜೀವನಕ್ಕಿಂತ ಮರಣವೇ ಲೇಸು; ಸೋತು ಬದುಕುವದಕ್ಕಿಂತ ರಣರಂಗದಲ್ಲಿ ಮಡಿಯುವದೇ ಮೇಲು" ಎಂದನು. ಇದೇ ಧರ್ಮಕ್ಕೆ ಅಡಿಗಟ್ಟು. ಯಾವನಾದರೂ ಇದನ್ನ ವಲಂಬಿಸಿದನೆಂದರೆ, ಅವನು ತತ್ತ್ವಪ್ರಾಪ್ತಿಯ ಮಾರ್ಗದಲ್ಲಿ ನಡೆಯುತ್ತಿರುವನೆಂದು ತಿಳಿಯಬೇಕು, ಅವನು ಈಶ್ವರಪ್ರಾಪ್ತಿಯ ಪಥದಲ್ಲಿ ನಡೆಯುತ್ತಿರುವನೆಂದು ತಿಳಿಯಬೇಕು. "ನನಗೆ ಬೇಕಾದ ದಾರಿಯೊಂದನ್ನು ನಾನೇ ಹೇಗೋ ಮಾಡಿಕೊಳ್ಳುವೆನು; ತತ್ತ್ವವನ್ನಾದರೂ ತಿಳಿದುಕೊಳ್ಳುವೆನು, ಇಲ್ಲದಿದ್ದರೆ ಅದನ್ನು ತಿಳಿದುಕೊಳ್ಳುವ ಪ್ರಯತ್ನದಲ್ಲಿಯೇ ಪ್ರಾಣವನ್ನಾದರೂ ಬಿಡುವೆನು" ಎಂದು ಮಾಡುವ ಸಂಕಲ್ಪವೇ ಧರ್ಮಪರನಾಗುವದಕ್ಕೆ ಇರುವ ಪ್ರಥಮೋತ್ತೇಜಕ ವಾಗಿರಬೇಕು. ಇತ್ತಕಡೆಯಲ್ಲಿ ನೋಡಿದರೆ ಏನೇನೂ ಇರುವದಿಲ್ಲ. ಅದು ಹೋಗಿಯೇ ಬಿಟ್ಟಿರುತ್ತದೆ, ಪ್ರತಿದಿನವೂ ಕಣ್ಮರೆಯಾಗುತ್ತಿದೆ. ಇಂದು ಸುಂದರನಾಗಿ ಪ್ರತ್ಯಾಶೆಯನ್ನಿಟ್ಟುಕೊಂಡಿರುವ ಯುವಕನಾಗಿರುವವನೇ ನಾಳೆ ಹಳಬನಾಗಿ ಅನುಭವಸ್ಥನೆನಿಸುವವನು. ಪ್ರತ್ಯಾಶೆಗಳೂ ಸಂತೋಷಗಳೂ ಭೋಗಗಳೂ ನಾಳೆಯ ದಿನ ಕಾವಳ ಬಂದೊಡನೆ ಹೂಗಳಂತೆ ಉದುರಿಹೋಗುವವು. ಇದೊಂದು

* ಗೌತಮನು ತನ್ನ ರಾಜ್ಯವನ್ನೂ ಹೆಂಡತಿಯನ್ನೂ ಮಗನನ್ನೂ ಬಿಟ್ಟು ಕಾಡಿಗೆ ಹೋಗಿ ತಪಸ್ಸುಮಾಡಿ ಎಷ್ಟೋ ಕಾಲವಾದ ಮೇಲೆ ಕೊನೆಗೆ ಒಂದಾನೊಂದು ಅರಳಿಯ ಮರದ ಕೆಳಗೆ ಅವನಿಗೆ ಜ್ಞಾನೋದಯವಾಯಿತಂತೆ, ಆ ವೃಕ್ಷವನ್ನು ಬೌದ್ಧರು ಬೋಧಿವೃಕ್ಷವೆಂದು ಕರೆಯುತ್ತಾರೆ.

ಪಕ್ಕದಲ್ಲಿ. ಇನ್ನು ಮತ್ತೊಂದು ಕಡೆಗೆ ನೋಡಿದರೋ ಎಂದರೆ ನಾವು ಗೆಲ್ಲುತ್ತೇವೆಂಬ, ಈ ಜೀವನದ ಸಂಕಟಗಳನ್ನೆಲ್ಲ ಪರಿಹರಿಸಿಕೊಳ್ಳಬಹುದೆಂಬ, ಜೀವನವನ್ನೇ ಗೆದ್ದು ವಶಪಡಿಸಿಕೊಂಡೇವೆಂಬ, ವಿಶ್ವವನ್ನೇ ಗೆದ್ದುಕೊಳ್ಳುವೆವೆಂಬ, ಮನೋರಥವು ಏಳುತ್ತಿರುವದು. ಆ ಕಡೆಯಲ್ಲಿ ಮನುಷ್ಯರಿಗೆ ನಿಲುಗಡೆಯುಂಟು. ಆದ್ದರಿಂದ ಯಾರು ಗೆಲ್ಲಬೇಕು, ನಿಜವನ್ನರಿಯಬೇಕು, ಧರ್ಮವನ್ನನುಷ್ಠಾನ ಮಾಡಬೇಕು – ಎಂದು ಧೈರ್ಯದಿಂದ ಹೆಣಗಾಡುವದಕ್ಕೆ ಹೊರಡುವರೋ ಅವರದೇ ಸರಿಯಾದ ಹಾದಿ, ಇದನ್ನೇ **ವೇದ**ಗಳುಸಾರುತ್ತಿರುವದು. "ನಿರಾಶರಾಗಬೇಡಿ, ದಾರಿಯನ್ನು ದಾಟುವದೇನೋ ಕ್ಷೌರದ ಕತ್ತಿಯ ಅಲುಗಿನ ಮೇಲೆ ನಡೆಯುವಷ್ಟು ಕಷ್ಟವಾಗಿದೆ ನಿಜ; ಆದರೂ ನಿರಾಶರಾಗದಿರಿ ಏಳಿ, ಎಚ್ಚರವಾಗಿ, ಧ್ಯೇಯವನ್ನು ಕಂಡುಕೊಳ್ಳಿರಿ, ಪರಮಗತಿಯನ್ನು ಕಾಣಿರಿ." (ಕ.)

ಈ ಧರ್ಮದ ಬೇರೆ ಬೇರೆ ಅಭಿವ್ಯಕ್ತಿಗಳಿವೆಯಲ್ಲ, ಅವು ಮಾನವರಲ್ಲಿ ಯಾವದೇ ರೂಪದಲ್ಲಿ ಕಾಣಿಸಿಕೊಂಡಿರಲಿ, ಅವಕ್ಕೆಲ್ಲ ಇದೊಂದು ಸಮಾನವಾದ ಕೇಂದ್ರೀ ಭೂತವಾದ ಆಧಾರವಾಗಿರುತ್ತದೆ. ಮುಕ್ತಿಯನ್ನು, ಈ ಸಂಸಾರದಿಂದ ಬಿಡುಗಡೆಯಾಗುವದನ್ನು, ಬೋಧಿಸುವದೇ ಅವಕ್ಕೆಲ್ಲ ಸಾಧಾರಣವಾಗಿರುವ ಆಧಾರವು. ಅವು ಪ್ರಪಂಚವನ್ನೂ ಪರಮಾರ್ಥವನ್ನೂ ಹೊಂದಿಸುವದಕ್ಕೆ ಬಂದಿರುವದೇ ಇಲ್ಲ, ಪೆಟ್ಟೊಂದು ತುಂಡೆರಡು – ಎಂದು ಇದ್ದದ್ದನ್ನು ಇದ್ದಂತೆ ಖಂಡಿತವಾಗಿ ತಿಳಿಸಿ ಧರ್ಮವನ್ನು ತನ್ನ ಉಚ್ಚ ಧ್ಯೇಯಸ್ಥಾನದಲ್ಲಿಯೇ ನೆಲೆನಿಲ್ಲಿಸುವದಕ್ಕೆ ಬಂದಿರುವವೇ ಹೊರತು ಹೇಗೋ ಪ್ರಪಂಚದೊಡನೆ ರಾಜಿಮಾಡಿಕೊಳ್ಳುವದಕ್ಕೆ ಬಂದಿರುವದಿಲ್ಲ. ಪ್ರತಿಯೊಂದು ಧರ್ಮವೂ ಇದನ್ನೇ ಬೋಧಿಸಿರುತ್ತದೆ. ಈ ಉದ್ದೇಶಗಳನ್ನೆಲ್ಲ ಹೊಂದುಗಡೆ ಮಾಡುವದೇ, ಪ್ರಪಂಚದ ಧರ್ಮಗಳಿಗೆಲ್ಲ, ಅವು ಅತ್ಯಂತ ಮೇಲ್ತರದವುಗಳಾಗಿರಲಿ ಅಥವಾ ಅತ್ಯಂತ ಕೀಳ್ತರದವುಗಳಾಗಿರಲಿ – ಅವಕ್ಕೆಲ್ಲ ಸಮಾನವಾಗಿರುವ ತತ್ತ್ವವನ್ನು ಪ್ರಕಟಗೊಳಿಸುವದೇ ವೇದಾಂತದ ಕರ್ತವ್ಯವಾಗಿರುತ್ತದೆ. ನಿಜವಾಗಿ ನೋಡಿದರೆ ಅತ್ಯಂತ ಪ್ರಗಾಢವಾದ ಮೂಢವಿಶ್ವಾಸವೆಂದು ನಾವು ಕರೆಯುತ್ತಿರುವದಕ್ಕೂ ಅತ್ಯಂತ ಮೇಲ್ತರದ ತತ್ತ್ವಜಿಜ್ಞಾಸೆಗೂ ಒಂದು ಸಮಾನವಾದ ಗುರಿಯೇ ಇರುತ್ತದೆ, ಅದೇನೆಂದರೆ ಅವೆರಡೂ ಒಂದೇ ಬಗೆಯ ಕಷ್ಟದಿಂದ ಪಾರಾಗುವ ಮಾರ್ಗವನ್ನು ತೋರಿಸುವದಕ್ಕೆ ಯತ್ನಿಸುತ್ತವೆ. ಬಹುಸಂದರ್ಭಗಳಲ್ಲಿ ಈ ಮಾರ್ಗವೆಂಬುದು, ಯಾರು ಪ್ರಕೃತಿಯ ನಿಯಮಗಳಿಂದ ಬದ್ಧನಾಗಿರುವದಿಲ್ಲವೋ, ಅಂದರೆ ಯಾರು ಸ್ವಯಂಮುಕ್ತನಾಗಿರುವನೋ, ಅಂಥವನೊಬ್ಬನ ಮೂಲಕವಾಗಿಯೇ ಸಿಕ್ಕುವದೆಂದುಉಪದಿಷ್ಟವಾಗಿರುತ್ತದೆ. ಆ ಒಬ್ಬ ಮುಕ್ತನ ವಿಚಾರದಲ್ಲಿ ಎಷ್ಟೇ

ತೊಂದರೆಗಳಿರಲಿ, ಎಷ್ಟೇ ಭಿನ್ನಾಭಿಪ್ರಾಯಗಳಿರಲಿ – ಅವನು ಸಗುಣೇಶ್ವರನೊ ಅಲ್ಲವೋ – ಮನುಷ್ಯನಂತೆ ಚೇತನನೊ ಅಲ್ಲವೋ, ಗಂಡಸೋ ಹೆಂಗಸೋ ನಪುಂಸಕನೋ ಎಂಬುದೇ ಮುಂತಾದ ಚರ್ಚೆಗಳು ಅನಂತವಾಗಿರುತ್ತವೆಂಬುದು ನಿಜ; ಆದರೂ ಮೂಲಭೂತವಾಗಿರುವ ಭಾವನೆಯೇನೋ ಎಲ್ಲಕ್ಕೂ ಸಮಾನವಾಗಿರುತ್ತದೆ. ಬೇರೆಬೇರೆ ದರ್ಶನಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆ ನಿರಾಶಾಜನಕವಾಗುಷ್ಟು ಪರಸ್ಪರ ವಿರೋಧವಿರುವದಾದರೂ ಅವುಗಳಲ್ಲೆಲ್ಲ ಅನುಸ್ಯೂತವಾಗಿರುವ ಒಂದಾನೊಂದು ಸ್ವರ್ಣಸೂತ್ರವಿರುವದೆಂದು ಕಂಡುಬರುತ್ತದೆ. ಈ ವೇದಾಂತ ಶಾಸ್ತ್ರದಲ್ಲಿ ಈ ಸ್ವರ್ಣಸೂತ್ರವನ್ನು ಕಂಡುಹಿಡಿದು ಸ್ವಲ್ಪಸ್ವಲ್ಪವಾಗಿ ನಮ್ಮ ದೃಷ್ಟಿಗೆ ಗೋಚರವಾಗುವಂತೆ ಪ್ರಕಟಗೊಳಿಸಲಾಗಿದೆ. ಈ ಪ್ರಾಕಟ್ಯಕ್ಕೆ ಮೊಟ್ಟಮೊದಲನೆಯ ಮೆಟ್ಟಿಲು ಯಾವದೆಂದರೆ ಎಲ್ಲರೂ ಮುಕ್ತಿಯ ಕಡೆಗೇ ಹೋಗುತ್ತಿದ್ದಾರೆಂಬ ಸಾಧಾರಣ ತತ್ತ್ವವನ್ನು ತೋರಿಸುವದೇ ಆಗಿರುತ್ತದೆ.

ನಮಗೆ ಎಷ್ಟೇ ಸುಖದುಃಖಗಳುಂಟಾಗುತ್ತಿರಲಿ, ಎಷ್ಟೇ ಅಡ್ಡಿಗಳೂ ಆತಂಕಗಳೂ ಒದಗುತ್ತಿರಲಿ, ನಾವು ಮುಕ್ತಿಯ ಕಡೆಗೇ ತೆರಳುತ್ತಿರುವೆವು. ಎಂಬುದೊಂದು ವಿಚಿತ್ರ ಸಂಗತಿಯಾಗಿರುತ್ತದೆ. ಒಟ್ಟು ಪ್ರಶ್ನೆಯು ಇಷ್ಟೇ ಆಗಿತ್ತು: "ಈ ಪ್ರಪಂಚವೆಂಬುದೇನು? ಇದು ಏತರಿಂದ ಉಂಟಾಗಿದೆ? ಏತರೊಳಕ್ಕೆ ಹೋಗುತ್ತಿದೆ"? ಇದಕ್ಕೆ ಉತ್ತರವೇನೆಂದರೆ "ಇದು ಮುಕ್ತಿಯಿಂದ ಬಂದಿದೆ, ಮುಕ್ತಿಯಲ್ಲಿಯೇ ಇರುತ್ತದೆ, ಕೊನೆಗೆ ಮುಕ್ತಿಯಲ್ಲಿಯೇ ಸೇರಿಹೋಗುತ್ತದೆ." ಈ ಮುಕ್ತಿಯ ಭಾವನೆಯೆಂಬುದನ್ನು ನಾವು ಕೈಬಿಡಲೇ ಆರೆವು: ಇದಲ್ಲದಿದ್ದರೆ ನಮ್ಮ ವ್ಯಾಪಾರಗಳೇ, ಕೊನೆಗೆ ನಮ್ಮ ಜೀವನಗಳೇ, ಇಲ್ಲವಾಗುವವು. ಪ್ರತಿಯೊಂದು ಕ್ಷಣದಲ್ಲಿಯೂ ಪ್ರಕೃತಿಯು 'ನಾವು ಬದ್ಧರು, ಮುಕ್ತರಲ್ಲ' – ಎಂಬುದನ್ನು ತೋರಿಸಿಕೊಡುತ್ತಿರುವದು. ಆದರೂ ಅದೇ ಕಾಲದಲ್ಲಿಯೇ 'ನಾವು ಮುಕ್ತರೇ' ಎಂಬ ಇನ್ನೊಂದು ಭಾವನೆಯೂ ಏಳುತ್ತಲೇ ಇರುವದು. ನಮ್ಮನ್ನು ಹೆಜ್ಜೆಹೆಜ್ಜೆಗೂ ಮಾಯೆಯು ಕೆಳಕ್ಕೆ ಕೆಡವಿ ನಾವು ಬದ್ಧರೆಂಬುದನ್ನು ತೋರಿಸಿಕೊಡುವಂತಿರುವದು, ಆದರೆ ಅದೇ ಕಾಲದಲ್ಲಿಯೇ ಈ ಪೆಟ್ಟನ್ನು ತಿನ್ನುತ್ತಿರುವಾಗಲೇ, ನಾವು ಬದ್ಧರೆಂಬ ಈ ಭಾವನೆಯು ಹುಟ್ಟುತ್ತಿರುವಾಗಲೇ, ಅದರೊಡನೆಯೇ, 'ನಾವು ಮುಕ್ತರೇ' ಎಂಬ ಇನ್ನೊಂದು ಭಾವನೆಯೂ ಬರುತ್ತಿರುವದು. ಯಾವದೋ ಒಂದು ಒಳಗಿನ ವಾಣಿಯು ನಾವು ಮುಕ್ತರೆಂದು ಸಾರುತ್ತಿರುವದು. ಆದರೆ ನಾವು ಆ ಮುಕ್ತಿಯನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂದು, ಅದನ್ನು ಪ್ರಕಟಗೊಳಿಸಿಕೊಳ್ಳಬೇಕೆಂದು. ಪ್ರಯತ್ನಿಸಿದರೆ ಬರುವ ಅಡಚಣೆಗಳು ಸ್ವಲ್ಪ ಹೆಚ್ಚುಕಡಿಮೆ ಅತ್ಯಂತ ದುಸ್ತರವಾಗಿರುವವು.

ಹೀಗಿದ್ದರೂ ಒಳಗಡೆಯಲ್ಲಿ ಅದು 'ನಾನು ಮುಕ್ತನು, ನಾನು ಮುಕ್ತನು' ಎಂದು ಹೇಳುವದನ್ನು ಬಿಡುವದೇ ಇಲ್ಲ. ಪ್ರಪಂಚದ ಬೇರೆ ಬೇರೆ ಧರ್ಮಗಳನ್ನು ಪರೀಕ್ಷಿಸಿದರೆ ಈ ಭಾವನೆಯನ್ನೇ ಹೊರಗೆಡವಿರುವುದು ಕಂಡುಬರುತ್ತದೆ. ಧರ್ಮವು ಮಾತ್ರವೇ ಅಲ್ಲ – ಈ ಶಬ್ದಕ್ಕೆ ಸಂಕುಚಿತಾರ್ಥವನ್ನು ಮಾಡಿಕೊಳ್ಳಬೇಡಿ – ಸಮಾಜದ ಇಡಿಯ ಜೀವನವೇ ಈ ಸ್ವಾತಂತ್ರ್ಯವೆಂಬ ತತ್ತ್ವವನ್ನೇ ಸ್ಥಾಪಿಸುತ್ತಿರುವದು. ಎಲ್ಲಾ ವ್ಯಾಪಾರಗಳೂ ಈವೊಂದು ಮುಕ್ತಿಯನ್ನೇ ಸ್ಥಾಪಿಸುತ್ತಿರುವವು. ಆ ವಾಣಿಯು ಎಲ್ಲರ ಕಿವಿಗೂ ಬಿದ್ದಿರುತ್ತದೆ, ಇದು ಅವರಿಗೆ ತಿಳಿದಿರಲಿ ತಿಳಿಯದಿರಲಿ, "ಯಾರು ಯಾರು ಸಂಕಟಪಡುತ್ತಿರುವಿರೋ ಹೊರಲಾರದ ಹೊರೆಯನ್ನು ಹೊತ್ತಿರುವಿರೋ, ಅವರೆಲ್ಲರೂ ನನ್ನ ಬಳಿಗೆ ಬನ್ನಿರಿ" (ಬೈ.) ಎಂದು ಸಾರುತ್ತಿರುವ ವಾಣಿಯು ಅವರ ಕಿವಿಗೆ ಬಿದ್ದಿರುತ್ತದೆ. ಅದು ಇದೇ ಭಾಷೆಯಲ್ಲಿ, ಇದೇ ಆಕಾರದ ಮಾತಿನಲ್ಲಿ ಇರದೆ ಹೋಗಬಹುದು; ಆದರೆ ಯಾವದಾದರೊಂದು ಆಕಾರದಲ್ಲಿ 'ಮುಕ್ತಿಗೆ ಬನ್ನಿರಿ' ಎಂದು ಕರೆಯುತ್ತಿರುವ ವಾಣಿಯು ನಮ್ಮೊಡನೆ ಇದ್ದುಕೊಂಡೇ ಇರುವದು.

ನಿಜ, ಆ ವಾಣಿಯ ದೆಸೆಯಿಂದಲೇ ನಾವಿಲ್ಲಿ ಜನಿಸಿರುವೆವು; ನಮ್ಮ ವ್ಯಾಪಾರಗಳಲ್ಲಿ ಪ್ರತಿಯೊಂದೂ ಅದಕ್ಕಾಗಿಯೇ ನಡೆಯುತ್ತಿರುವದು. ನಾವೆಲ್ಲರೂ ಮುಕ್ತಿಯ ಕಡೆಗೆ ನುಗ್ಗಿಕೊಂಡು ಹೋಗುತ್ತಿದ್ದೇವೆ, ನಮಗೆ ತಿಳಿದಿರಲಿ ತಿಳಿಯದಿರಲಿ, ನಾವೆಲ್ಲರೂ ಆ ವಾಣಿಯನ್ನೇ ಹಿಂಬಾಲಿಸುತ್ತಿದೇವೆ; ಹಳ್ಳಿಯ ಹುಡುಗರು ಕೊಳಲಿನ ಇಂಪಿನ ದನಿಗೆ ಮರುಳಾಗಿ ಹಿಂದೋಡಿದಂತೆಯೇ ನಾವು ನಮಗೆ ಅರಿಯದೆಯೇ ಆ ವಾಣಿಯ ಇಂಪಿನ ಗಾನಕ್ಕೆ ಮರುಳಾಗಿ ಹಿಂದೋಡುತ್ತಿದೇವೆ. ಆ ವಾಣಿಯನ್ನು ಅನುಸರಿಸಿದರೆ ನಾವು ನೀತಿವಂತರಾಗುವೆವು. ಮಾನವ ಜೀವವೊಂದೇ ಅಲ್ಲ, ಆ ಬ್ರಹ್ಮಸ್ತಂಬ ಪರ್ಯಂತವಾಗಿರುವ ಪ್ರಾಣಿಗಳೆಲ್ಲವೂ ಆ ವಾಣಿಯನ್ನು ಕೇಳಿ ಅದರ ಕಡೆಗೇ ಓಡುತ್ತಿವೆ; ಈ ಹೆಣಗಾಟದಲ್ಲಿ ಒಂದರೊಡನೊಂದು ಸೇರಿಕೊಳ್ಳುತ್ತಲೋ ಒಂದನ್ನೊಂದು ದಾರಿಯಿಂದಾಚೆಗೆ ದೂಡುತ್ತಲೋ ಇವೆ. ಇದರಿಂದಲೇ ಪೈಪೋಟಿ, ಸಂತೋಷಗಳು, ಹೆಣಗಾಟಗಳು, ಜೀವನ, ಭೋಗ, ಸಾವು – ಇವೆಲ್ಲ ಉಂಟಾಗುತ್ತಿವೆ; ಈ ಇಡಿಯ ವಿಶ್ವವೇ ಆ ವಾಣಿಯನ್ನು ಮುಟ್ಟಬೇಕೆಂಬ ಉನ್ಮತ್ತ ವ್ಯಾಪಾರವೇ ಹೊರತು ಬೇರೆಯಲ್ಲ. ಇದೇ ಪ್ರಕೃತಿಯ ತೋರಿಕೆಯು.

ಆಗ ಏನಾಗುವದು? ದೃಶ್ಯವು ಬೇರ್ಪಡುವದಕ್ಕೆ ಮೊದಲಾಗುವದು. ಈ ವಾಣಿಯಾವದೆಂಬುದನ್ನರಿತು ಅದರ ಸ್ವರೂಪವನ್ನು ತಿಳಿದುಕೊಂಡಿರೋ ಇಲ್ಲವೋ ಇಡಿಯ ದೃಶ್ಯವೇ ಬೇರ್ಪಡುವದು. ಮಾಯೆಯ ಭೀಕರ ರಣರಂಗವಾಗಿದ್ದ

ಅದೇ ಪ್ರಪಂಚವೇ ಈಗ ಶುಭ ಸುಂದರವಾದದ್ದಾಗುವದು. ಇನ್ನು ಮೇಲೆ ನಾವು ಪ್ರಕೃತಿಯ ಮೇಲೆ ತಪ್ಪುಹೊರಿಸುವದಿಲ್ಲ, ಈ ಪ್ರಪಂಚವು ಅಸಹ್ಯವಾಗಿರುವದೆಂದೂ, ಒಣತೋರಿಕೆಯೆಂದೂ ಹೇಳುವದಿಲ್ಲ. ಇನ್ನು ಮೇಲೆ ಅಳುವದೂ ಕರೆಯುವದೂ ಬೇಕಾಗಿರುವದಿಲ್ಲ. ಆ ವಾಣಿಯ ಸ್ವರೂಪವನ್ನು ತಿಳಿದುಕೊಂಡ ಒಡನೆಯೇ ಈ ಹೆಣಗಾಟ, ಈ ಕಾದಾಟ, ಈ ಪೈಪೋಟಿ, ಈ ಕಷ್ಟ, ಈ ಕ್ರೌರ್ಯ, ಈ ಅಲ್ಪಸುಖದುಃಖಗಳು – ಇವೆಲ್ಲ ಏತಕ್ಕೆ ಇಲ್ಲಿವೆ ಎಂಬುದಕ್ಕೆ ಕಾರಣ ನಮಗೆ ಗೊತ್ತಾಗುತ್ತದೆ. ಅವು ಇರುವದು ಸ್ವಾಭಾವಿಕವಾಗಿದೆಯೆಂದೂ ಅವುಗಳಿಲ್ಲದೆ ಇದ್ದರೆ ಆ ವಾಣಿಯ ಕಡೆಗೆ ಹೋಗುವದೆಂಬುದೇ ಆಗಲಾರದೆಂದೂ ನಮಗೆ ಗೊತ್ತಾಗುತ್ತದೆ; ಅದನ್ನು ಮುಟ್ಟುವದೇ, ಅದು ನಮಗೆ ತಿಳಿದಿರಲಿ ತಿಳಿಯದಿರಲಿ, ಅದನ್ನು ಸೇರುವದೇ ನಮ್ಮ ನಿಯತಿಯೆಂಬುದು ಗೊತ್ತಾಗುತ್ತದೆ.

ಆದ್ದರಿಂದ ಈ ಮಾನವ ಜೀವನವೆಲ್ಲ, ಪ್ರಕೃತಿಯೆಲ್ಲ, ಮುಕ್ತಿಯನ್ನು ಪಡೆದುಕೊಳ್ಳಬೇಕೆಂದೇ ಹೆಣಗಾಡುತ್ತಿರುವದು. ಸೂರ್ಯನೂ ಅದೇ ಗತಿಯ ಕಡೆಗೆ ಹೋಗುತ್ತಿದ್ದಾನೆ, ಸೂರ್ಯನ ಸುತ್ತಲೂ ಸುತ್ತುತ್ತಿರುವ ಭೂಮಿಯೂ ಅಲ್ಲಿಗೇ ಸಾಗುತ್ತದೆ. ಭೂಮಿಯ ಸುತ್ತಲೂ ತಿರುಗುತ್ತಿರುವ ಚಂದ್ರನೂ ಅಲ್ಲಿಗೇ ಹೋಗುತ್ತಿದಾನೆ. ಅದೇ ಗತಿಗೆಂದೇ ಗ್ರಹವು ಚಲಿಸುತ್ತಿದೆ, ಗಾಳಿಯು ಬೀಸುತ್ತಿದೆ, ಪ್ರತಿಯೊಂದೂ ಅದಕ್ಕಾಗಿಯೇ ಹೆಣಗಾಡುತ್ತಿದೆ. ಮಹಾತ್ಮನಾದವನು ಆ ವಾಣಿಯ ಕಡೆಗೇ ಹೋಗುತ್ತಿದಾನೆ; ಅತ್ತ ಹೋಗದಂತಿರುವದೇ ಅವನಿಂದಾಗುವ ಹಾಗಿಲ್ಲ; ಅತ್ತ ಹೋದೆನೆಂದೇನೂ ಅವನಿಗೆ ಹೆಚ್ಚುಗಾರಿಕೆ ಬರುವಂತಿಲ್ಲ. ಪಾಪಿಯೂ ಅತ್ತಲೇ ಹೋಗುತ್ತಿದಾನೆ. ಉದಾರಿಯಾದವನು ನೆಟ್ಟಗೆ ಆ ವಾಣಿಯ ಕಡೆಗೇ ಹೋಗುತ್ತಿದಾನೆ, ಅವನಿಗೆ ಯಾರೂ ಅಡ್ಡಮಾಡುವ ಹಾಗಿಲ್ಲ; ಜಿಪುಣನಾದವನೂ ಅದೇ ಮಜಲಿನ ಕಡೆಗೇ ನಡೆಯುತ್ತಿದಾನೆ. ಮಹಾಪುಣ್ಯಕರ್ಮಿಯಾಗಿ ಪರೋಪಕಾರವನ್ನು ಮಾಡುತ್ತಿರುವಾತನಿಗೆ ಒಳಗಿನ ಈ ವಾಣಿಯೇ ಕಿವಿಗೆ ಬಿದ್ದಿರುತ್ತದೆ. ಅವನು ಆ ವಾಣಿಯ ಕಡೆಗೇ ಹೋಗಬೇಕಾಗಿರುವದು, ಒಲ್ಲೆನೆನ್ನುವ ಹಾಗಿಲ್ಲ; ಅತ್ಯಂತವಾಗಿ ಸೋಮಾರಿಯಾಗಿರುವವನೂ ಅಷ್ಟೇ. ಈ ಇಬ್ಬರಲ್ಲಿ ಒಬ್ಬನು ಹೆಚ್ಚಾಗಿ ಮುಗ್ಗರಿಸುತ್ತಿದಾನೆ; ಯಾವನು ಹೆಚ್ಚಾಗಿ ಮುಗ್ಗರಿಸುವನೋ ಅವನನ್ನು ನಾವು ಕೆಟ್ಟವನೆನ್ನುತ್ತೇವೆ; ಯಾವನು ಕಡಿಮೆ ಮುಗ್ಗರಿಸುವನೋ ಅವನನ್ನು ಒಳ್ಳೆಯವನೆನ್ನುತ್ತೇವೆ. ಒಳ್ಳೆಯದು, ಕೆಟ್ಟದ್ದು – ಎಂಬಿವು ಎಂದಿಗೂ ಬೇರೆ ಬೇರೆ ಎರಡು ವಸ್ತುಗಳಲ್ಲ; ಅವೆರಡೂ ಒಂದೇ. ಅವುಗಳಿಗಿರುವ ತಾರತಮ್ಯವು ಜಾತಿ ಪ್ರಯುಕ್ತವಲ್ಲ, ಪರಿಮಾಣ ಪ್ರಯುಕ್ತವಾದದ್ದು.

ಒಳ್ಳೆಯದು, ಈ ಸ್ವಾತಂತ್ರ್ಯ ಶಕ್ತಿಯ ಪ್ರಾಕಟ್ಯವೇ ಇಡಿಯ ವಿಶ್ವವನ್ನೆಲ್ಲ ವ್ಯಾಪಿಸಿರುವದು ನಿಜವಾದರೆ - ನಮ್ಮ ಪ್ರಕೃತ ವಿಚಾರ ವಿಷಯವಾದ ಧರ್ಮಕ್ಕೂ ಈ ತತ್ತ್ವವನ್ನು ಹತ್ತಿಸಿದರೆ - ಈ ಭಾವನೆಯೇ ಎಲ್ಲೆಲ್ಲಿಯೂ ಸ್ಥಾಪಿತವಾಗುತ್ತಾ ಬಂದಿದೆಯೆಂದು ಕಂಡುಬರುತ್ತದೆ. ಧರ್ಮದ ಅತ್ಯಂತ ಕೀಳ್ತರದ ರೂಪವನ್ನು ತೆಗೆದುಕೊಳ್ಳಿರಿ; ಅದರಲ್ಲಿ ಪ್ರೇತರಾದ ಪಿತೃಗಳ ಅಥವಾ ಕೆಲವು ಬಲಿಷ್ಠರಾದ ಕ್ರೂರ ದೇವತೆಗಳ ಅರ್ಚನೆಯು ಕಂಡುಬರುತ್ತದೆ. ಈ ದೇವತೆಗಳ ವಿಷಯದಲ್ಲಿ ಅಥವಾ ಪ್ರೇತಪಿತೃಗಳ ವಿಷಯದಲ್ಲಿ ಆ ಜನರಿಗಿರುವ ಮುಖ್ಯ ಭಾವನೆಯೇನು? ಅವರು ಪ್ರಕೃತಿಗೆ ಬದ್ಧರಲ್ಲ, ಅದರ ಕಟ್ಟುಗಳಿಗೆ ಸಿಕ್ಕಿಬಿದ್ದವರಲ್ಲ - ಎಂಬುದೇ. ಪೂಜಕನಾದವನಿಗೆ ಪ್ರಕೃತಿಯೆಂದರೇನೆಂಬ ಬಗ್ಗೆ ಬಹು ಪರಿಮಿತ ಭಾವನೆಯಿರುತ್ತದೆಂಬುದು ನಿಜ. ತಾನು ಗೋಡೆಯನ್ನು ತೂರಿಕೊಂಡು ಹೋಗಲಾರ, ಅಂತರಿಕ್ಷದಲ್ಲಿ ಏರಿ ಹಾರಾಡಲಾರ; ಆದರೆ ತಾನು ಪೂಜಿಸುವ ದೇವತೆಗಳು ಇದನ್ನು ಮಾಡಬಲ್ಲರೆಂಬುದು ಅವನ ಭಾವನೆ. ತತ್ತ್ವಶಾಸ್ತ್ರದೃಷ್ಟಿಯಿಂದ ನೋಡಿದರೆ ಇದರ ಅರ್ಥವೇನಾಗುವದು? ಮುಕ್ತಿಯನ್ನು ಒಪ್ಪಿರುವದೆಂಬುದು ಅಲ್ಲಿ ಉಂಟೆಂಬುದೇ, ತಾನು ಪೂಜಿಸುವ ದೇವತೆಗಳು ತನಗೆ ಗೊತ್ತಿರುವ ಪ್ರಕೃತಿಗಿಂತ ಹೆಚ್ಚಿನವರೆಂಬುದೇ. ಇನ್ನೂ ಉತ್ತಮವಾದ ಉಪಾಸ್ಯಗಳನ್ನು ಇಟ್ಟುಕೊಂಡಿರುವವರ ವಿಚಾರವೂ ಇಷ್ಟೇ. ಪ್ರಕೃತಿಯ ಭಾವನೆಯು ವಿಕಾಸವಾದಂತೆಲ್ಲ ಪ್ರಕೃತಿಗತೀತವಾದ ಆತ್ಮನ ಭಾವನೆಯೂ ವಿಕಾಸವಾಗುತ್ತಾ ಹೋಗುತ್ತದೆ, ಕೊನೆಗೆ ನಾವು **ಏಕೇಶ್ವರವಾದಕ್ಕೆ** ಬಂದು ನಿಲ್ಲುತ್ತೇವೆ. ಅಲ್ಲಿ "ಮಾಯೆಯುಂಟು, ಈ ಮಾಯೆಯನ್ನು ಆಳುವ ಮಹೇಶ್ವರನೂ ಒಬ್ಬನುಂಟು" ಎಂದು ಇಟ್ಟುಕೊಂಡಿರುತ್ತದೆ.

ಈ ಏಕೇಶ್ವರ ಭಾವನೆಗಳು ತಲೆದೋರುವ ಕಡೆಯಲ್ಲಿ ವೇದಾಂತವು ಪ್ರಾರಂಭವಾಗುತ್ತದೆ. ಆದರೆ ವೇದಾಂತ ಜಿಜ್ಞಾಸೆಗೆ ಮತ್ತಷ್ಟು ವಿವರವು ಬೇಕೆನಿಸುವದು. ಈ ಮಾಯೆಯ ತೋರಿಕೆಗಳನ್ನು ಮೀರಿರುವ ಒಬ್ಬಾತನಿರುವನೆಂದೂ, ಅವನು ಈ ಮಾಯೆಯನ್ನು ಮೀರಿ ಸ್ವತಂತ್ರನಾಗಿರುವನೆಂದೂ, ನಾವೆಲ್ಲರೂ ಆತನ ಬಳಿಗೇ ಹೋಗುತ್ತಿರುವೆವೆಂದೂ ಹೇಳುವ ಈ ವಿವರಣೆಯು ಚೆನ್ನಾಗಿಯೇ ಇದೆ; ಆದರೆ ಇಲ್ಲಿರುವ ಜ್ಞಾನವು ಅಷ್ಟು ಸ್ಪಷ್ಟವಾಗಿರುವದಿಲ್ಲ, ನೇರಾಗಿ ಯುಕ್ತ ವಿರುದ್ಧವಲ್ಲವಾದರೂ ಈ ದೃಷ್ಟಿಯು ಮುಸುಕು ಮಸುಕಾಗಿ ಅವಿಸ್ಪಷ್ಟವಾಗಿರುತ್ತದೆ - ಎಂದು ವೇದಾಂತವೆನ್ನುತ್ತದೆ. ನಿಮ್ಮ ದೇಶದ ಒಂದು ಸ್ತೋತ್ರದಲ್ಲಿ "ದೇವನೇ, ನಿನ್ನ ಹತ್ತಿರ ಹತ್ತಿರಕ್ಕೆ ನಾನು ಬರಬೇಕು" ಎಂದಿದೆಯಷ್ಟೆ; ಆ ಸ್ತೋತ್ರವು ವೇದಾಂತಿಯ ಪಾಲಿಗೂ

ಒಪ್ಪತಕ್ಕದ್ದಾಗಿಯೇ ಕಾಣುವದು ; ಆದರೆ ಇಲ್ಲಿ ಒಂದು ಮಾತನ್ನು ಅವನು ಬದಲಾಯಿಸಿ "ದೇವನೆ, ನನ್ನ ಹತ್ತಿರ ಹತ್ತಿರಕ್ಕೆ ನೀನು ಬರಬೇಕು" ಎಂದು ಮಾರ್ಪಡಿಸಬೇಕು ಎನ್ನುತ್ತಾನೆ, ಅಷ್ಟೆ. ಆ ಪರಮಗತಿಯು ಬಹುದೂರವಿರುವದೆಂಬ, ಪ್ರಕೃತಿಯಿಂದಾಚೆಗೆ ಇದ್ದುಕೊಂಡು ನಮ್ಮೆಲ್ಲರನ್ನೂ ತನ್ನ ಕಡೆಗೆ ಸೆಳೆದುಕೊಳ್ಳುತ್ತಿರುವದೆಂಬ ಭಾವನೆಯನ್ನು ಇನ್ನೂ ಹೆಚ್ಚು ಹೆಚ್ಚು ಹತ್ತಿರಕ್ಕೆ ತರಬೇಕು, ಆದರೆ ಅದನ್ನು ತಗ್ಗಿಸಬಾರದು ಕೆಡಿಸಲೂ ಬಾರದು. ಪರಲೋಕದ ಈಶ್ವರನು ಪ್ರಕೃತಿಯ ಈಶ್ವರನಾಗುವನು; ಪ್ರಕೃತಿಯಲ್ಲಿರುವ ಈಶ್ವರನು ಪ್ರಕೃತಿ ಸ್ವರೂಪನಾದ ಈಶ್ವರನಾಗುವನು; ಪ್ರಕೃತಿ ಸ್ವರೂಪನಾದ ಈಶ್ವರನು ಈ ದೇಹವೆಂಬ ದೇವಾಲಯದಲ್ಲಿರುವ ಈಶ್ವರನಾಗುವನು, ಕೊನೆಗೆ ಈ ದೇಹವೆಂಬ ದೇವಾಲಯುದಲ್ಲಿರುವ ಈಶ್ವರನು ಕೂಡ ಆ ದೇವಾಲಯವೇ ಆಗಿಬಿಡುತ್ತಾನೆ, ಅವನೇ ಜೀವನೂ ಮಾನವನೂ ಆಗಿಬಿಡುತ್ತಾನೆ, ಅಲ್ಲಿಗೆ ಹೇಳಬೇಕಾದ ಕೊನೆಯ ಮಾತನ್ನು ಹೇಳಿದಂತಾಗುವದು. ಋಷಿಗಳು ಎಲ್ಲೆಲ್ಲಿಯೂ ಹುಡುಕುತ್ತಿದ್ದರಲ್ಲ, ಆತನು ನಮ್ಮ ಹೃದಯದಲ್ಲಿಯೇ ಇರುತ್ತಾನೆ. ವೇದಾಂತವು "ನಿಮಗೆ ವಾಣಿಯೊಂದು ಕೇಳಬಂತೆಂಬುದೇನೋ ನಿಜವೆ, ಅದು ಇರುವ ದಿಕ್ಕನ್ನು ಮಾತ್ರ ನೀವು ತಪ್ಪಾಗಿತಿಳಿದುಕೊಂಡಿರಿ' – ಎನ್ನುತ್ತದೆ. ನೀವುಕಂಡುಕೊಂಡ ಸ್ವಾತಂತ್ರ್ಯಭಾವನೆಯೇನೋ ಸರಿಯೇ, ಆದರೆ ಅದನ್ನು ನೀವು ನಿಮ್ಮ ಹೊರಗಡೆಗೆ ಹಾಕಿದಿರಿ, ಅದೇ ನಿಮ್ಮ ತಪ್ಪು. ಅದನ್ನು ಹೆಚ್ಚು ಹೆಚ್ಚು ಹತ್ತಿರಕ್ಕೆ ತಂದುಕೊಳ್ಳಿರಿ, ಕೊನೆಗೆ ಅದು ಯಾವಾಗಲೂ ನಿಮ್ಮೊಳಗೇ ಇದ್ದಿತೆಂದೂ ಅದು ನಿಮ್ಮ ಆತ್ಮಕ್ಕೂ ಆತ್ಮನಾಗಿತ್ತೆಂದೂ ಕಂಡುಬರುತ್ತದೆ. ಈ ಮುಕ್ತಿಯೆಂಬುದು ನಿಮ್ಮ ಸ್ವಭಾವವೇ ಆಗಿತ್ತು, ಈ ಮಾಯೆಯು ನಿಮಗೆ ಎಂದೂ ಬಂಧವನ್ನುಂಟುಮಾಡಿದ್ದೇ ಇಲ್ಲ. ಈ ಪ್ರಕೃತಿಗೆ ನಿಮ್ಮನ್ನಾಳುವ ಶಕ್ತಿಯು ಎಂದಿಗೂ ಇರುವದಿಲ್ಲ. ಅದು ನಿಮ್ಮ ಕತ್ತನ್ನು ಹಿಸುಕುತ್ತಿದೆಯೆಂದೂ ಈ ಅಪಾಯದಿಂದ ಬಿಡುಗಡೆಯಾಗುವದೇ ಪರಮಗತಿಯೆಂದೂ ನೀವು ಅಂಜಿದ ಹುಡುಗನಂತೆ ಕನವರಿಸಿಕೊಳ್ಳುತ್ತಿದ್ದೀರಿ.

ಇದನ್ನು ಸುಮ್ಮನೆ ಬುದ್ಧಿಯಿಂದ ತಿಳಿದುಕೊಂಡರೆ ಸಾಲದು, ಅದನ್ನು ಮನಗಾಣಬೇಕು, ಅದನ್ನು ನಿಜವಾಗಿಸಿಕೊಳ್ಳಬೇಕು, ಈ ಪ್ರಪಂಚವನ್ನು ಹೇಗೆ ನಿಜವಾಗಿ ನೋಡುತ್ತಿರುವೆವೋ ಇದಕ್ಕಿಂತಲೂ ನಿಜವಾಗಿ ನೋಡುವಂತಾಗಬೇಕು – ಆಗ ನಾವು ಮುಕ್ತರಾಗಿರುವೆವೆಂಬುದನ್ನು ಅರಿತುಕೊಳ್ಳುವೆವು. ಆಗ, ಆಗಲೇ, ನಮ್ಮ ಕಷ್ಟಗಳೆಲ್ಲ ಮಾಯವಾಗುವವು, ಹೃದಯದ ಗ್ರಂಥಿಗಳೆಲ್ಲ ಭಿನ್ನವಾಗುವವು, ಡೊಂಕೆಲ್ಲ ನೆಟ್ಟಗಾಗುವದು; ನಾನಾತ್ವವು, ಪ್ರಕೃತಿಯು – ಎಂಬ ಭ್ರಾಂತಿಯು ತೊಲಗುವದು. ಈಗಿನಂತೆ ಮಾಯೆಯು ಭಯಂಕರವಾದ ನಿರಾಶಾಜನಕವಾದ

ಸ್ವಪ್ನವಾಗಿರುವದಿಲ್ಲ, ಅದು ಸುಂದರವಾಗಿ ತೋರುವದು ; ಈ ಭೂಲೋಕವು ಬಂಧನಾಗಾರವಾಗಿರುವದಿಲ್ಲ, ನಮ್ಮ ಆಟದ ಬಯಲಾಗುವದು. ಇಷ್ಟೇ ಅಲ್ಲ, ನಮ್ಮ ಅಪಾಯಗಳೂ ಅಡಚಣೆಗಳೂ ಎಲ್ಲಾ ಬಗೆಯ ಸಂಕಟಗಳೂ ಈಶ್ವರ ಸ್ವಭಾವವನ್ನು ತಳೆದು ತಮ್ಮ ನಿಜವಾದ ಸ್ವರೂಪದಿಂದ ತೋರಿಕೊಳ್ಳುವವು; ಪ್ರತಿಯೊಂದಕ್ಕೂ ಆಧಾರವಾಗಿ ಪ್ರತಿಯೊಂದಕ್ಕೂ ತಿರುಳಾಗಿ ಆತನೊಬ್ಬನೇ ಇರುವನೆಂದೂ ಆತನೊಬ್ಬನೇ ಪರಮಾರ್ಥವಾದ ಆತ್ಮನೆಂದೂ ತೋರಿಸಿಕೊಡುವವು.

------

# 6. ಬ್ರಹ್ಮವೂ ಸೃಷ್ಟಿಯೂ

ಅದ್ವೈತ ಸಿದ್ಧಾಂತವನ್ನು ತಿಳಿದುಕೊಳ್ಳುವದರಲ್ಲಿ ಅತ್ಯಂತ ಕಠಿನವಾಗಿರುವ ಪ್ರಶ್ನೆಯೆಂದರೆ, ಮತ್ತೆ ಮತ್ತೆ ಕೇಳಿದರೂ ಉತ್ತರವಿಲ್ಲದೆ ಯಾವಾಗಲೂ ಹಾಗೆಯೇ ಉಳಿದುಕೊಳ್ಳುವ ಪ್ರಶ್ನೆಯೆಂದರೆ, ಇದು : "ಅಪರಿಚ್ಛಿನ್ನವಾದ ಬ್ರಹ್ಮವು ಪರಿಚ್ಛಿನ್ನವಾದದ್ದು ಹೇಗೆ?" ಈಗ ಈ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇನೆ. ಇದರ ವಿಶದೀಕರಣಕ್ಕಾಗಿ ಒಂದು ಆಕೃತಿಯನ್ನು ಉಪಯೋಗಿಸುವೆನು.

| (a) ಬ್ರಹ್ಮ |
|---|
| (c)<br>ಕಾಲ,<br>ದೇಶ,<br>ನಿಮಿತ್ತ |
| (c) ಪ್ರಪಂಚ |

ಇಗೋ ಇಲ್ಲಿರುವದು ಬ್ರಹ್ಮ (a); ಇಗೋ ಇದು ಪ್ರಪಂಚ (b); ಬ್ರಹ್ಮವು ಪ್ರಪಂಚವಾಗಿದೆ. ಪ್ರಪಂಚವೆಂದರೆ ಭೌತಿಕ ಪ್ರಪಂಚವೆಂದು ಮಾತ್ರವೇ ಅರ್ಥವಲ್ಲ, ಮಾನಸ ಪ್ರಪಂಚವೂ ಆಧ್ಯಾತ್ಮಿಕ ಪ್ರಪಂಚವೂ – ಎಂದರೆ ಭೂಲೋಕವೂ ಭುವರಾದಿಲೋಕಗಳೂ, ಹೆಚ್ಚೇಕೆ? ಯಾವಯಾವದು ಇದೆಯೋ ಅದೆಲ್ಲವೂ ಎಂದರ್ಥ. ಮನಸ್ಸೆಂಬುದು ಒಂದಾನೊಂದು ವಿಕಾರದ ಹೆಸರು, ಶರೀರವೆಂಬುದು ಮತ್ತೊಂದು ವಿಕಾರದ ಹೆಸರು ಇತ್ಯಾದಿ. ಈ ವಿಕಾರಗಳೆಲ್ಲ ಒಟ್ಟುಗೂಡಿ ನಮ್ಮ ಪ್ರಪಂಚವಾಗಿರುತ್ತದೆ. ಈ ಬ್ರಹ್ಮವು (a), ದೇಶಕಾಲನಿಮಿತ್ತ (c), ಗಳ ಮೂಲವಾಗಿ ಹೊರಕ್ಕೆ ಬಂದು ಈ ಪ್ರಪಂಚವಾಗಿರುತ್ತದೆ. ಹೀಗೆಂಬುದೇ ಅದ್ವೈತದ ಪ್ರಧಾನವಾದವು.* ದೇಶ, ಕಾಲ, ನಿಮಿತ್ತ – ಇವು ಒಂದು ಗಾಜಿನಂತಿವೆ. ಈ ಮೂರರ ಮೂಲಕ ಬ್ರಹ್ಮವು ಕಾಣಬರುತ್ತದೆ. ಕೆಳಭಾಗದಲ್ಲಿ ಅದು ಕಂಡುಬಂದಾಗ ವಿಶ್ವವಾಗಿ ತೋರುತ್ತದೆ.

---

* ಬ್ರಹ್ಮವು ಕಾಲದೇಶನಿಮಿತ್ತಗಳ ಮೂಲಕವಾಗಿ ಬಂದು ಪ್ರಪಂಚವಾಗಿ ತೋರುತ್ತಿದೆಯೆಂಬುದು ಇಲ್ಲಿರುವ ವಾಕ್ಯದ ಅರ್ಥವೆಂತ ತೋರುತ್ತಿದ್ದರೂ ಈ ಅಕ್ಷರಾರ್ಥವನ್ನು ಬಲವಾಗಿ ಹಿಡಿಯಬಾರದು. ಏಕೆಂದರೆ ಕಾಲದೇಶನಿಮಿತ್ತಗಳೂ ಪ್ರಪಂಚದಲ್ಲಿಯೇ ಸೇರಿರುತ್ತವೆ. ಕಾಲದೇಶ ನಿಮಿತ್ತಗಳೇ ಪ್ರಪಂಚದ ಸ್ವರೂಪವೆಂದರೂ ಸಲ್ಲುತ್ತದೆ. ಏಕೆಂದರೆ ಕಾಲದೇಶ ನಿಮಿತ್ತ ಭಾವನೆಯಿಲ್ಲದೆ ಪ್ರಪಂಚವನ್ನಾಗಲಿ ಅದರಲ್ಲಿರುವ ವಸ್ತುಗಳನ್ನಾಗಲಿ ಮನಸ್ಸಿನಿಂದ ಚಿಂತಿಸುವದಕ್ಕೆ ಕೂಡ ಆಗುವ ಹಾಗಿರುವದಿಲ್ಲ. ಬ್ರಹ್ಮವು ಅವಿದ್ಯಾದೃಷ್ಟಿಯಿಂದ ದೇಶಕಾಲನಿಮಿತ್ತರೂಪವಾಗಿರುವ ಪ್ರಪಂಚವಾಗಿ ತೋರುವದೇ ಹೊರತು ಪರಮಾರ್ಥವಾಗಿ ಪ್ರಪಂಚವಾಗಿರುವದಿಲ್ಲ – ಎಂಬುದೇ ಅದ್ವೈತದ ಪ್ರಧಾನೋಪದೇಶವು.

ಇದರಿಂದ ಕೂಡಲೇ ನಮಗೆ ಹೊಳೆಯುವದೇನೆಂದರೆ ಬ್ರಹ್ಮದಲ್ಲಿ ಕಾಲವಾಗಲಿ, ದೇಶವಾಗಲಿ, ನಿಮಿತ್ತವಾಗಲಿ ಇರುವದಿಲ್ಲ. ಅದರಲ್ಲಿ ಅಂತಃಕರಣವಿಲ್ಲ, ವಿಚಾರವಿಲ್ಲ; ಆದ್ದರಿಂದ ಅಲ್ಲಿ ಕಾಲಭಾವನೆಯು ಇರಲಾರದು. ಅದರಲ್ಲಿ ಬಾಹ್ಯವಿಕಾರವಾವುದೂ ಇಲ್ಲವಾದ್ದರಿಂದ ಅದರಲ್ಲಿ ದೇಶಭಾವನೆಯೂ ಇರಲಾರದು. ಚಲನೆಯೆಂದೂ ಕಾರ್ಯಕಾರಣಭಾವವೆಂದೂ ನಾವು ಕರೆಯುತ್ತೇವಲ್ಲ, ಅದು ಒಂದೇ ಒಂದು ತತ್ತ್ವವಿರುವ ಕಡೆಯಲ್ಲಿ ಇರಲಾರದು. ಕಾರ್ಯಕಾರಣ ಭಾವವೆಂದು ನಾವು ಕರೆಯುತ್ತೇವಲ್ಲ, ಅದು ಬ್ರಹ್ಮವು ವ್ಯಾವಹಾರಿಕ ಸ್ಥಿತಿಗಿಳಿದ ಮೇಲೆಯೇ ಪ್ರಾರಂಭವಾಗುತ್ತದೆ, ಅದಕ್ಕಿಂತ ಮೊದಲಲ್ಲ - ಪರಮಾರ್ಥ ದೃಷ್ಟಿಯಿಂದ ಹೀಗೆ ಹೇಳುವದೂ ಯುಕ್ತವಲ್ಲವೆಂಬುದು ತಿಳಿದೇ ಇದೆ - ಎಂಬುದನ್ನು ನಾವು ಗ್ರಹಿಸಿ ನಮ್ಮ ಮನಸ್ಸುಗಳಲ್ಲಿ ಇದು ಚೆನ್ನಾಗಿ ಬಿಂಬಿಸುವಂತೆ ಮಾಡಿಕೊಳ್ಳಬೇಕು; ನಮ್ಮ ಸಂಕಲ್ಪ, ನಮ್ಮ ಕಾಮ - ಮುಂತಾದವುಗಳೆಲ್ಲ ಯಾವಾಗಲೂ ಆಮೇಲೆಯೇ ಉಂಟಾಗುವವೆಂಬುದನ್ನು ನಾವು ಗ್ರಹಿಸಬೇಕು.

ಷೋಪನ್‌ಹ್ಯಾವರ್ (Schopenhauer) ಎಂಬಾತನ ಜಿಜ್ಞಾಸಾ ಕ್ರಮದಲ್ಲಿ ವೇದಾಂತವನ್ನು ವಿವರಿಸುವದರಲ್ಲಿ ಒಂದು ತಪ್ಪಾಗಿರುತ್ತದೆಯೆಂದು ನನಗೆ ತೋರುವದು; ಏಕೆಂದರೆ ಅದರಲ್ಲಿ ಸಂಕಲ್ಪವೇ ಸರ್ವವೂ ಎಂದು ತೋರಿಸುವದಕ್ಕೆ ಹೊರಟಿರುತ್ತದೆ. ಆದರೆ ಬ್ರಹ್ಮವನ್ನು ಸಂಕಲ್ಪವೆಂದು ಹೇಳುವದಕ್ಕೆ ಬರುವದೇ ಇಲ್ಲ; ಸಂಕಲ್ಪವೆಂಬುದು ವಿಕಾರಿಯಾಗಿಯೂ ಪ್ರಾತೀತಿಕವಾಗಿಯೂ ಇರುತ್ತದೆ. ಕಾಲ, ದೇಶ, ಕಾರ್ಯಕಾರಣಭಾವ - ಇವುಗಳ ಮೇಲೆ ಬರೆದಿರುವ ಗೀಟಿನ ಮೇಲುಗಡೆಯಲ್ಲಿ ವಿಕಾರವಿರುವದಿಲ್ಲ, ಚಲನೆಯಿರುವದಿಲ್ಲ. ಆ ಗೀಟಿನ ಕೆಳಭಾಗದಲ್ಲಿಯೇ ಬಾಹ್ಯ ಚಲನೆಯೂ ಮನನವೆಂಬ ಅಂತರಚಲನೆಯೂ ಮೊದಲಾಗುತ್ತವೆ. ಆಚೆಯ ಕಡೆಯಲ್ಲಿ ಸಂಕಲ್ಪವೆಂಬುದೇ ಇರುವದಿಲ್ಲ. ಆದಕಾರಣ ಸಂಕಲ್ಪವೂ ಈ ಪ್ರಪಂಚಕ್ಕೆ ಕಾರಣವಾಗಲಾರದು. ಇನ್ನೂ ಸ್ವಲ್ಪ ಹತ್ತಿರಕ್ಕೆ ಬಂದು ನೋಡಿದರೆ ನಮ್ಮ ಶರೀರಗಳಲ್ಲಿ ಆಗುವ ಪ್ರತಿಯೊಂದು ಚಲನೆಗೂ ಸಂಕಲ್ಪವು ಕಾರಣವಾಗಿರುವದಿಲ್ಲವೆಂದು ಕಂಡುಬರುತ್ತದೆ. ಇಗೋ, ಈ ಕುರ್ಚಿಯನ್ನು ನಾನು ಅಲುಗಾಡಿಸುತ್ತೇನೆ; ಇಲ್ಲಿ ಈ ಚಲನೆಗೆ ನನ್ನ ಸಂಕಲ್ಪವೇ ಕಾರಣವಾಗಿರುತ್ತದೆ. ಈ ಸಂಕಲ್ಪವು ಆ ಕಡೆಯಲ್ಲಿ ಮಾಂಸ ಖಂಡದ ಚಲನೆಯಾಗಿ ಪ್ರಕಟವಾಗುತ್ತಿದೆ. ಆದರೆ ಈ ಕುರ್ಚಿಯನ್ನು ಯಾವ ಶಕ್ತಿಯು ಅಲುಗಾಡಿಸುತ್ತಿದೆಯೋ ಅದೇ ಶಕ್ತಿಯೇ ಹೃದಯ, ಶ್ವಾಸಕೋಶ - ಮುಂತಾದವುಗಳನ್ನು ಚಲಿಸುವಂತೆ ಮಾಡುತ್ತಿದೆ, ಆದರೆ ಅದು ಸಂಕಲ್ಪದ ಮೂಲಕವಾಗಿ ಈ ಕೆಲಸವನ್ನು ಮಾಡುತ್ತಲಿಲ್ಲ. ಶಕ್ತಿಯು ಎರಡು

ಸಂದರ್ಭಗಳಲ್ಲಿಯೂ ಒಂದೇ ಎಂದು ಇಟ್ಟುಕೊಂಡರೆ, ಸಂವೇದನ (Consciousness) ಸ್ಥಿತಿಗೆ ಏರಿದ ಮೇಲೆಯೇ ಅದು ಸಂಕಲ್ಪವೆನಿಸಿ-ಕೊಳ್ಳುವದೆಂದು ಹೇಳಬೇಕು; ಈ ಸ್ಥಿತಿಗೆ ಅದು ಏರುವದಕ್ಕೆ ಮುಂಚೆಯೂ ಅದನ್ನು ಸಂಕಲ್ಪವೆಂದು ಕರೆಯುವದು ಅಪಪ್ರಯೋಗವಾಗುವದು. ಇದರಿಂದ ಷೋಪನ್‌ಹ್ಯಾವರನ ತತ್ತ್ವ ಶಾಸ್ತ್ರದಲ್ಲಿ ಎಷ್ಟೋ ಅವ್ಯವಸ್ಥೆಯಾಗಿರುತ್ತದೆ. ಒಂದು ಕಲ್ಲು ಕೆಳಕ್ಕೆ ಬಿದ್ದರೆ ನಾವು 'ಇದೇಕೆ'? ಎಂದು ಕೇಳುತ್ತೇವೆ. ಯಾವದೊಂದು ಘಟನೆಯೂ ಕಾರಣವಿಲ್ಲದೆ ಸಂಭವಿಸಲಾರದು – ಎಂದಿಟ್ಟುಕೊಂಡರೇ ಈ ಪ್ರಶ್ನೆಯನ್ನು ಹಾಕುವದು ಸರಿಯಾಗುತ್ತದೆ. ಇದನ್ನು ನೀವುಗಳು ಮನಸ್ಸಿಗೆ ಚೆನ್ನಾಗಿ ಹತ್ತಿಸಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ; ಏಕೆಂದರೆ ಯಾವದಾದರೂ ಹೀಗೇಕೆ ಆಗುತ್ತದೆ? – ಎಂದು ನಾವು ಕೇಳುವಾಗ ಏನು ಸಂಭವಿಸಿದರೂ ಅದಕ್ಕೊಂದು, ಏಕೆ ಇರಬೇಕೆಂದು, ಎಂದರೆ ಅದರ ಪೂರ್ವದಲ್ಲಿ ಯಾವುದೋ ಒಂದು ಕಾರಣವಾಗಿದ್ದುಕೊಂಡು ಕೆಲಸಮಾಡಿರಬೇಕೆಂದು, ನಾವು ಒಪ್ಪಿಕೊಳ್ಳುತ್ತಿದೇವೆ. ಈ ಪೌರ್ವಾಪರ್ಯವನ್ನೇ ನಾವು ಕಾರ್ಯಕಾರಣ ನಿಯಮವೆಂದು ಹೇಳುತ್ತಿರುವದು, ಇದರಿಂದ ಈ ಪ್ರಪಂಚದಲ್ಲಿ ಪ್ರತಿಯೊಂದೂ ಒಂದಕ್ಕೆ ಕಾರಣವಾಗಿಯೂ ಮತ್ತೊಂದಕ್ಕೆ ಕಾರ್ಯವಾಗಿಯೂ ಇರುವದೆಂದು ಹೇಳಿದಂತಾಗುತ್ತದೆ. ಅದು ತನ್ನ ತರುವಾಯ ಬರುವ ಕೆಲವು ಪದಾರ್ಥಗಳಿಗೆ ಕಾರಣವಾಗಿರುತ್ತದೆ. ತನ್ನ ಹಿಂದೆ ಬರುವ ಮತ್ತೆ ಯಾವದೋ ಒಂದಕ್ಕೆ ತಾನೂ ಕಾರ್ಯವಾಗಿರುತ್ತದೆ; ಇದಕ್ಕೆ ಕಾರ್ಯಕಾರಣ ನಿಯಮವೆಂದು ಹೆಸರು. ಇದು ನಮ್ಮ ಆಲೋಚನೆಯಲ್ಲೆಲ್ಲ ಇರಬೇಕಾದ ಆವಶ್ಯಕ ಉಪಾಧಿಯಾಗಿರುತ್ತದೆ. ಈ ಪ್ರಪಂಚದಲ್ಲಿರುವ ಪ್ರತಿಯೊಂದು ಅಣುವೂ, ಅದು ಏನೇ ಆಗಿರಲಿ, ಬೇರೆ ಪ್ರತಿಯೊಂದು ಅಣುವಿಗೂ ಸಂಬಂಧವಾಗಿಯೇ ಇರಬೇಕೆಂದು ನಾವು ನಂಬಿರುತ್ತೇವೆ. ಈ ಭಾವನೆಯು ಹೇಗೆ ಉಂಟಾಯಿತೆಂಬ ಬಗ್ಗೆ ಬಹಳವಾಗಿ ಚರ್ಚೆಯು ನಡೆದಿರುತ್ತದೆ. ಯೂರೋಪಿನಲ್ಲಿ ಇದು ಮಾನವನಲ್ಲಿ ಸ್ವಭಾವವಾಗಿಯೇ ಇರಬೇಕೆಂದು ಅಭಿಪ್ರಾಯಪಡುವ **ಸ್ವಾನುಭವವಾದಿಗಳೂ (intuitive philosophers)** ಆಗಿಹೋಗಿರುತ್ತಾರೆ.* ಇದು ಬಾಹ್ಯಾನುಭವ ದಿಂದ ಬಂದಿರುವದೆಂದು ಹೇಳುವ ಮತ್ತೆ ಬೇರೆ ವಾದಿಗಳೂ ಬಂದಿರುತ್ತಾರೆ.

* ದೇಶಕಾಲನಿಮಿತ್ತಭಾವಗಳು ಮನುಷ್ಯನ ಮನಸ್ಸಿನಲ್ಲಿ ಸ್ವಭಾವವಾಗಿಯೇ ಇರುವವೇ ಹೊರತು ಹೊರಗಿನ ವಸ್ತುಗಳ ಅನುಭವದಿಂದ ಬರುವದಿಲ್ಲ–ಎಂಬುದು ಸ್ವಾನುಭವವಾದಿಗಳ ಮತವು. ದೇಶಕಾಲನಿಮಿತ್ತಭಾವನೆಗಳ ಸೋಂಕು ಒಂದಿಷ್ಟೂ ಇಲ್ಲದೆ ಆತ್ಮನು ಇರುವದು ಸುಷುಪ್ತಿ ಸಮಾಧ್ಯಾದಿಗಳಲ್ಲಿ ಅನುಭವಕ್ಕೆ ಬರುತ್ತಿರುವದರಿಂದ ಈ ಮೂರರ ಅನುಭವವು ಸ್ವಾಭಾವಿಕವೆ, ಆಗಂತುಕವೆ?–ಎಂಬ ವಿಚಾರವು ಪರಮಾರ್ಥತತ್ತ್ವನಿರ್ಧಾರಣೆಗೆ ಅವಶ್ಯವಲ್ಲವೆಂದು ಹೇಳಬಹುದು

ಈ ಚರ್ಚೆಯು ಇನ್ನೂ ತೀರ್ಮಾನವಾಗಿಯೇ ಇರುವದಿಲ್ಲ. ಈ ವಿಷಯದಲ್ಲಿ ವೇದಾಂತದ ವಾದವು ಏನಿರುವದೆಂಬುದನ್ನು ಮುಂದೆ ಕಂಡುಕೊಳ್ಳೋಣವಂತೆ. ಮೊದಲು ನಾವು ಇಲ್ಲಿ ಇಷ್ಟನ್ನು ತಿಳಿದುಕೊಳ್ಳಬೇಕು: 'ಏಕೆ'? ಎಂಬ ಪ್ರಶ್ನೆಯನ್ನು ಕೇಳುವದೆಂದರೇ ನಮ್ಮ ಸುತ್ತಲೂ ಇರುವ ಪದಾರ್ಥಗಳಲ್ಲಿ ಪ್ರತಿಯೊಂದಕ್ಕೂ ಪೂರ್ವದಲ್ಲಿ ಮತ್ತೆ ಬೇರೆ ಪದಾರ್ಥಗಳು ಆಗಿಹೋಗಿರುವವೆಂದೂ ಅದರ ತರುವಾಯ ಮತ್ತೆ ಬೇರೆ ಬರುವವೆಂದೂ ಇಟ್ಟುಕೊಂಡಂತೆ. ಈ ವಿಚಾರದಲ್ಲಿ ಅಡಕವಾಗಿರುವ ಮತ್ತೊಂದು ನಂಬಿಕೆಯೇನೆಂದರೆ ಈ ಪ್ರಪಂಚದಲ್ಲಿ ಯಾವದೊಂದೂ ಸ್ವತಂತ್ರವಾಗಿರುವದಿಲ್ಲ, ಪ್ರತಿಯೊಂದರ ಮೇಲೂ ಅದರ ಹೊರಗಿನ ಮತ್ತೊಂದು ಪದಾರ್ಥದ ವ್ಯಾಪಾರವು ನಡೆಯುತ್ತಿದೆ – ಎಂಬುದು. ಪರಸ್ಪರಾವಲಂಬನೆಯೆಂಬುದು ಈ ಇಡಿಯ ವಿಶ್ವಕ್ಕೇ ಅನ್ವಯಿಸುವ ನಿಯಮವು. ಬ್ರಹ್ಮವು ಏತರಿಂದಾಯಿತು? – ಎಂದು ಕೇಳಿದರೆ ನಾವು ಎಂಥ ತಪ್ಪನ್ನು ಮಾಡಿದಂತಾಗುತ್ತದೆ! ಈ ಪ್ರಶ್ನೆಯನ್ನು ಕೇಳಬೇಕಾದರೆ ಬ್ರಹ್ಮವೂ ಏತರಿಂದಲೋ ಬದ್ಧವಾಗಿದೆಯೆಂದು, ಅದೂ ಏನನ್ನೋ ಅವಲಂಬಿಸಿಕೊಂಡಿದೆಯೆಂದು – ಇಟ್ಟುಕೊಳ್ಳಬೇಕಾಗುವದು. ಹೀಗೆಂದು ಇಟ್ಟುಕೊಂಡರೆ ಬ್ರಹ್ಮವನ್ನೂ ವಿಶ್ವದ ಮಟ್ಟಕ್ಕೇ ಇಳಿಸಿದಂತ ಆಗುತ್ತದೆ. ಏಕೆಂದರೆ ಬ್ರಹ್ಮದಲ್ಲಿ ಕಾಲವಾಗಲಿ, ದೇಶವಾಗಲಿ, ಕಾರ್ಯಕಾರಣವಾಗಲಿ – ಇರುವದೇ ಇಲ್ಲ. ಎಲ್ಲವೂ ಒಂದೇ ಆಗಿರುತ್ತದೆ. ಯಾವದು ತಾನೊಂದೇ ಇರುವದೋ ಅದಕ್ಕೆ ಯಾವದೊಂದು ಕಾರಣವೂ ಇರಲಾರದು. ಯಾವದು ಸ್ವತಂತ್ರವಾಗಿರುವದೋ ಅದಕ್ಕೆ ಯಾವದೊಂದು ಕಾರಣವೂ ಇರಲಾರದು; ಹಾಗಿಲ್ಲದಿದ್ದರೆ ಅದು ಸ್ವತಂತ್ರವಾಗಿರದೆ ಬದ್ಧವಾಗಿಯೇ ಇರಬೇಕಾಗುವದು. ಯಾವದು ಸಾಪೇಕ್ಷವಾಗಿರುವದೋ ಅದು ಸ್ವತಂತ್ರವಾಗಿರ-ಲಾರದು. ಆದ್ದರಿಂದ ಅನಂತವಾಗಿರುವ ಬ್ರಹ್ಮವು ಪರಿಚ್ಛಿನ್ನವಾಗಿರುವ ಪ್ರಪಂಚವಾಗಿ ಏತಕ್ಕೆ ಆಯಿತು? – ಎಂಬ ಪ್ರಶ್ನೆಯೇ ಹೊಂದುವದಿಲ್ಲ. ಏಕೆಂದರೆ ಅದು ವ್ಯಾಹತವಾಗಿರುತ್ತದೆ – ಎಂದು ಸಿದ್ಧವಾಯಿತು.

ಈ ಸೂಕ್ಷ್ಮಗಳನ್ನು ಬಿಟ್ಟು ನಮ್ಮ ವ್ಯವಹಾರದ ತರ್ಕಕ್ಕೆ ಬಂದು ಲೋಕ ದೃಷ್ಟಿಯನ್ನೇ ಅನುಸರಿಸಿದರೆ ಬ್ರಹ್ಮವು* ಸಾಪೇಕ್ಷವಾದ ಪ್ರಪಂಚವಾದದ್ದು ಹೇಗೆ? – ಎಂಬುದನ್ನು ತಿಳಿಯಲು ಇಚ್ಛಿಸುವಾಗ ಹೀಗಾಗುವದೆನ್ನುವದನ್ನು ಮತ್ತೊಂದು ಬಗೆಯಿಂದಲೂ ಕಂಡುಕೊಳ್ಳಬಹುದಾಗಿದೆ. ನಮಗೆ ಈ ಪ್ರಶ್ನೆಯ ಉತ್ತರವು

* ಈ ಪ್ರಕರಣದಲ್ಲಿ ಸ್ವಾಮಿಗಳು ಬ್ರಹ್ಮ ಎಂಬ ಶಬ್ದಕ್ಕೆ Absolute (ನಿರಪೇಕ್ಷ) ಎಂಬ ಇಂಗ್ಲಿಷು ಶಬ್ದವನ್ನುಪಯೋಗಿಸಿರುತ್ತಾರೆ. ಅಪರಿಚ್ಛಿನ್ನವಾದ ನಿರಪೇಕ್ಷವಾದ ಸತ್ತೆಯನ್ನೇ ಸಂಸ್ಕೃತದಲ್ಲಿ ಬ್ರಹ್ಮವೆಂದು ಕರೆಯುವದರಿಂದ ನಮ್ಮವರಿಗೆಲ್ಲ ತಿಳಿಯುವ ಬ್ರಹ್ಮಶಬ್ದವನ್ನೇ ಅನುವಾದದಲ್ಲಿ ಉಪಯೋಗಿಸುತ್ತಾರೆ.

ತಿಳಿಯಿತೆಂದು ಇಟ್ಟುಕೊಳ್ಳಿ. ಆಗ ಬ್ರಹ್ಮವು ಬ್ರಹ್ಮವಾಗಿರುತ್ತಿತ್ತೆ ? ಅದು ಸಾಪೇಕ್ಷವಾಗಿ ಬಿಡುತ್ತಿತ್ತು. ನಮ್ಮಗಳ ಸಾಮಾನ್ಯಭಾವನೆಯಂತೆ ತಿಳಿವಳಿಕೆಯೆಂದರೇನರ್ಥ? ಯಾವದು ನಮ್ಮ ಮನಸ್ಸಿನಿಂದ ಪರಿಚ್ಛಿನ್ನವಾಗಿರುವದೋ ಅದನ್ನೇ ನಾವು ತಿಳಿಯುತ್ತೇವೆ. ಅದು ನಮ್ಮ ಮನಸ್ಸಿನಿಂದಾಚೆಗೆ ಇರುವಾಗ ಅದು ತಿಳಿವಳಿಕೆಯೆನ್ನಿಸುವದೇ ಇಲ್ಲ. ಆದರೆ ಬ್ರಹ್ಮವು ಮನಸ್ಸಿನ ಅಳತೆಗೆ ಸಿಕ್ಕರೆ ಅದು ಬ್ರಹ್ಮವೇ ಆಗುವದಿಲ್ಲ. ಅದೂ ಪರಿಚ್ಛಿನ್ನವೇ ಆಗಿಬಿಡುತ್ತದೆ. ಯಾವಯಾವದು ಮನಸ್ಸಿನ ಅಳತೆಗೆ ಸಿಕ್ಕುವದೋ ಅದೆಲ್ಲವೂ ಪರಿಚ್ಛಿನ್ನ ವಸ್ತುವೇ. ಆದ್ದರಿಂದ ಬ್ರಹ್ಮವನ್ನು ಅರಿಯುವದೆಂಬುದು ವ್ಯಾಹತವೆಂದು ಮತ್ತೊಮ್ಮೆ ಸಿದ್ಧವಾದಂತಾಯಿತು. ಆದ್ದರಿಂದಲೇ ಈ ಪ್ರಶ್ನೆಗೆ ಎಂದೂ ಉತ್ತರವನ್ನು ಹೇಳುವದಕ್ಕೆ ಆಗಿರುವದಿಲ್ಲ; ಏಕೆಂದರೆ ಇದಕ್ಕೆ ಉತ್ತರವನ್ನು ಕೊಟ್ಟರೆ ಬ್ರಹ್ಮವೇ ಇರುವದಿಲ್ಲ. ಈಶ್ವರನು ಜ್ಞಾತನಾದರೆ ಅವನು ಈಶ್ವರನೇ ಆಗಲಾರನು, ಅವನೂ ನಮ್ಮಂತೆಯೇಪರಿಚ್ಛಿನ್ನನಾಗಿಬಿಡುತ್ತಾನೆ. ಅವನು ಜ್ಞಾತನಾಗಲೇ ಆರನು, ಅವನು ಯಾವಾಗಲೂ ಅಜ್ಞೇಯನಾಗಿಯೇ ಇರುತ್ತಾನೆ.

ಆದರೆ ಅದ್ವೈತದಲ್ಲಿ ಹೇಳಿರುವದೇನೆಂದರೆ ಈಶ್ವರನು ಜ್ಞೇಯಕ್ಕಿಂತಲೂ ಹೆಚ್ಚಿನವನಾಗಿರುತ್ತಾನೆ. ಇದೊಂದು ತಿಳಿದುಕೊಳ್ಳಬೇಕಾದ ಮಹಾವಿಷಯವು. ಅಜ್ಞಾನವಾದಿಗಳು ಹೇಳುವಂತೆಯೇ ಈಶ್ವರನುಅಜ್ಞೇಯನೆಂಬ ಭಾವನೆ ಯನ್ನಿಟ್ಟುಕೊಂಡು ನೀವು ಮನೆಗೆ ಹೋಗಕೂಡದು. ಉದಾಹರಣೆಗೆ ಇಗೋ ಇಲ್ಲಿ ಒಂದು ಕುರ್ಚಿಯಿದೆ, ಅದು ನಮಗೆ ಜ್ಞಾತವಾಗಿದೆ. ಆದರೆ ಆಕಾಶಕ್ಕೂ ಆಚೆ ಏನಿದೆ, ಅಲ್ಲಿ ಜನರು ಇದಾರೆಯೋ ಇಲ್ಲವೇ?– ಎಂಬುದು ಅಜ್ಞೇಯವಾಗಿದೆಯೆನ್ನಬಹುದು. ಆದರೆ ಈ ಅರ್ಥದಲ್ಲಿ ಈಶ್ವರನು ಜ್ಞಾತನೂ ಅಲ್ಲ, ಅಜ್ಞೇಯನೂ ಅಲ್ಲ; ಅವನು ಜ್ಞಾತವಾಗಿರುವದಕ್ಕಿಂತಲೂ ಹೆಚ್ಚಿನ ಒಂದು ತತ್ತ್ವವಾಗಿರುತ್ತಾನೆ. ಈಶ್ವರನು ಅಜ್ಞಾತನು, ಅಜ್ಞೇಯನು – ಎಂಬುದಕ್ಕೆ ಇದೇ ಅರ್ಥ. ಕೆಲಕೆಲವು ವಿಚಾರಗಳು ಅಜ್ಞಾತವಾಗಿವೆ, ಅಜ್ಞೇಯವಾಗಿವೆ – ಎನ್ನುತ್ತೇವಲ್ಲ, ಆ ಅರ್ಥದಲ್ಲಿ ಈ ಮಾತನ್ನುಪಯೋಗಿಸಿರುವದಿಲ್ಲ. ಈಶ್ವರನು ಜ್ಞಾತಕ್ಕಿಂತಲೂ ಹೆಚ್ಚಿನವನಾಗಿರುತ್ತಾನೆ. ಈ ಕುರ್ಚಿಯು ಜ್ಞಾತವಾಗಿದೆ; ಆದರೆ ಈಶ್ವರನು ಅದಕ್ಕಿಂತಲೂ ಎಷ್ಟೋ ಹೆಚ್ಚಿನ ಸ್ವರೂಪದವನು, ಏಕೆಂದರೆ ಅವನಲ್ಲಿಯೇ, ಅವನ ಮೂಲಕವೇ, ನಾವು ಈ ಕುರ್ಚಿಯನ್ನು ಅರಿತುಕೊಳ್ಳಬೇಕಾಗಿದೆ. ಆತನೇ ಸಾಕ್ಷಿಯು, ಎಲ್ಲಾ ತಿಳಿವಳಿಕೆಗೂ ನಿತ್ಯ ಸಾಕ್ಷಿಯು. ನಾವು ಏನನ್ನು ಅರಿತುಕೊಂಡರೂ ಆತನಲ್ಲಿಯೇ, ಆತನ ಮೂಲಕವೇ, ಅರಿತುಕೊಳ್ಳಬೇಕಾಗಿದೆ. ಅವನು ನಮ್ಮ ಆತ್ಮನಿಗೂ ತಿರುಳಾಗಿರುತ್ತಾನೆ. ಅವನು ಈ ಅಹಂಕಾರದ, ಈ ನಾವೆಂಬುದರ, ತಿರುಳೇ ಆಗಿರುತ್ತಾನೆ. ಆ

ನಾನೆಂಬುದರಲ್ಲಿಯೇ, ಅದರ ಮೂಲಕವೇ, ಅಲ್ಲದೆ ಮತ್ತೆ ಹೇಗೂ ಏನನ್ನೂ ಅರಿಯುವದು ನಮ್ಮಿಂದ ಆಗಲಾರದು. ಆದ್ದರಿಂದ ನೀವು ಏನನ್ನು ಅರಿತುಕೊಂಡರೂ ಬ್ರಹ್ಮದಲ್ಲಿಯೇ, ಬ್ರಹ್ಮದ ಮೂಲಕವೇ, ಅರಿತುಕೊಳ್ಳ ಬೇಕಾಗಿರುವದು, ಕುರ್ಚಿಯನ್ನು ಅರಿಯಬೇಕಾದರೆ ಈಶ್ವರನಲ್ಲಿಯೇ, ಈಶ್ವರನ ಮೂಲಕವೇ, ಅದನ್ನು ಅರಿಯಬೇಕಾಗಿರುವದು. ಈ ರೀತಿಯಲ್ಲಿ ಈಶ್ವರನು ಕುರ್ಚಿಗಿಂತಲೂ ಎಷ್ಟೋ ಹೆಚ್ಚು ಹತ್ತಿರವಿರುತ್ತಾನೆ, ಆದರೂ ಅವನು ಅದಕ್ಕಿಂತ ಎಷ್ಟೋ ಹೆಚ್ಚಿನ ತತ್ತ್ವವಿಶೇಷವಾಗಿರುತ್ತಾನೆ. ಆತನು ಜ್ಞಾತನೂ ಅಲ್ಲ, ಅಜ್ಞಾತನೂ ಅಲ್ಲ; ಇವೆರಡಕ್ಕಿಂತಲೂ ಅನಂತವಾಗಿ ಹೆಚ್ಚಾದ ತತ್ತ್ವವಾಗಿರುತ್ತಾನೆ. ಆತನು ನಿಮ್ಮಗಳ ಆತ್ಮನೇ ಆಗಿರುತ್ತಾನೆ. "ಈ ಆನಂದ ರೂಪನಾದ ಪರಮಾತ್ಮನು ಪ್ರಪಂಚವನ್ನೆಲ್ಲ ತುಂಬಿರದಿದ್ದರೆ ಇದರಲ್ಲಿ ಯಾವನು ತಾನೆ ಒಂದು ಕ್ಷಣವಾದರೂ ಉಸಿರಾಡಿಯಾನು?" (ತೈ) ಏಕೆಂದರೆ ಆತನಲ್ಲಿಯೇ, ಆತನ ಮೂಲಕವೇ, ನಾವು ಉಸಿರಾಡುತ್ತಿರುವೆವು; ಆತನಲ್ಲಿಯೇ, ಆತನ ಮೂಲಕವೇ, ನಾವು ಇದ್ದುಕೊಂಡಿರುವೆವು. ಎಂದರೆ ಆತನು ಒಂದು ಕಡೆ ನಿಂತುಕೊಂಡು ನಮ್ಮ ರಕ್ತಚಲನೆಯನ್ನುಂಟುಮಾಡುತ್ತಿದ್ದಾನೆಂದು ಅಭಿಪ್ರಾಯವಲ್ಲ; ಆತನು ಇದೆಲ್ಲಕ್ಕೂ ತಿರುಳು, ನನ್ನ ಆತ್ಮನಿಗೂ ಆತ್ಮನು – ಎಂದಭಿಪ್ರಾಯ. ಅವನನ್ನು ಅರಿತಿರುವೆನೆಂದು ನೀವು ಹೇಳುವದು ಸಾಧ್ಯವೇ ಅಲ್ಲ, ಏಕೆಂದರೆ ಹಾಗೆ ಹೇಳಿದರೆ ಅವನನ್ನು ಕೆಳಕ್ಕಿಳಿಸಿದಂತಾಗುವದು. ನೀವು ನಿಮ್ಮ ಆತ್ಮನನ್ನು ಬಿಟ್ಟು ಆಚೆಗೆ ಹೋಗಲಾರಿರಿ, ಆದ್ದರಿಂದ ನೀವು ಅವನನ್ನು ಅರಿತುಕೊಳ್ಳಲಾರಿರಿ, ತಿಳವಳಿಕೆಯೆಂದರೆ ವಿಷಯೀಕರಿಸುವದು. ಉದಾಹರಣೆಗೆ ಸ್ಮರಣೆಯಲ್ಲಿ ನೀವು ಅನೇಕ ವಿಷಯಗಳನ್ನು ವಿಷಯವಾಗಿ ಮಾಡಿಕೊಳ್ಳುತ್ತಿರುವಿರಿ, ಅವನನ್ನು ನಿಮ್ಮ ಹೊರಕ್ಕೆ ಹಾಕುತ್ತಿರುವಿರಿ. ನಮಗೆ ಆಗುವ ಸ್ಮರಣೆಯೆಲ್ಲ, ನಾವು ನೋಡಿರುವ ವಸ್ತುಗಳೆಲ್ಲ, ನಾವು ಅರಿಯುವ ವಸ್ತುಗಳೆಲ್ಲ, ನಮ್ಮ ಮನಸ್ಸಿನಲ್ಲಿಯೇ ಇರುತ್ತವೆ; ಈ ವಸ್ತುಗಳ ಚಿತ್ರಗಳು, ವಾಸನೆಗಳು ನಮ್ಮ ಮನಸ್ಸಿನಲ್ಲಿಯೇ ಇರುತ್ತವೆ; ಅವುಗಳನ್ನು ಕುರಿತು ಆಲೋಚನೆ ಮಾಡುವದಕ್ಕೆ ಹೊರಟಾಗ, ಅವನ್ನು ಅರಿಯಬೇಕೆಂದು ಹೊರಟಾಗ ತಿಳಿವಳಿಕೆಯಲ್ಲಿ ಮೊಟ್ಟಮೊದಲನೆಯ ವ್ಯಾಪಾರವೆಂದರೆ ಅವನ್ನು ಹೊರಕ್ಕೆ ಹಾಕುವದೇ ಆಗಿರುತ್ತದೆ. ಆದರೆ ಈಶ್ವರನ ವಿಷಯದಲ್ಲಿ ಹೀಗೆ ಮಾಡುವದು ಆಗಲಾರದು, ಏಕೆಂದರೆ ಆತನು ನಮ್ಮಗಳ ಆತ್ಮಗಳ ತಿರುಳೇ ಆಗಿರುತ್ತಾನೆ; ಆತನನ್ನು ನಾವು ನಮ್ಮ ಹೊರಕ್ಕೆ ಹಾಕುವದು ಆಗಲಾರದು. ಇಗೋ ವೇದಾಂತದಲ್ಲಿರುವ ಅಗಾಧವಾದ ವಚನಗಳಲ್ಲಿ ಒಂದನ್ನು ಹೇಳುತ್ತೇನೆ, ಕೇಳಿ: "ಆತನು ನಿಮ್ಮ ಆತ್ಮನ ತಿರುಳು, ಆತನೇ ಸತ್ಯವು, ಆತನೇ ಆತ್ಮನು,

ಎಲೈ ಶ್ವೇತಕೇತುವೆ, ನೀನೇ ಅದು", (ಛಾ.) 'ನೀನೇ ಈಶ್ವರನು' ಎಂಬುದಕ್ಕೆ ಇದೇ ಅರ್ಥ. ಆತನನ್ನು ವರ್ಣಿಸುವದಕ್ಕೆ ಮತ್ತೆ ಯಾವ ಭಾಷೆಯೂ ಸಲ್ಲುವದಿಲ್ಲ. ಅವನನ್ನು ತಂದೆ, ಅಣ್ಣ, ಪ್ರಿಯತಮನಾದ ಗೆಳೆಯ-ಎಂದು ಕರೆಯುವ ಭಾಷೆಯ ಪ್ರಯತ್ನಗಳೆಲ್ಲ ಈಶ್ವರನನ್ನು ವಿಷಯವಾಗಿ ಮಾಡುವ ಪ್ರಯತ್ನಗಳೇ, ಆದರೆ ಹಾಗೆ ಮಾಡುವದು ಆಗದ ಕೆಲಸ. ಆತನು ಪ್ರತಿಯೊಂದಕ್ಕೂ ನಿತ್ಯವಿಷಯಿಯು. ನಾನು ಈ ಕುರ್ಚಿಗೆ ವಿಷಯಿಯು, ಏಕೆಂದರೆ ನಾನು ಕುರ್ಚಿಯನ್ನು ನೋಡುತ್ತಿದ್ದೇನೆ. ಇದರಂತೆ ಈಶ್ವರನು ನನ್ನ ಆತ್ಮಕ್ಕೆ ನಿತ್ಯ ವಿಷಯಿಯಾಗಿರುತ್ತಾನೆ. ನಿಮ್ಮ ಆತ್ಮಗಳ ತಿರುಳೇ ಆಗಿರುವ ಪ್ರತಿಯೊಂದರ ಸಾರದ ಸತ್ತೆಯೇ ಆಗಿರುವ ಆತನನ್ನು ವಿಷಯವಾಗಿ ಮಾಡಿಕೊಳ್ಳುವದು ಹೇಗೆ? ಹೀಗೆ ನೋಡಿದರೆ - ಇನ್ನೊಂದು ಸಲ ನಿಮಗೆ ಇದನ್ನು ಹೇಳಬೇಕೆನಿಸಿದೆ - ಈಶ್ವರನು ಜ್ಞೇಯನೂ ಅಲ್ಲ, ಅಜ್ಞೇಯನೂ ಅಲ್ಲ; ಇವೆರಡಕ್ಕಿಂತಲೂ ಅನಂತವಾಗಿ ಹೆಚ್ಚಿನದಾದ ಸ್ವರೂಪದವನು. ಅವನಿಗೂ ನಮಗೂ ಐಕ್ಯವಿರುತ್ತದೆ, ಯಾವದು ನಮ್ಮೊಡನೆ ಐಕ್ಯವುಳ್ಳದಾಗಿರುವದೋ ಅದು ನಮ್ಮ ಆತ್ಮದಂತೆಯೇ* ಜ್ಞೇಯವೂ ಅಲ್ಲ, ಅಜ್ಞೇಯವೂ ಅಲ್ಲ. ನಿಮ್ಮ ಆತ್ಮವನ್ನು ನೀವು ಅರಿತುಕೊಳ್ಳಲಾರಿರಿ, ಅದನ್ನು ನೀವು ಹೊರಕ್ಕೆ ತೆಗೆದುಹಾಕಿ ಅದನ್ನು ನೋಡುವ ವಿಷಯವಾಗಿ ಮಾಡಿಕೊಳ್ಳಲಾರಿರಿ; ಏಕೆಂದರೆ ನೀವೇ ಅದಾಗಿರುವಿರಿ, ಅದರಿಂದ ನಿಮ್ಮನ್ನು ನೀವೇ ಬೇರ್ಪಡಿಸಿಕೊಳಲಾರದೆ ಇರುತ್ತೀರಿ. ಅದು ಅಜ್ಞೇಯವೂ ಅಲ್ಲ, ಏಕೆಂದರೆ ಯಾವದು ತಾನೆ ನಿಮ್ಮ ಆತ್ಮಕ್ಕಿಂತ ಹೆಚ್ಚು ಜ್ಞಾತವಾಗಿರುತ್ತದೆ? ಅದೇ ನಿಜವಾಗಿ ನಮ್ಮ ಅರಿವಿಗೆಲ್ಲ ಕೇಂದ್ರವಾಗಿರುತ್ತದೆ. ಇದೇ ಅರ್ಥದಲ್ಲಿಯೇ ಈಶ್ವರನು ಅಜ್ಞೇಯನೂ ಅಲ್ಲ, ಜ್ಞಾತನೂ ಅಲ್ಲ; ಇವೆರಡಕ್ಕಿಂತಲೂ ಅನಂತವಾಗಿ ಹೆಚ್ಚಿನ ಸ್ವರೂಪವಾಗಿರುತ್ತಾನೆ, ಏಕೆಂದರೆ ಆತನೇ ನಮ್ಮ ಪರಮಾರ್ಥವಾದ ಆತ್ಮನಾಗಿರುತ್ತಾನೆ.

ಅಂತೂ ಏನು ಸಿದ್ಧವಾಯಿತೆಂದರೆ ಮೊದಲನೆಯದಾಗಿ 'ಬ್ರಹ್ಮವು ಏತರಿಂದಾಯಿತು? ಎಂಬ ಪ್ರಶ್ನೆಯು ವ್ಯಾಹತವಾಗಿರುತ್ತದೆ; ಎರಡನೆಯದಾಗಿ ಅದ್ವೈತದಲ್ಲಿ ಈಶ್ವರನೆಂಬ ಭಾವನೆಯಲ್ಲಿ ಈ ಐಕ್ಯವೇ ಸೇರಿರುತ್ತದೆ, ಆದ್ದರಿಂದ ಆತನನ್ನು ನಾವು ವಿಷಯೀಕರಿಸಲಾರೆವು. ನಾವು ಅದನ್ನು ಅರಿತಿರಲಿ ಅರಿಯದಿರಲಿ, ಯಾವಾಗಲೂ ಆತನಲ್ಲಿಯೇ ಜೀವಿಸಿಕೊಂಡು ಆತನಲ್ಲಿಯೇ ವ್ಯವಹರಿಸುತ್ತಾ ಇರುವೆವು. ನಾವು ಏನೂ ಮಾಡಿದರೂ ಆತನ ಮೂಲಕವೇ.

* ಇಲ್ಲಿ ಆತ್ಮವೆಂದರೆ ನಾವು ನಮ್ಮ ಸ್ವರೂಪವೆಂದು ವ್ಯವಹಾರದಲ್ಲಿ ತಿಳಿದುಕೊಂಡಿರುವ ರೂಪವು. ಇದನ್ನು ವೇದಾಂತಿಗಳು ಚಿದಾಭಾಸವೆನ್ನುತ್ತಾರೆ.

ಈಗ ಒಂದು ಪ್ರಶ್ನೆ: ಕಾಲ, ದೇಶ, ನಿಮಿತ್ತ – ಎಂದರೇನು? ಅದ್ವೈತವೆಂದರೆ ಭೇದರಹಿತವಾದದ್ದೆಂದರ್ಥ. ಹೀಗಿದ್ದರೂ ಬ್ರಹ್ಮವು ಕಾಲದೇಶನಿಮಿತ್ತಗಳೆಂಬ ಆವರಣದ ಮೂಲಕವಾಗಿ ಹೊರತೋರಿಸಿಕೊಳ್ಳುತ್ತಿರುವದೆನ್ನುವರಲ್ಲ! ಆದ್ದರಿಂದ ಬ್ರಹ್ಮ, ಮಾಯೆ (ಎಂದರೆ ಕಾಲದೇಶನಿಮಿತ್ತಗಳ ಸಮಷ್ಟಿ) – ಎಂದು ಎರಡು ಪದಾರ್ಥಗಳಿವೆಯೆಂದು ತೋರುತ್ತದೆ. ಆದ್ದರಿಂದ ಎರಡು ತತ್ತ್ವಗಳಿವೆಯೆಂದು ಹೇಳುವದೇ ಬಹಳ ಚಿತ್ತ ಸಮರ್ಪಕವಾಗಿ ತೋರುತ್ತದೆಯಲ್ಲವೆ? ಇದಕ್ಕೆ ಅದ್ವೈತಿಯ ಉತ್ತರವೇನೆಂದರೆ, ಇದನ್ನು ಎರಡು ಎಂದು ಕರೆಯುವ ಹಾಗಿಲ್ಲ. ಎರಡು ಇರಬೇಕಾದರೆ ಕಾರಣರಹಿತವಾದ ಎರಡು ನಿರಪೇಕ್ಷವಾದ ಸ್ವತಂತ್ರತತ್ತ್ವಗಳಾಗಿರಬೇಕು. ಮೊದಲನೆಯದಾಗಿ ನೋಡಿದರೆ ಕಾಲದೇಶ ನಿಮಿತ್ತಗಳೆಂಬಿವು ಸ್ವತಂತ್ರಸತ್ತೆಯುಳ್ಳವೆಂದು ಹೇಳುವದಕ್ಕೇ ಬರುವದಿಲ್ಲ. ಕಾಲವೆಂಬುದು ಸಂಪೂರ್ಣವಾಗಿ ಸ್ವಾವಲಂಬನಸತ್ತೆಯುಳ್ಳದ್ದಾಗಿರುತ್ತದೆ, ಏಕೆಂದರೆ ನಮ್ಮ ಮನಸ್ಸಿನಲ್ಲಿ ಮಾರ್ಪಾಡು ಆದಹಾಗೆಲ್ಲ ಅದು ಮಾರ್ಪಡುತ್ತಲೇ ಇರುತ್ತದೆ. ಕೆಲವು ವೇಳೆ ಕನಸುಗಳಲ್ಲಿ ತಾನು ಎಷ್ಟೋ ವರ್ಷಗಳು ಬದುಕಿರುವಂತೆ ತೋರುವದುಂಟು, ಮತ್ತೆ ಕೆಲವು ವೇಳೆಗಳಲ್ಲಿ ಎಷ್ಟೋ ತಿಂಗಳುಗಳನ್ನು ಒಂದು ಕ್ಷಣದಂತೆ ಕಳೆದದ್ದೂ ಉಂಟು. ಹೀಗೆ ನೋಡಿದರೆ ಕಾಲವೆಂಬುದು ಸಂಪೂರ್ಣವಾಗಿಯೂ ನಮ್ಮ ಮನಃಸ್ಥಿತಿಯನ್ನವಲಂಬಿಸಿರುತ್ತದೆ. ಎರಡನೆಯದಾಗಿ ಕೆಲವು ವೇಳೆಗಳಲ್ಲಿ ಕಾಲಭಾವನೆಯು ಸಂಪೂರ್ಣವಾಗಿ ಹೋಗಿಯೇಬಿಡುತ್ತದೆ. * ದೇಶದ ವಿಚಾರವೂ ಹೀಗೆಯೇ. ದೇಶವೆಂದರೇನೆಂಬುದು ನಮಗೆ ತಿಳಿಯದು. ಆದರೂ ಅದು ಇದ್ದುಕೊಂಡಿದೆ, ಅದರ ಸ್ವರೂಪವೂ ಅನಿರ್ವಚನೀಯವಾಗಿದೆ. ಅದು ಮತ್ತೊಂದನ್ನು ಬಿಟ್ಟು ಸ್ವತಂತ್ರವಾಗಿರಲಾರದು. ನಿಮಿತ್ತವೆಂಬುದೂ ಹೀಗೆಯೇ. ಕಾಲದೇಶ ನಿಮಿತ್ತಗಳಲ್ಲಿರುವ ಒಂದು ವಿಶೇಷಗುಣವೇನೆಂದರೆ ಅವು ಮಿಕ್ಕ ವಸ್ತುಗಳನ್ನು ಬಿಟ್ಟು ಇರಲೇ ಆರವು. ಬಣ್ಣವಿಲ್ಲದೆ, ಎಲ್ಲೆಕಟ್ಟಿಲ್ಲದೆ, ಸುತ್ತಲೂ ಇರುವ ವಸ್ತುಗಳೇ ಇಲ್ಲದೆ – ಬರಿಯ ಬಯಲನ್ನೇ ಮನಸ್ಸಿಗೆ ತಂದುಕೊಳ್ಳುವದಕ್ಕೆ ಪ್ರಯತ್ನಿಸಿರಿ, ಇದು ಆಗುವದೇ ಇಲ್ಲ; ಏಕೆಂದರೆ ಬಯಲೆಂದರೆ ಎರಡು ಅವಧಿಗಳ ನಡುವೆ ಇರುವ ಬಯಲು, ಅಥವಾ ಮೂರು ವಸ್ತುಗಳ ನಡುವೆ ಇರುವ ಬಯಲು – ಎಂದೇ ನಾವು ಯೋಚಿಸಬೇಕಾಗುವದು. ಅದಕ್ಕೆ ಇರವು ಬರಬೇಕಾದರೆ ಅದನ್ನು ಯಾವದಾದರೊಂದು ಪದಾರ್ಥಕ್ಕೆ ಸಂಬಂಧಿಸಬೇಕು. ಕಾಲದ ವಿಚಾರವೂ ಹೀಗೆಯೇ. ಕೇವಲ ಕಾಲದ ವಿಷಯದ ಭಾವನೆಯೊಂದು ನಿಮಗೆ ಬರಲೇ

* ಸುಷುಪ್ತಿ, ಸಮಾಧಿ–ಮುಂತಾದ ಅವಸ್ಥೆಗಳಲ್ಲಿ.

ಆರದು. ಕಾಲವು ಬೇಕಾದರೆ ಯಾವದಾದರೊಂದು ಎರಡು ಘಟನೆಗಳನ್ನು ಇಟ್ಟುಕೊಂಡು ಒಂದಾಗುತ್ತಲೊಂದು ಎಂಬ ಅನುಕ್ರಮಬುದ್ಧಿಯಿಂದ ಅವುಗಳನ್ನು ಸೇರಿಸಬೇಕಾಗುವದು. ದೇಶಕ್ಕೆ ಹೇಗೆ ಎರಡು ಬಾಹ್ಯ ವಸ್ತುಗಳ ಸಂಬಂಧವು ಬೇಕಾಗುವದೋ ಅದರಂತೆಯೇ ಕಾಲಕ್ಕೆ ಎರಡು ಘಟನೆಗಳು ಬೇಕಾಗುವವು. ನಿಮಿತ್ತ ಭಾವನೆಯಂತೂ ಕಾಲದೇಶಗಳನ್ನು ಬಿಟ್ಟು ಬೇರ್ಪಡಿಸುವದಕ್ಕೇ ಆಗದೆ ಇರುವಂಥದ್ದಾಗಿದೆ. ಇವಕ್ಕೆ ಸ್ವತಂತ್ರವಾದ ಇರವು ಇಲ್ಲವೆಂಬುದೇ ಇವುಗಳಲ್ಲಿರುವ ವಿಶೇಷವು. ಕುರ್ಚಿಗೆ ಅಥವಾ ಗೋಡೆಗೆ ಇರುವಷ್ಟು ಇರವು ಕೂಡ ಇವಕ್ಕೆ ಇರುವದಿಲ್ಲ.* ಇವು ಒಂದೊಂದು ವಸ್ತುವಿನ ಸುತ್ತಲೂ ಇರುವ ನೆರಳಿನಂತೆ ಇರುವವು, ಇವನ್ನು ಹಿಡಿದುಕೊಳ್ಳುವದಕ್ಕೇ ಆಗುವದಿಲ್ಲ. ಇವಕ್ಕೆ ನಿಜವಾದ ಇರವು ಇರುವದಿಲ್ಲ. ಆದರೂ ಇವು ಅಸದ್ರೂಪವೂ ಅಲ್ಲ, ಏಕೆಂದರೆ ಇವುಗಳ ಮೂಲಕವಾಗಿಯೇ ವಸ್ತುಗಳೆಲ್ಲವೂ ಈ ಪ್ರಪಂಚವಾಗಿ ಕಾಣಿಸಿಕೊಳ್ಳುತ್ತಿರುವವು. ಹೀಗೆ ಮೊದಲನೆಯದಾಗಿ ಕಾಲದೇಶ ನಿಮಿತ್ತಗಳು ಸತ್ತೂ ಅಲ್ಲ, ಅಸತ್ತೂ ಅಲ್ಲ – ಎಂದು ಏರ್ಪಡುತ್ತದೆ; ಎರಡನೆಯದಾಗಿ ಅವು ಕೆಲವು ವೇಳೆ ಕಾಣದೆ ಹೋಗುತ್ತವೆ. ಒಂದು ಉದಾಹರಣೆಯನ್ನು ತೆಗೆದುಕೊಳ್ಳಿ. ಸಮುದ್ರದಲ್ಲಿ ಒಂದು ಅಲೆಯಿರುತ್ತದೆ. ಅಲೆಯೆಂಬುದು ಸಮುದ್ರವೆಂಬುದು ನಿಜ; ಆದರೂ ಅದು ಅಲೆಯೇ ಎಂದು ನಾವು ಬಲ್ಲೆವು, ಆ ರೂಪದಿಂದ ಅದು ಸಮುದ್ರಕ್ಕಿಂತ ಬೇರೆಯಾಗಿರುವದು. ಈ ಭೇದಕ್ಕೇನು ಕಾರಣ? ನಾಮ ಮತ್ತು ರೂಪ, ಎಂದರೆ ಮನಸ್ಸಿನಲ್ಲಿರುವ ಪ್ರತ್ಯಯ ಮತ್ತು ವಸ್ತುವಿನ ಆಕಾರ, ಅಲೆಯ ಆಕಾರವು ಸಮುದ್ರಕ್ಕಿಂತ ಬೇರೆಯಾಗಿರುವದೆಂದು ನಾವು ಕಲ್ಪಿಸುವದಕ್ಕೆ ಬರುವದೇನು? ಇಲ್ಲವೇ ಇಲ್ಲ. ಅದು ಯಾವಾಗಲೂ ಸಮುದ್ರಭಾವನೆಗೆ ಸಂಬಂಧಪಟ್ಟೇ ಇರುತ್ತದೆ. ಅಲೆಯು ಸರಿದುಕೊಂಡರೆ ಆಕಾರವು ಕ್ಷಣಮಾತ್ರದಲ್ಲಿ ಹೋಗಿಬಿಡುತ್ತದೆ. ಆದರೂ ಈ ಆಕಾರವು ಭ್ರಾಂತಿಯಲ್ಲ, ಅಲೆಯು ಇರುವವರೆಗೂ ಆಕಾರವು ಇದ್ದೇ ಇತ್ತು, ನಿಮಗೆ ಆ ಆಕಾರವು ಕಾಣಿಸಿಯೇ ತೀರುತ್ತಿತ್ತು. ಇದೇ **ಮಾಯೆಯು.**

* ಕಾಲದೇಶನಿಮಿತ್ತಗಳಲ್ಲಿ ತೋರಿಕೊಳ್ಳುವ ವಸ್ತುಗಳಗಿಂತ ಕಾಲದೇಶನಿಮಿತ್ತಗಳೇ ಕಡಿಮೆಯ ಸತ್ತೆಯುಳ್ಳವೆಂದು ಸ್ವಾಮಿಗಳು ಏತಕ್ಕೆ ಹೇಳಿರುವರೋ ತಿಳಿಯದು. ಜರ್ಮನಿಯ ಕ್ಯಾಂಟನ ಮತದಲ್ಲಿ – ಇವು ಮಾನಸವಿಜ್ಞಾನಾಕಾರಗಳಾಗಿರುತ್ತವೆ; ಯಾವ ವಸ್ತುವನ್ನಾದರೂ ಇಲ್ಲವೆಂದು ಕಲ್ಪಿಸಬಹುದು, ದೇಶಕಾಲನಿಮಿತ್ತಗಳನ್ನು ಇಲ್ಲವೆಂದು ಕಲ್ಪಿಸುವದಕ್ಕೆ ಬರುವದಿಲ್ಲ. ಈ ಅರ್ಥದಲ್ಲಿ ಅವಕ್ಕೇ ಹೆಚ್ಚಿನ ಇರವು ಇದೆಯೆನ್ನಬೇಕಾಗುವದು. ಇದು ಹೇಗಾದರೂ ಇರಲಿ, ದೇಶಕಾಲನಿಮಿತ್ತಗಳೂ ಅವುಗಳಲ್ಲಿ ತೋರಿಕೊಳ್ಳುವ ವಸ್ತುಗಳೂ ಒಂದನ್ನೊಂದು ಅವಲಂಬಿಸಿರುವವೇ ಹೊರತು ಸ್ವತಂತ್ರವಾಗಿ ತೋರಿಕೊಂಡದ್ದು ಇಲ್ಲವೇ ಇಲ್ಲ. ಇವುಗಳಗೆ ಸುಷುಪ್ತಿಯೇ ಮುಂತಾದ ಅವಸ್ಥೆಗಳಲ್ಲಿ ತೋರಿಕೆಯೂ ಇಲ್ಲ. ಆದ್ದರಿಂದ ಇವು ತೋರಿಹಾರುವ ಅನಿರ್ವಚನೀಯ ಪದಾರ್ಥಗಳೆನ್ನುವದಕ್ಕೆ ಯಾವ ಅಡ್ಡಿಯೂ ಇಲ್ಲ.

ಆದ್ದರಿಂದ ಇಡಿಯ ವಿಶ್ವವೇ ಒಂದಾನೊಂದು ವಿಶಿಷ್ಟವಾದ ಆಕಾರವೆಂದು ಹೇಳಬಹುದು. ಬ್ರಹ್ಮವೇ ದೃಷ್ಟಾಂತದ ಸಮುದ್ರವು; ನಾನು, ನೀವು, ಸೂರ್ಯ ನಕ್ಷತ್ರಗಳು – ಮುಂತಾದದ್ದವೆಲ್ಲವೂ ಆ ಸಮುದ್ರದ ಬೇರೆ ಬೇರೆ ಅಲೆಗಳು. ಈ ಅಲೆಗಳು ಬೇರೆಬೇರೆಯಾಗಿರುವದಕ್ಕೇನು ಕಾರಣ? ಆಕಾರವೇ. ಈ ಆಕಾರವೇ ಕಾಲದೇಶನಿಮಿತ್ತಗಳು. ಇವೆಲ್ಲ ಅಲೆಗೇ ಸೇರಿದವು, ಅಲೆಯು ಹೋದೊಡನೆಯೇ ಇವು ಕಾಣದೆ ಹೋಗುವವು. ಒಬ್ಬೊಬ್ಬ ವ್ಯಕ್ತಿಯೂ ಈ ಮಾಯೆಯನ್ನು ಬಿಡುತ್ತಲೂ ಅದು ಅವನ ಭಾಗಕ್ಕೆ ಇಲ್ಲವಾಗುವದು, ಅವನು ಮುಕ್ತನಾಗುವನು.

ಒಟ್ಟು ನಮ್ಮ ಪ್ರಯತ್ನವೆಲ್ಲ ಕಾಲದೇಶನಿಮಿತ್ತಗಳಿಗೆ ಅಂಟಿಕೊಳ್ಳುವದನ್ನು ತಪ್ಪಿಸಿಕೊಳ್ಳುವದಕ್ಕೇ; ಇವು ಯಾವಾಗಲೂ ನಮ್ಮ ದಾರಿಯಲ್ಲಿ ಅಡ್ಡಿಗಳಾಗಿರುತ್ತವೆ. ವಿಕಾಸವಾದದ ಸ್ವರೂಪವೇನು? ವಿಕಾಸದಲ್ಲಿ ಎರಡು ಮುಖ್ಯವಾದ ಹೇತುಗಳು ಯಾವುವು? ವ್ಯಕ್ತವಾಗಬೇಕೆಂದು ಪ್ರಯತ್ನಿಸುತ್ತಿರುವ ಅತ್ಯದ್ಭುತವಾದ ಅವ್ಯಕ್ತ ಶಕ್ತಿಯೊಂದು, ಅದನ್ನು ಹಿಡಿದಿಟ್ಟುಕೊಂಡಿರಿವ ಸಂದರ್ಭಗಳು – ಅದನ್ನು ವ್ಯಕ್ತವಾಗದಂತೆ ತಡೆಗಟ್ಟುವ ಸನ್ನಿವೇಶಗಳು – ಎಂಬುದು ಮತ್ತೊಂದು. ಆದ್ದರಿಂದ ಈ ಸನ್ನಿವೇಶಗಳೊಡನೆ ಹೋರಾಡುವದಕ್ಕೆಂದು ಶಕ್ತಿಯು ಹೊಸಹೊಸ ಶರೀರಗಳನ್ನು ಧರಿಸುತ್ತಿರುವದು. ಅಮೀಬಾ (amoeba)* ಪ್ರಾಣಿಯು ಈ ಹೋರಾಟದಲ್ಲಿ ಮತ್ತೊಂದು ಶರೀರವನ್ನು ಧರಿಸುತ್ತದೆ, ಕೆಲವು ಅಡ್ಡಿಗಳನ್ನು ಪರಿಹರಿಸಿಕೊಳ್ಳುತ್ತದೆ, ಆಮೇಲೆ ಮತ್ತೊಂದು ಶರೀರವನ್ನು ಧರಿಸುತ್ತದೆ; ಹೀಗೆಯೇ ಧರಿಸುತ್ತಾ ಧರಿಸುತ್ತಾ ಹೋಗಿ ಕೊನೆಗೆ ಮನುಷ್ಯನಾಗುತ್ತದೆ. ಈ ಅಭಿಪ್ರಾಯವನ್ನು ಯುಕ್ತಿಸಿದ್ಧವಾಗುವ ಕಟ್ಟಕಡೆಯ ತೀರ್ಮಾನವಾಗುವವರೆಗೂ ಒಯ್ದರೆ, ಅಮೀಬಾದಲ್ಲಿದ್ದು ಮನುಷ್ಯನಾಗಿ ವಿಕಾಸವಾದ ಶಕ್ತಿಯು, ಪ್ರಕೃತಿಯು ತನ್ನ ಮುಂದೆ ಒಡ್ಡಬಹುದಾದ ಅಡ್ಡಿಗಳನ್ನೆಲ್ಲ ಜಯಿಸಿ ತನ್ನ ಸನ್ನಿವೇಶಗಳೆಲ್ಲದರಿಂದಲೂ ತಪ್ಪಿಸಿಕೊಳ್ಳುವಂಥ ಒಂದಾನೊಂದು ಕಾಲವು ಬಂದೇ ತೀರಬೇಕೆಂದು ಹೇಳಬೇಕಾಗುತ್ತದೆ. ವೇದಾಂತದ ಭಾಷೆಯಲ್ಲಿಟ್ಟರೆ ಈ ಅಭಿಪ್ರಾಯಕ್ಕೆ ಯಾವ ರೂಪವು ಬರುವದೆಂದರೆ, ಪ್ರತಿಯೊಂದು ಕ್ರಿಯೆಯಲ್ಲಿಯೂ ವಿಷಯಿಯೊಂದು,

* ಅಮೀಬಾ ಎಂಬುದು ಒಂದು ಜೀವಬೀಜವು. ಇದು ಬೆರಳನಂತಿರುವ ಪದಾಭಾಸಗಳಾದ ತನ್ನ ಶರೀರಭಾಗಗಳನ್ನು ಮುಂದಕ್ಕೆ ಚಾಚಿಕೊಂಡು ಚಲಿಸುತ್ತಿರುವದು. ಇದಕ್ಕೆ ಬಾಯಿಯಿಲ್ಲ: ಮುಂಚಾಚಿದ ಶರೀರಭಾಗಗಳಿಂದಲೇ ಆಹಾರವನ್ನು ತೆಗೆದುಕೊಂಡು ತನ್ನೊಳಗಿಟ್ಟುಕೊಂಡು ಜೀರ್ಣಿಸಿಕೊಳ್ಳುವದು, ಅರಗದ ಭಾಗವನ್ನು ಆ ಮೂಲಕವಾಗಿಯೇ ಹೊರಕ್ಕೆ ಹಾಕುವದು. ಇದು ಇಬ್ಭಾಗವಾಗಿ ಒಂದೊಂದು ಭಾಗವೂ ಒಂದೊಂದು ಪ್ರಾಣಿಸೂಕ್ಷ್ಮವಾಗಿ ಪರಿಣಮಿಸುತ್ತದೆಯಂತೆ. ವಿಕಾಸ ಕ್ರಮದಿಂದ ಇದೇ ಮನುಷ್ಯನಾಗಿರುವದೆಂದು ಜೀವಶಾಸ್ತ್ರಜ್ಞರ ಹೇಳಿಕೆ.

ವಿಷಯವೊಂದು - ಹೀಗೆ ಎರಡು ನಿರ್ವರ್ತಕಗಳಿರುವವು. ಜೀವನದ ಮುಖ್ಯೋದ್ದೇಶವೇ ವಿಷಯಿಯು ವಿಷಯದ ಯಜಮಾನನಾಗುವಂತೆ ಮಾಡಿಕೊಳ್ಳುವದು. ಉದಾಹರಣೆಗೆ ಯಾವನೋ ಒಬ್ಬನು ಬಯ್ದರೆ ನನಗೆ ದುಃಖವಾಗುವದು. ನನ್ನ ಪ್ರಯತ್ನವು ಈ ಸನ್ನಿವೇಶವನ್ನು ಗೆಲ್ಲುವದಕ್ಕೆ ಹೊರಡಬೇಕು; ಆಗ ಅವನು ಬಯ್ದರೂ ನನ್ನ ಮನಸ್ಸಿಗೆ ಹತ್ತದಂತೆ ಆಗಬೇಕು. ಹೀಗೆಂಯೇ ನಾವೆಲ್ಲರೂ ಜಯಶೀಲರಾಗುವದಕ್ಕೆ ಪ್ರಯತ್ನಿಸುತ್ತಿರುವೆವು. ನೀತಿಯೆಂದರೇನು? ವಿಷಯಿಯನ್ನು ಬ್ರಹ್ಮಕ್ಕೆ ಹೊಂದುವಂತೆ ಮಾಡಿ ಬಲಪಡಿಸುವದು. ಆಗ ಪರಿಚ್ಛಿನ್ನವಾದ ಪ್ರಕೃತಿಯು ನಮ್ಮ ಮೇಲೆ ತನ್ನ ಕೈವಾಡವನ್ನು ತೋರಿಸಲಾರದೆ ಹೋಗುವದು. ನಾವು ಸನ್ನಿವೇಶಗಳನ್ನೆಲ್ಲ ಗೆದ್ದುಬಿಡುವ ಒಂದಾನೊಂದು ಕಾಲವು ಬಂದೇ ತೀರಬೇಕೆಂಬುದು ನಮ್ಮ ತತ್ತ್ವಜ್ಞಾನದೃಷ್ಟಿಯಿಂದ ಯುಕ್ತಿಸಿದ್ಧವಾಗಿ ಏರ್ಪಡುವ ತೀರ್ಮಾನವಾಗಿರುತ್ತದೆ. ಇಗೋ ಇದು ನಾವು ತಿಳಿದುಕೊಳ್ಳಬೇಕಾಗಿರುವ ಮತ್ತೊಂದು ವಿಷಯವು. ಪ್ರಕೃತಿಯು ಪರಿಚ್ಛಿನ್ನವಾಗಿರುವದೆಂದು ಹೇಗೆ ಗೊತ್ತು? ಎಂದರೆ ಇದನ್ನು ತಿಳಿದುಕೊಳ್ಳುವದಕ್ಕೆ ವೇದಾಂತವೊಂದೇ ಗತಿ. ಆ ಅನಂತವಾದ ಬ್ರಹ್ಮವು ಉಪಾಧಿಗಳಿಗೊಳಪಟ್ಟರೆ ಅದೇ ಪ್ರಕೃತಿಯೆನಿಸುವದು. ಆದ್ದರಿಂದ ಅದು ಪರಿಚ್ಛಿನ್ನವಾಗಿರುವದು.* ಆದ್ದರಿಂದ ನಾವು ಸನ್ನಿವೇಶಗಳನ್ನೆಲ್ಲ ವಶಗೊಳಿಸಿ ಕೊಳ್ಳುವ ಕಾಲವೊಂದು ಬಂದೇ ತೀರಬೇಕು.

ಅವುಗಳನ್ನು ವಶಗೊಳಿಸಿಕೊಳ್ಳುವ ಬಗೆಯಾದರೂ ಹೇಗೆ? ಬಾಹ್ಯ ಸನ್ನಿವೇಶಗಳು ಎಷ್ಟು ಇವೆಯೋ ಅಷ್ಟನ್ನೂ ಗೆಲ್ಲುವದೆಂಬುದು ಅಸಂಭಾವನೀಯ, ಅವುಗಳನ್ನು ಗೆಲ್ಲುವದು ಆಗುವ ಕೆಲಸವಲ್ಲ. ಚಿಕ್ಕ ಮೀನು ನೀರಿನಲ್ಲಿರುವ ತನ್ನ ಶತ್ರುಗಳಿಂದ ಪಾರಾಗಬೇಕು; ಅದು ಹೇಗೆ ಪಾರಾಗುವದು? ರೆಕ್ಕೆಗಳನ್ನು ಪಡೆದು ಹಕ್ಕಿಯಾಗುವದರಿಂದ. ಇಲ್ಲಿ ಮೀನು ನೀರನ್ನಾಗಲಿ ಅಂತರಿಕ್ಷವನ್ನಾಗಲಿ ಮಾರ್ಪಡಿಸಲಿಲ್ಲ, ಮಾರ್ಪಾಡು ಅದರ ಒಳಗೇ ಆಗಿಬಿಟ್ಟಿತು. ಮಾರ್ಪಾಡೆಂಬುದು ಯಾವಾಗಲೂ ಒಳಗೇ ಆಗಬೇಕು. ವಿಕಾಸವಾಗುವಾಗಲೆಲ್ಲ ಪ್ರಕೃತಿ ಜಯವೆಂಬುದು ವಿಷಯಿಯಲ್ಲಿ ಆಗುವ ಮಾರ್ಪಾಡಿನಿಂದಲೇ ಆಗುವದೆಂದು ಕಂಡುಬಂದಿದೆ. ಇದನ್ನು ಧರ್ಮಕ್ಕೂ ನೀತಿಗೂ ಹೊಂದಿಸಿದರೆ ದುಃಖವನ್ನು

* ಅತ್ಯಂತ ಪರಿಶುದ್ಧವಾದ ಬ್ರಹ್ಮದಲ್ಲಿ ಅಜ್ಞಾನದಿಂದಲೇ ಪ್ರಕೃತಿ, ಪುರುಷ - ಎಂಬ ವಿಭಾಗವಾಗಿರುತ್ತದೆ. ಈ ವಿಭಾಗವು ಜಾಗ್ರತ್ಸ್ವಪ್ನಗಳಲ್ಲಿ ಮಾತ್ರ ತೋರಿಕೊಳ್ಳುತ್ತದೆ, ಆದ್ದರಿಂದ ಆಯಾ ಅವಸ್ಥೆಗೆ ಕಟ್ಟುಬಿದ್ದಿರುತ್ತದೆ - ಎಂಬುದನ್ನು ಲಕ್ಷ್ಯವಿಟ್ಟರೆ ಅದು ಪರಿಚ್ಛಿನ್ನವೆಂಬುದರ ಅರ್ಥವು ಮನದಟ್ಟಾಗುವದು.

ಗೆಲ್ಲಬೇಕಾದರೆ ತನ್ನಲ್ಲಿಯೇ ಮಾರ್ಪಾಡಾಗಬೇಕೆಂದು ಸಿದ್ಧವಾಗುತ್ತದೆ. ಈ ಕಾರಣದಿಂದ ಮನುಷ್ಯನ ಆಧ್ಯಾತ್ಮಿಕ ಭಾಗವನ್ನು ಮುಖ್ಯವಾಗಿಟ್ಟು ಕೊಂಡಿರುವದರಿಂದಲೇ ಅದ್ವೈತಕ್ಕೂ ಸಿದ್ಧಾಂತಕ್ಕೂ ಇಂಥ ಬಲವು ಬಂದಿರುತ್ತದೆ. ದುಃಖ, ಸಂಕಟ – ಎಂದು ವ್ಯವಹರಿಸುವದು ಅವಿವೇಕ, ಏಕೆಂದರೆ ಅವು ಹೊರಗೆ ಇರುವದೇ ಇಲ್ಲ. ನಾನು ಎಲ್ಲಾ ಬಗೆಯ ಸಿಟ್ಟನ್ನೂ ತಡೆದುಕೊಳ್ಳುವ ಶಕ್ತಿಯನ್ನು ಸಂಪಾದಿಸಿಬಿಟ್ಟರೆ ನನಗೆ ದ್ವೇಷವು ಉಂಟಾಗುವದೇ ಇಲ್ಲ. ದ್ವೇಷವೆಂಬುದೇ ನನಗೆ ನಾಟದಂತೆ ಮಾಡಿಕೊಂಡುಬಿಟ್ಟರೆ ನನಗೆ ದ್ವೇಷವು ಉಂಟಾಗಲಾರದು, ಏಕೆಂದರೆ ಅದು ನನ್ನನ್ನು ಸೋಕುವ ಹಾಗೇ ಇರುವದಿಲ್ಲ. ಹೀಗೆ ವಿಷಯಿಯ ಮೂಲಕವೇ, ವಿಷಯಿಯನ್ನು ಪರಿಪೂರ್ಣಗೊಳಿಸುವದೇ, ಆ ಜಯವನ್ನು ಸಂಪಾದಿಸುವ ಕ್ರಮವು.

ಭೌತಿಕ ಮಾರ್ಗದಲ್ಲಾಗಲಿ ನೈತಿಕ ಮಾರ್ಗದಲ್ಲಾಗಲಿ ಆಧುನಿಕ ಶೋಧನೆಗಳಿಗೆ ಹೊಂದಿಗೆಯಾಗಿರುವದು ಮಾತ್ರವಲ್ಲದೆ ಅವುಗಳನ್ನು ಸ್ವಲ್ಪಮಟ್ಟಿಗೆ ದಾಟಿಯೂ ಇರುವದು ಅದ್ವೈತ ಧರ್ಮವೊಂದೇ ಎಂದು ನಾನು ಧೈರ್ಯವಾಗಿ ಹೇಳಬಲ್ಲೆನು. ಆದ್ದರಿಂದಲೇ ಅದು ಈಗಿನ ವಿಜ್ಞಾನ ಶಾಸ್ತ್ರಜ್ಞರಿಗೆ ಅಷ್ಟೊಂದು ಒಪ್ಪಾಗಿರುತ್ತದೆ. ಹಳೆಯ ಕಾಲದ ದ್ವೈತವಾದಗಳು ಅವರುಗಳಿಗೆ ಸಾಕಾಗಿ ತೋರುವದಿಲ್ಲ, ಅವು ಅವರ ಇಷ್ಟಾರ್ಥಗಳನ್ನು ನೆರವೇರಿಸುವ ಹಾಗಿಲ್ಲ. ಮನುಷ್ಯನಿಗೆ ಬರಿಯ ಶ್ರದ್ಧೆಯಿದ್ದರೆ ಸಾಲದು, ವಿಚಾರಯುತವಾದ ಶ್ರದ್ಧೆಯೂ ಇರಬೇಕು. ಈ ಹತ್ತೊಂಬತ್ತನೆಯ ಶತಮಾನದ ಉತ್ತರಭಾಗದಲ್ಲಿ ನಮ್ಮ ತಾಯಿ ತಂದೆಗಳಿಂದ ಬಂದ ಮತವಲ್ಲದೆ ಮತ್ತೆಲ್ಲಿಂದಲಾದರೂ ಒಂದು ಮತವು ಬಂದರೆ ಅದು ಸುಳ್ಳಾಗಿರಬೇಕೆಂಬ ಅಭಿಪ್ರಾಯದಲ್ಲಿ ಏನೋ ನ್ಯೂನತೆಯಿರಬೇಕೆಂದೂ ಇಂಥ ಅಭಿಪ್ರಾಯವು ಈ ದೇಶದಲ್ಲಿರುವಷ್ಟು ಬಲವಾಗಿ ಇದು ಮತ್ತೆಲ್ಲಿಯೂ ಇರುವದೇ ಇಲ್ಲ. ಮೊದಮೊದಲು ಈ ಅದ್ವೈತವನ್ನು ಕೆಲವರು ಸಂನ್ಯಾಸಿಗಳು ವಶಗೊಳಿಸಿಕೊಂಡು ಅದನ್ನು ಕಾಡಿಗೆ ಒಯ್ದರು; ಆದ್ದರಿಂದ ಇದಕ್ಕೆ **ಅರಣ್ಯಕಶಾಸ್ತ್ರ**ವೆಂಬ ಹೆಸರು ಬಂತು. ಭಗವಂತನ ಕೃಪೆಯಿಂದ **ಬುದ್ಧನು** ಬಂದು ಅದನ್ನು ಸಾಮಾನ್ಯ ಜನರಿಗೆಲ್ಲ ಬೋಧಿಸಿದನು; ಆಗ ಒಟ್ಟು ಜನಾಂಗವೇ ಬೌದ್ಧವಾಯಿತು.* ಇದಾದ ಬಹುಕಾಲದ ಮೇಲೆ ನಾಸ್ತಿಕರೂ ಅಜ್ಞಾನವಾದಿಗಳೂ ಜನರನ್ನು ಮತ್ತೆ ಹಾಳುಮಾಡಲು ಇಂಡಿಯ ದೇಶವು ಚಾರ್ವಾಕವಾದಕ್ಕೆ ಬಲಿಯಾಗದಂತೆ ಅದನ್ನು ರಕ್ಷಿಸುವದಕ್ಕೆ ಅದ್ವೈತವೇ ಗತಿಯೆಂದು ಕಂಡುಬಂತು.

ಹೀಗೆ ಅದ್ವೈತವು ಇಂಡಿಯ ದೇಶವನ್ನು ಎರಡು ಸಲ ಚಾರ್ವಾಕ ದರ್ಶನಕ್ಕೆ ವಶವಾಗದಂತೆ ಕಾಪಾಡಿರುತ್ತದೆ. ಬುದ್ಧನು ಬರುವ ಮುಂಚೆ ಚಾರ್ವಾಕವಾದವು ಅತ್ಯಂತಭೀಕರವಾಗಿ ಹರಡಿತ್ತು. ಆ ಚಾರ್ವಾಕವಾದವೂ ಅತ್ಯಂತ ಬೀಭತ್ಸವಾಗಿತ್ತು; ಅದು ಈಗಿನ ಭೌತಿಕವಾದದಂತೆ ಇರಲಿಲ್ಲ, ಇನ್ನೂ ಎಷ್ಟೋ ಪಾಲು ಕೆಟ್ಟಿತ್ತು. ನಾನು ಒಂದು ಬಗೆಯ ಭೌತಿಕವಾದಿಯೇ, ಏಕೆಂದರೆ ನಾನು ಒಂದೇ ಒಂದು ತತ್ತ್ವವಿದೆಯೆಂದು ನಂಬಿದ್ದೇನೆ. ಭೌತಿಕವಾದಿಯೂ ನಿಮಗೆ ಅದನ್ನೇ ನಂಬಬೇಕೆಂದು ಹೇಳುತ್ತಿದ್ದಾನೆ; ಆದರೆ ಅವನು ಅದಕ್ಕೆ ಭೂತತತ್ತ್ವವೆಂದು ಹೆಸರಿಟ್ಟಿದ್ದಾನೆ, ನಾನು ಅದಕ್ಕೆ ಈಶ್ವರನೆಂಬ ಹೆಸರಿಟ್ಟಿರುತ್ತೇನೆ. ಭೌತಿಕವಾದಿಗಳು ಈ ಭೌತತತ್ತ್ವದಿಂದ ನಮ್ಮ ಪ್ರತ್ಯಾಶೆಯೆಲ್ಲವೂ ನಮ್ಮ ಧರ್ಮವೆಲ್ಲವೂ ಬಂದಿದೆಯೆಂದು ಒಪ್ಪುತ್ತಾರೆ; ನನ್ನ ಮತದಲ್ಲಿ ಇವೆಲ್ಲವೂ ಬ್ರಹ್ಮದಿಂದ ಬಂದಿರುತ್ತವೆ. ಆದರೆ ಬುದ್ಧನಿಗಿಂತ ಪೂರ್ವದಲ್ಲಿ ಹರಡಿದ್ದ ಚಾರ್ವಾಕಮತವು ಒಂದು ಬಗೆಯ ಅಪರಿಷ್ಕೃತ ಭೌತಿಕವಾದವಾಗಿತ್ತು: "ತಿನ್ನಿರಿ, ಕುಡಿಯಿರಿ, ಸುಖವಾಗಿರಿ; ದೇವರಿಲ್ಲ; ಜೀವನಿಲ್ಲ, ಸ್ವರ್ಗವಿಲ್ಲ. ಧರ್ಮವೆಂಬುದು ಧೂರ್ತರಾದ ಬ್ರಾಹ್ಮಣರ ಕಲ್ಪನೆಯು" ಎಂದು ಅದು ಬೋಧಿಸುತ್ತಿತ್ತು. ಅದು ಬೋಧಿಸುತ್ತಿದ್ದ ನೀತಿಯೆಂದರೆ, "ಬದುಕಿರುವವರೆಗೆ ಸುಖವಾಗಿರಿ; ತಿನ್ನಿರಿ, ಬೇಕಾದರೆ ಆಹಾರಕ್ಕಾಗಿ ಸಾಲಮಾಡಿ ತಿನ್ನಿರಿ, ಸಾಲ ತೀರಿಸುವ ಚಿಂತೆಯನ್ನೇನೂ ಹತ್ತಿಸಿಕೊಳ್ಳಬೇಡಿ!" ಇದೇ ಪ್ರಾಚೀನ ಭೌತಿಕವಾದವು; ಅದು ಆಗ ಎಷ್ಟರ ಮಟ್ಟಿಗೆ ಹರಡಿಕೊಂಡಿತ್ತೆಂದರೆ ಈಗಲೂ ಅದಕ್ಕೆ **'ಲೋಕಾಯತದರ್ಶನ'** ಎಂಬ ಹೆಸರು ಇರುತ್ತದೆ. ಬುದ್ಧನು ವೇದಾಂತವನ್ನು ಬೆಳಕಿಗೆ ಹಿಡಿದು, ಜನರಿಗೆ ಅದನ್ನು ಕೊಟ್ಟು ಇಂಡಿಯದ ಜನರನ್ನು ಬದುಕಿಸಿದನು. ಆತನು ಸತ್ತ ಒಂದು ಸಾವಿರ ವರ್ಷಗಳಾದ ಮೇಲೆ ಮತ್ತೆ ಅದೇ ಸ್ಥಿತಿಯು ಪ್ರಬಲವಾಯಿತು. ಸಾಮಾನ್ಯಜನರೂ ಪ್ರಾಕೃತರೂ ಬೇರೆಬೇರೆಯ ಕುಲದವರೂ ಬೌದ್ಧರಾಗಿಟ್ಟಿದ್ದರು. ಆದ್ದರಿಂದ ಬೌದ್ಧನ ಉಪದೇಶಗಳು ಕಾಲಕ್ರಮದಲ್ಲಿ ಕೆಟ್ಟುಹೋದದ್ದು ಸಹಜವಾಗಿರುತ್ತದೆ, ಏಕೆಂದರೆ ಅನುಯಾಯಿಗಳಲ್ಲಿ ಬಹು ಜನರು ಅಜ್ಞರೇ ಆಗಿದ್ದರು. ಬೌದ್ಧಮತದಲ್ಲಿ ಈಶ್ವರನನ್ನು ಬೋಧಿಸಲಿಲ್ಲ, ಜಗತ್ತನ್ನು ಆಳುವವನು ಒಬ್ಬನಿದ್ದಾನೆಂದು ಬೋಧಿಸಲಿಲ್ಲ. ಆದ್ದರಿಂದ ಮೆಲ್ಲಮೆಲ್ಲಗೆ ಪ್ರಾಕೃತ ಜನರು ತಮ್ಮ ತಮ್ಮ ದೇವತೆಗಳು, ದೆವ್ವಗಳು, ಭೂತಗಳು, ಇವುಗಳೆಲ್ಲವನ್ನೂ ಮತ್ತೆ ಹೊರಕ್ಕೆ ತಂದರು. ಆಗ ಇಂಡಿಯದ ಬೌದ್ಧಮತವು ಒಂದು ವಿಚಿತ್ರವಾದ

* ಈಗಿನ ಬೌದ್ಧಮತಕ್ಕೂ ವೇದಾಂತಕ್ಕೂ ತಾರತಮ್ಯವಿದ್ದರೂ ಪೂರ್ವದ ಬೌದ್ಧಮತವು ವೇದಾಂತಕ್ಕೆ ಅನುಗುಣವಾಗಿಯೇ ಇತ್ತೆಂಬ ಧ್ವನಿಯು ಈ ವಾಕ್ಯದಲ್ಲಿದೆ.

ಕಲಸುಮೇಲೋಗರವಾಗಿಬಿಟ್ಟಿತು. ಮತ್ತೆ ಭೌತಿಕವಾದವು ಬಲವಾಯಿತು. ಈಗ ಅದು ಮೇಲಿನ ಜಾತಿಯವರಲ್ಲಿ ಸ್ವೇಚ್ಛಾವರ್ತನೆ, ಕೀಳುಜಾತಿಯವರಲ್ಲಿ ಮೂಢವಿಶ್ವಾಸ – ಎಂಬ ರೂಪಗಳನ್ನು ತಳೆಯಿತು. ಆಗ **ಶಂಕರಾಚಾರ್ಯರು** ಅವತರಿಸಿ ವೇದಾಂತದರ್ಶನವನ್ನು ಮತ್ತೆ ಉಜ್ಜೀವನಗೊಳಿಸಿದರು. ಅವರು ಅದನ್ನು ಯುಕ್ತಿಸಮ್ಮತವಾದ ದರ್ಶನವಾಗಿ ಮಾಡಿದರು. ಉಪನಿಷತ್ತುಗಳಲ್ಲಿ ಯುಕ್ತಿಗಳು ಅಸ್ಪಷ್ಟವಾಗಿರುತ್ತವೆ. ಬೌದ್ಧನು ಈ ದರ್ಶನದ ನೈತಿಕ ಭಾಗವನ್ನು ಅವಧಾರಣೆಮಾಡಿದ್ದನು; ಶಂಕರಾಚಾರ್ಯರು ಯೌಕ್ತಿಕ ಭಾಗಕ್ಕೆ ಜೋರನ್ನು ಕೊಟ್ಟರು. ಅವರು ಆ ಸಿದ್ಧಾಂತವನ್ನು ವಿಸ್ತರಿಸಿ ಯುಕ್ತಿಗಳಿಂದ ಪುಷ್ಟಿಗೊಳಿಸಿ ಅತ್ಯಂತ ಆಶ್ಚರ್ಯಕರವಾಗಿ ಸುಸಂಬದ್ಧವಾದ **ಅದ್ವೈತದರ್ಶನವನ್ನು** ಜನರ ಮುಂದೆ ಇಟ್ಟರು.

ಇಂದು ಯುರೋಪಿನಲ್ಲಿ ಭೌತಿಕವಾದವೇ ಹರಡಿಕೊಂಡಿದೆ. ಈಗಿನ ಸಂಶಯವಾದಿಗಳಿಗೆ ಸದ್ಗತಿಯಾಗಲೆಂದು ನೀವು ಎಷ್ಟೇ ಪ್ರಾರ್ಥಿಸಿರಿ, ಅವರೇನೂ ವಶವಾಗುವಂತಿಲ್ಲ, ಅವರಿಗೆ ಯುಕ್ತಿಬೇಕು. ಯೂರೋಪಿಗೆ ಸದ್ಗತಿಯಾಗಬೇಕಾದರೆ ಒಂದು ಯುಕ್ತಿಯುಕ್ತವಾದ ಧರ್ಮವಾಗಬೇಕು. ದ್ವೈತವಿಲ್ಲ, ಸರ್ವವೂ ಒಂದೇ, ಬ್ರಹ್ಮವು ನಿರ್ಗುಣ ಎಂಬ – ಅದ್ವೈತ ಧರ್ಮವೊಂದೇ ಯುಕ್ತಿಪ್ರಧಾನರಾದ ಜನರ ಮನಸ್ಸನ್ನೊಲಿಸಬಲ್ಲದು. ಎಲ್ಲೆಲ್ಲಿ ಧರ್ಮವು ಮರೆಯಾಗುವಂತಿರುವದೋ ಅಧರ್ಮವು ತಲೆಯೆತ್ತಿರುವಂತೆ ತೋರುವದೋ ಅಲ್ಲಲ್ಲಿ ಅದು ಅವತರಿಸುವದು; ಆದ್ದರಿಂದಲೇ ಯುರೋಪಿನಲ್ಲಿಯೂ ಈಗ ಅದರ ಬೀಜಾವಾಪವಾಗಿರುತ್ತದೆ.

ಈ ದರ್ಶನದ ವಿಷಯದಲ್ಲಿ ನಾನು ಇನ್ನೊಂದು ವಿಚಾರವನ್ನು ಹೇಳತಕ್ಕದ್ದಿದೆ. ಪ್ರಾಚೀನವಾದ ಉಪನಿಷತ್ತುಗಳಲ್ಲಿ ದಿವ್ಯತರವಾದ ಕಾವ್ಯವು ಕಂಡುಬರುತ್ತದೆ. ಅವುಗಳನ್ನು ರಚಿಸಿದವರು ಕವಿಗಳು. ಧರ್ಮಪ್ರೇರಣೆಯು ಕಾವ್ಯದಿಂದಲೇ ಬರುವದೆಂದು **ಪ್ಲೇಟೋ*** ಹೇಳಿರುತ್ತಾನೆ; ಕಾವ್ಯದ ಮೂಲಕ ಈ ತತ್ತ್ವಗಳನ್ನು ತೋರಿಸುವದಕ್ಕೇ ಈ ಋಷಿಗಳು ಮಾನವರ ಅಂತಸ್ತನ್ನು ಮೀರಿ ಜನಿಸಿದರೋ – ಎಂಬಂತೆ ಇದೆ. ಅವರು ಬೋಧನೆಮಾಡಲಿಲ್ಲ, ವಾದಮಾಡಲಿಲ್ಲ, ಗ್ರಂಥರಚನೆಯನ್ನು ಮಾಡಲಿಲ್ಲ, ಅವರ ಹೃದಯದಿಂದ ಗಾನವು ಹೊರಟಿತು. ಬುದ್ಧನಲ್ಲಿ ಮಹಾಜಗದ್ವ್ಯಾಪಕವಾದ ಹೃದಯವೂ

---

*. ಈತನೊಬ್ಬ ಗ್ರೀಕ್ ತತ್ತ್ವಶಾಸ್ತ್ರಜ್ಞನು ಈತನ ಕಾಲವು ಕ್ರಿ.ಪೂ. 427ರಿಂದ 327ರವರೆಗೆ. ಅರಿಸ್ಟಾಟಲ್ ಮತ್ತು ಪ್ಲೇಟೋ – ಇವರಿಬ್ಬರ ವಿಚಾರ ಸರಣಿಗಳು ಈಗಲೂ ಯೂರೋಪಿನವರ ವಿಚಾರದ ಮೇಲೆ ತಮ್ಮ ಪ್ರಭಾವವನ್ನು ತೋರಿಸುತ್ತಿರುವುವು.

ಅನಂತವಾದ ತಾಳ್ಮೆಯೂ ಇದ್ದದ್ದರಿಂದ ಅವನು ಧರ್ಮವನ್ನು ಅನುಷ್ಠಾನಯೋಗ್ಯವಾಗಿ ಮಾಡಿ ಅದನ್ನು ಪ್ರತಿಯೊಬ್ಬರ ಮನೆಯ ಬಾಗಿಲಿಗೂ ತಂದುಬಿಟ್ಟನು. ಶಂಕರಾಚಾರ್ಯರಲ್ಲಿ ಅತ್ಯದ್ಭುತವಾದ ಬುದ್ಧಿಶಕ್ತಿಯಿದ್ದಿತು; ಅವರು ಒಂದೊಂದರ ಮೇಲೂ ಯುಕ್ತಿಯ ದಿವ್ಯಪ್ರಭಾಮಂಡಲವನ್ನೇ ತಿರುಗಿಸಿಬಿಟ್ಟರು. ಇಂದು ಆ ಪರಮಪ್ರಕಾಶ ಯುಕ್ತಿಯ ಸೂರ್ಯನೂ ಬೇಕು, ಅದು ಬುದ್ಧನ ಹೃದಯದೊಡನೆ - ಪ್ರೇಮವೂ ಕರುಣೆಯೂ ಸೇರಿದ ವಿಚಿತ್ರವಾದ ವಿಶಾಲತಮವಾದ ಹೃದಯದೊಡನೆ- ಸೇರಿಯೂ ಇರಬೇಕು; ಇಂಥ ಒಟ್ಟು ಬೇಕಾಗಿರುತ್ತದೆ. ಈ ಸಂಯೋಗದಿಂದ ನಮಗೆ ಅತ್ಯಂತೋತ್ಕೃಷ್ಟವಾದ ದರ್ಶನವು ಸಿಕ್ಕುವದು. ಆಗ ಭೌತಿಕ ವಿಜ್ಞಾನವೂ ಧರ್ಮವೂ ಸಂಧಿಸಿ ಒಂದಕ್ಕೊಂದು ಹಸ್ತಲಾಘವನ್ನು ನೀಡುವವು; ಕಾವ್ಯವೂ ದರ್ಶನವೂ ಮಿತ್ರರಾಗುವವು, ಇದೇ ಮುಂದಿನ ಕಾಲದ ಧರ್ಮವಾಗುವದು. ಇದನ್ನು ನಾವು ಬೆಳೆಯಿಸುವದಾದರೆ, ಅದು ಎಲ್ಲಾ ಕಾಲಕ್ಕೂ ಎಲ್ಲಾ ಜನರಿಗೂ ಹೊಂದುವಂತಾಗುವದೆಂದು ಧಾರಾಳವಾಗಿ ಹೇಳಬಹುದು. ಈಗಿನ **ಭೌತಿಕ ವಿಜ್ಞಾನಕ್ಕೆ** ಹೊಂದುಗಡೆಯಾಗುವದಕ್ಕೆ ಇದೊಂದೇ ಮಾರ್ಗವು, ಏಕೆಂದರೆ ಸ್ವಲ್ಪ ಹೆಚ್ಚುಕಡಿಮೆ ಅದು ಆಗಲೇ ಇಲ್ಲಿಗೆ ಬಂದು ಮುಟ್ಟಿರುತ್ತದೆ. ವಿಜ್ಞಾನಶಾಸ್ತ್ರಜ್ಞನು ಎಲ್ಲಾ ಪದಾರ್ಥಗಳೂ ಒಂದೇ ಒಂದು ಶಕ್ತಿಯ ರೂಪಾಂತರಗಳೆಂದು ಹೇಳುವಾಗ ನಿಮಗೆ ಉಪನಿಷತ್ತಿನಲ್ಲಿ ಕೇಳಿಬರುವ ಈಶ್ವರನ ನೆನಪೇ ಆಗುವದಿಲ್ಲವೇ? "ಒಂದೇ ಬೆಂಕಿಯು ವಿಶ್ವದೊಳಗೆ ಹೊಕ್ಕು ಬಗೆಬಗೆಯ ರೂಪವನ್ನಾನುತ್ತಿರುವಂತೆಯೇ ಆ ಒಬ್ಬ ಆತ್ಮನೇ ಪ್ರತಿಯೊಬ್ಬನಲ್ಲಿಯೂ ತೋರಿಸಿಕೊಳ್ಳುತ್ತಿರುವನು, ಇನ್ನೂ ಅದಕ್ಕಿಂತಲೂ ಎಷ್ಟೋ ಪಾಲು ಹೆಚ್ಚಾಗಿಯೂ ಇರುವದು." (ಕ.) ಭೌತಿಕವಿಜ್ಞಾನವು ಎತ್ತಕಡೆಗೆ ವಾಲುತ್ತಿರುವದೆಂಬುದು ಕಾಣುವದಿಲ್ಲವೆ? ಹಿಂದೂ ಜನರು, ಮನಸ್ಸಿನ ವಿಚಾರದಿಂದಲೇ ಮೊದಲು ಮಾಡಿದರು, ವೇದಾಂತತರ್ಕಗಳ ಮೂಲಕವೇ ಹೊರಟರು. ಯೂರೋಪಿಯನ್ ಜನರು ಹೊರಗಿನ ಪ್ರಕೃತಿಯಿಂದ ಹೊರಡುತ್ತಾರೆ; ಈಗ ಅವರೂ ಅದೇ ಫಲಿತಾಂಶಕ್ಕೆ ಬರುತ್ತಿದ್ದಾರೆ. ಮನಸ್ಸಿನಲ್ಲಿ ಹುಡುಕುತ್ತಾ ಹೋದರೆ ಕೊನೆಗೆ ಆ ಐಕ್ಯವನ್ನೇ, ಆ ವ್ಯಾಪಕತತ್ತ್ವವನ್ನೇ, ಪ್ರತಿಯೊಂದರ ಅಂತರಾತ್ಮನನ್ನೇ, ಪ್ರತಿಯೊಂದಕ್ಕೆ ತಿರುಳಾಗಿರುವ ಪರಮಾರ್ಥಸತ್ತೆಯನ್ನೇ, ನಿತ್ಯಮುಕ್ತವೂ ನಿತ್ಯಾನಂದಸ್ವರೂಪವೂ ನಿತ್ಯಸದ್ರೂಪವೂ ಆಗಿರುವ ತತ್ತ್ವವನ್ನೇ, ಬಂದು ಸೇರುತ್ತೇವೆ; ಭೌತಿಕವಿಜ್ಞಾನದ ಮೂಲಕವೂ ಇದೇ ಐಕ್ಯವನ್ನು ಬಂದು ಸೇರುತ್ತೇವೆ. ಇಂದು ಭೌತಿಕ ವಿಜ್ಞಾನವು ಎಲ್ಲಾ ಪದಾರ್ಥಗಳೂ ಒಂದೇ ಒಂದು ಶಕ್ತಿಯ ರೂಪಾಂತರಗಳೆಂದೂ ಅದು ಇರುವ

ಎಲ್ಲದರ ಒಟ್ಟು ರಾಶಿಗೆ ಸಮನಾಗಿರುವದೆಂದೂ ಮಾನವನ ಒಲವು ಮುಕ್ತಿಯ ಕಡೆಗೇ ಇರುವದೇ ಹೊರತು ಬಂಧದ ಕಡೆಗೆ ಇಲ್ಲವೆಂದೂ ನಮಗೆ ತಿಳಿಸುತ್ತಿದೆ. ಜನರು ಏತಕ್ಕೆ ನೀತಿವಂತರಾಗಿರಬೇಕು? ಏಕೆಂದರೆ ನೀತಿಯಿಂದಲೇ ಮುಕ್ತಿಮಾರ್ಗವು ದೊರೆಯುವುದು, ಅನೀತಿಯು ನಮ್ಮನ್ನು ಬಂಧಕ್ಕೆ ಒಯ್ಯುವದು.

ಅದ್ವೈತಸಿದ್ಧಾಂತದಲ್ಲಿರುವ ಮತ್ತೊಂದು ವಿಶೇಷವೇನೆಂದರೆ ಅದು ಮೊದಲಿನಿಂದಲೂ ಅವಿರೋಧಾತ್ಮಕವಾಗಿ ಇರುತ್ತದೆ. "ಯಾರೊಬ್ಬರಿಗೂ ಬುದ್ಧಿಭೇದವನ್ನುಂಟುಮಾಡಬಾರದು, ಯಾರು ಅಜ್ಞರಾಗಿ ಕೀಳ್ತರದ ಉಪಾಸನೆಗಳಲ್ಲಿ ಆಸಕ್ತರಾಗಿರುವರೋ ಅವರಿಗೆ ಕೂಡ ಬುದ್ಧಿಭೇದವನ್ನುಂಟು ಮಾಡಬಾರದು" (ಗೀ.) – ಎಂದು ಧೈರ್ಯವಾಗಿ ಬೋಧಿಸುವದೂ ಇದರ ಒಂದು ಮಹತ್ತ್ವವು. ಅದೇ ಇದರ ಉಪದೇಶವು, 'ಬುದ್ಧಿಭೇದವನ್ನುಂಟು ಮಾಡದಿರಿ, ಪ್ರತಿಯೊಬ್ಬನೂ ಮೇಲುಮೇಲಕ್ಕೆ ಹೋಗುವಂತೆ ಸಹಾಯವನ್ನು ಮಾಡಿರಿ, ಇಡಿಯ ಮಾನವವರ್ಗವನ್ನೇ ಒಳಕ್ಕೆ ಸೇರಿಸಿಕೊಳ್ಳಿ" ಎಂದು ಇದು ಬೋಧಿಸುತ್ತದೆ. ಈ ದರ್ಶನವು ಹೇಳುವ ಈಶ್ವರನು ಸಮಷ್ಟಿಯಾಗಿರುತ್ತಾನೆ. ಪ್ರತಿಯೊಬ್ಬರಿಗೂ ಹೊಂದುವ ಧರ್ಮವು ಬೇಕಾಗಿದ್ದರೆ ಆ ಧರ್ಮದಲ್ಲಿ ಬರಿಯ ವ್ಯಷ್ಟಿಭಾಗಗಳು ಮಾತ್ರ ಇರಬಾರದು, ಅದು ಎಲ್ಲವೂ ಸೇರಿದ ಸಮಷ್ಟಿಯಾಗಿರಬೇಕು, ಧಾರ್ಮಿಕ ಭೂಮಿಕೆಗಳೆಲ್ಲವನ್ನೂ ಅದು ಒಳಗೊಂಡಿರಬೇಕು.

ಈ ಅಭಿಪ್ರಾಯವು ಮತ್ತೆ ಯಾವ ಧರ್ಮದಲ್ಲಿಯೂ ಸ್ಪಷ್ಟವಾಗಿ ಕಂಡುಬರುವದಿಲ್ಲ. ಅವೆಲ್ಲವೂ ಒಟ್ಟು ಸಮಷ್ಟಿಯನ್ನು ಹೊಂದುವದಕ್ಕೆಂದು ಒಂದೇ ಸಮವಾಗಿ ಹೆಣಗಾಡುತ್ತಿರುವ ವ್ಯಷ್ಟಿಗಳೇ ಆಗಿರುತ್ತವೆ. ವ್ಯಷ್ಟಿಯಿರುವದೇ ಇದಕ್ಕಾಗಿ. ಆದ್ದರಿಂದ ಅದ್ವೈತವು ಮೊದಲಿನಿಂದಲೂ ಇಂಡಿಯದಲ್ಲಿರುವ ಬಗೆ ಬಗೆಯ ಧರ್ಮಪಂಥಗಳೊಡನೆ ಅವಿರೋಧದಿಂದಲೇ ಇದ್ದುಕೊಂಡಿತ್ತು. ಇಂಡಿಯದಲ್ಲಿ ಇಂದಿಗೂ ದ್ವೈತಿಗಳು ಇರುತ್ತಾರೆ; ಅಲ್ಲಿ ಅವರ ಸಂಖ್ಯೆಯೇ ಅತ್ಯಂತ ಹೆಚ್ಚಾಗಿರುತ್ತದೆ, ಏಕೆಂದರೆ ಕಡಿಮೆಯ ಶಿಕ್ಷಣವನ್ನು ಹೊಂದಿರುವ ಚಿತ್ತಗಳಿಗೆ ದ್ವೈತವೇ ಸಹಜವಾಗಿ ಒಗ್ಗುತ್ತದೆ. ವಿಶ್ವವನ್ನು ವಿವರಿಸುವದಕ್ಕೆ ಅದು ಸುಖವಾಗಿರುವ, ಸ್ವಾಭಾವಿಕವಾದ, ಸಾಮಾನ್ಯ ಬುದ್ಧಿಗೆ ಒಪ್ಪಾಗುವ ಕ್ರಮವಾಗಿರುತ್ತದೆ. ಆದರೆ ಈ ದ್ವೈತಿಗಳೊಡನೆ ಅದ್ವೈತಕ್ಕೇನೂ ಜಗಳವಿಲ್ಲ. ಇಲ್ಲಿ ಒಬ್ಬನ ಮತದಲ್ಲಿ ದೇವರು ಪ್ರಪಂಚದ ಹೊರಗೆ ಎಲ್ಲಿಯೋ ಸ್ವರ್ಗದಲ್ಲಿರುತ್ತಾನೆ; ಮತ್ತೊಬ್ಬನ ಮತದಲ್ಲಿ ಆತನು ತನ್ನ ಆತ್ಮನೇ ಆಗಿರುತ್ತಾನೆ, ಆತನನ್ನು ತನಗಿಂತ ಒಂದಿಷ್ಟು ದೂರವಾಗಿರುವನೆಂದು ಕರೆದರೂ ಅದು

ಅಪರಾಧವಾಗಿರುತ್ತದೆ; ಸ್ವಲ್ಪ ಭೇದಭಾವನೆಯಿದ್ದರೂ ಭಯಂಕರವಾಗಿರುತ್ತದೆ. ಅವನು ಹತ್ತಿರವಿರುವದೆಲ್ಲಕ್ಕಿಂತಲೂ ಹತ್ತಿರವಿರುತ್ತಾನೆ. ಈ ಸಾಮೀಪ್ಯವನ್ನು ತಿಳಿಸುವದಕ್ಕೆ ಐಕ್ಯವೆಂಬ ಮಾತಲ್ಲದೆ ಯಾವ ಭಾಷೆಯಲ್ಲಿಯೂ ಬೇರೊಂದು ಶಬ್ದವಿರುವದಿಲ್ಲ. ಅದ್ವೈತಿಗೆ ಮತ್ತೆ ಯಾವ ಭಾವನೆಯಿಂದಲೂ ತೃಪ್ತಿಯಾಗುವದಿಲ್ಲ. ದ್ವೈತಿಗೆ ಅದ್ವೈತವೆಂದರೆ ಹೇಗೆ ಅಸಹ್ಯವಾಗುವದೋ ದೈವದ್ರೋಹವೆಂದು ತೋರುವದೋ, ಅದ್ವೈತಿಗೂ ಮತ್ತೊಂದು ಭಾವನೆಯು ಹಾಗೆಯೇ ತೋರುವದು. ಹೀಗಿದ್ದರೂ ಅದ್ವೈತಿಗೆ ಈ ಮಿಕ್ಕ ಭಾವನೆಗಳೂ ಇದ್ದೇ ತೀರಬೇಕೆಂದು ತಿಳಿದಿರುತ್ತದೆ, ಆದ್ದರಿಂದ ಸನ್ಮಾರ್ಗದಲ್ಲಿರುವ ದ್ವೈತಿಯೊಡನೆ ಅವನು ಜಗಳವಾಡುವದಿಲ್ಲ. ದ್ವೈತಿಗೆ ಅವನ ದೃಷ್ಟಿಕೋನದಿಂದ ನಾನಾತ್ವವು ಕಾಣಲೇಬೇಕಾಗಿರುವದು, ಅವನ ದೃಷ್ಟಿಪಥಕ್ಕೆ ಅದು ಸ್ವಾಭಾವಿಕವಾದ ಅವಶ್ಯಕತೆಯಾಗಿರುತ್ತದೆ, ಆದ್ದರಿಂದ ಅವನಿಗೆ ಅದು ಇದ್ದುಕೊಂಡಿರಲಿ. ಅವನ ಕಲ್ಪನೆಗಳು ಏನಾದರೂ ಆಗಿರಲಿ, ಅವನೂ ತನ್ನ ಗುರಿಯನ್ನೇ ಮುಟ್ಟುವದಕ್ಕೆ ಹೋಗುತ್ತಿರುವನೆಂದು ಅದ್ವೈತಿಗೆ ಗೊತ್ತು. ಈ ವಿಷಯದಲ್ಲಿ ಇವನಿಗೂ ದ್ವೈತಿಗೂ ಪೂರ್ಣತಾರತಮ್ಯವಿದೆ. ದ್ವೈತಿಗೆ ತನ್ನ ದೃಷ್ಟಿಯಿಂದ ನೋಡಿದಾಗ ತನಗಿಂತ ಬೇರೆಯ ಅಭಿಪ್ರಾಯವನ್ನು ಪಡುವವರೆಲ್ಲರೂ ತಪ್ಪುತಿಳಿವಳಿಕೆಯುವರೇ ಆಗಿರಬೇಕೆಂದು ನಂಬಲೇಬೇಕಾಗಿರುತ್ತದೆ. ಈ ಲೋಕದಲ್ಲಿರುವ ದ್ವೈತಿಗಳೆಲ್ಲ ಸಹಜವಾಗಿ ಸಗುಣೇಶ್ವರನನ್ನೇ ಅಂಗೀಕರಿಸಿರುತ್ತಾರೆ. ಆತನು ಕೇವಲ ಮಾನುಷ ಸ್ವಭಾವದವನಾಗಿರುತ್ತಾನೆ; ಈ ಲೋಕದ ಒಬ್ಬ ದೊಡ್ಡ ಚಕ್ರಾಧಿಪನಂತೆ ಅವನು ಕೆಲವರಲ್ಲಿ ರಾಗವೂ ಮತ್ತೆ ಕೆಲವರಲ್ಲಿ ದ್ವೇಷವೂ ಉಳ್ಳವನಾಗಿರುತ್ತಾನೆ ಕೆಲವು ಜನರನ್ನು, ಕೆಲಕೆಲವು ಕುಲದವರನ್ನು ಕಂಡರೆ, ಅದೇಕೋ ಅವನಿಗೆ ಹೆಚ್ಚು ಮೆಚ್ಚಿಕೆಯಾಗಿರುತ್ತದೆ; ಅವರ ಮೇಲೆ ಬೇಕಾದ ವರಗಳ ಸುರಿಮಳೆಯನ್ನು ಕರೆಯುತ್ತಾನೆ. ದೇವರಿಗೆ ಬೇಕಾದವರು ಕೆಲವರು ಇರುತ್ತಾರೆಂದು ದ್ವೈತಿಯು ಸಹಜವಾದ ನಂಬಿಕೆಯಿರುತ್ತದೆ; ಇಂಥ ಇಷ್ಟಜನರಲ್ಲಿ ತಾನೂ ಒಬ್ಬನಾಗಿರುವೆನೆಂಬ ಪ್ರತ್ಯಾಶೆಯು ಅವನಿಗೆ ಉಂಟು. ಸ್ವಲ್ಪ ಹೆಚ್ಚುಕಡಿಮೆ ಪ್ರತಿಯೊಂದು ಧರ್ಮದಲ್ಲಿಯೂ "ನಾವೇ ನಮ್ಮ ದೇವರಿಗೆ ಪ್ರಿಯಭಕ್ತರು. ನಾವು ನಂಬುವಂತೆ ನಂಬಿದರೆ ಮಾತ್ರ ನೀವೂ ಆತನಿಗೆ ಪ್ರಿಯರಾಗುವಿರಿ" ಎಂಬ ಭಾವನೆಯು ಇರುವದು ಕಂಡು ಬರುತ್ತದೆ. ಕೆಲವರು ದ್ವೈತಿಗಳು ಎಷ್ಟು ಸಂಕುಚಿತ ಬುದ್ಧಿಯವರಾಗಿರುವರೆಂದರೆ ಯಾರು ದೇವರಿಗೆ ಪ್ರಿಯರಾದವರೆಂದು ಮೊದಲೇ ನಿಯತರಾಗಿರುವರೋ ಅವರಿಗೆ ಮಾತ್ರ ಸದ್ಗತಿಯಾಗುವದೆಂದು ಅವರು ಹಟಹಿಡಿದಿರುತ್ತಾರೆ, ಮಿಕ್ಕವರು ಎಷ್ಟೇ ಪ್ರಯತ್ನಮಾಡಲಿ, ಅವರು ದೇವರಿಗೆ

ಮೆಚ್ಚಿನವರಾಗುವದಿಲ್ಲವೆಂದು ಅವರ ನಂಬಿಕೆ. ಇಂಥ ಸಂಕುಚಿತ ಬುದ್ಧಿಯು ಒಂದಿಷ್ಟಾದರೂ ಇಲ್ಲದ ಒಂದೇ ಒಂದು ದ್ವೈತಪಂಥವನ್ನು ತೋರಿಸಿರಿ, ನೋಡೋಣ! ಆದ್ದರಿಂದ ಸಹಜವಾಗಿಯೇ ದ್ವೈತಿಗಳ ಪಂಥಗಳೂ ಒಂದರೊಡನೊಂದು ಕಚ್ಚಾಡುತ್ತಲೇ ಇರಬೇಕಾಗಿದೆ, ಅವು ಯಾವಾಗಲೂ ಈ ಕೆಲಸವನ್ನು ಮಾಡುತ್ತಲೇ ಇವೆ. ಇನ್ನೊಂದು ಮಾತೇನೆಂದರೆ, ಈ ದ್ವೈತಿಗಳು ಅಶಿಕ್ಷಿತಜನರಿಗೆ ಅಭಿಮಾನವನ್ನು ಹುಟ್ಟಿಸುವಂಥ ಉಪದೇಶಗಳಿಂದ ಜನಾನುರಾಗವನ್ನು ಸಂಪಾದಿಸಿಕೊಳ್ಳುತ್ತಾರೆ. ತಮಗೆ ಮಿಕ್ಕ ಯಾರಿಗೂ ಇಲ್ಲದ ಅಧಿಕಾರ ವಿಶೇಷಗಳು ಇರುವವೆಂದು ಭಾವಿಸುವದರಲ್ಲಿ ಅವರಿಗೆ ಬಹಳ ಅಕ್ಕರೆ. ಕೈಯಲ್ಲಿ ಒಂದು ದಂಡವನ್ನು ಹಿಡಿದು ಶಿಕ್ಷಿಸುವದಕ್ಕೆ ಸಿದ್ಧನಾಗಿರುವ ದೇವರೊಬ್ಬನಿದ್ದ ಹೊರತು ನೀತಿಯಿಂದಿರುವದು ಆಗಲಾರದೆಂದು ದ್ವೈತಿಯ ನಂಬಿಕೆ, ಅವಿಚಾರಿಗಳಾದ ಪ್ರಾಕೃತ ಜನರು ಸಾಮಾನ್ಯವಾಗಿ ದ್ವೈತಿಗಳೇ ಆಗಿರುತ್ತಾರೆ; ಪಾಪ, ಪ್ರತಿಯೊಂದು ದೇಶದಲ್ಲಿಯೂ ಅವರನ್ನು ಸಾವಿರಾರು ವರ್ಷಗಳಿಂದ ಮಿಕ್ಕವರು ಗೋಳುಗುಟ್ಟಿಸುತ್ತಲೇ ಬಂದಿರುತ್ತಾರೆ. ಆದ್ದರಿಂದ ಅವರಿಗೆ ಸದ್ಗತಿಯೆಂದರೆ ಯಾವ ಶಿಕ್ಷೆಯೂ ಇಲ್ಲದಂತೆ ಬಿಡುಗಡೆಯಾಗುವದು. ಅಮೆರಿಕದಲ್ಲಿ ಒಬ್ಬ ಧರ್ಮೋಪದೇಶಕನು ನನ್ನನ್ನು "ಏನು! ನಿಮ್ಮ ಮತದಲ್ಲಿ ಸೈತಾನನೇ ಇಲ್ಲವೇ? ಅದು ಹೇಗಾದೀತು?" ಎಂದು ಕೇಳಿದ್ದನು. ಆದರೆ ಈ ಲೋಕದಲ್ಲಿ ಹುಟ್ಟಿದ ಉತ್ತಮ ಪುರುಷರೂ, ಮಹಾತ್ಮರೂ ಈ ಉತ್ಕೃಷ್ಟವಾದ ನಿರ್ಗುಣಭಾವನೆಯಿಂದಲೇ ವ್ಯವಹಾರವನ್ನು ಮಾಡಿರುತ್ತಾರೆಂದು ತಿಳಿಯಬರುತ್ತದೆ. "ನಾನೂ ನನ್ನ ತಂದೆಯೂ ಒಂದೇ" (ಬೈ.) – ಎಂದು ಹೇಳಿದಾತನ ಮಹಿಮೆಯೇ ಲಕ್ಷೋಪಲಕ್ಷ ಜನರಲ್ಲಿ ಪ್ರಸರಿಸಿರುತ್ತದೆ. ಸಾವಿರಾರು ವರ್ಷಗಳಿಂದಲೂ ಅದು ಉತ್ತಮಫಲವನ್ನು ಕೊಟ್ಟಿರುತ್ತದೆ. ಆತನೇ ಅದ್ವೈತಿಯಾಗಿದ್ದದ್ದರಿಂದ* ಸಗುಣೇಶ್ವರನಿಗಿಂತ ಹೆಚ್ಚಿನ ಕಲ್ಪನೆಯನ್ನು ಕಾಣದ ಪ್ರಾಕೃತ ಜನರಿಗೆ ಅವನು "ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಪ್ರಾರ್ಥಿಸಿರಿ" (ಬೈ.) –ಎಂದು ಉಪದೇಶಿಸುತ್ತಿದ್ದನು; ಇನ್ನೂ ಸ್ವಲ್ಪ ಹೆಚ್ಚಿನ ಭಾವನೆಯನ್ನು ಗ್ರಹಿಸಬಲ್ಲವರಿಗೆ ಅವನು "ನಾನು ದ್ರಾಕ್ಷಿಯ ಬಳ್ಳಿಯಂತೆ, ನೀವು ಅದರ ಕವಲುಗಳಂತೆ" (ಬೈ.) – ಎಂದು ಹೇಳುತ್ತಿದ್ದನು. ಆದರೆ ತನ್ನ ಶಿಷ್ಯರಲ್ಲಿ ತನ್ನ ಸ್ವರೂಪವನ್ನು ಇನ್ನೂ ಹೆಚ್ಚು ಪೂರ್ಣವಾಗಿ ಪ್ರಕಟಿಸುವಾಗ ಆತನು ಅತ್ಯಂತ

* ಕ್ರೈಸ್ತನು ಅದ್ವೈತಿಯೆಂದು ಆತನ ಅನುಯಾಯಿಗಳೆಲ್ಲ ಒಪ್ಪದಿದ್ದರೂ ಆತನ ಉಪದೇಶದಲ್ಲ ಆ ಸೂಚನೆಗಳು ಇವೆ. ಇಲ್ಲಿ ಕೊಟ್ಟಿರುವ ಹೊಸ ಒಡಂಬಡಿಕೆಯ ವಚನಗಳಿಂದ ಆತನ ಉಪದೇಶದಲ್ಲಿ ದ್ವೈತ ವಿಶಿಷ್ಟಾದ್ವೈತಗಳೂ ಅದ್ವೈತವೂ ಅಡಗಿದ್ದವೆಂಬ ಅಭಿಪ್ರಾಯವನ್ನು ಸ್ವಾಮಿಗಳು ಸೂಚಿಸಿರುತ್ತಾರೆ.

ಪರಮಾರ್ಥವನ್ನೇ ಹೇಳಿ "ನಾನೂ ನನ್ನ ತಂದೆಯೂ ಒಂದೇ" (ಬೈ.) - ಎಂದು ಹೇಳಿರುತ್ತಾನೆ.

ದ್ವೈತಿಗಳ ದೇವತೆಗಳನ್ನು ಸ್ವಲ್ಪವೂ ಲೆಕ್ಕಕ್ಕೆ ತಾರದ ಮಹಾತ್ಮ ಬುದ್ಧನನ್ನು ನಾಸ್ತಿಕನೆಂದೂ ಚಾರ್ವಾಕನೆಂದೂ ಜನರು ಕರೆದಿರುತ್ತಾರೆ; ಆದರೆ ಆತನೇ ಒಂದು ಬಡಮೇಕೆಗಾಗಿ ತನ್ನ ಶರೀರವನ್ನು ಒಪ್ಪಿಸುವದಕ್ಕೆ ಸಿದ್ಧನಾದವನು. ಆತನು ಯಾವ ಜನಾಂಗದಲ್ಲಿಯೇ ಆಗಲಿ ಕಾಣಬರುವ ನೀತಿ ಭಾವನೆಗಳನ್ನೆಲ್ಲ ಮೀರಿದ ಅತ್ಯಂತ ಉಚ್ಚಭಾವನೆಯನ್ನು ಪ್ರಚಾರಕ್ಕೆ ತಂದನು. ಎಲ್ಲೆಲ್ಲಿ ನೀತಿಯ ಶಾಸ್ತ್ರವಿರುವದೋ ಅದೆಲ್ಲ ಆತನಿಂದ ಹೊರಟುಬಂದಿರುವ ಒಂದು ಕಿರಣವಾಗಿರುವದು.

ಈ ಲೋಕದ ವಿಶಾಲ ಹೃದಯಗಳನ್ನು ಸಂಕುಚಿತವಾದ ಹದ್ದಿನೊಳಗೆ ಅಮುಕಿ ಅಲ್ಲಿಯೇ ಇಡುವದು ಆಗುವ ಮಾತಲ್ಲ; ಅದರಲ್ಲಿಯೂ ಮಾನವನ ಇತಿಹಾಸದ ಈ ಯುಗದಲ್ಲಿ ಅದು ಆಗುವದೇ ಅಲ್ಲ; ಈಗ ಒಂದು ನೂರು ವರ್ಷದ ಕೆಳಗೆ ಕೂಡ ಜನರು ಕನಸಿನಲ್ಲಿಯೂ ಕಾಣದೆ ಇದ್ದಷ್ಟು ಬುದ್ಧಿವಿಕಾಸವಾಗಿರುತ್ತದೆ, ಈಗ್ಗೆ ಐವತ್ತು ವರ್ಷಗಳ ಕೆಳಗೆ ಕೂಡ ಜನರು ಕನಸಿನಲ್ಲಿಯೂ ಕಂಡರಿಯದಂಥ ಭೌತಿಕ ವಿಜ್ಞಾನದ ಅಲೆಯು ಈಗ ಎದ್ದಿರುತ್ತದೆ. ಜನರನ್ನು ಸಂಕುಚಿತವಾದ ಎಲ್ಲೆಕಟ್ಟಿಗೆ ಅಮುಕಿದರೆ ಅವರನ್ನು ಪಶುಗಳಾಗಿಯೂ ಅವಿಚಾರಗಳಾದ ಪ್ರಾಕೃತರಾಗಿಯೂ ಮಾಡಿದಂತೆ ಆಗುತ್ತದೆ. ಅವರ ನೈತಿಕ ಜೀವನವನ್ನು ನಾಶಗೊಳಿಸಿದಂತೆ ಆಗುತ್ತದೆ. ಈಗ ನಮಗೆ ಬೇಕಾಗಿರುವದು ಅತ್ಯಂತ ವಿಶಾಲವಾದ ಹೃದಯ, ಅತ್ಯಂತ ಸೂಕ್ಷ್ಮವಾದ ಬುದ್ಧಿ - ಇವುಗಳ ಸಂಯೋಗವು; ಅನಂತವಾದ ಜ್ಞಾನ, ಅನಂತವಾದ ಪ್ರೇಮ - ಇವುಗಳ ಸಂಯೋಗವು. ವೇದಾಂತಿಯು ಈ ಮೂರು ವಿಶೇಷಣಗಳನ್ನಲ್ಲದೆ ಮತ್ತೆ ಯಾವದನ್ನೂ ದೇವರಿಗೆ ಕೊಡುವದಿಲ್ಲ; ಆತನು ಅಪರಿಮಿತಸದ್ರೂಪನು, ಅಪರಿಮಿತ ಚಿದ್ರೂಪನು, ಅಪರಿಮಿತಾನಂದರೂಪನು; ಈ ಮೂರು ಒಂದೇ ಸ್ವರೂಪವೆಂದು ಅದ್ವೈತಿಯ ಭಾವನೆ. ಜ್ಞಾನವೂ ಪ್ರೇಮವೂ ಇಲ್ಲದ ಸತ್ತೆಯು ಅಸಂಭಾವನೀಯವು. ನಮಗೆ ಬೇಕಾಗಿರುವದೇನೆಂದರೆ ಅವಿಚ್ಛಿನ್ನವಾದ ಸತ್ತು, ಚಿತ್ತು, ಆನಂದ - ಇವುಗಳ ಹೊಂದಿಕೆಯೇ. ಅದೇ ನಮ್ಮ ಹೆಗ್ಗುರಿಯು.

ಶಂಕರರ ಬುದ್ಧಿಯೂ ಬುದ್ಧನ ಹೃದಯವೂ ಒಡಗೂಡಿರುವದು ಸಾಧ್ಯವು.* ಇಂಥ ಉತ್ತಮ ಸಾಮರಸ್ಯವನ್ನು ಸಂಪಾದಿಸುವದಕ್ಕೆ ನಾವುಗಳೆಲ್ಲರೂ ಪ್ರಯತ್ನಿಸುವಂತಾಗಲೆಂಬುದೇ ನನ್ನ ಕೋರಿಕೆ.

-------

* ಬುದ್ಧಿಯೂ ಹೃದಯವೂ ಸಮರಸವಾಗಿರಬೇಕೆಂಬುದು ಇಲ್ಲಿ ವಿವಕ್ಷಿತವೇ ಹೊರತು ಶಂಕರರಿಗೆ ಹೃದಯದಲ್ಲಿ ಸಂಕೋಚವಿದ್ದಿತೆಂಬ ಸೂಚನೆಯೇನೂ ಇಲ್ಲ. ಕಾಪಾಲಿಗೆ ತಮ್ಮ ಶಿರಸ್ಸನ್ನೇ ಒಪ್ಪಿಸುವದಕ್ಕೆ ಸಿದ್ಧರಾಗಿದ್ದ ಆಚಾರ್ಯರ ಜೀವನಚರಿತ್ರೆಯ ಘಟನೆಯನ್ನೂ ಆ ಬ್ರಹ್ಮಸ್ತಂಬಪರ್ಯಂತವಾದ ಪ್ರಾಣಿಗಳಲ್ಲೆಲ್ಲ ಒಬ್ಬನೇ ಆತ್ಮನಿರುವನೆಂದು ಅವರು ಬೋಧಿಸಿರುವ ಉದಾರ ತತ್ತ್ವವನ್ನೂ ನೆನಪಿಗೆ ತಂದವರಿಗೆ ಈ ವಿಷಯದಲ್ಲಿ ಯಾವ ಸಂಕುಚಿತ ಬುದ್ಧಿಯೂ ಆಗುವಂತಿಲ್ಲವೆಂಬುದನ್ನು ಹೇಳಬೇಕಾಗಿಯೇ ಇಲ್ಲ.

# 7. ಎಲ್ಲದರಲ್ಲಿಯೂ ಈಶ್ವರನು

ನಮ್ಮ ಜೀವಮಾನದಲ್ಲಿ ಬಹುಭಾಗವು ನಾವು ಎಷ್ಟೇ ಒಲ್ಲೆವೆಂದರೂ ದುಃಖಮಯವಾಗಿದ್ದೇ ತೀರುವದೆಂಬುದನ್ನೂ ಈ ದುಃಖರಾಶಿಯೆಂಬುದು ನಮಗೆ ಸ್ವಲ್ಪ ಹೆಚ್ಚು ಕಡಿಮೆಯಾಗಿ ಅನಂತವಾಗಿರುವದೆಂಬುದನ್ನೂ ಹಿಂದೆ ತಿಳಿಸಿದ್ದಾಗಿದೆ. ಅನಾದಿಕಾಲದಿಂದಲೂ ಇದನ್ನು ಪರಿಹಾರಮಾಡಿಕೊಳ್ಳಬೇಕೆಂದು ನಾವು ಹೆಣಗಾಡುತ್ತಿರುತ್ತೇವೆ; ಆದರೂ ಒಟ್ಟಿನಲ್ಲಿ ಪ್ರತಿಯೊಂದೂ ಸ್ವಲ್ಪ ಹೆಚ್ಚುಕಡಿಮೆ ಮೊದಲಿನಂತೆಯೇ ಇದ್ದುಕೊಂಡಿರುತ್ತದೆ. ನಾವು ಪರಿಹಾರಕ್ಕೆ ಉಪಾಯಗಳನ್ನು ಕಂಡುಹಿಡಿದಂತೆಲ್ಲ ಇನ್ನೂ ಸೂಕ್ಷ್ಮವಾದ ದುಃಖಗಳು ನಮಗೆ ಬಂದು ಗಂಟುಬೀಳುತ್ತವೆ. ಈ ಕಷ್ಟಗಳನ್ನು ನಿವಾರಿಸುವದಕ್ಕೆ ದೇವರೊಬ್ಬನೇ ಗತಿಯೆಂದು ಎಲ್ಲಾ ಮತಗಳಲ್ಲಿಯೂ ಹೇಳಿರುತ್ತದೆಯೆಂಬುದನ್ನೂ ಹಿಂದೆ ತಿಳಿಸಿದ್ದಾಗಿದೆ. ಯಾವ ಧರ್ಮದಲ್ಲಿಯೇ ಆಗಲಿ ಇದನ್ನೇ ಹೇಳಿರುತ್ತದೆ. ಪ್ರಪಂಚವು ತೋರುವಂತೆಯೇ ಅದನ್ನು ನಾವು ಪರಿಗ್ರಹಿಸಿದರೆ – ಅದನ್ನು ಹಾಗೆಯೇ ಸ್ವೀಕರಿಸಬೇಕೆಂದೇ ಈಗಿನ ಕಾಲದ ವ್ಯವಹಾರಚತುರರನೇಕರು ಹೇಳುತ್ತಿರುವರು. ಆದರೆ ಹಾಗೆ ಮಾಡಿದರೆ – ನಮಗೆ ಆಗ ದುಃಖವೊಂದೇ ಹೊರತು ಮತ್ತೇನೇನೂ ಉಳಿದುಕೊಳ್ಳುವದಿಲ್ಲವೆಂದೇ ಧರ್ಮಗಳು ಹೇಳುತ್ತವೆ. ಇದೂ ಅಲ್ಲದೆ ಈ ಪ್ರಪಂಚವನ್ನು ಮೀರಿರುವದೂ ಒಂದು ಇದೆ ಎಂದೇ ಧರ್ಮಗಳೆಲ್ಲ ಹೇಳುತ್ತಿವೆ. ಈ ಪಂಚೇಂದ್ರಿಯಗಳ ಜೀವನವೇ, ಬರಿಯ ವಿಷಯೋಪಭೋಗದ ಜೀವನವೇ ಸರ್ವಸ್ವವಲ್ಲ; ಅದು ಬಹು ಸಣ್ಣಭಾಗ, ಕೇವಲ ಮೇಲುಮೇಲಿನ ಭಾಗ. ಇದಕ್ಕೆ ಆಧಾರವಾಗಿ ಇದನ್ನು ಮೀರಿರುವ ಅನಂತತತ್ತ್ವವಿದೆ, ಅದರಲ್ಲಿ ಯಾವ ದುಃಖವೂ ಇರುವದಿಲ್ಲ – ಎಂಬುದು ಅವುಗಳ ಉಪದೇಶವು. ಕೆಲವರು ಈ ತತ್ತ್ವವನ್ನು ದೇವರೆನ್ನುವರು, ಕೆಲವರು **ಅಲ್ಲಾಹನೆನ್ನುವರು**, ಕೆಲವರು **ಯುಹೋವನೆನ್ನುವರು**, ಕೆಲವರು **ಜೋವ್** ಎಂದು ಕರೆಯುವರು, ಇತ್ಯಾದಿ, ವೇದಾಂತಿಯು ಇದನ್ನು ಬ್ರಹ್ಮವೆಂದು ಕರೆಯುತ್ತಾನೆ.

ಧರ್ಮಗಳು ನಮಗೆ ಹೇಳುವ ಬುದ್ಧಿವಾದವನ್ನು ನೋಡಿದರೆ ನಮ್ಮ ಬಾಳನ್ನೇ ಸಾಕುಮಾಡಿಕೊಳ್ಳುವದುತ್ತಮವೆಂತ ಅವು ಹೇಳಿರುವಂತೆ ಮೊದಮೊದಲು ತೋರುತ್ತದೆ ಈ ಜೀವನದಲ್ಲಿರುವ ದುಃಖಗಳನ್ನು ಹೇಗೆ ನಿವಾರಿಸಿಕೊಳ್ಳಬೇಕು? ಎಂತ ಕೇಳಿದ್ದಕ್ಕೆ ಪ್ರಾಣವನ್ನು ಬಿಟ್ಟುಬಿಡಿ ಎಂದು ಉತ್ತರವನ್ನು ಕೊಟ್ಟಿರುವಂತೆ ಕಾಣುತ್ತದೆ. ಇದಕ್ಕೆ ಒಂದು ಹಳೆಯ ಕಥೆಯ ದೃಷ್ಟಾಂತವು ನೆನಪಿಗೆ ಬರುತ್ತದೆ. ಒಬ್ಬನ ಮುಖದ ಮೇಲೆ ಒಂದು ಸೊಳ್ಳೆ ಕೂತುಕೊಂಡಿತು, ಅವನ ಸ್ನೇಹಿತನೊಬ್ಬನು ಆ ಸೊಳ್ಳೆಯನ್ನು ಕೊಲ್ಲಬೇಕೆಂದು ಒಂದು ಬಲವಾದ ಏಟು ಕೊಟ್ಟು ಸೊಳ್ಳೆಯನ್ನೂ ಅವನನ್ನೂ ಇಬ್ಬರನ್ನೂ ಕೊಂದು ಹಾಕಿದನಂತೆ! ದುಃಖಪರಿಹಾರಕ್ಕೆ ಹೇಳಿರುವ ಉಪಾಯವೂ ಈ ಬಗೆಯದಾಗಿರುವಂತೆಯೇ ತೋರುತ್ತದೆ. ಜೀವನದಲ್ಲಿ ತುಂಬ ದುಃಖವಿದೆ, ಪ್ರಪಂಚದಲ್ಲಿ ತುಂಬ ದುಃಖವಿದೆ; ಪ್ರಪಂಚದ ಸ್ವಭಾವವನ್ನು ತಿಳಿಯಬಲ್ಲಷ್ಟು ಪ್ರಾಪ್ತವಯಸ್ಕನಾದವನು ಯಾರೂ ಇದನ್ನು ಅಲ್ಲಗಳೆಯುವಂತಿಲ್ಲ. ಆದರೆ ಧರ್ಮಗಳಲ್ಲಿ ಇದರ ಪರಿಹಾರಕ್ಕೆ ಹೇಳಿರುವ ಉಪಾಯವೇನು? ಈ ಪ್ರಪಂಚದಲ್ಲೇನೂ ಹುರುಳಿಲ್ಲವಂತೆ, ಈ ಪ್ರಪಂಚವನ್ನು ದಾಟಿದರೆ ಪರಮಾರ್ಥವಾಗಿರುವ ಯಾವದೋ ಒಂದು ತತ್ತ್ವವಿದೆಯಂತೆ! ಇಲ್ಲಿಯೇ ಕಷ್ಟವು ಕಾಣಿಸಿಕೊಳ್ಳುವದು. ಈ ಚಿಕಿತ್ಸೆಯು ಎಲ್ಲವನ್ನೂ ಹಾಳು ಮಾಡುವಂತಿದೆಯಲ್ಲ, ಇದು ಹೇಗೆ ಚಿಕಿತ್ಸೆಯಾದೀತು?

ಹಾಗಾದರೆ ಇದನ್ನು ಬಗೆಹರಿಸುವದಕ್ಕೆ ದಾರಿಯೇನೂ ಇಲ್ಲವೆ? ಎಂದರೆ ಇದೆ. ವೇದಾಂತದಲ್ಲಿ ಹೇಳಿರುವದೇನೆಂದರೆ, ಧರ್ಮಗಳಲ್ಲೆಲ್ಲ ಹೇಳಿರುವದು ಸಂಪೂರ್ಣಸತ್ಯವೇ, ಆದರೆ ಅದರ ಅರ್ಥವನ್ನು ಸರಿಯಾಗಿ ತಿಳಿದುಕೊಳ್ಳಬೇಕಾಗಿದೆ. ಧರ್ಮಗಳು ಸ್ಪಷ್ಟವಾಗಿ ವಿಷಯವನ್ನು ತಿಳಿಸದೆ ಇರುವದರಿಂದ ಅವುಗಳು ಹೇಳುವದನ್ನು ಜನರು ತಪ್ಪಾಗಿ ತಿಳಿದುಕೊಳ್ಳುತ್ತಲಿದ್ದಾರೆ. ನಮಗೆ ನಿಜವಾಗಿ ಬೇಕಾದದ್ದು ಬುದ್ಧಿ ಮತ್ತು ಹೃದಯ - ಇವೆರಡರ ಸಾಮರಸ್ಯವು. ಹೃದಯವು ದೊಡ್ಡದೇ ಸರಿ. ಈ ಜೀವನದ ಮಹಾಕಾಂಕ್ಷೆಗಳೆಲ್ಲವೂ ಹೃದಯದಿಂದಲೇ ಹೊರಟುಬಂದವುಗಳಾಗಿವೆ, ಬರಿಯ ಬುದ್ಧಿಯೇ ಇದ್ದು ಹೃದಯದಲ್ಲಿ ಶೂನ್ಯವಾಗಿರುವದಕ್ಕಿಂತ ಮೆದುಳಿನ ಬಲವು ಸ್ವಲ್ಪವೂ ಇಲ್ಲದೆ ಒಂದಿಷ್ಟೇ ಹೃದಯ ಬಲವಿದ್ದರೂ ನೂರುಪಟ್ಟು ಮೇಲು. ಯಾವನಿಗೆ ಹೃದಯಬಲವಿರುವದೋ ಅವನಿಗೆ ಜೀವನವು ಶಕ್ಯವಾಗುತ್ತದೆ, ಅಭ್ಯುದಯವು ಶಕ್ಯವಾಗುತ್ತದೆ; ಆದರೆ ಯಾವನಿಗೆ ಹೃದಯದ ಬಲವೇ ಇಲ್ಲದೆ ಬರಿಯ

ಮೊದುಳಿನ ಬಲವೇ ಇರುವದೋ ಅವನು ಶುಷ್ಕವಾಗಿ ಸತ್ತುಹೋಗುತ್ತಾನೆ. ಹೀಗಿದ್ದರೂ ಯಾವನು ಬರಿಯ ಹೃದಯವನ್ನನುಸರಿಸಿಯೇ ಮುಂದಡಿಯಿಡುತ್ತಿರುವನೋ ಅವನು ಆಗಾಗ್ಗೆ ಗುಂಡಿಗೆ ಬೀಳುತ್ತಲೇ ಇರುತ್ತಾನೆ. ಆದ್ದರಿಂದ ಬುದ್ಧಿ ಮತ್ತು ಹೃದಯ – ಈ ಎರಡರ ಸಾಮರಸ್ಯವೂ ನಮಗೆ ಬೇಕು. ಬುದ್ಧಿಗಾಗಿ ಹೃದಯವನ್ನು ಕೈ ಬಿಡಬೇಕೆಂದಾಗಲಿ, ಹೃದಯಕ್ಕಾಗಿ ಬುದ್ಧಿಯನ್ನು ಕೈ ಬಿಡಬೇಕೆಂದಾಗಲೀ, ನನ್ನ ಅಭಿಪ್ರಾಯವಲ್ಲ; ಪ್ರತಿಯೊಬ್ಬನಿಗೂ ಹೃದಯದ ಬಲವೂ ಭಾವಾವೇಶವೂ ಇನ್ನಿಲ್ಲವೆಂಬಷ್ಟು ಇರಲಿ, ಅದರ ಜೊತೆಗೆ ಇನ್ನಿಲ್ಲವೆಂಬಷ್ಟು ವಿಚಾರಶಕ್ತಿಯೂ ಇದ್ದುಕೊಂಡಿರಲಿ – ಎಂಬುದೇ ನನ್ನ ಮತವು. ನಮಗೆ ಈ ಲೋಕದಲ್ಲಿ ಇಂಥದ್ದು ಇಂತಿಷ್ಟೇ ಇರಬೇಕೆಂಬ ಮಿತಿಯೇನಾದರೂ ಉಂಟೇನು? ಈ ಪ್ರಪಂಚವೇ ಅನಂತವಾಗಿರುವದಲ್ಲವೆ? ಇಲ್ಲಿ ಅನಂತವಾದ ಭಾವನೆಗೂ ಎಡೆಯಿದೆ, ಅದರಂತೆ ಅನಂತವಾದ ಬುದ್ಧಿಸಂಸ್ಕಾರಕ್ಕೂ ವಿಚಾರಶಕ್ತಿಗೂ ಎಡೆಯಿದೆ. ಅವೆರಡೂ ಇನ್ನಿಲ್ಲವೆಂಬಷ್ಟು ಪರಿಮಾಣದಲ್ಲಿ ಜೊತೆಯಲ್ಲಿರಲಿ, ಅವೆರಡೂ ಸಮಾನಾಂತರ ಸರಳರೇಖೆಗಳಿದ್ದಂತೆ ಜೊತೆಜೊತೆಯಲ್ಲಿಯೇ ಧಾವಿಸುತ್ತಿರಲಿ!

ಈ ತತ್ತ್ವವು ಅನೇಕ ಮತಗಳಿಗೆ ತಿಳಿದೇ ಇರುತ್ತದೆ. ಆದರೂ ಅವುಗಳೆಲ್ಲವೂ ಅದೇ ಒಂದು ತಪ್ಪನ್ನೇ ಮಾಡುತ್ತಿರುವಂತೆ ಕಾಣುವದು. ಅವುಗಳೆಲ್ಲವೂ ಹೃದಯಕ್ಕೆ, ಭಾವನೆಗಳಿಗೆ, ವಶವಾಗಿಬಿಟ್ಟಿರುತ್ತವೆ. ಈ ಲೋಕದಲ್ಲಿ ದುಃಖವಿದೆ; ಆದ್ದರಿಂದ ಈ ಲೋಕವನ್ನು ಬಿಟ್ಟುಬಿಡಬೇಕು. ಇದೇ ಪರಮೋಪದೇಶವು, ಇದೊಂದೇ ಸರಿಯಾದ ಉಪದೇಶವೆಂಬುದಕ್ಕೇನೂ ಸಂದೇಹವಿಲ್ಲ. 'ಈ ಲೋಕವನ್ನು ಬಿಟ್ಟುಬಿಡಿರಿ'. ನಿಜವನ್ನು ತಿಳಿಯಬೇಕಾದರೆ ನಾವೆಲ್ಲರೂ ತಪ್ಪನ್ನು ಬಿಟ್ಟು ಬಿಡಬೇಕೆಂಬ ವಿಷಯಕ್ಕೆ ಭಿನ್ನಾಭಿಪ್ರಾಯಗಳಿರುವದು ಶಕ್ಯವಿಲ್ಲ. ಒಳ್ಳೆಯದು ಬೇಕಾದರೆ ನಮ್ಮಲ್ಲಿ ಪ್ರತಿಯೊಬ್ಬನೂ ಕೆಟ್ಟದ್ದನ್ನು ಬಿಟ್ಟುಬಿಡಬೇಕೆಂಬುದರಲ್ಲಿ ಭಿನ್ನಾಭಿಪ್ರಾಯವಿರುವದು ಶಕ್ಯವೇ ಇಲ್ಲ. ಬದುಕಿರುವದು ಬೇಕಾದರೆ ನಮ್ಮಲ್ಲಿ ಪ್ರತಿಯೊಬ್ಬನೂ ಸಾವನ್ನು ಬಿಟ್ಟುಬಿಡಬೇಕೆಂಬುದರಲ್ಲಿ ಭಿನ್ನಾಭಿಪ್ರಾಯವಿರುವದು ಶಕ್ಯವೇ ಇಲ್ಲ. ಹೀಗಿದ್ದರೂ ಈ ವಾದದಂತೆ ಇಂದ್ರಿಯಭೋಗದ ಜೀವನವನ್ನು, ನಮಗೆ ತಿಳಿದಿರುವ ಈ ಜೀವನವನ್ನು, ಕೈಬಿಟ್ಟರೆ ನಮಗೆ ಉಳಿದುಕೊಳ್ಳುವದೇನು? ಜೀವನವೆಂದರೆ ಮತ್ತೇನು? ಈ ಜೀವನವನ್ನು ಬಿಟ್ಟರೆ ಉಳಿದುಕೊಳ್ಳುವದೇನು?

ವೇದಾಂತದ ವಿಶೇಷ ವಿಚಾರಾತ್ಮಕವಾದ ಭಾಗಗಳನ್ನು ತೆಗೆದುಕೊಂಡಾಗ ಇದು ನಮಗೆ ಚೆನ್ನಾಗಿ ತಿಳಿಯಬರುತ್ತದೆ. ವೇದಾಂತವೊಂದರಲ್ಲಿಯೇ ಈ

ತೊಡಕನ್ನು ಬಿಚ್ಚುವ ಯುಕ್ತಿಯುಕ್ತವಾದ ಸಾಧನವು ದೊರಕುವದೆಂದಿಷ್ಟೇ ಸದ್ಯಕ್ಕೆ ನಾನು ಬಿನ್ನವಿಸುತ್ತೇನೆ. ಇಲ್ಲಿ ವೇದಾಂತದಲ್ಲಿ ಉಪದೇಶಮಾಡುವದಕ್ಕೆ ಹೊರಟಿರುವ ಒಂದು ವಿಷಯವನ್ನು ಮಾತ್ರ ನಿಮ್ಮ ಮುಂದೆ ಇಡುತ್ತೇನೆ. ಇದೇ ಲೋಕದ **ಈಶ್ವರೀಕರಣವು.**

ನಿಜವಾಗಿ ನೋಡಿದರೆ ವೇದಾಂತದಲ್ಲಿ ಪ್ರಪಂಚವನ್ನು ತಿರಸ್ಕಾರ ಮಾಡಿರುವದಿಲ್ಲ. ವೈರಾಗ್ಯದ ಧ್ಯೇಯವು ವೇದಾಂತೋಪದೇಶದಲ್ಲಿ ಮುಟ್ಟಿದ ಪರಮಾವಧಿಯನ್ನು ಮತ್ತೆಲ್ಲಿಯೂ ಮುಟ್ಟಿರುವದಿಲ್ಲ. ಆದರೆ ಕೇವಲ ಆತ್ಮಘಾತಕವಾದ ಒಣ ಉಪದೇಶವನ್ನೇನೂ ಇಲ್ಲಿ ಕೊಟ್ಟಿರುವದಿಲ್ಲ. ಇಲ್ಲಿ ಹೇಳಿರುವದೆಲ್ಲ ಇಷ್ಟೇ, ಈ ಲೋಕವನ್ನು ಈಶ್ವರನನ್ನಾಗಿ ಮಾಡಿಕೊಳ್ಳಬೇಕು. ನಮ್ಮ ಭಾವನೆಯಲ್ಲಿರುವ ನಮಗೆ ತಿಳಿಯಬರುವ ರೂಪದಲ್ಲಿರುವ, ನಮಗೆ ಈಗ ತೋರುತ್ತಿರುವ ರೂಪದ ಪ್ರಪಂಚವನ್ನು ಬಿಟ್ಟು ಅದರ ನಿಜವಾದ ತಾತ್ತ್ವಿಕ ಸ್ವರೂಪವನ್ನು ಅರಿತುಕೊಳ್ಳಬೇಕು. ಅದನ್ನೆಲ್ಲ ಈಶ್ವರನನ್ನಾಗಿ ಮಾಡಿಕೊಳ್ಳಿರಿ, ಅದೆಲ್ಲ ಈಶ್ವರನೇ. ಅತ್ಯಂತ ಪ್ರಾಚೀನವಾದ ಉಪನಿಷತ್ತುಗಳೊಂದರಲ್ಲಿ ಹೀಗೆಂದು ಹೇಳಿರುತ್ತದೆ. **"ಈ ಜಗತ್ತಿನಲ್ಲಿ ಏನೇನಿರುವದೋ ಅದೆಲ್ಲವನ್ನೂ ಈಶ್ವರನಿಂದ ಮುಚ್ಚಬೇಕು".**

"ಪ್ರತಿಯೊಂದನ್ನೂ ಈಶ್ವರನಿಂದ ಮುಚ್ಚಬೇಕು;"* ಹೀಗೆ ಮುಚ್ಚಬೇಕಾದದ್ದು ಅಭಾಸರೂಪವಾದ ಶುಭದೃಷ್ಟಿಯಿಂದಲ್ಲ, ಕಾಣುವ ದುಃಖವನ್ನು ಕಣ್ಣುಮುಚ್ಚಿಕೊಂಡು ಅಲ್ಲಗಳೆಯುವದರಿಂದಲ್ಲ, ನಿಜವಾಗಿ ಪ್ರತಿಯೊಂದರಲ್ಲಿಯೂ ಈಶ್ವರನ್ನು ಕಾಣುವದರಿಂದ. ಹೀಗೆ **ಈ ಪ್ರಪಂಚವನ್ನು ಬಿಟ್ಟುಬಿಡಬೇಕು.** ಪ್ರಪಂಚವನ್ನು ಬಿಟ್ಟುಬಿಟ್ಟರೆ ಉಳಿಯುವದೇನು? – ಎಂದರೆ ಈಶ್ವರನು. ಇದರ ಅಭಿಪ್ರಾಯವೇನೆಂದರೆ; ನಿಮ್ಮ ಹೆಂಡತಿಯನ್ನು ಬೇಕಾದರೆ ಇಟ್ಟುಕೊಳ್ಳಿ ಆಕೆಯನ್ನು ಬಿಟ್ಟುಬಿಡಬೇಕೆಂದೇನೂ ಅಭಿಪ್ರಾಯವಲ್ಲ, ಆದರೆ ಆ ಹೆಂಡತಿಯಲ್ಲಿ ಈಶ್ವರನನ್ನು ಕಾಣಿರಿ. ಮಕ್ಕಳನ್ನು ಬಿಟ್ಟುಬಿಡಿರಿ. ಹಾಗೆಂದರೇನು? ಅವರನ್ನು ಮನೆಯಿಂದಾಚೆಗೆ ಅಟ್ಟಿಬಿಡಬೇಕೆಂದೆ? ಅದನ್ನು ಪ್ರತಿಯೊಂದು ದೇಶದಲ್ಲಿಯೂ ಕೆಲಕೆಲವರು ಮಾನವಪಶುಗಳು ಮಾಡುತ್ತಲೇ ಇರುವರಲ್ಲ! ಛೇ! ಹಾಗಲ್ಲ. ಅದು ಪೈಶಾಚಕೃತ್ಯ,

* ಈ ಉಪನ್ಯಾಸದಲ್ಲಿ ಕೊಟ್ಟಿರುವದು ಈಶಾವಾಸ್ಯೋಪನಿಷತ್ತಿನ ಕೆಲವು ಮಂತ್ರಗಳ ವ್ಯಾಖ್ಯಾನವು. ಶ್ರೀ ಶಂಕರಭಾಷ್ಯಾನುಸಾರವಾದ ವ್ಯಾಖ್ಯಾನವನ್ನು ನೋಡಬೇಕೆನ್ನುವವರು 'ಅಧ್ಯಾತ್ಮಪ್ರಕಾಶ' ಮಾಸಪತ್ರಿಕೆಯ ಹತ್ತನೆಯ ಸಂಪುಟದ 'ಉನಿಷದ್ವಾಕ್ಯ' ಎಂಬ ಲೇಖನಗಳನ್ನು ಓದಬೇಕು. ಉಪನ್ಯಾಸದಲ್ಲಿ ವ್ಯಾಖ್ಯಾನ ಮಾಡುವ ಮಂತ್ರಭಾಗವನ್ನು ಸೂಚಿಸುವ ವಾಕ್ಯಗಳನ್ನು ಕಪ್ಪಕ್ಷರದಲ್ಲಿಟ್ಟಿರುತ್ತದೆ.

ಧರ್ಮವಲ್ಲ. ಮಕ್ಕಳಲ್ಲಿ ಈಶ್ವರನನ್ನು ಕಾಣಿರಿ. ಇದರಂತೆ ಮಿಕ್ಕದ್ದೆಲ್ಲವನ್ನೂ ತಿಳಿಯಬೇಕು. ಬದುಕಿನಲ್ಲಿಯೂ ಸಾವಿನಲ್ಲಿಯೂ, ಸುಖದಲ್ಲಿಯೂ ದುಃಖದಲ್ಲಿಯೂ ಈಶ್ವರನು ಪರಿಪೂರ್ಣನಾಗಿರುತ್ತಾನೆ. ಕಣ್ಣುಗಳನ್ನು ತೆರೆದು ಆತನನ್ನು ಕಾಣಿರಿ. ಇದೇ ವೇದಾಂತದ ಉಪದೇಶವು. ನೀವು ಕಲ್ಪಿಸಿಕೊಂಡಿರುವ ಜಗತ್ತನ್ನು ಬಿಟ್ಟುಬಿಡಿ; ಏಕೆಂದರೆ ನಿಮ್ಮ ಕಲ್ಪನೆಯು ಅನುಭವದ ಏಕದೇಶದ ಆಧಾರದ ಮೇಲೆ ಉಂಟಾದದ್ದಾಗಿರುತ್ತದೆ, ದುರ್ಬಲ ತರ್ಕದ ಆಧಾರದಿಂದುಂಟಾದದ್ದಾಗಿರುತ್ತದೆ, ನಿಮ್ಮ ದೌರ್ಬಲ್ಯ ಸ್ವಭಾವಗಳಿಂದುಂಟಾಗಿರುತ್ತದೆ. ಅದನ್ನು ಬಿಟ್ಟುಬಿಡಿರಿ; ಇದುವರೆಗೂ ನಾವು ಮನಸ್ಸಿನಲ್ಲಿಟ್ಟುಕೊಂಡಿದ್ದ ಜಗತ್ತು, ಇದುವರೆಗೂ ನಾವು ಅಂಟಿಕೊಂಡಿದ್ದ ಜಗತ್ತೆಂಬುದು, ನಾವೇ ಕಲ್ಪಿಸಿಕೊಂಡಿದ್ದ ಮಿಥ್ಯಾಜಗತ್ತು. ಅದನ್ನು ಬಿಟ್ಟುಬಿಡಿರಿ! ಕಣ್ಣು ತೆರೆದು ನೋಡಿರಿ, ಆಗ ಅದು ಆ ರೂಪದಿಂದ ಯಾವಾಗಲೂ ಇರಲಿಲ್ಲವೆಂದು, ಅದು ಸ್ವಪ್ನ ಮಾತ್ರವೆಂದು, ಮಾಯಾ ಮಾತ್ರವೆಂದು ಕಂಡುಬರುತ್ತದೆ. ನಿಜವಾಗಿ ಇದ್ದವನು ಸಾಕ್ಷಾದೀಶ್ವರನೇ. ಮಗುವಿನಲ್ಲಿರುವಾತನೂ ಅವನೇ, ಹೆಂಡತಿಯಲ್ಲಿರುವಾಗನೂ ಅವನೇ, ಗಂಡನಲ್ಲಿರುವಾತನೂ ಅವನೇ. ಒಳ್ಳೆಯದರಲ್ಲಿರುವಾತನೂ ಅವನೇ, ಕೆಟ್ಟದರಲ್ಲಿರುವಾತನೂ ಅವನೇ. ಪಾಪದಲ್ಲಿಯೂ ಪಾಪಿಯಲ್ಲಿಯೂ ಆತನೇ ಇರುತ್ತಾನೆ, ಬದುಕಿನಲ್ಲಿಯೂ ಸಾವಿನಲ್ಲಿಯೂ ಆತನೇ ಇರುತ್ತಾನೆ!

ಎಂಥ ಅದ್ಭುತವಾದ ವಾಕ್ಯವಿದು! ಆದರೆ ಈ ವಿಷಯವನ್ನೇ ವೇದಾಂತವು ತೋರಿಸಿಕೊಡುವದಕ್ಕೆ ಹೊರಟಿರುವದು, ಇದನ್ನೇ ಅದು ಬೋಧಿಸುವದು, ಉಪದೇಶಿಸುವದು. ಇದು ಇನ್ನೂ ಮೊಟ್ಟಮೊದಲನೆಯ ವಿಷಯವು.

ಈ ರೀತಿಯಲ್ಲಿ ನಾವು ಜೀವನದ ಮತ್ತು ಅದರ ದುಃಖಗಳ ಅಪಾಯಗಳನ್ನೆಲ್ಲ ನಿವಾರಿಸಿಕೊಳ್ಳಬಹುದು. **ಯಾವದೊಂದನ್ನೂ** ಬಯಸಬೇಡಿ. ನಮ್ಮ ಸಂಕಟಕ್ಕೆಲ್ಲ ಕಾರಣವೇನು? ನಾವು ಅನುಭವಿಸುತ್ತಿರುವ ಸಂಕಟಗಳಿಗೆಲ್ಲ ಆಶೆಯೇ ಕಾರಣವು. ನಿಮಗೆ ಒಂದು ಬಯಕೆಯಾಗುತ್ತದೆ. ಈ ಬಯಕೆಯು ನೆರವೇರುವದಿಲ್ಲ, ಇದರಿಂದ ವ್ಯಥೆಯುಂಟಾಗುತ್ತದೆ. ಆಶೆ ಇಲ್ಲದಿದ್ದರೆ ದುಃಖವೂ ಇರುವದಿಲ್ಲ. ಈ ವಿಷಯವನ್ನು ಜನರು ತಪ್ಪಾಗಿ ತಿಳಿದುಕೊಳ್ಳುವ ಸಂಭವವಿದೆ. ಆದ್ದರಿಂದ ಬಯಕೆಯನ್ನು ಬಿಟ್ಟು ಸಂಕಟವನ್ನೆಲ್ಲ ತಪ್ಪಿಸಿಕೊಳ್ಳಬೇಕೆಂದು ಹೇಳುವದರ ಅಭಿಪ್ರಾಯವೇನೆಂಬುದನ್ನು ವಿವರಿಸಿ ಹೇಳಬೇಕಾದದ್ದು ಅವಶ್ಯವಾಗಿರುತ್ತದೆ. ಗೋಡೆಗಳಿಗೆ ಆಶೆಯಿರುವದಿಲ್ಲ, ಅವಕ್ಕೆ ದುಃಖವೂ

ಉಂಟಾಗುವದಿಲ್ಲ; ಆದರೇನು? ಅವು ಮುಂದಕ್ಕೆ ವಿಕಾಸವಾಗುವಹಾಗೂ ಇಲ್ಲ. ಈ ಕುರ್ಚಿಗೆ ಯಾವ ಆಶೆಯೂ ಇರುವದಿಲ್ಲ, ಅವಕ್ಕೆ ದುಃಖವೂ ಉಂಟಾಗುವದಿಲ್ಲ; ಆದರೇನು? ಅದು ಯಾವಾಗಲೂ ಕುರ್ಚಿಯಾಗಿಯೇ ಇದ್ದುಕೊಂಡಿರುತ್ತದೆ. ಸುಖವಾಗಿರುವದರಲ್ಲಿಯೂ ಹೆಚ್ಚುಗಾರಿಕೆಯಿದೆ, ದುಃಖವನ್ನನ್ನುಭವಿಸುವದರಲ್ಲಿಯೂ ಹೆಚ್ಚುಗಾರಿಕೆಯಿದೆ. ಇನ್ನೂ ಒಂದು ಮಾತನ್ನು ಹೆಚ್ಚಾಗಿ ಹೇಳಬಹುದು; ದುಃಖದಿಂದ ಪ್ರಯೋಜನವೂ ಉಂಟು. ಸಂಕಟದಿಂದ ನಮಗೆ ಎಂಥ ಹೆಚ್ಚಿನ ವಿವೇಕವುಂಟಾಗುವದೆಂಬುದು ನಮಗೆಲ್ಲರಿಗೂ ತಿಳಿದೇ ಇದೆ. ನಮ್ಮ ಜೀವಮಾನದಲ್ಲಿ ನಾವು ಮಾಡಿರುವ ಎಷ್ಟೋ ಕೆಲಸಗಳನ್ನು ನಾವು ಮಾಡದೇ ಇದ್ದರೆ ಚೆನ್ನಾಗಿತ್ತೆಂದು ನಮಗೆ ಅನ್ನಿಸುತ್ತದೆ, ಆದರೆ ಅವುಗಳಿಂದ ನಮಗೆ ಎಷ್ಟೋ ತಿಳಿವಳಿಕೆಯುಂಟಾಗಿರುತ್ತದೆ. ನನ್ನ ವಿಷಯದಲ್ಲಿ ಹೇಳಿಕೊಳ್ಳುವದಾದರೆ, ನಾನು ಕೆಲವು ಉತ್ತಮ ಕಾರ್ಯಗಳನ್ನು ಮಾಡಿರುವೆನಲ್ಲ, ಎಂದು ಸಂತೋಷವಾಗುತ್ತದೆ; ಅನೇಕ ಕೆಟ್ಟ ಕೃತ್ಯಗಳನ್ನು ಮಾಡಿರುವೆನಲ್ಲ, ಎಂದೂ ಸಂತೋಷವಾಗುತ್ತದೆ. ಸ್ವಲ್ಪ ಮಾಡಬೇಕಾದದ್ದನ್ನು ಮಾಡಿದೆನೆಂಬ ಸಂತೋಷವುಂಟಾಗಿದೆ; ಅನೇಕ ತಪ್ಪುಗಳನ್ನು ಮಾಡಿರುವೆನಲ್ಲ, ಎಂತಲೂ ಸಂತೋಷವುಂಟಾಗಿರುತ್ತದೆ; ಏಕೆಂದರೆ ಅವುಗಳಲ್ಲಿ ಪ್ರತಿಯೊಂದರಿಂದಲೂ ನನಗೆ ಎಷ್ಟೋ ತಿಳಿವಳಿಕೆಯುಂಟಾಗಿರುತ್ತದೆ. ಈಗಿನ ಸ್ಥಿತಿಯಲ್ಲಿರುವ ನಾನು, ನಾನು ಹಿಂದೆ ಮಾಡಿರುವ ಪ್ರತಿಯೊಂದು ಕರ್ಮದ ಆಲೋಚಿಸಿರುವ ಪ್ರತಿಯೊಂದು ವಿಚಾರದ, ಫಲವಾಗಿರುತ್ತೇನೆ. ಪ್ರತಿಯೊಂದು ಕರ್ಮಕ್ಕೂ ಪ್ರತಿಯೊಂದು ವಿಚಾರಕ್ಕೂ ಪ್ರತಿಯೊಂದು ಅದರದರ ಫಲವಾಗಿರುತ್ತದೆ, ಈ ಫಲಗಳ ಒಟ್ಟು ರಾಶಿಯೇ ನಾನು ಎಷ್ಟು ಮುಂದುವರಿದೇನೆಂಬುದರ ಸೂಚನೆಯು.

ಬಯಕೆಗಳೆಂಬವು ಕೆಟ್ಟವೆಂಬುದು ನಮಗೆಲ್ಲರಿಗೂ ತಿಳಿದೇ ಇದೆ. ಆದರೆ ಬಯಕೆಗಳನ್ನು ಬಿಟ್ಟುಬಿಡಬೇಕೆಂಬುದರ ಅಭಿಪ್ರಾಯವೇನು? ಅವಿಲ್ಲದಿದ್ದರೆ ಜೀವಮಾನವು ಸಾಗುವದು ಹೇಗೆ? ಇದೂ ಹಿಂದೆ ಹೇಳಿದ ಆತ್ಮಘಾತಕ ಉಪದೇಶವೇ ಆಗುತ್ತದೆ, ಬಯಕೆಗಳನ್ನೂ ಬಯಸುವುದನ್ನೂ ಕೊಲ್ಲುವದೇ ಆಗುತ್ತದೆಯಲ್ಲ! ಇದಕ್ಕೆ ಪರಿಹಾರವೇನೆಂದರೆ, ನಿಮಗೆ ಆಸ್ತಿಯಿರಕೂಡದೆಂದಾಗಲಿ, ಅವಶ್ಯವಾಗಿರುವಷ್ಟು ಪದಾರ್ಥಗಳನ್ನು, ನೀವು ಇಟ್ಟುಕೊಳ್ಳಕೂಡದೆಂದಾಗಲಿ, ಅವಶ್ಯವಾಗಿರುವಷ್ಟು ಪದಾರ್ಥಗಳನ್ನು ಕೂಡ ನೀವು ಇಟ್ಟುಕೊಳ್ಳಕೂಡದೆಂದಾಗಲಿ, ಕೊನೆಗೆ ವಿಲಾಸ ಸಾಮಗ್ರಿಗಳನ್ನು ಕೂಡ ಇಟ್ಟುಕೊಳ್ಳಕೂಡದೆಂದಾಗಲಿ ಅಭಿಪ್ರಾಯವಲ್ಲ. ನಿಮಗೆ ಬೇಕಾದದ್ದನ್ನೆಲ್ಲ ಇಟ್ಟುಕೊಳ್ಳಿರಿ, ಎಷ್ಟುಬೇಕಾದರೂ

ಇಟ್ಟುಕೊಳ್ಳಿರಿ; ಆದರೆ ತತ್ತ್ವವನ್ನು ತಿಳಿದುಕೊಂಡಿರಿ, ಅದನ್ನು ಮನದಟ್ಟು ಮಾಡಿಕೊಂಡಿರಿ. **ಧನವೆಂಬುದು ಯಾರೊಬ್ಬರದೂ ಅಲ್ಲ.** ಮಮಕಾರವನ್ನು, ನನ್ನದೆಂಬ ಅಭಿಮಾನವನ್ನು, ಇಟ್ಟುಕೊಳ್ಳಬೇಡಿರಿ. ನೀವು, ನಾನು, ಅಥವಾ ಮತ್ತೊಬ್ಬರು ಎಷ್ಟು ಮಾತ್ರದವರು? ಎಲ್ಲದೂ ಈಶ್ವರನದೇ. ಮೊಟ್ಟಮೊದಲನೆಯ ಮಂತ್ರದಲ್ಲಿಯೇ ಪ್ರತಿಯೊಂದರಲ್ಲಿಯೂ ಈಶ್ವರನನ್ನು ಇಟ್ಟುಕೊಳ್ಳಬೇಕೆಂದು ಹೇಳಿರುತ್ತದೆಯಲ್ಲವೆ? ನೀವು ಅನುಭವಿಸುವ ಸಂಪತ್ತಿನಲ್ಲಿಯೂ ಈಶ್ವರನಿರುತ್ತಾನೆ. ನಿಮ್ಮ ಮನಸ್ಸಿನಲ್ಲುಂಟಾಗುವ ಆಶೆಯಲ್ಲಿಯೂ ಆತನೇ ಇರುತ್ತಾನೆ. ನೀವು ಆ ನಿಮ್ಮ ಆಶೆಯನ್ನು ಪೂರ್ತಿಗೊಳಿಸುವದಕ್ಕೆಂದು ಕೊಂಡುಕೊಳ್ಳುವ ಪದಾರ್ಥಗಳಲ್ಲಿಯೂ ಇರುತ್ತಾನೆ. ಈ ಪ್ರಕಾರವಾಗಿ ಭಾವನೆಯನ್ನು ತಂದುಕೊಳ್ಳಬೇಕು. ಪದಾರ್ಥಗಳನ್ನು ಈ ದೃಷ್ಟಿಯಿಂದ ನೋಡುವದಕ್ಕೆ ಪ್ರಾರಂಭಿಸಿದಿರೋ ಇಲ್ಲವೋ, ಎಲ್ಲವೂ ಅದ್ಭುತರೂಪಾಂತರವನ್ನು ಹೊಂದಿಬಿಡುತ್ತದೆ. ನಿಮ್ಮ ಪ್ರತಿಯೊಂದು ಚಲನೆಯಲ್ಲಿಯೂ, ನಿಮ್ಮ ಸಂಭಾಷಣೆಯಲ್ಲಿ, ನಿಮ್ಮ ರೂಪದಲ್ಲಿ – ಪ್ರತಿಯೊಂದರಲ್ಲಿಯೂ ದೇವರನ್ನು ಕಾಣುತ್ತಾ ಬಂದರೆ ಇಡಿಯ ನೋಟವೇ ಬೇರ್ಪಟ್ಟುಹೋಗುತ್ತದೆ. ಈ ಜಗತ್ತು ದುಃಖಮಯವಾಗಿ ಸಂಕಟಮಯವಾಗಿ ತೋರುವದರ ಬದಲು ವೈಕುಂಠವಾಗಿ ಬಿಡುತ್ತದೆ!.

'ದೇವರಾಜ್ಯವು ನಿಮ್ಮೊಳಗೇ ಇರುತ್ತದೆ' (ಬೈ.ಲೂ. 17–21) ಎಂದು ಈಶನು ಹೇಳಿರುತ್ತಾನೆ. ವೇದಾಂತದಲ್ಲಿಯೂ ಹೀಗೆಂದೇ ಹೇಳಿರುತ್ತದೆ. ಪ್ರತಿಯೊಬ್ಬ ಆಚಾರ್ಯರೂ ಹೀಗೆಯೇ ಹೇಳಿರುತ್ತಾರೆ– 'ನೋಡುವುದಕ್ಕೆ ಕಣ್ಣಿದ್ದವರು ನೋಡಲಿ, ಕೇಳುವದಕ್ಕೆ ಕಿವಿಯಿದ್ದವರು ಕೇಳಲಿ!" (ಬೈ.ಲೂ. 8–8) ನಾವು ಬಹುಕಾಲದಿಂದ ಹುಡುಕುತ್ತಿರುವ ತತ್ತ್ವವು ನಮ್ಮಲ್ಲಿಯೇ ಇರುತ್ತದೆಯೆಂದೂ ಅದು ಯಾವಾಗಲೂ ನಮ್ಮೊಡನೆಯೇ ಇತ್ತೆಂದೂ ವೇದಾಂತವೂ ಹೇಳುತ್ತಿದೆ. ನಾವು ಅದನ್ನು ಕಳೆದುಕೊಂಡಿದ್ದೇವೆಂದು ಅವಿವೇಕದಿಂದ ನಾವು ತಿಳಿದುಕೊಂಡು ಅಳುತ್ತಾ ಕರೆಯುತ್ತಾ ಸುತ್ತಾಡುತ್ತಿದ್ದೆವು, ತತ್ತ್ವವನ್ನು ಕಾಣಬೇಕೆಂದು ಹೆಣಗಾಡುತ್ತಿದ್ದೆವು; ಆದರೆ ಅದು ಮೊದಲಿಂದಲೂ ನಮ್ಮ ಹೃದಯದಲ್ಲಿಯೇ ಇದ್ದು ಕೊಂಡಿತ್ತು. ಅದು ನಮಗೆ ಅಲ್ಲಿ ಸಿಕ್ಕೀತೇ ಹೊರತು ಮತ್ತೆಲ್ಲಿಯೂ ದೊರೆಯಲಾರದು.

ಪ್ರಪಂಚವನ್ನು ತ್ಯಜಿಸಬೇಕೆಂಬುದನ್ನು ಹಳೆಯ ಅಪಕ್ವರೀತಿಯಿಂದ ಅರ್ಥ ಮಾಡಿದರೆ ಏನು ನಿರ್ಣಯವಾಗುವದೆಂದರೆ, ನಾವು ಕೆಲಸಮಾಡಬಾರದು,

ಸೋಮಾರಿಗಳಾಗಿರಬೇಕು, ಮಣ್ಣಿನ ಹೆಂಟೆಗಳಂತೆ ಬಿದ್ದಲ್ಲಿ ಬಿದ್ದಿರಬೇಕು. ವಿಚಾರಮಾಡಬಾರದು, ಮತ್ತೇನನ್ನೂ ಮಾಡಬಾರದು; ಕೇವಲ ಅದೃಷ್ಟವಾದಿಗಳಾಗಿ ಯಾವದು ಹೇಗೆ ಆದರೆ ಹಾಗೆ ಹೊಯ್ದಾಡುತ್ತಾ ಪ್ರಕೃತಿಯ ನಿಯಮಗಳಿಗೆ ಸಿಕ್ಕಿ ಸಂಕಟಪಡುತ್ತಾ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹಾರಿಕೊಂಡು ಹೋಗುತ್ತಿರೇಕು. ಇದೇ ಅದರ ಫಲಿತವಾಗುತ್ತದೆ. ಆದರೆ ಅದಲ್ಲ, ತಾತ್ಪರ್ಯವು. **"ನಾವು ಕೆಲಸಮಾಡುತ್ತಿರಬೇಕು"**. ಮಿಥ್ಯಾತೃಷ್ಣೆಯಿಂದ ಹೊಯ್ದಾಡುತ್ತಿರುವ ಜನರಿಗೆ ಕೆಲಸವೆಂದರೇನೆಂಬುದು ಹೇಗೆ ತಿಳಿಯಬೇಕು? ತನ್ನ ಭಾವಗಳಿಗೂ ಇಂದ್ರಿಯಗಳಿಗೂ ಸಿಕ್ಕಿ ಓಡಾಡುತ್ತಿರುವ ಮನುಜನಿಗೆ ಕೆಲಸವೆಂದರೇನೆಂಬುದು ಹೇಗೆ ತಿಳಿಯಬೇಕು? ಯಾವನು ತನ್ನ ತೃಷ್ಣೆಗಳಿಂದ ಹೊಯ್ದಾಡುತ್ತಿಲ್ಲವೋ, ಯಾವದೊಂದು ಸ್ವಾರ್ಥತೆಯಿಂದಲೂ ಪ್ರೇರಿತನಾಗಿಲ್ಲವೋ ಅವನೇ ಕೆಲಸಮಾಡುವವನು. ಯಾವನಿಗೆ ಕೆಲಸದಿಂದ ಏನನ್ನೂ ಪಡೆಯಬೇಕಾದದ್ದಿರುವದಿಲ್ಲವೋ ಅವನೇ ಕೆಲಸಮಾಡುವನು.

ಚಿತ್ರಪಠದ ಸಂತೋಷವು ಯಾರಿಗೆ? ಮಾರುವವನಿಗೊ, ನೋಡುವವನಿಗೋ? ಮಾರುವವನು ತನಗೆ ಎಷ್ಟು ಲಾಭ ಬಂದೀತು, ಆ ಪಠಕ್ಕೆ ಕೊನೆಗೆ ಉಳಿಯುವದೇನು? – ಎಂಬುದನ್ನು ಲೆಕ್ಕ ಹಾಕುವದರಲ್ಲಿಯೇ ಮಗ್ನನಾಗಿರುತ್ತಾನೆ. ಅವನ ತಲೆಯೆಲ್ಲ ಅದರಿಂದಲೇ ಕರಡಾಗಿರುತ್ತದೆ. ಅವನು ಹರಾಜಿನಲ್ಲಿ ಎತ್ತಿದ ಕೈ ಯಾವಾಗ ಬೀಳುತ್ತದೆ, ಎಂಬುದನ್ನೇ ನೋಡುತ್ತಿರುತ್ತಾನೆ, ಸವಾಲುಗಳನ್ನು ಲಕ್ಷ್ಯವಿಟ್ಟು ನೋಡುತ್ತಿರುತ್ತಾನೆ. ಒಬ್ಬರಿಗಿಂತ ಒಬ್ಬರು ಹೇಗೆ ಭಡದರಖಾಸ್ತು ಮಾಡುತ್ತಿರುವರೆಂಬುದನ್ನೇ ಕಿವಿಯಿಟ್ಟು ಕೇಳುತ್ತಿರುತ್ತಾನೆ. ಕೊಳ್ಳುವದಕ್ಕಾಗಲಿ ಮಾರುವದಕ್ಕಾಗಲಿ ಇಚ್ಛೆಯಿಲ್ಲದೆ ಯಾವನು ಅಲ್ಲಿಗೆ ಬಂದಿರುತ್ತಾನೋ ಅವನೇ ಕಂಡು ಆನಂದಿಸುವವನು. ಅವನು ಪಠವನ್ನು ನೋಡಿ ನೋಡಿ ಹಿಗ್ಗುತ್ತಿರುತ್ತಾನೆ. ಈ ಇಡಿಯ ವಿಶ್ವವೇ ಒಂದು ಚಿತ್ರ ಪಠವು; ನಮ್ಮ ಬಯಕೆಗಳೆಲ್ಲೂ ಮಾಯವಾದರೆ ಜನರಿಗೆ ಈ ಜಗತ್ತನ್ನು ನೋಡಿ ಆನಂದಿಸಬಹುದಾಗುತ್ತದೆ. ಆಗ ಈ ಕೊಳ್ಳುವದು, ಮಾರುವದು, ನನ್ನದೆಂದು ಪಡುವ ಈ ಅವಿವೇಕದ ಅಭಿಮಾನಗಳು – ಎಲ್ಲವೂ ಮುಗಿದುಹೋಗುವವು. ಸಾಲಕೊಡುವ ಸಾಹುಕಾರನಿರುವದಿಲ್ಲ, ಕೊಳ್ಳುವ ಗಿರಾಕಿಯಿರುವದಿಲ್ಲ, ಮಾರುವ ವರ್ತಕನಿರುವದಿಲ್ಲ, ಈ ಪ್ರಪಂಚವು ಸುಂದರವರ್ಣದ ಚಿತ್ರಪಠವಾಗಿ ಉಳಿದುಕೊಳ್ಳುತ್ತದೆ. ಇಗೊ, ಇದಕ್ಕಿಂದ ಹೆಚ್ಚಿನ ಈಶ್ವರಸ್ವರೂಪವರ್ಣನೆಯನ್ನು ನಾನು ಕೇಳಿಯೇ ಇರುವದಿಲ್ಲ. "ಆತನೇ ಮಹಾಕವಿಯು, ಪುರಾತನಕವಿಯು, ಇಡಿಯ ವಿಶ್ವವೇ ಆತನ ಕಾವ್ಯವು. ಅನಂತಾನಂದದಲ್ಲಿ ಬರೆದ ಪದ್ಯಗಳಾಗಿ ಪ್ರಾಸಲಯಬದ್ಧವಾಗಿ ತೋರಿಕೊಳ್ಳುತ್ತಿರುವದು." (?) ನಾವು ಯಾವಾಗ ಆಶೆಗಳನ್ನು

ತೊರೆದುಬಿಡುವೆವೋ ಆಗಲೇ ನಮಗೆ ಈಶ್ವರನ ಈ ಪ್ರಪಂಚ ಕಾವ್ಯವನ್ನು ಓದಿ ಆನಂದಿಸುವ ಶಕ್ತಿಯು ಬರುತ್ತದೆ. ಒಂದೊಂದು ಮೂಲೆಯೂ ಓಣಿಗಳೂ ದಟ್ಟಮರಗಳ ಸ್ಥಳಗಳೂ ಮೊದಲು ಕಾರುಗತ್ತಲೆಯಿಂದ ಕೂಡಿ ಅಪವಿತ್ರವಾಗಿ ನಮಗೆ ತೋರುತ್ತಿದ್ದದ್ದು ಈಗ ಎಲ್ಲವೂ ಈಶ್ವರ ಸ್ವರೂಪವಾಗಿಬಿಡುತ್ತದೆ. ಅವುಗಳು ತಮ್ಮ ಪರಮಾರ್ಥ ಸ್ವಭಾವವನ್ನು ಪ್ರಕಟಮಾಡಿಕೊಳ್ಳುತ್ತವೆ. ಆಗ ಇದುವರೆಗೆ ನಾವು ಅತ್ತೂಕರೆದೂ ಮಾಡಿದ್ದೇ ಹುಟುಗಾಟವಾಯಿತೆಂದೂ ನಾವು ನಿಜವಾಗಿ ಎಲ್ಲವನ್ನೂ ನೋಡುತ್ತಾ ಒಂದು ಕಡೆ ದೂರವಾಗಿ ನಿಂತಿದ್ದೆವೆಂದೂ ತಿಳಿದುಕೊಂಡು ನಮ್ಮ ಅವಿವೇಕಕ್ಕೆ ನಾವೇ ನಗುತ್ತಿರುವೆವು.

ಆದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಿರಿ – ಎಂದು ವೇದಾಂತವು ಉಪದೇಶಿಸುತ್ತದೆ. ಅದು ಕೆಲಸವನ್ನು ಮಾಡುವದು ಹೇಗೆ ಎಂಬುದನ್ನು ಮೊದಲು ತಿಳಿಸಿಕೊಡುತ್ತದೆ; ಈ ಪ್ರಾತಿಭಾಸಿಕವಾದ ಮಾಯಿಕವಾದ ಪ್ರಪಂಚವನ್ನು ಬಿಟ್ಟುಕೆಲಸಮಾಡಬೇಕು. ಹಾಗೆಂದರೇನು? ಎಂದರೆ ಎಲ್ಲೆಲ್ಲಿಯೂ ಈಶ್ವರನನ್ನು ಕಾಣಬೇಕು. **"ಈ ರೀತಿಯಲ್ಲಿ ಕೆಲಸಮಾಡಿರಿ. ನೂರು ವರ್ಷ ಬಾಳಬೇಕೆಂದು ಬೇಕಾದರೆ ಇಚ್ಛಿಸಿರಿ; ಬೇಕಾದರೆ ಈ ಲೋಕದ ಬಯಕೆಗಳನ್ನೆಲ್ಲ ಇಟ್ಟುಕೊಳ್ಳಿರಿ".** ಆದರೆ ಅವುಗಳನ್ನು ಈಶ್ವರೀಕರಣಮಾಡಿರಿ, ಅವುಗಳನ್ನೆಲ್ಲ ಸ್ವರ್ಗವಾಗಿ ಮಾಡಿಕೊಳ್ಳಿರಿ. ಈ ಲೋಕದಲ್ಲಿ ನಮಗೆ ಪರೋಪಕಾರದ ಆನಂದದ, ನಿರಂತರ ಕರ್ತವ್ಯಕರಣದ, ಜೀವನವು ಬೇಕೆಂದು ಬಯಸಿಕೊಳ್ಳಿರಿ; ಹೀಗೆ ಕೆಲಸಮಾಡುತ್ತಿದ್ದರೆ ನಿಮಗೆ ತಪ್ಪಿಸಿಕೊಳ್ಳುವ ಹಾದಿಯು ಸಿಕ್ಕುವುದು. **ಇದಕ್ಕಿಂತ ಬೇರೆ ಯಾವ ಮಾರ್ಗವೂ ಇರುವದಿಲ್ಲ.** ಈ ಲೋಕದ ಅವಿವೇಕ ವಿಲಾಸಗಳಿಗೆ ಸಿಕ್ಕಿಬಿದ್ದು ತತ್ತ್ವವನ್ನು ಅರಿತುಕೊಳ್ಳದೆಹೋದರೆ ಮನುಷ್ಯನು ಜಾರಿಬಿದ್ದನು, ಅವನಿಗೆ ಸದ್ಗತಿ ದೊರಕಲಾರದು. ಯಾವನಾದರೊಬ್ಬನು ಈ ಹಾಳು ಪ್ರಪಂಚದ ಗೋಜು ಬೇಡವೆಂದು ಕಾಡಿಗೆ ಹೋಗಿ ಶರೀರದಂಡನೆಯನ್ನು ಮಾಡಿಕೊಳ್ಳುತ್ತಾ ಉಪವಾಸದಿಂದ ಮೆಲ್ಲಮೆಲ್ಲಗೆ ಆತ್ಮಹತ್ಯೆಯನ್ನು ಮಾಡಿಕೊಂಡರೆ, ತನ್ನ ಹೃದಯವನ್ನು ಬೀಳುನೆಲವಾಗಿ ಮಾಡಿಕೊಂಡು ತನ್ನ ಪ್ರೇಮಭಾವನೆಯನ್ನೆಲ್ಲ ನೀಗಿಕೊಂಡು ಕಠಿನಚಿತ್ತನಾಗಿ ಉಗ್ರ ಸ್ವಭಾವನಾಗಿ ಶುಷ್ಕಹೃದಯನಾಗಿಬಿಟ್ಟರೆ ಅವನೂ ಹಾದಿತಪ್ಪಿದಂತಾಯಿತು. ಇವೆರಡೂ ಎರಡು ಕೊನೆಗಳು, ಒಂದೊಂದು ಕೊನೆಯಲ್ಲಿ ಮಾಡಬಹುದಾದ ಎರಡು ತಪ್ಪುಗಳು. ಇವರಿಬ್ಬರೂ ಹಾದಿ ತಪ್ಪಿರುತ್ತಾರೆ, ಇಬ್ಬರಿಗೂ ಮುಟ್ಟಬೇಕಾದ ಗುರಿಯು ತಪ್ಪಿಹೋಗಿರುತ್ತದೆ.

ಆದ್ದರಿಂದ ಕೆಲಸಮಾಡಿರಿ, ಪ್ರತಿಯೊಂದರಲ್ಲಿಯೂ ಈಶ್ವರನನ್ನು ಕಾಣುತ್ತಾ,

ಆತನೇ ಸರ್ವದರಲ್ಲಿಯೂ ಇರುವನೆಂದು ಅರಿತು ಕೆಲಸಮಾಡಿರಿ ಎಂದು ವೇದಾಂತವು ಹೇಳುತ್ತದೆ. ಈ ಜೀವನವು ಈಶ್ವರೀಕೃತವಾದ ಪದಾರ್ಥವೆಂದೆಣಿಸಿ, ಸಾಕ್ಷಾದೀಶ್ವರನೇ ಎಂದೆಣಿಸುತ್ತಾ, ನಾವು ಮಾಡಬೇಕಾದದ್ದೆಲ್ಲ ಇಷ್ಟೇ ಎಂದು, ನಮಗೆ ಬೇಕಾದದ್ದೆಲ್ಲ ಇಷ್ಟೇ ಎಂದರಿತುಕೊಂಡು, ನಿರಂತರವಾಗಿ ಕೆಲಸಮಾಡುತ್ತಿರಿ. ಈಶ್ವರನು ಎಲ್ಲದರಲ್ಲಿಯೂ ಇರುತ್ತಾನೆ; ಆತನನ್ನು ಮತ್ತೆಲ್ಲಿ ಹುಡುಕಿಕೊಂಡು ಹೋಗುವುದು? ಪ್ರತಿಯೊಂದು ಕೆಲಸದಲ್ಲಿಯೂ ಪ್ರತಿಯೊಂದು ಯೋಚನೆಯಲ್ಲಿಯೂ ಪ್ರತಿಯೊಂದು ಭಾವನೆಯಲ್ಲಿಯೂ ಆತನು ಇದ್ದುಕೊಂಡೇ ಬಿಟ್ಟಿರುತ್ತಾನೆ-ಹೀಗೆಂದರಿತು ನಾವು ಕೆಲಸಮಾಡಬೇಕು, ಇದೊಂದೇ ಮಾರ್ಗವು, ಮತ್ತೆ ಯಾವ ಮಾರ್ಗವೂ ಇಲ್ಲವೇ ಇಲ್ಲ.

ಹೀಗಾದರೆ **"ಕರ್ಮಫಲಗಳು ನಮಗೆ ಬಂಧಕವಾಗುವದಿಲ್ಲ"**. ನಮಗೆ ಆಗಿರುವ ಸಂಕಟಕ್ಕೆಲ್ಲ, ದುಃಖಕ್ಕೆಲ್ಲ ಮಿಥ್ಯಾತೃಷ್ಣೆಗಳೇ ಕಾರಣವಾಗಿರುವವೆಂಬುದನ್ನು ಹಿಂದೆಯೇ ತಿಳಿಸಿದ್ದಾಗಿರುತ್ತದೆಯಲ್ಲವೆ? ಆದರೆ ಅವುಗಳನ್ನು ಹೀಗೆ ಈಶ್ವರೀ ಕರಣಮಾಡಿದರೆ, ಈಶ್ವರನ ಮೂಲಕ ಶುದ್ಧಿಗೊಳಿಸಿದರೆ, ಅವುಗಳಿಂದ ಯಾವ ದುಃಖವೂ ಉಂಟಾಗುವದಿಲ್ಲ, ಯಾವ ಸಂಕಟವೂ ಆಗುವದಿಲ್ಲ.

**"ಈ ಗುಟ್ಟನ್ನರಿಯದವರು ಒಂದಾನೊಂದು ಅಸುರಲೋಕದಲ್ಲಿ ಬಾಳಬೇಕಾಗುತ್ತದೆ"** ಇದು ಅವರಿಗೆ ಕೊನೆಗೆ ತಿಳಿದುಬರುತ್ತದೆ. ತಮ್ಮೊಳಗೂ ತಮ್ಮ ಸುತ್ತಮುತ್ತಲೂ ಎಲ್ಲೆಲ್ಲಿಯೂ ಎಂಥ ಆನಂದದ ಗನಿಯೇ ಇದ್ದುಕೊಂಡಿರುವದೆಂಬುದು ಅನೇಕರಿಗೆ ತಿಳಿಯದು. ಅಸುರಲೋಕವೆಂದರೆ ಯಾವದು? ಅಜ್ಞಾನವೇ ಎಂದು ವೇದಾಂತವು ತಿಳಿಸುತ್ತದೆ. ಅತ್ಯಂತ ವಿಸ್ತಾರವಾದ ನದಿಯ ದಂಡೆಯ ಮೇಲೆ ಕುಳಿತಿದ್ದರೂ ನಾವು ಬಾಯಾರಿಕೆಯಿಂದ ಸಾಯುತ್ತಿರುವೆವು. ಆಹಾರದ ರಾಶಿರಾಶಿಯ ಬಳಿಯಲ್ಲಿಯೇ ಕುಳಿತಿದ್ದರೂ ನಾವು ಹಸಿವಿನಿಂದ ಸಾಯುತ್ತಿರುವೆವು. ಇಗೋ, ಇಲ್ಲಿ ಆನಂದಮಯವಾದ ಪ್ರಪಂಚವಿರುತ್ತದೆ. ಆದರೂ ಅದು ನಮಗೆ ಕಾಣದೆ ಇರುತ್ತದೆ. ನಾವು ಎಂದೆಂದಿಗೂ ಅದರಲ್ಲಿಯೇ ಇರುತ್ತಿದ್ದರೂ ಅದು ಇಂಥದ್ದೆಂದು ನಾವು ಅರಿತುಕೊಳ್ಳಲಾರದೆ ಇರುವೆವು. ಮತಗಳು ಇದನ್ನು ನಮಗೆ ತೋರಿಸಕೊಡುವದಕ್ಕೆ ಬಂದಿರುತ್ತವೆ. ಈ ಆನಂದಮಯವಾದ ವಿಶ್ವವನ್ನು ಕಂಡುಕೊಳ್ಳುವ ಅಭಿಲಾಷೆಯು ಎಲ್ಲರ ಹೃದಯದಲ್ಲಿಯೂ ಇರುತ್ತದೆ. ಇದನ್ನೇ ಎಲ್ಲಾ ಜನಾಂಗದವರೂ ಹುಡುಕುತ್ತಿರುವರು. ಧರ್ಮಕ್ಕೆ ಇದೊಂದೇ ಗುರಿಯು; ಇದನ್ನೇ ಒಂದೊಂದು ಮತದಲ್ಲಿ ಒಂದೊಂದು ಹೆಸರಿನಿಂದ ಕರೆದಿರುತ್ತದೆ. ನೋಡುವದಕ್ಕೆ ಇಷ್ಟೊಂದು

ಮತಭೇದವಿರುವಂತೆ ತೋರುತ್ತದೆಯಲ್ಲ. ಇದಕ್ಕೆಲ್ಲ ವಚನವ್ಯಕ್ತಿಯ ತಾರತಮ್ಯವೇ ಕಾರಣವು. ಒಬ್ಬನು ಒಂದು ವಿಷಯವನ್ನು ಒಂದು ಬಗೆಯಿಂದ ತಿಳಿಸಿದರೆ ಮತ್ತೊಬ್ಬನು ಅದನ್ನೇ ಸ್ವಲ್ಪ ಭಿನ್ನವಾದ ರೀತಿಯಿಂದ ತಿಳಿಸುತ್ತಾನೆ. ಆದರೇನು? ಒಬ್ಬನು ಹೇಳುವದೇ ಇನ್ನೊಬ್ಬನ ಅಭಿಪ್ರಾಯ, ಆ ಇನ್ನೊಬ್ಬನು ಆಡುವ ಮಾತು ಬೇರೊಂದು ಬಗೆಯದು, ಅಷ್ಟೆ.

ಈ ಸಂದರ್ಭದಲ್ಲಿ ಇನ್ನೂ ಕೆಲವು ಪ್ರಶ್ನೆಗಳು ಎದ್ದುಕೊಳ್ಳುವವು: ಮಾತನಾಡುವದೇನೋ ಸುಲಭ. ಎಲ್ಲೆಲ್ಲಿಯೂ ಎಲ್ಲಾ ಪದಾರ್ಥದಲ್ಲಿಯೂ ದೇವರನ್ನು ಕಾಣಬೇಕೆಂತಲೂ ಹಾಗೆ ಕಂಡರೆ ಈ ಪ್ರಪಂಚದಲ್ಲಿ ಸುಖವಾಗಿರ ಬಹುದೆಂತಲೂ ಜನರು ಆಡಿಕೊಳ್ಳುವದನ್ನು ನಾನು ಬಾಲ್ಯದಿಂದಲೂ ಕೇಳುತ್ತಲಿದ್ದೇನೆ; ಆದರೆ ಲೋಕದಲ್ಲಿ ಬೆರೆತು ಎರಡು ಪೆಟ್ಟುಗಳನ್ನು ತಿಂದರೆ ಸರಿ, ಕೂಡಲೆ ಈ ಭಾವನೆಯು ಹಾರಿಹೋಗುತ್ತದೆ. ದೇವರು ಪ್ರತಿಯೊಬ್ಬನಲ್ಲಿಯೂ ಇದಾನೆಂದು ಭಾವಿಸಿ ನಾನು ಬೀದಿಯಲ್ಲಿ ನಡೆಯುತ್ತಿರುವಾಗ, ಬಲವಾದ ವನೊಬ್ಬನು ಬಂದು ನನ್ನನ್ನು ಮುಂದಕ್ಕೆ ನೂಕಿ ನಾನು ದಾರಿಯಲ್ಲಿ ದಡೀರೆಂದು ಬೀಳುವದಾದರೆ, ನಾನು ಕೂಡಲೆ ಮುಷ್ಟಿಯನ್ನು ಬಿಗಿಹಿಡಿದುಕೊಂಡು ಮುಖವನ್ನು ಕೆಂಪೇರಿಸಿಕೊಂಡು ಎದ್ದುಬಿಡುತ್ತೇನೆ. ಮೊದಲಿನ ವಿಚಾರವುಎಲ್ಲಿಯೋ ಹೋಗಿಬಿಡುತ್ತದೆ. ಕೂಡಲೇ ನನಗೆ ಹುಚ್ಚು ಹಿಡಿದಂತಾಗಿಬಿಡುತ್ತದೆ. ಆಗ ನನಗೆ ಎಲ್ಲವೂ ಮರೆತುಹೋಗುತ್ತದೆ,* ನನಗೆ ದೇವರು ಕಾಣುವದರ ಬದಲು ದೆವ್ವವು ಕಾಣುತ್ತದೆ. ನಾವು ಹುಟ್ಟಿದಂದಿನಿಂದ ಎಲ್ಲರಲ್ಲಿಯೂ ಈಶ್ವರರನ್ನು ಕಾಣಬೇಕೆಂದು ನಮಗೆ ಹೇಳಿಕೊಟ್ಟಿರುತ್ತಾರೆ. ಪ್ರತಿಯೊಂದು ಮತದಲ್ಲಿಯೂ ಇದನ್ನು ಉಪದೇಶಮಾಡಿರುತ್ತದೆ. ದೇವರನ್ನು ಪ್ರತಿಯೊಂದರಲ್ಲಿಯೂ ಎಲ್ಲೆಲ್ಲಿಯೂ ಕಾಣಬೇಕು. ಹೊಸ ಒಡಂಬಡಿಕೆಯಲ್ಲಿ ಕ್ರೈಸ್ತನು ಹೀಗೆಂದೇ ಉಪದೇಶಮಾಡಿರುವದು ನಿಮ್ಮ ನೆನಪಿನಲ್ಲಿಲ್ಲವೆ? ನಮಗೆಲ್ಲರಿಗೂ ಈ ಉಪದೇಶವಾಗಿಯೇ ಇರುತ್ತದೆ. ಈಸೋಪನ ಕಥೆಗಳಲ್ಲಿ ಸುಂದರವಾದ ಜಿಂಕೆಯೊಂದು ತನ್ನ ನೆರಳನ್ನು ಕೆರೆಯ ನೀರಿನಲ್ಲಿ ನೋಡಿಕೊಂಡು ತನ್ನ ಮರಿಯೊಡನೆ “ನಾನು ಎಂಥ ಬಲಿಷ್ಠನು! ನನ್ನ ಈ ಸೊಗಸಾದ ತಲೆಯನ್ನು ನೋಡು; ಕೈಕಾಲುಗಳನ್ನು ನೋಡು, ಎಂಥ ಬಲವಾಗಿ ಉಬ್ಬಿಕೊಂಡಿವೆ! ನಾವು

---

* ಇಲ್ಲಿ ಎಲ್ಲರನ್ನೂ ಈಶ್ವರನೆಂದು ಭಾವಿಸುವದರ ವಿಚಾರವನ್ನು ಸ್ವಾಮಿಗಳು ಹೇಳಿರುತ್ತಾರೆಂಬುದು ಸ್ಪಷ್ಟವು! ಭಾವನೆಯು ಎಷ್ಟೇ ಬಲವಾಗಿದ್ದರೂ ಅದಕ್ಕಿಂತ ಬಲವಾದ ಭಾವನೆಯುಂಟಾದರೆ ಅದು ಕೂಡಲೇ ಮರೆಯಾಗುತ್ತದೆ. ಆದರೆ ಜ್ಞಾನದ ವಿಚಾರವು ಹೀಗಲ್ಲ. ಅದು ವಸ್ತು ತಂತ್ರವಾಗಿರುವದರಿಂದ ಅದನ್ನು ಮರೆಯುವದಕ್ಕೆ ಆಗುವ ಹಾಗೇ ಇರುವದಿಲ್ಲ.

ಓಡುವದಕ್ಕೆ ಹೊರಟರೆ ಎಷ್ಟು ವೇಗ!" ಎಂದುಕೊಳ್ಳುತ್ತಿರುತ್ತದೆ. ಇಷ್ಟರಲ್ಲಿ ಸ್ವಲ್ಪದೂರದಲ್ಲಿ ನಾಯಿಗಳು ಬಗುಳುವ ಧ್ವನಿ ಕೇಳಿಬರುತ್ತದೆ, ಕೂಡಲೆ ಅದು ಚಂಗನೆ ಹಾರಿ ಪಲಾಯನ ಸೂಕ್ತವನ್ನು ಹೇಳುತ್ತದೆ. ಹೀಗೆ ಎಷ್ಟೋ ಮೈಲಿಗಳ ದೂರ ಓಡಿ ಓಡಿ ಉಸಿರೆಳೆಯುತ್ತಾ ಹಿಂದಕ್ಕೆ ಬರುತ್ತದೆ. ಮರಿಯು "ಅಪ್ಪ, ಈಗ ತಾನೆ ನೀನು ಅಷ್ಟೊಂದು ಬಲಿಷ್ಠನೆಂದು ಹೇಳುತ್ತಿದ್ದೆಯಲ್ಲ! ನಾಯಿಗಳು ಬಗುಳಿದ ಮಾತ್ರಕ್ಕೆ ಓಡಿಹೋದೆಯೇಕೆ?" ಎಂದು ಕೇಳುತ್ತದೆ. ಅದಕ್ಕೆ ಉತ್ತರವೇನು? "ಹೌದಪ್ಪ, ಮಗು; ಆದರೇನು ಮಾಡಲಿ? ನಾಯಿಗಳು ಬಗುಳಿದರೆ ಸಾಕು, ನನಗೆ ಎದೆಯೊಡೆದು ಹೋಗುತ್ತದೆ". ಇದೇ ನಮ್ಮಗಳ ಹಾಡು. ನಮಗೆ ಮಾನವ ಜಾತಿಯೆಂದರೆ ಹೆಮ್ಮೆ. ನಾವುಗಳು ಬಲಿಷ್ಠರು, ಧೈರ್ಯಶಾಲಿಗಳು ಎಂದುಕೊಳ್ಳುತ್ತೇವೆ, ಉತ್ತಮೋತ್ತಮವಾದ ಸಂಕಲ್ಪಗಳನ್ನು ಮಾಡಿಕೊಳ್ಳುತ್ತವೆ. ಆದರೇನು? ಪರೀಕ್ಷೆ, ಪ್ರಲೋಭನ - ಎಂಬ ನಾಯಿಗಳು ಬಗುಳಿದವೊ ಇಲ್ಲವೊ, ಕಥೆಯ ಜಿಂಕೆಯೇ ಆಗಿಬಿಡುತ್ತೇವೆ. ಹೀಗಿದ್ದ ಮೇಲೆ ಇದನ್ನೆಲ್ಲ ಹೇಳಿ ಫಲವೇನು? - ಎಂದು ಯಾರಾದರೂ ಕೇಳಬಹುದು.

ಅತ್ಯಂತ ಉತ್ತಮ ಫಲವಿದೆ. ಫಲವೇನೆಂದರೆ ಸ್ಥಿರಪ್ರಯತ್ನಕ್ಕೆ ಕೊನೆಗೆ ಗೆಲವಾಗಿಯೇ ತೀರುತ್ತದೆ. "ಈ ಆತ್ಮನನ್ನು ಮೊದಲು ಕೇಳಬೇಕು, ಆಮೇಲೆ ಆಲೋಚಿಸಬೇಕು, ಆಮೇಲೆ ಧ್ಯಾನಮಾಡಬೇಕು". (ಬೃ. 4-5-4) ಯಾರು ಬೇಕಾದರೂ ಆಕಾಶವನ್ನು ನೋಡಬಹುದು, ನೆಲದ ಮೇಲೆ ಮೆಲ್ಲಗೆ ಹರಿದಾಡುತ್ತಿರುವ ಸಣ್ಣ ಹುಳುವು ಕೂಡ ನೀಲವಾದ ಆಕಾಶವನ್ನು ಕಾಣುತ್ತದೆ; ಆದರೆ ಅದು ಇರುವದು ಎಷ್ಟು ದೂರದಲ್ಲಿ! ನಮ್ಮ ಧ್ಯೇಯದ ವಿಷಯವೂ ಹೀಗೆಯೇ. ಅದು ಬಹಳ ಬಹಳ ದೂರವಿರುತ್ತದೆ, ನಿಜ; ಆದರೂ ಅದು ಇದ್ದೇ ತೀರಬೇಕೆಂಬುದು ನಮಗೆಲ್ಲ ತಿಳಿದಿರುವ ವಿಷಯವು. ನಮಗೆ ಅತ್ಯಂತ ಉತ್ಕೃಷ್ಟವಾದ ಹೆಗ್ಗುರಿಯು ಕೂಡ ಇರತಕ್ಕದ್ದು ಅವಶ್ಯವು. ಪ್ರಪಂಚದಲ್ಲಿ ದೌರ್ಭಾಗ್ಯವೇನೆಂದರೆ, ಬಹು ಜನರು ಯಾವದೊಂದು ಗುರಿಯೂ ಇಲ್ಲದೆ ಈ ಕಗ್ಗತ್ತಲೆಯ ಸಂಸಾರದಲ್ಲಿ ಎಡವರಿಸುತ್ತಾ ಇರುತ್ತಾರೆ. ಧ್ಯೇಯವೊಂದನ್ನು ಇಟ್ಟುಕೊಂಡಿರುವಾತನು ಸಾವಿರ ತಪ್ಪುಗಳನ್ನು ಮಾಡಿದರೆ ಯಾವ ಧ್ಯೇಯವೂ ಇಲ್ಲದವನು ಐವತ್ತು ಸಾವಿರ ತಪ್ಪುಗಳನ್ನು ಮಾಡುವದು ಕಡುಖಂಡಿತ. ಆದ್ದರಿಂದ ಯಾವದಾದರೊಂದು ಧ್ಯೇಯವಿರುವದೇ ಮೇಲು. ಈ ಧ್ಯೇಯದ ವಿಷಯವಾಗಿ ನಾವು ಆದಷ್ಟೂ ಕೇಳುತ್ತಿರಬೇಕು, ಅದರ ವಿಷಯವನ್ನು ಕೇಳಿ ಕೇಳಿ ಕೊನೆಗೆ ನಮ್ಮ ಹೃದಯಗಳನ್ನು ಮೆದಳುಗಳನ್ನೂ ಕೊನೆಗೆ ರಕ್ತ ನಾಡಿಗಳನ್ನೂ ಹೊಕ್ಕು

ನಮ್ಮ ರಕ್ತದಲ್ಲಿ ಒಂದೊಂದು ಹನಿಯಲ್ಲಿಯೂ ಬುಳುಬುಳನೆ ಹರಿದಾಡುತ್ತಾ ನಮ್ಮ ಮೈಯ ಪ್ರತಿಯೊಂದು ರೋಮಕೂಪವನ್ನೂ ಅದು ವ್ಯಾಪಿಸುವಂತೆ ಆಗಬೇಕು. ನಾವು ಅದನ್ನೇ ಚಿಂತಿಸಬೇಕು* "ಹೃದಯವು ತುಂಬಿಕೊಂಡರೆ ಬಾಯಿ ಮಾತನಾಡುತ್ತದೆ"# (ಮ್ಯಾತ್ಯೂ 12-34). ಹೃದಯವು ತುಂಬಿಕೊಂಡರೇ ಕೈಯೂ ಕೆಲಸಮಾಡುತ್ತದೆ. ನಮ್ಮಲ್ಲಿರುವ ಪ್ರವರ್ತಕ ಶಕ್ತಿಯೆಂದರೆ ಆಲೋಚನೆಯೇ. ಮನಸ್ಸಿನಲ್ಲಿ ಅತ್ಯಂತ ಉತ್ತಮವಾದ ವಿಚಾರಗಳನ್ನು ತುಂಬಿಕೊಳ್ಳಿರಿ ದಿನದಿನವೂ ಅವುಗಳ ವಿಷಯವಾಗಿ ಶ್ರವಣ ಮಾಡಿರಿ, ತಿಂಗಳು ತಿಂಗಳೂ ಅವುಗಳ ವಿಚಾರವನ್ನೇ ಮಾಡುತ್ತಿರಿ. ತಪ್ಪಿಹೋದರೆ ಚಿಂತೆಯಿಲ್ಲ; ತಪ್ಪುಗಳಾಗುವದು ಸ್ವಾಭಾವಿಕ, ಈ ಜೀವಕ್ಕೆ ಅವೇ, ಆ ಸೋಲುಗಳೇ ಭೂಷಣ. ಅವುಗಳಿಲ್ಲದಿದ್ದರೆ ಈ ಜೀವನದ ಗತಿ ಏನಾಗಬೇಕು? ಈ ಜೀವನದಲ್ಲಿ ಹೆಣಗಾಟಗಳಿಲ್ಲದಿದ್ದರೆ ಇದು ಯಾರಿಗೂ ಬೇಕೆನಿಸಲಾರದು. ಅವಿಲ್ಲದಿದ್ದರೆ ಈ ಜೀವನದಲ್ಲಿ ಸ್ವಾರಸ್ಯವೇನಿದ್ದೀತು? ಈ ಹೆಣಗಾಟಗಳನ್ನೂ ತಪ್ಪುಗಳನ್ನೂ ಮನಸ್ಸಿಗೆ ಹಚ್ಚಿಕೊಳ್ಳಬೇಡಿರಿ. ಹಸು ಸುಳ್ಳುಹೇಳಿದ್ದನ್ನು ನಾನೆಲ್ಲಿಯೂ ಕೇಳಿಲ್ಲ; ಆದರೇನು? ಅದು ಹಸುವೇ ಹೊರತು ಮನುಷ್ಯನಲ್ಲ. ಆದ್ದರಿಂದ ಈ ಸೋಲುಗಳನ್ನೂ ಹಿಂಜಾರುವಿಕೆಗಳನ್ನೂ ಮನಸ್ಸಿಗೆ ತಂದುಕೊಳ್ಳದಿರಿ. ಸಾವಿರ ಸಲವೂ ಧ್ಯೇಯವನ್ನೇ ಮುಂದಿಟ್ಟುಕೊಳ್ಳಿರಿ, ಸಾವಿರಬಾರಿಯೂ ಸೋತರೆ ಮತ್ತೂ ಒಂದು ಸಲ ಪ್ರಯತ್ನ ಮಾಡಿರಿ. ಮನುಷ್ಯನ ಧ್ಯೇಯವೆಂದರೆ ಪ್ರತಿಯೊಂದರಲ್ಲಿಯೂ ದೇವರನ್ನು ಕಾಣುವದು; ಎಲ್ಲದರಲ್ಲಿಯೂ ಆತನನ್ನು ಕಾಣುವದಾಗದಿದ್ದರೆ ಮೊದಲು ಯಾವದಾದರೊಂದು ವಸ್ತುವಿನಲ್ಲಿ ಆತನನ್ನು ಕಾಣಿರಿ, ಯಾವದು ಅತ್ಯುತ್ತಮವೆಂದು ನಿಮಗೆ ತೋರುವದೋ ಅದರಲ್ಲಿ ಆತನನ್ನು ಕಾಣಿರಿ, ಆಮೇಲೆ ಮತ್ತೊಂದರಲ್ಲಿ ಕಾಣಿರಿ. ಹೀಗೆಯೇ ಮಾಡುತ್ತಾ ಹೋಗಿರಿ. ಈ ಜೀವನಿಗೆ ಅನಂತ ಜೀವನಕಾಲವುಂಟು. ಆದಕಾಲಕ್ಕೆ ಆಗಲೆಂದು ಬಿಡದೆ ಪ್ರಯತ್ನಮಾಡುತ್ತಿದ್ದರೆ ನಿಮಗೆ ಸಿದ್ಧಿಯುಂಟಾಗುತ್ತದೆ.

"ಆತನು, ಆ ಒಬ್ಬನು (ಅಲುಗಾಡದವನಾದರೂ) ಮನಸ್ಸಿಗಿಂತಲೂ ವೇಗವಾಗಿ ಕಂಪಿಸುವವನು; ಮನಸ್ಸಿಗೆ ಎಷ್ಟೇ ವೇಗವು ಬರಲಿ, ಅದಕ್ಕಿಂತಲೂ

* ನಿದಿಧ್ಯಾಸನವೆಂದರೆ ಭಾವನೆಯೆಂಬ ಅರ್ಥವು ಬರುವ ಹಾಗೆ ಸ್ವಾಮಿಗಳು ಅಲ್ಲಲ್ಲಿ ಬರೆದಿರುತ್ತಾರಾದರೂ ಅದು ಬರಿಯ ಭಾವನೆಯಲ್ಲ; ಕೇಳ, ವಿಚಾರಮಾಡಿದ್ದನ್ನು ಮನಗಾಣುವದಕ್ಕೆ ಮಾಡುವ ಚಿಂತನೆಯದು.

# ಹೃದಯದಲ್ಲಿ ಯಾವ ಬಗೆಯ ವಾಸನೆಗಳು ತುಂಬಿರುವವೋ ಅಂಥ ಮಾತುಗಳೇ ಬಾಯಿಂದ ಹೊರಡುತ್ತವೆ ಎಂದು ಭಾವ.

ವೇಗವುಳ್ಳವನಾಗಿರುವನು; ಅವನನ್ನು ದೇವತೆಗಳು ಕೂಡ ಹಿಡಿಯಲಾರರು, ವಿಚಾರವೂ ಗ್ರಹಿಸಲಾರದು...... ಅವನು ಚಲಿಸುತ್ತಿರುವದರಿಂದಲೇ ಎಲ್ಲವೂ ಚಲಿಸುತ್ತಿರುವದು, ಅವನಲ್ಲಿ ಎಲ್ಲವೂ ಇರುತ್ತಿರುವದು. ಅವನು ಚಲಿಸುತ್ತಿರುವನು ಅವನು ಚಲಿಸದೆಯೂ ಇರುವನು, ಅವನು ಹತ್ತಿರವೂ ಇರುವನು. ಅವನು ದೂರವಾಗಿಯೂ ಇರುವನು. ಅವನು ಎಲ್ಲದರ ಒಳಗೂ ಇರುವನು, ಅವನುಎಲ್ಲದರ ಹೊರಗೂ ಇರುವನು, ಎಲ್ಲವನ್ನೂ ವ್ಯಾಪಿಸಿಕೊಂಡಿರುವನು. ಯಾವನು ಸರ್ವ ಭೂತಗಳನ್ನೂ ಆತ್ಮನಲ್ಲಿಯೇ ಕಾಣುವನೋ, ಸರ್ವಭೂತಗಳಲ್ಲಿಯೂ ಆ ಆತ್ಮನನ್ನೇ ಕಾಣುವನೋ ಅವನು ಆ ಆತ್ಮವನ್ನು ಬಿಟ್ಟು ದೂರವಿರುವದಿಲ್ಲ. ಈ ಎಲ್ಲ ಪ್ರಪಂಚವನ್ನೂ ಈ ಇಡಿಯ ವಿಶ್ವನ್ನೂ ಈ ಆತ್ಮನಲ್ಲಿಯೇ ಯಾವಾಗ ಕಾಣುವನೋ ಆಗಲೇ ಮನುಷ್ಯನು ಒಳಗುಟ್ಟನ್ನು ಗ್ರಹಿಸಿದಂತೆ ಆಗುವದು. ಅವನಿಗೆ ಇನ್ನು ಮೇಲೆ ಮೋಹವಿರುವದಿಲ್ಲ, ಈ ವಿಶ್ವದ ಐಕ್ಯವನ್ನು ಕಂಡವನಿಗೆ ಮತ್ತೆ ಶೋಕವೆಲ್ಲಿಯದು?".*

ಇದು, ಈ ಜೀವನವೆಲ್ಲ ಒಂದೇ ಎಬುದು, ಎಲ್ಲವೂ ಒಂದೇ ತತ್ತ್ವವೆಂಬುದು ವೇದಾಂತದ ಮತ್ತೊಂದು ಪರಮೋಪದೇಶವು. ನಮ್ಮ ದುಃಖವೆಲ್ಲ ಅಜ್ಞಾನದಿಂದಲೇ ಉಂಟಾಗಿರುವದೆಂಬುದನ್ನೂ ಅಜ್ಞಾನವೆಂದರೆ ಅನೇಕತ್ವ ಬುದ್ಧಿಯೆಂಬುದನ್ನೂ ಒಬ್ಬೊಬ್ಬ ಮನುಷ್ಯನೂ ಬೇರೆಬೇರೆ, ಒಂದೊಂದು ಜನಾಂಗವೂ ಬೇರೆ ಬೇರೆ, ಭೂಮಿಯೇ ಬೇರೆ ಚಂದ್ರನೇ ಬೇರೆ, ಚಂದ್ರನೇ ಬೇರೆ, ಸೂರ್ಯನೇ ಬೇರೆ - ಎಂಬ ಭಾವನೆಯೇ ಎಂಬುದನ್ನೂ ಈ ಸಿದ್ಧಾಂತದಲ್ಲಿ ಹೇಗೆ ತೋರಿಸಿಕೊಟ್ಟಿರುವದೆಂಬುದು ನಮಗೆ ಮುಂದೆ ಗೊತ್ತಾಗುವದು. ಒಂದು ಅಣುವಿಗೂ ಮತ್ತೊಂದು ಅಣುವಿಗೂ ಭೇದವಿರುವದೆಂಬ ಈ ಭಾವನೆಯಿಂದಲೇ ದುಃಖವೆಲ್ಲವೂ ಉಂಟಾಗಿರುವದು. ಆದರೆ ಈ ಭೇದವು ನಿಜವಾಗಿರುವದಿಲ್ಲ, ಇದು ಸತ್ಯವಲ್ಲ-ಎಂದು ವೇದಾಂತವು ಹೇಳುತ್ತದೆ. ಈ ಭೇದವು ಬರಿಯ ತೋರಿಕೆಯಾಗಿರುತ್ತದೆ, ಮೇಲೆಮೇಲೆ ನೋಡಿದಾಗ ಕಾಣುವದಾಗಿರುತ್ತದೆ; ಆಗಲೂ ಪರಮಾರ್ಥವಾಗಿ ಏಕತ್ವವೇ ಇರುತ್ತದೆ. ಮೇಲೆ ನಿಲ್ಲದೆ ಒಳಕ್ಕೆ ನುಗ್ಗಿದರೆ ಒಬ್ಬ ಮನುಷ್ಯನಿಗೂ ಇನ್ನೊಬ್ಬನಿಗೂ, ಒಂದು ಕುಲದವರಿಗೂ ಮತ್ತೊಂದು ಕುಲದವರಿಗೂ, ಉಚ್ಚಗಳಿಗೂ ನೀಚಗಳಿಗೂ,

* 4,5,6,7-ನೆಯ ಮಂತ್ರಗಳ ಅಭಿಪ್ರಾಯವಿದು. ಇಲ್ಲಿ ಅಕ್ಷರಾರ್ಥವನ್ನು ಕೊಟ್ಟಿಲ್ಲ. ಭಾವಾರ್ಥವನ್ನು ಮಾತ್ರ ಹೇಳಿರುತ್ತದೆ. ಮಂತ್ರಗಳ ಯಥಾಕ್ಷರಅಭಿಪ್ರಾಯವನ್ನು ನೋಡಬೇಕೆನ್ನುವವರು 'ಉಪನಿಷದ್ವಾಕ್ಯ' ಲೇಖನಮಾಲೆಯನ್ನಾಗಲಿ 'ಈಶಾವಾಸ್ಯ ಭಾಷ್ಯವನ್ನಾಗಲಿ ನೋಡಬೇಕು.

ಬಡವರಿಗೂ ಬಲ್ಲಿದರಿಗೂ, ದೇವತೆಗಳಿಗೂ ಮನುಷ್ಯರಿಗೂ, ಮನುಷ್ಯರಿಗೂ ಪ್ರಾಣಿಗಳಿಗೂ ಈ ಐಕ್ಯವೇ ಇರುವದೆಂದು ಕಂಡುಬರುತ್ತದೆ. ತಕ್ಕಷ್ಟು ಆಳವಾಗಿ ಹೋದರೆ ಎಲ್ಲವೂ ಒಂದರ ರೂಪಾಂತರಗಳೇ ಎಂದು ಕಂಡುಬರುತ್ತದೆ. ಈ ಏಕತ್ವಭಾವನೆಯನ್ನು ಮುಟ್ಟಿದವನಿಗೆ ಇನ್ನು ಮೋಹವಿರುವದಿಲ್ಲ. ಅವನಿಗೆ ಏತರಿಂದ ಮೋಹವಾಗಬೇಕು? ಅವನಿಗೆ ಎಲ್ಲದರ ನಿಜವೂ ಎಲ್ಲದರ ರಹಸ್ಯವೂ ತಿಳಿದಿರುತ್ತದೆ. ಇನ್ನು ಅವನಿಗೆ ಶೋಕವೆಲ್ಲಿಯದು? ಅವನಿಗೆ ಏತರ ಬಯಕೆ? ಪ್ರತಿಯೊಂದರ ಪರಮಾರ್ಥವೂ ಪರಮೇಶ್ವರನೇ, ಆ ಕೇಂದ್ರವೇ ಪ್ರತಿಯೊಂದರ ಐಕ್ಯತೆಯೇ, ಅದು ನಿತ್ಯ ಸಚ್ಚಿದಾನಂದ ಸ್ವರೂಪವೇ ಎಂದು ಗೊತ್ತುಪಡಿಸಿಕೊಂಡು ಬಿಟ್ಟಿರುತ್ತಾನೆ. ಮರಣವಾಗಲಿ ರೋಗವಾಗಲಿ, ದುಃಖವಾಗಲಿ ಸಂಕಟವಾಗಲಿ ಅತೃಪ್ತಿಯಾಗಲಿ ಅಲ್ಲಿರುವದಿಲ್ಲ. ಎಲ್ಲವೂ ಸಂಪೂರ್ಣ ಐಕ್ಯವೇ, ಸಂಪೂರ್ಣ ಆನಂದವೇ ಆಗಿರುತ್ತದೆ. ಆಗ ಅವನು ಯಾರಿಗೋಸ್ಕರ ಅಳಬೇಕು? ನಿಜವಾಗಿ ನೋಡಿದರೆ ಮರಣವೇ ಇರುವದಿಲ್ಲ, ಸಂಕಟವೇ ಇರುವದಿಲ್ಲ; ಪರಮಾರ್ಥದಲ್ಲಿ ನಾವು ಇಂಥವರಿಗೆ ಶೋಕಿಸಬೇಕೆಂಬುವರು ಯಾರೂ ಇರುವದಿಲ್ಲ, ಇಂಥವರಿಗಾಗಿ ವಿಷಾದಿಸಬೇಕೆಂಬವರೂ ಯಾರೂ ಇರುವದಿಲ್ಲ.

"ಆತನು ಎಲ್ಲವನ್ನೂ ವ್ಯಾಪಿಸಿಕೊಂಡಿರುವವನು, ಶುದ್ಧನಾಗಿರುವವನು, ಆಕಾರವಿಲ್ಲದವನಾಗಿರುವವನು, ಶರೀರವಿಲ್ಲದವನಾಗಿರುವವನು... ಕಲಂಕ ವಿಲ್ಲದವನಾಗಿರುವನು; ಆತನು ತಿಳಿದವನು, ಮಹಾಕವಿಯು,...... ಸ್ವಯಂಭುವು, ಪ್ರತಿಯೊಬ್ಬರಿಗೂ ಅವರವರಿಗೆ ತಕ್ಕದ್ದನ್ನು ಕೊಡುತ್ತಿರುವವನು"*.

"ಈ ಅವಿದ್ಯೆಯ ಪ್ರಪಂಚವನ್ನು ಯಾರು ಉಪಾಸನೆಮಾಡುತ್ತಿರುವರೋ, ಅಜ್ಞಾನದಿಂದುಂಟಾಗಿರುವ ಈ ಪ್ರಪಂಚವನ್ನು ಅದು ಇರುವದೆಂದು ನಂಬಿರುವರೋ ಮತ್ತು ಯಾರು ಈ ಪ್ರಪಂಚದಲ್ಲಿಯೇ# ತಮ್ಮ ಪೂರ್ಣ ಜೀವನವನ್ನು ಸಾಗಿಸುತ್ತಾ ಇದಕ್ಕಿಂತ ಉತ್ತಮವಾದದ್ದು ಅಥವಾ ಹೆಚ್ಚಿನದು ಯಾವದೊಂದನ್ನೂ ಕಾಣದೆ ಇರುವರೋ ಅವರು ಇನ್ನೂ ಹೆಚ್ಚಿನ ಕತ್ತಲೆಯಲ್ಲಿ ಅಡ್ಡಾಡುತ್ತಿರುವರು. ಆದರೆ ಯಾವನು ಪ್ರಕೃತಿಯ ರಹಸ್ಯವನ್ನು ಬಲ್ಲವನಾಗಿರುವನೋ ಪ್ರಕೃತಿಯ ಸಹಾಯದಿಂದ ಪ್ರಕೃತಿಯಿಂದಾಚೆಗೆ ಇರುವದನ್ನು ಕಂಡುಕೊಂಡಿರುವನೋ ಅವನು ಮೃತ್ಯುವನ್ನು ದಾಟುತ್ತಾನೆ,

* ಇಲ್ಲಿಂದ ಮುಂದಕ್ಕೆ 8 ರಿಂದ 16ರವರೆಗಿನ ಮಂತ್ರಗಳ ಒಟ್ಟರ್ಥವನ್ನು ಕೊಟ್ಟಿರುತ್ತದೆ.

# ಇಲ್ಲಿ ವಿದ್ಯೆ, ಅವಿದ್ಯೆ – ಇವೆರಡರ ತಾರತಮ್ಯವು ವ್ಯಾಖ್ಯಾನದಲ್ಲಿ ತೋರುವದಿಲ್ಲ ಲೇಖಕರ ಕೈ ತಪ್ಪಿನಿಂದ ಯಾವದಾದರೂ ಮಾತು ಇಲ್ಲಿ ಬಿಟ್ಟುಹೋಗಿದ್ದರೂ ಹೋಗಿರಬಹುದು.

ಪ್ರಕೃತಿಯಿಂದಾಚೆಗಿರುವದರ ಸಹಾಯದಿಂದ ಅವನು ನಿತ್ಯಾನಂದವನ್ನು ಅನುಭವಿಸುತ್ತಾನೆ."

"ನಿನ್ನ ಹಿರಣ್ಮಯವಾದ ಪಾತ್ರೆಯಿಂದ ಸತ್ಯವನ್ನು ಮುಚ್ಚಿಕೊಂಡಿರುವ ಎಲೈ ಸೂರ್ಯನೇ, ಆ ಮುಸುಕನ್ನು ತೆಗೆದುಹಾಕು, ನಿನ್ನಲ್ಲಿರುವ ಸತ್ಯವನ್ನು ನೋಡುವೆನು. ನಿನ್ನಲ್ಲಿರುವ ಸತ್ಯವನ್ನು ಬಲ್ಲೆನು, ನಿನ್ನ ಕಿರಣಗಳ ಮತ್ತು ಮಹಿಮೆಯ ನಿಜವಾದ ಅರ್ಥವನ್ನು ನಾನು ತಿಳಿದುಕೊಂಡಿರುವೆನು, ನಿನ್ನಲ್ಲಿ ಬೆಳಗುತ್ತಿರುವದನ್ನು ನೋಡಿರುವೆನು. ನಿನ್ನಲ್ಲಿರುವ ಸತ್ಯವನ್ನು ನೋಡುತ್ತಲಿದ್ದೇನೆ, ನಿನ್ನಲ್ಲಿರುವದೇ ನನ್ನಲ್ಲಿಯೂ ಇರುವದು, ಅದೇ ನಾನು".@

---

@ ಇದುವರೆಗೆ ಕೊಟ್ಟಿರುವ ಮಂತ್ರಗಳ ಅಕ್ಷರಾರ್ಥವನ್ನು ಈ ಉಪನಿಷತ್ತಿನ ಶಾಂಕರ ಭಾಷ್ಯದಲ್ಲಿ ಕಾಣಬಹುದು.

# 8. ಸಾಕ್ಷಾತ್ಕಾರ

ಈಗ ನಿಮಗೆ ಅತ್ಯಂತಲಲಿತವಾದ ಆದರೂ ಅತ್ಯಂತರಸವತ್ತಾದದ್ದೆಂದು ನನಗೆ ತೋರುತ್ತಿರುವ ಉಪನಿಷತ್ತುಗಳಲ್ಲಿ ಒಂದನ್ನು ಓದಿ ಹೇಳುವೆನು. ಅದಕ್ಕೆ **ಕಠೋಪನಿಷತ್ತು** ಎಂದು ಹೆಸರು. **ಸರ್ ಎಡ್ವಿನ್ ಆರ್ನಾಲ್ಡ್*** ಎಂಬಾತನು ಬರೆದಿರುವ 'ಸಾವಿನ ಗುಟ್ಟು' ಎಂಬ ಇದರ ಅನುವಾದವನ್ನು ನಿಮ್ಮಲ್ಲಿ ಕೆಲವರು ಓದಿರಬಹುದು.

**ಹಿಂದಿನ#** ಉಪನ್ಯಾಸದಲ್ಲಿ ಪ್ರಪಂಚದ ಮೂಲವನ್ನೂ ಸೃಷ್ಟಿಯನ್ನೂ ಕುರಿತು ಹೊರಟ ಪ್ರಶ್ನೆಗೆ ಹೊರಗಿನಿಂದ ಸರಿಯಾದ ಉತ್ತರವು ಬಾರದ್ದರಿಂದ ಅದು ಹೇಗೆ ಒಳಮುಖವಾಯಿತೆಂಬುದನ್ನು ತಿಳಿಸಿದ್ದಾಗಿದೆ. ಈ ಗ್ರಂಥದಲ್ಲಿ ಆ ಸೂಚನೆಯನ್ನು ಮಾನಸಶಾಸ್ತ್ರ ರೀತಿಯಿಂದ ತೆಗೆದುಕೊಂಡು ಮನುಷ್ಯನ ಒಳಗಿನ ಸ್ವರೂಪವೇನೆಂಬುದನ್ನು ವಿಚಾರಮಾಡಿರುತ್ತದೆ. ಹೊರಗಿನ ಪ್ರಪಂಚವನ್ನು ಸೃಷ್ಟಿಮಾಡಿದವರು ಯಾರು? ಅದು ಹೇಗೆ ಹುಟ್ಟಿತು? ಎಂಬುದೇ ಮೊದಲು ಕೇಳಿದ ಪ್ರಶ್ನೆ. ಮಾನವನು ಬದುಕಿದ್ದು ನಡೆದಾಡುವದಕ್ಕೆ ಸಹಾಯಕವಾಗಿರುವದು ಯಾವದು? ಮನುಷ್ಯನು ಸತ್ತಮೇಲೆ ಅದು ಏನಾಗುತ್ತದೆ? ಎಂಬುದೇ ಈಗಿನ ಪ್ರಶ್ನೆ. ಮೊದಲಿನ ಜಿಜ್ಞಾಸುಗಳು ಭೌತಿಕವಸ್ತುವನ್ನು ಪರೀಕ್ಷೆಮಾಡಿ ಅದರ ಮೂಲಕವಾಗಿ ಪರಮಾರ್ಥವನ್ನು ಕಂಡುಹಿಡಿಯುವದಕ್ಕೆ ಪ್ರಯತ್ನಮಾಡಿದರು. ಅವರಿಗೆ ಸಿಕ್ಕ ಉತ್ತಮ ತತ್ತ್ವವೇನೆಂದರೆ ಈ ವಿಶ್ವವನ್ನು ಆಳುವ ಸಗುಣೇಶ್ವರನು, ಎಂದರೆ ಅಮಿತವಾಗಿ ದೊಡ್ಡದು ಮಾಡಿದ ಮಾನವ ಪ್ರಾಣಿಯೋ ಅಷ್ಟು ದೊಡ್ಡದಾದರೂ ಒಟ್ಟಿನಲ್ಲಿ ಮಾನವಪ್ರಾಣಿಯೋ, ಆದರೆ ಅದೇ ಪೂರ್ಣಸತ್ಯವಾಗಲಾರದು. ಬಹಳ ಹೆಚ್ಚೆಂದರೆ ಅದು ಅಂಶತಃ ಸತ್ಯವಾಗಿರಬಹುದು, ಅಷ್ಟೆ. ನಮಗೆ ಈ ವಿಶ್ವವು ಮಾನವಪ್ರಾಣಿಗಳಾಗಿ ಕಾಣುತ್ತದೆ, ನಮ್ಮ ಈಶ್ವರನು ಈ ವಿಶ್ವದ ಮಾನವ ವಿವರಣೆಯು. ಒಂದು ವೇಳೆ ಹಸುವಿಗೆ ತತ್ತ್ವವಿಚಾರಶಕ್ತಿಯೂ ಮತವೂ ಇತ್ತೆಂದು ಇಟ್ಟುಕೊಳ್ಳಿರಿ; ಆಗ ಅದಕ್ಕೆ ಒಂದು

* ಈತನು (ಕ್ರಿ. 1832-1904) ಒಬ್ಬ ಇಂಗ್ಲಿಷ್ ಕವಿಯು, ಮತ್ತು ಪ್ರಾಚ್ಯವಾಙ್ಮಯ ಬೋಧಕನು. ಇವನು ಬರೆದಿರುವ Light of Asia (ಏಷಿಯದ ಬೆಳಕು) ಎಂಬ ಬುದ್ಧ ಚರಿತೆಯು ಬಹು ಉತ್ತಮಕಾವ್ಯವು; ಈತನು ಭಗವದ್ಗೀತೆಯನ್ನೂ ಅನುವಾದ ಮಾಡಿರುತ್ತಾನೆ.

# ಇಲ್ಲಿ ಸೂಚಿಸಿರುವ ಉಪನ್ಯಾಸವು ಯಾವದೆಂಬುದು ತಿಳಿಯದು. ಈ ಹಿಂದೆ ಕೊಟ್ಟಿರುವ ಈಶಾವಾಸ್ಯೋಪನಿಷತ್ತಿನ ಉಪನ್ಯಾಸವಲ್ಲವೆಂಬುದು ಸ್ಪಷ್ಟವೇ ಆಗಿದೆ.

ಹಸುಗಳ ಪ್ರಪಂಚವೂ ಆ ಪ್ರಪಂಚದ ಸಮಸ್ಯೆಗೆ ಹಸುಗಳ ಪರಿಹಾರವೂ ತೋರುತ್ತಿದ್ದವು. ಅದಕ್ಕೆ ನಮ್ಮ ಈಶ್ವರನು ಕಾಣುವ ಸಂಭವವೇ ಇರುತ್ತಿರಲಿಲ್ಲ. ಒಂದು ವೇಳೆ ಬೆಕ್ಕುಗಳು ತತ್ತ್ವಜಿಜ್ಞಾಸುಗಳಾಗಿದ್ದವೆಂದು ಇಟ್ಟುಕೊಳ್ಳಿ; ಅವುಗಳಿಗೆ ಬೆಕ್ಕುಗಳ ಪ್ರಪಂಚವೇ ಕಾಣುತ್ತಿತ್ತು, ವಿಶ್ವದ ತೊಡಕಿಗೆ ಬೆಕ್ಕಿನ ಪರಿಹಾರವೇ ಅವುಗಳಿಗೆ ತೋರುತ್ತಿತ್ತು. ಆ ಪ್ರಪಂಚವನ್ನು ಒಂದು ಬೆಕ್ಕೇ ಆಳುವದೆಂದು ಕಾಣುತ್ತಿತ್ತು. ಇದರಿಂದ ನಮಗೆ ಕಂಡುಬರುವದೇನೆಂದರೆ, ನಮ್ಮ ವಿಶ್ವ ಸಮಸ್ಯೆಯ ಪರಿಹಾರವು ಪೂರ್ಣವಾದ ಪರಿಹಾರವಲ್ಲ; ನಮ್ಮ ವಿಶ್ವ ಪ್ರತ್ಯಯದಲ್ಲಿ ಇಡಿಯ ವಿಶ್ವವೂ ಸೇರಿರುವದಿಲ್ಲ. ಮನುಷ್ಯನು ಸಾಮಾನ್ಯವಾಗಿ ಇಟ್ಟುಕೊಳ್ಳುವಂಥ ಆ ಅತ್ಯಂತ ಸ್ವಾರ್ಥದ ಅಭಿಪ್ರಾಯವನ್ನು ಇಟ್ಟುಕೊಳ್ಳುವದು ಒಂದು ಭಾರಿಯ ತಪ್ಪು. ಹೊರಗಿನಿಂದ ವಿಶ್ವದ ತೊಡಕನ್ನು ಬಿಚ್ಚುವದಕ್ಕೆ ಹೋದರೆ ಅದರಲ್ಲಿ ಈ ದೋಷವಿರುತ್ತದೆ. ಮೊದಲನೆಯದಾಗಿ, ನಾವು ನೋಡುವ ವಿಶ್ವವು ನಮ್ಮ ವಿಶ್ವವಾಗಿರುತ್ತದೆ, ಪರಮಾರ್ಥವನ್ನು ನಾವು ತಿಳಿದುಕೊಂಡದ್ದಾಗಿರುತ್ತದೆ. ಆ ಪರಮಾರ್ಥವನ್ನು ನಾವು ಇಂದ್ರಿಯಗಳಿಂದ ನೋಡಲಾರೆವು; ನಾವು ಅದನ್ನು ಗ್ರಹಿಸಲಾರೆವು. ನಮಗೆ ಐದು ಇಂದ್ರಿಯಗಳ ಪ್ರಾಣಿಗಳ ದೃಷ್ಟಿಯಿಂದ ಮಾತ್ರ ಈ ವಿಶ್ವವು ತಿಳಿದು ಬಂದಿರುತ್ತದೆ. ನಮಗೆ ಮತ್ತೊಂದು ಇಂದ್ರಿಯವು ಪ್ರಾಪ್ತವಾಯಿತೆಂದು ಇಟ್ಟುಕೊಳ್ಳಿ; ಆಗ ಇಡಿಯ ವಿಶ್ವವೇ ನಮ್ಮ ಪಾಲಿಗೆ ಮಾರ್ಪಡಬೇಕಾಗುವದು. ನಮಗೊಂದು ಸೂಚಿಕಾಂತಶಕ್ತಿಯ (Magnetic) ಇಂದ್ರಿಯವಿತ್ತೆಂದು ಭಾವಿಸಿಕೊಳ್ಳಿ; ಆಗ ಅವನ್ನು ಅರಿಯುವದಕ್ಕೆ ಅಥವಾ ಅನುಭವಿಸುವದಕ್ಕೆ ಯಾವ ಕಾರಣ ವಿಶೇಷವೂ ಇಲ್ಲದ್ದರಿಂದ ನಮಗೆ ಈಗ ತಿಳಿಯಲಾಗದ ಲಕ್ಷೋಪಲಕ್ಷ ಶಕ್ತಿಗಳಿರುವವೆಂದು ತಿಳಿಯಬಂದೀತೆಂಬುದು ಪೂರ್ಣವಾಗಿ ಸಂಭಾವನೀಯವಾಗಿರುತ್ತದೆ. ನಮ್ಮ ಇಂದ್ರಿಯಗಳಿಗೆ ಮಿತಿಯಿದೆ, ಬಹಳ ಮಿತಿಯಿದೆ. ಆ ಮಿತಿಗೆ ಒಳಪಟ್ಟೇ ನಾವು ನಮ್ಮದು ಎಂದು ಕರೆಯುತ್ತಿರುವ ವಿಶ್ವವಿರುತ್ತದೆ; ನಮ್ಮ ದೇವರೆಂಬುವನು ಆ ವಿಶ್ವದ ಸಮಸ್ಯೆಯ ಪರಿಹಾರ ಸ್ವರೂಪನಾಗಿರುತ್ತಾನೆ. ಆದರೆ ಅಷ್ಟೇ ಇಡಿಯ ಸಮಸ್ಯೆಗೂ ಪರಿಹಾರವೆಂದು ಹೇಳುವದಕ್ಕಾಗುವದಿಲ್ಲ.

ಆದರೆ ಮನುಷ್ಯನು ಇಷ್ಟಕ್ಕೇ ನಿಲ್ಲುವಹಾಗಿಲ್ಲ. ಅವನು ಮನನ ಮಾಡತಕ್ಕ ಪ್ರಾಣಿಯಾಗಿರುತ್ತಾನೆ. ಅವನಿಗೆ ಎಲ್ಲಾ ವಿಶ್ವಗಳನ್ನೂ ಅಂತರ್ಭಾವಿಸಿಕೊಂಡಿರುವ ಒಂದಾನೊಂದು ಪರಿಹಾರವು ಬೇಕಾಗಿರುತ್ತದೆ. ಮನುಷ್ಯರ ಪ್ರಪಂಚವೂ ಆಗಿರಬೇಕು, ದೇವತೆಗಳ ಪ್ರಪಂಚವೂ ಆಗಿರಬೇಕು, ಮಿಕ್ಕ ಎಲ್ಲಾ ಪ್ರಾಣಿಗಳ

ಪ್ರಪಂಚವೂ ಆಗಿರಬೇಕು – ಅಂಥದ್ದೊಂದು ಪ್ರಪಂಚವನ್ನು ಕಂಡುಕೊಳ್ಳಬೇಕೆಂದು ಅವನಿಗೆ ಆಶೆಯಿರುತ್ತದೆ; ಎಲ್ಲಾ ಬಗೆಯ ದೃಶ್ಯಗಳ ಮರ್ಮವನ್ನೂ ಹೊರಗೆಡಹುವ ರೀತಿಯೊಂದನ್ನು ಕಂಡುಕೊಳ್ಳಬೇಕೆಂಬ ಆಶೆಯಿರುತ್ತದೆ. ಆದ್ದರಿಂದ ಎಲ್ಲಾ ಬಗೆಯ ಪ್ರಪಂಚಗಳನ್ನೂ ತನ್ನೊಳಗೆ ಅಡಕವಾಡಿಕೊಂಡಿರುವ ಪ್ರಪಂಚವನ್ನು ನಾವು ಮೊದಲು ಕಂಡುಹಿಡಿಯಬೇಕೆಂದಾಯಿತು. ಈ ಎಲ್ಲಾ ಲೋಕಗಳನ್ನೂ ತಾನೊಂದೇ ಹಾಸುಹೊಕ್ಕಾಗಿ ವ್ಯಾಪಿಸಿಕೊಂಡಿರುವ ಅವುಗಳ ತಿರುಳಾಗಿರುವ ಯಾವದೋ ಒಂದನ್ನು ಕಂಡುಕೊಳ್ಳಬೇಕಾಯಿತು. ಅದನ್ನು ಇಂದ್ರಿಯಗಳಿಂದ ಕಂಡುಹಿಡಿಯುವದಕ್ಕಾಗಲಿ ಆಗದಿರಲಿ, ಚಿಂತೆಯಿಲ್ಲ. ಈ ಕೆಳಗಿನ ಲೋಕಗಳಿಗೂ ಮತ್ತು ಮೇಲಿನ ಲೋಕಗಳಿಗೂ ಸಮಾನಧರ್ಮವಾಗಿರುವ ಯಾವದಾದರೊಂದು ತತ್ತ್ವವನ್ನು ಕಂಡುಕೊಳ್ಳುವದು ಸಾಧ್ಯವಾದರೆ, ಆಗ ಮಾತ್ರ ಈ ನಮ್ಮ ಸಮಸ್ಯೆಯನ್ನು ಬಿಚ್ಚಿದಂತೆ ಆಗುವದು. ಕೇವಲ ಯುಕ್ತಿಯಿಂದಲೇ ಆದರೂ ಚಿಂತೆಯಿಲ್ಲ, ಎಲ್ಲಾ ಬಗೆಯ ಇರುವಿಕೆಗೂ ಒಂದೇ ಒಂದು ಆಧಾರವಿರುವದೆಂಬುದು ನಮ್ಮ ತಿಳಿವಳಿಕೆಗೆ ಬರುವದಾದರೆ ಆಗ ನಮ್ಮ ಸಮಸ್ಯೆಗೆ ಯಾವುದೋ ಒಂದು ಬಗೆಯ ಪರಿಹಾರವು ಸಿಕ್ಕಂತೆ ಆದೀತು. ಆದರೆ ನಾವು ಕಾಣುತ್ತಿರುವ ನಮ್ಮ ತಿಳಿವಳಿಕೆಗೆ ಬಂದಿರುವ ಬರಿಯ ಈ ಪ್ರಪಂಚದಿಂದ ಮಾತ್ರವೇ ಈ ಪರಿಹಾರವನ್ನು ಕಂಡುಕೊಳ್ಳುವದು ಎಂದಿಗೂ ಸಾಧ್ಯವಿಲ್ಲವೆಂಬುದು ನಿಶ್ಚಯವು: ಏಕೆಂದರೆ ಈ ನಮ್ಮ ಪ್ರಪಂಚವೆಂಬುದು ಏಕದೇಶವಾದ ಪ್ರತೀತಿ ಮಾತ್ರವಾಗಿರುತ್ತದೆ.

ಆದ್ದರಿಂದ ನಮಗೆ ಇರುವದೆಲ್ಲ ಇನ್ನೂ ಆಳವಾಗಿ ಪ್ರವೇಶಿಸುವದೊಂದೇ ಗತಿ. ಕೇಂದ್ರವನ್ನು ಬಿಟ್ಟು ಎಷ್ಟೆಷ್ಟು ದೂರ ಹೋದರೆ ಅಷ್ಟಷ್ಟು ವೈಚಿತ್ರ್ಯಗಳೂ ಭೇದಗಳೂ ಸ್ಫುಟತರವಾಗಿ ಕಂಡುಬರುವವೆಂಬುದೂ ಕೇಂದ್ರಕ್ಕೆ ಎಷ್ಟೆಷ್ಟು ಹತ್ತಿರಕ್ಕೆ ಬಂದರೆ ಐಕ್ಯಕ್ಕೆ ಅಷ್ಟಷ್ಟು ಹತ್ತಿರವಾದಂತಾಗುವವೆಂಬುದೂ ಪ್ರಾಚೀನ ಕಾಲದ ಜಿಜ್ಞಾಸುಗಳಿಗೆ ಹೊಳೆಯಿತು. ಒಂದು ವೃತ್ತದ ಕೇಂದ್ರಕ್ಕೆ ನಾವು ಎಷ್ಟೆಷ್ಟು ಹತ್ತಿರವಿರುವೆವೋ, ತ್ರಿಜ್ಯಗಳೆಲ್ಲವೂ ಸಂಧಿಸುವ ಸಮಾನ ಸ್ಥಾನಕ್ಕೆ ನಾವು ಅಷ್ಟಷ್ಟು ಹತ್ತಿರವಾಗಿರುವೆವು; ಆ ಕೇಂದ್ರಕ್ಕೆ ನಾವು ಎಷ್ಟೆಷ್ಟು ದೂರವಿರುವೆವೋ ಅಷ್ಟಷ್ಟುಮಟ್ಟಿಗೆ ಮಿಕ್ಕವರ ತ್ರಿಜ್ಯಕ್ಕಿಂತಲೂ ನಮ್ಮ ತ್ರಿಜ್ಯ ರೇಖೆಯು ದೂರವಾಗಿರುತ್ತದೆ. ಬಾಹ್ಯ ಪ್ರಪಂಚವು ಕೇಂದ್ರಕ್ಕೆ ತೀರ ದೂರವಾಗಿರುತ್ತದೆ; ಆದ್ದರಿಂದ ಈ ಇರವಿನ ರಾಶಿಯ ದೃಶ್ಯಗಳೆಲ್ಲವೂ ಸೇರಬಹುದಾದ ಯಾವದೊಂದು ಏಕಸ್ಥಾನವೂ ಇಲ್ಲಿರುವದಿಲ್ಲ. ಎಷ್ಟೇ ಉದಾರದೃಷ್ಟಿಯಿಂದ ನೋಡಿದರೂ ಬಾಹ್ಯಪ್ರಪಂಚವೆಂಬುದು ಒಟ್ಟು ದೃಶ್ಯ ರಾಶಿಯ ಒಂದು ಭಾಗವು ಮಾತ್ರ

ಆದೀತು. ಇದಲ್ಲದೆ ಇನ್ನೂ ಕೆಲವು ಭಾಗಗಳಿವೆ; ಮಾನಸ, ನೈತಿಕ ಭೌದ್ಧಿಕ ಎಂಬ ಭಾಗಗಳೂ ಇರುತ್ತವೆ. ಆಯಾ ಬೇರೆಬೇರೆಯ ಅಂತಸ್ತಿನ ಇರವುಗಳೂ ಇರುತ್ತವೆ; ಹೀಗಿರುವಲ್ಲಿ ಈ ಒಂದನ್ನೇ ಇಟ್ಟುಕೊಂಡು ಇಡಿಯ ದೃಶ್ಯದ ಮರ್ಮವನ್ನು ಕಂಡುಕೊಳ್ಳುವದು ತೀರ ಅಸಾಧ್ಯವಾಗಿದೆ. ಆದ್ದರಿಂದ ಈ ಎಲ್ಲಾ ಬಗೆಯ ಭೂಮಿಕೆಗಳೂ ಇರವುಗಳೂ ಎಲ್ಲಿಂದ ಹೊರಟಿರುವವೋ, ಅಂಥ ಕೇಂದ್ರಸ್ಥಾನೀಯವಾದ ತತ್ತ್ವವನ್ನು ನಾವು ಕಂಡುಕೊಳ್ಳಬೇಕು. ಅಲ್ಲಿಂದ ನಿಂತುಕೊಂಡು ಇದೆಲ್ಲದರ ಮರ್ಮವನ್ನೂ ಕಂಡುಹಿಡಿಯುವದಕ್ಕೆ ಯತ್ನಿಸಬೇಕು. ಅದೇ ನಾವು ಮಾಡಬೇಕಾಗಿರುವದು.

ಅಂಥ ಕೇಂದ್ರವು ಎಲ್ಲಿದೆ? ಅದು ನಮ್ಮೊಳಗೇ ಇರುತ್ತದೆ. ಪ್ರಾಚೀನ ಋಷಿಗಳು ಒಳಒಳಕ್ಕೆ ಹೊಕ್ಕು ಕೊನೆಗೆ ಮನುಷ್ಯ ಅಂತಃಕರಣದ ತಿರುಳಾಗಿರುವ ತತ್ತ್ವವೇ ಇಡಿಯ ವಿಶ್ವದ ಕೇಂದ್ರವೆಂಬುದನ್ನು ಗೊತ್ತುಪಡಿಸಿಕೊಂಡರು. ಎಲ್ಲಾ ಇರವಿನ ಭೂಮಿಕೆಗಳೂ ಈ ಬಿಂದುವಿನ ನೆಲೆಗೇ ಹೋಗುತ್ತಿರುವವು. ಅದೇ ಎಲ್ಲಕ್ಕೂ ಸಮಾನವಾದ ಸ್ಥಾನವು; ಅಲ್ಲಿ ನೆಲೆ ನಿಂತರೇ ಈ ತೊಡಕನ್ನು ಎಲ್ಲರಿಗೂ ಅನ್ವಯಿಸುವಂತೆ ಬಿಚ್ಚಿದಂತೆ ಆಗುತ್ತದೆ. ಹೀಗಿರುವದರಿಂದ 'ಈ ಪ್ರಪಂಚವನ್ನು ಮಾಡಿದವರು ಯಾರು?' ಎಂಬುದೇನೂ ಅಷ್ಟು ಶಾಸ್ತ್ರೀಯವಾದದ್ದಲ್ಲ, ಅದಕ್ಕೆ ಉತ್ತರವನ್ನು ಕಂಡುಕೊಂಡರೂ ಅಷ್ಟೇನೂ ಪ್ರಯೋಜನವಾಗುವ ಹಾಗೂ ಇಲ್ಲ.

ಈ ವಿಷಯವನ್ನು **ಕಠೋಪನಿಷತ್ತಿನಲ್ಲಿ** ಬಹಳ ಅಲಂಕಾರಿಕವಾದ ಭಾಷೆಯಲ್ಲಿ ಹೇಳಿರುತ್ತದೆ. ಪೂರ್ವಕಾಲದಲ್ಲಿ ಒಬ್ಬಾನೊಬ್ಬ ಶ್ರೀಮಂತನಿದ್ದನು; ಅವನೊಂದು ಯಜ್ಞವನ್ನು ಮಾಡಿದನು. ಆ ಯಜ್ಞಕ್ಕೆ ತನ್ನಲ್ಲಿರುವ ಸರ್ವಸ್ವವನ್ನೂ ದಕ್ಷಿಣೆಯಾಗಿ ಕೊಡಬೇಕಾಗಿತ್ತು. ಆದರೆ ಆತನು ಅಷ್ಟು ಶುದ್ಧಿಬುದ್ಧಿಯವನಲ್ಲ, ಯಜ್ಞವನ್ನು ಮಾಡಿದ ಕೀರ್ತಿಯೂ ಹೆಸರುವಾಸಿಯೂ ತನಗೆ ಆಗಬೇಕೆಂಬ ಇಚ್ಛೆಯೇನೋ ಅವನಿಗಿತ್ತು; ಆದರೆ ತನಗೆ ಉಪಯೋಗವಿಲ್ಲದ ವಸ್ತುಗಳನ್ನೇ ಅವನು ದಾನಮಾಡುತ್ತಿದ್ದನು. ಕರುಗಳಿಲ್ಲದ, ಕುರುಡ ಕುಂಟ ಮುದಿಹಸುಗಳನ್ನೇ ಕೊಡುತ್ತಿದ್ದನು. ಅವನಿಗೆ **ನಚಿಕೇತ** ಎಂಬ ಒಬ್ಬ ಹುಡುಗನಿದ್ದನು. ಈ ಹುಡುಗನಿಗೆ ತಮ್ಮಪ್ಪನು ಧರ್ಮವಾಗಿ ನಡೆಯುತ್ತಲಿಲ್ಲ, ವ್ರತಭಂಗವನ್ನು ಮಾಡಿಕೊಳ್ಳುತ್ತಲಿದ್ದಾನೆ ಎನಿಸಿತು. ಆದರೆ ಅವನಿಗೆ ಏನು ಹೇಳಬೇಕೆಂಬುದು ಅವನಿಗೆ ತೋಚಲಿಲ್ಲ. ಇಂಡಿಯದೇಶದಲ್ಲಿ ತಂದೆತಾಯಿಗಳು ಮಕ್ಕಳಿಗೆ ಜೀವಂತ ದೇವರುಗಳಾಗಿರುತ್ತಾರೆ. ಆದ್ದರಿಂದ ಹುಡುಗನು ತಂದೆಯ ಬಳಿಗೆ ಅತ್ಯಂತ ಗೌರವ ಪೂರ್ವಕವಾಗಿ

ಬಂದು ವಿನಯದಿಂದ "ಅಪ್ಪ, ನನ್ನನ್ನು ಯಾರಿಗೆ ಕೊಡಬೇಕೆಂದಿರುವೆ? ಈ ಯಜ್ಞದಲ್ಲಿ ಸರ್ವಸ್ವವನ್ನೂ ಕೊಡಬೇಕಷ್ಟೆ? ಎಂದನು. ಈ ಪ್ರಶ್ನೆಯನ್ನು ಕೇಳಿ ತಂದೆಯು ತುಂಬ ಸಿಟ್ಟಾಗಿ "ಎಲಾ ಎಲಾ, ಏನೆಂದೆ? ತಂದೆಯು ಮಗನನ್ನೂ ಕೊಟ್ಟುಬಿಡುವದೆ?" ಎಂದನು. ಹುಡುಗನು ಅದೇ ಪ್ರಶ್ನೆಯನ್ನು ಎರಡನೆಯ ಸಲವೂ ಮೂರನೆಯ ಸಲವೂ ಕೇಳಿದನು. ಕುಪಿತನಾದ ತಂದೆಯು. "ಹಾಗಾದರೆ ನಿನ್ನನ್ನು ಮೃತ್ಯುವಿಗೆ ಕೊಟ್ಟಿರುತ್ತೇನೆ" (1-1-3) ಎಂದನು.

ಈ ಕಥೆಯಲ್ಲಿ ಮುಂದೇನಿದೆಯೆಂದರೆ ಆ ಹುಡುಗನು ಸಾವಿನ ದೇವತೆಯಾದ ಯಮನಲ್ಲಿಗೆ ಹೋದನು. ಯಮನೆಂದರೆ ಮೊಟ್ಟಮೊದಲು ಸತ್ತ* ಮನುಷ್ಯನು; ಅವನು ಪರಲೋಕಕ್ಕೆ ಹೋಗಿ ಪಿತೃಗಳೆಲ್ಲರ ಒಡೆಯನಾದನು. ಪುಣ್ಯವಂತರೆಲ್ಲರೂ ಸತ್ತಮೇಲೆ ಅವನ ಸಾಲೋಕ್ಯದಲ್ಲಿ ಚಿರಕಾಲ ಬಾಳುತ್ತಾರೆ. ಯಮ ಎಂಬ ತನ್ನ ಹೆಸರಿಗೆ ತಕ್ಕಂತೆಯೇ ಅವನು ಬಹಳ ಪರಿಶುದ್ಧನೂ ಪವಿತ್ರನೂ ಶುದ್ಧಾಚಾರಿಯೂ ಪುಣ್ಯವಂತನೂ ಆಗಿರುತ್ತಾನೆ. ಸರಿ, ಈ ಹುಡುಗನು ಯಮ ಲೋಕಕ್ಕೆ ಹೋದನು. ಆದರೆ ದೇವತೆಗಳೂ ಕೂಡ ಕೆಲವು ವೇಳೆ ತಮ್ಮ ಮನೆಗಳಲ್ಲಿರುವದಿಲ್ಲ, ಆದ್ದರಿಂದ ಈ ಹುಡುಗನು ಅಲ್ಲಿ ಮೂರು ದಿನಗಳು ಕಾದುಕೊಂಡಿರಬೇಕಾಯಿತು. ಮೂರನೆಯ ದಿನವು ಮುಗಿಯುತ್ತಲೂ ಯಮನು ಹಿಂತಿರುಗಿ ಬಂದನು.

ಯಮನು "ಎಲೈ ಬ್ರಾಹ್ಮಣನೆ, ನೀನು ಇಲ್ಲಿ ಮೂರುದಿನಗಳಿಂದ ಊಟವಿಲ್ಲದೆ ಇದ್ದುಕೊಂಡಿದ್ದೀಯಲ್ಲ! ನೀನು ಸತ್ಕಾರಕ್ಕೆ ಯೋಗ್ಯನಾದ ಅತಿಥಿಯಾಗಿರುತ್ತೀಯ. ಬ್ರಾಹ್ಮಣನೆ, ನಿನಗೆ ನಮಸ್ಕಾರ, ನಿನಗೆ ಸ್ವಸ್ತಿಯಾಗಲಿ! ನಾನು ಮನೆಯಲ್ಲಿಲ್ಲದ್ದಕ್ಕೆ ನನಗೆ ತುಂಬ ವ್ಯಸನವಾಗಿರುತ್ತದೆ. ಇದಕ್ಕಾಗಿ ನಿನಗೆ ಯಾವದಾದರೊಂದು ಅನುಕೂಲವನ್ನು ಮಾಡಿಕೊಡಬೇಕೆಂದಿರುವೆನು. ದಿನಕ್ಕೆ ಒಂದರಂತೆ ಮೂರು ವರಗಳನ್ನು ಕೇಳಿಕೊ" (1-1-9) ಎಂದನು.

ಹುಡುಗನು "ನಮ್ಮ ತಂದೆಯವರು ನನ್ನ ವಿಷಯದಲ್ಲಿ ಸಿಟ್ಟಾಗದೆ ಸೌಮ್ಯವಾಗಿ ಪ್ರಸನ್ನತೆಯಿಂದ ನನ್ನನ್ನು ಬರಮಾಡಿಕೊಳ್ಳಬೇಕು. ನೀನು ನನ್ನನ್ನು ಹಿಂದಕ್ಕೆ ಕಳುಹಿಸಿದಾಗ ನನ್ನನ್ನು ಗುರುತಿಸಬೇಕು ಹಾಗೆ ಅನುಗ್ರಹಿಸು. ಇದೇ ನನಗೆ ಬೇಕಾದ ಮೊದನೆಯ ವರವು" (1-1-10) ಎಂದನು. ಯಮನು ಇದನ್ನು ಪೂರ್ಣವಾಗಿ ಒಪ್ಪಿಕೊಂಡು ಆಗಲೆಂದನು.

* ಈ ವಿಷಯದಲ್ಲಿ ಪ್ರಮಾಣವೇನೋ ತಿಳಿಯದು.

ಎರಡನೆಯ ವರವು ಸ್ವರ್ಗವನ್ನು ಕೊಡುವ ಒಂದಾನೊಂದು ಯಜ್ಞವಿಷಯವಾಗಿತ್ತು.# ವೇದದ ಸಂಹಿತಾಭಾಗದಲ್ಲಿ ಕಂಡುಬರುವ ವಿಚಾರವೆಲ್ಲ ಕೇವಲ ಸ್ವರ್ಗವಿಷಯವೇ ಎಂಬುದು ನಮಗೆ ತಿಳಿದೇ ಇದೆ; ಆ ಸ್ವರ್ಗದಲ್ಲಿ ತೇಜೋಮಯವಾದ ಶರೀರಗಳುಂಟಾಗುವದೆಂದೂ ಪಿತೃಗಳು ಸಾಲೋಕ್ಯದ ವಾಸವುಂಟಾಗುದೆಂದೂ ಅಲ್ಲಿ ಹೇಳಿರುತ್ತದೆ. ಕ್ರಮಕ್ರಮವಾಗಿ ಮತ್ತೆ ಬೇರೆ ಭಾವನೆಗಳೂ* ಬಂದವು. ಆದರೆ ಅವು ಯಾವವೂ ಅಷ್ಟು ತೃಪ್ತಿಕರವಾಗಿರಲಿಲ್ಲ; ಆಗಲೂ ಇನ್ನೂ ಇದಕ್ಕಿಂತ ಮೇಲಾದದ್ದು ಏನಾದರೂ ಬೇಕೆಂದೇ ಎನಿಸುತ್ತಿತ್ತು. ಪರಲೋಕದಲ್ಲಿರುವದೆಂಬುದು ಈ ಲೋಕದ ಜೀವನಕ್ಕಿಂತ ಹೆಚ್ಚಿನದೇನೂ ಅಲ್ಲ, ತೀರ ಹೆಚ್ಚೆಂದರೆ ಒಳ್ಳೆಯ ಆರೋಗ್ಯವಂತನಾಗಿ ಐಶ್ವರ್ಯವಂತನಾಗಿರುವವನು ಬೇಕಾದಷ್ಟು ಇಂದ್ರಿಯಭೋಗಗಳಿಂದಲೂ ಅರೋಗ ದೃಢಕಾಯದಿಂದಲೂ ಕೂಡಿ ಬಾಳುವ ಜೀವನವಾಗಿರಬಹುದು - ಎನಿಸುತ್ತಿತ್ತು. ಅದೂ ಈ ಭೌತಿಕಲೋಕದಂಥ ಲೋಕವೇ, ಆದರೆ ಇದಕ್ಕಿಂತ ಸ್ವಲ್ಪ ಸೂಕ್ಷ್ಮವಾಗಿರಬಹುದು, ಅಷ್ಟೇ; ಬಾಹ್ಯ ಭೌತಿಕ ಪ್ರಪಂಚವು ನಮ್ಮ ಸಮಸ್ಯೆಯನ್ನು ಬಿಡಿಸಲಾರದೆಂಬ ಅಡಚಣೆಯನ್ನು ಹಿಂದೆಯೇ ತಿಳಿಸಿರುತ್ತದೆ. ಆದ್ದರಿಂದ ಯಾವ ಸ್ವರ್ಗವೂ ಈ ಸಮಸ್ಯೆಯನ್ನು ಬಿಡಿಸಲಾರದು. ಈ ಪ್ರಪಂಚವು ಸಮಸ್ಯೆಯನ್ನು ಪರಿಹರಿಸಲಾರದೆ ಇದನ್ನು ಎಷ್ಟು ಮಡಿ ಹೆಚ್ಚು ಮಾಡಿಕೊಂಡರೂ ಇದು ಆ ಕಷ್ಟವನ್ನು ಪರಿಹರಿಸಲರಿಯದೆಂಬುದು ಸ್ಪಷ್ಟವಾಗಿದೆ. ನಿಜವಾಗಿ ಕಂಡುಬರುವ ದೃಶ್ಯಗಳ ಬಹುಭಾಗವು ಭೌತಿಕವಸ್ತುವಲ್ಲವೇ ಅಲ್ಲ. ಉದಾಹರಣೆಗೆ ನೋಡಿ, ಹೊರಗೆ ಕಾಣಬರುವ ಭೌತಿಕ ದೃಶ್ಯಗಳಿಗೆ ಹೋಲಿಸಿದರೆ ಪ್ರತಿಯೊಂದು ಕ್ಷಣವೂ ನಮ್ಮ ಜೀವನದಲ್ಲಿ ವಿಚಾರ ವೇದನೆಗಳು ಎಷ್ಟು ಪ್ರಧಾನ ಭಾಗವನ್ನು ವಹಿಸಿರುತ್ತವೆ, ನೋಡಿ! ಈ ಅಧ್ಯಾತ್ಮ ಪ್ರಪಂಚವು ಎಷ್ಟು ವಿಶಾಲವಾಗಿದೆ, ಅದರಲ್ಲಿರುವ ಚಟುವಟಿಕೆಯು ಎಷ್ಟು ಅದ್ಭುತವಾಗಿರುತ್ತದೆ. ಸ್ವರ್ಗವೇ ಸರ್ವಸ್ವವೆಂಬ ಪರಿಹಾರ ಕ್ರಮದಲ್ಲಿ ಈ ದೋಷವಿದೆ; ಅದು ದೃಶ್ಯರಾಶಿಯೆಲ್ಲ ಸ್ಪರ್ಶ, ರಸ, ರೂಪ - ಮುಂತಾದವುಗಳೇ ಎಂದು ಪಟ್ಟುಹಿಡಿಯುತ್ತಿದೆ. ಆದ್ದರಿಂದ ಈ ಸ್ವರ್ಗ ಕಲ್ಪನೆಯು ಎಲ್ಲರಿಗೂ ಸಮಾಧಾನವನ್ನು ಕೊಡಲಿಲ್ಲ. ಆದರೂ ನಚಿಕೇತನು ಜನರನ್ನು ಸ್ವರ್ಗಕ್ಕೊಯ್ಯುವ ಯಾವದಾದರೊಂದು ಯಜ್ಞವನ್ನು ತಿಳಿಸಿಕೊಡಬೇಕೆಂದೇ ತನ್ನ ಎರಡನೆಯ ವರಕ್ಕಾಗಿ ಕೇಳಿಕೊಂಡಿರುತ್ತಾನೆ. ಈ ಯಜ್ಞಗಳಿಂದ ದೇವತೆಗಳು

# ಇದು ನಿಜವಾಗಿ ವೈಶ್ವಾನರ ವಿದ್ಯೆಯು (ವಿರಾಡುಪಾಸನೆಯು); ಈ ಉಪನಿಷತ್ತಿನ ಶಾಂಕರಭಾಷ್ಯವನ್ನು ನೋಡಿರಿ.

* ಇವು ಯಾವವೆಂಬುದು ಸ್ಪಷ್ಟವಾಗುವಂತಿಲ್ಲ.

ತೃಪ್ತರಾಗಿ ಮಾನವರನ್ನು ಪರಲೋಕಕ್ಕೆ ಒಯ್ಯುವರೆಂಬ ಭಾವನೆಯೊಂದು ವೇದಗಳಲ್ಲಿತ್ತು.

ಯಾವ ಧರ್ಮವನ್ನೇ ನೋಡಿರಿ, ಯಾವದು ಪುರಾತನವಾದದ್ದೋ ಅದನ್ನು ಪವಿತ್ರವಾದದ್ದೆಂದು ಭಾವಿಸುವ ವಾಡಿಕೆಯಿದೆ ಎಂದು ಕಂಡುಬರುತ್ತದೆ. ಕಂಡುಬರುತ್ತದೆ. ಉದಾಹರಣೆಗೆ, ಇಂಡಿಯಾದಲ್ಲಿ ನಮ್ಮ ಪೂರ್ವಜರು ಭೂರ್ಜಪತ್ರದ ಮೇಲೆ ಬರೆಯುತ್ತಿದ್ದರು; ಕಾಲಕ್ರಮದಲ್ಲಿ ಅವರಿಗೆ ಕಾಗದವನ್ನು ಮಾಡುವ ವಿಧಾನವು ತಿಳಿಯಿತು. ಹೀಗಿದ್ದರೂ ಭುಜಪತ್ರೆಯನ್ನು ಈಗಲೂ ಜನರು ಪರಮಪವಿತ್ರವೆಂದು ಭಾವಿಸುತ್ತಾರೆ. ಹಿಂದಿನ ಕಾಲದಲ್ಲಿ ಜನರು ಅಡಿಗೆಗೆ ಉಪಯೋಗಿಸುತ್ತಿದ್ದ ಪಾತ್ರೆಗಳು ಉತ್ತಮ ರೂಪಾಂತರವನ್ನು ಹೊಂದಿದ ಮೇಲೆ ಹಳೆಯ ಮಾದರಿಯ ಪಾತ್ರೆಗಳು ಪರಿಶುದ್ಧವೆನಿಸಿಕೊಂಡವು. ಈ ಭಾವನೆಯನ್ನು ಇಂಡಿಯದಲ್ಲಿಟ್ಟುಕೊಂಡಿರುವಷ್ಟು ಮತ್ತೆ ಯಾವ ದೇಶದಲ್ಲಿಯೂ ಇಟ್ಟುಕೊಂಡಿರುವದಿಲ್ಲ. ಎರಡು ಕಟ್ಟಿಗೆಗಳನ್ನು ತಿಕ್ಕಿ ಬೆಂಕಿಯನ್ನು ಮಾಡುವದೇ ಮುಂತಾದ ಒಂಬತ್ತು ಹತ್ತು ಸಾವಿರ ವರ್ಷಗಳ ಹಿಂದಿನ ಕಾಲದ ಪದ್ಧತಿಗಳನ್ನು ಅವರು ಇನ್ನೂ ಈಗಲೂ ಅನುಸರಿಸುತ್ತಿದ್ದಾರೆ. ಯಜ್ಞ ಕಾಲದಲ್ಲಿ ಮತ್ತೆ ಯಾವ ಪ್ರಕಾರವೂ ಉಪಯೋಗವಾಗುವದಿಲ್ಲ. ಏಷಿಯದ ಆರ್ಯರ ಮಿಕ್ಕ ಶಾಖೆಗಳಲ್ಲಿಯೂ ಇದೇ ವಾಡಿಕೆಯಿದೆ. ಅವರ ವಂಶಜರಾದ ಈಗಿನವರು ಈಗಲೂ ಮಿಂಚಿನಿಂದ ಬೆಂಕಿಯನ್ನು ಸಂಪಾದಿಸುವ ಕ್ರಮದಲ್ಲಿ ಹೆಚ್ಚು ಶ್ರದ್ಧಾದರವುಳ್ಳವರಾಗಿರುತ್ತಾರೆ; ಹಿಂದೆ ಅವರು ಈ ರೀತಿಯಿಂದ ಬೆಂಕಿಯನ್ನು ಹತ್ತಿಸಿಕೊಳ್ಳುತ್ತಿದ್ದರೆಂಬುದಕ್ಕೆ ಇದು ನಿದರ್ಶಕವಾಗಿರುತ್ತದೆ. ಅವರಿಗೆ ಬೇರೆ ರೀತಿಗಳು ತಿಳಿದ ಮೇಲೂ ಹಳೆಯ ಪದ್ಧತಿಯನ್ನೇ ಅವರು ನಡೆಸಿಕೊಂಡು ಬಂದರು; ಆಗ ಅವು ಪವಿತ್ರವಾದವುಗಳೆನಿಸಿಕೊಂಡವು. ಹೀಬ್ರೂ (ಯಹೂದಿ)ಗಳಲ್ಲಿಯೂ ಹೀಗೆಯೇ. ಅವರು ಮೊದಲು ಕರಿಯ ತೊಗಲಿನ ಮೇಲೆ ಬರೆಯುತ್ತಿದ್ದರು. ಈಗ ಕಾಗದದ ಮೇಲೆ ಬರೆಯುತ್ತಿದ್ದಾರೆ. ಆದರೆ ಚರ್ಮವು ಈಗ ಅವರಿಗೆ ಪರಮಪವಿತ್ರವಾಗಿಬಿಟ್ಟಿದೆ. ಎಲ್ಲಾ ಜನಾಂಗಗಳಲ್ಲಿಯೂ ಹೀಗೆಯೇ ಇದೆ. ಈಗ ಯಾವ ಯಾವ ಪದ್ಧತಿಗಳು ಪವಿತ್ರವೆನಿಸಿರುತ್ತವೆಯೋ ಅವೆಲ್ಲ ಕೇವಲ ಹಳೆಯ ಪದ್ಧತಿಗಳಾಗಿದ್ದವು, ಅಷ್ಟೆ. ವೈದಿಕ ಯಜ್ಞಗಳೂ ಈ ಸ್ವಭಾವದವೇ ಆಗಿದ್ದವು.*

* ವೈದಿಕ ಯಜ್ಞಗಳ ಕಾಲದಲ್ಲಿ ಈಶ್ವರನ ಆರಾಧನಾ ಕ್ರಮವು ಅವುಗಳ ಮೂಲಕವೇ ನಡೆಯುತ್ತಿತ್ತೆಂದೂ ಆಮೇಲೆ ಕ್ರಮಕ್ರಮವಾಗಿ ಧ್ಯಾನವಿಚಾರಾದಿಗಳು ಏರ್ಪಟ್ಟವೆಂದೂ ಭಾವಿಸುವದು ಐತಿಹಾಸಿಕ ದೃಷ್ಟಿಯು. ಆದರೆ ಅತ್ಯಂತ ಪೂರ್ವಕಾಲವಾದ ಕೃತಯುಗದಲ್ಲಿ ಧ್ಯಾನ ತಪಸ್ಸುಗಳಿದ್ದವೆಂದೂ ತ್ರೇತಾಯುಗದಲ್ಲಿ ಯಜ್ಞಗಳೂ ದ್ವಾಪರದಲ್ಲಿ ಬಾಹ್ಯಾರ್ಚನೆಯೂ ಕಲಿಯುಗದಲ್ಲಿ ನಾಮಸ್ಮರಣೆಯೇ ಮುಂತಾದವೂ ಜನರ ಅಧಿಕಾರ ಸಂಪತ್ತು ಕಡಿಮೆಯಾದಂತೆ ಏರ್ಪಟ್ಟವೆಂದು ನಮ್ಮ ಪುರಾಣಗಳಲ್ಲಿ ಹೇಳಿರುತ್ತದೆ.

ಕಾಲಕ್ರಮದಲ್ಲಿ ಅವರಿಗೆ ಬೇರೆ ಬಗೆಯ ಜೀವನಕ್ರಮವು ಕಂಡು ಬಂದು ಅವರ ಭಾವನೆಗಳು ಎಷ್ಟೋ ಬಗೆಯಲ್ಲಿ ಮಾರ್ಪಟ್ಟವು. ಆದರೂ ಈ ಹಳೆಯ ಕ್ರಮಗಳು ಹಾಗೆಯೇ ನಿಂತುಕೊಂಡವು; ಆಗಿಂದಾಗ್ಗೆ ಅವನ್ನು ಆಚರಿಸುತ್ತಾ ಬಂದದ್ದರಿಂದ ಅವುಗಳಿಗೆ ಒಂದು ಪವಿತ್ರವಾದ ಅರ್ಥವು ಬಂದು ಬಿಟ್ಟಿತು. ಆಮೇಲೆ ಕೆಲವು ಜನರು ಈ ಯಜ್ಞವನ್ನು ನಡೆಯಿಸುವದನ್ನೇ ತಮ್ಮ ವೃತ್ತಿಯಾಗಿ ಮಾಡಿಕೊಂಡರು. ಇವರೇ ಬ್ರಾಹ್ಮಣರು. ಅವರು ಯಜ್ಞಜಿಜ್ಞಾಸುಗಳಾದ್ದರಿಂದ ಯಜ್ಞಗಳೇ ಅವರಿಗೆ ಸರ್ವಸ್ವವಾಗಿಬಿಟ್ಟವು. ಯಜ್ಞಗಂಧವನ್ನು ಆಘ್ರಾಣಿಸಿ ಆನಂದಪಡುವದಕ್ಕೆ ದೇವತೆಗಳೂ ಬರುವರೆಂದೂ ಯಜ್ಞಗಳಿಂದ ಈ ಲೋಕದಲ್ಲಿ ಏನುಬೇಕಾದರೂ ಸಂಪಾದಿಸಬಹುದೆಂದೂ ಭಾವನೆಯುಂಟಾಯಿತು.# ಇಂಥಿಂಥ ಹೋಮಗಳನ್ನು ಮಾಡಿ, ಇಂಥಿಂಥ ಮಂತ್ರಗಳನ್ನುಚ್ಚರಿಸಿದರೆ, ಇಂಥಿಂಥ ವೇದಿಕೆಗಳನ್ನು ಮಾಡಿದರೆ, ದೇವತೆಗಳು ಏನುಬೇಕಾದರೂ ಕೊಡುವರೆಂಬ ಭಾವನೆಯೂ ರೂಪುಗೊಂಡಿತು.

ಆದ್ದರಿಂದ ನಚಿಕೇತನು ಯಾವ ಯಜ್ಞವನ್ನು ಮಾಡಿದರೆ ಮನುಷ್ಯನಿಗೆ ಸ್ವರ್ಗಪ್ರಾಪ್ತಿಯಾದೀತೆಂದು ಕೇಳಿರುತ್ತಾನೆ. ಈ ಎರಡನೆಯ ವರವನ್ನೂ ಯಮನು ಕೂಡಲೆ ಅನುಗ್ರಹಿಸಿಕೊಟ್ಟನು, ಈ ಯಜ್ಞಕ್ಕೆ* ಇನ್ನು ಮೇಲೆ ನಚಿಕೇತನ ಹೆಸರೇ ಬರುವದೆಂದೂ ವರವನ್ನು ಕೊಟ್ಟನು.

ಈಗ ಮೂರನೆಯ ವರದ ವಿಚಾರವು ಬಂತು. ಇಲ್ಲಿಯೇ ನಿಜವಾದ ಉಪನಿಷತ್ತು ಪ್ರಾರಂಭವಾಗಿರುವದು. ಆ ಬಾಲಕನು "ಇಗೋ, ಇದೊಂದುಕಷ್ಟವಾದ ವಿಚಾರವು; ಒಬ್ಬ ಮನುಷ್ಯನು ಸತ್ತರೆ ಅವನು ಇರುತ್ತಾನೆಂದು ಕೆಲವರು ಹೇಳುತ್ತಿರುವರು, ಮತ್ತೆ ಕೆಲವರು ಅವನು ಇರುವದಿಲ್ಲವೆಂದು ಹೇಳುತ್ತಾರೆ. ನಿನ್ನ ಉಪದೇಶದಿಂದ ನಾನು ಇದನ್ನರಿತುಕೊಳ್ಳಬೇಕೆಂದು ಅಭಿಲಾಷೆಯುಳ್ಳವನಾಗಿದ್ದೇನೆ" (1-1-20) ಎಂದನು. ಆದರೆ ಯಮನಿಗೆ ಗಾಬರಿಯಾಯಿತು. ಮಿಕ್ಕೆರಡು ವರಗಳನ್ನು ಅವನು ಬಹಳ ಸಂತೋಷದಿಂದ

# ಕೇವಲ ಕರ್ಮವನ್ನು ಪ್ರಧಾನವೆಂದೆಣಿಸಿದ ಮೀಮಾಂಸಕರು ಕೆಲವರು ದೇವತೆಗಳೆಂಬವರನ್ನು ಕೂಡ ತಿರಸ್ಕರಿಸಿ ದೇವತೆಗಳಿಗೆ ರೂಪಾದಿಗಳಿಲ್ಲವೆಂದೂ ಕರ್ಮವೇ ಫಲವನ್ನು ಕೊಡುವದೆಂದೂ ಅಭಿಪ್ರಾಯಪಟ್ಟಿರುತ್ತಾರೆ.

*ಈ ಯಜ್ಞದಲ್ಲಿ ಉಪಯೋಗಿಸುವ ಅಗ್ನಿಗೆನಾಚಿಕೇತಾಗ್ನಿ ಎದು ಹೆಸರಾಗುವದೆಂದೂ ಅನುಗ್ರಹಿಸಿದನು. ಹಿಂದೆ 21 ಪುಟದ* ಟಿಪ್ಪಣಿಯಲ್ಲಿ ಹೇಳಿದಂತೆ ಇದು ಬರಿಯಯಜ್ಞವಲ್ಲ, ಕರ್ಮಸಹಿತವಾದ ವಿರಾಡುಪಾಸನೆ. ಇಲ್ಲಿಗೆ ಅಪರವಿದ್ಯಾವಿಚಾರವು ಮುಗಿಯಿತು. ಎಂಬುದು ಶ್ರೀ ಶಾಂಕರ ಭಾಷ್ಯದಂತೆ ಅಭಿಪ್ರಾಯ.

ಕೊಟ್ಟಿದ್ದನು. ಈಗ ಅವನು "ಹಿಂದಕ್ಕೆ ದೇವತೆಗಳಿಗೂ ಈ ವಿಷಯದಲ್ಲಿ ಸಂಶಯವುಂಟಾಗಿತ್ತು. ಈ ಅಣುವಾದ ಧರ್ಮವು@ ಸುಲಭವಾಗಿ ತಿಳಿಯತಕ್ಕದ್ದಲ್ಲ. ಎಲೈ ನಚಿಕೇತನೆ, ಈ ವಿಷಯದಲ್ಲಿ ನನ್ನನ್ನು ಒತ್ತಿ ಕೇಳಬೇಡ, ನನ್ನನ್ನು ನಿರ್ಬಂಧದಿಂದ ಬಿಡುಗಡೆಮಾಡು" (21) ಎಂದನು. ಆದರೆ ಹುಡುಗನು ಸ್ಥಿರಸಂಕಲ್ಪನಾಗಿದ್ದನು. "ಎಲೈ ಮೃತ್ಯುವೆ, ನೀನು ಹೇಳುವದು ನಿಜ; ದೇವತೆಗಳಿಗೂ ಈ ವಿಷಯದಲ್ಲಿ ಸಂದೇಹವಾಗಿತ್ತು. ಇದನ್ನು ತಿಳಿಯುವದೂ ಸುಲಭವಲ್ಲ, ಆದರೆ ನಿನ್ನಂಥ ವಕ್ತಾರನು ದೊರೆಯುವದು ದುರ್ಲಭವು, ಈ ವರಕ್ಕೆ ಸಮನಾದ ವರವೂ ಎಲ್ಲ" (22) ಎಂದನು.

ಮೃತ್ಯುವು "ನೂರು ವರ್ಷ ಬಾಳುವ ಮಕ್ಕಳನ್ನು ಕೇಳಿಕೊ, ಮುಮ್ಮಕ್ಕಳನ್ನು ಕೇಳಿಕೊ; ಬೇಕಾದಷ್ಟು ದನಕರುಗಳು, ಆನೆಗಳು, ಚಿನ್ನ, ಕುದುರೆಗಳು - ಇವನ್ನು ಕೇಳಿಕೊ. ಈ ಭೂಮಿಯಲ್ಲಿ ಚಕ್ರಾಧಿಪತ್ಯವಿರಬೇಕೆಂದು ಬೇಡಿಕೊ, ಎಷ್ಟು ವರ್ಷಗಳಿರಬೇಕೆನ್ನುವೆಯೊ ಅಷ್ಟು ವರ್ಷದ ಆಯುಸ್ಸುಳ್ಳವನಾಗಿರು. ಸಂಪತ್ತು, ದೀರ್ಘಾಯುಸ್ಸು - ಅಥವಾ ಇದಕ್ಕೆ ಸಮನಾದ ಮತ್ತೆ ಯಾವ ವರವನ್ನಾದರೂ ಬೇಡು. ಅಥವಾ ಎಲೈ ನಚಿಕೇತನೆ, ಪೃಥ್ವಿಯಲ್ಲೆಲ್ಲ ಅಧಿರಾಜನಾಗಿರು, ನಿನಗೆ ಯಾವ ಕಾಮಿಗಳ ಉಪಭೋಗವು ಬೇಕೆಂದರೂ ಮಾಡಿಕೊಡುವೆನು. ಈ ಲೋಕದಲ್ಲಿ ಪಡೆಯುವದಕ್ಕೆ ಕಷ್ಟವಾಗಿರುವ ಬಯಕೆಗಳನ್ನೂ ಪ್ರಾರ್ಥಿಸಿಕೊ. ಇಗೋ, ಈ ಅಪ್ಸರಸ್ತ್ರೀಯರು, ರಥ, ಸಂಗೀತ - ಮುಂತಾದವುಗಳೊಡನೆ ಕೂಡಿರುವರು, ಮನುಷ್ಯನಿಗೆ ಸುಲಭವಾಗಿ ಸಿಕ್ಕತಕ್ಕವರಲ್ಲ; ಇವರೂ ನಿನ್ನವರಾಗಿರುವರು, ಅವರಿಂದ ಪರಿಚರ್ಯೆಯನ್ನು ಹೊಂದು. ಮರಣಾನಂತರವೇನಾಗುವದೆಂದು ಮಾತ್ರ ನನ್ನನ್ನು ಕೇಳಬೇಡ" (23 ರಿಂದ 25) ಎಂದನು.

ಆಗ ನಚಿಕೇತನು "ಎಲೈ ಮೃತ್ಯುವೆ, ಇವೆಲ್ಲ ಒಂದು ದಿನದ ಬಾಳಾಗಿರುತ್ತವೆ; ಅವು ಇಂದ್ರಿಯಗಳ ತೇಜಸ್ಸನ್ನು ಕಡಿಮೆಮಾಡುವವು. ಅತ್ಯಂತ ದೀರ್ಘ ಜೀವಿತವೂ ಅಲ್ಪವೇ ಆಗಿರುತ್ತದೆ. ಈ ಕುದುರೆಗಳು ರಥಗಳು, ನೃತ್ಯಗಳು ಗೀತಗಳು - ಎಲ್ಲವೂ ನಿನ್ನಲ್ಲಿಯೇ ಇರಲಿ. ಮನುಷ್ಯನಿಗೆ ವಿತ್ತದಿಂದ ಎಂದಿಗೂ

---

@ ಇಲ್ಲಿ ಧರ್ಮವೆಂದರೆ ಪರಮಾತ್ಮನೆಂದು ಶ್ರೀ ಶಂಕರಚಾರ್ಯರು ಅರ್ಥಮಾಡಿರುತ್ತಾರೆ. ಸತ್ತಮೇಲೆ ಆತ್ಮನು ಇರುತ್ತಾನೋ ಇಲ್ಲವೋ ಎಂಬ ವಿಚಾರವು ಮುಖ್ಯವಲ್ಲವೆಂತಲೂ ಆತ್ಮ ಸ್ವರೂಪವನ್ನು ಕುರಿತ ಪ್ರಶ್ನೆಗೇ ಇಲ್ಲಿ ಪ್ರಾಧಾನ್ಯವನ್ನು ಕೊಟ್ಟಿದೆಯೆಂತಲೂ ಮುಂದೆ ತಾನೇ ಸ್ಪಷ್ಟವಾಗುವದು.

ತೃಪ್ತಿಯಾಗಲಾರದು. ನಿನ್ನನ್ನು ಕಂಡಮೇಲೆಯೂ ಸಂಪತ್ತನ್ನಿಟ್ಟುಕೊಂಡಿರಲಾದೀತೆ? ನಿನ್ನ ಸಂಕಲ್ಪವಿದ್ದಷ್ಟು ಕಾಲವು ಮಾತ್ರ ನಾವು ಬದುಕಿರುವೆವು.* ಆದ್ದರಿಂದ ನಾನು ಈಗ ಕೇಳಿಕೊಂಡಿರುವ ವರವೇ ನನಗೆ ಬೇಕು" (26 ರಿಂದ 27) ಎಂದನು.

ಈ ಉತ್ತರವನ್ನು ಕೇಳಿ ಯಮನಿಗೆ ಸಂತೋಷವಾಯಿತು. ಅವನು "ಶ್ರೇಯಸ್ಸೆಂಬುದೇ ಬೇರೆ, ಪ್ರೇಯಸ್ಸೇ ಬೇರೆ; ಈ ಎರಡಕ್ಕೆ ಬೇರೆ ಬೇರೆ ಪ್ರಯೋಜನಗಳಾಗುವುವು. ಅವು ಮನುಷ್ಯರನ್ನು ಬೇರೆಬೇರೆಯೇ ಬಗೆಯಲ್ಲಿ ತೊಡಗಿಸುತ್ತವೆ. ಯಾವನಿಗೆ ಶ್ರೇಯಸ್ಸೇ ಬೇಕಾಗುವದೋ ಅವನು ಪರಿಶುದ್ಧನಾಗುವನು; ಯಾವನಿಗೆ ಭೋಗವೇ ಬೇಕಾಗುವದೋ ಅವನು ನಿಜವಾದ ಪುರುಷಾರ್ಥವನ್ನು ಕೈಬಿಟ್ಟವನಾಗುತ್ತಾನೆ. ಶ್ರೇಯಸ್ಸೂ ಪ್ರೇಯಸ್ಸೂ ಮನುಷ್ಯನೆದುರಿಗೆ ಬಂದು ನಿಲ್ಲುವವು; ವಿವೇಕಿಯಾದವನು ಎರಡನ್ನು ಪರೀಕ್ಷೆ ಮಾಡಿ ಒಂದನ್ನು ಮತ್ತೊಂದರಿಂದ ವಿಗಂಡಿಸಿಕೊಳ್ಳುತ್ತಾನೆ. ಅವನು ಶ್ರೇಯಸ್ಸೇ ಪ್ರೇಯಸ್ಸಿಗಿಂತ ಹೆಚ್ಚೆಂದು ತಿಳಿದು ಅದನ್ನೇ ಆರಿಸಿಕೊಳ್ಳುತ್ತಾನೆ. ಆದರೆ ಅವಿವೇಕಿಯಾದವನು ಪ್ರೇಯಸ್ಸನ್ನೇ ತನ್ನ ಶರೀರದ ಭೋಗಕ್ಕಾಗಿ ಆರಿಸಿಕೊಳ್ಳುತ್ತಾನೆ. ಎಲೈ ನಚಿಕೇತನೆ, ನೋಡುವದಕ್ಕೆ ಮಾತ್ರ ಬೇಕಾದವುಗಳೆಂದು ತೋರುವ ಪದಾರ್ಥಗಳನ್ನು ಚೆನ್ನಾಗಿ ವಿಮರ್ಶೆಮಾಡಿ ನೀನು ವಿವೇಕದಿಂದ ಅವುಗಳನ್ನು ಪರಿತ್ಯಜಿಸಿರುವೆ.# (1-2-1 ರಿಂದ 3) ಎಂದು ಅವನನ್ನು ಹೊಗಳಿದನು. ಆಮೇಲೆ ಮೃತ್ಯುವು ನಚಿಕೇತನಿಗೆ ತತ್ತ್ವೋಪದೇಶವನ್ನು ಮಾಡುವದಕ್ಕೆ ಹೊರಟನು.

ಈಗ ವೈರಾಗ್ಯದ ಮತ್ತು ವೈದಿಕನೀತಿಯ ಉತ್ಕೃಷ್ಟವಾದ ಭಾವನೆಯೊಂದು ಬಂದಂತಾಯಿತು, ಯಾವನೇ ಆಗಲಿ, ಭೋಗದ ಬಯಕೆಗಳನ್ನು ಗೆದ್ದುಕೊಂಡ ಹೊರತು ಅವನಲ್ಲಿರುವ ತತ್ತ್ವವು ಬೆಳಗಲಾರದೆಂಬುದೇ ಆ ಭಾವನೆಯು. ಈ ಇಂದ್ರಿಯಭೋಗದ ಬಯಲಾಸೆಗಳು ಮೊರೆಯಿಟ್ಟು ನಮ್ಮನ್ನು ಹೊರಕ್ಕೆ ಸೆಳೆದೊಯ್ಯುತ್ತಾ ಹೊರಗಿರುವ ಪ್ರತಿಯೊಂದಕ್ಕೂ ನಮ್ಮನ್ನು ಗುಲಾಮರನ್ನಾಗಿ

* ನಿನ್ನ ಕಂಡ ಮಾತ್ರದಿಂದಲೇ ಎಷ್ಟು ವಿತ್ತವಾದರೂ ದೊರೆಯುವದು; ನಿನ್ನ ಶಾಸನಕ್ಕೆ ತಕ್ಕಷ್ಟುಕಾಲ ನಾವು ಬದುಕಿಯೇ ಇರುವೆವು" ಎಂದು ಈ ಎರಡು ವಾಕ್ಯಗಳಿಗೆ ಭಾಷ್ಯಾನುಸಾರಿಯಾದ ಅರ್ಥವು.

# ಈ ಉಪನ್ಯಾಸದಲ್ಲಿ ಕೊಟ್ಟಿರುವ ಸಂಖ್ಯೆಗಳು ಉಪನಿಷತ್ತಿನ ಅಧ್ಯಾಯ, ವಲ್ಲಿ, ಮಂತ್ರ - ಇವುಗಳನ್ನು ಸೂಚಿಸುತ್ತವೆ. ಅಕ್ಷರಾರ್ಥವು ಬೇಕಾದರೆ ಆಯಾ ಮಂತ್ರದ ಭಾಷ್ಯವನ್ನು ನೋಡಬೇಕು.

ಮಾಡಿಟ್ಟಿರುವವರೆಗೂ – ಒಂದಿಷ್ಟು ಬಣ್ಣ, ಒಂದಿಷ್ಟು ಸವಿ ಒಂದಿಷ್ಟು ಸೋಕು, ಇವುಗಳಿಗೆ ನಮ್ಮನ್ನು ಅಡಿಯಾಳಾಗಿ ಮಾಡುತ್ತಿರುವವರೆಗೂ – ನಾವು ಎಷ್ಟೇ ಜಂಭಕೊಚ್ಚಿಕೊಳ್ಳುತ್ತಿರಲಿ, ನಮ್ಮ ಹೃದಯದಲ್ಲಿ ಪರಮಾರ್ಥವು ಅಭಿವ್ಯಕ್ತವಾಗುವ ಬಗೆ ಹೇಗೆ?

ಯಮನು ಇಂತೆಂದನು; 'ವಿತ್ತಮೋಹದಿಂದ ಮರುಳಾಗಿರುವ ಅವಿವೇಕಿಯಾದ ಬಾಲನಿಗೆ ಸಂಸಾರದಾಶೆ ಇರುವದು ಮನಸ್ಸಿಗೆ ಹತ್ತುವದೇ ಇಲ್ಲ. ಅವನು "ಈ ಲೋಕವಿದೆ, ಪರಲೋಕವಿಲ್ಲ' ಎಂದುಕೊಂಡು ಮತ್ತೆ ಮತ್ತೆ ನಮ್ಮ ವಶವಾಗುತ್ತಿರುತ್ತಾನೆ" (1–2–6). ಈ ತತ್ತ್ವವನ್ನು ತಿಳಿದುಕೊಳ್ಳುವದು ಬಹಳ ಕಷ್ಟ. "ಅನೇಕರು ಅದನ್ನು ಮತ್ತೆ ಮತ್ತೆ ಕೇಳಿದಮೇಲೂ ಅದನ್ನು ಅರಿತುಕೊಳ್ಳದೆ ಇರುತ್ತಾರೆ'; ಏಕೆಂದರೆ ಹೇಳುವಾತನು ಆಶ್ಚರ್ಯ ರೂಪನಾಗಿರಬೇಕು, ಕೇಳುವವನೂ ಆಶ್ಚರ್ಯರೂಪನಾಗಿರಬೇಕು" (7). ಗುರುವು ಅದ್ಭುತ ರೂಪನಾಗಿರಬೇಕು, ಶಿಷ್ಯನೂ ಅಂಥವನೇ ಆಗಿರಬೇಕು. "ಮನಸ್ಸನ್ನು ಕುತೂಹಲದಿಂದ ಕಲಕಿಕೊಳ್ಳಲೂ ಬಾರದು, ಏಕೆಂದರೆ ಅದು ತರ್ಕಕ್ಕೆ ನಿಲುಕುವದಲ್ಲ, ಅದು ಇರತಕ್ಕ ವಿಷಯವಾಗಿರುತ್ತದೆ" (8).

ಪ್ರತಿಯೊಂದು ಮತದಲ್ಲಿಯೂ ಶ್ರದ್ಧೆಯು ಬಹುಮುಖ್ಯವೆಂದು ಹೇಳಿರುವದು ಕಂಡುಬರುತ್ತದೆಂಬೆನ್ನುವದನ್ನು ಎಲ್ಲರೂ ಆಡಿಕೊಳ್ಳುತ್ತಾರೆ; ಸುಮ್ಮನೆ ಅಂಧಶ್ರದ್ಧೆಯನ್ನು ಇಟ್ಟುಕೊಳ್ಳಬೇಕೆಂದು ಧರ್ಮಗಳು ಉಪದೇಶಿಸುತ್ತವೆ (ಎಂದೇ ಜನರು ಅಭಿಪ್ರಾಯ ಪಡುತ್ತಾರೆ). ನಿಜ, ಈ ಅಂಧಶ್ರದ್ಧೆಯ ಭಾವನೆ ಆಕ್ಷೇಪಣೀಯವಾದದ್ದೇ ಸರಿ; ಆದರೆ ಅದನ್ನು ಬಿಡಿಸಿ ನೋಡಿದರೆ ಅದಕ್ಕೆ ಆಧಾರವಾಗಿ ಒಂದು ಮಹಾತತ್ತ್ವವಿರುವದೆಂದು ಕಂಡುಬರುತ್ತದೆ. ಆ ಅಭಿಪ್ರಾಯವೇನೆಂಬುದು ಇಲ್ಲಿ ಈ ವಾಕ್ಯವನ್ನೋದುವಾಗ ತಿಳಿಯುಬರುತ್ತದೆ. ಮನಸ್ಸನ್ನು ಕುತರ್ಕದಿಂದ ಅಲುಗಾಡಿಸಬಾರದು, ಅದು ಇರತಕ್ಕದ್ದನ್ನು ಅರಿತುಕೊಳ್ಳುವದೇ ಹೊರತು ತರ್ಕದ ವಿಷಯವಲ್ಲ. ಯಾವ ತರ್ಕವಾಗಲಿ ವಿಚಾರವಾಗಲಿ, ಕೆಲಕೆಲವು ಅನುಭವಗಳ ಆಧಾರದ ಮೇಲೆ ನಿಂತಿರಬೇಕಾಗಿರುತ್ತದೆ, ಅವಿಲ್ಲದಿದ್ದರೆ ತರ್ಕವೇ ನಿಲ್ಲಲಾರದು. ವಿಚಾರವೆಂದರೆ ಮೊದಲೇ ನಮ್ಮ ಅನುಭವಕ್ಕೆ ಬಂದಿರುವ ಕೆಲವು ಸಂಗತಿಗಳನ್ನು ಹೋಲಿಸಿನೋಡುವ ಕ್ರಮವು. ಈ ಅನುಭವವಿಶೇಷಗಳು ಮೊದಲೇ ಇದ್ದುಕೊಂಡಿರದಿದ್ದರೆ ಯಾವ ವಿಚಾರವೂ ಸಾಗಲೇ ಆರದು. ಹೊರಗಿನ ದೃಶ್ಯಗಳ ವಿಚಾರವು ಹೀಗಿರುವದಾದರೆ ಒಳಗಿನವುಗಳ ವಿಚಾರವೂ ಹೀಗೆಯೇ ಎಂದೇಕೆ ಹೇಳಬಾರದು? ರಸಾಯನ ಶಾಸ್ತ್ರಜ್ಞನು

ಕೆಲಕೆಲವು ವಸ್ತುಗಳನ್ನು ತೆಗೆದುಕೊಂಡು ಅವುಗಳಲ್ಲಿ ಆಗುವ ಕಾರ್ಯಗಳನ್ನು ಕಂಡುಕೊಳ್ಳುತ್ತಾನೆ. ಇದೊಂದು ಇರುವ ವಿಷಯವಾಗಿರುತ್ತದೆ; ಅದು ನಮಗೆ ಕಾಣಿಸುತ್ತದೆ, ಇಂದ್ರಿಯಗೋಚರವಾಗುತ್ತದೆ, ಅದನ್ನು ಆಧಾರವಾಗಿಟ್ಟುಕೊಂಡೇ ನಾವು ರಸಾಯನ ಶಾಸ್ತ್ರದ ತರ್ಕವನ್ನು ಏರ್ಪಡಿಸಿಕೊಳ್ಳುತ್ತೇವೆ. ಪ್ರಕೃತಿಶಾಸ್ತ್ರಜ್ಞರೂ ಹೀಗೆಯೇ, ಮಿಕ್ಕ ಶಾಸ್ತ್ರಗಳಲ್ಲಿಯೂ ಹೀಗೆಯೇ. ಅಲ್ಲೆಲ್ಲ ತಿಳಿವಳಿಕೆಗೆ ಕೆಲಕೆಲವು ಅನುಭವ ವಿಶೇಷಗಳು ಆಧಾರವಾಗಿರುತ್ತವೆ, ಆ ಅನುಭವಗಳ ಮೇಲೆಯೇ ನಮ್ಮ ತರ್ಕವನ್ನು ಏರ್ಪಡಿಸಬೇಕಾಗಿರುತ್ತದೆ. ಆದರೆ ಅದೇನು ವಿಚಿತ್ರವೋ, ಮಾನವವರ್ಗದಲ್ಲಿ ಅನೇಕರು, ಅದರಲ್ಲಿಯೂ ಈಗಿನ ಕಾಲದವರನೇಕರು, ಧರ್ಮದ ವಿಷಯದಲ್ಲಿ ಹಾಗೆ ಮಾಡುವದು ಸಾಧ್ಯವಿಲ್ಲವೆಂತಲೂ ಧರ್ಮವನ್ನು ಬರಿಯ ಒಣತರ್ಕಗಳಿಂದಲೇ ತಿಳಿದುಕೊಳ್ಳಬೇಕೆಂತಲೂ ಎಣಿಸಿರುತ್ತಾರೆ. ಆದ್ದರಿಂದ ಮನಸ್ಸನ್ನು ಒಣತರ್ಕಗಳಿಂದ ಕಲಕಿಕೊಳ್ಳಬಾರದು ಎಂದು ಇಲ್ಲಿ ಹೇಳಿರುತ್ತದೆ.

ಧರ್ಮವೆಂಬುದು ಇರುವ ವಿಷಯವೇ ಹೊರತು ಬರಿಯ ಮಾತಲ್ಲ. ನಮ್ಮ ನಮ್ಮ ಆತ್ಮಗಳನ್ನು ಬಿಡಿಸಿನೋಡಿ, ಅಲ್ಲಿರುವದನ್ನು ಕಂಡುಕೊಳ್ಳಬೇಕು; ಅದೇ ಧರ್ಮ. ಎಷ್ಟು ಮಾತನಾಡಿದರೂ ಧರ್ಮವೆನಿಸಲಾರದು. ಆದ್ದರಿಂದ ದೇವರು ಇದಾನೋ ಇಲ್ಲವೋ ಎಂಬುದನ್ನು ತರ್ಕದಿಂದ ಸಿದ್ಧಮಾಡುವದಕ್ಕೆ ಆಗುವದೇ ಇಲ್ಲ, ಏಕೆಂದರೆ ಒಂದು ಪಕ್ಷಕ್ಕೆ ಎಷ್ಟರಮಟ್ಟಿಗೆ ತರ್ಕದ ಬಲವಿದೆಯೋ ಮತ್ತೊಂದಕ್ಕೂ ಅಷ್ಟರಮಟ್ಟಿಗೇ ಇರುತ್ತದೆ. ಆದರೆ ನಿಜವಾಗಿ ದೇವರಿದ್ದರೆ ಅವನು ನಮ್ಮ ಹೃದಯದಲ್ಲಿಯೇ ಇರುತ್ತಾನೆ. ಆತನನ್ನು ನೀವು ಎಂದಾದರೂ ನೋಡಿರುವಿರೋ?* ಈ ಪ್ರಪಂಚವು ಇದೆಯೋ ಇಲ್ಲವೋ ಎಂಬುದನ್ನು ಇನ್ನೂ ವಾದಿಗಳು ನಿಶ್ಚಯಮಾಡಿಯೇ ಇರುವದಿಲ್ಲ, ವಿಜ್ಞಾನವಾದಿಗಳಿಗೂ ವಸ್ತುಸತ್ಯತ್ವವಾದಿಗಳಿಗೂ# ನಡೆದಿರುವ ಚರ್ಚೆಗೆ ಕೊನೆಯೇ ಇರುವದಿಲ್ಲ, ಆದರೇನು? ಈ ಪ್ರಪಂಚವು ಇದ್ದೇ ಇದೆಯೆಂದೂ ಅದರ ವ್ಯಾಪಾರವು ನಡೆಯುತ್ತಲೇ ಇರುವದೆಂದೂ ನಮಗೆಲ್ಲರಿಗೂ ಗೊತ್ತೇ ಇದೆ. ನಾವು ಶಬ್ದಗಳ ಅರ್ಥವನ್ನು ಬೇರೆ ಮಾಡುತ್ತೇವೆ, ಅಷ್ಟೆ. ಈ ಸಂಸಾರದಲ್ಲಿ ಕಂಡುಬರುವ ವಿಚಾರಗಳಲ್ಲೆಲ್ಲ ಹೀಗೆಯೇ, ಇರುವ ವಿಷಯವೇ ನಮಗೆ ಎಲ್ಲೆಲ್ಲಿಯೂ

* ಈ ಪ್ರಶ್ನೆಯೇ ಸ್ವಾಮಿಗಳು ಶ್ರೀರಾಮಕೃಷ್ಣಪರಮಹಂಸರ ಮೊದಲನೆಯ ಸಂದರ್ಶನವಾದಾಗ ಅವರನ್ನು ಕೇಳಿದ್ದು.

# ವಿಜ್ಞಾನಕ್ಕಿಂತ ಬೇರೆಯಾಗಿ ಹೊರಗಿನ ವಸ್ತುವೇ ಇಲ್ಲವೆಂಬುದು ವಿಜ್ಞಾನವಾದವು, ಇದೆಯೆಂಬುದು ವಸ್ತುಸತ್ಯತ್ವವಾದವು. ಭಕ್ತಿಯೋಗದ 16ನೆಯ ಪುಟವನ್ನು ನೋಡಿ.

ಮುಖ್ಯವಾಗಿರಬೇಕು. ಕೆಲಕೆಲವು ಧಾರ್ಮಿಕವಿಷಯಗಳಿರುತ್ತವೆ; ಬಾಹ್ಯವಿಷಯಗಳ ವಿಜ್ಞಾನ ಶಾಸ್ತ್ರದಲ್ಲಿ ಹೇಗೋ ಹಾಗೆಯೇ ಇಲ್ಲಿಯೂ ಅವುಗಳನ್ನೂ ಅನುಭವಿಸಿಯೇ ಅವುಗಳ ಆಧಾರದ ಮೇಲೆ ಧರ್ಮವನ್ನು ಏರ್ಪಡಿಸಬೇಕಾಗಿರುತ್ತದೆ. ಯಾವದಾದರೊಂದು ಮತದಲ್ಲಿ ಹೇಳಿರುವ ಬೋಧನೆಗಳನ್ನೆಲ್ಲ ನಂಬಲೇಬೇಕೆಂಬ ಅತಿವಾದವು ಮಾನವನ ಮನಸ್ಸನ್ನು ಕುಗ್ಗಿಸಿ ಹಾಳುಮಾಡುವದೆಂಬುದು ನಿಜವೇ. ನೀವು ಎಲ್ಲವನ್ನೂ ನಂಬಲೇಬೇಕು ಎಂದು ಕೇಳುವಾತನು ತಾನು ಕೆಳಕ್ಕೆ ಬೀಳುತ್ತಾನೆ, ನೀವು ನಂಬಿದರೆ ನಿಮ್ಮನ್ನೂ ಕೆಳಕ್ಕೆಳೆದವನಾಗುತ್ತಾನೆ. ಈ ಲೋಕದ ಮಹಾತ್ಮರಿಗೆ 'ನಾವು ನಮ್ಮ ಅಂತಃಕರಣವನ್ನು ಬಿಡಿಸಿ ನೋಡಿದ್ದರಲ್ಲಿ ಇಂಥಿಂಥ ಸಂಗತಿಗಳು ಕಂಡುಬರುತ್ತವೆ' ಎಂದು ಹೇಳುವದಕ್ಕೆ ಮಾತ್ರ ಹಕ್ಕಿರುತ್ತದೆ. ನಮಗೂ ಹಾಗೆಯೇ ಕಂಡು ಬಂದರೆ ನಾವು ನಂಬಬಹುದು, ಇಲ್ಲವಾದರೆ ಇಲ್ಲ. ಧರ್ಮ ವಿಚಾರದಲ್ಲೆಲ್ಲ ಇರುವ ಸಾರವು ಇಷ್ಟೇ. ಆದರೆ ಇಷ್ಟನ್ನು ಯಾವಾಗಲೂ ನೆನಪಿನಲ್ಲಿಟ್ಟುಕೊಂಡಿರಿ; ನಿಜವಾಗಿ ನೋಡಿದರೆ ಮತದ ಮೇಲೆ ಹಲ್ಲುಮಾಡುವವರಲ್ಲಿ ಶೇಕಡ 99.9 ಪಾಲು ಜನರು ಇರುವ ಸಂಗತಿಗಳನ್ನು ನೋಡುವದಕ್ಕೆ ಪ್ರಯತ್ನ ಮಾಡಿಯೇ ಇರುವದಿಲ್ಲ. ಆದ್ದರಿಂದ 'ಸೂರ್ಯನಿದಾನೆಂದು ನಂಬುವವರೆಲ್ಲ ಹುಚ್ಚರು' ಎಂದು ಕೂಗಿಕೊಳ್ಳುತ್ತಿರುವ ಹುಟ್ಟುಗುರುಡನ ಮಾತಿನಿಂದ ಹೇಗೆ ನಮಗೆ ಯಾವ ಹಾನಿಯೂ ಆಗುವ ಹಾಗಿಲ್ಲವೋ ಹಾಗೆಯೇ ಅಂಥವರು ಮಾಡುವ ತರ್ಕಗಳಿಂದಲೂ ಧರ್ಮಕ್ಕೆ ಯಾವ ಹಾನಿಯೂ ಆಗುವಂತಿರುವದಿಲ್ಲ.

ಇದೊಂದೇ, ಈ ಸಾಕ್ಷಾತ್ಕಾರವೆಂಬ ಭಾವನೆಯೊಂದೇ, ನಾವು ತಿಳಿದುಕೊಂಡು ಬಲವಾಗಿ ಹಿಡಿದುಕೊಳ್ಳಬೇಕಾದದ್ದು. ಧರ್ಮಗಳಲ್ಲಿ ಕಂಡುಬರುವ ಈ ಕರೆಕರೆಯೂ ಕಚ್ಚಾಟವೂ ಭೇದಭಾವನೆಯೂ ತಪ್ಪಬೇಕಾದರೆ ಧರ್ಮವು ಗ್ರಂಥಗಳಲ್ಲಿಲ್ಲ, ದೇವಾಲಯಗಳಲ್ಲಿಯೂ ಇಲ್ಲ – ಎಂಬುದನ್ನು ನಾವು ಮೊದಲು ತಿಳಿದುಕೊಳ್ಳಬೇಕು. ಧರ್ಮವೆಂದರೆ ನಿಜವಾಗಿ ಆಗುವ ಅನುಭವವಿಶೇಷವು. ಯಾವ ಮನುಷ್ಯನಿಗೆ ದೇವರೂ ಜೀವನೂ ನಿಜವಾಗಿ ಅನುಭವಕ್ಕೆ ಬಂದಿರುತ್ತಾರೋ ಅವನಿಗೇ ಧರ್ಮವೆಂಬುದು ಇರುತ್ತದೆ. ರಾಶಿರಾಶಿಯಾಗಿ ಮಾತನಾಡಬಲ್ಲ ಧಾರ್ಮಿಕ ಉಪನ್ಯಾಸಕನಿಗೂ ಅತ್ಯಂತ ಕೀಳು ಅಂತಸ್ತಿನಲ್ಲಿರುವ ಅತ್ಯಂತ ಮೂಢನಾದ ಚಾರ್ವಾಕನಿಗೂ ಯಾವ ನಿಜವಾದ ತಾರತಮ್ಯವೂ ಇರುವದಿಲ್ಲ. ನಾವೆಲ್ಲರೂ ನಾಸ್ತಿಕರೇ, ಅದನ್ನು ನಾವು ಒಪ್ಪಿಕೊಂಡುಬಿಡೋಣ. ಸುಮ್ಮನೆ ಮನಸ್ಸಿನಲ್ಲಿ ಹೂಗುಟ್ಟಿದಮಾತ್ರಕ್ಕೆ ನಾವು ಧಾರ್ಮಿಕರೆನಿಸಿಕೊಳ್ಳಲಾರೆವು. ಒಬ್ಬ ಕ್ರಿಸ್ತೀಯ ಮತದವನನ್ನಾಗಲಿ ಮಹಮ್ಮದೀಯ ಮತದವನನ್ನಾಗಲಿ ಅಥವಾ

ಮತ್ತೆ ಯಾವ ಮತದ ಅನುಯಾಯಿಯನ್ನಾಗಲಿ ಉದಾಹರಣೆಗೆ ತೆಗೆದುಕೊಳ್ಳಿರಿ. ಕ್ರೈಸ್ತನು ಮಾಡಿದ ಬೆಟ್ಟದ ಮೇಲಿನ ಉಪದೇಶ (Sermon on the Mount)ದ ತತ್ತ್ವವನ್ನು ಮನಗಂಡವನು ಯಾರೇ ಆಗಲಿ, ಅವನು ಕೂಡಲೆ ಸಿದ್ಧನಾಗಿ ದೇವತೆಯೆನಿಸಿಕೊಳ್ಳುವಂತಿದೆ. ಆದರೂ ಈ ಲೋಕದಲ್ಲಿ ಎಷ್ಟೋ ದಹಲಕ್ಷಗಟ್ಟಲೆಯ ಕ್ರಿಸ್ತಿಯರು ಇರುತ್ತಾರಂತೆ! ಆ ಉಪದೇಶವನ್ನು ಮಾನವರು ಮುಂದೆ ಯಾವಾಗಲೂ ಸಾಕ್ಷಾತ್ಕರಿಸಿಕೊಳ್ಳುವದಕ್ಕೆ ಪ್ರಯತ್ನಮಾಡಬಹುದೆಂಬುದೇ ಅದಕ್ಕರ್ಥ. ಇಪ್ಪತ್ತು ದಹಲಕ್ಷದಲ್ಲಿ ಒಬ್ಬನು ಕೂಡ ನಿಜವಾದ ಕ್ರಿಸ್ತಿಯನಿರುವದಿಲ್ಲ. ಇದರಂತೆ ಇಂಡಿಯದಲ್ಲಿ ಮೂವತ್ತುಕೋಟಿ ವೇದಾಂತಿಗಳಿರುವರಂತೆ! ನಿಜವಾಗಿ ಧರ್ಮವನ್ನು ಮನಗಂಡವನು ಸಾವಿರಕ್ಕೊಬ್ಬನಿದ್ದರೂ ಸಾಕು, ಈ ಲೋಕವೇ ಎಷ್ಟೋಮಟ್ಟಿಗೆ ಉತ್ತಮ ಸ್ಥಿತಿಯನ್ನು ಹೊಂದೀತು. ನಾವೆಲ್ಲರೂ ಕತ್ತಲೆಯಲ್ಲಿಯೇ ಇರುತ್ತೇವೆ; ನಮಗೆ ಧರ್ಮವೆಂದರೆ ಕೇವಲ ಮಾನಸಾಂಗೀಕಾರವಾಗಿರುತ್ತದೆ, ಬರಿಯ ಮಾತಾಗಿರುತ್ತದೆ, ಬರಿಯ ಸೊನ್ನೆಯಾಗಿರುತ್ತದೆ. ಒಬ್ಬನಿಗೆ ಚೆನ್ನಾಗಿ ಮಾತನಾಡುವದಕ್ಕೆ ಬಂದರೆ ಅವನು ಧಾರ್ಮಿಕನೆಂದೇ ನಾವು ಎಷ್ಟೋ ವೇಳೆ ಭಾವಿಸಿಕೊಳ್ಳುತ್ತೇವೆ. ಆದರೆ ಇದೇನೂ ಧರ್ಮವಲ್ಲ. "ವಾಗ್ವೈಖರಿಯೂ ಶಬ್ದಗಳ ಝರಿಯೂ ಶಾಸ್ತ್ರವನ್ನು ಬಗೆಬಗೆಯಾಗಿ ವಿವರಿಸುವ ಕೌಶಲವೂ ಇವೆಲ್ಲವೂ ಪಂಡಿತರ ಭೋಗಕ್ಕೇ" (ವಿ.)ಹೊರತು ಧರ್ಮವಲ್ಲ. ನಮ್ಮ ಹೃದಯದಲ್ಲಿ ನಿಜವಾಗ ಸಾಕ್ಷಾತ್ಕಾರವಾದಾಗಲೇ ಧರ್ಮವೆಂಬುದು ಕಾಣಿಸಿಕೊಳ್ಳುತ್ತದೆ, ಆಗಲೇ ಧರ್ಮದ ಅರುಣೋದಯವಾಗುತ್ತದೆ. ಆಗಲೇ ನಾವು ನೀತಿವಂತರಾಗುತ್ತೇವೆ. ಈಗ ನಾವು ಪಶುಗಳಿಗಿಂತ ಹೆಚ್ಚು ನೀತಿವಂತರಾಗಿರುವದಿಲ್ಲ; ನಾವು ಜನಸಮಾಜದ ಕೋರಡೆಯ ಏಟುಗಳಿಗೆ ಅಂಜಿಕೊಂಡು ತೆಪ್ಪಗಿದ್ದೇವೆ, ಅಷ್ಟೇ. ಜನವು ಇಂದು 'ನೀವು ಕಳ್ಳತನ ಮಾಡಿದರೆ ನಾವು ದಂಡಿಸುವದಿಲ್ಲ' ಎನ್ನುವದಾದರೆ ಒಬ್ಬರ ಸ್ವತ್ತಿಗೊಬ್ಬರು ಕೂಡಲೆ ಕೈಹಚ್ಚಿಬಿಟ್ಟೇವು. ಪೋಲೀಸಿನವನೇ ನಮ್ಮನ್ನು ನೀತಿಯಲ್ಲಿಟ್ಟಿರುವಾತನು, ಜನಸಮಾಜದ ಅಭಿಪ್ರಾಯವೇ ನಮ್ಮನ್ನು ನೀತಿವಂತರಾಗಿಟ್ಟುಕೊಂಡಿರುವುದು; ನಮ್ಮ ಹೃದಯ ಕುಹರದಲ್ಲಿ ನಾವೇ ನೋಡಿಕೊಂಡಾಗ ಇದು ಎಷ್ಟುಮಟ್ಟಿಗೆ ನಿಜವೆಂಬುದು ನಮಗೇ ಗೊತ್ತಾಗುತ್ತದೆ. ಆದ್ದರಿಂದ ನಾವು ಆತ್ಮವಂಚಕರಾಗುವದು ಬೇಡ. ನಮಗೆ ಧರ್ಮವು ಇನ್ನೂ ಬಂದಿಲ್ಲವೆಂದೂ ಮತ್ತೊಬ್ಬರನ್ನು ತಿರಸ್ಕರಿಸುವದಕ್ಕೆ ನಮಗೇನೂ ಹಕ್ಕಿಲ್ಲವೆಂದೂ ಒಪ್ಪಿಕೊಳ್ಳೋಣ. ನಾವೆಲ್ಲರೂ ಅಣ್ಣತಮ್ಮಂದಿರೇ, ನಮಗೆ ಧರ್ಮದ ಸಾಕ್ಷಾತ್ಕಾರವಾದಾಗ ನಾವು ನಿಜವಾಗಿ ನೀತಿವಂತರಾಗಿರುತ್ತೇವೆ.

ನೀವು ಒಂದಾನೊಂದು ದೇಶವನ್ನು ನೋಡಿದ್ದು ನೀವು ಅದನ್ನು ನೋಡಿಲ್ಲವೆಂದು ಒಪ್ಪಿಕೊಳ್ಳುವಂತೆ ಯಾರಾದರೂ ಬಲಾತ್ಕರಿಸಿದರೆ ಆಗಲೂ ನಿಮ್ಮ ಹೃದಯದಲ್ಲಿ ನಿಮಗೆ 'ನಾನು ಆ ದೇಶವನ್ನು ನೋಡಿದೇನೆ' ಎಂಬ ತಿಳಿವಳಿಕೆಯೇ ಇದ್ದುಕೊಂಡಿರುತ್ತದೆ. ಇದರಂತೆ ಈ ಬಾಹ್ಯ ಪ್ರಪಂಚವನ್ನು ನೋಡುತ್ತೇವೆಂಬುದು ಯಾವ ಅರ್ಥದಲ್ಲಿಯೋ ಅದಕ್ಕಿಂತಲೂ ಬಲವಾದ ಅರ್ಥದಲ್ಲಿ ಧರ್ಮವನ್ನೂ ದೇವರನ್ನೂ ನೀವು ನೋಡುವದಾದರೆ ಆಗ ನಿಮ್ಮ ನಂಬಿಕೆಯನ್ನು ಯಾವದೂ ಅಲುಗಾಡಿಸಲಾರದು. ಆಗ್ಗೆ ನಿಮಗೆ ನಿಜವಾದ ಶ್ರದ್ಧೆಯು ಬರುತ್ತದೆ. "ಸಾಸಿವೆಯ ಕಾಳಿನಷ್ಟು ಶ್ರದ್ಧೆಯಿದ್ದರೂ ಸಾಕು" (ಬೈ)ಎಂಬ ವಾಕ್ಯದ ಅರ್ಥವು ಆಗ ನಿಮಗೆ ಹೊಳೆಯುತ್ತದೆ. ಆಗ ನೀವು ನಿಜವೇ ಆಗಿಬಿಟ್ಟಿರುವದರಿಂದ ನಿಮಗೆ ನಿಜವು ಯಾವದೆಂಬುದು ಗೊತ್ತಾಗುತ್ತದೆ.

ವೇದಾಂತಕ್ಕೆ ಇದೇ ಮೂಲಸೂತ್ರವು. ಧರ್ಮವನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕೇ ಹೊರತು ಬರಿಯ ಮಾತಿನಿಂದ ಏನೂ ಆಗುವಹಾಗಿಲ್ಲ. ಆದರೆ ಇದನ್ನು ಅನುಭವಕ್ಕೆ ತಂದುಕೊಳ್ಳುವದು ಕಷ್ಟ. "ಪ್ರತಿಯೊಬ್ಬ ಮಾನವನ ಹೃದಯ ಗುಹೆಯಲ್ಲಿಯೂ ಇರುವ ಈ ಅಣುರೂಪನಾದ ಪುರಾಣಪುರುಷನು ಒಳಗೆ ಬಚ್ಚಿಟ್ಟುಕೊಂಡಿರುತ್ತಾನೆ. ಋಷಿಗಳು ಆತನನ್ನು ಅಧ್ಯಾತ್ಮಯೋಗಬಲದಿಂದ ಕಂಡುಕೊಂಡು ಹರ್ಷಶೋಕಗಳೆರಡನ್ನೂ ದಾಟಿದರು."* (1-2-12) "ಧರ್ಮವನ್ನೂ ಅಧರ್ಮವನ್ನೂ ದಾಟಿದರು, ಪುಣ್ಯವನ್ನೂ ಪಾಪವನ್ನೂ ದಾಟಿದರು, ಇರವನ್ನೂ ಇಲ್ಲವೆಂಬುದನ್ನೂ ದಾಟಿದರು. (13) ಆತನನ್ನು ಯಾವಾತನು ನೋಡಿರುವನೋ ಅವನೇ ಸತ್ಯವನ್ನು ಕಂಡಿರುವಾತನು.

ಹಾಗಾದರೆ ಸ್ವರ್ಗದ ವಿಚಾರವೇನು? ದುಃಖವಿಲ್ಲದ ಕೇವಲ ಸುಖವೆಂಬ ಭಾವನೆಯೇ ಅದು. ಅದೇನೋ ಒಳ್ಳೆಯ ಭಾವನೆಯೇ ಸರಿ; ಅದು ಸ್ವಾಭಾವಿಕವಾಗಿ ಉಂಟಾಗತಕ್ಕದ್ದು. ಆದರೆ ಅದು ಮೊದಲಿನಿಂದ ಕೊನೆಯವರೆಗೂ ತಪ್ಪು ಭಾವನೆಯೇ, ಏಕೆಂದರೆ ಬರಿಯ ಸುಖವೆಂಬುದು ಇಲ್ಲವೇ ಇಲ್ಲ. ಅಥವಾ ಬರಿಯ ದುಃಖವೆಂಬುದೂ ನಿಜವಾಗಿರುವದೇ ಇಲ್ಲ. ರೋಮನಗರದಲ್ಲಿದ್ದ ಒಬ್ಬ ಸಾಹುಕಾರನ ಕಥೆಯನ್ನು ನೀವು ಕೇಳಿರಬಹುದು. ಒಂದುದಿನ ಅವನಿಗೆ ತನ್ನ ಆಸ್ತಿಯಲ್ಲಿ ಒಂದು ದಹಲಕ್ಷ ಸುವರ್ಣಗಳ ಬೆಲೆಯುಳ್ಳ ಆಸ್ತಿಯು ಮಾತ್ರ ಉಳಿದುಕೊಂಡಿದೆ ಎಂದು ತಿಳಿದು ಬಂದಿತು; ಅವನು 'ಅಯ್ಯೋ, ನಾಳೆ ಏನು

* ಮಂತ್ರವನ್ನು ಅಕ್ಷರಶಃ ಸ್ವಾಮಿಗಳು ಪರಿವರ್ತಿಸಿಲ್ಲವಾದರೂ ಮೂಲವನ್ನು ನೋಡಬೇಕೆನ್ನುವವರ ಸೌಕರ್ಯಕ್ಕಾಗಿ ಸಂಖ್ಯೆಗಳನ್ನು ಕೊಡುತ್ತಲೇ ಹೋಗಿದೆ.

ಮಾಡಲಿ?' ಎಂದ ಕೂಡಲೇ ಆತ್ಮಹತ್ಯೆಯನ್ನು ಮಾಡಿಕೊಂಡುಬಿಟ್ಟನು. ಒಂದು ದಹಲಕ್ಷ ಸುವರ್ಣವೆಂಬುದು ಅವನ ಪಾಲಿಗೆ ಬಡತನವೆನಿಸಿತು! ಯಾವದು ಸುಖ,ಯಾವದು ದುಃಖ? ಅದು ಕಡಿಮೆಕಡಿಮೆಯಾಗಿ ಮಾರ್ಪಡುತ್ತಲೇ, ಬರುಬರುತ್ತಾ ಒಂದೇ ಸಮನೆ ಬೇರ್ಪಡುತ್ತಲೇ ಇರುವದಾಗಿರುತ್ತದೆ, ನಾವು ಹುಡುಗನಿದ್ದಾಗ 'ನಾನೊಬ್ಬ ಸಾರೋಟು ಹೊಡೆಯುವವನಾದರೆ ಬಹಳ ಸುಖವಾಗಿ ಗಾಡಿಯಲ್ಲಿ ಸವಾರಿಮಾಡಿಕೊಂಡಿರಬಹುದು' ಎನಿಸುತ್ತಿತ್ತು, ಈಗ ನನಗೆ ಹಾಗೆನಿಸುವದಿಲ್ಲ. ನಿಮಗೆ ಯಾವ ಸಂತೋಷವನ್ನು ತಾನೆ ಹಿಡಿದು ಕೊಂಡಿರಬೇಕೆನಿಸುತ್ತಿದೆ?ಇದೊಂದು ವಿಷಯವನ್ನೇ ನಾವೆಲ್ಲರೂ ಪ್ರಯತ್ನಪೂರ್ವಕವಾಗಿ ತಿಳಿದುಕೊಳ್ಳಬೇಕಾಗಿರುವದು, ನಮ್ಮನ್ನು ಈ ಮೂಢವಿಶ್ವಾಸವು ಕೊನೆಯವರೆಗೂ ಬಿಟ್ಟುಹೋಗುವದೇ ಇಲ್ಲ. ಒಬ್ಬೊಬ್ಬರಿಗೂ ಬೇರೆ ಬೇರೆ ಒಂದೊಂದು ಸುಖವೆನಿಸುತ್ತದೆ. ನನ್ನ ಪರಿಚಿತರಲ್ಲೊಬ್ಬನಿಗೆ ಪ್ರತಿದಿನವೂ ಒಂದು ಗುಳಿಗೆ ಅಫೀಮು ನುಂಗಿದ ಹೊರತು ಸುಖವಾಗುವದಿಲ್ಲ; ಅವನಿಗೆ ಸ್ವರ್ಗವೆಂದರೆ ಅಫೀಮಿನ ಭೂಮಿಯಾಗಿಯೋ ತೋರಬಹುದೋ ಏನೋ! ಅಂಥ ಸ್ವರ್ಗವು ನನಗೆ ಬಹು ದುಃಖಕರವಾಗಿರುವದು. ಅರಬ್ಬೀ ಕಾವ್ಯದಲ್ಲಿ ಸ್ವರ್ಗದಲ್ಲಿ ಸುಂದರವಾದ ಉದ್ಯಾನಗಳೂ ಅವುಗಳಲ್ಲಿ ಹರಿಯುತ್ತಿರುವ ದಿವ್ಯವಾದ ನದಿಗಳೂ ಇರುವವೆಂದು ವರ್ಣಿತವಾಗಿರುತ್ತದೆ. ನನ್ನ ಜೀವಮಾನದಲ್ಲಿ ಬಹುಭಾಗವು ಮಿತಿಮೀರಿ ಜಲಮಯವಾಗಿದ್ದ ಪ್ರದೇಶದಲ್ಲಿ ಸಾಗಿರುತ್ತದೆ; ಅಲ್ಲಿ ಪ್ರತಿವರ್ಷವೂ ಎಷ್ಟೋ ಹಳ್ಳಿಗಳು ಪ್ರವಾಹಕ್ಕೆ ಸಿಕ್ಕಿಬಿದ್ದು ಸಾವಿರಾರು ಜೀವರ ಪ್ರಾಣ ನಾಶವಾಗುತ್ತಿರುತ್ತದೆ. ಆದ್ದರಿಂದ ನನ್ನ ಸ್ವರ್ಗದಲ್ಲಿ ಹರಿಯುವ ನದಿಗಳೂ ತೋಟಗಳೂ ಇರಲಾರವು; ಮಳೆಯು ಬೀಳುವದೇ ಇಲ್ಲವೆನ್ನುವಂಥ ಪ್ರದೇಶವೇ ನನಗೆ ಬೇಕು, ನಮ್ಮ ಸಂತೋಷ ಸ್ಥಾನಗಳು ಒಂದೇ ಸಮನೆ ಮಾರ್ಪಡುತ್ತಿರುತ್ತವೆ. ಒಬ್ಬ ತರುಣನಿಗೆ ಸ್ವರ್ಗದ ಕನಸಾದರೆ ಅಲ್ಲಿ ತನಗೊಬ್ಬ ಸುಂದರಿಯಾದ ಹೆಂಡತಿ ಸಿಕ್ಕುವಳೆಂಬ ನನಸಾಗುತ್ತದೆ. ಅವನೇ ಮುದುಕನಾದನೆಂದರೆ ಅವನಿಗೆ ಹೆಂಡತಿ ಬೇಡ. ನಮಗೆ ಏನೇನು ಬೇಕೆನಿಸುವದೋ ಅದರ ಮೇಲೆ ನಮ್ಮ ಸ್ವರ್ಗವು ಏರ್ಪಡುತ್ತದೆ, ಆದ್ದರಿಂದ ನಮಗೆ ಬೇಕಾದದ್ದು ಮಾರ್ಪಡುತ್ತಲೂ ಸ್ವರ್ಗವು ತಾನೂ ಮಾರ್ಪಡುತ್ತದೆ.

ಇಂದ್ರಿಯ ಭೋಗವೇ ಪರಮಪುರುಷಾರ್ಥವೆನ್ನುವವರು ಬಯಸುವಂಥ ಸ್ವರ್ಗವಿದ್ದರೆ ನಮ್ಮ ಪುರೋಭಿವೃದ್ಧಿಯೇ ಆಗಲಾರದು; ನಮ್ಮ ಜೀವಾತ್ಮನಿಗೆ ಅದಕ್ಕಿಂತ ಕೆಟ್ಟ ಶಾಪವನ್ನು ಹಾಕುವದು ಇನ್ನಾಗಲಾರದು. ನಮಗಾಗ ಬೇಕಾದ

ಗತಿಯೆಲ್ಲ ಕೊನೆಗೆ ಇಷ್ಟೇನೆ? ಸ್ವಲ್ಪ ಅಳುವದು, ಕುಣಿಯುವದು, ಆಮೇಲೆ ನಾಯಿಯ ಹಾಗೆ ಸತ್ತು ಬಿದ್ದುಕೊಳ್ಳುವದೆ! ಛೇ! ಇಂಥ ಬಯಕೆಗಳನ್ನು ಇಟ್ಟುಕೊಂಡರೆ ಮಾನವ ವರ್ಗಕ್ಕೆ ಎಂಥ ಶಾಪವನ್ನು ನೀವು ಕೊಟ್ಟಂತೆ ಆಗುವದೆಂಬುದನ್ನು ಯೋಚಿಸಿರಿ! ಈ ಲೋಕದ ಸುಖಕ್ಕೆ ಚೀರಾಡುತ್ತಿರುವದೆಂದರೆ ನೀವು ಮಾಡುವ  ಕಾರ್ಯವೇ ಅದು! ಏಕೆಂದರೆ ನಿಮಗೆ ನಿಜವಾದ ಸುಖವೆಂಬುದೇನೋ ಅದೇ ತಿಳಿಯದು. ತತ್ತ್ವಶಾಸ್ತ್ರದಲ್ಲಿ ಸುಖವನ್ನು ಬಿಡಬೇಕೆಂದು ಬೋಧಿಸಿರುವದಿಲ್ಲ. 'ನಿಜವಾದ ಸುಖವೆಂದರೆ ಯಾವದೆಂಬುದನ್ನು ಮಾತ್ರ ತಿಳಿದುಕೊಳ್ಳಿರಿ' ಎಂದು ಬೋಧಿಸಿರುತ್ತದೆ. ನಾರ್ವೆ ಜನರ ಸ್ವರ್ಗವೆಂದರೆ ಭಯಂಕರ ಕಲಹ ಸ್ಥಾನ; ಅಲ್ಲಿ ಎಲ್ಲರೂ **'ಓಡಿನ್'** ಎಂಬ ದೇವರ ಮುಂದೆ ಕುಳಿತುಕೊಂಡಿರುತ್ತಾರೆ. ಒಂದು ಕಾಡು ಹಂದಿಯ ಬೇಟೆಯನ್ನು ಆಡಿ ಆಮೇಲೆ ಒಬ್ಬರೊಡನೊಬ್ಬರು ಕದನವಾಡುತ್ತಾ ಒಬ್ಬರನ್ನೊಬ್ಬರು ತುಂಡಿಕ್ಕುತ್ತಾರೆ. ಅದು ಕೆಲವು ಗಂಟೆಗಳ ಹೊತ್ತು ಹೀಗೆ ಕಾದಾಡಿದ ಮೇಲೆ ಅವರ ಗಾಯಗಳೆಲ್ಲ ಹೇಗೋ ಮಾಯವಾಗುತ್ತವೆ; ಆಗೆ ಅವರೆಲ್ಲರೂ ಒಂದು ಭೋಜನ ಶಾಲೆಗೆ ಬಂದು ಕಾಡುಹಂದಿಯನ್ನು ಬೇಯಿಸಿದ ಪಕ್ವಾನ್ನವನ್ನುಂಡು ಆರೋಗಣೆ ಮಾಡುತ್ತಾರೆ. ಇದಾದ ಮೇಲೆ ಮತ್ತೆ ಆ ಹಂದಿಯು ರೂಪವಾಂತು ಅವರ ಮಾರನೆಯ ದಿನದ ಬೇಟೆಗೆ ಸಿದ್ಧವಾಗುತ್ತದೆ.! ಅದೂ ನಮ್ಮ ಸ್ವರ್ಗದಂಥ ಸ್ವರ್ಗವೇ ಹೊರತು ಇದಕ್ಕಿಂತ ಕೀಳಾದದ್ದೇನೂ ಅಲ್ಲ; ಆದರೆ ನಮ್ಮ ಭಾವನೆಗಳು ಸ್ವಲ್ಪ ನಯವಾಗಿರಬಹುದು ಅಷ್ಟೆ. ನಾರ್ವೆಯವರು ಕಾಡುಹಂದಿಯನ್ನು ಬೇಟೆಯಾಡಿ ತಿಂದ ಮೇಲೆ ಪ್ರತಿ ದಿನವೂ ಅದು ಮತ್ತೆ ಬದುಕಿಕೊಳ್ಳುವದೆಂದು ಕಲ್ಪಿಸುವಂತೆಯೇ ನಾವೂ ಕಾಡುಹಂದಿಯ ಬೇಟೆಯನ್ನಾಡಬೇಕೆಂದೂ ನಮಗೆ ಆಗಬೇಕಾದ ಭೋಗಭಾಗ್ಯಗಳೆಲ್ಲ ಇದ್ದುಕೊಂಡೇ ಇರುವಂಥ ಸ್ಥಳಕ್ಕೆ ಹೋಗಿ ಸುಖಿಸಬೇಕೆಂದೂ ಬಯಸುತ್ತಿರುತ್ತೇವೆ.

ನಿರಪೇಕ್ಷವಾದ ಒಂದಾನೊಂದು ಆನಂದವು ಇದ್ದೇ ಇದೆಯೆಂದೂ ಅದು ಎಂದಿಗೂ ಮಾರ್ಪಡುವದೇ ಇಲ್ಲವೆಂದೂ ತತ್ತ್ವ ಶಾಸ್ತ್ರದಲ್ಲಿ ಒತ್ತಿಹೇಳಿರುತ್ತದೆ. ಆನಂದವೆಂಬುದು ಈ ಸಂಸಾರದಲ್ಲಿ ನಮಗೆ ಕಾಣುವ ಸುಖಸಂತೋಷಗಳು ಯಾವವೂ ಆಗಿರಲಾರದಷ್ಟೆ; ಆದರೂ ಈ ಸಂಸಾರದಲ್ಲಿ ಕಾಣುವ ಸುಖವೆಂಬುದೆಲ್ಲ ಆ ನಿಜವಾದ ಆನಂದದ ಒಂದು ಕಣಮಾತ್ರವಾಗಿರುವದೆಂದು* ವೇದಾಂತದಲ್ಲಿ ತೋರಿಸಿಕೊಟ್ಟಿರುತ್ತದೆ. ಜಗತ್ತಿನಲ್ಲಿರುವ ಆನಂದವೆಂದರೆ ಅದೊಂದೇ. ಪ್ರತಿಯೊಂದು ಕ್ಷಣದಲ್ಲಿಯೂ ನಾವು ಆ ನಿರಪೇಕ್ಷವಾದ

* ಬೃ. 4-3-32

ಆನಂದವನ್ನೇ ಅನುಭವಿಸುತ್ತಿರುತ್ತೇವೆ, ಆದರೆ ಅದಕ್ಕೊಂದು ಮುಸುಕು ಬಂದಿರುತ್ತದೆ, ಅದನ್ನು ನಾವು ತಪ್ಪಾಗಿ ತಿಳಿದುಕೊಳ್ಳುತ್ತಿರುತ್ತೇವೆ, ಅದನ್ನು ಕೆಡಿಸಿ ನಕಲಿ ಆನಂದವಾಗಿ ಮಾಡಿಕೊಂಡುಬಿಟ್ಟಿರುತ್ತೇವೆ. ಎಲ್ಲೆಲ್ಲಿ ಸಂತೋಷವಾಗಲಿ, ಆನಂದವಾಗಲಿ, ಹಿಗ್ಗಾಗಲಿ ತೋರಿಕೊಳ್ಳುತ್ತಿರುವದೋ, ಕೊನೆಗೆ ಒಬ್ಬ ಕಳ್ಳನಿಗಾಗುವ ಹಿಗ್ಗೂ ಕೂಡ, ಆ ನಿರಪೇಕ್ಷವಾದ ಆನಂದವೇ; ಆದರೆ ಅದು ಮುಸುಕಾಗಿಬಿಟ್ಟಿರುತ್ತದೆ, ಬಗೆಬಗೆಯ ಹೊರಗಿನ ಉಪಾಧಿಗಳು ಕಲೆತು ಬೇರೆಯ ರೂಪದಲ್ಲಿ ಕಾಣುತ್ತಿರುತ್ತದೆ, ಅಷ್ಟೆ. ಆದರೆ ಹಾಗೆಂದು ತಿಳಿದುಕೊಳ್ಳುವದಕ್ಕೆ ನಾವು ತ್ಯಾಗವನ್ನು ಅನುಷ್ಠಾನ ಮಾಡಬೇಕಾಗುತ್ತದೆ; ಆಮೇಲೆ ವಿಧಿಮುಖವಾದ ಭಾಗವು ಮೊದಲಾಗುತ್ತದೆ. ನಾವು ಅಜ್ಞಾನವನ್ನೂ ಅಸತ್ಯವಾದದ್ದೆಲ್ಲವನ್ನೂ ಮೊದಲು ಬಿಟ್ಟುಬಿಡಬೇಕು; ಹಾಗಾದರೆ ನಿಜವೆಂಬುದು ನಮ್ಮಗಳಿಗೆ ಮೈದೋರುತ್ತದೆ. ಆ ನಿಜವನ್ನು ನಾವು ಗ್ರಹಿಸಿದೆವೊ ಇಲ್ಲವೋ, ಕೂಡಲೆ ನಾವು ಮೊದಲು ಬಿಟ್ಟುಬಿಟ್ಟಿದ್ದ ವಸ್ತುಗಳೆಲ್ಲವೂ ಹೊಸ ಹೊಸ ಆಕಾರಗಳನ್ನೂ ರೂಪಗಳನ್ನೂ ತಳೆದು ಹೊಸ ರೀತಿಯಲ್ಲಿ ನಮಗೆ ತೋರಿಕೊಳ್ಳುತ್ತವೆ, ಈಶ್ವರೀಕೃತವಾಗುತ್ತವೆ.* ಅವು ಆಗ ಘನತೆಯನ್ನು ಹೊಂದಿರುತ್ತವೆಯಾಗಿ ಅವುಗಳ ಪರಮಾರ್ಥಸ್ವರೂಪದಲ್ಲಿ ಅವನ್ನು ನಾವು ಅರಿತುಕೊಳ್ಳುತ್ತೇವೆ. ಆದರೆ ಅವನ್ನು ಅರಿತುಕೊಳ್ಳಬೇಕಾದರೆ ಮೊದಲು ನಮಗೆ ನಿಜದ ಒಂದು ಝಳುಕು ದೊರೆಯಬೇಕು; ಮೊದಲು ಅವನ್ನು ಬಿಡಬೇಕು, ಆಮೇಲೆ ಅವು ಈಶ್ವರೀಕೃತವಾಗಿ ಮತ್ತೆ ನಮ್ಮಲ್ಲಿಗೇ ಬಂದು ಸೇರುತ್ತವೆ. ನಮ್ಮ ಕಷ್ಟನಿಷ್ಠುರಗಳೆಲ್ಲವನ್ನೂ ನಮ್ಮ ಸಣ್ಣಪುಟ್ಟ ಸುಖಗಳನ್ನೂ ಬಿಟ್ಟುಬಿಡಬೇಕು.

"ವೇದಗಳೆಲ್ಲವೂ ಯಾವದನ್ನು ತಿಳಿಸುವವೋ, ತಪಸ್ಸುಗಳೆಲ್ಲವೂ ಯಾವದನ್ನು ಸಾರುತ್ತಿರುವವೋ, ಯಾವದರ ಬಯಕೆಯಿಂದ ಜನರು ಬ್ರಹ್ಮಚರ್ಯೆಯನ್ನು ಅನುಷ್ಠಾನ ಮಾಡುವರೋ ಅದನ್ನು ಒಂದೇ ಪದದಲ್ಲಿ ಸಂಗ್ರಹಿಸಿ ಹೇಳುವೆನು. ಅದೇ ಓಂಕಾರವು." (1-2-15) ವೇದದಲ್ಲಿ ಈ ಓಂಕಾರವನ್ನು ಬಹಳವಾಗಿ ಹೊಗಳಿರುತ್ತದೆ.# ಅದು ಪರಮಪವಿತ್ರವೆಂದು ನಮ್ಮವರ ಭಾವನೆ.

"ಶರೀರವು ಸತ್ತುಹೋದ ಮೇಲೆ ಮನುಷ್ಯನ ಗತಿಯೇನಾಗುತ್ತದೆ?" ಎಂಬ ಪ್ರಶ್ನೆಗೆ ಈಗ ಯಮನು ಉತ್ತರವನ್ನು ಹೇಳುತ್ತಾನೆ; "ಜ್ಞಾನಿಯು ಹುಟ್ಟುವದೂ

* ಹಿಂದಿನ ಉಪನ್ಯಾಸದಲ್ಲಿ ಹೇಳಿರುವ ವಿಷಯವೇ ಇದು.

# ಕಠ, ಪ್ರಶ್ನ, ಮುಂಡಕ, ಮಾಂಡೂಕ್ಯ, ತೈತ್ತಿರೀಯ, ಛಾಂದೋಗ್ಯ - ಈ ಉಪನಿಷತ್ತುಗಳಲ್ಲಿ ಓಂಕಾರದ ವಿವರವಿದೆ; ಭಕ್ತಿಯೋಗದಲ್ಲಿ ಸ್ವಾಮಿಗಳೂ ಇದರ ವಿಷಯವಾದ ವಿವರವನ್ನು ಸ್ವಲ್ಪ ಕೊಟ್ಟಿರುತ್ತಾರೆ.

ಇಲ್ಲ, ಸಾಯುವದೂ ಇಲ್ಲ, ಅದು ಏತರಿಂದಲೂ ಆಗಿರುವದಿಲ್ಲ, ಅದರಿಂದಲೂ ಯಾವದೂ ಆಗಿರುವದಿಲ್ಲ. ಹುಟ್ಟಿಲ್ಲದೆ, ನಿತ್ಯನಾಗಿ ಎಂದೆಂದಿಗೂ ಇದ್ದುಕೊಂಡಿರುವ ಈ ಪುರಾತನನು ಶರೀರವು ನಾಶವಾದರೂ ಎಂದಿಗೂ ನಾಶವಾಗಲಾರನು. ಕೊಲ್ಲುವಾತನು ತಾನು ಕೊಲ್ಲಲಾಪೆನೆಂದು ಭಾವಿಸಿಕೊಂಡರೆ, ಅಥವಾ ಕೊಲ್ಲಿಸಿಕೊಂಡಾತನು ಹತನಾದೆನೆಂದು ಭಾವಿಸಿಕೊಂಡರೆ, ಅವರಿಬ್ಬರಿಗೆನಿಜವು ತಿಳಿಯಲಿಲ್ಲ; ಏಕೆಂದರೆ ಆತ್ಮನು ಕೊಲ್ಲುವದೂಇಲ್ಲ, ಕೊಲ್ಲಲ್ಪಡುವದೂ ಇಲ್ಲ." (1–2–18,19) ಎಂಥ ಅದ್ಭುತವಾದ ಉತ್ತರವಿದು! ಇಲ್ಲಿ ಮಂತ್ರದ ಮೊದಲನೆಯ ಪಾದದಲ್ಲಿರುವ 'ಜ್ಞಾನಿ ಎಂಬ ವಿಶೇಷಣವನ್ನು ತಾವುಗಳು ಲಕ್ಷ್ಯವಿಟ್ಟುನೋಡಬೇಕು. ಜ್ಞಾನವೆಂಬುದೆಲ್ಲವೂ, ಪರಿಶುದ್ಧಿಯೆಂಬುದೆಲ್ಲವೂ, ಆತ್ಮದಲ್ಲಿ ಆಗಲೇ ಇದ್ದುಕೊಂಡಿರುವದೆಂಬುದು ನಮಗೆ ಮುಂದೆ ಗೊತ್ತಾಗುವದು; ಅದು ಕೆಲವು ವೇಳೆಗಳಲ್ಲಿ ಸ್ವಲ್ಪಕಡಿಮೆಯಾಗಿ ವ್ಯಕ್ತವಾಗಬಹುದು, ಕೆಲವು ವೇಳೆಗಳಲ್ಲಿ ಕಡಿಮೆಯಾಗಿ ವ್ಯಕ್ತವಾಗಿರಬಹುದು; ಇಷ್ಟೇ ತಾರತಮ್ಯವಲ್ಲದೆ ಬೇರೆಯಿಲ್ಲ. ಒಬ್ಬ ಮನುಷ್ಯನಿಗೂ ಇನ್ನೊಬ್ಬನಿಗೂ ಸೃಷ್ಟಿಯಲ್ಲಿರುವ ಪದಾರ್ಥಗಳಿಗೆಲ್ಲ ಇರುವ ತಾರತಮ್ಯವು ಇವುಗಳ ಪರಿಮಾಣದಲ್ಲಿರುವದೇ ಹೊರತು ಜಾತಿಯಲ್ಲಿರುವದಿಲ್ಲ. ಪ್ರತಿಯೊಬ್ಬನಿಗೂ ಅಧಿಷ್ಠಾನವಾಗಿರುವ ಪರಮಾರ್ಥವು ಆ ಒಂದು ನಿತ್ಯಾನಂದವೂ ನಿತ್ಯಶುದ್ಧವೂ ನಿತ್ಯಮುಕ್ತವೂ ಆಗಿರುವ ನಿತ್ಯವಸ್ತುವೇ. ಮಹಾತ್ಮನಲ್ಲಾಗಲಿ ಪಾಪಿಯಲ್ಲಾಗಲಿ ಸುಖಿಗಳಲ್ಲಾಗಲಿ, ಸುಂದರ ವಸ್ತುಗಳಲ್ಲಾಗಲಿ ವಿಕಾರವಾಗಿ ತೋರುವ ವಸ್ತುಗಳಲ್ಲಾಗಲಿ, ಮನುಷ್ಯರಲ್ಲಾಗಲಿ ಪ್ರಾಣಿಗಳಲ್ಲಾಗಲಿ, ಅದೇ ಆತ್ಮನು, ಎಲ್ಲೆಲ್ಲಿಯೂ ಅದೇ ಆ ದೇವನೇ. ತೋರುವ ತಾರತಮ್ಯವೆಲ್ಲ ಅಭಿವ್ಯಂಜಕ ಶಕ್ತಿಯಿಂದ ಆಗಿರುತ್ತದೆ, ಕೆಲವರಲ್ಲಿ ಅದು ಹೆಚ್ಚು ಅಭಿವ್ಯಕ್ತವಾಗಿರುತ್ತದೆ. ಮತ್ತೆ ಕೆಲವರಲ್ಲಿ ಕಡಿಮೆಯಾಗಿ ಅಭಿವ್ಯಕ್ತವಾಗಿರುತ್ತದೆ; ಆದರೆ ಈ ಅಭಿವ್ಯಕ್ತಿ ತಾರತಮ್ಯದಿಂದ ಆತ್ಮನ ಮೇಲೆ ಯಾವ ಪರಿಣಾಮವೂ ಆಗಿರುವದಿಲ್ಲ. ಒಬ್ಬನು ಇನ್ನೊಬ್ಬನಿಗಿಂತ ಉಡುಪುಗಳಲ್ಲಿ ಹೆಚ್ಚುಗಾರಿಕೆಯನ್ನು ತೋರಿಸಿಕೊಳ್ಳಬಹುದು. ಅವರ ಶರೀರದಲ್ಲಿ ಯಾವ ಹೆಚ್ಚುಕಡಿಮೆಯೂ ಇರುವದೇ ಇಲ್ಲ, ಉಡುಪಿನಲ್ಲಿಯೇ ಹೆಚ್ಚು ಕಡಿಮೆಯೆಂಬುದಿರುತ್ತದೆ. ಒಳ್ಳೆಯದು, ಕೆಟ್ಟದ್ದು – ಎಂಬ ತೀರ ವಿಭಿನ್ನವಾದ ಪದಾರ್ಥಗಳು ಇರುವದೆಂದು ಇಡಿಯ ವೇದಾಂತ ಶಾಸ್ತ್ರದಲ್ಲಿ ಎಲ್ಲಿಯೂ ಒಪ್ಪಿರುವದಿಲ್ಲವೆಂಬುದನ್ನು ನಾವು ಇಲ್ಲಿ ನೆನಪಿಗೆ ತಂದುಕೊಳ್ಳುವದು ಒಳ್ಳೆಯದು; ಅದೇ ವಸ್ತುವನ್ನೇ ನಾವು ಒಂದು ವೇಳೆ ಒಳ್ಳೆಯದೆಂದೂ ಒಂದು ವೇಳೆ ಕೆಟ್ಟದ್ದೆಂದೂ ಕರೆಯುತ್ತಿರುವದು. ಈ ತಾರತಮ್ಯವು ಕೂಡ ಪರಿಮಾಣದಲ್ಲಿ

ಮಾತ್ರವೇ ಆಗಿರುತ್ತದೆ. ಇಂದು ನಾನು ಯಾವದನ್ನು ಸುಖಕಾರಕವೆಂದು ಭಾವಿಸಿರುವೆನೋ ಅದನ್ನೇ ಅನುಕೂಲವಾದ ಬೇರೆಯ ಸಂದರ್ಭಗಳಲ್ಲಿ ದುಃಖಕರವೆಂದು ಭಾವಿಸಬಹುದು; ನಮ್ಮ ಚಳಿಯನ್ನು ಹೋಗಲಾಡಿಸಿ ಬೆಚ್ಚಗಿರಿಸಬಲ್ಲ ಬೆಂಕಿ ನಮ್ಮನ್ನು ಸುಡುವದಕ್ಕೂ ಬರುತ್ತದೆ. ಈ ರೀತಿಲ್ಲಿ ಆತ್ಮವು ಪರಿಶುದ್ಧವೂ ನಿತ್ಯಮುಕ್ತವೂ ಆಗಿರುವದರಿಂದ ಪಾಪಕರ್ಮವನ್ನು ಮಾಡುತ್ತಿರುವಾತನು ತನ್ನ ಸ್ವರೂಪವನ್ನೇ ತಾನು ಮರೆಮಾಚಿಕೊಳ್ಳುತ್ತಿದ್ದಾನೆ. ಅವನಿಗೆ ತನ್ನ ಸ್ವರೂಪವೇ ತಿಳಿಯದೆ ಇರುತ್ತದೆ. ಖೂನಿಮಾಡುವವನಲ್ಲಿ ಕೂಡ ಪರಿಶುದ್ಧಾತ್ಮವು ಇದ್ದುಕೊಂಡೇ ಇರುತ್ತದೆ; ಅದು ಮಡಿಯುವದಿಲ್ಲ. ತಪ್ಪೆಲ್ಲ ಅವನದೇ. ಏಕೆಂದರೆ ಅವನು ಅದನ್ನು ವ್ಯಕ್ತಗೊಳಿಸಲಾರದೆ ಹೋದನು. ಅದನ್ನು ಮುಚ್ಚಿ ಹಾಕಿಬಿಟ್ಟಿದ್ದನು. ತಾನು ಕೊಲ್ಲಲ್ಪಟ್ಟೆನೆಂದು ಭಾವಿಸುವವನಲ್ಲಿಯೂ ಆತ್ಮವು ಕೊಲ್ಲಲ್ಪಡುವದಿಲ್ಲ; ಅದು ಶಾಶ್ವತವಾಗಿರುತ್ತದೆ. ಅದನ್ನು ಎಂದಿಗೂ ಕೊಲ್ಲುವದಕ್ಕಾಗುವದಿಲ್ಲ, ನಾಶಗೊಳಿಸುವದಕ್ಕಾಗುವದಿಲ್ಲ. "ಅಣುವಿಗಿಂತ ಎಷ್ಟೋ ಅಣುವಾಗಿ ದೊಡ್ಡದಕ್ಕಿಂತಲೂ ಎಷ್ಟೋ ದೊಡ್ಡದಾಗಿ ಈ ಸರ್ವೇಶ್ವರನು ಪ್ರತಿಯೊಬ್ಬ ಮಾನವನ ಹೃದಯದಲ್ಲಿಯೂ ಇದ್ದುಕೊಂಡಿರುತ್ತಾನೆ. ಪಾಪ ರಹಿತರಾದವರು ಶೋಕವನ್ನೆಲ್ಲ ಹೋಗಲಾಡಿಸಿಕೊಂಡು ಈಶ್ವರನ ಅನುಗ್ರಹದಿಂದ ಆತ್ಮನನ್ನು ಕಾಣುವರು. ಶರೀವಿಲ್ಲದವನು, ಆದರೂ ಶರೀರದಲ್ಲಿರುವವನು, ದೇಶರಹಿತನು, ಆದರೂ ದೇಶವನ್ನಾಕ್ರಮಿಸಿರುವವನಂತೆ ಕಾಣುವನು; ಮಹಾ ಪರಿಮಾಣನು, ವಿಭು. ಆತ್ಮನು ಹೀಗಿರುವನೆಂದು ತಿಳಿದ ಧೀರರು ಎಂದಿಗೂ ಶೋಕಕ್ಕೊಳಗಾಗುವದಿಲ್ಲ"* (1-2-20,22).

"ಈ ಆತ್ಮನನ್ನು ಮಾತಿನ ಬಲದಿಂದಾಗಲಿ, ಹೆಚ್ಚಿನ ಬುದ್ಧಿಯಿಂದಾಗಲಿ ವೇದಗಳ ಅಭ್ಯಾಸದಿಂದಾಗಲಿ ಸಾಕ್ಷಾತ್ಕರಿಸುವದಕ್ಕಾಗುವದಿಲ್ಲ" (1-2-23) ಇದೊಂದು ಬಹು ದಿಟ್ಟತನದ ವಾಕ್ಯವು. ನಾನು ನಿಮಗೆ ಈ ಮೊದಲೇ# ಹೇಳಿರುವಂತೆ ಋಷಿಗಳು ಒಳ್ಳೆಯ ಧೀರರಾದ ಜಿಜ್ಞಾಸುಗಳು. ಅವರು ಎಲ್ಲಿಗೂ ಇಷ್ಟೇ ಸರಿ ಎಂದು ನಿಲ್ಲುತ್ತಿರಲಿಲ್ಲ. ಇಂಡಿಯಾ ದೇಶದಲ್ಲಿ ಈ **ವೇದಗಳನ್ನು** ನಿಮ್ಮ ದೇಶದಲ್ಲಿ ಕ್ರಿಸ್ತಿಯರು **ಬೈಬಲು**ಗ್ರಂಥವನ್ನು ಗೌರವಿಸುವದಕ್ಕಿಂತಲೂ ಹೆಚ್ಚಾಗಿಯೇ ಗೌರವಿಸುತ್ತಾರೆಂಬುದನ್ನು ನೆನಪಿಡಬೇಕು. ನಿಮ್ಮಲ್ಲಿ ಧರ್ಮಗ್ರಂಥವೆಂದರೆ ಯಾವನೋ ಒಬ್ಬ ಮನುಷ್ಯನಿಗೆ ದೇವರ ಅನುಗ್ರಹವಾಗಿ

* ಸ್ವಾಮಿಗಳವರು ಉಪನಿಷದ್ವಚನದ ಅಕ್ಷರಾರ್ಥವನ್ನೇ ಲಕ್ಷ್ಯವಿಟ್ಟು ಭಾಷಾಂತರಿಸದೆ ಭಾವಾರ್ಥವನ್ನು ಮಾತ್ರ ಬರೆಯುತ್ತಾರೆಂಬುದನ್ನು ಯಾವಾಗಲೂ ನೆನಪಿಡಬೇಕು.

# ಮಾಯೆಯೂ ಇಂದ್ರಜಾಲವೂ ಎಂಬ ಉಪನ್ಯಾಸದ 43ನೆಯ ಪುಟವನ್ನು ನೋಡಿ

ಅವನು ಅದನ್ನು ಬರೆದನೆಂಬ ಭಾವನೆಯಿದೆಯಷ್ಟೆ; ಆದರೆ ಇಂಡಿಯಾದಲ್ಲಿ ಜನರ ಭಾವನೆ ಹೇಗಿರುವದೆಂದರೆ, ವೇದದಲ್ಲಿ ಹೇಳಿರುವದರಿಂದಲೇ ಪದಾರ್ಥಗಳು ಇದ್ದುಕೊಂಡಿರುತ್ತವೆ. ವೇದದಲ್ಲಿದ್ದು ವೇದದ ಮೂಲಕವಾಗಿಯೇ ಸೃಷ್ಟಿಯೆಲ್ಲವೂ ಆಗಿರುತ್ತದೆ. ಜ್ಞಾನವೆಂಬುದೆಲ್ಲವೂ ವೇದದಲ್ಲಿಯೇ ಇರುತ್ತದೆ; ಅದರಲ್ಲಿರುವ ಪ್ರತಿಯೊಂದು ಶಬ್ದವೂ ಪವಿತ್ರವಾದದ್ದು, ನಿತ್ಯವಾದದ್ದು, ಆತ್ಮನಷ್ಟೇ ನಿತ್ಯವಾದದ್ದು, ಅನಾದ್ಯನಂತವಾದದ್ದು. ಸೃಷ್ಟಿಕರ್ತನ ಮನಸ್ಸೆಲ್ಲವೂ ಈ ಗ್ರಂಥದಲ್ಲಿಯೇ ನೆಲಸಿಕೊಂಡಿದೆಯೆಂದೂ ಹೇಳಬಹುದು. ವೇದಕ್ಕೆ ಅವರಲ್ಲಿ ಅಷ್ಟು ಗೌರವ! ಇದು ಧರ್ಮವೆಂಬುದೇಕೆ?' ಎಂದರೆ, ವೇದದಲ್ಲಿ ಅದು ಧರ್ಮವೆದು ಹೇಳಿರುವದರಿಂದ; 'ಅದು ಅಧರ್ಮವೆಂಬುದೇಕೆ?' ವೇದದಲ್ಲಿ ಹಾಗೆಂದು ಹೇಳಿರುವದರಿಂದ – ಎನ್ನುವವರು ಆ ಜನರು. ಹೀಗೆಲ್ಲ ಇದ್ದರೂ 'ವೇದಗಳನ್ನು ಬಹಳವಾಗಿ ಅಭ್ಯಾಸ ಮಾಡಿದ ಮಾತ್ರದಿಂದ ತತ್ತ್ವವನ್ನು ತಿಳಿಯುವ ದಕ್ಕಾಗುವದಿಲ್ಲ'ವೆಂದು ಹೇಳಿದ ಈ ಋಷಿಗಳ ಧೈರ್ಯವನ್ನು ನೋಡಿರಿ!

"ಈ ಪರಮೇಶ್ವರನು ಯಾರನ್ನು ಆರಿಸಿಕೊಳ್ಳುವನೋ ಅವನಿಗೆ ತನ್ನ ಸ್ವರೂಪವನ್ನು ತೋರಿಸಿಕೊಳ್ಳುತ್ತಾನೆ" (23). ಹಾಗಾದರೆ ಇದೊಂದು ಬಗೆಯ ಪಕ್ಷಪಾತವಲ್ಲವೆ? ಎಂಬ ಆಕ್ಷೇಪವು ಮುಂದೆ ಬರಬಹುದು. ಆದರೆ ಯಮನು ಇದರ ವಿವರವನ್ನು ಕೊಟ್ಟಿರುತ್ತಾನೆ; "ದುಷ್ಕೃತ್ಯಗಳನ್ನು ಮಾಡುವವರೂ ಮನಶ್ಶಾಂತಿಯಿಲ್ಲದವರೂ ಈ ಪ್ರಕಾಶವನ್ನು ಎಂದಿಗೂ ಕಾಣಲಾರರು" (24) ಯಾರು ಹೃದಯಶುದ್ಧಿಯುಳ್ಳವರಾಗಿರುವರೋ, ಕರ್ಮದಲ್ಲಿ ಶುದ್ಧರಾಗಿರುವರೋ, ಇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಂಡಿರುವರೋ ಅಂಥವರಿಗೆ ಮಾತ್ರ ಈ ಆತ್ಮವು ತೋರಿಕೊಳ್ಳುವದು.

ಇಗೋ, ಇಲ್ಲೊಂದು ಸುಂದರವಾದ ರೂಪಕವು: "ಆತ್ಮನನ್ನು ರಥಿಯೆಂದು ಭಾವಿಸಿ, ಶರೀರವೇ ರಥವೆಂದು ತಿಳಿಯಿರಿ; ಬುದ್ಧಿಯು ಸಾರಥಿಯೆಂದೂ ಮನಸ್ಸೇ ಕಡಿವಾಣವೆಂದೂ ಇಂದ್ರಿಯಗಳೇ ಕುದುರೆಗಳೆಂದೂ ತಿಳಿಯಿರಿ. ಯಾವನ ಕುದುರೆಗಳು ಚೆನ್ನಾಗಿ ಪಳಗಿರುವವೋ ಕಡಿವಾಣವು ಬಲವಾಗಿದ್ದು ಸರಿಯಾದ (ಬುದ್ಧಿಯೆಂಬ) ಸಾರಥಿಯು ಕೈಯಲ್ಲಿರುವವೋ ಅವನು ಆ ವಿಷ್ಣುವಿನ ಪರಮ ಪದವನ್ನು ಮುಟ್ಟುವನು. ಆದರೆ ಯಾರ (ಇಂದ್ರಿಯಗಳೆಂಬ) ಕುದುರೆಗಳು ಹಿಡಿತದಲ್ಲಿರುವದಿಲ್ಲವೋ (ಮನಸ್ಸೆಂಬ) ಕಡಿವಾಣವೂ ವಶದಲ್ಲಿರುವದಿಲ್ಲವೋ ಅವನು ಹಾಳಾಗುತ್ತಾನೆ" (1-3-3 ರಿಂದ 9). ಸರ್ವಭೂತಗಳಲ್ಲಿಯೂ ಇರುವ ಈ ಆತ್ಮನು ಇಂದ್ರಿಯಗಳಿಗೆ ತೋರುವದಿಲ್ಲ; ಆದರೆ ಯಾರ ಮನಸ್ಸು

ಶುದ್ಧವಾಗಿಯೂ ಸೂಕ್ಷ್ಮವಾಗಿಯೂ ಆಗಿರುವದೋ ಅವರು ಮಾತ್ರ ಆತನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಲಾಪರು (1-3-12). ಯಾವ ಶಬ್ದವೂ ಇಲ್ಲದೆ, ಯಾವ ಸ್ಪರ್ಶವೂ ಇಲ್ಲದೆ, ಯಾವ ರೂಪವೂ ಇಲ್ಲದೆ, ಅವ್ಯಯವಾಗಿ, ಸವಿಗೂ ಸ್ಪರ್ಶಕ್ಕೂ ಮೀರಿದ್ದಾಗಿ, ಅನಂತವಾಗಿ, ಆದಿಯಿಲ್ಲದೆ, ಅಂತವಿಲ್ಲದೆ, ಪ್ರಕೃತಿಗಿಂತಲೂ ಆಚೆಯಿರುವದಾಗಿ ಎಂದಿಗೂ ಮಾರ್ಪಡದಿರುವ ಆತನನ್ನು ಯಾವನು ಕಂಡುಕೊಳ್ಳುತ್ತಾನೋ ಅವನು ಮೃತ್ಯುವಿನ ದವಡೆಯಿಂದ ತಪ್ಪಿಸಿಕೊಳ್ಳುತ್ತಾನೆ (1-3-15). ಆದರೆ ಇದು ಕಡುಕಷ್ಟವಾಗಿರುತ್ತದೆ; ಅದು ಕ್ಷೌರದ ಕತ್ತಿಯ ಅಲುಗಿನ ಮೇಲೆ ನಡೆಯುವಂತೆ ಇರುವದು. ಈ ಹಾದಿಯು ಬಹು ದೀರ್ಘವಾಗಿರುತ್ತದೆ, ಅಪಾಯಕರವಾಗಿರುತ್ತದೆ; ಆದರೇನು? ಮುಂದು ಮುಂದಕ್ಕೆ ಪ್ರಯಾಸದಿಂದ ನಡೆಯಿರಿ ನಿರಾಶರಾಗದಿರಿ, ಎಚ್ಚರಗೊಳ್ಳಿರಿ, ಏಳಿರಿ, ಕೊನೆಯ ಮಜಲು ಮುಟ್ಟುವವರೆಗೂ ನಿಲ್ಲದೆ ಪ್ರಯಾಣಮಾಡಿರಿ (1-3-14).

ಉಪನಿಷತ್ತುಗಳಲ್ಲೆಲ್ಲ ಸಾಕ್ಷಾತ್ಕಾರವೆಂಬ ಒಂದೇ ಒಂದು ಪ್ರಧಾನ ವಿಚಾರವಿರುತ್ತದೆ. ಈ ವಿಷಯದಲ್ಲಿ ಎಷ್ಟೋ ಪ್ರಶ್ನೆಗಳು ಆಗಿಂದಾಗ್ಗೆ ಎದ್ದುಕೊಳ್ಳುತ್ತವೆ, ಅದರಲ್ಲಿಯೂ ಈಗಿನವರಿಗೆ ಅವು ಬಹಳವಾಗಿ ಎದ್ದುಕೊಳ್ಳುತ್ತವೆ. ಇದರ ಪ್ರಯೋಜನವೇನೆಂಬುದೊಂದು ಪ್ರಶ್ನೆ; ಇನ್ನೂ ಹಲವು ಪ್ರಶ್ನೆಗಳು ತಲೆದೋರಬಹುದು. ಇವುಗಳಲ್ಲೆಲ್ಲ ನಮಗೆ ಹಿಂದಿನ ವಾಸನೆಯೇ ಉತ್ತೇಜಕವಾಗಿರುವದೆಂದು ಕಂಡುಬರುತ್ತದೆ. ಆಯಾ ಭಾವನೆಗಳ ಸಂಸರ್ಗವೇ ನಮ್ಮ ಮನಸ್ಸಿನ ಮೇಲೆ ಇಂಥ ಅದ್ಭುತಪರಿಣಾಮವನ್ನುಂಟುಮಾಡುತ್ತಿರುವದು. ಯಾರಿಗೆ ಈಶ್ವರನು ಸಗುಣನಾಗಿಯೇ ಇರುವನೆಂದೂ ಜೀವನೂ ಸಗುಣನಾಗಿರುವನೆಂದೂ ಬಾಲ್ಯದಿಂದಲೂ ಕೇಳಿಕೇಳಿ ಅದೆ ಅಭ್ಯಾಸವಾಗಿದೆಯೋ ಅಂಥವರಿಗೆ ಈ ಭಾವನೆಗಳು ಬಹಳ ಕಠಿನವಾಗಿ ಕರ್ಕಶವಾಗಿ ಕಾಣುವದು ಸಹಜವಾಗಿದೆ. ಆದರೂ ಇವುಗಳನ್ನು ಕಿವಿಗೊಟ್ಟು ಕೇಳಿ ಮನನಮಾಡಿದರೆ ಇವೂ ಅವರ ಜೀವನದಲ್ಲಿ ಸೇರಿಕೊಂಡುಬಿಡುತ್ತವೆ, ಆಮೇಲೆ ಅವರಿಗೆ ಇವುಗಳಿಂದ ಯಾವ ಅಂಜಿಕೆಯೂ ಆಗುವದಿಲ್ಲ.

ಮುಖ್ಯವಾಗಿ ತತ್ತ್ವಶಾಸ್ತ್ರದ ಉಪಯೋಗವೇನೆಂಬುದೇ ಸಾಮಾನ್ಯವಾಗಿ ಎದ್ದುಕೊಳ್ಳುವ ದೊಡ್ಡಪ್ರಶ್ನೆ. ಅದಕ್ಕೆ ಒಂದೇ ಒಂದು ಉತ್ತರವಿದೆ; ಉಪಯೋಗವಾಗಿರುವದೆಂಬ ಕಾರಣದಿಂದ ಜನರು ವಿಷಯ ಸುಖಕ್ಕೆ ಹರಿದಾಡುವದು ಒಳ್ಳೆಯದಾದರೆ, ಧರ್ಮ ವಿಚಾರದಿಂದ ಸುಖವು ಯಾರಿಗೆ ಆಗುತ್ತದೆಯೋ ಅವರು ಅದಕ್ಕಾಗಿ ಏತಕ್ಕೆ ಹರಿದಾಡಬಾರದು? ಅನೇಕರಿಗೆ

ಇಂದ್ರಿಯ ಭೋಗಗಳಿಂದ ಸಂತೋಷವಾಗುವದರಿಂದ ಅವರು ಅದನ್ನು ಹುಡುಕಿಕೊಂಡು ಹೋಗುತ್ತಾರೆ; ಆದರೆ ಮತ್ತೆ ಕೆಲವರಿಗೆ ಅವು ಬೇಕಾಗದೆ ಹೋಗಬಹುದು, ಅವರಿಗೆ ಇನ್ನೂ ಹೆಚ್ಚಿನ ಭೋಗವು ಬೇಕೆನ್ನಿಸಬಹುದು. ನಾಯಿಗೆ ತಿನ್ನುವದು, ಕುಡಿಯುವದು ಎರಡರಲ್ಲಿಯೇ ಸುಖ. ಎಲ್ಲವನ್ನೂ ಬಿಟ್ಟು ಕೆಲಕೆಲವು ನಕ್ಷತ್ರಗಳ ಸ್ಥಾನವನ್ನು ನೋಡುವದಕ್ಕೆಂದು ಒಂದು ಬೆಟ್ಟದ ಮೇಲೆ ವಾಸವಾಗಿರುವ ವಿಜ್ಞಾನ ಶಾಸ್ತ್ರಿಯ ಸುಖವು ಎಂಥದ್ದೆಂಬುದು ನಾಯಿಗೆ ಎಂದಿಗೂ ತಿಳಿಯುವದಕ್ಕೆ ಆಗಲಾರದು. ಆದ್ದರಿಂದ ನಾಯಿಯು ನಗುತ್ತಾ 'ಇವನೆಂಥ ಹುಚ್ಚನು!' ಎಂದುಕೊಳ್ಳಬಹುದು. ಅಯ್ಯೋ ಪಾಪ, ಈ ಬಡ ವಿಜ್ಞಾನಿಗೆ ಮದುವೆಯಾಗುವಷ್ಟು ಹಣವು ಕೂಡ ಇಲ್ಲದೆ, ಅವನು ಒಂಟಿಗನಾಗಿಯೇ ಇದ್ದರೂ ಇರಬಹುದು. ಆಗಲಂತೂ ನಾಯಿ ಅವನನ್ನು ಹಾಸ್ಯ ಮಾಡಲೂಬಹುದು. ಆದರೆ ವಿಜ್ಞಾನಶಾಸ್ತ್ರಜ್ಞನು 'ಅಪ್ಪ ನಾಯಕ, ನಿನಗೆ ಇಂದ್ರಿಯಗಳಲ್ಲಿಯೇ ಸುಖ; ನಿನಗೆ ಅಲ್ಲಿಂದಾಚೆಗೆ ಮತ್ತೇನೂ ತಿಳಿಯದು; ಆದರೆ ನನಗೆ ಮಾತ್ರ ಇದೇ ಅತ್ಯಂತ ಸುಖವಾದ ಜೀವನವಾಗಿರುತ್ತದೆ. ನಿನಗೆ ನಿನ್ನ ರೀತಿಯಲ್ಲಿ ಸುಖವನ್ನು ಸಂಪಾದಿಸುವ ಹಕ್ಕಿದ್ದರೆ ನನಗೆ ನನ್ನ ರೀತಿಯಲ್ಲಿ ಸಂಪಾದಿಸಿಕೊಳ್ಳುವದಕ್ಕೆ ಅಷ್ಟೇ ಹಕ್ಕಿದೆ ಎನ್ನುತ್ತಾನೆ. ನಮ್ಮ ವಿಚಾರದ ಮಟ್ಟಕ್ಕೆ ಇಡೀ ಲೋಕವನ್ನೇ ಕಟ್ಟಿಹಾಕಿ ನಮ್ಮ ಮನಸ್ಸನ್ನೇ ಇಡಿಯ ವಿಶ್ವವನ್ನು ಅಳೆಯುವ ಸಾಧನವೆಂತ ಭಾವಿಸಿರುವದೇ ಇಲ್ಲಿ ತಪ್ಪು. ನಿಮಗೆ ಹಳೆಯ ಇಂದ್ರಿಯಾರ್ಥಗಳು ಅತ್ಯಂತ ಪ್ರಿಯವಾಗಿರಬಹುದು, ಆದರೆ ನನ್ನ ಪ್ರೀತಿಯೂ ಅದರಲ್ಲಿಯೇ ಇರಬೇಕೆಂಬ ನಿಯಮವೇನೂ ಇಲ್ಲ; ಅದೂ ಹಾಗೆಯೇ ಇರಬೇಕೆಂದು ನೀವು ಹೇಳಿದರೆ ಅದಕ್ಕೆ ನನ್ನ ಸಮ್ಮತಿಯಿರುವದಿಲ್ಲ. ಲೌಕಿಕರಾದ ಉಪಯೋಗವಾದಿಗಳಿಗೂ ಧಾರ್ಮಿಕನಿಗೂ ಇರುವ ತಾರತಮ್ಯವೇ ಇದು. ಮೊದಲನೆಯವನು "ನೋಡಿ ನಾನು ಎಷ್ಟು ಸುಖಿಯಾಗಿದ್ದೇನೆ; ನನಗೆ ಬೇಕಾದಷ್ಟು ಹಣವು ಸಿಕ್ಕುತ್ತದೆ, ನನಗೆ ನಿಮ್ಮ ಧರ್ಮಗಿರ್ಮವೇನೂ ಬೇಕಿರುವದಿಲ್ಲ. ಅದು ಸಿಕ್ಕುವದಲ್ಲ, ಎಟಕುವದೂ ಅಲ್ಲ; ಅದಿಲ್ಲದಿದ್ದರೂ ನಾನು ಸುಖಿಯಾಗಿಯೇ ಇದೇನೆ" ಎನ್ನುತ್ತಾನೆ. ಇದೇನೋ ಒಳ್ಳೆಯದೇ ಆಯಿತು, ಉಪಯೋಗ ವಾದಿಗಳಿಗೆಲ್ಲ ಒಳ್ಳೆಯದೇ ಆಯಿತು. ಆದರೆ ಈ ಲೋಕವು ಭಯಂಕರವಾಗಿರುತ್ತದೆ. ತನ್ನ ನೆರೆಯವರನ್ನು ಗೋಳುಗುಟ್ಟಿಸದೆ ಒಬ್ಬನಿಗೆ ಸುಖವು ಬರುವಹಾಗಿದ್ದರೆ ದೇವರ ಅನುಗ್ರಹದಿಂದ ಅವನಿಗೆ ಹಾಗೇ ಆಗಲೆಂದು ಬಯಸೋಣ. ಆದರೆ ಈತನು ನನ್ನಲ್ಲಿಗೆ ಬಂದು "ನೀನೂ ಹಾಗೆಯೇ ಮಾಡಬೇಕು, ಇಲ್ಲದಿದ್ದರೆ ನೀನು ಹುಚ್ಚನಾಗುವೆ" ಎನ್ನುವದಾದರೆ 'ಹಾಗೆನ್ನಬೇಡ. ಏಕೆಂದರೆ ನಿನಗೆ ಯಾವ

ಪದಾರ್ಥಗಳು ಪ್ರಿಯವಾಗಿರುವವೋ ಅವು ನನಗೆ ಒಂದಿಷ್ಟೂ ಬೇಕಾಗಿರುವದಿಲ್ಲ. ಒಂದೆರಡು ಹಿಡಿ ಬಂಗಾರಕ್ಕಾಗಿ ತಟ್ಟಾಡುವದೊಂದೇ ಕೆಲಸವಾದರೆ ಸಂಸಾರದಲ್ಲಿ ಬಾಳಬೇಕಾದದ್ದೇ ಇಲ್ಲವೆಂದು ನನಗೆನಿಸುತ್ತದೆ. ಅಷ್ಟೇ ಆದರೆ ನಾನು ಸಾಯುವದೇ ಮೇಲಾಗುವದು" ಎಂದು ಹೇಳಬೇಕಾಗುತ್ತದೆ. ಧಾರ್ಮಿಕನು ಕೊಡುವ ಉತ್ತರವೇ ಇದು. ನಿಜವಾಗಿ ನೋಡಿದರೆ ಇಂಥ ಕೆಳಗಿನ ಅಂತಸ್ತಿನ ಆಟವನ್ನೆಲ್ಲ ಆಡಿ ಮುಗಿಸಿದವರಿಗೇ ಧರ್ಮವೆಂಬುದು ಸಾಧ್ಯವಾಗುತ್ತದೆ. ನಮಗೆಲ್ಲ ನಮ್ಮ ನಮ್ಮ ಅನುಭವ ಗಳುಂಟಾಗಬೇಕು, ನಮ್ಮ ಓಟವು ಪೂರ್ತಿಯಾಗಿ ಕೊನೆ ಮುಟ್ಟಬೇಕು. ಈ ಓಟವು ಮುಗಿದ ಮೇಲೆಯೇ ಪರಲೋಕ ವಿಚಾರವು ಮೊದಲಾಗುತ್ತದೆ.

ಇಂದ್ರಿಯ ಭೋಗಗಳಿಗೆ ಮತ್ತೊಂದು ರೂಪವೂ ಬರುವದುಂಟು; ಅದು ಅಪಾಯಕರವಾದದ್ದೂ ಮನಸ್ಸನ್ನು ಸೆಳೆಯುವಂಥದ್ದೂ ಆಗಿರುತ್ತದೆ. ಹಿಂದಿನ ಕಾಲದಿಂದಲೂ ಪ್ರತಿಯೊಂದು ಧರ್ಮದಲ್ಲಿಯೂ ಈ ಅಭಿಪ್ರಾಯ ವಿದ್ದುಕೊಂಡಿರುವದು ಕಂಡುಬರುತ್ತದೆ; ಈ ಸಂಸಾರದ ದುಃಖವೆಲ್ಲ ಅಡ್ಡಹೋಗಿ ಅದರಲ್ಲಿರುವ ಸುಖಸಂತೋಷಗಳು ಮಾತ್ರ ಉಳಿದುಕೊಂಡು ಈ ಭೂಮಿಯೇ ಸ್ವರ್ಗವಾಗಿ ಪರಿಣಮಿಸುವದಂತೆ! ಇದರಲ್ಲಿ ನನಗೆ ನಂಬಿಕೆ ಇಲ್ಲ. ಈ ಭೂಲೋಕವು ಯಾವಾಗಲೂ ಮರ್ತ್ಯಲೋಕವಾಗಿಯೇ ಇರುತ್ತದೆ. ಇದನ್ನು ಕೇಳಿದರೆ ಬಹಳ ದಿಗಿಲಾಗುವದು ನಿಜ, ಆದರೆ ಇದನ್ನು ತಪ್ಪಿಸಿಕೊಳ್ಳುವದಕ್ಕೆ ಉಪಾಯವೇನೂ ನನಗೆ ಕಾಣಿಸುವದಿಲ್ಲ. ಈ ಲೋಕದಲ್ಲಿರುವ ದುಃಖವು ಶರೀರದಲ್ಲಿ ವಾಯುವಿನಂತೆ ಇರುತ್ತದೆ. ಒಂದು ಕಡೆಯಿಂದ ತಳ್ಳಿದರೆ ಅದು ಮತ್ತೊಂದು ಕಡೆಗೆ ಹೋಗುತ್ತದೆ, ಅಲ್ಲಿಂದಲೂ ತಳ್ಳಿದರೆ ಮತ್ತೆಲ್ಲಿಯೋ ಒಂದು ಕಡೆ ಕಾಣಿಸಿಕೊಳ್ಳುತ್ತದೆ. ಏನೇ ಮಾಡಿರಿ, ಅದು ಇದ್ದುಕೊಂಡೇ ಇರುತ್ತದೆ. ಅತಿ ಪ್ರಾಚೀನ ಕಾಲದಲ್ಲಿ ಜನರು ಕಾಡಿನಲ್ಲಿದ್ದುಕೊಂಡು ಒಬ್ಬರನ್ನೊಬ್ಬರು ತಿನ್ನುತ್ತಿದ್ದರು; ಈಗಿನ ಕಾಲದಲ್ಲಿ ಒಬ್ಬರ ಖಂಡವನ್ನೇನೂ ಮತ್ತೊಬ್ಬರು ತಿನ್ನುವದಿಲ್ಲ, ಆದರೆ ಜನರು ಒಬ್ಬರನ್ನೊಬ್ಬರು ಮೋಸಪಡಿಸುತ್ತಾರೆ. ಮೋಸದಿಂದ ಇಡಿಯ ದೇಶಗಳೇ, ಇಡಿಯ ನಗರಗಳೇ, ಹಾಳಾಗುತ್ತವೆ. ಇದನ್ನು ನೋಡಿದರೆ ಅಷ್ಟೇನೂ ಮುನ್ನಡೆ ಕಾಣಿಸುವದಿಲ್ಲ. ನೀವು ಲೋಕದ ಮುನ್ನಡೆ ಎಂದು ಕರೆಯುತ್ತಿರುವದು ಆಶೆಗಳನ್ನು ಹೆಚ್ಚಿಸಿಕೊಳ್ಳುವದೇ ಹೊರತು ಮತ್ತೇನಾದರೂ ಬೇರೆಯಾಗಿರುವದೆಂದು ನನಗೆ ತೋರುವದಿಲ್ಲ. ನನಗಂತೂ ಒಂದು ವಿಷಯವು ಒಡೆದು ಕಾಣುತ್ತದೆ, ಆಶೆಗಳಿಂದ ಎಲ್ಲಾ ಬಗೆಯ ದುಃಖವೂ ಉಂಟಾಗುತ್ತದೆ; ಯಾವಾಗಲೂ ಏನಾದರೂ ಬೇಕೆಂದು ಬೇಡುತ್ತಾ, ಯಾವದನ್ನು ಕಂಡರೂ ಅದು ತನಗೆ ಬೇಕೆಂದು ಹಂಬಲಿಸುತ್ತಾ, ಇನ್ನೂ ಬೇಕು, ಮುನ್ನೂಬೇಕು ಎಂಬ ತಿರುಕನ ಸ್ಥಿತಿಯೇ

ಇದು. ನಮ್ಮ ಬಯಕೆಗಳನ್ನು ಪರಿಪೂರ್ತಿಗೊಳಿಸುವ ಶಕ್ತಿಯು ನಿಯತಾಂತರ ಶ್ರೇಣಿಯಲ್ಲಿ* ಹೆಚ್ಚಿದರೆ ಬಯಕೆಗಳನ್ನು ಪರಿಪೂರ್ತಿಗೊಳಿಸುವ ಶಕ್ತಿಯು ನಿಯತಗುಣೋತ್ತರ ಶ್ರೇಣಿಯಲ್ಲಿ ಹೆಚ್ಚಿಕೊಳ್ಳುತ್ತದೆ. ಈ ಲೋಕದಲ್ಲಿರುವ ಒಟ್ಟು ಸುಖವಾಗಲಿ ಒಟ್ಟು ದುಃಖವಾಗಲಿ ಯಾವಾಗಲೂ ಒಂದೇ ಆಗಿರುವದೆಂದರೂ ಕನಿಷ್ಠಪಕ್ಷಕ್ಕೆ ಒಪ್ಪಿಕೊಳ್ಳಬೇಕಾಗುತ್ತದೆ. ಸಮುದ್ರದಲ್ಲಿ ಒಂದು ಅಲೆ ಎದ್ದುಕೊಂಡರೆ ಮತ್ತೆಲ್ಲಿಯೋ ಒಂದು ಕಡೆ ಅಷ್ಟು ನೀರು ಒಳಕ್ಕೆ ಹೋಗಿರಬೇಕು.ಒಬ್ಬ ಮನುಷ್ಯನಿಗೆ ಸುಖವುಂಟಾದರೆ ಮತ್ತೊಬ್ಬನಿಗೆ ಅಥವಾ ಮತ್ತೊಂದು ಪ್ರಾಣಿಗೆ ದುಃಖವುಂಟಾಗುತ್ತದೆ. ಮನುಷ್ಯರ ಸಂಖ್ಯೆಯು ಹೆಚ್ಚುತ್ತಿರುವ ಹಾಗೆಯೇ ಕೆಲವು ಪ್ರಾಣಿಗಳ ಸಂಖ್ಯೆಯು ಕಡಿಮೆಯಾಗುತ್ತಾ ಬರುತ್ತಿದೆ; ಅವುಗಳನ್ನು ಕೊಂದು ಅವುಗಳ ನೆಲವನ್ನು ನಾವು ಸ್ವಾಧೀನಪಡಿಸಿಕೊಳ್ಳುತ್ತಿದ್ದೇವೆ. ಅವುಗಳಿಗೆ ಬೇಕಾದ ಪೋಷಕ ಸಾಮಗ್ರಿಯನ್ನು ನಾವು ಕಸಿದುಕೊಳ್ಳುತ್ತಿದ್ದೇವೆ. ಹೀಗಿರುವಲ್ಲಿ ಸುಖವು ಹೆಚ್ಚುತ್ತಿದೆಯೆಂದು ಹೇಗೆ ಹೇಳಲಾದೀತು? ಬಲವಾದ ವಂಶದ ಜನರು ನಿರ್ಬಲರನ್ನು ತಿಂದುಹಾಕುತ್ತಿದ್ದಾರೆ; ಆದರೆ ಅಷ್ಟು ಮಾತ್ರದಿಂದ ಬಲಿಷ್ಠರಾದವರು ಬಹಳ ಸುಖವಾಗಿರುತ್ತಾರೆಂದು ಎಣಿಸಬಹುದೆ? ಇಲ್ಲ. ಆಮೇಲೆ ಅವರು ಒಬ್ಬರನ್ನೊಬ್ಬರು ಕೊಲ್ಲುವದಕ್ಕೆ ಪ್ರಾರಂಭಿಸುತ್ತಾರೆ. ಹೀಗೆ ವ್ಯವಹಾರ ದೃಷ್ಟಿಯಿಂದ ನೋಡಿದರೆ ಈ ಲೋಕವು ಸ್ವರ್ಗವಾಗುವದೆಂಬುದು ಹೇಗೋ ನನಗೆ ತಿಳಿಯದಾಗಿದೆ. ಎದುರಿಗಿರುವ ವಿಷಯಗಳೆಲ್ಲ ಈ ಅಭಿಪ್ರಾಯಕ್ಕೆ ವಿರುದ್ಧವಾಗಿರುತ್ತದೆ.

ಕೇವಲ ವಿಚಾರ ದೃಷ್ಟಿಯಿಂದ ನೋಡಿದರೂ ಇದು ಸಂಭವವಲ್ಲವೆಂದೇ ನನಗೆ ತೋರುತ್ತದೆ. ಹೇಗೆಂದರೆ ಪರಿಪೂರ್ಣತೆಯೆಂದರೆ ಅನಂತವಾಗಿರುವದು. ನಾವುಗಳು ಈಗಾಗಲೇ ಆ ಅನಂತವಾಗಿದ್ದುಕೊಂಡು ಆ ಅನಂತತತ್ತ್ವವನ್ನು ಅಭಿವ್ಯಕ್ತಿಗೊಳಿಸುವದಕ್ಕೆ ಪ್ರಯತ್ನ ಮಾಡುತ್ತಿರುತ್ತೇವೆ. ನೀವೂ, ನಾನೂ ಎಲ್ಲಾ ಪ್ರಾಣಿಗಳೂ ಅದನ್ನು ಅಭಿವ್ಯಕ್ತಿಗೊಳಿಸುವದಕ್ಕೆ ಪ್ರಯತ್ನಮಾಡುತ್ತಿರುತ್ತೇವೆ. ಇಲ್ಲಿಯವರೆಗೆ ಎಲ್ಲವೂ ಸರಿಹೋಯಿತು. ಆದರೆ ಈ ಅಂಶದಿಂದ ಕೆಲವರು ಜರ್ಮನ ತತ್ತ್ವಜ್ಞರು ಒಂದಾನೊಂದು ವಿಲಕ್ಷಣವಾದವನ್ನು# ಕಲ್ಪಿಸಿರುತ್ತಾರೆ. ವ್ಯಕ್ತೀಕರಣವು ಬರುಬರುತ್ತಾ ಬೆಳದುಕೊಂಡು ನಾವು ಒಂದಾನೊಂದು ಕಾಲಕ್ಕೆ

* 3, 5,7, 9, 11 ಹೀಗೆ ಗೊತ್ತಾದ ಅಂತರದಿಂದ ಸಂಖ್ಯೆಗಳು ಹೆಚ್ಚುತ್ತಿರುವದು ನಿಯತಾಂತರಶ್ರೇಣಿ; 3,6,12,24,48 – ಹೀಗೆ ಮುಂದುಮುಂದಕ್ಕೆಹೋಗುತ್ತಾ ಒಂದು ಗೊತ್ತಾದ ಗುಣದಿಂದ ಬರುವದು ನಿಯತಗುಣೋತ್ತರಶ್ರೇಣಿ.

# ಈ ವಾದದಲ್ಲಿಪರಿಪೂರ್ಣತ್ವವು ಇನ್ನು ಮೇಲೆ ಆಗಬೇಕೇ ಹೊರತು ಮೊದಲೇ ಇರುವುದಿಲ್ಲ.

ಪರಿಪೂರ್ಣ ವ್ಯಕ್ತತ್ವವನ್ನು ಹೊಂದಿ ಪೂರಣಸಿದ್ಧರಾಗುವೆವೆಂದು ಅವರ ಅಭಿಪ್ರಾಯವಿರುತ್ತದೆ. ಪೂರ್ಣವ್ಯಕ್ತತ್ವವೆಂದರೇನರ್ಥ? ಪೂರ್ಣತ್ವವೆಂದರೆ ಅನಂತವಾಗುವದು, ವ್ಯಕ್ತವೆಂದರೆ* ಪರಿಚ್ಛಿನ್ನರಾಗುವೆವು – ಎಂದು ಹೇಳಿದಂತೆ ಆಯಿತು ಇದು ವ್ಯಾಹತವು, ತನಗೆ ತಾನೇ ವಿರುದ್ಧವಾಗಿರುವ ಮಾತು. ಇಂಥ ವಾದವು ಮಕ್ಕಳಿಗೆ ಸಂತೋಷದಾಯಕವಾಗಬಹುದು; ಆದರೆ ಇದರಿಂದ ಅವರ ಮನಸ್ಸಿಗೆ ಸುಳ್ಳುಗಳನ್ನು ತುಂಬಿ ವಿಷವೆರೆದಂತೆ ಆಗುತ್ತದೆ; ಆದರಿಂದ ಅದು ತೀರ ಕೆಟ್ಟದ್ದಾದ್ದರಿಂದ ಧರ್ಮವೆನಿಸಲಾರದು. ಆದರೆ ಆ ಲೋಕವೆಂಬುದು ಕೀಳು ಸ್ಥಿತಿಗೆ ಇಳಿದಿರುವದೆಂಬುದು ನಮಗೆ ತಿಳಿದಿರುವ ವಿಷಯುವಾಗಿರುತ್ತದೆ. ಮಾನವನು ಈಶ್ವರ ಸ್ಥಿತಿಯಿಂದ ಕೆಳಕ್ಕೆ ಇಳಿದಿರುತ್ತಾನೆ. **ಆಡಾಮನು**# ಪರಿಶುದ್ಧ ಸ್ಥಿತಿಯಿಂದ ಚ್ಯುತನಾದನು-ಎಂಬುದು ನಮಗೆ ತಿಳಿದಿರುವ ವಿಷಯವು. ಮನುಷ್ಯನು ಮೇಲಿನ ಸ್ಥಿತಿಯಿಂದ ಕೆಳಕ್ಕೆ ಬಿದ್ದಿರುವನೆಂದು ಹೇಳದ ಧರ್ಮವೇ ಈಗ ಇಲ್ಲ. ನಾವು ಪಶುತ್ವದವರೆಗೂ ಇಳಿದಿರುತ್ತೇವೆ. ಈಗ ಈ ಬಂಧದಿಂದ ಬಿಡುಗಡೆಯಾಗುವದಕ್ಕೆ ಮೇಲಕ್ಕೆ ಹತ್ತುತ್ತಿದ್ದೇವೆ. ಆದರೆ ಆ ಅನಂತವನ್ನು ಇಲ್ಲಿ ವ್ಯಕ್ತೀಕರಿಸುವದೆಂಬುದು ಆಗದ ಮಾತು. ನಾವು ಆದಷ್ಟು ಕಷ್ಟಪಟ್ಟು ಪ್ರಯತ್ನಮಾಡಿ ನೋಡುವೆವು. ಆದರೆ ಒಂದಾನೊಂದು ಕಾಲಕ್ಕೆ ನಮಗೆ ಇಂದ್ರಿಯ ಬದ್ಧರಾಗಿರುವವರೆಗೂ ಇಲ್ಲಿ ಪರಿಪೂರ್ಣತ್ವವನ್ನು ಹೊಂದುವದೆಂಬುದು ಅಸಾಧ್ಯವೆಂದು ಕಂಡುಬರುವದು. ಆಮೇಲೆ ನಮ್ಮ ಮೊದಲಿನ ಅನಂತತ್ವದ ಸ್ಥಿತಿಗೆ ಹಿಂತಿರುಗುವ ಕಹಳೆಯನ್ನು ಊದಿದಂತಾಗುತ್ತದೆ.

ಇದಕ್ಕೇ ವೈರಾಗ್ಯವೆಂದು ಹೆಸರು. ನಾವು ಈ ಕಷ್ಟದೊಳಕ್ಕೆ ಯಾವ ಕ್ರಮದಿಂದ ಬಂದು ಸೇರಿಕೊಂಡಿರುವೆವೋ ಆ ಕ್ರಮವನ್ನು ತಲೆಕೆಳಗು ಮಾಡಿ ಇದರಿಂದ ಪಾರಾಗಬೇಕಾಗುವದು. ಆಗಲೇ ನೀತಿಯೂ ಔದಾರ್ಯವೂ ಪ್ರಾರಂಭವಾಗುವವು. ನೀತಿ ಶಾಸ್ತ್ರಗಳ ಮೂಲಸೂತ್ರವೇನು? 'ನಾನಲ್ಲ, ನೀನು'. ಈ 'ನಾನು' ಎಂಬುದು ಅದರ ಭಿತ್ತಿಯಾದ ಅನಂತದಿಂದ ಹೊರಕ್ಕೆ ಬಂದು ತನ್ನ ಸ್ವರೂಪವನ್ನು ಬಾಹ್ಯಪ್ರಪಂಚದಲ್ಲಿ ವ್ಯಕ್ತೀಕರಿಸುವದಕ್ಕೆ ಪ್ರಯತ್ನಿಸುತ್ತಿರುತ್ತದೆ. ಈ ಸಣ್ಣ 'ನಾನು' ಈ ವ್ಯಕ್ತೀಕರಣದ ಫಲಿತಾಂಶವು, ಇದು ಹಿಂತಿರುಗಿ ತನ್ನ ಸ್ವರೂಪವಾದ ಅನಂತವನ್ನು ಸೇರಿಕೊಳ್ಳಬೇಕಾಗಿದೆ. 'ನಾನಲ್ಲವಣ್ಣ, ನೀನು' ಎಂದು ನೀವು ಹೇಳುತ್ತಿರುವ ಒಂದೊಂದು ಸಲವೂ ನೀವು ಹಿಂತಿರುಗುವದಕ್ಕೆ ಪ್ರಯತ್ನಮಾಡುತ್ತಿರುವಿರಿ, 'ನಾನು, ನೀನಲ್ಲ' ಎಂದು ಹೇಳುತ್ತಿರುವ ಪ್ರತಿಯೊಂದು ಸಲವೂ ಆ ಅನಂತವನ್ನು

# ಜ್ಞಾನಯೋಗ ಮೊದಲನೆಯ ಭಾಗ 21ನೆಯ ಪುಟದ ಟಿಪ್ಪಣೆಯನ್ನು ನೋಡಿರಿ.

ಇಂದ್ರಿಯಪ್ರಪಂಚದಲ್ಲಿ ವ್ಯಕ್ತೀಕರಿಸುವ ತಪ್ಪುಹಾದಿಯಲ್ಲಿ ಹೆಜ್ಜೆಯನ್ನಿಡುತ್ತಿರುವಿರಿ. ಇದರಿಂದಲೇ ಪ್ರಪಂಚದೊಳಕ್ಕೆ ಹೊಡೆದಾಟವೂ ದುಃಖವೂ ಒಂದು ಸೇರಿಕೊಳ್ಳುತ್ತಿರುವದು; ಆದರೆ ಸ್ವಲ್ಪ ಕಾಲವಾದ ಮೇಲೆ ವೈರಾಗ್ಯವು, ನಿತ್ಯವೈರಾಗ್ಯವು, ಬಂದೇ ತೀರಬೇಕು. ಆಗ ಈ ಸಣ್ಣ 'ನಾನು' ಸತ್ತುಹೋಗಿಬಿಟ್ಟಿರುತ್ತದೆ. ಆಗ ಈ ತುಟುಕುಬಾಳನ್ನು ಅಷ್ಟೊಂದು ಏತಕ್ಕೆ ಮನಸ್ಸಿಗೆ ಹಚ್ಚಿಕೊಳ್ಳಬೇಕು? ಬದುಕಿ ಬಾಳಿ ಈ ಸಂಸಾರದಲ್ಲಿ ಈ ಲೋಕದಲ್ಲಾಗಲಿ ಮತ್ತೊಂದು ಲೋಕದಲ್ಲಾಗಲಿ ಸುಖವಾಗಿರಬೇಕೆಬ ಈ ಬಂಬಲಾಸೆಗಳೆಲ್ಲ ಮರಣಕ್ಕೆ ಕಾರಣವಾಗಿರುವವು.

ನಾವು ಪಶುಗಳಿಂದ ಬೆಳೆದಿರುವದು ನಿಜವಾದರೆ, ಪಶುಗಳೂ ಕೀಳ್ನೆಲೆಗೆ ಇಳಿದಿರುವ ಮನುಷ್ಯರಾಗಿರಬಹುದು. ಹಾಗಲ್ಲವೆಂಬುದು ನಿಮಗೆ ಹೇಗೆ ಗೊತ್ತು? ನಮಗೆ ಮೊದಲೇ ತಿಳಿದಿರುವಂತೆ ವಿಕಾಸವಾದಕ್ಕೆ ಇರುವ ಪ್ರಮಾಣವೆಲ್ಲ ಇಷ್ಟೆ. ಸ್ವಲ್ಪಸ್ವಲ್ಪವಾಗಿ ಮೇಲಕ್ಕೇರುತ್ತಿರುವ ಪ್ರಮಾಣದಲ್ಲಿರುವ ಕೆಲವು ಶರೀರಗಳು ನಮಗೆ ಕಾಣುತ್ತಿರುತ್ತವೆ. ಆದರೆ ಅಷ್ಟರಿಂದಲೇ ಕೆಳಗಿನ ಸ್ಥಿತಿಯಿಂದ ಮೇಲಕ್ಕೇ ಬದಲಾವಣೆಯಾಗುತ್ತಲಿರುವದೆಂದೂ ಪ್ರಕೃತಿಯು ಮೇಲಿನಿಂದ ಕೆಳಕ್ಕೆ ಇಳಿಯುತ್ತಲೇ ಇರುವದಿಲ್ಲವೆಂದೂ ಹೇಳುವದು ಹೇಗೆ? ತರ್ಕವು ಈ ಎರಡಕ್ಕೂ ಹೊಂದುಗಡೆಯಾಗಿರುತ್ತದೆ; ಇಲ್ಲಿ ತತ್ತ್ವವೇನಾದರೂ ಇದ್ದರೆ, ಈ ಶ್ರೇಣಿಯು ಮೇಲಕ್ಕೂ ಕೆಳಕ್ಕೂ ಏರುತ್ತಲೂ ಇಳಿಯುತ್ತಲೂ ಇರುವದೇ ತತ್ತ್ವವೆಂಬುದು ನನ್ನ ನಂಬಿಕೆಯಾಗಿದೆ. ಸಂಕೋಚವಿಲ್ಲದೆ ವಿಕಾಸವು ಹೇಗಾದೀತು? ನಾವು ಮೇಲಿನ ಸ್ಥಿತಿಗೇರಬೇಕೆಂದು ಹೆಣಗಾಡುತ್ತಿರುವದರಿಂದಲೇ ನಾವು ಮೇಲಿನ ಸ್ಥಿತಿಯಿಂದ ಕೆಳಕ್ಕಿಳಿದಿರುವೆವೆಂದು ತೋರಿಬರುತ್ತದೆ. ಹೀಗಿದ್ದೇ ಇರಬೇಕೆಂಬುದೇನೋ ಖಂಡಿತ, ಆದರೆ ಒಳ ವಿವರಗಳು ಬೇರೆ ಬೇರೆಯಾಗಿರಬಹುದು, ಅಷ್ಟೇ. ಕ್ರೈಸ್ತನೂ ಬುದ್ಧನೂ ವೇದಾಂತವೂ ಏಕಕಂಠದಿಂದ ಸಾರಿರುವ ತತ್ತ್ವವನ್ನೇ-ನಾವೆಲ್ಲರೂ ಒಂದಾನೊಂದು ಕಾಲಕ್ಕೆ ಪರಿಪೂರ್ಣತೆಯನ್ನು ಪಡೆಯಲೇಬೇಕು, ಆದರೆ ಈಗಿನ ಅಪೂರ್ಣತ್ವವನ್ನು ಕೈಬಿಟ್ಟೇ ಆ ಸ್ಥಿತಿಯನ್ನು ಪಡೆಯಬೇಕಾಗಿದೆ ಎಂಬ ತತ್ತ್ವವನ್ನೇ-ನಾನು ಯಾವಾಗಲೂ ನಂಬಿರುತ್ತೇನೆ. ಈ ಪ್ರಪಂಚಕ್ಕೆ ಏನೇನೂ ಬೆಲೆಯಿಲ್ಲ. ಎಷ್ಟು ಉತ್ತಮವೆಂದರೂ ಇದು ಪರಮಾರ್ಥದ ಒಂದು ಅಸಹ್ಯವಾದ ವ್ಯಂಗ್ಯ ಚಿತ್ರವು, ಒಂದು ನೆರಳು. ನಾವು ಆ ಪರಮಾರ್ಥಕ್ಕೇ ಹೋಗಬೇಕು. ವೈರಾಗ್ಯವೇ ನಮ್ಮನ್ನು ಅದರ ಬಳಿಗೆ ಕರೆದೊಯ್ಯುತ್ತದೆ.

ನಮ್ಮ ಪರಮಾರ್ಥ ಜೀವನಕ್ಕೆ ವೈರಾಗ್ಯವೇ ನಿಜವಾದ ತಳಹದಿಯು.

ಸಾತ್ವಿಕವಾದ ನಿಜವಾದ ಜೀವನವನ್ನು ನಾವು ಅನುಭವಿಸುತ್ತಿರುವ ಪ್ರತಿಯೊಂದು ಕ್ಷಣವೂ ನಮ್ಮನ್ನು ನಾವು ಮರೆತಾಗಲೇ ಆಗಿರುತ್ತದೆ. ಈ ಸಣ್ಣ ವ್ಯತ್ಯಾಸವು ಸಾಯಲೇಬೇಕು; ಆಗಲೇ ನಾವು ಪರಮಾರ್ಥದಲ್ಲಿರುವೆವೆಂದೂ ಆ ಪರಮಾರ್ಥವೇ ಪರಮೇಶ್ವರನೆಂದೂ ಆತನೇ ನಮ್ಮ ಪರಮಾರ್ಥ ಸ್ವರೂಪವೆಂದೂ ಆತನು ಯಾವಾಗಲೂ ನಮ್ಮೊಳಗೆ ನಮ್ಮೊಡನೆಯೇ ಇರುವನೆಂದೂ ನಮಗೆ ಗೊತ್ತಾಗುತ್ತದೆ. ನಾವು ಆತನಲ್ಲಿಯೇ ಜೀವಿಸುತ್ತಿರೋಣ, ಆತನಲ್ಲಿಯೇ ನಿಷ್ಠೆಯನ್ನು ಪಡೆಯೋಣ. ಅದೊಂದೇ ಪರಮಾನಂದ ಸ್ಥಿತಿಯು, ಅಧ್ಯಾತ್ಮ ಭೂಮಿಕೆಯಲ್ಲಿರುವ ಜೀವನವೇ ನಿಜವಾದ ಜೀವನವು; ನಾವೆಲ್ಲರೂ ಈ ಪರಮಾರ್ಥದ ಸಾಕ್ಷಾತ್ಕಾರಕ್ಕೆ ಪ್ರಯತ್ನಮಾಡೋಣ.

--------

# 9. ನಾನಾತ್ತ್ವದಲ್ಲಿರುವ ಏಕತ್ವ

"ಸ್ವಯಂಭುವು ಇಂದ್ರಿಯಗಳನ್ನು ಹೊರಗಡೆ ತೆರೆಯುವಂತೆ ಸೃಷ್ಟಿಸಿದನು, ಆದ್ದರಿಂದ ಮನುಷ್ಯನು ಹೊರಕ್ಕೆ ನೋಡುತ್ತಾನೆಯೇ ಹೊರತು ತನ್ನೊಳಗೆ ನೋಡುವದಿಲ್ಲ. ಯಾವನೋ ಒಬ್ಬ ಜೀವನು ಅಮೃತತ್ವದ ಬಯಕೆಯಿಂದ ಇಂದ್ರಿಯಗಳನ್ನು ಹಿಂತಿರುಗಿಸಿಕೊಂಡು ಒಳಗಿರುವ ಆತ್ಮನನ್ನು ನೋಡುತ್ತಾನೆ (ಕ.2-1-1). ನಾನು ಈ ಮೊದಲೇ ತಿಳಿಸಿರುವಂತೆ ವೇದಗಳಲ್ಲಿ ಮೊದಮೊದಲು ಕಂಡುಬರುವ ಜಿಜ್ಞಾಸೆಯು ಹೊರಗಿನ ವಿಷಯಗಳನ್ನು ಕುರಿತದ್ದಾಗಿರುತ್ತದೆ. ಆಮೇಲೆ ಮತ್ತೊಂದು ಹೊಸ ಭಾವನೆಯುಂಟಾಗಿರುತ್ತದೆ. ಹೊರಗಿನ ಪ್ರಪಂಚದಲ್ಲಿ ಪರಮಾರ್ಥವು ದೊರೆಯಲಾರದು, ಹೊರಮುಖವಾಗಿ ನೋಡುವದರಿಂದ ತತ್ತ್ವವು ಸಿಕ್ಕಲಾರದು, ಕಣ್ಣುಗಳನ್ನು ಒಳಕ್ಕೆ ತಿರುಗಿಸಿಕೊಂಡರೆ ಮಾತ್ರ - ಇದು ಉಪನಿಷತ್ತಿನಲ್ಲಿರುವ ಆವೃತ್ತಚಕ್ಷುಃ ಎಂಬುದರ ಅಕ್ಷರಾರ್ಥವು. ಹೀಗೆ ಒಳಕ್ಕೆ ತಿರುಗಿದರೆ ಮಾತ್ರ - ತತ್ತ್ವವನ್ನು ಕಂಡುಕೊಳ್ಳಬಹುದು ಎಂಬುದೇ ಆ ಭಾವನೆ. ಇಲ್ಲಿ ಆತ್ಮನನ್ನು ತಿಳಿಸುವದಕ್ಕೆ ಉಪಯೋಗಿಸಿರುವ ಶಬ್ದವೂ ಸಾಭಿಪ್ರಾಯವಾಗಿದೆ; 'ಪ್ರತ್ಯಗಾತ್ಮನು' ಎಂದರೆ ಒಳಕ್ಕೆ ಹೋಗಿರುವವನು, ನಮ್ಮ ಇರವಿನ ತೀರ ಒಳತಿರುಳು, ಹೃದಯದ ಕೇಂದ್ರವು, ಯಾವದರಿಂದ ಇದೆಲ್ಲವೂ ಉಂಟಾಗಿರುತ್ತದೆಯೋ ಆ ಎಲ್ಲದರ ಕೆಚ್ಚಿನಂತಿರುವವನು, ಆತನೇ ಮಧ್ಯಗತನಾಗಿರುವ ಸೂರ್ಯನು; ಮಿಕ್ಕ ಮನಸ್ಸು, ಶರೀರ, ಇಂದ್ರಿಯಗಳು ಮುಂತಾದ ನಮ್ಮೊಳಗಿರುವದೆಲ್ಲವೂ ಆ ಸೂರ್ಯನಿಂದ ಹೊರಹೊರಟಿರುವ ಕಿರಣಗಳೇ. 'ಹುಡುಗು ಬುದ್ಧಿಯ ಜನರು, ಅವಿವೇಕಿಗಳು ಹೊರಗಿನ ಕಾಮಗಳನ್ನು ಬೆನ್ನು ಹತ್ತಿ ಓಡುತ್ತಿರುವರು, ಅವರು ಎಲ್ಲೆಲ್ಲಿಯೂ ಹರಡಿರುವ ಮೃತ್ಯುವಿನ ಬಲೆಗೆ ಬೀಳುತ್ತಾರೆ. ಆದರೆ ವಿವೇಕಿಗಳಾದವರು ಅಮೃತತ್ವವೆಂಬುದನ್ನು ಬಲ್ಲವರಾದ್ದರಿಂದ ಈ ಅಧ್ರುವಪದಾರ್ಥಗಳಲ್ಲಿ ನಿತ್ಯವಾದದ್ದು ಸಿಕ್ಕುವದೆಂದು ಎಂದಿಗೂ ಎಣಿಸುವದಿಲ್ಲ' (2-1-2). ಅದೇ ಅಭಿಪ್ರಾಯವನ್ನೇ ಇಲ್ಲಿ ಸ್ಪಷ್ಟಗೊಳಿಸಿರುತ್ತದೆ. ಪರಿಚ್ಛಿನ್ನ ಪದಾರ್ಥಗಳು ತುಂಬಿರುವ ಈ ಹೊರಗಿನ ಪ್ರಪಂಚದಲ್ಲಿ ಅನಂತವಾದದ್ದನ್ನು ಹುಡುಕಿ ದೊರಕಿಸಿಕೊಳ್ಳುವದು ಅಸಾಧ್ಯವೆಂಬುದೇ ಆ ಅಭಿಪ್ರಾಯವು. ಯಾವದು ಅನಂತವಾಗಿರುವದೋ ಅದರಲ್ಲಿಯೇ ಅನಂತವಾದದ್ದನ್ನು ಹುಡುಕಬೇಕು; ನಮ್ಮಲ್ಲಿ ಅನಂತವಾಗಿರುವ

ಒಂದೇ ಒಂದು ವಸ್ತು ಯಾವದೆಂದರೆ ನವ್ಮೊಳಗಿರುವ ನಮ್ಮ ಆತ್ಮನು. ಶರೀರವಾಗಲಿ ಮನಸ್ಸಾಗಲಿ, ಕೊನೆಗೆ ನಮ್ಮ ಭಾವಗಳಾಗಲಿ ನಮ್ಮ ಸುತ್ತಲೂ ಕಾಣಿಸುತ್ತಿರುವ ಪ್ರಪಂಚವಾಗಲಿ ಯಾವದೊಂದೂ ಅನಂತವಾಗಿರುವದಿಲ್ಲ. ಯಾವ ದ್ರಷ್ಟೃವಿಗೆ ಇವೆಲ್ಲವೂ ಸೇರಿದವಾಗಿರುತ್ತವೋ, ಯಾವನು ಮಾನವನ ಆತ್ಮನಾಗಿರುವನೋ, ಯಾವನು ಒಳಗಿನ ಮನುಷ್ಯನಲ್ಲಿ ಯಾವಾಗಲೂ ಎಚ್ಚತ್ತಿರುವವನೋ ಆತನೊಬ್ಬನನೇ ಅನಂತನಾಗಿರುತ್ತಾನೆ; ಈ ಇಡಿಯ ವಿಶ್ವದ ಅನಂತಕಾರಣವನ್ನು ಹುಡುಕಬೇಕಾದರೆ ನಾವು ಅಲ್ಲಿಗೇ ಹೋಗಬೇಕು. ಅನಂತವಾದ ಆತ್ಮನಲ್ಲಿಯೇ ಆ ಜಗತ್ಕಾರಣವು ನಮಗೆ ಸಿಕ್ಕಬೇಕು, ಇಲ್ಲಿರುವದೇ ಅಲ್ಲಿಯೂ ಇರುತ್ತದೆ, ಅಲ್ಲಿರುವದೇ ಇಲ್ಲಿಯೂ ಇರುತ್ತದೆ. ಇಲ್ಲಿ ನಾನಾತ್ವವನ್ನು ಕಾಣುವವನು ಸಾವಿನ ಮೇಲೆ ಸಾವನ್ನು ಪಡೆಯುತ್ತಿರುತ್ತಾನೆ' (2-1-10).

ಮೊದಮೊದಲು ಸ್ವರ್ಗಪ್ರಾಪ್ತಿಯ ಆಶೆಯೇ ಜನರಿಗೆ ಇತ್ತೆಂಬುದನ್ನು ಹಿಂದೆಯೇ ತಿಳಿಸಿದ್ದಾಗಿರುತ್ತದೆ.* ತಮ್ಮ ಸುತ್ತಲೂ ಇರುವ ಪ್ರಪಂಚದಿಂದ ಯಾವ ತೃಪ್ತಿಯೂ ಆಗದೆ ಈ ಪ್ರಾಚೀನ ಆರ್ಯರಿಗೆ ಸಹಜವಾಗಿ ಒಂದು ಯೋಚನೆ ಹೊಳೆಯಿತು. ಸತ್ತಮೇಲೆ ನಾವು ಒಂದಾನೊಂದು ಪ್ರದೇಶಕ್ಕೆ ಹೋಗಿ ದುಃಖಸಂಬಂಧವೇ ಇಲ್ಲದ ಸುಖವನ್ನು ಸೂರೆಗೊಳ್ಳುವೆವು-ಎಂದು ಅವರಿಗೆ ತೋರಿತು. ಇಂಥ ಸುಖಸ್ಥಾನಗಳನ್ನು ಅನೇಕವಾಗಿ ಕಲ್ಪಿಸಿಕೊಂಡು ಅವಕ್ಕೆ 'ಸ್ವರ್ಗ' ಎಂಬ ಹೆಸರನ್ನಿಟ್ಟರು. ಈ ಸ್ಥಳಕ್ಕೆ ಇಂಗ್ಲಿಷಿನಲ್ಲಿರುವ (Heavens) ಹೆವನ್ಸ್# ಎಂಬ ಮಾತನ್ನೇ ಉಪಯೋಗಿಸಿಕೊಳ್ಳಬಹುದಾಗಿದೆ. ಈ ಸ್ವರ್ಗಗಳಲ್ಲಿ ಎಂದೆಂದಿಗೂ ಸುಖವೇ ಇದ್ದುಕೊಂಡಿರುವದೆಂದೂ ಅಲ್ಲಿ ಶರೀರವು ವಜ್ರಕಾಯವಾಗುವದೆಂದೂ ಮನಸ್ಸೂ ಪರಿಶುದ್ಧವಾಗಿರುವದೆಂದೂ ಅಲ್ಲಿ ತಮ್ಮ ಪಿತೃಗಳೊಡನೆ ತಾವು ಸುಖವಾಗಿರುವೆವೆಂದೂ ಅವರ ಭಾವನೆಯಾಗಿತ್ತು. ಆದರೆ ತತ್ತ್ವ ವಿಚಾರವು ತಲೆದೋರಿತೋ ಇಲ್ಲವೋ, ಇದೆಲ್ಲ ಆಗದ ಮಾತು, ಕೇವಲ ಹಾಸ್ಯಾಸ್ಪದವಾದದ್ದು- ಎಂಬುದು ಅವರಿಗೆ ಮನದಟ್ಟಾಯಿತು. ಒಂದಾನೊಂದು ಸ್ಥಳದಲ್ಲಿ ಅನಂತವಾದದ್ದೊಂದು ಇರುವದೆಂಬುದೇ ತನಗೆತಾನೇ ವಿರುದ್ಧವಾದ ಭಾವನೆಯಾಗಿರುತ್ತದೆ, ಏಕೆಂದರೆ ಸ್ಥಳವೆಂದರೇ ಒಂದು ಕಾಲದಲ್ಲಿ ಹುಟ್ಟಿ ಒಂದು ಕಾಲದಲ್ಲಿ ಕೊನೆಗಾಣತಕ್ಕದ್ದಾಗಿರುತ್ತದೆ-ಎಂಬುದು ಅವರಿಗೆ ಗೊತ್ತಾಯಿತು. ಆದ್ದರಿಂದ ಅವರು ಈ ಭಾವನೆಯನ್ನು ಬಿಟ್ಟುಬಿಡಬೇಕಾಯಿತು. ಈ ಸ್ವರ್ಗಗಳಲ್ಲಿ

* 13ನೆಯ ಪುಟವನ್ನು ನೋಡಿ.

# ಈ ಉಪನ್ಯಾಸಗಳು ಇಂಗ್ಲಿಷು ಜನರಿಗಾಗಿ ಸ್ವಾಮಿಗಳು ಮಾಡಿದವಾಗಿರುತ್ತವೆಯಾದ್ದರಿಂದ ಅವರಿಗೆ ತಿಳಿಯುವ ಶಬ್ದವನ್ನು ಸ್ವಾಮಿಗಳು ಸೂಚಿಸಿರುತ್ತಾರೆ.

ವಾಸವಾಗಿರುವ ದೇವತೆಗಳೂ ಒಂದಾನೊಂದು ಸಮಯದಲ್ಲಿ ಮಾನವ ರಾಗಿದ್ದವರು, ತಮ್ಮ ಪುಣ್ಯಕರ್ಮಗಳಿಂದ ದೇವತೆಗಳಾದವರು.$ ದೇವತಾತತ್ವೆಂಬುದೂ ಬೇರೆ ಬೇರೆ ಸ್ಥಾನಗಳು, ಬೇರೆ ಬೇರೆಯ ಪದವಿಗಳೇ ಹೊರತು ಬೇರೆಯಲ್ಲ. ವೇದಗಳಲ್ಲಿ ಹೇಳಿರುವ ಯಾವದೊಂದು ದೇವತೆಯೂ ಶಾಶ್ವತವಾಗಿರುವ ವ್ಯಕ್ತಿ ವಿಶೇಷವಲ್ಲ. ಉದಾಹರಣೆಗೆ ಇಂದ್ರ, ವರುಣ- ಮುಂತಾದವು ಒಬ್ಬೊಬ್ಬರ ಹೆಸರಲ್ಲ, ಆಯಾ ಅಧಿಕಾರಸ್ಥಾನದ ಹೆಸರುಗಳವು.* ಹಿಂದೆ ಇದ್ದ ಇಂದ್ರನೇ ಈಗಿರುವ ಇಂದ್ರನಲ್ಲ; ಅವನು ಕಾಲವಾಗಿ ಈಗ ಭೂಲೋಕದಿಂದ ಮತ್ತೊಬ್ಬ ಪುರುಷನು ಅವನ ಸ್ಥಾನದಲ್ಲಿರುತ್ತಾನೆ. ಇದರಂತೆಯೇ ಮಿಕ್ಕ ದೇವತೆಗಳ ವಿಚಾರವನ್ನೂ ತಿಳಿಯಬೇಕು. ದೇವತಾತ್ವವನ್ನು ಪಡೆದ ಮಾನವಜೀವರು ಒಬ್ಬರಾಗುತ್ತಲೊಬ್ಬರು ಪಡೆಯುವ ಸ್ಥಾನವಿಶೇಷಗಳಿವು. ಆದರೂ ಈ ದೇವತೆಗಳೂ ಸತ್ತೇಸಾಯುವರು. ಪುರಾತನವಾದ ಋಗ್ವೇದದಲ್ಲಿ 'ಅಮೃತತ್ವ'ವೆಂಬ ಮಾತನ್ನು ಈ ದೇವತೆಗಳಿಗೆ ಉಪಯೋಗಿಸಿರುವದು ಕಂಡುಬರುತ್ತದೆ; ಆದರೆ ಇತ್ತಲಾಗಿ ಈ ಮಾತನ್ನು ಸಂಪೂರ್ಣವಾಗಿ ಕೈಬಿಟ್ಟರು; ಏಕೆಂದರೆ ಕಾಲದೇಶಗಳನ್ನು ಮೀರಿರಬೇಕಾದ ಅಮೃತತ್ವವೆಂಬುದು ಯಾವುದೊಂದು ಭೌತಿಕರೂಪಕ್ಕೂ, ಅದು ಎಷ್ಟೇ ಸೂಕ್ಷ್ಮವಾಗಿರಲಿ, ಹೊಂದುಗಡೆ ಯಾಗಲಾರದೆಂದು ಅವರಿಗೆ ತೋರಿತು. ಅದು ಎಷ್ಟೇ ಸೂಕ್ಷ್ಮವಾಗಿರಲಿ, ಅದು ಕಾಲದೇಶಗಳಲ್ಲಿ ಮೊದಲಾಗಬೇಕಾಗಿರುತ್ತದೆ. ಏಕೆಂದರೆ ಆಕಾರವೆಂಬುದು ಉಂಟಾಗಬೇಕಾದರೆ ಅದಕ್ಕೆ ಅವಶ್ಯವಾದ ಕಾರಣವು ದೇಶಕ್ಕೆ ಸಂಬಂಧಪಟ್ಟಿರಬೇಕು. ದೇಶಸಂಬಂಧವಿಲ್ಲದೆ ಆಕಾಶವನ್ನು ಕಲ್ಪಿಸಿಕೊಳ್ಳುವದಕ್ಕೆ ಪ್ರಯತ್ನಿಸಿ ನೋಡಿರಿ, ಅದು ಎಂದಿಗೂ ಆಗದ ಪ್ರಯತ್ನವೆಂಬುದು ಕೂಡಲೆ ತೋರಿಬಿಡುತ್ತದೆ. ಆಕಾರವಾಗುವದಕ್ಕೆ ದೇಶವೆಂಬುದು ಉಪಾದಾನಕಾರಣವೆಂದು ಹೇಳಬಹುದು. ಈ ಆಕಾರವು ಬಿಡದೆ ಮಾರ್ಪಡುತ್ತಲೇ ಇರುತ್ತದೆ. ದೇಶವೂ ಕಾಲವೂ ಮಾಯೆಯಲ್ಲಿರುವವುಗಳಾಗಿವೆ. ಈ ಅಭಿಪ್ರಾಯವನ್ನು 'ಇಲ್ಲಿರುವದೇ ಅಲ್ಲಿಯೂ ಇರುತ್ತದೆ' ಎಂಬ ಶ್ಲೋಕಾರ್ಧದಲ್ಲಿ ತಿಳಿಸಿರುತ್ತದೆ.'# ಅಲ್ಲಿ ಈ ದೇವತೆಗಳಿದ್ದರೆ ಅವರೂ ಇಲ್ಲಿಗೆ ಹೊಂದುವ ನಿಯಮಗಳಿಗೆ ಬದ್ಧರಾಗಿಯೇ ಇರಬೇಕು; ಯಾವ ನಿಯಮಗಳಲ್ಲಿಯೋ ಆಗಲಿ ಮತ್ತೆ ಮತ್ತೆ ಹುಟ್ಟಿ ಸಾಯುವದೆಂಬುದು ಸೇರಿಕೊಂಡೇ ಇರುತ್ತದೆ.@ ಈ ನಿಯಮಗಳಿಂದಲೇ ಭೌತಿಕವಸ್ತುವು ಬೇರೆಬೇರೆ ಅಚ್ಚುಪಡಿಯ ರೂಪಗಳನ್ನು ಪಡೆಯುತ್ತಲೂ ಮತ್ತೆ

$ 12ನೆಯ ಪುಟವನ್ನು ನೋಡಿ.

* ಬ್ರ.ಸೂ.ಭಾ.3-3-32 ನೋಡಿ

# ಈ ಮಂತ್ರಕ್ಕೆ ಬ್ರಹ್ಮಾತ್ಮೈಕ್ಯವೇ ವಿಷಯವೆಂದು ಭಾಷ್ಯಕಾರರ ಅಭಿಪ್ರಾಯ.

@ ಹುಟ್ಟಿದ್ದು ಸಾಯಬೇಕು, ಸತ್ತದ್ದು ಹುಟ್ಟಬೇಕು; ವಸ್ತುವಿಗೆ ಆತ್ಯಂತಿಕನಾಶವಾಗಲಿ ಆತ್ಯಂತಿಕಸ್ಥಿರತ್ವವಾಗಲಿ ಇಲ್ಲ ಎಂಬುದೊಂದು ಪ್ರಕೃತಿನಿಯಮವು ಎಂದು ಭಾವ

ಮತ್ತೆ ನಾಶವಾಗುತ್ತಲೂ ಇರುವದು. ಹುಟ್ಟಿದ್ದೆಲ್ಲವೂ ಸಾಯಲೇಬೇಕು, ಆದ್ದರಿಂದ ಸ್ವರ್ಗಲೋಕಗಳೆಂಬವು ಇದ್ದರೆ ಇದೇ ನಿಯಮಗಳೇ ಅಲ್ಲಿಯೂ ಸಫಲವಾಗಿ ಸಾಗಬೇಕು.

ಈ ಲೋಕದಲ್ಲಿ ಯಾವ ಸುಖವನ್ನೇ ಆಗಲಿ ದುಃಖವೆಂಬುದು ಅದರ ನೆರಳಿನಂತೆ ಬೆನ್ನಟ್ಟಿಕೊಂಡು ಬರುತ್ತಿರುವದು. ಬದುಕಿರುವದೆಂಬುದಕ್ಕೆ ಅದರ ನೆರಳಾದ ಸಾವೂ ಇರುತ್ತದೆ. ಇವೆರಡೂ ಜೊತೆಯಲ್ಲಿಯೇ ಇರಬೇಕು'; ಏಕೆಂದರೆ ಅವು ಒಂದಕ್ಕೊಂದು ವಿರುದ್ಧವಾಗಿರುವದಿಲ್ಲ. ಎರಡು ಬೇರೆ ಬೇರೆ ಇರವುಗಳಲ್ಲ, ಮತ್ತೇನೆಂದರೆ ಒಂದೇ ವಸ್ತುವಿನ ಬೇರೆ ಬೇರೆ ರೂಪಗಳು. ಬದುಕಿರುವದು, ಸಾಯುವದು, ದುಃಖ ಸುಖ, ಒಳ್ಳೆಯದು ಕೆಟ್ಟದ್ದು, ಇವೆಲ್ಲವೂ ಹೀಗೆಯೇ. ಒಳ್ಳೆಯದೂ ಕೆಟ್ಟದ್ದೂ ಎರಡೂ ಬೇರೆಬೇರೆಯ ತತ್ತ್ವಗಳೆಂದೂ ಅವೆರಡೂ ಎಂದೆಂದಿಗೂ ಇದ್ದಂತೆಯೇ ಇರುವವೆಂದೂ ನಂಬುವ ದ್ವೈತಭಾವನೆಯು ಹಾಸ್ಯಾಸ್ಪದವಾದದ್ದೆಂದು ಮೇಲೆಯೇ ಕಾಣುತ್ತದೆ. ಇವುಗಳೂ ಒಂದೇ ಒಂದರ ಬೇರೆಬೇರೆ ರೂಪಗಳು. ಅದು ಒಂದು ಸಲ ಒಳ್ಳೆಯದಾಗಿಯೂ ಮತ್ತೊಂದು ಸಲ ಕೆಟ್ಟದ್ದಾಗಿಯೂ ತೋರಿಕೊಳ್ಳುತ್ತದೆ. ಈ ತಾರತಮ್ಯವು ಜಾತಿಗೆ ಸಂಬಂಧಪಟ್ಟದ್ದಲ್ಲ, ಪರಿಮಾಣಕ್ಕೆ ಸಂಬಂಧಪಟ್ಟದ್ದು. ಅವುಗಳೆರಡಕ್ಕೂ ಇರುವ ತಾರತಮ್ಯವೆಂದರೆ ಒಂದಕ್ಕಿಂತ ಒಂದು ಹೆಚ್ಚು ಜೋರಾಗಿರುವದರಿಂದಲೇ ಆಗಿರುತ್ತದೆ. ಅವೇ ನರಮಂಡಲಗಳಿಂದಲೇ ಒಳ್ಳೆಯ ವೇದನೆಗಳೂ ಕೆಟ್ಟ ವೇದನೆಗಳೂ ಬರುತ್ತಿರುವವು; ಈ ನರಗಳಿಗೆ ಏನಾದರೂ ಅಪಾಯವುಂಟಾದರೆ ಇವೆರಡರಲ್ಲಿ ಯಾವದೊಂದು ವೇದನೆಯೂ ನಮಗೆ ಉಂಟಾಗುವದೇ ಇಲ್ಲ- ಎಂದು ಅನುಭವದಲ್ಲಿ ಕಂಡುಬರುತ್ತದೆ. ಯಾವದಾದರೊಂದು ರೋಗಕ್ಕೆ ಪಾರ್ಶ್ವವಾಯು ಬಂದಂತಾದರೆ ಆ ತಂತಿಯಿಂದ ಬರುತ್ತಿದ್ದ ಸುಖ ರೂಪ ವೇದನೆಗಳು ಬರುವದು ನಿಂತುಹೋಗುತ್ತದೆ; ಆದರೆ ಆಗ ದುಃಖರೂಪವೇದನೆಗಳು ಬರುವದೂ ನಿಂತುಹೋಗುತ್ತದೆ. ಅವು ಎರಡಾಗಿರುವದೇ ಇಲ್ಲ, ಯಾವಾಗಲೂ ಒಂದೇ ಆಗಿರುತ್ತವೆ. ಇದೂ ಅಲ್ಲದೆ ಅದೇ ಒಂದು ವಿಷಯದಿಂದಲೇ ಜೀವನದ ಬೇರೆ ಬೇರೆ ಕಾಲಗಳಲ್ಲಿ ಒಂದು ಕಾಲದಲ್ಲಿ ಸುಖ, ಒಂದು ಕಾಲದಲ್ಲಿ ದುಃಖ- ಹೀಗೆ ಉಂಟಾಗುತ್ತಿರುವದು. ಒಂದೇ ದೃಶ್ಯದಿಂದ ಒಬ್ಬನಲ್ಲಿ ಸಂತೋಷವುಂಟಾದರೆ ಮತ್ತೊಬ್ಬನಲ್ಲಿ ದುಃಖವುಂಟಾಗುತ್ತದೆ. ಮಾಂಸಭಕ್ಷಣೆಯು ಮನುಷ್ಯನಿಗೆ ಸಂತೋಷವನ್ನುಂಟು ಮಾಡುತ್ತದೆ. ಆದರೆ ಭಕ್ಷ್ಯವಾದ ಪ್ರಾಣಿಗೆ ಅದರಿಂದ ದುಃಖವೇ ಆಗುತ್ತದೆ. ಎಲ್ಲರಿಗೂ ಸಂತೋಷವನ್ನೇ ಉಂಟುಮಾಡುವ

ಪದಾರ್ಥವೇ ಯಾವಾಗಲೂ ಕಂಡು ಬಂದಿರುವದಿಲ್ಲ. ಅದರಿಂದ ಕೆಲವರಿಗೆ ಸಂತೋಷವಾಗುತ್ತದೆ, ಮತ್ತೆ ಕೆಲವರಿಗೆ ದುಃಖವಾಗುತ್ತದೆ. ಹೀಗೆಂಯೇ ನಡೆಯುತ್ತಿರುತ್ತದೆ. ಆದ್ದರಿಂದ ತತ್ತ್ವವು ಎರಡೆಂಬುದು ಸುಳ್ಳೆಂದಾಯಿತು. ಇದರಿಂದ ಏನು ಸಿದ್ಧವಾಯಿತು? ಈ ಲೋಕದಲ್ಲಿ ಕೆಟ್ಟದ್ದು ಒಂದಿಷ್ಟೂ ಉಳಿಯದೆ ಎಲ್ಲವೂ ಒಳ್ಳೆಯದೇ ಆಗಿರುವ ಕಾಲವೊಂದು ಕೊನೆಗೆ ಬರುವದೆಂಬುದು ಸರಿಯಿಲ್ಲವೆಂದು ಹಿಂದಿನ ಉಪನ್ಯಾಸದಲ್ಲಿಯೇ* ಹೇಳಿರುತ್ತೇನೆ. ಅದರಿಂದ ನಿಮ್ಮಲ್ಲಿ ಕೆಲವರಿಗೆ ಅಸಮಾಧಾನವಾಗಿರಬಹುದು; ಆದರೆ ನಾನೇನು ಮಾಡಲಿ? ಇದು ಸರಿಯಲ್ಲವೆಂದು ಯಾರಾದರೂ ತೋರಿಸಿಕೊಟ್ಟರೆ ತಿದ್ದಿಕೊಳ್ಳುವದಕ್ಕೆ ನಾನೇನೋ ಸಿದ್ಧನಾಗಿಯೇ ಇರುತ್ತೇನೆ. ಆದರೆ ಹಾಗೆಂಬುದನ್ನು ಯಾರಾದರೂ ರುಜುವಾತುಮಾಡಿಕೊಟ್ಟು ನನಗೂ ಅದೇ ನಿಜವೆಂದು ತೋರುವವರೆಗೂ ನಾನು ಅದನ್ನು ಒಪ್ಪಲಾರೆನು.

ನಾನು ಹೇಳಿದ್ದಕ್ಕೆ ವಿರುದ್ಧವಾಗಿ ಜನರು ಸಾಮಾನ್ಯವಾಗಿ ಈ ವಾದವನ್ನು ಹೂಡುತ್ತಾರೆ. ನೋಡುವದಕ್ಕೆ ಆ ವಾದವು ಒಪ್ಪತಕ್ಕದ್ದೆಂದೇ ತೋರುತ್ತದೆ. ವಿಕಾಸ ಕ್ರಮದಲ್ಲಿ ಈಗ ನಾವು ನಮ್ಮ ಸುತ್ತಮುತ್ತಲೂ ಕಾಣುತ್ತಿರುವ ಕೆಟ್ಟದ್ದೆಲ್ಲವೂ ಸ್ವಲ್ಪಸ್ವಲ್ಪವಾಗಿ ಕಡಿಮೆಯಾಗುತ್ತಾ ಬರುತ್ತಿದೆಯಂತೆ. ಇದರ ಫಲವಾಗಿ, ಇದೇ ರೀತಿಯಲ್ಲಿ ಲಕ್ಷೋಪಲಕ್ಷ ವರ್ಷಗಳವರೆಗೂ ಹೀಗೆ ಕೆಟ್ಟದ್ದೆಲ್ಲ ಹೋಗುತ್ತಾಬಂದರೆ ಕೆಟ್ಟದ್ದೆಲ್ಲವೂ ನಾಶವಾಗಿ ಒಳ್ಳೆಯದೊಂದೇ ಉಳಿದುಕೊಳ್ಳುವದಂತೆ. ಇದು ನೋಡುವದಕ್ಕೇನೋ ಬಹಳ ಯುಕ್ತಿಯುಕ್ತವಾದ ವಾದವೇ ಆಗಿರುತ್ತದೆ; ದೇವರ ದಯೆಯಿಂದ ಹಾಗೆಯೇ ಇದ್ದರೆ ಎಷ್ಟು ಚೆನ್ನಾಗಿತ್ತು! ಆದರೆ ಇಲ್ಲಿ ಒಂದು ಹೇತ್ವಾಭಾಸವಿದೆ. ಅದೇನೆಂದರೆ ಈ ವಾದದಲ್ಲಿ ಒಳ್ಳೆಯದು, ಕೆಟ್ಟದ್ದು – ಎರಡೂ ಎಂದೆಂದಿಗೂ ನಿಯತಪ್ರಮಾಣದಲ್ಲಿರುವವೆಂಬುದನ್ನು ಒಪ್ಪಿಕೊಂಡುಬಿಟ್ಟಿರುತ್ತದೆ. ಕೆಟ್ಟದ್ದೆಂಬುದು ಇಷ್ಟೇ, ಅದನ್ನು ಒಂದು ನೂರು ಎಂದು ಎಣಿಸಿ ಲೆಕ್ಕಹಾಕಬಹುದು; ಇದರಂತೆಯೇ ಒಳ್ಳೆಯದನ್ನೂ ಇಂತಿಷ್ಟೇ ಎಂದು ಇಟ್ಟುಕೊಳ್ಳಬಹುದು–ಎಂದೂ ಈ ಕೆಟ್ಟದ್ದೆಂಬ ರಾಶಿಯಲ್ಲಿ ದಿನದಿನಕ್ಕೂ ಒಂದಿಷ್ಟು ಕಡಿಮೆಯಾಗುತ್ತಾ ಒಳ್ಳೆಯದನ್ನು ಮಾತ್ರ ಉಳಿಸುತ್ತಿರುವದೆಂದೂ ಈ ವಾದದದಲ್ಲಿ ಇಟ್ಟುಕೊಂಡಿರುತ್ತದೆ. ಆದರೆ ಇದು ನಿಜವೇ? ಜಗತ್ತಿನ ಇತಿಹಾಸವನ್ನು ನೋಡಿದರೆ ಕೆಟ್ಟದ್ದೂ ಒಳ್ಳೆಯದಂತೆ ಒಂದೇ ಸಮನೆ ಪರಿಮಾಣದಲ್ಲಿ ಹೆಚ್ಚುತ್ತಲೇ ಇರುವದೆಂದು ತಿಳಿಯಬರುತ್ತದೆ. ಅತ್ಯಂತ ಕೀಳು ಅಂತಸ್ತಿನಲ್ಲಿರುವ ಮನುಷ್ಯನನ್ನು ಉದಾಹರಣೆಗೆ ತೆಗೆದುಕೊಳ್ಳಿ; ಅವನು ಕಾಡಿನಲ್ಲಿ ವಾಸವಾಗಿರುತ್ತಾನೆ. ಅವನಿಗೆ ವಿಷಯಭೋಗದ

* 40ನೆಯ ಪುಟವನ್ನು ನೋಡಿ

ಅಭಿಲಾಷೆಯು ಬಹು ಸ್ಥೂಲವಾಗಿರುತ್ತದೆ, ಅವನಿಗೆ ಆಗುವ ದುಃಖಪರಿಮಾಣವೂ ಮಿತವಾಗಿಯೇ ಇರುತ್ತದೆ. ಅವನಿಗೆ ಆಗುವ ದುಃಖವೆಲ್ಲ ಇಂದ್ರಿಯಗಳ ಭೂಮಿಕೆಯಲ್ಲಿರುತ್ತದೆ. ಅವನಿಗೆ ಬೇಕಾದಷ್ಟು ಆಹಾರವೂ ದೊರೆಯದಿದ್ದರೆ ಅವನಿಗೆ ದುಃಖವಾಗುತ್ತದೆ; ಆದರೆ ಅವನಿಗೆ ಬೇಕಾದಷ್ಟು ಆಹಾರವನ್ನೊದಗಿಸಿ ಕೊಟ್ಟು ಎಲ್ಲಿ ಬೇಕೆಂದರೆ ಅಲ್ಲಿ ತಿರುಗಾಡುತ್ತಾ ಬೇಟೆಯಾಡಬಹುದೆಂಬ ಸ್ವಾತಂತ್ರವನ್ನು ಕೊಟ್ಟರೆ ಸಾಕು, ಅವನಿಗೆ ಪೂರ್ಣ ಸುಖವಿದ್ದಂತಾಗುತ್ತದೆ. ಅವನ ಸುಖವೆಂಬುದು ಕೇವಲ ಇಂದ್ರಿಯಗಳಲ್ಲಿರುತ್ತದೆ. ಅವನ ದುಃಖವು ಅಷ್ಟೇ. ಆದರೆ ಆ ಮನುಷ್ಯನಿಗೆ ಹೆಚ್ಚು ತಿಳಿವಳಿಕೆ ಬಂದರೆ ಅವನ ಸುಖವೂ ಹೆಚ್ಚುತ್ತದೆ; ಅವನ ಬುದ್ಧಿಯು ಅರಳಿಕೊಳ್ಳುತ್ತದೆ, ಇಂದ್ರಿಯ ಭೋಗವು ಆಗ ಬುದ್ಧಿಯ ಭೋಗವಾಗಿ ಮಾರ್ಪಡುತ್ತದೆ. ಈಗ ಒಂದು ರಸವತ್ತಾದ ಕಾವ್ಯವನ್ನು ಓದುವದರಿಂದ ಅವನಿಗೆ ಆನಂದವುಂಟಾಗುತ್ತದೆ; ಗಣಿತದ ಒಂದು ಪ್ರಶ್ನೆಯನ್ನು ಬಿಡಿಸುವದೆಂದರೆ ಅವನು ಅದರಲ್ಲಿಯೇ ಮುಳುಗಿ ಹೋಗುವಂತಾಗಿರುತ್ತಾನೆ. ಅದರಲ್ಲಿ ಅವನಿಗೆ ಅಷ್ಟು ಆದರವಿರುತ್ತದೆ. ಆದರೆ ಇವರೆಡರ ಜೊತೆಗೆ ಅವನ ನರಗಳು ಸೂಕ್ಷ್ಮವಾಗಿರುವದರಿಂದ ಅವು ಮಾನಸಿಕ ದುಃಖಕ್ಕೂ ಈಡಾಗುತ್ತವೆ; ಈ ದುಃಖವು ಕಾಡುಜನರಿಗಿರುವದೇ ಇಲ್ಲ. ಇದಕ್ಕೆ ಒಂದು ಬಹು ಸಾಮಾನ್ಯ ದೃಷ್ಟಾಂತವನ್ನು ಕೊಡಬಹುದು. ತಿಬೆಟ್ ದೇಶದಲ್ಲಿ ಮದುವೆಯೇ ಇಲ್ಲ, ಆದ್ದರಿಂದ ಅಲ್ಲಿ ವ್ಯಭಿಚಾರಶಂಕೆಯೂ ಇಲ್ಲ; ಆದರೂ ಮದುವೆಯಾಗುವದೆಂಬುದೇ ಸಮಾಜದ ಹೆಚ್ಚಿನ ಅಂತಸ್ತೆಂಬುದು ನಮಗೆಲ್ಲ ತಿಳಿದ ಮಾತಾಗಿದೆ. ಪಾವಿತ್ರ್ಯವೆಂದರೇನು, ಪತಿವ್ರತೆಯಾದ ಸುಗುಣೆಯಾದ ಪತ್ನಿಯನ್ನು ಪಡೆದಿರುವ ಅಥವಾ ಏಕಪತ್ನೀವ್ರತವುಳ್ಳ ಉತ್ತಮ ಪತಿಯನ್ನು ಪಡೆದಿರುವ ಸುಖವೆಂದರೆ ಎಂಥದ್ದು - ಎಂಬುದು ತಿಬೆಟ್ಟಿನ ಜನರಿಗೆ ತಿಳಿಯದು. ಈ ಜನರಿಗೆ ಅದು ಮನಸ್ಸಿಗೆ ಹತ್ತುವಂತೆಯೇ ಇಲ್ಲ. ಇದರಂತೆ ಅವರಿಗೆ ಪತಿವ್ರತೆಯಾದ ಪತ್ನಿಯು ಅಥವಾ ಪತ್ನೀವ್ರತವುಳ್ಳ ಪತಿಯು ಶಂಕೆಯಾಗಲೀ ಅವರಿಬ್ಬರಲ್ಲಿ ಒಬ್ಬರು ಅವಿವೇಕದಿಂದ ನಡೆದುಕೊಂಡರೆ ಮತ್ತೊಬ್ಬರಿಗಾಗುವ ಮನೋವ್ಯಥೆಯನ್ನಾಗಲೀ ಸಂಕಟಗಳನ್ನಾಗಲಿ ದಾಂಪತ್ಯ ಪಾವಿತ್ರ್ಯವನ್ನು ನಂಬುವ ಜನರಂತೆ ಅವರು ಅನುಭವಿಸಲೇ ಆರರು. ಈ ಎರಡನೆಯ ಗುಂಪಿನವರಿಗೆ ಒಂದು ಕಡೆಯಲ್ಲಿ ಸುಖದ ಲಾಭವಾಗಿರುತ್ತದೆ, ಇನ್ನೊಂದು ಕಡೆಯಲ್ಲಿ ಅವರು ದುಃಖದ ವ್ಯಥೆಯನ್ನೂ ಅನುಭವಿಸಬೇಕಾಗುತ್ತದೆ.

ಲೋಕದಲ್ಲೆಲ್ಲ ಸಂಪದ್ಯುಕ್ತವೆನಿಸಿರುವ, ಮಿಕ್ಕ ದೇಶಗಳೆಲ್ಲಕ್ಕಿಂತಲೂ ವಿಲಾಸಯುಕ್ತವಾದ ದೇಶವೆನಿಸಿರುವ ನಿಮ್ಮ ದೇಶವನ್ನೇ ಉದಾಹರಣೆಗೆ

ತೆಗೆದುಕೊಳ್ಳೋಣ. ಇಲ್ಲಿರುವ ದುಃಖವು ಎಷ್ಟು ಬಲವಾಗಿದೆ! ಮಿಕ್ಕ ಜನರಿಗೆ ಹೋಲಿಸಿದರೆ ನಿಮ್ಮಲ್ಲಿ ಎಷ್ಟೊಂದು ಜನ ಹೆಚ್ಚು ಹುಚ್ಚರು ಇರುತ್ತಾರೆ! ಇದೆಲ್ಲ ಏಕೆಂದರೆ ನಿಮ್ಮಲ್ಲಿರುವ ಆಶೆಗಳು ಅಷ್ಟು ಸೂಕ್ಷ್ಮವಾಗುತ್ತಾ ಬಂದಿವೆ. ಇಲ್ಲಿ ಯಾವನಾದರೂ ಜೀವನಕ್ರಮಕ್ಕೆ ಬೇಕಾದ ಒಂದಾನೊಂದು ಹೆಚ್ಚಿನ ಅಂತಸ್ತನ್ನನುಸರಿಸಬೇಕಾಗುತ್ತದೆ; ಅವನು ಒಂದು ವರ್ಷಕ್ಕೆ ಮಾಡುವ ಖರ್ಚು ಇಂಡಿಯದಲ್ಲೊಬ್ಬನಿಗೆ ಅಪರಿಮಿತೈಶ್ವರ್ಯವೆನಿಸೀತು. ಇಲ್ಲಿರುವ ಜನರಿಗೆ ಮಿತವ್ಯಯದಲ್ಲಿರಬೇಕೆಂದು ಬೋಧಿಸುವದಕ್ಕೆ ಆಗುವದೇ ಇಲ್ಲ; ಏಕೆಂದರೆ ಸಮಾಜದ ದೃಷ್ಟಿಯಲ್ಲಿ ಅವನು ಆ ಪ್ರಮಾಣದಲ್ಲಿಯೇ ಜೀವಿಸಬೇಕಾಗಿರುತ್ತದೆ. ಸಮಾಜದ ಚಕ್ರವು ಉರುಳಿಕೊಂಡು ಹೋಗುತ್ತಲೇ ಇರುತ್ತದೆ; ವಿಧವೆಯು ಕಣ್ಣೀರಿಡಲಿ ತಬ್ಬಲಿಯು ಕಿರಿಚಿಕೊಳ್ಳುತ್ತಿರಲಿ, ಅದು ನಿಲ್ಲುವದೇ ಇಲ್ಲ, ಎಲ್ಲೆಲ್ಲಿಯೂ ಇದೇ ಸ್ಥಿತಿಯು ಇದ್ದುಕೊಂಡಿರುತ್ತದೆ. ನಿಮ್ಮಗಳ ಸೂಕ್ಷ್ಮಭೋಗಲಾಲಸೆಯು ಬೆಳೆದುಕೊಂಡುಬಿಟ್ಟಿರುತ್ತದೆ, ನಿಮ್ಮ ಸಮಾಜವು ಮತ್ತೆ ಕೆಲವು ಸಮಾಜಗಳಿಗಿಂತ ಹೆಚ್ಚು ಸುಂದರವಾಗಿರುತ್ತದೆ. ನಿಮಗೆ ಸುಖಪಡುವದಕ್ಕೆ ಮಿಕ್ಕವರಿಗಿಂತ ಎಷ್ಟೋ ಹೆಚ್ಚು ಭೋಗಸಾಮಗ್ರಿಗಳಿರುತ್ತವೆ, ಆದರೆ ಕಡಿಮೆ ಭೋಗಸಾಮಗ್ರಿಯಿರುವವರಿಗೆ ನಿಮಗಿಂತ ದುಃಖವು ಎಷ್ಟೋ ಕಡಿಮೆಯಾಗಿರುತ್ತದೆ. ಇದೇ ರೀತಿಯಲ್ಲಿ ಈ ವಾದವನ್ನು ಎಲ್ಲಿಗೆ ಬೇಕಾದರೂ ಹೊಂದಿಸಿ ಹೇಳಬಹುದಾಗಿರುತ್ತದೆ. ನಿಮ್ಮ ಮನಸ್ಸಿನಲ್ಲಿರುವ ಧ್ಯೇಯವು ಎಷ್ಟೆಷ್ಟು ಉಚ್ಚವಾಗಿರುವದೋ ನಿಮಗೆ ಅಷ್ಟಷ್ಟು ಹೆಚ್ಚಿನ ಸುಖವಾಗುತ್ತದೆ, ನಿಮ್ಮ ದುಃಖವೂ ಅಷ್ಟಷ್ಟು ಹೆಚ್ಚು ಬಲವಾಗಿರುತ್ತದೆ. ಒಂದು ಮತ್ತೊಂದರ ನೆರಳಿನಂತೆ ಇರುತ್ತದೆ. ದುಃಖಗಳು ಬರುಬರುತ್ತಾ ಕಡಿಮೆಯಾಗುತ್ತಿವೆಯೆಂಬುದು ನಿಜವಾಗಿರಬಹುದು; ಆದರೆ ಅದು ನಿಜವಾದರೆ ಸುಖವೂ ಸ್ವಲ್ಪಸ್ವಲ್ಪವಾಗಿ ನಾಶವಾಗುತ್ತಲೇ ಇರಬೇಕು. ಆದರೆ ನಿಜವಾಗಿ ನೋಡಿದರೆ ದುಃಖಗಳೇ ಹೆಚ್ಚಾಗಿ ಬೆಳೆದುಕೊಳ್ಳುತ್ತಿವೆಯೆಂದೂ ಸುಖವೇ ಕಡಿಮೆಯಾಗುತ್ತಿದೆಯೆಂದೂ ಹೇಳಿದರೆ ತಪ್ಪಾದೀತೇನು? ಸುಖವೆಂಬುದು ನಿಯತಾಂತರಶ್ರೇಣಿಯಲ್ಲಿ ಹೆಚ್ಚುತ್ತಿದ್ದರೆ, ದುಃಖವು ನಿಯತಗುಣೋತ್ತರ ಶ್ರೇಣಿಯಲ್ಲಿ ಹೆಚ್ಚುತ್ತಿರುತ್ತದೆ. ಇದೇ ಮಾಯೆಯು.

ಇದು ಶುಭದೃಷ್ಟಿಯೂ ಅಲ್ಲ, ಅಶುಭದೃಷ್ಟಿಯೂ ಅಲ್ಲ, ವೇದಾಂತದಲ್ಲಿ ಈ ಪ್ರಪಂಚವೆಲ್ಲವೂ ದುಃಖಮಯವೆಂಬ ಅಭಿಪ್ರಾಯವನ್ನೇನೂ ಇಟ್ಟುಕೊಂಡಿಲ್ಲ; ಹಾಗೆ ಇಟ್ಟುಕೊಂಡರೆ ತಪ್ಪೇ ಆಗುತ್ತಿತ್ತು. ಆದರೆ ಈ ಪ್ರಪಂಚವೆಲ್ಲವೂ ಸುಖಮಯವಾಗಿಯೂ ಅನುಕೂಲ ಸಾಮಗ್ರಿಗಳಿಂದಲೇ ತುಂಬಿರುವದೆಂದು ಹೇಳುವದೂ ತಪ್ಪೇ. ಆದ್ದರಿಂದ ಮಕ್ಕಳಿಗೆ ಈ ಲೋಕವೆಲ್ಲವೂ ಶುಭ

ಸ್ವರೂಪವಾಗಿಯೇ ಇರುವದೆಂದೂ, ಎಲ್ಲೆಲ್ಲಿಯೂ ಹೂಗಳೂ ಹಾಲೂ ಜೇನುತಪ್ಪವೂ ತುಂಬಿ ತುಳುಕುತ್ತಿರುವದೆಂದೂ ಹೇಳುವದೂ ನಿರರ್ಥಕ ವಾಗಿರುತ್ತದೆ. ಅದೊಂದು ನಮಗೆಲ್ಲರಿಗೂ ಆಗಿರುವ ಕೂಸು. ಆದರೂ ಒಬ್ಬನಿಗಿಂತ ಇನ್ನೊಬ್ಬನಿಗೆ ಹೆಚ್ಚು ಸಂಕಟವಾಗಿದೆಯೆಂಬುದೊಂದೇ ಕಾರಣದಿಂದ ಎಲ್ಲವೂ ದುಃಖಮಯವೇ ಎನ್ನುವದೂ ಮಿಥ್ಯಾಜ್ಞಾನವೇ ಆಗಿರುತ್ತದೆ. ಈ ದ್ವೈತವೇ, ಈ ಶುಭಾಶುಭಗಳ ವಿಲಾಸವೇ, ನಮ್ಮ ಅನುಭವಗಳ ಪ್ರಪಂಚವೆಂಬುದು. ಆದರೆ ವೇದಾಂತವು ಹೇಳುವದೇನೆಂದರೆ: 'ಒಳ್ಳೆಯದೆಂಬುದು ಒಂದು, ಕೆಟ್ಟದ್ದೆಂಬುದು ಮತ್ತೊಂದು, ಹೀಗೆ ಎರಡು ಬೇರೆಬೇರೆಯ ತತ್ತ್ವಗಳೆಂದು ಎಣಿಸದಿರಿ; ಏಕೆಂದರೆ ಅವರೆಡೂ ಒಂದೇ ಆಗಿದ್ದು ಬೇರೆಬೇರೆಯ ಪ್ರಮಾಣ ಗಳಿಂದಲೂ ಬೇರೆಬೇರೆಯ ವೇಷಗಳಿಂದಲೂ ತೋರಿಕೊಳ್ಳುತ್ತಾ ಅದೇ ಮನಸ್ಸಿನಲ್ಲಿ ಬೇರೆಬೇರೆಯ ಭಾವನೆಗಳನ್ನುಂಟುಮಾಡುತ್ತಿರುತ್ತವೆ."

ಆದ್ದರಿಂದ ವೇದಾಂತದಲ್ಲಿ ಮೊಟ್ಟಮೊದಲನೆಯ ವಿಚಾರವಿಷಯವೇನೆಂದರೆ ಬಾಹ್ಯದಲ್ಲಿ ಏಕತ್ವವನ್ನು ಕಂಡುಕೊಳ್ಳುವದಕ್ಕೆ ಯತ್ನಿಸುವದು; ತೋರಿಕೆಯಲ್ಲಿ ಎಷ್ಟೇ ಬಗೆಬಗೆಯದಾಗಿ ತೋರಿಕೊಳ್ಳಲಿ, ಹಾಗೆಲ್ಲ ತೋರಿಕೊಳ್ಳುವ ಒಂದೇಒಂದು ಇರವು ಯಾವದೆಂಬುದನ್ನು ಗೊತ್ತುಪಡಿಸುವದಕ್ಕೆ ಯತ್ನಿಸುವದು. ಪಾರ್ಸಿ ಜನರಲ್ಲಿದ್ದ ಪುರಾತನವಾದ ಅಪೂರ್ಣಸಿದ್ಧಾಂತವನ್ನು-ಈ ಪ್ರಪಂಚವನ್ನು ಇಬ್ಬರು ದೇವತೆಗಳು ಸೃಷ್ಟಿಸುವರೆಂತಲೂ ಒಳ್ಳೆಯ ದೇವರು ಒಳ್ಳೆಯದೆಲ್ಲವನ್ನೂ ಉಂಟುಮಾಡುವನೆಂತಲೂ ಕೆಟ್ಟವನು ಕೆಟ್ಟದ್ದೆಲ್ಲವನ್ನೂ ಉಂಟುಮಾಡುವನೆಂತಲೂ ಒಪ್ಪುವ ಸಿದ್ಧಾಂತವನ್ನು* -ಸ್ವಲ್ಪ ಮನಸ್ಸಿಗೆ ತಂದುಕೊಳ್ಳಿರಿ. ನೋಡಿದ ಮಾತ್ರಕ್ಕೆ ಅದರ ಹುಳುಕು ಎದ್ದುಕಾಣುತ್ತದೆ; ಏಕೆಂದರೆ ಅದರಂತೆಯೇ ಕೊನೆಯವರೆಗೂ ತರ್ಕಮಾಡುತ್ತಾಹೋದರೆ ಪ್ರತಿಯೊಂದೂ ಪ್ರಕೃತಿ ನಿಯಮವೂ ಎರಡೆರಡೂ ಅಂಶಗಳುಳ್ಳದ್ದಾಗಿರಬೇಕೆಂದೂ ಅವುಗಳಲ್ಲಿ ಒಂದಂಶವನ್ನು ಒಬ್ಬ ದೇವರು ರೂಪಿಸಿ ಸುಮ್ಮನಾಗುತ್ತಲೂ ಇನ್ನೊಬ್ಬ ದೇವರು ಉಳಿದ ಭಾಗವನ್ನು ರೂಪಿಸುವನೆಂದೂ ಹೇಳಬೇಕಾಗುತ್ತದೆ. ಇಲ್ಲಿಯೇ ಕಷ್ಟ ಬರುವದು. ಏಕೆಂದರೆ ಇದೇ ಪ್ರಪಂಚದಲ್ಲಿ ಈ ಎರಡು ವ್ಯಾಪಾರಗಳಿರುವವಲ್ಲ, ಈ ಇಬ್ಬರು ದೇವರೂ ಒಬ್ಬರಿಗೊಬ್ಬರು ಹೊಂದಿಕೊಂಡೇ ಹೋಗುತ್ತಿರುವರಲ್ಲ, ಅವರಿಬ್ಬರೂ ಒಂದು

* ಒಬ್ಬ ದೇವರ ಶಕ್ತಿವಿಶೇಷಗಳೇ ಹೀಗೆ ಇಬ್ಭಾಗವಾಗಿ ಕೆಲಸ ಮಾಡುತ್ತಿವೆ ಎಂಬುದು ರಘುರಾಥುಷ್ಟ್ರನ ಸಿದ್ಧಾಂತವೆಂದು ಈಗಿನ ಶೋಧಕರು ಹೇಳುತ್ತಿದ್ದಾರೆ. ಕ್ರಿಸ್ತಿಯನ್ ಮಹಮ್ಮದೀಯಮತಗಳಲ್ಲಿ ಸೈತಾನನಿಗೂ ಒಂದು ಸ್ಥಾನವನ್ನು ಕಲ್ಪಿಸಿರುವದೂ ಈ ಬಗೆಯ ದ್ವೈತಸಿದ್ಧಾಂತ ಸೂಚಕವೇ ಆಗಿರುತ್ತದೆ.

ಭಾಗವನ್ನು ಕೆಡಿಸಿ, ಇನ್ನೊಂದು ಭಾಗವನ್ನು ಸರಿಪಡಿಸುತ್ತಲೇ ಇರುವರಲ್ಲ! ಇದು ಹೇಗೆ?–ಎಂಬ ಯೋಚನೆ ಹತ್ತಿಕೊಳ್ಳುತ್ತದೆ. ಇದೇನೂ ಪೂರ್ಣವಾದ ದೃಷ್ಟಾಂತವಲ್ಲ, ಇರವಿನ ದ್ವೈತವನ್ನು ತಿಳಿಸುವ ಅತಿಸ್ಥೂಲ ಪ್ರಕಾರವಿದು ಎಂಬುದು ನಿಜ; ಆದರೆ ಇದಕ್ಕಿಂತಲೂ ಮುಂದಕ್ಕೆ ಹೋಗಿರುವ, ಈ ಪ್ರಪಂಚದಲ್ಲಿ ಶುಭಾಂಶವೂ ಇದೆ, ಅಶುಭಾಂಶವೂ ಇದೆ–ಎಂಬ ಸೂಕ್ಷ್ಮದ್ವೈತ ಸಿದ್ಧಾಂತವನ್ನೇ ತೆಗೆದುಕೊಳ್ಳಿರಿ. ಅದೂ ಅವಿವೇಕವೇ, ಅದೂ ಅದೇ ದೃಷ್ಟಿಕೋಣದಿಂದ ಚರ್ಚೆಮಾಡಿ ಏರ್ಪಡಿಸಿದ್ದೇ. ಆದ್ದರಿಂದ ಏಕತ್ವದ ನಿಯಮವೇ ನಮಗೆ ನಮ್ಮ ಆಹಾರವನ್ನು ಕೊಡುತ್ತದೆ; ಅವಘಡಗಳನ್ನೂ ಅಪಾಯವನ್ನೂ ತಂದೊಡ್ಡಿ ಅನೇಕರನ್ನು ಕೊಳ್ಳುತ್ತಿರುವದೂ ಅದೇ ನಿಯಮವೇ ಆಗಿರುತ್ತದೆ.

ಆದ್ದರಿಂದ ಈ ಪ್ರಪಂಚವು ಸುಖಮಯವೂ ಅಲ್ಲ, ದುಃಖಮಯವೂ ಅಲ್ಲ ಎಂದು ತಿಳಿದುಬಂದಂತಾಯಿತು. ಅದು ಇವರೆಡರ ಮಿಶ್ರಣವಾಗಿರುತ್ತದೆ# ಇನ್ನುಮುಂದೆ ವಿಚಾರಮಾಡುತ್ತಾ ಹೋದಹಾಗೆಲ್ಲ ಈ ತಪ್ಪು ಪ್ರಕೃತಿಯದಲ್ಲವೆಂತಲೂ, ಇದರ ಹೊಣೆಗಾರಿಕೆಯೆಲ್ಲವೂ ನಮ್ಮ ತಲೆಯಮೇಲೇ ಇರುವದೆಂತಲೂ ಗೊತ್ತಾಗುವದು. ಆದರೆ ವೇದಾಂತದಲ್ಲಿ ಈ ದ್ವೈತದಿಂದ ಬಿಡುಗಡೆಹೊಂದುವ ಬಗೆ ಯಾವದೆಂಬುದು ತೋರಿಸಿಕೊಟ್ಟಿರುತ್ತದೆ; ವೇದಾಂತವು ದುಃಖವೇ ಇಲ್ಲವೆಂದು ಹೇಳುವದಿಲ್ಲ, ಏಕೆಂದರೆ ಯಾವದು ಹೇಗೆ ಕಾಣುತ್ತಿರುವದೋ ಹಾಗೆಯೇ ಅದನ್ನು ಧೈರ್ಯದಿಂದ ವಿಭಜಿಸಿ ನೋಡುವದಕ್ಕೆ ಅದು ಹೋಗುತ್ತದೆ. ಯಾವದೊಂದನ್ನೂ ಮುಚ್ಚಿಹಾಕುವದಕ್ಕೆ ಪ್ರಯತ್ನಿಸುವದಿಲ್ಲ. ಅದರಲ್ಲಿ ನಿರಾಶೆಯೆಂಬುದಿಲ್ಲ, ಸಂಶಯವಾದವೂ ಇಲ್ಲ. ಅದರಲ್ಲಿ ಒಂದು ಚಿಕಿತ್ಸೆಯನ್ನು ಕಂಡು ಹಿಡಿದಿರುತ್ತದೆ, ಆದರೆ ಆ ಚಿಕಿತ್ಸೆಯನ್ನು ವಜ್ರದಂಥ ಗಟ್ಟಿಯಾದ ಅಡಿಗಟ್ಟಿನ ಮೇಲೆ ಕೂರಿಸಬೇಕೆಂಬುದೇ ಅದರ ಅಭಿಲಾಷೆ. ಹುಡುಗರ ಬಾಯಿಮುಚ್ಚಿ ಸತ್ಯವಾದ ಯಾವದಾವರೂ ಒಂದು ಬಟ್ಟೆಯನ್ನು ಅವರ ಕಣ್ಣಿಗೆ ಬಿಗಿಯುವದಕ್ಕೆ ಹೋಗುವದಿಲ್ಲ. ಏಕೆಂದರೆ ಹಾಗೆ ಮಾಡಿದರೆ ಹುಡುಗರೇ ತಾವೇ ಕೆಲವು ದಿನಗಳಲ್ಲಿ ಇದರ ನಿಜವನ್ನು ಕಂಡುಕೊಂಡುಬಿಡುತ್ತಾರೆ. ನಾನು ಚಿಕ್ಕವನಾಗಿದ್ದಾಗ ಒಬ್ಬಾನೊಬ್ಬ ತರುಣನ ತಂದೆಯು ಸತ್ತುಹೋದನು; ಆಗ ಮಗನು ಬಹಳ ದರಿದ್ರಾವಸ್ಥೆಯಲ್ಲಿ ಇದ್ದನು. ಅವನು ದೊಡ್ಡ ಸಂಸಾರದ ಪೋಷಣೆಯ ಭಾರವನ್ನು ಹೊಂದಬೇಕಾಗಿದ್ದಿತು; ತಂದೆಯ ಸ್ನೇಹಿತರು

# ಒಂದಿಷ್ಟು ಸುಖ, ದುಃಖ, ಹೀಗೆ ಇವೆರಡೂ ಬೆರಕೆಯಾಗಿರುವದೆಂದೇನೂ ಅಭಿಪ್ರಾಯವಲ್ಲ. ಸುಖ, ದುಃಖ–ಎಂಬ ಎರಡು ಭಾವನೆಗಳೂ ಮಾನವ ಜೀವನದಲ್ಲಿ ಇದ್ದೇಇರುವವೆಂಬುದೇ ಇಲ್ಲಿ ತಿಳಿಯಬೇಕಾದದ್ದು.

ಯಾರಿಗೂ ಅವನಿಗೆ ಸಹಾಯಮಾಡಲು ಮನಸ್ಸಿಲ್ಲವೆಂದು ತಿಳಿದುಬಂದಿತು. ಅವನು ಒಬ್ಬಾನೊಬ್ಬ ಧರ್ಮಬೋಧಕನೊಡನೆ ಮಾತನಾಡುತ್ತಿರುವಾಗ ಆತನು "ಚಿಂತೆಯಿಲ್ಲ, ಇದೆಲ್ಲ ಒಳ್ಳೆಯದೇ; ಇದೆಲ್ಲ ನಮಗೆ ಒಳ್ಳೆಯದಾಗಲೆಂದೇ ಬಂದೊದಗುತ್ತದೆ" ಎಂದು ಸಮಾಧಾನಗೊಳಿಸಿದನು. ಹಳೆಯ ಹುಣ್ಣಿಗೊಂದು ಗುನ್ನಂಪಟ್ಟೆಯನ್ನು ಹಾಕುವ ಹಳೆಯ ಕ್ರಮವೇ ಅದು. ಹೀಗೆ ಮಾಡಿದರೆ ನಾವು ದುರ್ಬಲರೆಂದೂ ಅವಿವೇಕರೆಂದೂ ಒಪ್ಪಿಕೊಂಡಂತೆಯೇ ಸರಿ. ಆ ತರುಣನು ಹೊರಟುಹೋದನು; ಇದಾದ ಆರು ತಿಂಗಳಿಗೆ ಆ ಭೋದಕನಿಗೆ ಒಬ್ಬ ಮಗನು ಹುಟ್ಟಿದನು. ಆಗ ಆತನು ಈಶ್ವರಪ್ರೀತ್ಯರ್ಥವಾಗಿ ಕೆಲವರು ಜನರಿಗೆ ಸಂತರ್ಪಣೆಯನ್ನು ಮಾಡಿಸಿ ಅದಕ್ಕೆ ಈ ತರುಣನನ್ನು ಬರಬೇಕೆಂದು ಕರೆದನು. ಬೋಧಕನು "ಪರಮೇಶ್ವರನು ಎಂಥ ದಯಾವಂತನು! ಆತನ ಅನುಗ್ರಹವಿದು" ಎಂದನು. ಆ ತರುಣನು ಕೂಡಲೆ ಎದ್ದು ನಿಂತು "ನಿಲ್ಲಿ ನಿಲ್ಲಿ, ಇದೆಲ್ಲ ದುಃಖವೇ" ಎಂದನು. ಬೋಧಕನು "ಅದೇಕೆ?" ಎಂದು ಕೇಳಲು ಅವನು "ಏಕೆಂದರೆ ನಮ್ಮಪ್ಪನು ಸತ್ತಾಗ ಅದು ನೋಡುವುದಕ್ಕೆ ದುಃಖವಾಗಿದ್ದರೂ ಒಳ್ಳೆಯದೆಂದು ನೀವೇ ಹೇಳಿದ್ದಿರಿ; ಆದ್ದರಿಂದ ಇದು ನೋಡುವದಕ್ಕೆ ಒಳ್ಳೆಯದಾಗಿ ಕಂಡರೂ ನಿಜವಾಗಿ ದುಃಖವೇ ಆಗಿರಬೇಕು" ಎಂದನು. ಪ್ರಪಂಚದ ದುಃಖವನ್ನು ಪರಿಹರಿಸುವ ದಾರಿಯು ಇದೇಯೋ? ದಯವಿಟ್ಟು ಸಂಕಟಪಡುತ್ತಿರುವವರಲ್ಲಿ ಕನಿಕರವುಳ್ಳವರಾಗಿರಿ. ಸುಮ್ಮನೆ ಅದಕ್ಕೆ ತೇಪೆಹಾಕುವದಕ್ಕೆ ಹೋಗಬೇಡಿರಿ. ಈ ಲೋಕದಲ್ಲಿ ದುಃಖವನ್ನು ಯಾವದೊಂದೂ ಪರಿಹರಿಸಲಾರದು, ಅದನ್ನು ಮೀರಿ ಆಚೆಗೆ ಹೋಗಿರಿ.

ಈ ಪ್ರಪಂಚವು ಸುಖದುಃಖಗಳ ಪ್ರಪಂಚವು. ಎಲ್ಲೆಲ್ಲಿ ಸುಖವಿರುತ್ತದೆಯೋ ಅಲ್ಲಲ್ಲಿ ದುಃಖವು ಬೆಂಬಿಡದಿರುವದು. ಆದರೆ ಈ ತೋರಿಕೆಗಳ ಆಚೆ ಅವುಗಳ ಹಿಂದುಗಡೆಯಲ್ಲಿ, ಈ ದ್ವಂದ್ವಗಳ ಹಿಂದುಗಡೆಯಲ್ಲಿ ಆಧಾರವಾದ ಆ ಏಕತ್ವವನ್ನು ವೇದಾಂತವು ಕಂಡುಹಿಡಿದಿರುತ್ತದೆ. ಅದು "ದುಃಖವನ್ನು ಬಿಡಿರಿ, ಸುಖವನ್ನೂ ಬಿಟ್ಟುಬಿಡಿರಿ!" ಎಂದು ಹೇಳುತ್ತಿರುವದು. ಸುಖಕ್ಕೂ ದುಃಖಕ್ಕೂ ಹಿಂದುಗಡೆಯಲ್ಲಿ ನಿಮ್ಮದೇ ಆಗಿರುವ ನಿಜವಾದ ನೀವು ಎಂಬ ವಸ್ತುವಿರುತ್ತದೆ; ಅದು ದುಃಖವೆಲ್ಲದರ ಆಚೆಯಲ್ಲಿರುತ್ತದೆ, ಸುಖವೆಂಬುದರೆಲ್ಲದರ ಆಚೆಗೂ ಇರುತ್ತದೆ. ಅದೇ ಸುಖವಾಗಿಯೂ ದುಃಖವಾಗಿಯೂ ಕಾಣುತ್ತಿರುವದು. ಅದನ್ನು ಮೊದಲು ತಿಳಿದುಕೊಳ್ಳಿರಿ; ಆಮೇಲೆ, ಆಮೇಲೆಯೇ ನೀವು ನಿಜವಾದ ಶುಭ ದೃಷ್ಟಿಗಳಾಗುವಿರಿ, ಅದಕ್ಕೆ ಮುಂಚೆ ಆಗಲಾರಿರಿ. ಏಕೆಂದರೆ ಆಗ ಎಲ್ಲವೂ ನಿಮ್ಮ ವಶದಲ್ಲಿರುತ್ತದೆ. ಈ ತೋರಿಕೆಗಳನ್ನು ನಿಮ್ಮ ವಶಕ್ಕೆ ತೆಗೆದುಕೊಳ್ಳಿರಿ. ಹಾಗಾದರೆ ನಿಜವಾದ

ನಿಮ್ಮ ಸ್ವರೂಪವನ್ನು ಪ್ರಕಟಗೊಳಿಸುವ ಸ್ವಾತಂತ್ರ್ಯವು ನಿಮಗೆ ದೊರಕುತ್ತದೆ. ಮೊದಲು ಆತ್ಮಜಯವನ್ನು ಮಾಡಿಕೊಳ್ಳಿರಿ, ಎದ್ದು ನಿಂತು ಮುಕ್ತರಾಗಿರಿ, ಈ ನಿಯಮಗಳ ಕ್ಷೇತ್ರವನ್ನು ದಾಟಿಹೋಗಿರಿ; ಏಕೆಂದರೆ ಈ ನಿಯಮಗಳು ನಿಮ್ಮನ್ನು ಎಂದೆಂದಿಗೂ ಆಳುವಂಥವುಗಳಲ್ಲ, ಅವು ನಿಮ್ಮ ಇರವಿನಲ್ಲಿ ಒಂದು ಅಂಶವಾಗಿರುತ್ತವೆ, ಅಷ್ಟೆ. ಮೊಟ್ಟಮೊದಲು ನೀವು ಈ ಪ್ರಕೃತಿಗೆ ಆಳಲ್ಲವೆಂಬುದನ್ನೂ ನಿಮ್ಮ ಆತ್ಮನು ಒಂದು ಸಾಗರವಾಗಿರುವದೆಂಬುದನ್ನೂ ಈ ಪ್ರಕೃತಿಯು ಆ ಸಾಗರದಲ್ಲಿ ಒಂದು ಹನಿಮಾತ್ರವಾಗಿರುವದೆಂಬುದನ್ನೂ ಕಂಡುಕೊಳ್ಳಿರಿ. ನೀವು ನಕ್ಷತ್ರಗಳು, ಸೂರ್ಯ, ಚಂದ್ರ–ಎಲ್ಲವನ್ನೂ ಮೀರಿರುತ್ತೀರಿ. ನಿಮ್ಮ ಅನಂತವಾದ ಸತ್ತೆಗೆ ಹೋಲಿಸಿದರೆ ಅವು ಬರಿಯ ನೀರುಗುಳ್ಳೆಗಳಂತಿರುವವು. ಇದನ್ನು ಮೊದಲು ತಿಳಿದುಕೊಳ್ಳಿರಿ. ಆಗ ಸುಖದುಃಖಗಳೆರಡೂ ನಿಮ್ಮ ವಶವಾಗುವವು. ಆಗಲೇ ಇಡಿಯ ವಿಶ್ವವೇ ಬದಲಾಗಿಬಿಡುತ್ತದೆ; ಆಗ ನೀವು ಎದ್ದುನಿಂತು "ಸುಖವೆಂಬುದು ಎಷ್ಟು ಸುಂದರವಾಗಿದೆ! ದುಃಖವೆಂಬುದು ಎಷ್ಟು ವಿಚಿತ್ರವಾಗಿದೆ!" ಎನ್ನುವಿರಿ.

ಇದೇ ವೇದಾಂತದ ಉಪದೇಶವು. ಗಾಯಗಳಿಗೆ ಗುನ್ನಂಪಟ್ಟೆಯನ್ನು ಹಚ್ಚುವದು, ಆ ಗಾಯಗಳು ಮತ್ತಷ್ಟು ಕೀತುಕೊಂಡರೆ ಮತ್ತಷ್ಟು ಗುನ್ನಂಪಟ್ಟೆಯನ್ನು ಹಚ್ಚುವದು–ಇಂಥ ತಾತ್ಕಾಲಿಕ ಉಪಾಯವನ್ನೇನೂ ಅದು ಸೂಚಿಸುವದಿಲ್ಲ. ಈ ಜೀವನವೆಂಬುದು ಗಟ್ಟಿಭದ್ರವಾಗಿರುವ ಘಟನೆಯಾಗಿರುತ್ತದೆ; ಇದರಲ್ಲಿ ಧೈರ್ಯದಿಂದ ಸರಿಯಾದ ಮಾರ್ಗವೊಂದನ್ನು ಕಂಡುಕೊಂಡು ಮುಂದಕ್ಕೆ ನಡೆಯಿರಿ. ಇದು ವಜ್ರದಂತೆ ಘನವಾಗಿರಬಹುದು; ಆದರೇನು? ನಿಮ್ಮ ಆತ್ಮವು ಅದಕ್ಕಿಂತಲೂ ಬಲವಾಗಿರುತ್ತದೆ. ವೇದಾಂತವು ಸಣ್ಣಪುಟ್ಟ ದೇವತೆಗಳಿಗೆ ಯಾವ ಹೊಣೆಗಾರಿಕೆಯನ್ನೂ ಕಟ್ಟುವದಿಲ್ಲ, ಏಕೆಂದರೆ ನಿಮ್ಮ ಅಭ್ಯುದಯಕ್ಕೆ ನೀವೇ ಹೊಣೆಗಾರರಾಗಿರುತ್ತೀರಿ. ನಿಮಗೆ ನೀವೇ ದುಃಖಕ್ಕೆ ಕಾರಣರಾಗಿರುತ್ತೀರಿ; ಸುಖದುಃಖಗಳಿಗೆ ನೀವೇ ಕಾರಣರು, ನಿಮ್ಮ ಕಣ್ಣಿಗೆ ನೀವೇ ಕೈಗಳನ್ನು ಮುಚ್ಚಿಕೊಂಡು 'ಅಯ್ಯೋ! ಕತ್ತಲೆಯಾಗಿದೆಯಲ್ಲ!' ಎಂದು ಕೂಗಿಕೊಳ್ಳುತ್ತಿರುವಿರಿ, ಕೈಗಳನ್ನು ಆಚೆಗೆ ತೆಗೆದು ಬೆಳಕನ್ನು ಕಾಣಿರಿ; ನೀವು ಸುಪ್ರಕಾಶರಾಗಿರುತ್ತೀರಿ, ನೀವು ಆಗಲೇ ಮುಕ್ತರಾಗಿರುತ್ತೀರಿ, ಅನಾದಿಯಿಂದಲೂ ಮುಕ್ತರಾಗಿರುತ್ತೀರಿ. "ಯಾವನು ಇಲ್ಲಿ ನಾನಾತ್ವವಿರುವಂತೆ ಕಾಣುವನೋ ಅವನು ಮೃತ್ಯುವಿನಿಂದ ಮೃತ್ಯುವನ್ನು ಪಡೆಯುವನು" (2–1–10) ಎಂಬ ಮಂತ್ರಕ್ಕೆ ಈಗ ಅರ್ಥವಾಗುತ್ತದೆ. ಆ ಒಂದನ್ನು ಕಂಡು ಮುಕ್ತರಾಗಿರಿ.

ಇದನ್ನು ಕಾಣುವ ಬಗೆ ಹೇಗೆ? ಈ ಮನಸ್ಸು - ಇಂಥ ಮೋಹದಲ್ಲಡಗಿರುವ ಇಷ್ಟು ದುರ್ಬಲವಾಗಿರುವ, ಸುಲಭವಾಗಿ ದಾರಿತಪ್ಪಿಹೋಗುವ - ಈ ಮನಸ್ಸು ಕೂಡ ಬಲಿಷ್ಠವಾಗಬಹುದು, ಇದು ಅಜ್ಞಾನದ-ಮತ್ತೆ ಮತ್ತೆ ಸಾಯುದಂತೆ ರಕ್ಷಿಸುವ ಆ ಏಕತ್ವದ- ಒಂದು ಝಳಕನ್ನು ಕಾಣಬಹುದು. (2-1-11) ಬೆಟ್ಟದ ಮೇಲೆ ಬಿದ್ದ ನೀರು ಬೇರೆ ಬೇರೆ ಹೊಳೆಗಳಾಗಿ ತಪ್ಪಲುಗಳಿಗೆ ಹರಿದುಬರುವಂತೆ ಇಲ್ಲಿ ಕಾಣುವ ಶಕ್ತಿ ವಿಷೇಶಗಳೆಲ್ಲ ಆ ಒಂದು ಏಕದಿಂದಲೇ ಬಂದಿರುತ್ತವೆ (2-1-14). ನಾನಾತ್ವದ ಕಡೆಗೆ ಹರಿಯಬೇಡಿರಿ, ಏಕತ್ವದ ಕಡೆಗೆ ಹೋಗಿರಿ. "ಓಡಾಡುವದರಲ್ಲೆಲ್ಲ ಆತನೇ, ಶುಚಿಯಾಗಿರುವವರಲ್ಲೆಲ್ಲ ಆತನೇ, ಜಗತ್ತನ್ನೆಲ್ಲ ಆವರಿಸಿರುತ್ತಾನೆ. ಯಜ್ಞದಲ್ಲಿರುವವನೂ ಆತನೇ, ಆತನೇ ಆ ಮಹಾತ್ಮನು" (2-2-2) ಬೆಂಕಿಯು ಈ ಲೋಕವನ್ನು ಹೊಕ್ಕು ಬೇರೆಬೇರೆಯ ರೂಪಗಳನ್ನು ಹೊಂದುತ್ತಿರುವಂತೆಯೇ, ವಿಶ್ವಕ್ಕೆಲ್ಲ ಆತ್ಮನಾದ ಆತನು ಈ ಎಲ್ಲಾ ರೂಪಗಳಲ್ಲಿಯೂ ತೋರಿಕೊಳ್ಳುತ್ತಿರುವನು. ವಾಯುವು ಈ ಲೋಕವನ್ನೊಳಹೊಕ್ಕು ಬೇರೆಬೇರೆ ರೂಪಗಳಾಗುತ್ತಿರುವಂತೆಯೇ ಎಲ್ಲಾ ಭೂತಗಳ ಆತ್ಮರುಗಳಿಗೂ ಆತ್ಮನಾಗಿರುವ ಆತನು ಎಲ್ಲಾ ರೂಪಗಳಿಂದಲೂ ತೋರಿಕೊಳ್ಳುತ್ತಿರುವನು" (2-2-8,9). ಏಕೆಂದರೆ ಈ ಏಕತ್ವವನ್ನು ಅರಿತುಕೊಂಡ ಮೇಲೆ ಇದು ನಿಜವಾಗುವದೇ ಹೊರತು ಅದಕ್ಕಿಂತ ಮುಂಚೆ ನಿಜವಾಗಲಾರದು. ಆಗ ಎಲ್ಲವೂ ಶುಭದೃಷ್ಟಿಯ ಆಗಿರುತ್ತದೆ, ಏಕೆಂದರೆ ಆಗ ಪರಮಾತ್ಮನೇ ಎಲ್ಲೆಲ್ಲಿಯೂ ಕಾಣಿಸುತ್ತಿರುತ್ತಾನೆ. ಇದೆಲ್ಲವೂ ನಿಜವಾಗಿದ್ದರೆ, ಆ ಪರಿಶುದ್ಧನಾದ ಆತ್ಮನೇ, ಆ ಅನಂತನೇ, ಇದೆಲ್ಲವನ್ನೂ ಒಳಹೊಕ್ಕಿರುವದು ನಿಜವಾಗಿದ್ದರೆ ಅವನಿಗೆ ದುಃಖವಾಗುವದೇಕೆ? ಅವನು ಸಂಕಟಕ್ಕೊಳಗಾಗಿ ಅಪರಿಶುದ್ಧವಾಗಿರುವದೇಕೆ? ... ಎಂಬುದೀಗ ಪ್ರಶ್ನೆ. ಉಪನಿಷತ್ತಿನಲ್ಲಿ ಇದಕ್ಕೆ ಹೇಳುವದೇನೆಂದರೆ ಅವನು ಅಪರಿಶುದ್ಧನಾಗಿಲ್ಲ. 'ಸೂರ್ಯನು ಪ್ರತಿಯೊಂದು ಪ್ರಾಣಿಗೂ ದೃಷ್ಟಿ ಸಹಾಯಕನಾಗಿರುತ್ತಿದ್ದರೂ ಯಾವದೊಂದು ಕಣ್ಣಿನ ದೋಷದಿಂದಲೂ ಲಿಪ್ತನಾಗದೆ ಇರುವಂತೆ ಸರ್ವಭೂತಗಳಿಗೂ ಅಂತರಾತ್ಮನಾಗಿರುವ ಆತನು ದೇಹದ ದುಃಖಗಳಿಂದಾಗಲಿ ಅಥವಾ ಲೋಕದಲ್ಲಿ ನಿಮ್ಮ ಸುತ್ತಮುತ್ತಲೂ ಕಾಣುತ್ತಿರುವ ಮತ್ತೆ ಯಾವ ದುಃಖದಿಂದಲಾಗಲಿ ಲಿಪ್ತನಾಗುವದಿಲ್ಲ' (2-2-11) ನನಗೆ ಯಾವದೋ ಒಂದು ಕಣ್ಣಿನ ರೋಗವಿರುವದರಿಂದ ಪ್ರತಿಯೊಂದು ವಸ್ತುವೂ ನನಗೆ ಹಳದಿಯಾಗಿ ಕಾಣುತ್ತಿರಬಹುದು; ಆದರೆ ಅದರಿಂದ ಸೂರ್ಯನಿಗೇನೂ ಆಗುವಂತಿರುವದಿಲ್ಲ. 'ಆತನು ಏಕನು, ಎಲ್ಲವನ್ನೂ ಆಳುತ್ತಿರುವವನು, ಸರ್ವಭೂತಗಳಿಗೂ

ಅಂತರಾತ್ಮನು, ತನ್ನ ಒಂದು ಏಕತ್ವವನ್ನು ನಾನಾ ರೂಪವಾಗಿ ಮಾಡುತ್ತಿರುವವನು. ಆತನನ್ನು ಯಾವ ಧೀರರು ತಮ್ಮ ಆತ್ಮನೆಂದು ಕಂಡುಕೊಳ್ಳುವರೋ ಅವರಿಗೇ ನಿತ್ಯಶಾಂತಿಯು, ಮಿಕ್ಕವರಿಗಿಲ್ಲ, ಮಿಕ್ಕವರಿಗಿಲ್ಲ" (2–2–12) ಈ ಅನಿತ್ಯಪ್ರಪಂಚದಲ್ಲಿ ನಿತ್ಯನಾದ, ಈ ಸಾವಿನ ಪ್ರಪಂಚದಲ್ಲಿ ಏಕಮಾತ್ರ ಪ್ರಾಣ ಸ್ವರೂಪನಾಗಿರುವ, ಈ ನಾನಾತ್ವದಲ್ಲಿ ಏಕನಾಗಿರುವ ಯಾವನು ಕಂಡುಕೊಳ್ಳುವನೋ, ಯಾರು ಯಾರು ತಮ್ಮ ಆತ್ಮನು ಆತ್ಮನೆಂದು ಕಂಡುಕೊಳ್ಳುವರೋ ಅವರಿಗೇ ನಿತ್ಯ ಶಾಂತಿಯು, ಮಿಕ್ಕವರಿಗಿಲ್ಲ, ಮಿಕ್ಕವರಿಗಿಲ್ಲ" (2–2–13). ಹೊರಗಿನ ಪ್ರಪಂಚದಲ್ಲಿ ಎಲ್ಲಿ ಕಾಣುವದು? ಸೂರ್ಯರಲ್ಲಿಯೂ ಚಂದ್ರರಲ್ಲಿಯೂ ನಕ್ಷತ್ರಗಳಲ್ಲಿಯೂ ಆತನನ್ನು ಎಲ್ಲಿ ಕಾಣುವದು? (2–2–14) "ಅಲ್ಲಿ ಸೂರ್ಯನು ಬೆಳಗಲಾರನು, ಚಂದ್ರನಾಗಲಿ ತಾರಕೆಗಳಾಗಲಿ ಬೆಳಗಲಾರವು, ಥಳಾರೆನ್ನುವ ಈ ಮಿಂಚಿನ ಹೊಳಪೂ ಬೆಳಗಲಾರದು. ಹೀಗಿರುವಲ್ಲಿ ಈ ಸಾಯುವ ಬೆಂಕಿಯ ಮಾತೇನು? ಆತನು ಬೆಳಗುತ್ತಿದ್ದರೆ ಮಿಕ್ಕೆಲ್ಲವೂ ಬೆಳಗುತ್ತದೆ, ಆತನ ಬೆಳಕನ್ನೇ ಅವು ಎರವಾಗಿ ತೆಗೆದುಕೊಂಡಿರವವು. ಆತನೇ ಅವುಗಳ ಮೂಲಕ ಬೆಳಗುತ್ತಿರುವವನು." (2–2–15).

ಇಗೋ, ಇಲ್ಲಿ ಮತ್ತೊಂದು ಸುಂದರವಾದ ಉಪಮಾನವನ್ನು ಕೊಟ್ಟಿರುತ್ತದೆ. ನಿಮ್ಮಲ್ಲಿ ಯಾರಾದರೂ ಇಂಡಿಯಕ್ಕೆ ಹೋಗಿದ್ದರೆ ಆಲದ ಮರವು ಒಂದು ಬೇರಿನಿಂದ ಹೊರಟು ಸುತ್ತಲೂ ಹರಡಿಕೊಂಡಿರುವದನ್ನು ನೋಡಿದ್ದರೆ ಇದು ನಿಮಗೆ ತಿಳಿಯುವದು. ಆತನೇ ಆ ಆಲದ(?) ಮರವು; ಆತನೇ ಎಲ್ಲಕ್ಕೂ ಬೇರು, ಆತನೇ ಕೊಂಬೆಗಳಾಗಿ ಕವಲೊಡೆದುಕೊಂಡು ಈ ಪ್ರಪಂಚವಾಗಿರುತ್ತಾನೆ. ಅವನು ಎಷ್ಟೇ ವಿಸ್ತರಿಸಿಕೊಂಡಿದ್ದರೂ ಈ ಬುಡಗಳಲ್ಲಿ ಒಂದೊಂದೂ ಈ ಕೊಂಬೆಗಳಲ್ಲಿ ಒಂದೊಂದು ಪರಸ್ಪರಸಂಬಂಧವಾಗಿಯೇ ಇರುತ್ತವೆ.(2–3–1).

ವೇದಗಳ ಬ್ರಾಹ್ಮಣ ಭಾಗದಲ್ಲಿ ಬಗೆಬಗೆಯ ಪರಲೋಕಗಳನ್ನು ಕುರಿತು ಪ್ರಸ್ತಾಪಿಸಿರುತ್ತದೆ. ಆದರೆ ಉಪನಿಷತ್ತುಗಳ ಜ್ಞಾನೋಪದೇಶದಲ್ಲಿ ಪರಲೋಕಪ್ರಾಪ್ತಿಯೆಂಬ ವಿಚಾರವನ್ನೇ ಕೈಬಿಟ್ಟಿರುತ್ತದೆ. ಸುಖವೆಂಬುದು ಈ ಲೋಕದಲ್ಲಾಗಲಿ ಆ ಲೋಕದಲ್ಲಾಗಲಿ ಇರುವದಿಲ್ಲ, ಅದು ಆತ್ಮನಲ್ಲಿಯೇ ಇದ್ದುಕೊಂಡಿರುತ್ತದೆ. ಯಾವ ಸ್ಥಳವಾದರೂ ಅಷ್ಟೇ, ಅದಕ್ಕೇನೂ ಹೆಚ್ಚಿನ ಅರ್ಥವಿಲ್ಲ. ಇಗೋ ಇಲ್ಲಿ ಬೇರೆ ಬೇರೆ ಬಗೆಯ ಸಾಕ್ಷಾತ್ಕಾರದ ಅಂತಸ್ತುಗಳನ್ನು ತಿಳಿಸುವ ವಾಕ್ಯವಿದೆ. "ಕನಸಿನಲ್ಲಿ ಪದಾರ್ಥಗಳು ಕಾಣುವಂತೆಯೇ ಪಿತೃಲೋಕದಲ್ಲಿ ತತ್ತ್ವಮುಕಾಣಿಸುತ್ತದೆ". (2–3–4) ಕನಸುಗಳಲ್ಲಿ ವಸ್ತುಗಳು ಹೇಗೆ ಮುಸುಕುಮುಸುಕಾಗಿಯೇ ಕಾಣಿಸುವವೇ ಹೊರತು ವಿಂಗಡವಾಗಿ ಹೇಗೆ

ಕಾಣಿಸುವದಿಲ್ಲವೋ, ಹಾಗೆಯೇ ಅಲ್ಲಿ ತತ್ತ್ವವು ನಮಗೆ ಕಾಣಿಸುತ್ತದೆ. **ಗಂಧರ್ವಲೋಕ**ವೆಂಬ ಮತ್ತೊಂದು ಲೋಕವುಂಟು, ಅಲ್ಲಿ ಅದು ಇನ್ನೂ ಅಸ್ಪಷ್ಟವಾಗಿರುತ್ತದೆ; ಮನುಷ್ಯನು ನೀರಿನಲ್ಲಿ ತನ್ನ ನೆರಳನ್ನು ಕಾಣುವಂತೆಯೇ ಅಲ್ಲಿ ತತ್ತ್ವವು ಕಾಣಿಸುತ್ತದೆ. ಹಿಂದುಗಳ ಭಾವನೆಯಲ್ಲಿ ಇರುವ ಅತ್ಯಂತ ಮೇಲ್ತರದ ಊರ್ಧ್ವಲೋಕಕ್ಕೆ **ಬ್ರಹ್ಮಲೋಕ**ವೆಂದು ಹೆಸರು; ಅಲ್ಲಿ ತತ್ತ್ವವು ಹೆಚ್ಚು ಸ್ಪಷ್ಟವಾಗಿಯೇ ಕಾಣಿಸುತ್ತದೆ, ಅದು ಬೆಳಕು ನೆರಳುಗಳಂತೆ ಅಲ್ಲಿ ತೋರುತ್ತಿದೆಯಾದರೂ ಸಂಪೂರ್ಣವಾಗಿ ಬೇರ್ಪಟ್ಟು ಕಾಣಿಸುವದಿಲ್ಲ. ಆದರೆ ಕನ್ನಡಿಯಲ್ಲಿ ಹೇಗೆ ಮನುಷ್ಯನು ತನ್ನ ಮುಖವನ್ನು ಪೂರ್ಣವಾಗಿ, ಸ್ಪಷ್ಟವಾಗಿ, ಸ್ವಚ್ಛವಾಗಿ ಕಾಣಬರುತ್ತಿದೆಯೋ ಹಾಗೆಯೇ ತತ್ತ್ವವು ಮನುಷ್ಯನ ಆತ್ಮನಲ್ಲಿ ಕಾಣಿಸುತ್ತಿದೆ (3-3-4) ಆದ್ದರಿಂದ ಅತ್ಯಂತ ಮೇಲಿನ ಲೋಕವೆಂಬುದು ನಮ್ಮಗಳ ಆತ್ಮನಲ್ಲಿಯೇ ಇರುವದು. ಪೂಜೆಗೆ ತಕ್ಕ ಮಹಾದೇವಾಲಯವೆಂದರೆ ಮನುಷ್ಯ ಆತ್ಮನೇ; ಅದು ಎಲ್ಲಾ ಊರ್ಧ್ವಲೋಕಗಳಗಿಂತಲೂ ಹೆಚ್ಚಾದದ್ದು, ಏಕೆಂದರೆ ಯಾವ ಲೋಕದಲ್ಲಿಯೇ ಆಗಲಿ ಈ ಜೀವನದಲ್ಲಿ ನಮ್ಮ ಆತ್ಮದಲ್ಲಿಯೇ ಕಾಣುವಷ್ಟು ವಿಂಗಡವಾಗಿಯೂ ಅಷ್ಟು ಸ್ಪಷ್ಟವಾಗಿಯೂ ತತ್ತ್ವವು ಮತ್ತೆಲ್ಲಿಯೂ ಕಾಣಿಸುವದಿಲ್ಲ- ಎಂದು ವೇದಾಂತದಲ್ಲಿ ಹೇಳಿರುತ್ತದೆ. ಸುಮ್ಮನೆ ಸ್ಥಳವನ್ನು ಬದಲಾಯಿಸಿದ ಮಾತ್ರದಿಂದ ಅಷ್ಟೇನೂ ಪ್ರಯೋಜನವಾಗುವದಿಲ್ಲ. ಇಂಡಿಯದಲ್ಲಿದ್ದಾಗ ನನಗೆ ಗುಹೆಯಲ್ಲಿದ್ದರೆ ದೃಷ್ಟಿಯು ಸ್ವಚ್ಛತರವಾಗಿರುವದೆಂದು ತೋರುತ್ತಿತ್ತು. ಆದರೆ ಅದು ಸುಳ್ಳೆಂಬು ಆಮೇಲೆ ಗೊತ್ತಾಯಿತು. ಬಳಿಕ ಕಾಡಾದರೆ ಆ ಪ್ರಯೋಜನವಾದೀತು ಎನಿಸಿತು, ಆಮೇಲೆ **ವಾರಾಣಸಿ**ಯಾದರೆ ಮೇಲು ಎಂದು ತೋರಿತು. ಆದರೆ ಎಲ್ಲೆಲ್ಲಿಯೂ ಅದೇ ಕಷ್ಟವೇ ಇದ್ದುಕೊಂಡಿತ್ತು. ಏಕೆಂದರೆ ನಮ್ಮ ನಮ್ಮ ಲೋಕಕ್ಕೆ ನಾವೇ ಕಾರಣರಾಗಿರುತ್ತೇವೆ. ನಾನು ಕೆಟ್ಟವನಾದರೆ ಇಡಿಯ ಲೋಕವೇ ನನಗೆ ಕೆಟ್ಟದಾಗಿ ತೋರುತ್ತದೆ. ಇದೇ ಉಪನಿಷತ್ತುಗಳ ಉಪದೇಶವು. ಈ ಮಾತು ಎಲ್ಲಾ ಲೋಕಗಳಿಗೂ ಅನ್ವಯಿಸುತ್ತದೆ. ಸತ್ತು ಪರಲೋಕಕ್ಕೆ ಹೋದರೂ ಅಷ್ಟೇ; ಏಕೆಂದರೆ ಪರಿಶುದ್ಧನಾಗುವವರೆಗೂ ಗುಹೆಗಳಿಗೆ ಹೋಗುವದಾಗಲಿ ಕಾಡುಗಳಿಗೆ ಹೋಗುವದಾಗಲಿ ವಾರಾಣಸಿಗೆ ಹೋಗುವದಾಗಲಿ ಸ್ವರ್ಗಕ್ಕೆ ಹೋಗುವದಾಗಲಿ ಪ್ರಯೋಜನಕಾರಿಯಾಗಲಾರದು. ನಮ್ಮ ಕನ್ನಡಿಯನ್ನು ಸ್ವಚ್ಛಗೊಳಿಸಿಕೊಂಡರೆ ನಾವು ಎಲ್ಲಿದ್ದರೂ ಸರಿಯೆ, ತತ್ತ್ವವು ಇದ್ದದ್ದು ಇದ್ದಹಾಗೆಯೇ ಕಾಣಿಸುತ್ತಿದೆ. ಆದ್ದರಿಂದ ಅಲ್ಲಿಗೂ ಇಲ್ಲಿಗೂ ಓಡಾಡುತ್ತಾ ಶಕ್ತಿಯನ್ನು ಸುಮ್ಮನೆ ಕಳೆದುಕೊಳ್ಳುವದರಿಂದ ಯಾವ ಪ್ರಯೋಜನವೂ ಇರುವದಿಲ್ಲ. ಕನ್ನಡಿಯನ್ನು ಸ್ವಚ್ಛಗೊಳಿಸುವದಕ್ಕೇ ಆ ಶಕ್ತಿಯನ್ನು ವಿನಿಯೋಗಿಸಬೇಕು. ಇದೇ

ಅಭಿಪ್ರಾಯವನ್ನು ಮತ್ತೊಂದು ಬಗೆಯಲ್ಲಿಯೂ ಉಪನಿಷತ್ತು ತಿಳಿಸುತ್ತದೆ. "ಆತನನ್ನು ಯಾರೂ ಕಾಣರು, ಕಣ್ಣುಗಳಿಂದ ಆತನ ರೂಪವನ್ನು ಯಾರೂ ನೋಡಲಾರರು. ಮನಸ್ಸಿನಲ್ಲಿ, ಪರಿಶುದ್ಧವಾದ ಮನಸ್ಸಿನಲ್ಲಿಯೇ ಆತನು ಕಾಣಿಸುವನು, ಆದ್ದರಿಂದ ಅಮೃತವು ಲಭಿಸುತ್ತದೆ." (2–3–9)

ರಾಜಯೋಗದ ಗ್ರೀಷ್ಮೋಪನ್ಯಾಸ ಮಾಲೆಯ ಕಾಲದಲ್ಲಿ ಬಂದಿದ್ದವರಿಗೆ ಆಗ ನಾನು ತಿಳಿಸಿದ ಯೋಗವೇ ಬೇರೆ ಜಾತಿಯದು. ಈಗ ನಾವು ನಿರೂಪಿಸುತ್ತಿರುವ ಯೋಗದಲ್ಲಿ ಇಂದ್ರಿಯ ಸಂಯಮವೇ ಮುಖ್ಯವಾಗಿರುತ್ತದೆ. ಮನುಷ್ಯನ ಆತ್ಮವು ಇಂದ್ರಿಯಗಳನ್ನು ಅಡಿಯಾಳುಗಳಾಗಿ ಮಾಡಿಟ್ಟು ಕೊಂಡಿತೆಂದರೆ, ಅವು ಇನ್ನು ಮೇಲೆ ಮನಸ್ಸನ್ನು ಚಂಚಲಗೊಳಿಸಲಾರವು ಎಂದು ಗೊತ್ತಾದರೆ, ಆಗ ಯೋಗಿಯು ತನ್ನ ಗುರಿಯನ್ನು ಮುಟ್ಟಿದಂತಾಯಿತು. (2–3–11) "ಹೃದಯದ ನಿರರ್ಥಕವಾದ ಕಾಮನೆಗಳೆಲ್ಲವನ್ನೂ ಬಿಟ್ಟುಬಿಟ್ಟಾಗ, ಈ ಮರ್ತ್ಯನೇ ಅಮೃತನಾಗುವನು, ಇಲ್ಲಿಯೇ ಬ್ರಹ್ಮೈಕ್ಯವನ್ನೂ ಪಡೆದುಕೊಳ್ಳುವನು. ಹೃದಯದ ಗ್ರಂಥಿಗಳೆಲ್ಲವೂ ಹೋದಮೇಲೆ, ಆಗ ಮರ್ತ್ಯನು ಅಮೃತನಾಗುವನು, ಇಷ್ಟೇ ತಿಳಿಸತಕ್ಕದ್ದು". (2–3–14, 15)

ಇಲ್ಲಿ ಕೆಲವು ಮಾತುಗಳನ್ನಾಡುವದು ಅವಶ್ಯ. ವೇದಾಂತವೆಂಬ ಈ ದರ್ಶನವೂ ಮತ್ತು ಮಿಕ್ಕ ಪೌರ್ವಾತ್ಯ ಸಿದ್ಧಾಂತಗಳೂ ಯಾವದೋ ಒಂದು ಲೋಕಾತೀತ ಪುರುಷಾರ್ಥವನ್ನು ನಿರೀಕ್ಷಿಸಿಕೊಂಡು ಈ ಜೀವನದ ಭೋಗಗಳನ್ನು ಹೆಣಗಾಟವನ್ನು ಕೈಬಿಟ್ಟಿರುತ್ತವೆ ಎಂದು ಜನರು ಸಾಮಾನ್ಯವಾಗಿ ಹೇಳುವದುಂಟು. ಆದರೆ ಈ ಅಭಿಪ್ರಾಯವು ಸಂಪೂರ್ಣವಾಗಿಯೂ ತಪ್ಪಾಗಿರುತ್ತದೆ. ಪೂರ್ವದೇಶಗಳ ವಿಚಾರ ಪದ್ಧತಿಯು ಒಂದಿಷ್ಟೂ ತಿಳಿಯದ, ಅದರಲ್ಲಿರುವ ತತ್ತ್ವೋಪದೇಶವೇನೆಂಬುದನ್ನು ಒಂದಿಷ್ಟೂ ತಿಳಿಯಲಾರದ ಮೊದ್ದುಳಿನ ಜನರೇ ಇಂಥ ಮಾತನ್ನಾಡುವವರು. ನಿಜವು ಹೀಗಿರುವದಕ್ಕೆ ಬದಲು, ನಮ್ಮ ದರ್ಶನಕಾರರಿಗೆ ಪರಲೋಕಗಳಿಗೆ ಹೋಗುವ ಅಭಿಲಾಷೆಯಿಲ್ಲವೆಂದು ನಮ್ಮ ಶಾಸ್ತ್ರಗಳಲ್ಲಿ ಹೇಳಿರುತ್ತದೆ. ಆ ಲೋಕಗಳಲ್ಲಿ ಜನರು ಸ್ವಲ್ಪಕಾಲದ ಮಟ್ಟಿಗೆ ಅಳುತ್ತಲೂ, ನಗುತ್ತಲೂ ಇದ್ದ ಬಳಿಕ ಸಾಯುವರೆಂದು ಆ ಲೋಕಗಳನ್ನು ಶಾಸ್ತ್ರಗಳು ಅಸಡ್ಡೆಯಾಗಿ ಕಾಣುತ್ತವೆ. ನಾವು ದುರ್ಬಲರಾಗಿರುವವರೆಗೂ ಈ ಅನುಭವಗಳೇ ನಮಗೆ ಬೇಕಾಗುವವೆಂಬುದು ನಿಜ; ಆದರೆ ಯಾವದು ಸತ್ಯವಾದದ್ದೋ ಅದು ಇಲ್ಲಿಯೂ ಇದ್ದೇ ಇರುತ್ತದೆ, ನಮ್ಮ ಆತ್ಮವೇ ಆ ಪರಮಾರ್ಥ

* ಮೂಲಮಂತ್ರಕ್ಕೆ ಅನುಸಾರವಾಗಿ ಪರಿವರ್ತನೆಯನ್ನು ಮಾಡಿಕೊಂಡಿರುತ್ತದೆ.

ವಸ್ತು. ಇದಲ್ಲದೆ ಸುಮ್ಮನೆ ಆತ್ಮಹತ್ಯೆಯನ್ನು ಮಾಡಿಕೊಂಡ ಮಾತ್ರದಿಂದ ಯಾವದು ಆಗಿಯೇ ತೀರಬೇಕೋ ಅದನ್ನು ತಪ್ಪಿಸಿಕೊಳ್ಳುವದಕ್ಕೆ ಆಗುವದಿಲ್ಲ, ಅದನ್ನು ದೂರವಾಗಿರಿಸುವದಕ್ಕೆ ಆಗುವದಿಲ್ಲ-ಎಂದೂ ಶಾಸ್ತ್ರದಲ್ಲಿ ಒತ್ತಿ ಹೇಳಿರುತ್ತದೆ. ಆದರೆ ನಿಜವಾದ ಹಾದಿಯೆಂಬುದು ಸಿಕ್ಕುವದು ಕಷ್ಟ. ಪಾಶ್ಚಾತ್ಯರು ಎಷ್ಟು ಅನುಷ್ಠಾನತತ್ಪರರೋ ಅಷ್ಟರಮಟ್ಟಿಗೇ ಹಿಂದುಗಳೂ ಅನುಷ್ಠಾನತತ್ಪರರೇ ಆಗಿರುತ್ತಾರೆ; ಆದರೆ ಜೀವನದ ವಿಷಯದಲ್ಲಿ ನಮ್ಮಿಬ್ಬರ ದೃಷ್ಟಿಯು ಬೇರೆಬೇರೆ ಯಾಗಿರುತ್ತದೆ, ಅಷ್ಟೆ. ಒಬ್ಬನು ಒಳ್ಳೆಯ ಮನೆಯನ್ನು ಕಟ್ಟಬೇಕು, ಉತ್ತಮವಾದ ಬಟ್ಟೆಬರೆಗಳಾಗಬೇಕು, ಅನ್ನಾಹಾರಗಳಾಗಬೇಕು, ಬುದ್ಧಿಚಾತುರ್ಯವಿರಬೇಕು-ಎಂದು ಮುಂತಾಗಿ ಅನ್ನುತ್ತಾನೆ; ಅವನ ಅಭಿಪ್ರಾಯದಲ್ಲಿ ಇದೇ ಜೀವನದ ಸರ್ವಸ್ವವಾಗಿರುತ್ತದೆ. ಆ ವಿಷಯದಲ್ಲಿ ಅವನು ತೀರ ಅನುಷ್ಠಾನ ಪ್ರಧಾನನಾಗಿರುತ್ತಾನೆ. ಆದರೆ ಹಿಂದುವಿನ ಅಭಿಪ್ರಾಯದಲ್ಲಿ ಪ್ರಪಂಚದ ನಿಜವಾದ ಜ್ಞಾನವೆಂದರೆ ಆತ್ಮಜ್ಞಾನವು, ಆಧಿಭೌತಿಕವಿದ್ಯೆಯು; ಆದ್ದರಿಂದ ಅವನಿಗೆ ಆ ಬಗೆಯ ಜೀವನವನ್ನು ಅನುಭವಿಸಬೇಕೆಂಬುದೇ ಅವನ ಅಭಿಲಾಷೆ. ಅಮೆರಿಕದಲ್ಲಿ ಒಬ್ಬ ಮಹಾಸಂಶಯವಾದಿಯಿದ್ದನು,* ಆತನು ಒಳ್ಳೆ ಯೋಗ್ಯನು, ಬಲು ಒಳ್ಳೆಯವನು, ಮಹಾವಾಗ್ಮಿಯು. ಆತನು ಧರ್ಮದ ವಿಷಯವಾಗಿ ಉಪನ್ಯಾಸಮಾಡುವಾಗ ಅದರಿಂದ ಯಾವ ಉಪಯೋಗವೂ ಇಲ್ಲವೆಂದು ಹೇಳುತ್ತಿದ್ದನು; ಪರಲೋಕಗಳ ವಿಷಯವಾಗಿ ಏತಕ್ಕೆ ಚಿಂತೆಯನ್ನು ಹಚ್ಚಿಕೊಳ್ಳಬೇಕು? ಎಂದು ತಿಳಿಸುವದಕ್ಕೋಸ್ಕರ ಆತನು ಈ ಉಪಮಾನವನ್ನು ಪಯೋಗಿಸುತ್ತಿದ್ದನು. ಇಗೋ ಇಲ್ಲಿ ಒಂದು ಕಿತ್ತಳೆಯ ಹಣ್ಣಿದೆ, ಅದರಲ್ಲಿರುವ ರಸವೆಲ್ಲ ನಮಗೆ ಬೇಕಾಗಿರುತ್ತದೆ, ಅದನ್ನು ನಾವು ಹಿಂಡಿಕೊಳ್ಳಬೇಕು-ಎನ್ನುತ್ತಿದ್ದನು. ಒಂದು ಸಲ ನಾವು ಇಬ್ಬರೂ ಸೇರಿದೆವು; ಆಗ ನಾನು "ಸರಿಯೆ, ನೀವು ಹೇಳುವದು ನನಗೆ ಸಂಪೂರ್ಣ ಸಮ್ಮತವಾಗಿರುತ್ತದೆ. ನನ್ನ ಅಭಿಪ್ರಾಯದಲ್ಲೂ ಒಂದು ಹಣ್ಣಿರುತ್ತದೆ, ನಾನೂ ಅದರಲ್ಲಿರುವ ರಸವನ್ನು ಹಿಂಡಿಕೊಳ್ಳಬೇಕೆನ್ನುತ್ತೇನೆ. ಆದರೆ ನಮ್ಮಿಬ್ಬರಿಗೆ ಬೇರೆ ಬೇರೆ ಹಣ್ಣು ಬೇಕು. ನೀವು ಈ ಲೋಕದಲ್ಲಿ ಬದುಕಿದ್ದು ಊಟಉಪಚಾರಗಳನ್ನು ನೋಡಿಕೊಂಡು ಒಂದಿಷ್ಟು ಭೌತಿಕ ಜ್ಞಾನವನ್ನು ಸಂಪಾದಿಸಿಕೊಂಡರೆ ಸಾಕೆನ್ನುತ್ತೀರಿ; ಆದರೆ ಇದೇ ಎಲ್ಲರಿಗೂ ಸಮ್ಮತವಾಗಬೇಕೆಂದು ಹೇಳುವದಕ್ಕೆ ನಿಮಗೆ ಅಧಿಕಾರವಿಲ್ಲ. ಇಂಥ ಭಾವನೆಯು ನನಗೆ ಏನೇನೂ ಅರ್ಥವಿಲ್ಲದ್ದು. ಒಂದು ಶೇಬುಹಣ್ಣು ನೆಲಕ್ಕೆ ಬೀಳುವದೇಕೆ, ವಿದ್ಯುತ್ಪ್ರವಾಹವು ನಮ್ಮ ನರಗಳನ್ನು ಅಲುಗಾಡಿಸುವದೇಕೆ?-

* ಈತನೇ ಇಂಗರ್ಸಾಲ್ ಎಂಬಾತನೆಂದು ತೋರುತ್ತದೆ.

ಎಂಬುದಿಷ್ಟನ್ನೇ ತಿಳಿದುಕೊಳ್ಳುವದೇ ಜೀವನವೆಂದಾದರೆ ನನಗೆ ಆತ್ಮಹತ್ಯವನ್ನು ಮಾಡಿಕೊಳ್ಳುವದೇ ಮೇಲೆನಿಸುವದು. ನನಗೆ ಪದಾರ್ಥಗಳ ಹೃದಯವನ್ನು ಜಿಜ್ಞಾಸೆಮಾಡುವದೇಬೇಕು. ತೀರ ಒಳತಿರುಳೇಬೇಕು. ಜೀವನದ ರೂಪ ವಿಶೇಷವನ್ನು ಕುರಿತು ವಿಚಾರ ಮಾಡಬೇಕೆಂಬುದು ನಿಮ್ಮ ಅಭಿಲಾಷೆ. ಇಡಿಯ ಜೀವನವನ್ನೇ ವಿಚಾರಮಾಡಬೇಕೆಂಬುದು ನನ್ನ ಅಭಿಲಾಷೆ. ನಮ್ಮ ತತ್ತ್ವಶಾಸ್ತ್ರದಲ್ಲಿ ಹೇಳಿರುವದೇನೆಂದರೆ ಇದೊಂದನ್ನೇ ಅರಿತುಕೊಳ್ಳಬೇಕು. ಸ್ವರ್ಗನರಕಗಳೇ ಮುಂತಾದ ಮೂಢವಿಶ್ವಾಸಗಳನ್ನೆಲ್ಲ ಮನಸ್ಸಿನಿಂದಾಚೆಗೆ ತಳ್ಳಿಹಾಕಬೇಕು. ಈ ಲೋಕವು ಯಾವ ಅರ್ಥದಲ್ಲಿರುತ್ತದೆಯೋ ಆ ಅರ್ಥದಲ್ಲಿಯೇ ಆ ಸ್ವರ್ಗನರಕಗಳಿದ್ದರೂ ಚಿಂತೆಯಿಲ್ಲ, ಅವುಗಳ ವಿಚಾರವನ್ನು ತಳ್ಳಿಹಾಕಬೇಕು. ಈ ಜೀವನದ ಹೃದಯವು ಯಾವದು, ಅದರ ತಿರುಳು ಯಾವದು- ಎಂಬುದೇ ನನಗೆ ತಿಳಿಯಬೇಕು; ಅದರ ವ್ಯಾಪಾರಗಳೇನು, ಅದರ ರೂಪವಿಶೇಷಗಳು ಯಾವವು?- ಎಂಬುದಿಷ್ಟೇ ಸಾಲದು. ಪ್ರತಿಯೊಂದಕ್ಕೂ ಕಾರಣವೇನೆಂಬುದೇ ನನಗೆ ಬೇಕು. ಅದು ಹೇಗೆ ಆಗುತ್ತದೆಯೆಂಬುದು ಮಕ್ಕಳಿಗಿರಲಿ. ನಿಮ್ಮ ದೇಶದವನೊಬ್ಬಾತನು ಹೀಗೆಂದಿರುತ್ತಾನೆ; "ಒಂದು ಸಿಗರೇಟನ್ನು ಸೇದುತ್ತಿರುವಾಗ ಒಂದಾನೊಂದು ಪುಸ್ತಕವನ್ನು ಬರೆದರೆ ಅದು ಒಂದು ಸಿಗರೇಟಿನ ಶಾಸ್ತ್ರವಾಗುತ್ತದೆ." ಭೌತಿಕವಿಜ್ಞಾನದಲ್ಲಿ ತಜ್ಞನಾಗಿರುವದು ಒಳ್ಳೆಯದೇ, ಹೆಚ್ಚಿನದೇ ಸರಿ; ಆ ಕೆಲಸವನ್ನು ಮಾಡುವವರಿಗೆ ಈಶ್ವರನ ಅನುಗ್ರಹವುಂಟಾಗಲಿ! ಆದರೆ 'ಇಷ್ಟೇ ಸರಿ' ಎಂದು ಯಾರಾದರೂ ಹೇಳಿದರೆ ಅವನು ಹೇಳುತ್ತಿರುವದು ಅವಿವೇಕದ ಮಾತು; ಅವನಿಗೆ ಜೀವನದ ಪರಮೋದ್ದೇಶವೇನೆಂಬುದು ಬೇಡವಾಗಿದೆ, ಇರವಿನ ತಿರುಳನ್ನೇ ವಿಚಾರಮಾಡುವದು ಬೇಡವಾಗಿದೆ. ಒಂದು ಬಗೆಯ ವಾದದಿಂದ ಈ ನಿಮ್ಮ ಜ್ಞಾನವೆಲ್ಲ ಅವಿವೇಕವೆಂದೂ ನಿರಾಧಾರವೆಂದೂ ತೋರಿಸಿಬಿಡಬಹುದು. ಏಕೆಂದರೆ ನೀವು ಜೀವನದ ಹೊರತೋರಿಕೆಗಳನ್ನು ವಿಚಾರಮಾಡುತ್ತಿರುತ್ತೀರಿ, ಜೀವನವೆಂದರೇನೆಂದು ಕೇಳಿದರೆ 'ನಮಗೆ ತಿಳಿಯದು' ಎನ್ನುತ್ತೀರಿ. ನಿಮ್ಮ ವಿಚಾರವನ್ನು ಅವಶ್ಯವಾಗಿ ನೀವು ಮಾಡಿಕೊಳ್ಳಿರಿ, ಆದರೆ ನಮ್ಮ ವಿಚಾರಕ್ಕೆ ನಮ್ಮ ಬಿಟ್ಟುಬಿಡಿರಿ.

ನಮ್ಮ ದಾರಿಯಲ್ಲಿ ನಾವು ಅನುಷ್ಠಾನತತ್ಪರರಾಗಿಯೇ ಇರುತ್ತೇವೆ, ಬೇಕಾದಷ್ಟು ಅನುಷ್ಠಾನಪರರಾಗಿರುತ್ತೇವೆ. ಆದ್ದರಿಂದ ಪಶ್ಚಿಮ ದೇಶಗಳು ಮಾತ್ರ ಅನುಷ್ಠಾನಪರವಾಗಿವೆ ಎಂಬ ಈ ನಿಮ್ಮ ಭಾವನೆಯು ಅರ್ಥವಿಲ್ಲದ್ದು, ನೀವು ಒಂದು ಬಗೆಯಲ್ಲಿ ಅನುಷ್ಠಾನಪರರಾಗಿದ್ದರೆ ನಾವು ಮತ್ತೊಂದು ಬಗೆಯಲ್ಲಿ ಅನುಷ್ಠಾನಪರರಾಗಿರುತ್ತೇವೆ. ಜನರಲ್ಲಿಯೂ ಅವರ ಮನಸ್ಸುಗಳಲ್ಲಿಯೂ ಬೇರೆ

ಬೇರೆ ಜಾತಿಗಳಿರುತ್ತವೆ. ಪೂರ್ವದೇಶದಲ್ಲಿ ಯಾವನಿಗಾದರೂ ಇಡಿಯ ಜೀವಮಾನವೆಲ್ಲ ಒಂಟಿಗಾಲಿನಲ್ಲಿ ನಿಂತಿದ್ದರೆ ತತ್ತ್ವಸಾಕ್ಷಾತ್ಕಾರವಾಗುವದೆಂದು ಹೇಳಿದರೆ ಅವನು ಆ ಮಾರ್ಗವನ್ನೇ ಅನುಸರಿಸುತ್ತಾನೆ; ಪಶ್ಚಿಮ ದೇಶದಲ್ಲಿರುವವರಿಗೆ ಒಂದಾನೊಂದು ಅನಾಗರಿಕ ದೇಶದಲ್ಲಿ ಎಲ್ಲಿಯೋ ಒಂದು ಕಡೆಯಲ್ಲಿ ಒಂದು ಬಂಗಾರದ ಗನಿಯಿದೆಯೆಂದು ತಿಳಿದುಬಂದರೆ ಆ ಬಂಗಾರವನ್ನು ಪಡೆಯುವ ಉದ್ದೇಶದಿಂದ ಸಾವಿರಾರು ಜನರು ಅಲ್ಲಿರುವ ಅಪಾಯಗಳಿಗೆಲ್ಲ ಎದೆಗೊಡುವದಕ್ಕೆ ಸಿದ್ಧರಾಗುತ್ತಾರೆ; ಆದರೂ ಅವರಲ್ಲಿ ಎಲ್ಲಿಯೋ ಒಬ್ಬನಿಗೆ ಮಾತ್ರ ಅದು ಸಿಕ್ಕೀತು. ಅದೇ ಜನರಿಗೆ ತಮಗೆ ಆತ್ಮವಿದೆಯೆಂಬ ಸುದ್ದಿಯೂ ಕಿವಿಗೆ ಬಿದ್ದಿರುತ್ತದೆ; ಆದರೆ ಆ ವಿಚಾರವನ್ನು ಅವರು ತಮ್ಮ ಧರ್ಮಸಂಘದವರಿಗೆ ಬಿಟ್ಟುಬಿಟ್ಟಿರುತ್ತಾರೆ. ಇವರಲ್ಲಿ ಮೊದಲನೆಯವನಾದ ಹಿಂದುಗಳಿಗೆ ಕಾಡುಜನರ ಬಳಿಗೆ ಹೋಗುವದಕ್ಕೆ ಅಂಜಿಕೆ, ಅದು ಅಪಾಯಕರವಾದೀತೆಂದು ಅವನ ಅಭಿಪ್ರಾಯವಾಗಿರುತ್ತದೆ. ಆದರೆ ಅವನಿಗೆ ಒಂದಾನೊಂದು ಪರ್ವತಶಿಖರದ ಮೇಲೆ ಒಬ್ಬಾನೊಬ್ಬ ಮಹಾತ್ಮನಿರುವನೆಂದೂ ಅವನು ಆತ್ಮಜ್ಞಾನವನ್ನು ಉಪದೇಶಿಸುತ್ತಾನೆಂದೂ ಹೇಳಿದರೆ ಅವನು ಕೂಡಲೆ ಆತನ ಬಳಿಗೆ ಬೆಟ್ಟವನ್ನು ಹತ್ತಿ ಹೋಗುವದಕ್ಕೆ ಪ್ರಯತ್ನಿಸುತ್ತಾನೆ, ಆ ಪ್ರಯತ್ನದಲ್ಲಿ ಮರಣವಾದರೂ ಚಿಂತೆಯಿಲ್ಲವೆನ್ನುತ್ತಾನೆ. ಈ ಎರಡು ಜಾತಿಯ ಜನರೂ ಅನುಷ್ಠಾನಪರರೇ. ಆದರೆ ಇದೊಂದು ಲೋಕವೇ ಇಡಿಯ ಜೀವನವೆಂದು ಭಾವಿಸುವದೇ ಇಲ್ಲಿ ತಪ್ಪಾಗಿರುತ್ತದೆ. ನೀವು ಹೇಳುತ್ತಿರುವದು ಇಂದ್ರಿಯಭೋಗವೆಂಬ ಹಾರಿಹೋಗುವ ಸುಖವು; ಅದರಲ್ಲಿ ನಿತ್ಯವೆಂಬುದು ಒಂದಿಷ್ಟೂ ಇರುವದಿಲ್ಲ, ಅದರಿಂದ ಹೆಚ್ಚುಹೆಚ್ಚಾಗಿ ದುಃಖವೇ ಉಂಟಾಗುತ್ತದೆ. ನಾವು ಹೇಳುವದು ನಿತ್ಯಶಾಂತಿಯನ್ನು ತರುವಂಥದ್ದು. ನಿಮ್ಮ ಅಭಿಪ್ರಾಯವು ತಪ್ಪೆಂದೇನೂ ನಾವೆನ್ನುವದಿಲ್ಲ; ಅವಶ್ಯವಾಗಿ ಆ ಅಭಿಪ್ರಾಯವನ್ನು ಇಟ್ಟುಕೊಳ್ಳಿರಿ; ಅದರಿಂದ ಬೇಕಾದಷ್ಟು ಉಪಯೋಗವೂ ಉಂಟಾಗಬಹುದು, ಸುಖವೂ ಸಿಕ್ಕಬಹುದು. ಆದರೆ ಅಷ್ಟು ಮಾತ್ರದಿಂದ ನಮ್ಮ ಮತವನ್ನು ಅಲ್ಲಗಳೆಯಬೇಡಿರಿ. ನಮ್ಮ ಮತವೂ ಒಂದು ರೀತಿಯಲ್ಲಿ ಅನುಷ್ಠಾನಪರವಾಗಿರುತ್ತದೆ. ನಾವೆಲ್ಲರೂ ನಮ್ಮ ನಮ್ಮ ಭೂಮಿಕೆಯಲ್ಲಿ ಕೆಲಸಮಾಡೋಣ.

ದೇವರ ದಯೆಯಿಂದ ನಮ್ಮೆಲ್ಲರಿಗೂ ಈ ಎರಡು ಬಗೆಯಲ್ಲಿಯೂ ಅನುಷ್ಠಾನಪರವಾಗಿರುವದಕ್ಕೆ ಆಗಿದ್ದರೆ ಎಷ್ಟು ಚೆನ್ನಾಗಿತ್ತು! ವಿಜ್ಞಾನಶಾಸ್ತ್ರದಲ್ಲಿಯೂ ಅಧ್ಯಾತ್ಮವಿದ್ಯೆಯಲ್ಲಿಯೂ ಅಷ್ಟೇ ಅನುಷ್ಠಾನಪರರಾಗಿದ್ದ ಕೆಲವರು ಭೌತಿಕಶಾಸ್ತ್ರಜ್ಞರನ್ನೂ ನಾನು ಕಂಡಿದ್ದೇನೆ. ಕಾಲಕ್ರಮದಲ್ಲಿ ಇಡಿಯ ಮಾನವ

ವರ್ಗವೇ ಅಂಥ ಕೌಶಲವನ್ನು ಸಂಪಾದಿಸಿಕೊಳ್ಳುವದೆಂದು ನನಗೆ ಪೂರ್ಣ ವಿಶ್ವಾಸವುಂಟು. ಒಂದು ಪಾತ್ರೆಯಲ್ಲಿರುವ ನೀರು ಗೆಜ್ಜೆಗುದಿಹತ್ತುವದಕ್ಕೆ ಮೊದಲಾಗುತ್ತಿರುವಾಗ ಏನು ನಡೆಯುತ್ತಿರುವದೆಂಬುದನ್ನು ನೀವು ನೋಡುತ್ತಿದ್ದರೆ ಮೊದಮೊಲು ಒಂದು ಗುಳ್ಳೆ ಏಳುತ್ತದೆ, ಆಮೇಲೆ ಮತ್ತೊಂದು ಏಳುತ್ತದೆ; ಹೀಗಾಗಿ ಕೊನೆಗೆ ಅವೆಲ್ಲವೂ ಸೇರಿ ಒಂದು ದೊಡ್ಡ ತಳಮಳಶಬ್ದವಾಗಿಬಿಡುತ್ತದೆ. ಈ ಲೋಕವು ಬಹಳಮಟ್ಟಿಗೆ ಅದರಂತೆಯೇ ಇರುತ್ತದೆ. ಒಬ್ಬೊಬ್ಬ ವ್ಯಕ್ತಿಯೂ ಆ ಒಂದೊಂದು ಗುಳ್ಳೆಯಂತೆ ಇರುತ್ತಾನೆ; ಜನಾಂಗಗಳೆಂದರೆ ಅನೇಕ ಗುಳ್ಳೆಗಳ ಸಮುದಾಯವಾಗಿರುತ್ತವೆ. ಈ ಜನಾಂಗಗಳು ಒಂದಾಗಿ ಸೇರುತ್ತಿವೆ. ಹೀಗೆಯೇ ನಡೆಯುತ್ತಿದ್ದರೆ ಒಂದಾನೊಂದು ದಿನ ಇವರು ಬೇರೆಬೇರೆಯಿರುವದು ನಿಂತು ಹೋಗಿ ನಾವೆಲ್ಲರೂ ಸಮೀಪಿಸುತ್ತಿರುವ ಐಕ್ಯವೆಂಬುದು ವ್ಯಕ್ತವಾಗಿಬಿಡುತ್ತದೆ. ಒಂದಾನೊಂದು ಇಂಥ ಕಾಲವು ಬಂದೇ ಬರುತ್ತದೆ; ಆಗ ಒಬ್ಬೊಬ್ಬನೂ ಭೌತಿಕ ಪ್ರಪಂಚದಲ್ಲಿ ಹೇಗೋ ಹಾಗೆ ಆಧ್ಯಾತ್ಮಿಕ ಪ್ರಪಂಚದಲ್ಲಿಯೂ ಅನುಷ್ಠಾನ ಪರನಾಗುವನು, ಆಗ ಆ ಐಕ್ಯವು, ಆ ಐಕ್ಯದ ಹೊಂದಿಕೆಯು, ಇಡಿಯ ಪ್ರಪಂಚವನ್ನೇ ವ್ಯಾಪಿಸಿಕೊಂಡುಬಿಡುವದು. ಮನುಷ್ಯವರ್ಗದವರೆಲ್ಲರೂ ಜೀವನ್ಮುಕ್ತರಾಗಿಬಿಡುವರು– ಬದುಕಿರುವಾಗಲೇ ಮುಕ್ತರಾಗಿಬಿಡುವರು. ನಮ್ಮನಮ್ಮಲ್ಲಿ ಅಸೂಯೆಗಳೂ ದ್ವೇಷಗಳೂ ಕಾಣಿಸುವಾಗಲೂ ನಾವು ಆ ಐಕ್ಯತೆಯ ಕಡೆಗೇ ಹೆಣಗಾಡಿಕೊಂಡು ಹೋಗುತ್ತಿದ್ದೇವೆ; ಒಬ್ಬರೊಬ್ಬರಲ್ಲಿರುವ ಪ್ರೇಮ, ಪರಸ್ಪರೋಪಕಾರಗಳು ಕಾಣಿಸುವಾಗಲೂ ಆ ಕಡೆಗೇ ಹೋಗುತ್ತಿದ್ದೇವೆ. ನಮ್ಮೆಲ್ಲರನ್ನೂ ತನ್ನ ಪ್ರವಾಹದಿಂದ ಕೊಚ್ಚಿಕೊಂಡು ಒಂದಾನೊಂದು ಮಹಾನದಿಯೂ ಭರದಿಂದ ಮುಂದಕ್ಕೆ ಸಾಗರದ ಕಡೆಗೆ ಸಾಗುತ್ತಿದೆ; ನಾವುಗಳು ಕೆಲವು ವೇಳೆ ಹುಲ್ಲುಕಡ್ಡಿಗಳಂತೆಯೂ ಕಾಗದದ ಚೂರುಗಳಂತೆಯೂ ಗೊತ್ತುಗುರಿಯಿಲ್ಲದೆ ತೇಲಾಡುತ್ತಾ ಸಿಕ್ಕಿದಂತೆ ಹೋಗುತ್ತಿರಬಹುದು; ಆದರೆ ಕಟ್ಟಕಡೆಯಲ್ಲಿ ನಾವೆಲ್ಲರೂ ಜೀವನದ ಆನಂದಸಾಗರವನ್ನು ಸೇರಿಯೇ ಸೇರುವೆವು.

------

# 10 ಆತ್ಮ ಸ್ವಾತಂತ್ರ್ಯ

ಇದುವರೆಗೆ ನಾವು ವಿಚಾರಕ್ಕೆ ತೆಗೆದುಕೊಂಡಿದ್ದ ಕಠೋಪನಿಷತ್ತೆಂಬುದು ಈಗ ನಾವು ಪ್ರಾರಂಭಿಸಲಿರುವ ಛಾಂದೋಗ್ಯೋಪನಿಷತ್ತಿಗಿಂತ ಬಹಳ ಈಚಿನದು. ಅದರ ಭಾಷೆಯು ಇದಕ್ಕಿಂತಲೂ ಈಚಿನ ಶೈಲಿಯ ಭಾಷೆಯಾಗಿರುತ್ತದೆ, ಅದರಲ್ಲಿರುವ ವಿಚಾರ ಕ್ರಮವೂ ಹೆಚ್ಚು ವ್ಯವಸ್ಥಿತವಾಗಿರುತ್ತದೆ. ಹಳೆಯ ಉಪನಿಷತ್ತುಗಳಲ್ಲಿ ಭಾಷೆಯು ವೇದಗಳ ಸಂಹಿತಾಭಾಗದ ಭಾಷೆಯಂತೆ ಪ್ರಾಚೀನ ರೀತಿಯಲ್ಲಿರುತ್ತದೆ; ಅವುಗಳಲ್ಲಿರುವ ಸಾರವತ್ತಾದ ವಿಷಯಗಳನ್ನು ಕಂಡುಹಿಡಿಯಬೇಕಾದರೆ ಎಷ್ಟೋ ಅನವಶ್ಯವಾದ ವಿವರಗಳನ್ನು ದಾಟಿಕೊಂಡು ಹೋಗಬೇಕಾಗುತ್ತದೆ. ನಾನು ಈ ಮೊದಲೇ ಹೇಳಿರುವದಾದ ವೇದಗಳ ಎರಡನೆಯ ಭಾಗವಾಗಿರುವ ಕರ್ಮಕಾಂಡದ ವಾಙ್ಮಯವು ಈ ಪ್ರಾಚೀನ ಉಪನಿಷತ್ತಿನಲ್ಲಿ ತನ್ನ ಗುರುತನ್ನು ಬಹಳ ಮಟ್ಟಿಗೆ ಮೂಡಿಸಿಬಿಟ್ಟಿರುತ್ತದೆ; ಆದ್ದರಿಂದ ಇದರಲ್ಲಿ ಅರ್ಧಕ್ಕಿಂತಲೂ ಹೆಚ್ಚಾಗಿಯೇ ಈಗಲೂ ಕರ್ಮವಾಗಿಯೇ ಇರುತ್ತದೆ.*

ಆದರೂ ಅತ್ಯಂತ ಪ್ರಾಚೀನವಾದ ಉಪನಿಷತ್ತುಗಳನ್ನು ಓದುವದರಲ್ಲಿ ಒಂದು ದೊಡ್ಡ ಲಾಭವುಂಟು. ಅದೇನೆಂದರೆ ಅದರಿಂದ ಅಧ್ಯಾತ್ಮಿಕ ವಿಚಾರಗಳು ಐತಿಹಾಸಿಕ ದೃಷ್ಟಿಯಿಂದ ಹೇಗೆ ಹೇಗೆ ಬೆಳೆದುಕೊಂಡವೆಂಬುದನ್ನು ಗೊತ್ತು ಹಚ್ಚುವದಕ್ಕೆ ಆಗುತ್ತದೆ. ಇತ್ತೀಚಿನ ಉಪನಿಷತ್ತುಗಳಲ್ಲಿ ಅಧ್ಯಾತ್ಮಿಕ ವಿಚಾರಗಳನ್ನೆಲ್ಲ ಕೂಡಿಹಾಕಿ ಒಕ್ಕಡೆಯಲ್ಲಿರಿಸಿರುತ್ತದೆ. ಉದಾಹರಣೆಗೆ ಭಗವದ್ಗೀತೆಯನ್ನೂ ಒಂದು ದೃಷ್ಟಿಯಿಂದ ಉಪನಿಷತ್ತುಗಳಲ್ಲಿ ತೀರ ಕೊನೆಯದೆಂದು# ಭಾವಿಸಬಹುದಷ್ಟೆ; ಅದರಲ್ಲಿ ಈ ಕರ್ಮವಿಚಾರಗಳ ಸೆಲೆಯೂ ಇರುವದಿಲ್ಲ. ಗೀತೆಯೆಂಬುದು ಉಪನಿಷತ್ತುಗಳಿಂದ ಆರಿಸಿರುವ ಸುಂದರವಾದ ಹೂಗಳ ಒಂದು ಗುಚ್ಛವೆಂದು ಭಾವಿಸಬಹುದು. ಆದರೆ ಗೀತೆಯಲ್ಲಿ ಆಧ್ಯಾತ್ಮಿಕ ವಿಚಾರಗಳು ಹೇಗೆ ಹುಟ್ಟಿದವೆಂಬುದನ್ನೂ ಅವುಗಳ ಮೂಲವು ಯಾವದೆಂಬುದನ್ನೂ

---

* ಸಾಂಪ್ರದಾಯಿಕ ಹಿಂದುಗಳು ಉಪನಿಷತ್ತುಗಳನ್ನು ಅಪೌರುಷೇಯವೆಂದೂ ಅನಾದಿ ಕಾಲದಿಂದ ಇರುವವೆಂದೂ ಭಾವಿಸಿದ್ದರೂ ಪಾಶ್ಚಾತ್ಯರೂ ಅವರ ದೃಷ್ಟಿಯಿಂದ ನೋಡುವ ಮಿಕ್ಕ ವಿದ್ವಾಂಸರೂ ಐತಿಹಾಸಿಕ ದೃಷ್ಟಿಯಿಂದಲೇ ಅವುಗಳಿಗೆ ಬೆಲೆಕೊಡುತ್ತಾರೆ, ಪಾಶ್ಚಾತ್ಯರಿಗಾಗಿ ಮಾಡಿದ ಈ ಉಪನ್ಯಾಸದಲ್ಲಿ ಸ್ವಾಮಿಗಳೂ ಆ ದೃಷ್ಟಿಯನ್ನೇ ಅವಲಂಬಿಸಿರುತ್ತಾರೆ.

\# 'ಭಗವದ್ಗೀತಾಸೂಪನಿಷತ್ಸು'- ಎಂಬ ಪ್ರತ್ಯಧ್ಯಾಯದ ಸಮಾಪ್ತಿ ವಾಕ್ಯವನ್ನು ನೆನಪಿಟ್ಟರೆ ಇದರ ಅಭಿಪ್ರಾಯವು ಚೆನ್ನಾಗಿ ಗೊತ್ತಾಗುತ್ತದೆ.

ಗೊತ್ತುಪಡಿಸುವದು ಆಗುವಹಾಗಿಲ್ಲ. ಹಾಗೆ ಗೊತ್ತುಪಡಿಸಬೇಕಾದರೆ ವೇದಗಳನ್ನೇ ಅಭ್ಯಾಸ ಮಾಡಬೇಕು; ಇದನ್ನು ಅನೇಕರು ತಿಳಿಸಿಕೊಟ್ಟಿರುತ್ತಾರೆ. ಈ ಗ್ರಂಥಗಳು ಪರಮಪವಿತ್ರವೆಂಬ ಭಾವನೆಯಿರುವದರಿಂದ ಅವುಗಳ ಸ್ವರೂಪವು ಒಂದಿಷ್ಟೂ ಮುಕ್ಕಾಗದಂತೆ ಅವುಗಳನ್ನು ಕಾಪಾಡಿಕೊಂಡು ಬಂದಿರುತ್ತಾರೆ*; ಪ್ರಪಂಚದಲ್ಲಿ ಮತ್ತೆ ಯಾವ ಗ್ರಂಥವೂ ಅಷ್ಟು ಶುದ್ಧ ಸ್ಥಿತಿಯಲ್ಲಿರುವದಿಲ್ಲ.

ಅವುಗಳಲ್ಲಿ ಅತ್ಯಂತ ಉತ್ಕೃಷ್ಟವಾದ ವಿಚಾರಗಳು ತೀರ ಕಡಿಮೆ ಮಟ್ಟದ ವಿಚಾರಗಳು, ಅವು ಸಾರವತ್ತಾಗಿರಲಿ ಇಲ್ಲದಿರಲಿ,# ಎಲ್ಲವನ್ನೂ ಹಾಗೆಯೇ ಇರಿಸಿಕೊಂಡುಬಂದಿದೆ. ಮನುಷ್ಯನನ್ನು ಅತ್ಯಂತವಾಗಿ ಘನತೆಗೇರಿಸುವ ಉಪದೇಶಗಳೂ ಅತ್ಯಂತ ಸಾಮಾನ್ಯವಾಗಿರುವ ವಿಷಯಗಳ ವಿವರಗಳೂ ಅಲ್ಲಿ ಒಂದರ ಪಕ್ಕದಲ್ಲೊಂದು ಕಂಡುಬರುತ್ತವೆ. ಏಕೆಂದರೆ ಅವುಗಳನ್ನು ಅಲುಗಾಡಿಸುವದಕ್ಕೆ ಯಾರೊಬ್ಬರಿಗೂ ಧೈರ್ಯವುಂಟಾಗಿರುವದಿಲ್ಲ. ಭಾಷ್ಯಕಾರರು ಬಂದರು, ಅವುಗಳನ್ನು ಹೇಗೋ ಮೇಲೆ ಮೇಲೆ ಸಾರಿಸಿ ಹಳೆಯ ವಾಕ್ಯಗಳಿಂದಲೇ ಅದ್ಭುತವಾದ ಹೊಸ ಭಾವನೆಗಳನ್ನು ಹೊರಡಿಸುವ ಪ್ರಯತ್ನವನ್ನು ಮಾಡಿದರು, ಅತ್ಯಂತ ಸಾಧಾರಣವಾದ ವಾಕ್ಯಗಳಲ್ಲಿಯೂ ಅಧ್ಯಾತ್ಮಿಕ ವಿಚಾರಗಳು ಇವೆಯೆಂದು ತೋರಿಸುವದಕ್ಕೂ ಪ್ರಯತ್ನಪಟ್ಟರು; ಆದರೂ ಮೂಲವಚನಗಳನ್ನು ಅವರೂ ಹಾಗೆಯೇ ಉಳಿಸಿಕೊಂಡಿರುತ್ತಾರೆ. ಆದ್ದರಿಂದ ಅವುಗಳು ಐತಿಹಾಸಿಕ ದೃಷ್ಟಿಯಿಂದ ವಿಚಾರಮಾಡುವವರಿಗೆ ಅತ್ಯದ್ಭುತವಾದ ಸಾಧನವಾಗಿರುತ್ತವೆ. ಯಾವ ಧರ್ಮ ಗ್ರಂಥವನ್ನೇ ನೋಡಿದರೂ ಈಚೆಗೆ ಬೆಳೆದುಕೊಂಡಿರುವ ಅಧ್ಯಾತ್ಮಿಕ ವಿಚಾರ ಸರಣಿಗೆ ಹೊಂದುವಂತೆ ಅವುಗಳಲ್ಲಿ ಕೆಲಕೆಲವು ಬದಲಾವಣೆಗಳನ್ನು ಮಾಡಿರುತ್ತಾರೆಂಬುದು ನಮ್ಮೆಲ್ಲರಿಗೂ ತಿಳಿದ ವಿಷಯವಾಗಿರುತ್ತದೆ; ಅವುಗಳಲ್ಲೆಲ್ಲ ಇಲ್ಲೊಂದು ಮಾತನ್ನು ಮಾರ್ಪಡಿಸಿರುತ್ತಾರೆ, ಅಲ್ಲೊಂದು ಮಾತನ್ನು ಹೊಸದಾಗಿ ಸೇರಿಸಿ ಕೊಂಡಿರುತ್ತಾರೆ. ಹೀಗೆ ಏನಾದರೊಂದು ಮಾರ್ಪಾಡನ್ನು ಮಾಡಿಯೇ ಇರುತ್ತಾರೆ. ಆದರೆ

* ಪದ, ಕ್ರಮ, ಜಟೆ, ಘನ- ಮುಂತಾದ ವಿಂಗಡಗಳಿಂದಲೂ ಶಿಕ್ಷಾವ್ಯಾಕರಣವೇ ಮುಂತಾದ ಅಂಗಗಳಿಂದಲೂ ಪ್ರಾತಿಶಾಖ್ಯ, ಭಾಷ್ಯ- ಮುಂತಾದ ಸಾಧನಗಳಿಂದಲೂ ವೇದಗಳನ್ನು ಕಾಪಾಡಿಕೊಂಡು ಬಂದಿರುವ ರೀತಿಯನ್ನು ವಾಚಕರು ಇಲ್ಲಿ ಮನಸ್ಸಿಗೆ ತಂದುಕೊಳ್ಳಬೇಕು.

# ಸಾರವತ್ತಲ್ಲವೆಂದು ಇಲ್ಲಿ ಹೇಳಿರುವ ವಿಚಾರಗಳು ಕರ್ಮಕ್ಕೂ ಅರ್ಥವಾದಗಳಿಗೂ ಸಂಬಂಧಪಟ್ಟವುಗಳಾಗಿವೆ; ಉಪನಿಷತ್ತಿನಲ್ಲಿರುವ ಕೆಲವು ಕರ್ಮಸಂಬಂಧದ ಉಪಾಸನೆಗಳನ್ನೂ ಸ್ವಾಮಿಗಳವರು ಈ ಗುಂಪಿಗೇ ಸೇರಿಸಿರುವಂತೆ ತೋರುತ್ತದೆ, ಆದರೆ ಅವುಗಳಿಗೂ ತತ್ತ್ವದ ಆಧಾರವೇ ಇದೆಯೆಂದು ಭಾಷ್ಯಕಾರರುಗಳು ಹೇಳುತ್ತಾರೆ.

ವೇದವಾಙ್ಮಯದಲ್ಲಿ ಈ ಮಾರ್ಪಾಡಾಗಿಲ್ಲವೇ ಇಲ್ಲವೆನ್ನಬಹುದು, ಅಥವಾ ಆಗಿದ್ದರೂ ಅದು ನಮಗೆ ಸ್ವಲ್ಪವೂ ಕಾಣಿಸುವದಿಲ್ಲವೆನ್ನುವಷ್ಟು ಅತ್ಯಲ್ಪವಾಗಿರುತ್ತದೆ. ಆದ್ದರಿಂದ ಇಲ್ಲಿ ನಮಗೆ ದೊರಕುವ ಒಂದು ಮಹಾಲಾಭವೆಂದರೆ, ವಿಚಾರಗಳನ್ನು ಮೂಲಾರ್ಥದಲ್ಲಿಯೇ ಪರೀಕ್ಷೆ ಮಾಡಿ, ಅವು ಹೇಗೆ ಬೆಳೆದುಕೊಂಡವೆಂಬುದನ್ನೂ ಭೌತಿಕವಿಚಾರಗಳಿಂದ ಹೇಗೆ ಸೂಕ್ಷ್ಮತರಸೂಕ್ಷ್ಮತಮವಾದ ವಿಚಾರಗಳೂ ವಿಕಾಸವಾಗಿವೆಯೆಂಬುದನ್ನೂ, ಕೊನೆಗೆ ವೇದಾಂತದಲ್ಲಿ ಅವು ಹೇಗೆ ಅತ್ಯಂತ ಉನ್ನತವಾದ ರೂಪವನ್ನು ಪಡೆದುಕೊಂಡಿವೆಯೆಂಬುದನ್ನೂ ತಿಳಿದುಕೊಳ್ಳ ಬಹುದಾಗಿರುತ್ತದೆ. ಉಪನಿಷತ್ತುಗಳಲ್ಲಿ ಹಳೆಯ ಆಚಾರ ಮತ್ತು ಕಟ್ಟಳೆಗಳ ವರ್ಣನೆಗಳೂ ಕಂಡು ಬರುತ್ತವೆಯಾದರೂ ಅಷ್ಟೊಂದು ಹೆಚ್ಚಾಗಿ ಕಂಡುಬರುವದಿಲ್ಲ.

ಅವುಗಳಲ್ಲಿ ಉಪಯೋಗಿಸಿರುವ ಭಾಷೆಯು ವಿಲಕ್ಷಣವಾಗಿ ಸಂಕ್ಷಿಪ್ತವಾಗಿಯೂ ಸಾಂಕೇತಿಕವಾಗಿಯೂ* ಇರುತ್ತದೆ. ಈ ಗ್ರಂಥಗಳನ್ನು ಬರೆದವರು ಈ ಶ್ಲೋಕಗಳನ್ನು ಅತ್ಯಂತ ಪ್ರಸಿದ್ಧವಾಗಿರುವವೆಂದು ಭಾವಿಸಿದ್ದ ಕೆಲಕೆಲವು ಸಂಗತಿಗಳನ್ನು ನೆನಪಿಡುವದಕ್ಕೆ ಸಹಾಯಕವಾಗಿ ತುಂಡುತುಂಡಾಗಿ ಬರೆದುಕೊಂಡರೆಂದು ಹೇಳಬಹುದು. ಅವರು ಹೇಳುತ್ತಿರುವ ಕಥೆಯಲ್ಲಿ ಅವೆಲ್ಲವೂ ತಮ್ಮ ಶ್ರೋತೃಗಳಿಗೆ ಸುಪ್ರಸಿದ್ಧವಾಗಿದೆಯೆಂದೇ ಅವರು ಭಾವಿಸಿರಬಹುದು. ಈ ಕಾರಣದಿಂದ ನಮಗೆ ಈಗ ಬಹಳ ಕಷ್ಟವಾಗಿಬಿಟ್ಟಿರುತ್ತದೆ; ಈ ಕಥೆಗಳ ನಿಜವಾದ ಅಭಿಪ್ರಾಯವೇನೆಂಬುದೇ ನಮಗೆ ಈಗ ತಿಳಿಯದಂತಾಗಿರುತ್ತದೆ, ಏಕೆಂದರೆ ಅವುಗಳನ್ನು ಒಬ್ಬರಿಗೊಬ್ಬರು ಹೇಳುತ್ತಿದ್ದ ಸಂಪ್ರದಾಯವೇ ಈಗ ಹೋಗಿಬಿಟ್ಟಿರುತ್ತದೆ, ಅಲ್ಪಸ್ವಲ್ಪ ಉಳಿದುಕೊಂಡಿದ್ದರೆ ಅದಕ್ಕೆ ಬೇಕಾದಷ್ಟು ಬಣ್ಣಬಳಿದಿರುತ್ತಾರೆ. ಅವುಗಳಿಗೆ ಎಷ್ಟೋ ಹೊಸ ಅರ್ಥಗಳನ್ನು ಮಾಡಿಬಿಟ್ಟಿರುತ್ತಾರೆ; ಆದ್ದರಿಂದಲೇ ಅವುಗಳು ಪುರಾಣಗಳಲ್ಲಿ ಆಗಲೇ ಲಾವಣಿಗಳಂತೆ ಆಗಿಬಿಟ್ಟಿರುತ್ತವೆ.

ಪಶ್ಚಿಮದೇಶಗಳಲ್ಲಿ ರಾಜಕೀಯ ವಿಕಾಸಗಳನ್ನು ನೋಡಿದರೆ ಒಂದು ವಿಷಯವು ಮೇಲಕ್ಕೆದ್ದು ಕಾಣುತ್ತದೆ. ಅದೇನೆಂದರೆ ಆ ಜನರಿಗೆ ನಿರಂಕುಶ ಪ್ರಭುತ್ವವು ಎಂದಿಗೂ ಸಹಿಸುವದಿಲ್ಲ. ಯಾವನಾದರೂ ಒಬ್ಬ ಮನುಷ್ಯನು ತಮ್ಮನ್ನೆಲ್ಲ ಆಳದಂತೆ ಮಾಡುವದಕ್ಕೇ ಆ ಜನರು ಪ್ರಯತ್ನಮಾಡುತ್ತಿರುತ್ತಾರೆ;

* ತಜ್ಜಲಾನ್ (ಅದರಿಂದ ಹುಟ್ಟಿ ಅದರಲ್ಲಿದ್ದು ಅದರಲ್ಲಿಯೇ ಲಯವಾಗತಕ್ಕದ್ದು)- ಮುಂತಾದ ಕೆಲವು ಸಾಂಕೇತಿಕ ಪದಗಳನ್ನುದ್ದೇಶಿಸಿ ಸ್ವಾಮಿಗಳು ಈ ಮಾತನ್ನಾಡಿರಬಹುದೆಂದು ತೋರುತ್ತದೆ.

ದಿನದಿನಕ್ಕೆ ಹೆಚ್ಚುಹೆಚ್ಚಿನ ಪ್ರಜಾಸತ್ತಾತ್ಮಕ ವಿಚಾರಗಳನ್ನೇ ಹೆಚ್ಚು ಹೆಚ್ಚಿನ ಶಾರೀರಕ ಸ್ವಾತಂತ್ರ್ಯದ ವಿಚಾರಗಳನ್ನೇ ಬೆಳೆಯಿಸಿಕೊಳ್ಳುತ್ತಿರುತ್ತಾರೆ. ಇದರಂತೆಯೇ ಹಿಂದೂದೇಶದ ವೇದಾಂತದಲ್ಲಿಯೂ ಆಧ್ಯಾತ್ಮಿಕ ಜೀವನದ ವಿಕಾಸದಲ್ಲಿಯೂ ಇದೇ ಬಗೆಯ ದೃಶ್ಯವು ಕಂಡುಬರುತ್ತದೆ. ಅಲ್ಲಿ ಮೊದಲಿದ್ದ ನಾನಾ ದೇವತೆಗಳ ಆರಾಧನೆಯು ಹೋಗಿ ವಿಶ್ವಕ್ಕೆಲ್ಲ ಒಬ್ಬ ಪರಮೇಶ್ವರನೇ ಎಂಬ ವಿಚಾರವು ಮೂಡಿಕೊಂಡಿತು; ಬಳಿಕ ಉಪನಿಷತ್ತುಗಳಲ್ಲಿ ಆ ಒಬ್ಬ ಪರಮೇಶ್ವರನ ಮೇಲೂ ದಂಗೆಯೆದ್ದಿರುವದು* ಕಂಡುಬರುತ್ತದೆ. ಈ ಪ್ರಪಂಚವನ್ನು ಅನೇಕ ಈಶ್ವರರುಗಳು ಆಳುತ್ತಾ ತಮ್ಮ ಅದೃಷ್ಟವಿಧಾತರಾಗಿರುವದು ಅವರಿಗೆ ಒಗ್ಗಲಿಲ್ಲವೆಂಬುದಷ್ಟೇ ಅಲ್ಲ, ಈ ಜಗತ್ತೆಲ್ಲವನ್ನೂ ಒಬ್ಬನೇ ಒಬ್ಬ ಪುರುಷನು ಆಳುತ್ತಿರುವನೆಂಬುದೂ ಅವರಿಗೆ ಒಗ್ಗದೇ ಹೋಯಿತು. ಇದೇ ಮೊಟ್ಟ ಮೊದಲು ನಮಗೆ ಇಲ್ಲಿ ತೋರಿಬರುವ ವಿಷಯವು. ಈ ಭಾವನೆಯು ಬೆಳೆಯುತ್ತಾ ಬೆಳೆಯುತ್ತಾ, ಕೊನೆಗೆ ಮುಗಿಲು ಮುಟ್ಟಿತು. ಸ್ವಲ್ಪ ಹೆಚ್ಚು ಕಡಿಮೆ ಪ್ರತಿಯೊಂದು ಉಪನಿಷತ್ತಿನಲ್ಲಿಯೂ ಕಟ್ಟಕಡೆಗೆ ಈ ಪರಾಕಾಷ್ಠೆಯು ಬರುತ್ತದೆ. ಈ ವಿಶ್ವದ ಪರಮೇಶ್ವರರನ್ನು ಗದ್ದುಗೆಯಿಂದ ಕೆಳಕ್ಕಿಳಿಸುವದೇ ಆ ಕಾಷ್ಠೆಯು. ಅಲ್ಲಿ ಪರಮೇಶ್ವರನ ಸಗುಣತ್ವವು ಕಾಣದಂತೆ ಆಗಿ ನಿರ್ಗುಣತ್ವವು ಮುಂದಕ್ಕೆ ಬಂದಿರುತ್ತದೆ. ಆಗ ಈಶ್ವರನೆಂದರೆ ಒಬ್ಬ ಪುರುಷನೆಂದಾಗಲಿ, ಹಿಗ್ಗಿಸಿ ಅತಿಶಯೋಕ್ತಿಯಿಂದ ಬಲಪಡಿಸಿದ ಮಾನವನೆಂದಾಗಲಿ ಇಟ್ಟುಕೊಂಡಿರುವದೇ ಇಲ್ಲ; ಆಗ ಈಶ್ವರನೆಂದರೆ ಒಬ್ಬೊಬ್ಬ ಜೀವನದಲ್ಲಿಯೂ ಇದ್ದುಕೊಂಡಿರುವ, ಇಡಿಯ ವಿಶ್ವದಲ್ಲಿಯೇ ಅಂತರ್ಯಾಮಿಯಾಗಿರುವ#, ಒಂದಾನೊಂದು ತತ್ತ್ವವು. ಪುರುಷರೂಪನಾದ ಸಗುಣೇಶ್ವರನನ್ನು ಬಿಟ್ಟು ನಿರ್ಗಣಪರಮೇಶ್ವರನನ್ನು ಮುಟ್ಟಿದ ಮೇಲೂ

* ಇಲ್ಲಿ ದಂಗೆ ಎಂಬ ಮಾತನ್ನು ಅಲಂಕಾರಿಕವಾಗಿ ತಿಳಿಯಬೇಕು; ಈಶ್ವರನು ನಮ್ಮನ್ನು ಆಳಕೂಡದೆಂಬರ್ಥದ ಮಾತುಗಳೇನೂ ಉಪನಿಷತ್ತಿನಲ್ಲಿಲ್ಲ. ಆ ಈಶ್ವರನೇ ನಮ್ಮಗಳೆಲ್ಲರ ಆತ್ಮನೆಂಬ ಅಭಿಪ್ರಾಯವು ಮಾತ್ರ ಕಂಡುಬರುತ್ತದೆ. ಈಗಲೂ ಪರಮಾದ್ವೈತಿಗಳೆನಿಸಿಕೊಂಡವರು ಕೂಡ ಉಪಾಸನೆಯನ್ನು ಜರಿಯುವದಿಲ್ಲ; ಜ್ಞಾನದಿಂದ ಪಡೆಯುವ ಪರಮಾತ್ಮ ವಸ್ತುವನ್ನೇ ನಾವು ಸಗುಣವೆಂದು ಆರಾಧಿಸುತ್ತೇವೆ ಎಂದು ಹೇಳುತ್ತಾರೆ, ಅಷ್ಟೆ. ಶ್ರೀಕಂಠಾಚಾರ್ಯರ ಶಿಷ್ಯರೆನಿಸಿದವರಲ್ಲಿ ಯಾರೂ ಸಗುಣಾರಾಧನೆಯ ವಿರೋಧಿಗಳಾಗಿಲ್ಲವೆಂಬುದಿಷ್ಟೇ ಅಲ್ಲ, ಅವರು ಸಗುಣಸಾಕಾರಪರಮೇಶ್ವರನ ಮಾನಸ ಪೂಜೆಯನ್ನೂ ಬಾಹ್ಯಪೂಜೆಯನ್ನೂ ಭಕ್ತಿಯಿಂದ ಮಾಡಬೇಕೆಂದೇ ಹೇಳುತ್ತಿದ್ದಾರೆ. ಆದ್ದರಿಂದ ಸಗುಣದಿಂದ ನಿರ್ಗುಣ ಭಾವನೆ ಯುಂಟಾಯಿತೆಂಬುದನ್ನು ತಿಳಿಸುವದೇ ಸ್ವಾಮಿಗಳ ಉದ್ದೇಶವೆಂದು ನಾವು ಧಾರಾಳವಾಗಿ ಹೇಳಬಹುದು.

# ನಿಜವಾಗಿ ಅಂತರ್ಯಾಮಿಯೆಂಬುದೂ ಕೊನೆಯಮಾತಲ್ಲ, ಏಕೆಂದರೆ ಅದ್ವೈತದ ಕೊನೆಯ ಮಾತಿನಲ್ಲಿ ಒಂದೇ, ಎರಡನೆಯದಿಲ್ಲ; ಸಜಾತೀಯ ವಿಜಾತೀಯ ಸ್ವಗತಭೇದವಿರುವದಿಲ್ಲ.

ಮನುಷ್ಯನನ್ನೂ ಪುರುಷನೆಂದೇ, ಸಗುಣನೆಂದೇ, ಇಟ್ಟುಕೊಳ್ಳುವದು ಯುಕ್ತಿ ಯುಕ್ತವಾಗುವದಿಲ್ಲ. ಆದ್ದರಿಂದ ಸಗುಣರೂಪನಾದ ಮನುಷ್ಯನನ್ನು ಕೈಬಿಟ್ಟು ತತ್ತ್ವರೂಪನಾದ ಮನುಷ್ಯನನ್ನು ನಿರ್ಮಾಣಮಾಡಿಕೊಂಡಿರುತ್ತದೆ@. ಪುರುಷನೆಂಬುವನು ಬರಿಯ ದೃಶ್ಯವು, ತತ್ತ್ವವು ಅದಕ್ಕೆ ಆಧಾರವಾಗಿರುತ್ತದೆ. ಈ ರೀತಿಯಲ್ಲಿ ಎರಡು ಕಡೆಯಲ್ಲಿಯೂ ಪುರುಷಾಕಾರವನ್ನು ತೆಗೆದು ಹಾಕಿ ತತ್ತ್ವಗಳ ಕಡೆಗೆ ಬಂದಿರುವದು ಕಂಡುಬಂದಿರುತ್ತದೆ. ಆ ಬಳಿಕ ಮುಂದಿನ ಮಜಲುಗಳು ಬರುತ್ತವೆ. ನಿರ್ಗುಣಪರಮೇಶ್ವರ, ನಿರ್ಗುಣಮಾನವ - ಎಂಬ ಮುಂದುಮುಂದಕ್ಕೆ ಸಾಗುತ್ತಿರುವ ಈ ಎರಡು ರೇಖೆಗಳೂ ಮೆಲ್ಲಮೆಲ್ಲಗೆ ಸಾಗಿ ಒಂದು ಕಡೆಯಲ್ಲಿ ಸೇರುತ್ತವೆ. ಯಾವ ಮಜಲುಗಳನ್ನು ದಾಟಿ ಕೊನೆಗೆ ಈ ಎರಡು ರೇಖೆಗಳೂ ಒಂದಾಗುವವೋ ಅವನ್ನೆಲ್ಲ ಉಪನಿಷತ್ತಿನಲ್ಲಿ ಸೇರಿಸಿರುತ್ತದೆ. ಪ್ರತಿಯೊಂದು ಉಪನಿಷತ್ತಿನಲ್ಲಿಯೂ ಕಟ್ಟಕಡೆಯ ಮಾತೆಂದರೆ "ಅದೇ ನೀನು"*. ನಿತ್ಯಾನಂದರೂಪವಾದ ಒಂದೇ ಒಂದು ತತ್ತ್ವವಿರುತ್ತದೆ, ಆ ಒಂದೇ ಈ ಬಗೆಬಗೆಯ ಚಿತ್ರಪ್ರಪಂಚವಾಗಿ ತೋರಿಕೊಳ್ಳುತ್ತಿದೆ ಎಂಬ ಸಿದ್ಧಾಂತವು ತಿಳಿಯಬರುತ್ತದೆ.

ಆಮೇಲೆ ತತ್ತ್ವವಿಚಾರಕರು ಬಂದರು. ನಾವು ಹೇಳಿದಲ್ಲಿಗೆ ಉಪನಿಷತ್ತುಗಳ ಕೆಲಸವು ಮುಗಿಯಿತೆಂದು ತೋರುತ್ತದೆ$. ಮುಂದಿನ ಕೆಲಸವನ್ನು ತತ್ತ್ವವಿಚಾರಕರು ಕೈಕೊಂಡರು. ಅವರಿಗೆ ವಿಚಾರದ ಚೌಕಟ್ಟು ಉಪನಿಷತ್ತುಗಳಲ್ಲಿಯೇ ದೊರೆತಿತ್ತು; ಅವರು ಒಳಗಿನ ಚಿತ್ರದ ವಿವರವನ್ನು ಬರೆದು ಪೂರ್ಣಗೊಳಿಸಬೇಕಾಗಿತ್ತು. ಆದ್ದರಿಂದ ಅನೇಕ ಪ್ರಶ್ನೆಗಳು ಎದ್ದುಕೊಂಡದ್ದು ಸ್ವಾಭಾವಿಕವಾಗಿದೆ. ಒಂದೇ ಒಂದು ನಿರ್ಗುಣತತ್ತ್ವವು ಈ ನಾನಾ ರೂಪಗಳಲ್ಲಿ ಕಾಣುತ್ತಿರುವದೆಂಬುದನ್ನು ಒಪ್ಪಿಕೊಳ್ಳೋಣ; ಆದರೆ ಆ ಒಂದು ಅನೇಕವಾದದ್ದು ಹೇಗೆ? ಹಿಂದೆ ಮಾನವನ ಹೃದಯದಲ್ಲಿ ಅಪೂರ್ಣ ಸ್ಥಿತಿಯಲ್ಲಿ ಕಾಣಿಸಿಕೊಂಡ ದುಃಖಕಾರಣದ ಪ್ರಶ್ನೆಯೆಂಬ

@ ಇಲ್ಲಿ ನಿರ್ಮಾಣವೆಂಬ ಮಾತನ್ನೂ ಅಲಂಕಾರಿಕವಾಗಿ ತಿಳಿಯಬೇಕು. ಭಾವನೆಯ ಬೆಳವಣಿಗೆಯನ್ನು ತಿಳಿಸುವಾಗ ಈ ಮಾತೇ ಯುಕ್ತವಾಗಿರುತ್ತದೆ.

* ಜೀವಪರಮಾತ್ಮರು ಒಂದೇ ಚೈತನ್ಯವೆಂಬರ್ಥದ ಮಾತು ಎಂದರ್ಥ. ಅದೇ ನೀನು ಎಂಬ ವಾಕ್ಯವು ಛಾಂದೋಗ್ಯದಲ್ಲಿದೆ; ಇದೇ ಅರ್ಥದ ಬೇರೆ ವಾಕ್ಯಗಳು ಮಿಕ್ಕ ಉಪನಿಷತ್ತುಗಳಲ್ಲಿಯೂ ಇವೆ. ಇವನ್ನು ಈಗಿನ ಅದ್ವೈತಸಿದ್ಧಾಂತಿಗಳು ಮಹಾವಾಕ್ಯಗಳೆಂದು ಕರೆಯುತ್ತಾರೆ.

$ ಉಪನಿಷತ್ತುಗಳಲ್ಲಿ ಕಾರ್ಯಕಾರಣಾನನ್ಯತೆಯನ್ನೂ, ಅವಸ್ಥಾತ್ರಯಪ್ರಕ್ರಿಯೆಯನ್ನೂ ಹೇಳಿರುವದನ್ನು ಈ ಉಪನ್ಯಾಸದಲ್ಲಿ ಲೆಕ್ಕಕ್ಕೆ ತೆಗೆದುಕೊಂಡಿರುವದಿಲ್ಲವೆಂದು ಕಾಣುತ್ತದೆ. ಪ್ರಕೃತ ವಿಚಾರಕ್ಕೆ ಅದು ಬಹುಮುಖ್ಯವಾಗಿರುತ್ತದೆ.

ಆ ಹಳೆಯ ಪ್ರಶ್ನೆಯೇ ಇದು. ಈ ಲೋಕದಲ್ಲಿ ದುಃಖವಿರುವದೇಕೆ? ಇದಕ್ಕೇನು ಕಾರಣ?– ಎಂದು ಆಗ ಕೇಳುತ್ತಿದ್ದರು. ಅದೇ ಪ್ರಶ್ನೆಯೇ ಈಗ ನವಿರಾಗಿ ಸೂಕ್ಷ್ಮವಾಗಿರುತ್ತದೆ, ಅಷ್ಟೆ. ಆಗಿನಂತೆ 'ನಾವು ದುಃಖಿಗಳಾಗಿರುವದಕ್ಕೇನು ಕಾರಣ?' ಎಂದು ಇಂದ್ರಿಯಗಳ ವ್ಯಾಸ ಪೀಠದಿಂದ ಕೇಳುವ ಪ್ರಶ್ನೆ ಇದಲ್ಲ, ತತ್ತ್ವಶಾಸ್ತ್ರದ ಪೀಠದಿಂದ ಬಂದ ಪ್ರಶ್ನೆಯಿದು. ಈ ಒಂದು ತತ್ತ್ವವೇ ನಾನಾ ರೂಪವಾಗುವದಕ್ಕೇನು ಕಾರಣ? ಇದಕ್ಕೆ ಕೊಟ್ಟಿರುವ ಉತ್ತರವೇ, ಭರತಖಂಡದಲ್ಲಿ ಹುಟ್ಟಿರುವ, ಅತ್ಯಂತ ಉತ್ತಮವಾದ ಉತ್ತರವೇ, **ಮಾಯಾವಾದವು**. ಇದನ್ನು ಹಿಂದೆಯೇ ತಿಳಿಸಿದ್ದಾಗಿರುತ್ತದೆ.* ಆ ವಾದದಲ್ಲಿ ಹೇಳಿರುವದೇನೆಂದರೆ, ಅದು ನಿಜವಾಗಿ ನಾನಾರೂಪವಾಗಿ ಪರಿಣಮಿಸಿರುವದಿಲ್ಲ, ಅದು ತನ್ನ ಪರಮಾರ್ಥ ಸ್ವಭಾವದಲ್ಲಿ ಒಂದಿಷ್ಟನ್ನೂ ಕಳೆದುಕೊಂಡಿರುವದಿಲ್ಲ. ನಾನಾತ್ವವೆಂಬುದು ಬರಿಯ ತೋರಿಕೆ. ಮನುಷ್ಯನು ಬರಿಯ ತೋರಿಕೆಗೆ ಸಗುಣನಾಗಿ ತೋರುತ್ತಾನೆ, ನಿಜವಾಗಿ ಅವನು ನಿರ್ಗುಣ ಸ್ವರೂಪ ಆಗಿರುತ್ತಾನೆ. ಈಶ್ವರನು ತೋರಿಕೆಗೆ ಸಗುಣ ನಾಗಿರುತ್ತಾನೆ, ನಿಜವಾಗಿ ಅವನು ನಿರ್ಗುಣನಾಗಿಯೇ ಇರುತ್ತಾನೆ.

ಈ ಉತ್ತರವನ್ನು ಹೇಳುವದರಲ್ಲಿಯೂ ಬೇರೆ ಬೇರೆಯ ಭೂಮಿಕೆಗಳಿರುತ್ತವೆ. ಈ ವಿಷಯದಲ್ಲಿ ತತ್ತ್ವವಿಚಾರಕರೂ ಬೇರೆ ಬೇರೆಯ ಅಭಿಪ್ರಾಯವನ್ನು ಕೊಟ್ಟಿರುತ್ತಾರೆ. ಇಂಡಿಯಾದೇಶದ ತತ್ತ್ವವಿಚಾರಕರೆಲ್ಲರೂ ಈ ಮಾಯಾವಾದವನ್ನು ಒಪ್ಪಲಿಲ್ಲ. ಅವರಲ್ಲಿ ಬಹುಜನರು ಒಪ್ಪಲಿಲ್ಲವೆಂದೇ ಹೇಳಬಹುದು. ಒಂದಾನೊಂದು ಅಪೂರ್ಣಸ್ಥಿತಿಯ ದ್ವೈತವನ್ನು ಹೇಳುವವರು ಕೆಲವರು ಇದಾರೆ; ಅವರು ಈ ಪ್ರಶ್ನೆಯನ್ನು ಹಾಕುವದಕ್ಕೆ ಅವಕಾಶವನ್ನು ಕೊಡಲಿಲ್ಲ, ಅವರು ಅದು ಹುಟ್ಟುವಾಗಲೇ ಅದರ ಕತ್ತುಹಿಸುಕಿಬಿಟ್ಟರು. ಅವರು ಹೇಳುವದೇನೆಂರೆ "ಇಂಥ ಪ್ರಶ್ನೆಯನ್ನು ಹಾಕಕೂಡದು, ಇದಕ್ಕೇನು ಕಾರಣವೆಂದು ಕೇಳಲೇಕೂಡದು. ಇದೆಲ್ಲ ಈಶ್ವರೇಚ್ಛೆಯು, ನಾವು ತೆಪ್ಪಗೆ ಅದಕ್ಕೆ ವಶವರ್ತಿಗಳಾಗಿ ನಡೆದುಕೊಳ್ಳಬೇಕು. ಮನುಷ್ಯ ಜೀವನಿಗೆ ಸ್ವಾತಂತ್ರ್ಯವೇ ಇಲ್ಲ. ನಾವು ಏನು ಮಾಡಬೇಕು, ನಮಗೆ ಏನು ಸಿಕ್ಕಬೇಕು, ಯಾವ ಸುಖವನ್ನು ಅನುಭವಿಸಬೇಕು. ಯಾವ ಕಷ್ಟವನ್ನು ಅನುಭವಿಸಬೇಕು, ಇದೆಲ್ಲವೂ ಮೊದಲೇ ನಿರ್ಣಯ ವಾಗಿಬಿಟ್ಟಿರುತ್ತದೆ. ಕಷ್ಟವು ಬಂದಾಗ ತಾಳ್ಮೆಯಿಂದ ಅನುಭವಿಸುವದೇ ನಮ್ಮ ಕರ್ತವ್ಯವು; ಹಾಗಿಲ್ಲದಿದ್ದರೆ ನಮಗೆ ಇನ್ನಷ್ಟು ಶಿಕ್ಷೆಯಾಗುತ್ತದೆ. ಇದು ಹೇಗೆ ಗೊತ್ತು?– ಎಂದರೆ ವೇದದಲ್ಲಿ ಹಾಗೆಂದು ಹೇಳಿರುವದರಿಂದ", ಇವರು ತಮಗೆ

* ಜ್ಞಾನಯೋಗದ ಒಂದನೆಯ ಭಾಗದಲ್ಲಿರುವ ಮಾಯಾವಿಷಯಕವಾದ ಉಪನ್ಯಾಸಗಳನ್ನು ಓದಿರಿ.

ಅನುಕೂಲವಾಗಿರುವ ಕೆಲವು ವಾಕ್ಯಗಳನ್ನಿಟ್ಟುಕೊಂಡಿದ್ದಾರೆ, ಅವುಗಳಿಗೆ ತಮಗೆ ಅನುಕೂಲವಾಗುವಂತೆ ಅರ್ಥವನ್ನು ಮಾಡಿಕೊಳ್ಳುತ್ತಾರೆ; ಇದರಂತೆಯೇ ಎಲ್ಲರೂ ನಡೆಯಬೇಕು?- ಎನ್ನುತ್ತಾರೆ.

ಮತ್ತೆ ಕೆಲವರು ಇದಾರೆ. ಅವರೂ ಮಾಯಾವಾದವನ್ನು ಒಪ್ಪುವದಿಲ್ಲ. ಆದರೆ ಅವರು ಮೇಲೆ ಹೇಳಿದ ದ್ವೈತಿಗಳಿಗೂ ಮಾಯಾವಾದಿಗಳಿಗೂ ನಡುವೆ ಇರುತ್ತಾರೆ. ಅವರು ಹೇಳುವದೇನೆಂದರೆ ಈ ಸೃಷ್ಟಿಯೆಂಬುದೆಲ್ಲವೂ ಈಶ್ವರನ ಶರೀರದಂತೆ ಇರುತ್ತದೆ. ಈಶ್ವರನು ಆತ್ಮರಿಗೆಲ್ಲ ಆತ್ಮನು, ಇಡಿಯ ಜಗತ್ತಿಗೇ ಆತ್ಮನು. ಜೀವರುಗಳಿಗೆ ಪಾಪಾಚರಣೆಯಿದ ಸಂಕೋಚವುಂಟಾಗುತ್ತದೆ. ಮನುಷ್ಯನು ಪಾಪವನ್ನು ಮಾಡಿದರೆ ಅವನ ಆತ್ಮವು ಸಂಕುಚಿತವಾಗಿ ಅವನ ಶಕ್ತಿಯು ಕುಗ್ಗುತ್ತದೆ. ಅದು ಹೀಗೆಯೇ ಕುಗ್ಗುತ್ತಲೇ ಇರುತ್ತದೆ. ಕೊನೆಗೆ ಅವನು ಪುಣ್ಯವನ್ನು ಮಾಡಿದರೆ ಅದು ಮತ್ತೆ ವಿಕಾಸವಾಗುತ್ತದೆ. ಇಂಡಿಯದಲ್ಲಿರುವ ಸಿದ್ಧಾಂತಗಳಿಗೆಲ್ಲ ಒಂದೇ ಒಂದು ಭಾವನೆಯು ಸಮಾನವಾಗಿರುವಂತೆ ತೋರುತ್ತದೆ. ಇಂಡಿಯದ ಸಿದ್ಧಾಂತಗಳಿಗೇ ಅಲ್ಲ, ಪ್ರಪಂಚದಲ್ಲಿರುವ ಪ್ರತಿಯೊಂದು ಸಿದ್ಧಾಂತಕ್ಕೂ ಇದು ಅವುಗಳಲ್ಲಿಯೂ ಸೇರಿಯೇ ಇದೆಯೆಂದು, ಆಯಾ ಸಿದ್ಧಾಂತದವರಿಗೆ ಗೊತ್ತಿರಲಿ ಗೊತ್ತಿಲ್ಲದಿರಲಿ, ಅದು ಇದ್ದೇ ಇದೆಯೆಂದು ನನಗೆ ತೋರುತ್ತದೆ. ಮಾನವ ಜೀವನಸ್ವರೂಪವು ಯಾವದೇ ಆಗಿರಲಿ, ಅದಕ್ಕೂ ಈಶ್ವರನಿಗೂ ಯಾವ ಸಂಬಂಧವೇ ಇರಲಿ, ಪರಮಾರ್ಥವಾಗಿ ಪರಿಶುದ್ಧವಾಗಿಯೂ ಪರಿಪೂರ್ಣವಾಗಿಯೂ ಇದ್ದೇ ಇದೆ-ಎಂಬುದನ್ನು ಒಪ್ಪದ ಯಾವದೊಂದು ಸಿದ್ಧಾಂತವೂ ಯಾವದೊಂದು ಮತವೂ ಇಲ್ಲವೇ ಇಲ್ಲ. ಈ ಅಭಿಪ್ರಾಯವನ್ನು ಪುರಾಣದಿಂದಲೋ, ರೂಪಕರೂಪದಲ್ಲಿಯೋ, ತತ್ತ್ವಶಾಸ್ತ್ರ ರೀತಿಯಿಂದಲೋ ಆ ಸಿದ್ಧಾಂತಗಳಲ್ಲಿ ಹೇಳಿರುತ್ತದೆ. ಜೀವನ ನಿಜವಾದ ಸ್ವರೂಪವು ಆನಂದ, ಶಕ್ತಿ, ದುಃಖವೂ ನಿರ್ಬಲತೆಯೂ ಅಲ್ಲ; ಈ ದುಃಖವೆಂಬುದು ಹೇಗೋ ಬಂದಿರುತ್ತದೆ- ಎಂಬುದನ್ನು ಎಲ್ಲರೂ ಹೇಳುತ್ತಾರೆ. ಅಪೂರ್ಣವಾಗಿರುವ ಸಿದ್ಧಾಂತದಲ್ಲಿ ಇದನ್ನು ಸಗುಣವಾಗಿರುವ ಅಶುಭುತತ್ತ್ವವೆಂದೂ, ಸೈತಾನ ಅಥವಾ ಅಹ್ರಿಮನ್- ಎಂದೂ ಹೆಸರು ಕೊಟ್ಟು ಈ ದುಃಖಕ್ಕೆ ಕಾರಣವನ್ನು ವಿವರಿಸಬಹುದು. ಮತ್ತೆ ಕೆಲವು ಸಿದ್ಧಾಂತಗಳಲ್ಲಿ ಒಬ್ಬನೇ ದೇವರೂ ದೆವ್ವವೂ ಎರಡೂ ಆಗಿರುತ್ತಾನೆಂದೂ ನಿಷ್ಕಾರಣವಾಗಿ ಕೆಲವರನ್ನು ಸುಖಿಗಳಾಗಿಯೂ ಕೆಲವರನ್ನು ದುಃಖಿಗಳಾಗಿಯೂ ಮಾಡುತ್ತಾನೆಂದೂ ಹೇಳಬಹುದು. ಹೆಚ್ಚು ವಿಚಾರಪರರಾದ ಮತ್ತೂ ಕೆಲವರು ಮಾಯಾವಾದವೇ ಮುಂತಾದದ್ದನ್ನು ತರಬಹುದು. ಆದರೆ ಎಲ್ಲೆಲ್ಲಿಯೂ ಈ ಭಾವನೆಯೇ ಇದ್ದು ಸಿದ್ಧಾಂತಗಳೂ

ಮನಸ್ಸಿಗೆ ಕಸರತ್ತುಗಳು, ಮನಸ್ಸಿನ ಗರಡಿಯ ಸಾಧನೆಗಳು. ಯಾವ ದೇಶದಲ್ಲಿಯಾಗಲಿ ಯಾವ ಮತದಲ್ಲಿಯೇ ಆಗಲಿ ಮೂಢ ವಿಶ್ವಾಸಗಳ ರಾಶಿಯಲ್ಲಿ ಸ್ಪಷ್ಟವಾಗಿ ನನಗೆ ಕಾಣಿಸುತ್ತಿರುವ ಒಂದೇ ಒಂದು ಮಹಾಭಾವನೆಯೆಂದರೆ ಮನುಷ್ಯನು ದೈವಿಕಸ್ವಭಾವದವನಾಗಿರುತ್ತಾನೆ. ನಮ್ಮ ಸ್ವಭಾವವು ದೈವಿಕವಾಗಿಯೇ ಇರುತ್ತದೆ- ಎಂಬುದೇ ಆಗಿರುತ್ತದೆ.

ನಮ್ಮ ಸ್ವಭಾವವು ಪರಮೇಶ್ವರನೇ ಆಗಿರುತ್ತದೆ, ಮಿಕ್ಕದ್ದೆಲ್ಲ ಅಧ್ಯಾಸ ಮಾತ್ರವಾಗಿರುತ್ತದೆ ಎಂದು ವೇದಾಂತವು ಹೇಳುತ್ತದೆ. ಯಾವದೋ ಒಂದು ಅದರಲ್ಲಿ ಆರೋಪಿತವಾಗಿರುತ್ತದೆ. ಆದರೆ ಅದರ ಪಾರಮೇಶ್ವರಸ್ವರೂಪವು ಮಾತ್ರ ಎಂದಿಗೂ ಅಳಿಯುವದಿಲ್ಲ. ಅತ್ಯಂತ ನೀಚರಲ್ಲಿಯೂ ಅತ್ಯಂತ ಉತ್ಕೃಷ್ಟವಾದ ಮಹಾತ್ಮರಲ್ಲಿಯೂ ಅದು ಯಾವಾಗಲೂ ಇದ್ದುಕೊಂಡೇ ಇರುತ್ತದೆ. ಅದನ್ನು ವ್ಯಕ್ತೀಕರಿಸಬೇಕು, ಅಷ್ಟೇ; ಆಮೇಲೆ ಅದು ತನಗೆ ತಾನೇ ತನ್ನ ಮಹಿಮೆಯನ್ನು ತೋರಿಸಿಕೊಳ್ಳುತ್ತದೆ. ನಾವು ಕೇಳಿಕೊಳ್ಳಬೇಕು. ಆಗ ತನಗೆ ತಾನೇ ತೋರಿಕೊಳ್ಳುತ್ತದೆ. ಪ್ರಾಚೀನಕಾಲದ ಜನರಿಗೆ ಚಕ್ಕಮುಕ್ಕಿಯಲ್ಲಿಯೂ ಕಟ್ಟಿಗೆಯಲ್ಲಿಯೂ ಬೆಂಕಿ ಇದೆಯೆಂಬುದು ಗೊತ್ತಿತ್ತು; ಆದರೆ ಅದನ್ನು ಹೊರಕ್ಕೆ ತರುವದಕ್ಕೆ ಘರ್ಷಣೆ ಬೇಕಾಯಿತು. ಈ ಮುಕ್ತಿಯೂ ಪರಿಶುದ್ಧತೆಯೂ ಎಂಬ ಬೆಂಕಿಯು ಪ್ರತಿಯೊಬ್ಬ ಜೀವನ ಸ್ವಭಾವವೇ ಆಗಿರುತ್ತದೆ; ಅದು ಬರಿಯ ಆಗುಂತುಕ ಗುಣವಲ್ಲ. ಏಕೆಂದರೆ ಗುಣಗಳನ್ನು ಸಂಪಾದಿಸಲೂ ಬಹುದು, ಆದ್ದರಿಂದಲೇ ಕಳೆದುಕೊಳ್ಳಲೂಬಹುದು. ಜೀವನೂ ಮುಕ್ತಿಯೂ ಒಂದೇ, ಜೀವನೂ ಸತ್ತೂ ಒಂದೇ, ಜೀವನೂ ಜ್ಞಾನವೂ ಒಂದೇ. ಸಚ್ಚಿದಾನಂದತ್ವವೆಂಬುದು ಜೀವನ ಸ್ವಭಾವವು, ಅವನ ಆಜನ್ಮವಾದ ಹಕ್ಕು; ನಮಗೆ ಹೊರಗೆ ತೋರುವದೆಲ್ಲ ಮಂಕಾಗಿಯೋ ಪ್ರಕಾಶವಾಗಿಯೋ, ಹೊರತೋರುವ ಅದರ ವ್ಯಕ್ತರೂಪಗಳು. ಮರಣವೆಂಬುದು ಕೂಡ ಆ ಪರಮಾರ್ಥಸತ್ತೆಯ ಒಂದಾನೊಂದು ರೂಪವು. ಹುಟ್ಟು, ಸಾವು, ಬದುಕಿರುವದು, ಮುಪ್ಪಾಗುವದು, ಸವೆಯುವದು, ಪುಷ್ಟಿಯಾಗುವದು, ಇವೆಲ್ಲ ಆ ಒಂದು ಪರಮಾರ್ಥದ ರೂಪವಿಶೇಷಗಳೇ ಇದರಂತೆ ತಿಳಿವಳಿಕೆಯು, ಮೌಢ್ಯವಾಗಿ ತೋರಿಕೊಳ್ಳಲಿ, ವಿದ್ಯೆಯಾಗಿ ತೋರಿಕೊಳ್ಳಲಿ, ಹೇಗೇ ತೋರಿಕೊಂಡರೂ ಆ ಚಿತ್ತಿನ, ಆ ಅರಿವಿನ ಸಾರದ ರೂಪವಿಶೇಷವೇ ಆಗಿರುತ್ತದೆ; ಅವೆರಡಕ್ಕೂ ಇರುವ ತಾರತಮ್ಯವು ಪರಿಮಾಣದಲ್ಲಿಯೇ ಹೊರತು, ಸ್ವಭಾವದಲ್ಲಿಲ್ಲ. ನಮ್ಮ ಕಾಲಕೆಳಗೆ ಹರಿದಾಡುತ್ತಿರುವ ಅತ್ಯಂತ ಕೀಳು ಪ್ರಾಣಿಗೂ ಈ ಪ್ರಪಂಚದಲ್ಲಿ ಹುಟ್ಟಬಹುದಾದ

ಅತ್ಯಂತ ಬುದ್ಧಿಶಾಲಿಗೂ ಇರುವ ತಿಳಿವಳಿಕೆಯು ತಾರತಮ್ಯವು ಬರಿಯ ಪರಿಮಾಣದಲ್ಲಿಯೇ ಹೊರತು ಸ್ವಭಾವದಲ್ಲಿಲ್ಲ. ಈ ಲೋಕದಲ್ಲಿ ನಾವು ಪಡುತ್ತಿರುವ ಭೋಗಗಳಿಗೆಲ್ಲವೂ ಅತ್ಯಂತ ತೀರ ಕೀಳುದರ್ಜೆಯ ಭೋಗಗಳು ಕೂಡ ಆ ಆತ್ಮನ ಸಾರವಾದ ಒಂದು ದಿವ್ಯಾನಂದದ ರೂಪವಿಶೇಷಗಳೇ ಎಂದು ವೇದಾಂತಿಯು ಧೈರ್ಯದಿಂದ ಸಾರುತ್ತಾನೆ.

ಈ ಅಭಿಪ್ರಾಯವು ವೇದಾಂತದಲ್ಲಿ ಎಲ್ಲಕ್ಕಿಂತಲೂ ಮೇಲಕ್ಕೆದ್ದು ತೋರುವಂತೆ ಕಾಣುತ್ತದೆ; ನಾನು ಈ ಮೊದಲೇ ಹೇಳಿರುವಂತೆ ಅದನ್ನು ಪ್ರತಿಯೊಂದು ಧರ್ಮದಲ್ಲಿಯೂ ಇಟ್ಟುಕೊಂಡೇ ಇರುತ್ತದೆಯೆಂದು ನನಗೆ ತೋರುತ್ತದೆ. ಈ ಭಾವನೆಯು ಇಲ್ಲದ ಧರ್ಮವೇ ನನಗೆ ಇದುವರೆಗೆ ಕಂಡುಬಂದಿರುವದಿಲ್ಲ. ಅದೊಂದೇ ಎಲ್ಲಾ ಧರ್ಮಗಳಲ್ಲಿಯೂ ಕಾಣಿಸಿಕೊಳ್ಳುತ್ತಿರುವ ಸರ್ವವ್ಯಾಪಕ ಭಾವನೆಯಾಗಿರುತ್ತದೆ. ಉದಾಹರಣೆಗೆ **ಬೈಬಲನ್ನು** ತೆಗೆದುಕೊಳ್ಳಿರಿ. ಅದರಲ್ಲಿ ಒಂದಾನೊಂದು ಕಥೆಯ ರೂಪದಿಂದ ಈ ಮಾತನ್ನು ಹೇಳಿರುತ್ತದೆ. ಆದಿಮಾನವನಾದ **ಆಡಾಮನು** ಪರಿಶುದ್ಧನಾಗಿದ್ದನು, ಅವನ ದುಷ್ಕರ್ಮಗಳಿಂದ ಆಮೇಲೆ ಅವನ ಪಾರಿಶುದ್ಧ್ಯವು ಅಳಿಸಿಹೋಯಿತು. ಈ ಕಥೆಯನ್ನು ನೋಡಿದರೆ ಮೊದಲಿನ ಮನುಷ್ಯನು ಪರಿಪೂರ್ಣ ಸ್ವಭಾವದವನಾಗಿದ್ದನೆಂಬ ಭಾವನೆಯಿತ್ತೆಂದೇ ಸ್ಪಷ್ಟವಾಗುತ್ತದೆ. ನಮಗೆ ಕಾಣುತ್ತಿರುವ ಅಶುದ್ಧಿಗಳೆಂಬವು, ನಮಗೆ ತೋರುವ ದೌರ್ಬಲ್ಯಗಳು, ಆ ಸ್ವಭಾವದಲ್ಲಿ ಹುಟುಗಟ್ಟಿದವುಗಳಾಗಿವೆ. ಅಷ್ಟೆ, ಕ್ರಿಸ್ತಿಯ ಧರ್ಮದ ಇತ್ತೀಚಿನ ಇತಿಹಾಸವನ್ನು ನೋಡಿದರೆ ಅವರೂ ಪ್ರಾಚೀನ ಸ್ಥಿತಿಯನ್ನು ಮತ್ತೆ ಪಡೆಯುವದು ಸಾಧ್ಯವೆಂದೇ, ಸಾಧ್ಯವೇಕೆ, ನಿಶ್ಚಯವಾಗಿ ಪಡೆಯುವೆವೆಂದೇ, ನಂಬುತ್ತಾರೆಂದು ಗೊತ್ತಾಗುತ್ತದೆ. **ಹಳೆಯ ಮತ್ತು ಹೊಸ ಒಡಂಬಡಿಕೆಗಳೆಂದು** ವಿಭಾಗವಾಗಿರುವ ಬೈಬಲಿನ ಪೂರ್ಣ ಇತಿಹಾಸವೇ ಇದು.* ಮಹಮ್ಮದೀಯರ ವಿಚಾರವೂ ಹೀಗೆಯೇ. ಅವರಿಗೂ ಆಡಾಮನ ಇತಿಹಾಸದಲ್ಲಿಯೂ ಆಡಾಮನ ಪರಿಶುದ್ಧತೆಯಲ್ಲಿಯೂ ನಂಬಿಕೆಯಿತ್ತು; **ಮಹಮ್ಮದನ** ದ್ವಾರವಾಗಿ ಆ ನಷ್ಟವಾಗಿರುವ ಸ್ಥಿತಿಯನ್ನು ಪಡೆದುಕೊಳ್ಳಬಹುದಾಯಿತೆಂದೂ ಅವರು ನಂಬಿದ್ದರು. ಬೌದ್ಧರ ವಿಷಯವೂ ಅಷ್ಟೇ. ಅವರೂ ಈ ವ್ಯಾವಹಾರಿಕ ಪ್ರಪಂಚದಿಂದಾಚೆ ಇರುವ **ನಿರ್ವಾಣವೆಂಬ**

---

* ಹಳೆಯ ಒಡಂಬಡಿಕೆಯು ಯಹೋದ್ಯರದು; ಅದರಲ್ಲಿ ಧರ್ಮಭಾಗವೂ ಧರ್ಮಾಚಾರ್ಯರಾದ ಮಹಾತ್ಮರ ಅನುಶಾಸನಗಳೂ ಕಣಿಗಳೂ ಇರುತ್ತವೆ. ಹೊಸ ಒಡಂಬಡಿಕೆಯಲ್ಲಿ ಕ್ರಿಸ್ತನ ಚರಿತ್ರೆಯೂ ಪರಮೇಶ್ವರನ ಭಕ್ತಿಯಿಂದ 'ದೇವರಾಜ್ಯ'ವೆಂಬ ಮೋಕ್ಷವನ್ನು ಹೇಗೆ ಪಡೆಯಬಹುದಂಬ ಉಪದೇಶಗಳೂ ಇರುತ್ತವೆ.

ಒಂದಾನೊಂದು ಸ್ಥಿತಿಯಿರುವದೆಂದು ನಂಬುತ್ತಾರೆ. ಅವರು ಹೇಳುವ ಸ್ಥಿತಿಯು ವೇದಾಂತಿಗಳು ಹೇಳುವ ಬ್ರಹ್ಮದ ಸ್ವರೂಪದ್ದೇ ಆಗಿರುತ್ತದೆ; ಬೌದ್ಧರ ಇಡಿಯ ಸಿದ್ಧಾಂತವೇ ಆ ನಿರ್ವಾಣವೆಂಬ ಈಗ ನಷ್ಟವಾಗಿರುವ ಸ್ಥಿತಿಯನ್ನು ಪಡೆದುಕೊಳ್ಳಬಹುದೆಂಬ ಭಾವನೆಯ ಮೇಲೆ ಕಟ್ಟಿದ್ದಾಗಿರುತ್ತದೆ. ಹೀಗೆ ಪ್ರತಿಯೊಂದು ಸಿದ್ಧಾಂತದಲ್ಲಿಯೂ ನಿಮ್ಮಲ್ಲಿ ಆಗಲೇ ಇದ್ದುಕೊಂಡಿರದ ಯಾವದೂ ನಿಮಗೆ ಮುಂದೆ ದೊರಕಲಾರದೆಂಬ ಈ ತತ್ತ್ವವು ಕಂಡುಬರುತ್ತದೆ. ಈ ವಿಶ್ವದಲ್ಲಿ ನೀವು ಯಾರೊಬ್ಬರಿಗೂ ಋಣಿಗಳಲ್ಲ. ಇದು ನಿಮ್ಮ ಆಜನ್ಮಸಿದ್ಧವಾದ ಹಕ್ಕಾಗಿರುತ್ತದೆ. ಒಬ್ಬಾನೊಬ್ಬ ವೇದಾಂತ ತತ್ತ್ವಜ್ಞಾನಿಯು ಇದನ್ನು ಅತ್ಯಂತ ಆಲಂಕಾರಿಕ ಭಾಷೆಯಲ್ಲಿಟ್ಟು ತನ್ನ ಒಂದಾನೊಂದು ಗ್ರಂಥಕ್ಕೆ ಕೊಟ್ಟಿರುವ 'ಸ್ವಾರಾಜ್ಯ ಸಿದ್ಧಿ' (ನಮ್ಮ ನಮ್ಮದೇ ಆಗಿರುವ ರಾಜ್ಯವನ್ನು ಪಡೆದುಕೊಳ್ಳುವಿಕೆ) ಎಂಬ ಹೆಸರಿನಿಂದ ತಿಳಿಸಿಕೊಟ್ಟಿರುತ್ತಾನೆ. ಆ ರಾಜ್ಯವು ನಮ್ಮದು, ನಾವು ಅದನ್ನು ಕಳೆದುಕೊಂಡಿರುತ್ತೇವೆ, ಅದನ್ನು ಮತ್ತೆ ಸಾಧಿಸಿಕೊಳ್ಳಬೇಕಾಗಿರುತ್ತದೆ. ಆದರೆ ಮಾಯಾವಾದಿಯು ಈ ರಾಜ್ಯವನ್ನು ಕಳೆದುಕೊಂಡೆವೆಂಬುದೇ ಭ್ರಾಂತಿ; ಅದನ್ನು ನೀವು ಕಳೆದುಕೊಂಡದ್ದೆಂಬುದೇ ಇಲ್ಲ- ಎನ್ನುತ್ತಾನೆ. ಇದೊಂದೇ ಅವನ ಸಿದ್ಧಾಂತಕ್ಕೂ ಮಿಕ್ಕವುಗಳಿಗೂ ಇರುವ ಹೆಚ್ಚು ಕಡಿಮೆ.

ಇಲ್ಲಿಯವರೆಗೆ, ಎಂದರೆ ನಮ್ಮ ವಶದಲ್ಲಿ ಆ ಸ್ವಾರಾಜ್ಯವಿದ್ದಿತೆಂದೂ ಅದನ್ನು ನಾವೀಗ ಕಳೆದುಕೊಂಡಿರುವೆವೆಂದೂ ಹೇಳುವವರೆಗೆ, ಎಲ್ಲರೂ ಒಪ್ಪಿರುತ್ತಾರಾದರೂ ಅದನ್ನು ಹೇಗೆ ಮತ್ತೆ ಪಡೆದುಕೊಳ್ಳಬಹುದೆಂಬ ವಿಷಯಕ್ಕೆ ಒಬ್ಬೊಬ್ಬರು ಒಂದೊಂದು ಬಗೆಯ ಉಪದೇಶವನ್ನು ಮಾಡಿರುತ್ತಾರೆ. ಒಬ್ಬನು ಹೇಳುವದೇನೆಂದರೆ, ಇದಕ್ಕಾಗಿ ಕೆಲಕೆಲವು ಕರ್ಮಗಳನ್ನು ಆಚರಿಸಬೇಕು, ಕೆಲಕೆಲವು ವಿಗ್ರಹಗಳಿಗೆ ಇಂತಿಷ್ಟು ಹಣವನ್ನು ಕಾಣಿಕೆಯಾಗಿ ಸಲ್ಲಿಸಬೇಕು, ಇಂಥಿಂಥ ಆಹಾರವನ್ನು ತೆಗೆದುಕೊಳ್ಳಬೇಕು, ಹೀಗೆ ಹೀಗೆ ವ್ಯವಹಾರ ವನ್ನಿಟ್ಟುಕೊಂಡಿರಬೇಕು, ಹಾಗಾದರೆ ಆ ಸ್ವಾರಾಜ್ಯವು ಸಿಕ್ಕುತ್ತದೆ. ಮತ್ತೊಬ್ಬನ ಅಭಿಪ್ರಾಯದಂತೆ ಈ ಪ್ರಕೃತಿಯಿಂದಾಚೆಗೆ ಇರುವ ಒಂದಾನೊಂದು ಭೂತವಿಶೇಷಕ್ಕೆ ನೀವು ಅಳುತ್ತಾ ನಮಸ್ಕರಿಸಿ ಕ್ಷಮಾಪಣೆಯನ್ನು ಕೇಳಬೇಕು, ಹಾಗಾದರೆ ನಿಮಗೆ ಆ ರಾಜ್ಯವು ಸಿಕ್ಕುತ್ತದೆ. ಇನ್ನು ಒಬ್ಬನು, ಇಂಥ ಒಂದು ಭೂತವಿಶೇಷವನ್ನು ನಿಮ್ಮ ಹೃದಯದಿಂದ ಪ್ರೀತಿಸುವದಾದರೆ ನಿಮಗೆ ಆ ರಾಜ್ಯವು ಮತ್ತೆ ಕೈವಶವಾಗುತ್ತದೆ ಎನ್ನುತ್ತಾನೆ. ಈ ಬಗೆಬಗೆಯ ಉಪದೇಶವೆಲ್ಲವೂ ಉಪನಿಷತ್ತುಗಳಲ್ಲಿ ಕಂಡುಬರುತ್ತದೆ. ಇನ್ನು ಮುಂದೆ ನಾನು ಹೇಳುವ ವಿಷಯಗಳಿಂದ ನಿಮಗೆ ಅದರ ಅರಿಕೆಯಾಗುವದು. ಆದರೆ ಇವುಗಳಲ್ಲಿ

ಕಟ್ಟಕಡೆಯದಾದ ಎಲ್ಲಕ್ಕೂ ಹೆಚ್ಚಿನ ಉಪದೇಶವು ಯಾವದೆಂದರೆ ನೀವೇನೂ ಅಳಬೇಕಾದದ್ದೇ ಇಲ್ಲ. ಈ ಕರ್ಮಗಳನ್ನೆಲ್ಲ ಮಾಡಿಯೇ ತೀರಬೇಕಾದ ಅವಶ್ಯಕತೆಯೇನೂ ಇರುವದಿಲ್ಲ; ಆ ರಾಜ್ಯವನ್ನು ಹೇಗೆ ಪಡೆದುಕೊಳ್ಳಬೇಕೆಂಬ ಯೋಚನೆಯನ್ನೂ ತಲೆಗೆ ಹಚ್ಚಿಕೊಳ್ಳಬೇಕಾದದ್ದಿರುವದಿಲ್ಲ. ಏಕೆಂದರೆ ನೀವು ಅದನ್ನು ಕಳೆದುಕೊಂಡದ್ದೆಂಬುದೇ ಇಲ್ಲ. ನೀವು ಎಂದೆಂದೂ ಕಳೆದುಕೊಳ್ಳದೆ ಇರುವದನ್ನು ಹುಡುಕುವದಕ್ಕೇಕೆ ಹೋಗಬೇಕು? ನೀವು ಈಗಲೇ ಪರಿಶುದ್ಧರಾಗಿರುತ್ತೀರಿ, ನೀವು ಈಗಲೇ ಮುಕ್ತರಾಗಿರುತ್ತೀರಿ. ನಾವು ಮುಕ್ತರಾಗಿದೇವೆ ಎಂದು ಭಾವಿಸಿಕೊಂಡರೆ, ಈ ಕ್ಷಣದಲ್ಲಿಯೇ ನೀವು ಮುಕ್ತರಾಗಿರುತ್ತೀರಿ; ನಾವು ಬದ್ಧರು ಎಂದೆಣಿಸಿಕೊಂಡರೆ ಬದ್ಧರಾಗಿಯೇ ಇರುವಿರಿ. ಇದೊಂದು ಕೆಚ್ಚೆದೆಯ ಮಾತು. ಈ ಉಪನ್ಯಾಸಮಾಲೆಯ ಮೊಟ್ಟಮೊದಲೇ ನಾನು ಹೇಳಿರುವಂತೆ ನಾನು ತುಂಬ ದಿಟ್ಟತನದಿಂದಲೇ ಮಾತನಾಡ ಬೇಕಾಗಿರುತ್ತದೆ. ಈಗ ನಿಮಗೆ ಇದನ್ನು ಕೇಳಿ ಅಂಜಿಕೆಯಾಗಬಹುದು. ಆದರೆ ಈ ವಿಷಯವನ್ನು ಕುರಿತು ಚೆನ್ನಾಗಿ ಆಲೋಚನೆ ಮಾಡಿ, ಅದನ್ನು ನಿಮ್ಮ ಜೀವನದಲ್ಲಿಯೇ ಸಾಕ್ಷಾತ್ಕರಿಸಿಕೊಂಡಮೇಲೆ ಈಗ ನಾನು ಹೇಳುತ್ತಿರುವದು ನಿಜವೇ ಎಂದು ನಿಮಗೆ ತಿಳಿಯುತ್ತದೆ. ಏಕೆಂದರೆ ನಿಜವಾಗಿಯೂ ಮುಕ್ತಿಯೆಂಬುದು ನಿಮ್ಮ ಸ್ವಭಾವವಲ್ಲವೆಂದು ಇಟ್ಟುಕೊಳ್ಳಿರಿ; ಆಗ ನೀವು ಯಾವ ಸಾಧನವನ್ನು ಕೈಕೊಂಡರೂ ಮುಕ್ತರಾಗಲಾರಿರಿ. ಹಿಂದೆ ನೀವು ಮುಕ್ತರಾಗಿದ್ದು ಯಾವದೋ ಕಾರಣದಿಂದ ಆ ಸ್ವಾತಂತ್ರ್ಯವನ್ನು ಕಳೆದುಕೊಂಡಿರೆಂದು ಇಟ್ಟುಕೊಳ್ಳಿರಿ; ಆಗ ನೀವು ಮೊದಲೇ ಮುಕ್ತರಾಗಿರಲಿಲ್ಲವೆಂದು ಹೇಳಿದಂತೆ ಆಗುತ್ತದೆ. ನಿಜವಾಗಿಯೂ ನೀವು ಮುಕ್ತರಾಗಿದ್ದಿದ್ದರೆ ಅದನ್ನು ನೀವು ಕಳೆದುಕೊಳ್ಳುವದಕ್ಕೆ ಕಾರಣವೇನು? ಯಾವದು ಸ್ವತಂತ್ರವಾಗಿರುವದೋ ಅದನ್ನು ಮತ್ತೊಂದಕ್ಕೆ ಅಧೀನವಾಗಿಸುವದಕ್ಕೆ ಆಗಲಾರದು; ಅದು ನಿಜವಾಗಿಯೂ ಅಧೀನವಾಗಿಯೇ ಇದ್ದಾಗ ಅದು ಸ್ವತಂತ್ರವಾಗಿತ್ತೆಂಬುದೆಲ್ಲ ಬರಿಯ ಭ್ರಾಂತಿಯೇ ಆಗಿರಬೇಕು.

ಹಾಗಾದರೆ ಈ ಎರಡು ಪಕ್ಷಗಳಲ್ಲಿ ನಿಮಗೆ ಯಾವದು ಬೇಕು? ಆತ್ಮವು ಸ್ವಭಾವದಿಂದಲೇ ಮುಕ್ತವಾಗಿತ್ತು ಎಂದು ಇಟ್ಟುಕೊಂಡರೆ, ಈ ಪ್ರಪಂಚದಲ್ಲಿ ಯಾವದೂ ಅದನ್ನು ಬದ್ಧವಾಗಿ ಮಾಡಿ ಪರಿಚ್ಛಿನ್ನವಾಗಿಸುವದಕ್ಕೆ ಶಕ್ತವಾಗುವಂತಿರಲಿಲ್ಲವೆಂದು ಸಹಜವಾಗಿಯೇ ಹೇಳಬೇಕಾಗುತ್ತದೆ; ಆದರೆ ಈ ಪ್ರಕೃತಿಯಲ್ಲಿ ಆತ್ಮವನ್ನು ಬಂಧಿಸತಕ್ಕದ್ದು ಯಾವದಾದರೊಂದು ಇದ್ದಿತೆಂದು ಇಟ್ಟುಕೊಂಡರೆ, ಅದು ಮುಕ್ತವಾಗಿರಲೇ ಇಲ್ಲವೆಂದೂ ಅದು ಮುಕ್ತವಾಗಿತ್ತೆಂದು

ಹೇಳಿದ್ದು ಭ್ರಾಂತಿಯೆಂದೂ ತಾನೇ ಏರ್ಪಡುತ್ತದೆ. ಆದ್ದರಿಂದ ನಮಗೆ ಮುಕ್ತಿಯು ದೊರೆಯುವದು ಸಾಧ್ಯವೆಂದಾದರೆ ಆತ್ಮವು ಸ್ವಭಾವದಿಂದಲೇ ಸ್ವತಂತ್ರವಾಗಿರುತ್ತದೆಯೆಂಬ ತೀರ್ಮಾನವು ಅನಿವಾರಣೀಯವಾಗುತ್ತದೆ. ಇದನ್ನು ಬಿಟ್ಟು ಬೇರೆ ಏನೂ ಆಗುವ ಹಾಗೆಯೇ ಇಲ್ಲ. ಮುಕ್ತಿಯೆಂದರೆ ಹೊರಗಿನ ಯಾವದಕ್ಕೂ ಒಳಗಾಗದೆ ಇರುವದು, ಹಾಗೆಂದರೆ ಹೊರಗಿನ ಯಾವದೊಂದೂ ಅದರ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡುವದಕ್ಕೆ ಶಕ್ತವಾದ ಕಾರಣವಲ್ಲವೆಂದರ್ಥ. ಆತ್ಮವು ಅನಾದಿಯಾಗಿರುತ್ತದೆ; ಇದರಿಂದಲೇ ಅದರ ವಿಷಯಕ್ಕೆ ಇರುವ ಉತ್ತಮ ಭಾವನೆಗಳೆಲ್ಲ ಹೊಂದುಗಡೆಯಾಗುತ್ತವೆ. ಆತ್ಮವು ಸ್ವಭಾವದಿಂದಲೇ ಮುಕ್ತವಾಗಿದೆ ಎಂದು ಇಟ್ಟುಕೊಂಡ ಹೊರತು, ಎಂದರೆ ಹೊರಗಿನ ಯಾವದೊಂದೂ ಅದರ ಮೇಲೆ ಪರಿಣಾಮವನ್ನುಂಟು ಮಾಡಲಾರದೆಂದು ಇಟ್ಟುಕೊಂಡ ಹೊರತು, ಆತ್ಮವು ಮರ್ತ್ಯವಲ್ಲವೆಂಬುದನ್ನು ತೋರಿಸಿಕೊಡುವದಕ್ಕೆ ಆಗುವದೇ ಇಲ್ಲ. ಏಕೆಂದರೆ ಮರಣವೆಂಬುದೇ ಹೊರಗಿನ ಯಾವದೋ ಒಂದು ಕಾರಣದಿಂದಾದ ಪರಿಣಾಮವಾಗಿರುತ್ತದೆ. ನಾನು ವಿಷವನ್ನು ಕುಡಿದು ಸಾಯುವದಾದರೆ, ನನ್ನ ಶರೀರದ ಮೇಲೆ ವಿಷವೆಂಬ ಹೊರಗಿನ ವಸ್ತುವಿನಿಂದ ಪರಿಣಾಮವಾಗಬಹುದೆಂಬುದನ್ನು ತೋರಿಸಿಕೊಟ್ಟಂತೆ ಆಯಿತು. ಆದರೆ ಆತ್ಮವು ಮುಕ್ತವಾಗಿಯೇ ಇದೆಯೆಂಬುದು ನಿಜವಾದರೆ, ಅದರ ಮೇಲೆ ಯಾವದೊಂದರ ಪರಿಣಾಮವೂ ಆಗಲಾರದೆಂಬದು ಅದು ಎಂದಿಗೂ ಸಾಯಲೇ ಆರದೆಂದೂ ತಾನೇ ಸಿದ್ಧವಾಗುತ್ತದೆ. ಮುಕ್ತಿ, ಅಮೃತತ್ವ, ಆನಂದ ಸ್ವರೂಪ- ಇವೆಲ್ಲಕ್ಕೂ ಆತ್ಮವು ಕಾರ್ಯಕಾರಣ ನಿಯಮಕ್ಕೆ ಅತೀತವಾಗಿರುವದೆಂಬ, ಈ ಮಾಯೆಯನ್ನು ಮೀರಿರುವದೆಂಬ, ಆಧಾರವು ಅವಶ್ಯವಾಗಿರುತ್ತದೆ. ಇವೆರಡರಲ್ಲಿ ನಿಮಗೆ ಯಾವದು ಬೇಕು? ಇಲ್ಲವೆ, ಮೊದಲನೆಯದು ಭ್ರಾಂತಿಯೆನ್ನಿರಿ, ಅಥವಾ ಎರಡನೆಯದನ್ನಾದರೂ ಭ್ರಾಂತಿಯೆನ್ನಿರಿ. ನನ್ನ ಅಭಿಪ್ರಾಯದಲ್ಲಿ ಎರಡನೆಯದು ಭ್ರಾಂತಿಯೆನ್ನುವದೇ ಯುಕ್ತವಾಗಿರುತ್ತದೆ. ನನ್ನ ಭಾವನೆಗಳಿಗೂ ಆಶೋತ್ತರಗಳಿಗೂ ಅದು ಹೆಚ್ಚು ಹೊಂದಿಕೆಯಾಗಿರುತ್ತದೆ. ನಾನು ಸ್ವಾಭಾವಿಕವಾಗಿಯೇ ಮುಕ್ತನಾಗಿರುತ್ತೇನೆಂಬುದು ನನಗೆ ಚೆನ್ನಾಗಿ ಗೊತ್ತಿರುತ್ತದೆ; ಆದ್ದರಿಂದ ಈ ಬಂಧವೇ ನಿಜವೆಂದೂ ಮುಕ್ತಿಯೇ ಭ್ರಾಂತಿಯೆಂದೂ ನಾನು ಎಂದಿಗೂ ಒಪ್ಪಲಾರೆ.

ಈ ವಿಚಾರವು ಪ್ರತಿಯೊಂದು ದರ್ಶನದಲ್ಲಿಯೂ ಒಂದಲ್ಲದಿದ್ದರೆ ಒಂದು ರೂಪದಲ್ಲಿ ನಡೆದೇ ಇರುತ್ತದೆ. ಅತ್ಯಂತ ಆಧುನಿಕ ಸಿದ್ಧಾಂತಗಳಲ್ಲಿಯೂ ಕೂಡ ಇದೇ ಚರ್ಚೆಯೇ ಬರುತ್ತಿರುವದು ಕಂಡುಬರುತ್ತದೆ. ವಾದಿಗಳು ಎರಡು ತಂಡದವರಾಗಿರುತ್ತಾರೆ. ಅವರಲ್ಲಿ ಒಂದು ತಂಡದವರು ಆತ್ಮವೆಂಬುದೇ ಇಲ್ಲ,

ಆತ್ಮನೆಂಬ ಭಾವನೆಯೇ ಭ್ರಾಂತಿಯು, ಈ ಭ್ರಾಂತಿಯು ಭೌತಿಕವಸ್ತುವಿನ ಅಣುಗಳು ಮತ್ತೆ ಮತ್ತೆ ಚಲಿಸುತ್ತಾ ಶರೀರವೆಂದೂ ಮೆದುಳೆಂದೂ ಕರೆಯುವ ಸಂಯುಕ್ತ ವಸ್ತುವಿಶೇಷವನ್ನುಂಟುಮಾಡುತ್ತಿರುವದರಿಂದ ಉಂಟಾಗಿರುತ್ತದೆಯೆಂದು ಹೇಳುತ್ತಾರೆ. ನಾವು ಮುಕ್ತರೆಂಬ ಭಾವನೆಯು ಈ ಅಣುಗಳ ಕಂಪನೆಗಳಿಂದಲೂ ಚಲನೆಗಳಿಂದ ಎಡೆಬಿಡದೆ ಅತ್ತಿತ್ತ ಓಡಾಡುವದರಿಂದಲೂ ಉಂಟಾಗಿರುತ್ತದೆ ಎಂದು ಅವರ ಅಭಿಪ್ರಾಯು. ಹಿಂದೆ ಭೌದ್ಧರಲ್ಲಿಯೂ ಇದೇ ಅಭಿಪ್ರಾಯುವನ್ನು ಇಟ್ಟುಕೊಂಡಿದ್ದ ವಾದಿಗಳು ಇದ್ದರು. ಅವರು ತಮ್ಮ ಅಭಿಪ್ರಾಯುಕ್ಕೆ ಈ ದೃಷ್ಟಾಂತವನ್ನು ಕೊಡುತ್ತಿದ್ದರು. ಒಂದು ಕೊಳ್ಳಿಯನ್ನು ತೆಗೆದುಕೊಂಡು ಗಿರ್ರನೆ ತಿರುಗಿಸಿದರೆ ಒಂದು ವೃತ್ತಾಕಾರವಾದ ಬೆಳಕು ಕಾಣಿಸುತ್ತದೆ. ಆ ವೃತ್ತವು ನಿಜವಾಗಿಯೇನೂ ಇರುವದಿಲ್ಲ, ಏಕೆಂದರೆ ಕೊಳ್ಳಿಯು ಒಂದೊಂದು ಕ್ಷಣಕ್ಕೂ ಸ್ಥಾನವನ್ನು ಬದಲಾಯಿಸುತ್ತಲೇ ಇರುತ್ತದೆ. ನಾವೆಲ್ಲರೂ ಚಿಕ್ಕಚಿಕ್ಕ ಅಣುಗಳ ಸಂಘಾತವಾಗಿರುತ್ತೇವೆ. ಇವು ಬಹು ಶೀಘ್ರವಾಗಿ ಸುತ್ತುತ್ತಿರುವದರಿಂದ ಈ ಒಂದಾನೊಂದು ಶಾಶ್ವತವಾದ ಆತ್ಮನು ಇದೆ ಎಂಬ ಭಾವನೆಯನ್ನುಂಟುಮಾಡುತ್ತಿರುತ್ತವೆ. ಇದು ಒಂದು ಪಂಗಡದವರ ಅಭಿಪ್ರಾಯ. ಮತ್ತೊಂದು ತಂಡದವರು ಹೇಳುವದೇನೆಂದರೆ ಭಾವನೆಯು ಶೀಘ್ರವಾಗಿ ನಡೆಯುತ್ತಿರುವದರಿಂದ ಭೌತಿಕ ವಸ್ತುವೆಂಬದೊಂದು ಭ್ರಾಂತಿಸಿದ್ಧವಾಗಿರುತ್ತದೆ, ಅದು ನಿಜವಾಗಿ ಇರುವದೇ ಇಲ್ಲ. ಒಂದು ಪಂಗಡದವರು ಚೈತನ್ಯವೇ* ಭ್ರಾಂತಿಯೆನ್ನುತ್ತಿರುತ್ತಾರೆ, ಮತ್ತೊಂದು ಪಂಗಡದವರು ಭೌತಿಕವಸ್ತುವೇ ಭ್ರಾಂತಿಯೆನ್ನುತ್ತಿದ್ದಾರೆ. ಇವುಗಳಲ್ಲಿ ಯಾವದನ್ನು ತೆಗೆದುಕೊಳ್ಳುತ್ತೀರಿ? ನಾವು ಚೈತನ್ಯವನ್ನೇ ಇಟ್ಟುಕೊಂಡು ಭೌತಿಕವಸ್ತುವನ್ನೇ ಇಲ್ಲವೆನ್ನಬೇಕು. ಒಂದೊಂದು ಪಕ್ಷದಲ್ಲಿ ಯುಕ್ತಿಯು ಒಂದೇ ಸಮನಾಗಿದೆ; ಆದರೆ ಚೈತನ್ಯದ ಕಡೆಯಲ್ಲಿ ಯುಕ್ತಿಯು ಸ್ವಲ್ಪ ಬಲವಾಗಿರುತ್ತದೆ. ಏಕೆಂದರೆ ಯಾರೊಬ್ಬರೂ ಭೌತಿಕ ವಸ್ತುವೆಂದರೇನೆಂಬುದನ್ನು ಕಂಡಿರುವದಿಲ್ಲ. ನಮಗೆ ನಮ್ಮ ಅರಿವು ಮಾತ್ರ ಆಗಬಹುದಾಗಿರುತ್ತದೆ. ತನ್ನ ಹೊರಗಿರುವ ಭೌತಿಕ ವಸ್ತುವಿನ ಅರಿವನ್ನು ಮಾಡಿಕೊಂಡಿರುವೆನೆಂಬ ಮಾನವನನ್ನೇ ನಾನು ಕಾಣೆನು. ತನ್ನನ್ನು ಬಿಟ್ಟು ಹೊರಕ್ಕೆ ಹಾರಬಲ್ಲವರು ಯಾರೊಬ್ಬರೂ ಇಲ್ಲ. ಆದ್ದರಿಂದ ಚೈತನ್ಯದ ಕಡೆಯಲ್ಲಿ ಯುಕ್ತಿಯು ಒಂದಿಷ್ಟು ಪ್ರಬಲವಾಗಿರುತ್ತದೆ. ಎರಡನೆಯದಾಗಿ ಚೈತನ್ಯವಾದದಿಂದ ಈ ವಿಶ್ವವನ್ನು ಬಿಡಿಸಿ ಹೇಳಬಹುದೇ ಹೊರತು ಭೌತಿಕವಾದದಿಂದ

* ಇಲ್ಲಿ Spirit ಎಂಬ ಮಾತನ್ನು ನಾವು ಚೈತನ್ಯವೆಂದು ಕನ್ನಡಿಸಿದ್ದರೂ ವಿಜ್ಞಾನವೆಂಬ ಮಾತೇ ಅದಕ್ಕೆ ಹೆಚ್ಚು ಒಪ್ಪುವಂತೆ ಕಾಣುತ್ತದೆ: ಏಕೆಂದರೆ ವಿಜ್ಞಾನದ ಚಲನೆಯಿಂದ ಭೌತಿಕವಸ್ತುವು ಕಾಣಿಸುವದೆಂದು ಹೇಳಬಹುದೇ ಹೊರತು ಚೈತನ್ಯದ ಚಲನೆಯಿಂದ ಕಾಣಿಸುವದೆಂದು ಹೇಳುವದಕ್ಕೆ ಆಗುವದಿಲ್ಲ.

ಹೇಳಲಾಗುವದಿಲ್ಲ. ಆದ್ದರಿಂದ ಭೌತಿಕವಾದವು ಅಯುಕ್ತವಾಗಿರುತ್ತದೆ. ಎಲ್ಲಾ ದರ್ಶನಗಳನ್ನೂ ಕಾಯಿಸಿ ಭಟ್ಟಿಯಿಳಿಸಿ ಬಿಡಿಸಿ ನೋಡಿದರೆ ಅವುಗಳೆಲ್ಲವೂ ಈ ಎರಡು ವಾದಗಳಲ್ಲಿ ಒಂದಾಗಿ ಪರಿಣಮಿಸುವವೆಂದು ಕಂಡು ಬರುತ್ತದೆ. ಅಂತು ಇಲ್ಲಿಯೂ ಸ್ವಾಭಾವಿಕ ಪರಿಶುದ್ಧತೆಯನ್ನೂ ಮುಕ್ತಿಯನ್ನೂ ಕುರಿತ ಪ್ರಶ್ನೆಯನ್ನೇ ಇನ್ನೂ ಸ್ವಲ್ಪ ಕಷ್ಟವಾದ ರೀತಿಯಲ್ಲಿ, ಇನ್ನೂ ಸ್ವಲ್ಪ ಶಾಸ್ತ್ರೀಯವಾದ ರೀತಿಯಲ್ಲಿ ಚರ್ಚಿಸಿರುತ್ತಾರೆ ಎಂದು ಕಂಡು ಬರುತ್ತದೆ.* ಒಂದು ಪಕ್ಷದವರು ಮೊದಲನೆಯದು ಭ್ರಾಂತಿಯನ್ನುತ್ತಾರೆ, ಮತ್ತೊಂದು ಪಕ್ಷದವರು ಎರಡನೆಯದು ಭ್ರಾಂತಿಯೆನ್ನುತ್ತಾರೆ. ನಾವಂತೂ ನಮ್ಮ ಬಂಧವು ಭ್ರಾಂತಿಯೇ ಎಂದು ನಂಬಿ ಎರಡನೆಯ ಪಕ್ಷದವರನ್ನೇ ಒಪ್ಪಬೇಕೆಂಬುದನ್ನು ಹೇಳಬೇಕಾದದ್ದೇ ಇಲ್ಲ.

ವೇದಾಂತದ ಸಿದ್ಧಾಂತವೇನೆಂದರೆ ನಾವು ಬದ್ಧರಾಗಿರುವದಿಲ್ಲ, ನಾವು ಈಗಲೇ ಮುಕ್ತರಾಗಿಯೇ ಇರುತ್ತೇವೆ. ಇಷ್ಟೇ ಅಲ್ಲ, ನಾವು ಬದ್ಧರಾಗಿದೇವೆಂದು ಹೇಳುವದು ಅಥವಾ ಭಾವಿಸಿಕೊಳ್ಳುವದು ಅಪಾಯಕರವೂ ಆಗಿರುತ್ತದೆ. ಅದೊಂದು ತಪ್ಪುತಿಳಿವಳಿಕೆ, ಅದೊಂದು ಆತ್ಮಮೋಹನವು. 'ನಾನು ಬದ್ಧನಾಗಿರುವೆನು', 'ನಾನು ದುರ್ಬಲನಾಗಿರುವೆನು', 'ನಾನು ನಿರ್ಗತಿಕನಾಗಿರುವೆನು' ಎಂದಿರೋ ಇಲ್ಲವೊ, ನಿಮ್ಮ ಪಾಡನ್ನು ಹೇಳಲಳವಲ್ಲ. ನಿಮಗೆ ನೀವೇ ಮತ್ತೊಂದು ಬೇಡಿಯನ್ನು ಹಾಕಿಕೊಂಡಂತೆ ಆಯಿತು. ಆ ಮಾತನ್ನಾಡಬೇಡಿ. ಆ ಯೋಚನೆಯನ್ನು ಮಾಡಬೇಡಿ. ಒಬ್ಬಾನೊಬ್ಬ ಪುರುಷನು ಒಂದು ಕಾಡಿನಲ್ಲಿ ವಾಸವಾಗಿರುತ್ತಿದ್ದನು; ಅವನು ಹಗಲೂ ಇರುಳೂ 'ಶಿವೋऽಹಮ್'! (ನಾನು ಶಿವನು) ಎನ್ನುತ್ತಿದ್ದನು ಒಂದು ದಿನ ಒಂದು ಹುಲಿಯು ಆತನ ಮೇಲೆ ಬಿದ್ದು ಅವನನ್ನು ಕೊಲ್ಲುವದಕ್ಕೆ ಎಳೆದುಕೊಂಡು ಹೋಯಿತು; ನದಿಯ ಆಚೆಯ ದಡದಲ್ಲಿದ್ದ ಜನರು ಇದನ್ನು ಕಂಡರು. ತನ್ನಲ್ಲಿ ಮಾತನಾಡುವ ಶಕ್ತಿಯಿರುವವರೆಗೂ, ಹುಲಿಯ ದವಡೆಯಲ್ಲಿರುವಾಗಲೂ ಆತನು 'ಶಿವೋऽಹಮ್!, ಶಿವೋऽಹಮ್!– ಎನ್ನುತ್ತಲೇ ಇದ್ದದ್ದು ಕೇಳಿಬರುತ್ತಿತ್ತು. ಇಂಥ ಜನರು ಬೇಕಾದಷ್ಟು ಮಂದಿ ಆಗಿಹೋಗಿರುತ್ತಾರೆ. ಕೆಲವರನ್ನು ಕಡಿದು ತುಂಡುತುಂಡುಮಾಡುತ್ತಿದ್ದರೂ ತಮ್ಮ ಶತ್ರುಗಳನ್ನು ಕೂಡ ಆಶೀರ್ವದಿಸುತ್ತಾ "ನಾನು ಆತನೇ, ನಾನು ಆತನೇ; ನೀನೂ ಆತನೇ, ನಾನು ಪರಿಶುದ್ಧನು, ಪರಿಪೂರ್ಣನು, ನನ್ನ ಶತ್ರುಗಳೂ

* ನಿಜವಾಗಿ ನೋಡಿದರೆ ಈ ಎರಡೂ ಒಂದೇ ವಾದವಲ್ಲವೆಂದು ತೋರುತ್ತದೆ. ಏಕೆಂದರೆ ವಿಜ್ಞಾನವೇ ವಿಷಯದ ಆಕಾರವಾಗಿರುವದೆಂಬುದು ವಿಜ್ಞಾನವಾದವು; ಕೂಟಸ್ಥ ಚೈತನ್ಯದಲ್ಲಿ ವಿಜ್ಞಾನ ವಿಷಯಗಳು ಕಲ್ಪಿತವಾಗಿರುವದರಿಂದ ಆ ಆತ್ಮಸ್ವರೂಪವು ನಿತ್ಯಮುಕ್ತವಾಗಿರುವದೆಂಬುದು ಆತ್ಮವಾದವು.

ಪರಿಶುದ್ಧರೇ ಪರಿಪೂರ್ಣರೇ, ನೀನೂ ಆತನೇ, ನಾನೂ ಆತನೇ" ಎನ್ನುತ್ತಿದ್ದದ್ದೂ ಉಂಟು. ಇದೇ ಬಲಪ್ರದವಾದ ದೃಷ್ಟಿಯು. ದ್ವೈತಿಗಳ ಮತಗಳಲ್ಲಿ ಮಹಾಮಹಾದ್ಭುತವಾದ ವಿಷಯಗಳುಂಟು. ಪ್ರಕೃತಿಗಿಂತಲೂ ಭಿನ್ನವಾಗಿ ನಮ್ಮ ಆರಾಧನೆಗೂ ಪ್ರೇಮಕ್ಕೂ ಪಾತ್ರನಾಗಿರುವ ಸಗುಣೇಶ್ವರನ ಭಾವನೆಯು ಅದ್ಭುತವಾದದ್ದು. ಕೆಲವು ವೇಳೆಗಳಲ್ಲಿ ಈ ಭಾವನೆಯು ಬಹಳ ಚಿತ್ತ ಸಮಾಧಾನವನ್ನುಂಟುಮಾಡುತ್ತದೆ. ಆದರೆ ಆ ಸಮಾಧಾನವು ಅಫೀಮಿನ ಮದ್ದಿನಿಂದ ಬರುವಂಥ ಸಮಾಧಾನವೇ ಹೊರತು ಸ್ವಾಭಾವಿಕವಾದದ್ದಲ್ಲ- ಎಂದು ವೇದಾಂತವು ಹೇಳುತ್ತದೆ. ಕೊನೆಗೆ ಅದರಿಂದ ದೌರ್ಬಲ್ಯವೇ ಉಂಟಾಗುತ್ತದೆ. ಸದ್ಯಕ್ಕೆ ಎಂದಿಗಿಂತಲೂ ಹೆಚ್ಚಾಗಿಯೇ ಜನರಿಗೆ ಬೇಕಾಗಿರುವದೆಂದರೆ ಬಲವು. ಈ ಲೋಕದಲ್ಲಿರುವ ಸಂಕಟಕ್ಕೆಲ್ಲ ದೌರ್ಬಲ್ಯವೇ ಕಾರಣವು ಎಂಬುದು ವೇದಾಂತದ ಅಭಿಪ್ರಾಯವು. ದೌರ್ಬಲ್ಯವೇ ನಮ್ಮ ದುಃಖಕ್ಕೆಲ್ಲ ಕಾರಣವು. ನಾವು ದುರ್ಬಲರಾಗಿರುವದರಿಂದಲೇ ಸಂಕಟಪಡುತ್ತೇವೆ. ನಾವು ನಿರ್ಬಲರಾಗಿರುವದರಿಂದಲೇ ಸುಳ್ಳು ಹೇಳುತ್ತೇವೆ, ಕಳವು ಮಾಡುತ್ತೇವೆ, ಕೊಲ್ಲುತ್ತೇವೆ, ಇನ್ನೂ ಬೇರೆ ಅಪರಾಧಗಳನ್ನೂ ಮಾಡುತ್ತಿರುತ್ತೇವೆ. ನಾವು ನಿರ್ಬಲರಾಗಿರುವದರಿಂದಲೇ ನಮಗೆ ದುಃಖವುಂಟಾಗುತ್ತದೆ. ನಮ್ಮನ್ನು ನಿರ್ಬಲರನ್ನಾಗಿ ಮಾಡುವದು ಯಾವದೂ ಇಲ್ಲದಿದ್ದರೆ ಮರಣವೂ ಇಲ್ಲ, ದುಃಖವೂ ಇಲ್ಲ. ಭ್ರಾಂತಿಯಿಂದಲೇ ನಾವು ಸಂಕಟಪಡುತ್ತಿದ್ದೇವೆ. ಈ ಭ್ರಾಂತಿಯನ್ನು ಬಿಟ್ಟುಬಿಟ್ಟರೆ, ಎಲ್ಲವೂ ಮಾಯವಾಗುವದು. ಇದು ಎಷ್ಟು ಸ್ಪಷ್ಟವಾಗಿ ಸುಲಭವಾಗಿ ತಿಳಿಯುವಂತಿದೆ! ಇಷ್ಟೆಲ್ಲಾ ತತ್ತ್ವವಿಚಾರಮಾಡಿ ಅದ್ಭುತವಾದ ಮಾನಸಿಕ ವ್ಯಾಯಾಮವನ್ನು ಮಾಡಿದ ಬಳಿಕ ನಾವು ಈ ಒಂದು ಧಾರ್ಮಿಕ ಭಾವನೆಯ ಬಳಿಗೆ, ಇಡಿಯ ಪ್ರಪಂಚದಲ್ಲಿಯೇ ಅತ್ಯಂತ ಸುಲಭವಾದ ಈ ಭಾವನೆಯ ಬಳಿಗೆ, ಬಂದು ಮುಟ್ಟುತ್ತೇವೆ.

ಪರಮಾರ್ಥವನ್ನು ಅತ್ಯಂತ ಸುಲಭವಾದ ರೂಪದಲ್ಲಿಟ್ಟು ತಿಳಿಸುವದಕ್ಕೆ ಅದ್ವೈತವೇದಾಂತವೇ ಆಗಬೇಕು. ಇಂಡಿಯಾದಲ್ಲಾಗಲಿ ಮತ್ತುಳಿದ ದೇಶಗಳಲ್ಲಾಗಲಿ ದ್ವೈತವನ್ನು ಹೇಳಿದ್ದೇ ಒಂದು ದೊಡ್ಡ ತಪ್ಪಾಯಿತು; ಏಕೆಂದರೆ ಜನರು ಕಟ್ಟಕಡೆಯಲ್ಲಿ ನಿಲ್ಲುವ ತತ್ತ್ವಗಳನ್ನು ಲಕ್ಷ್ಯದಲ್ಲಿಡುವದನ್ನು ಬಿಟ್ಟು ಪ್ರಕ್ರಿಯೆಯನ್ನೇ ಲೆಕ್ಕಕ್ಕೆ ತೆಗೆದುಕೊಂಡುಬಿಟ್ಟರು, ಈ ಪ್ರಕ್ರಿಯೆ ಎಂಬುದು ಬಹು ಬಹು ಸೂಕ್ಷ್ಮವಾಗಿರುತ್ತದೆ. ಅನೇಕರಿಗೆ ಈ ಅದ್ಭುತವಾದ ತತ್ತ್ವಶಾಸ್ತ್ರದ ತರ್ಕವಿತರ್ಕಗಳನ್ನು ಕೇಳಿ ಅಂಜಿಕೆಯಾಯಿತು. ಇವನ್ನು ಎಲ್ಲರಿಗೂ ಅನ್ವಯಿಸುವದು ಸಾಧ್ಯವಿಲ್ಲವೆಂದು ಅವರಿಗೆ ತೋರಿತು, ದಿನದಿನದ ಜೀವನದ

ವ್ಯವಹಾರದಲ್ಲಿ ಇವನ್ನು ಅನುಸರಿಸುವದು ಸಾಧ್ಯವಲ್ಲವೆಂದು ತೋರಿತು; ಇಂಥ ದರ್ಶನದ ನೆಪದಲ್ಲಿ ಜನರು ಕಟ್ಟಿಲ್ಲದೆ ನಡೆಯುವರೆಂದೇ ಭಾವನೆಯಾಗಿಬಿಟ್ಟಿತು. ಆದರೆ ನನ್ನ ಅಭಿಪ್ರಾಯದಲ್ಲಿ ಅದ್ವೈತ ವಿಚಾರಗಳನ್ನು ಜನರಿಗೆ ಬೋಧಿಸಿದರೆ ಅನೀತಿಯೂ ದೌರ್ಬಲ್ಯವೂ ಉಂಟಾಗವದೆಂದು ತೋರುವದೇ ಇಲ್ಲ. ಇದಕ್ಕೆ ಬದಲು ನಿಜವಾಗಿ ಇದೊಂದೇ ನಮಗೆ ಉಳಿದಿರುವ ಉಪಾಯವೆಂದು ನಂಬುವದಕ್ಕೆ ನಿಜ ಸಾಕಾದಷ್ಟು ಕಾರಣವಿದೆ. ಇದೇ ತತ್ತ್ವವಾಗಿದ್ದರೆ, ಜೀವನದ ನದಿಯು ಹತ್ತಿರವೇ ಹರಿಯುತ್ತಿರುವಾಗ ಜನರು ಚರಂಡಿಯ ನೀರನ್ನು ಕುಡಿಯುವದಕ್ಕೇಕೆ ಅವಕಾಶವನ್ನು ಕೊಡಬೇಕು? ಇದೇ ನಿಜವಾಗಿದ್ದರೆ, ಅವರೆಲ್ಲರೂ ಪರಿಶುದ್ಧರಾಗಿರುವರೆಂಬುದೇ ನಿಜವಾಗಿದ್ದರೆ, ಈ ಕ್ಷಣವೇ ಅದನ್ನು ಇಡಿಯ ಪ್ರಪಂಚಕ್ಕೇ ಏತಕ್ಕೆ ಹೇಳಿಬಿಡಬಾರದು? ಹುಟ್ಟಿದ ಪ್ರತಿಯೊಬ್ಬ ಮಾನವನಿಗೂ, ಮಹಾತ್ಮರಿಗೂ ಪಾಪಿಗಳಿಗೂ, ಗಂಡಸರಿಗೂ ಹೆಂಗಸರಿಗೂ ಮಕ್ಕಳಿಗೂ ಸಿಂಹಾಸನದ ಮೇಲೆ ಕುಳಿತಿರುವವನಿಗೂ ಬೀದಿಯನ್ನು ಗುಡಿಸುತ್ತಿರುವವನಿಗೂ, ಅದನ್ನೇ ಘನ ಗಂಭೀರ ಧ್ವನಿಯಿಂದ ಉಪದೇಶಿಸಿ ಬಿಡಬಾರದೇಕೆ?

ಈಗ ನೋಡಿದರೆ ಅದೊಂದು ಮಹಾಮಹಾಪ್ರಯತ್ನವಾಗಿ ಕಾಣತ್ತದೆ. ಎಷ್ಟೋ ಜನರು ಅದನ್ನು ಕೇಳಿದರೆ ಬೆಚ್ಚಿಬೀಳುತ್ತಾರೆ; ಆದರೆ ಇದಕ್ಕೆಲ್ಲ ಮೂಢ ವಿಶ್ವಾಸವೇ ಕಾರಣವೇ ಹೊರತು ಮತ್ತೇನೂ ಇಲ್ಲ. ಎಲ್ಲಾ ಬಗೆಯ ಜೀರ್ಣವಾಗದ ಆಹಾರವನ್ನು ತಿಂದು ತಿಂದು, ಅಥವಾ ಏನೊಂದು ಆಹಾರವನ್ನೂ ತಿನ್ನದೆ ನರಳುತ್ತಾ ಇರುವದರಿಂದ, ನಮಗೆ ಸರಿಯಾದ ಆಹಾರವನ್ನು ತಿನ್ನಲು ಶಕ್ತಿಯು ಸಾಲದೆ ಇರುತ್ತದೆ. ನಾವು ಚಿಕ್ಕಂದಿನಿಂದಲೂ ದೌರ್ಬಲ್ಯದ ಮಾತುಗಳನ್ನೇ ಕೇಳುತ್ತಾ ಬಂದಿರುತ್ತೇವೆ. ಕೆಲವು ಜನರು ತಮಗೆ ದೆವ್ವಗಳಿರುವದೆಂಬ ನಂಬಿಕೆಯಿಲ್ಲವೆಂದು ಹೇಳುವದನ್ನು ನೀವು ಕೇಳಿರಬಹುದು; ಆದರೂ ರಾತ್ರಿಯ ಹೊತ್ತಿನಲ್ಲಿ ಒಂದಿಷ್ಟೂ ಮೈಜುಮ್ಮೆನ್ನಿಸದ ಜನರೇ ತೀರ ಕಡಿಮೆ. ಇದು ಬರಿಯ ಮೂಢನಂಬಿಕೆ. ಮತಗಳ ಮೂಢವಿಶ್ವಾಸಗಳೂ ಹಾಗೆಯೇ. ಈ ದೇಶದಲ್ಲಿ ಕೆಲವು ಜನರಿದ್ದಾರೆ, ಅವರಿಗೆ ಸೈತಾನನೆಂಬುದು ಇಲ್ಲವೇ ಇಲ್ಲವೆಂದು ಹೇಳಿದರೆ ಧರ್ಮವೇ ಮುಳುಗಿಹೋಯಿತೆಂದು ಅವರು ಭಾವಿಸುತ್ತಾರೆ. ಸೈತಾನನಿಲ್ಲದಿದ್ದರೆ ಧರ್ಮವೆಂಬುದೆಲ್ಲಿ ಉಳಿಯುತ್ತದೆ?- ಎಂದು ಎಷ್ಟೋ ಜನರು ನನ್ನನ್ನು ಕೇಳುತ್ತಾರೆ. ನಮ್ಮನ್ನು ಹೀಗೆ ನಡೆಯಬೇಕೆಂದು ಹೇಳುವನೊಬ್ಬನು ಇಲ್ಲದೆ ಇದ್ದರೆ ಮತವೆಂಬುದೆಲ್ಲಿದ್ದೀತು? ಯಾರಾದರೊಬ್ಬರು ನಮ್ಮನ್ನು ಆಳದಿದ್ದರೆ ನಾವು ಹೇಗೆ ಇದ್ದೇವು? ನಮಗೆ ಅದೇ ಅಭ್ಯಾಸವಾಗಿಬಿಟ್ಟಿರುತ್ತದೆ; ಆದ್ದರಿಂದ ನಮಗೆ ನಮ್ಮ ಮೇಲಿರುವವನೊಬ್ಬನು ಬೇಕೇಬೇಕು. ಪ್ರತಿದಿನವೂ ಯಾರಾದರೊಬ್ಬರು

ನಮ್ಮನ್ನು ಹೀಗೆ ಮಾಡಬಾರದು ಎಂದು ಗದರಿಸಿಕೊಳ್ಳುವವನಿದಾನೆಂಬ ಭಾವನೆಯು ಬರುವವರೆಗೂ ನಮಗೆ ಸುಖವಿರುವದಿಲ್ಲ. ಅದೇ ಅಂಧಶ್ರದ್ಧೆ!

ಆದರೆ ಈಗ ನಮಗೆ ಅದು ಎಷ್ಟು ಭಯಂಕರವಾಗಿಯೇ ಕಾಣಲಿ, ಪರಿಶುದ್ಧವೂ ನಿತ್ಯವೂ ಆದ ಆತ್ಮಕ್ಕೆ ಮುಸುಕಿಕೊಂಡಿದ್ದ ಒಂದೊಂದು ಮೂಢಶ್ರದ್ಧೆಯನ್ನೂ ನೆನಸಿಕೊಂಡು ನಗುವ ಕಾಲವೊಂದು ಬಂದೇ ಬರುತ್ತದೆ: ಆಗ ನಾವು ಸಂತೋಷದಿಂದ ತತ್ತ್ವಾಭಿಮಾನದ ಜೋರಿನಿಂದ "ನಾನು ಮುಕ್ತನು, ನಾನು ಮುಕ್ತನಾಗಿಯೇ ಇದ್ದೆನು, ಯಾವಾಲೂ ಮುಕ್ತನಾಗಿಯೇ ಇರುವೆನು!" ಎಂದು ಮತ್ತೆ ಮತ್ತೆ ನುಡಿಯುವೆವು. ಈ ಅದ್ವೈತಭಾವನೆಯು ವೇದಾಂತದಿಂದ ಬಂದಿರುತ್ತದೆ, ಎಂದೆಂದಿಗೂ ಬಾಳುವದಕ್ಕೆ ಅರ್ಹವಾದ ಭಾವನೆಯೆಂದರೆ ಇದು ಒಂದೇ. ಶಾಸ್ತ್ರಗಳೆಲ್ಲವೂ ನಾಳೆ ನಾಶವಾಗಿಬಿಡಬಹುದು. ಈ ಭಾವನೆಯು ಹೀಬ್ರೂಜನರ ಮೆದುಳಿನಲ್ಲಿ ಮೊದಲು ಹೊಳೆಯಿತೋ ಅಥವಾ ಉತ್ತರಧ್ರುವ ಪ್ರದೇಶಗಳಲ್ಲಿದ್ದ ಜನರತಲೆಯಲ್ಲಿ ಮಿಂಚಿತೋ ಅದು ಯಾರಿಗೆ ಬೇಕು? ಇದೇ ತತ್ತ್ವವು, ತತ್ತ್ವವು ನಿತ್ಯವಾದದ್ದು. ತತ್ತ್ವವೇ ತಾನು ಯಾವನಾದರೊಬ್ಬ ವ್ಯಕ್ತಿಯು ಅಥವಾ ಜನಾಂಗದ ಸ್ವತ್ತಲ್ಲವೆಂಬುದನ್ನು ಹೇಳಿಕೊಡುತ್ತದೆ. ಈ ಒಂದು ತತ್ತ್ವಕ್ಕೆ ಮನುಷ್ಯರು, ಪ್ರಾಣಿಗಳು, ದೇವತೆಗಳು- ಎಲ್ಲರೂ ಅಧಿಕಾರಿಗಳು. ಎಲ್ಲರಿಗೂ ಅದು ದೊರೆಯಲಿ. ಈ ಜೀವನವನ್ನು ಏತಕ್ಕೆ ಸಂಕಟಮಯವಾಗಿ ಮಾಡಿಕೊಳ್ಳಬೇಕು? ಜನರನ್ನು ಈ ನಾನಾವಿಧವಾದ ಮೂಢಶ್ರದ್ಧೆಗಳಿಗೆ ತುತ್ತಾಗುವಂತೆ ಏತಕ್ಕೆ ಮಾಡಬೇಕು? ಇವರಲ್ಲಿ ಇಪ್ಪತ್ತು ಜನರು ತಮ್ಮ ಅಂಧಶ್ರದ್ಧೆಯನ್ನು ಬಿಡುವದಾದರೆ ಅದಕ್ಕಾಗಿ ಹತ್ತುಸಾವಿರ ಜನ್ಮಗಳನ್ನಾದರೂ ನಾನು ಕೊಡುವದಕ್ಕೆ ಸಿದ್ಧನಾಗಿರುತ್ತೇನೆ. ಈ ದೇಶದಲ್ಲಿ ಮಾತ್ರವೇ ಅಲ್ಲ, ಈ ತತ್ತ್ವವು ಹುಟ್ಟಿದ ದೇಶದಲ್ಲಿ ಕೂಡ, ಜನರಿಗೆ ಇದನ್ನು ಉಪದೇಶಿಸಿದರೆ ಸಾಕು, ಜನರಿಗೆ ಅಂಜಿಕೆಯಾಗುತ್ತದೆ. "ಈ ಭಾವವು ಸಂನ್ಯಾಸಿಗಳಿಗೆ ತಕ್ಕದ್ದು; ಅವರು ಪ್ರಪಂಚವನ್ನು ಬಿಟ್ಟು ಕಾಡುಗಳಲ್ಲಿ ವಾಸಮಾಡುತ್ತಾರೆ, ಅವರಿಗೇನೋ ಇದು ಹೊಂದುಗಡೆಯಾಗುತ್ತದೆ. ನಮ್ಮಂಥ ಬಡಗೃಹಸ್ಥರಿಗೆ ಯಾವದಾರೊಂದು ಬಗೆಯ ಅಂಜಿಕೆಯಿರಬೇಕು, ನಮಗೆ ಕರ್ಮಗಳಿರಬೇಕು" ಎಂದು ಮುಂತಾಗಿ ಹೇಳುತ್ತಾರೆ.

ದ್ವೈತಭಾವನೆಗಳು ಬಹುಕಾಲ ಲೋಕವನ್ನು ಆಳಿದ್ದಾಯಿತು, ಇದೇ ಅದರ ಫಲವು. ಇನ್ನು ಬೇರೊಂದು ಪ್ರಯೋಗವನ್ನೇಕೆ ಮಾಡಿ ನೋಡಬಾರದು? ಎಲ್ಲಾ ಚಿತ್ತಗಳಿಗೂ ಅದ್ವೈತವು ಒಗ್ಗುವದಕ್ಕೆ ಎಷ್ಟೋ ಯುಗಗಳು ಬೇಕಾಗಬಹುದು! ಆದರೆ ಅದನ್ನು ಈ ಏತಕ್ಕೆ ಮೊದಲು ಮಾಡಿಬಿಡಬಾರದು? ನಮ್ಮ ಜೀವಮಾನದಲ್ಲಿ

ಅದನ್ನೇ ಇಪ್ಪತ್ತು ಜನರಿಗೆ ಹೇಳಿದರೂ ನಾವು ಒಂದು ಮಹಾಕಾರ್ಯವನ್ನು ಮಾಡಿದಂತೆ ಆಗುತ್ತದೆ. ಇದಕ್ಕೆ ವಿರೋಧವಾಗಿರುವದೆಂದರೆ ಒಂದೇ ಒಂದು ಭಾವನೆ. ಅದೇನೆಂದರೆ "ನಾನೇ ಪರಿಶುದ್ಧನಾದ ಶಿವನು" ಎಂದು ಹೇಳಿಕೊಳ್ಳುವದೇನೋ ಸರಿಯಾಯಿತು. ಆದರೆ ಅದನ್ನು ಜೀವಮಾನದಲ್ಲಿ ಆಚರಣೆಗೆ ತಂದು ತೋರಿಸುವದಕ್ಕೆ ಆಗುವದಿಲ್ಲವಲ್ಲ! ಇದು ನಿಜ. ಧ್ಯೇಯವು ಯಾವಾಗಲೂ ಬಹು ಕಷ್ಟವಾಗಿರುತ್ತದೆ. ಹುಟ್ಟಿದ ಪ್ರತಿಯೊಂದು ಮಗುವೂ ತಲೆಯ ಮೇಲಕ್ಕೆ ನೋಡಿದರೆ ಆಕಾಶವು ಎಷ್ಟೋ ದೂರದಲ್ಲಿರುತ್ತದೆ. ಆದರೆ ನಾವು ಆಕಾಶವನ್ನು ನೋಡಬಾರದೆಂಬುದಕ್ಕೆ ಅದೇನಾದರೂ ಕಾರಣವಾದೀತೇನು? ಮೂಢವಿಶ್ವಾಸವನ್ನವಲಂಬಿಸಿದರೆ ಇದೆಲ್ಲ ಸರಿಹೋದೀತೇನು? ನಮಗೆ ಅಮೃತವು ಸಿಕ್ಕದೆ ಇದ್ದರೆ ವಿಷವನ್ನು ಕುಡಿದರೆ ಸರಿಯಾದೀತೇನು? ನಮಗೆ ಈಗಲೇ ತತ್ತ್ವ ಸಾಕ್ಷಾತ್ಕಾರವಾಗಲಾದ್ದರಿಂದ ಕತ್ತಲೆಯೊಳಕ್ಕೆ ನುಗ್ಗಿ ದೌರ್ಬಲ್ಯಕ್ಕೂ ಮೂಢಶ್ರದ್ಧೆಗೂ ತುತ್ತಾದರೆ ನಮಗೇನಾದರೂ ಅನುಕೂಲವಾದೀತೇನು?

ಅನೇಕ ಬಗೆಯ ದ್ವೈತಕ್ಕೆ ನನ್ನ ಆಕ್ಷೇಪಣೆಯಾವದೂ ಇರುವದಿಲ್ಲ. ಅಂಥ ಅನೇಕ ರೂಪಗಳಲ್ಲಿ ನನಗೆ ಪ್ರೀತಿಯಿರುತ್ತದೆ. ಆದರೆ ಯಾವ ಪುರುಷನಾಗಲಿ ಸ್ತ್ರೀಯಾಗಲಿ ಹುಡುಗನಾಗಲಿ ಶಾರೀರಕ, ಮಾನಸಿಕ ಅಥವಾ ಅಧ್ಯಾತ್ಮಿಕ ಸಾಧನವನ್ನು ಮಾಡುತ್ತಿದ್ದರೆ ನಾನು ಕೇಳುವದು ಇದೊಂದೇ ಪ್ರಶ್ನೆ: ನೀವು ಸಬಲರಾಗಿರುವಿರೊ? ನಿಮಗೆ ಇದರಲ್ಲಿ ಬಲವು ಕಾಣಿಸುವದೊ? ತತ್ತ್ವವೊಂದರಲ್ಲಿಯೇ ಬಲವು ಬರುವದೆಂದು ನಮಗೆ ಗೊತ್ತು. ತತ್ತ್ವವೊಂದೇ ನನಗೆ ಜೀವದಾಯಕವೆಂದೂ ಸತ್ಯದ ಕಡೆಗೆ ಹೋದ ಹೊರತು ನಮ್ಮನ್ನು ಸಬಲರನ್ನಾಗಿ ಮಾಡುವದಕ್ಕೆ ಮತ್ತೆ ಯಾವದೂ ದೊರಕಲಾರದೆಂದೂ ಸಬಲನಾದ ಹೊರತು ಯಾವನೊಬ್ಬನಿಗೂ ಪರಮಾರ್ಥವು ದೊರೆಯಲಾರದೆಂದೂ ನನಗೆ ಗೊತ್ತಾಗಿರುತ್ತದೆ. ಆದ್ದರಿಂದ ಯಾವ ಸಿದ್ಧಾಂತವೇ ಆಗಲಿ ಮನಸ್ಸನ್ನು ದುರ್ಬಲವಾಗಿ ಮಾಡಿ, ಮೂಢಶ್ರದ್ಧೆಯನ್ನು ತುಂಬಿ, ಮಂಕುಬೂದಿತಳಿದು, ಅತ್ಯಂತ ಅವಿವೇಕದ ಅಸಾಧ್ಯವಾದ ಫಲಗಳನ್ನೂ ರಹಸ್ಯಗಳನ್ನೂ ಮೂಢಶ್ರದ್ಧೆಗಳನ್ನೂ ಬಯಸುವಂತೆ ಮಾಡುತ್ತಿದ್ದರೆ ನನಗೆ ಅದನ್ನು ಕಂಡರೆ ಆಗುವದಿಲ್ಲ, ಏಕೆಂದರೆ ಅದರಿಂದ ಅಪಾಯಕರವಾದ ಪರಿಣಾಮವಾಗುತ್ತದೆ. ಇಂಥ ಸಿದ್ಧಾಂತಗಳಿಂದ ಎಂದಿಗೂ ಯಾವ ಪ್ರಯೋಜನವೂ ಆಗುವಂತೆಯೇ ಇರುವದಿಲ್ಲ. ಇಂಥ ವಿಷಯಗಳಿಂದ ಚಿತ್ತಸ್ವಾಸ್ಥ್ಯವು ಕೆಡುತ್ತದೆ. ಅವುಗಳಿಂದ ಮನಸ್ಸು ದುರ್ಬಲವಾಗುತ್ತದೆ, ಬರುಬರುತ್ತಾ ತತ್ತ್ವವನ್ನು ಗ್ರಹಿಸುವದಕ್ಕಾಗಲಿ ತತ್ತ್ವವನ್ನವಲಂಬಿಸಿ

ವ್ಯವಹರಿಸುವದಕ್ಕಾಗಲಿ ಆಗಲಾರದಷ್ಟು ದುರ್ಬಲವಾಗಿಬಿಡುತ್ತದೆ. ಆದ್ದರಿಂದ ಬಲವೊಂದೇ ಮೊದಲು ಬೇಕಾದದ್ದು. ಈ ಲೋಕದ ರೋಗಕ್ಕೆ ಬಲವೆಂಬುದೊಂದೇ ಔಷಧವು. ಹಣವಂತರು ಬಡವರನ್ನು ಗೋಳುಗುಟ್ಟಿಸುತ್ತಿರುವಾಗ ಅವರಿಗೆ ಬೇಕಾದದ್ದು ಬಲವೆಂಬ ಔಷಧಿಯೇ; ಪಂಡಿತರಾದವರು ಮೂಢರನ್ನು ವ್ಯಥೆಪಡಿಸುತ್ತಿರುವಾಗ ಅವರಿಗೆ ಬೇಕಾದದ್ದು ಬಲವೆಂಬ ಔಷಧಿಯೇ; ಪಾಪಿಗಳನ್ನು ಬೇರೆ ಪಾಪಿಗಳು ಗೋಳು ಗುಟ್ಟಿಸುತ್ತಿರುವಾಗ ಅವರಿಗೆ ಬೇಕಾದದ್ದು ಅದೇ ಔಷಧವು. ಇಂಥ ಬಲವನ್ನು ಅದ್ವೈತಭಾವನೆಯು ಕೊಟ್ಟಂತೆ ಮತ್ತೆ ಯಾವದೂ ಕೊಡಲಾರದು.

ಈ ಅದ್ವೈತಭಾವನೆಯಂತೆ ನಮ್ಮನ್ನು ನೀತಿವಂತರನ್ನಾಗಿ ಮಾಡುವದು ಮತ್ತೆ ಯಾವುದೊಂದು ಇರುವದಿಲ್ಲ. ನಮ್ಮ ಮೇಲೆಯೇ ಎಲ್ಲಾ ಹೊಣೆಗಾರಿಕೆಯನ್ನೂ ಹಾಕಿದಾಗ ನಾವು ಎಷ್ಟು ಉತ್ತಮವಾಗಿ ಉತ್ಕೃಷ್ಟ ರೀತಿಯಿಂದ ಕೆಲಸಮಾಡುವೆವೋ ಅಷ್ಟು ಉತ್ತಮವಾಗಿ ಅಷ್ಟು ಉತ್ಕೃಷ್ಟ ರೀತಿಯಿಂದ ಕೆಲಸ ಮಾಡುವದಕ್ಕೆ ಅನುಕೂಲವಾಗಿರುವದು ಮತ್ತೆ ಯಾವದೊಂದು ಇರುವದಿಲ್ಲ. ನಿಮ್ಮಲ್ಲಿ ಯಾರು ಬೇಕಾದರೂ ಹೇಳಿರಿ; ನಿಮ್ಮ ಕೈಯಲ್ಲಿ ಒಂದು ಚಿಕ್ಕ ಮಗುವನ್ನಿಟ್ಟರೆ ನೀವು ಏನು ಮಾಡುವಿರಿ? ಆ ಕ್ಷಣಕ್ಕೆ ನಿಮ್ಮ ಜೀವನವೇ ಮಾರ್ಪಡುವದು! ನಿಮ್ಮ ನಿಜವಾದ ಸ್ಥಿತಿಯು ಹೇಗೆ ಇರಲಿ, ತತ್ಕಾಲಕ್ಕೆ ನೀವು ನಿಸ್ವಾರ್ಥರಾಗಲೇಬೇಕಾಗುವದು. ಅಲ್ಲವೆ? ನಿಮ್ಮ ಮೇಲೆಯೇ ಹೊಣೆಗಾರಿಕೆಯನ್ನು ಹಾಕಿದ ಕೂಡಲೇ ನಿಮ್ಮ ಪಾಪಬುದ್ಧಿಗಳನ್ನೆಲ್ಲ ಬಿಟ್ಟುಬಿಡಬೇಕಾಗುತ್ತದೆ. ನಿಮ್ಮ ಇಡಿಯ ಸ್ವಭಾವವೇ ಬದಲಾಯಿಸುತ್ತದೆ. ಆದಕಾರಣ ಇಡಿಯ ಜವಾಬುದಾರಿಕೆಯು ನಮ್ಮ ಹೆಗಲ ಮೇಲೆ ಬಿದ್ದರೆ ನಾವು ಅತ್ಯಂತ ಉತ್ಕೃಷ್ಟವಾದ ಅತ್ಯಂತ ಉತ್ತಮವಾದ ಸ್ಥಿತಿಗೆ ಏರುವೆವು. ನಾವು ಇಂಥವರೊಬ್ಬರೆಂದು ಗುರಿಮಾಡುವದಕ್ಕೆ ಯಾರೂ ಇಲ್ಲದಿರುವಾಗ, ನಮ್ಮ ತಪ್ಪನ್ನು ಹೊರಿಸುವದಕ್ಕೆ ಯಾವ ಸೈತಾನನೂ ಇಲ್ಲದಿರುವಾಗ, ನಮ್ಮ ಹೊರೆಯನ್ನು ಹೊರುವದಕ್ಕೆ ಯಾವ ಸಗುಣೇಶ್ವರನೂ ಇಲ್ಲದಿರುವಾಗ, ನಾವೇ ನಮ್ಮ ನಮ್ಮ ಕಾರ್ಯಗಳಿಗೆ ಹೊಣೆಯಾಗಿರುವಾಗ, ಆಗಲೇ ನಾವು ಅತ್ಯಂತ ಉತ್ಕೃಷ್ಟವಾದ ಅತ್ಯಂತ ಉತ್ತಮವಾದ ಸ್ಥಿತಿಗೆ ಏರುವೆವು. ನನ್ನ ಹಣೆಯಬರಹಕ್ಕೆ ನಾನೇ ಹೊಣೆ, ನನಗೆ ಒಳ್ಳೆಯದನ್ನು ಮಾಡಿಕೊಳ್ಳುವವನೂ ನಾನೇ ಕೆಟ್ಟದ್ದನ್ನು ಮಾಡಿಕೊಳ್ಳುವವನೂ ನಾನೇ. ನಾನೇ ಪರಿಶುದ್ಧನು, ಶಿವನು. ಹಾಗಿಲ್ಲವೆಂದು ಹೇಳುವ ಮಿಕ್ಕ ಭಾವನೆಗಳನ್ನೆಲ್ಲ ಅತ್ತೊಗೆಯಬೇಕು.

ನನಗೆ ಮೃತ್ಯುವಿಲ್ಲ, ಶಂಕೆಯಿಲ್ಲ, ನನಗೆ ಜಾತಿಭೇದಗಳಿಲ್ಲ, ನನಗೆ ತಂದೆಯಿಲ್ಲ, ತಾಯಿಯಿಲ್ಲ, ಜನ್ಮವೂ ಇಲ್ಲ, ಸ್ನೇಹಿತನಿಲ್ಲ, ಶತ್ರುವಿಲ್ಲ, ಗುರುವಿಲ್ಲ,

ಶಿಷ್ಯನಿಲ್ಲ, ಸಚ್ಚಿದಾನಂದರೂಪನಾದ ಶಿವನು ನಾನು, ಶಿವನು ನಾನು! ನನಗೆ ಪುಣ್ಯ ಬಂಧವಾಗಲಿ ಪಾಪಬಂಧವಾಗಲಿ ಇಲ್ಲ! ತೀರ್ಥಗಳಿಲ್ಲ, ವೇದಗಳಿಲ್ಲ, ಕರ್ಮಗಳಿಲ್ಲ- ಇವು ಯಾವದರ ಬಂಧವೂ ನನಗೆ ಆಗಲಾರದು. ನನಗೆ ಹಸಿವಿಲ್ಲ, ಬಾಯಾರಿಕೆಯಿಲ್ಲ, ಶರೀರವು ನನ್ನದಲ್ಲ, ಅದರ ಜನ್ಮಮೃತ್ಯುಗಳೂ ನಾನಲ್ಲ. ಸಚ್ಚಿದಾನಂದರೂಪನಾದ ಶಿವನು ನಾನು, ಶಿವನು ನಾನು! ಇದೊಂದೇ ನಾವು ಮಾಡಬೇಕಾದ ಸ್ತೋತ್ರವು ಎಂದು ವೇದಾಂತವು ಹೇಳುತ್ತದೆ. ಇದೊಂದೇ ಕೊನೆಯ ಗುರಿಯನ್ನು ಮುಟ್ಟುವದಕ್ಕೆ ದಾರಿಯು; ನಾವು ಶಿವಸ್ವರೂಪವೆಂದು ಹೇಳಿಕೊಳ್ಳುವದು, ಮಿಕ್ಕವರಿಗೆಲ್ಲರಿಗೂ ಹಾಗೆ ಹೇಳುವದು, ಇದೊಂದೇ ದಾರಿಯು. ನಾವು ಇದನ್ನು ಹೇಳುತ್ತಾ ಹೇಳುತ್ತಾ ಹೋದಂತೆಲ್ಲ ಬಲವು ಬರುತ್ತದೆ. ಮೊದಮೊದಲು ಯಾವನಿಗೆ ತಪ್ಪು ನುಡಿಗಳು ಬರುವವೋ ಅವನಿಗೆ ಮೆಲ್ಲಮೆಲ್ಲಗೆ ಹೆಚ್ಚು ಹೆಚ್ಚು ಬಲವುಂಟಾಗುತ್ತದೆ. ಆಮೇಲೆ ಧ್ವನಿಯು ಬಲವಾಗಿ, ನಿಜವು ನಮ್ಮ ಹೃದಯವನ್ನು ವಶಗೊಳಿಸಿಕೊಳ್ಳುತ್ತದೆ, ನಮ್ಮ ನಾಡಿಗಳಲ್ಲಿ ಹರಿಯುವದಕ್ಕೆ ಮೊದಲಾಗುತ್ತದೆ, ನಮ್ಮ ಮೈಯನ್ನೆಲ್ಲ ವ್ಯಾಪಿಸಿಕೊಳ್ಳುತ್ತದೆ. ಬೆಳಕು ಹೆಚ್ಚು ಹೆಚ್ಚು ಪ್ರಕಾಶವಾದಂತೆಲ್ಲ ಭ್ರಾಂತಿಯು ಬಯಲಾಗುತ್ತದೆ, ಅಜ್ಞಾನದ ರಾಶಿ ರಾಶಿಯೇ ಮಾಯವಾಗುತ್ತದೆ. ಕೊನೆಗೆ ಒಂದಾನೊಂದು ಕಾಲಕ್ಕೆ ಮಿಕ್ಕದ್ದೆಲ್ಲವೂ ಕಣ್ಮರೆಯಾಗಿ ಆ ಸೂರ್ಯನೊಬ್ಬನೇ ಬೆಳಗುತ್ತಿರುತ್ತಾನೆ.

---

## 11. ಪ್ರಪಂಚ: ಬ್ರಹ್ಮಾಂಡ

ನಮ್ಮ ಸುತ್ತಲೂ ಕಾಣಬರುವ ಹೂಗಳು ಸುಂದರವಾಗಿರುತ್ತವೆ, ಬೆಳಗಿನ ಸೂರ್ಯೋದಯವು ಸುಂದರವಾಗಿರುತ್ತದೆ, ಪ್ರಕೃತಿಯಲ್ಲಿರುವ ಚಿತ್ರವಿಚಿತ್ರವಾದ ಬಣ್ಣಗಳು ಸುಂದರವಾಗಿರುತ್ತವೆ. ಇಡಿಯ ವಿಶ್ವವೇ ಸುಂದರವಾಗಿರುತ್ತದೆ. ಮನುಷ್ಯನು ಈ ಭೂಮಿಯ ಮೇಲೆ ಜನ್ಮವೆತ್ತಿದಂದಿನಿಂದಲೂ ಆ ಸೌಂದರ್ಯವನ್ನು ಕಂಡು ನಲಿಯುತ್ತಿದಾನೆ. ಪರ್ವತಗಳು, ಸಮುದ್ರದ ಕಡೆಗೆ ಭೋರ್ಗರೆಯುತ್ತಾ ಹರಿಯುತ್ತಿರುವ ಮಹಾನದಿಗಳು, ಎಲ್ಲಿಯೂ ಹಾದಿಯೇ ಇಲ್ಲದ ಮರುಭೂಮಿಗಳು, ಅನಂತವಾದ ಸಾಗರ, ನಕ್ಷತ್ರಮಂಡಲದಿಂದ ವಿರಾಜಿಸುವ ಅಂತರಿಕ್ಷ-ಇವುಗಳನ್ನು ನೋಡಿದರೆ ಎಷ್ಟು ಘನತೆಯು ಕಾಣಿಸುತ್ತದೆ, ಎಂಥ ಭಯಭಕ್ತಿಯುಂಟಾಗುತ್ತದೆ! ಇವೆಲ್ಲವೂ ಭಯಭಕ್ತಿಗಳನ್ನುಂಟು ಮಾಡುವಂಥವುಗಳೇ, ಘನವಾದವುಗಳೇ, ಸುಂದರವಾದವುಗಳೇ. ಪ್ರಕೃತಿಯೆಂದು ನಾವು ಕರೆಯುತ್ತಿರುವ ಇಡಿಯ ಇರವಿನ ರಾಶಿಯೇ ಮಾನವನ ಮನಸ್ಸಿನ ಮೇಲೆ ಅನಾದಿಕಾಲದಿಂದಲೂ ಪರಿಣಾಮವನ್ನುಂಟುಮಾಡುತ್ತಿರುತ್ತದೆ. ಮನುಷ್ಯನ ಮನಸ್ಸಿನ ಮೇಲೆ ಅದರ ಕ್ರಿಯೆ ನಡೆಯುತ್ತಲೇ ಇದೆ, ಅದಕ್ಕೆ ಪ್ರತಿಕ್ರಿಯೆಯಾಗಿ "ಇವೇನು? ಇವೆಲ್ಲಿಂದ ಬಂದವು?" ಎಂಬ ಪ್ರಶ್ನೆಯು ಹುಟ್ಟಿಕೊಂಡಿರುತ್ತದೆ.

ಮಾನವನು ಬರೆದಿರುವ ಗ್ರಂಥಗಳಲ್ಲೆಲ್ಲ ಅತ್ಯಂತ ಪುರಾತನವೆಂದೆನಿಸಿರುವ* ವೇದಕಾಲದಷ್ಟು ಹಿಂದಿನ ಕಾಲದಲ್ಲಿ ಕೂಡ ಇದೇ ಪ್ರಶ್ನೆಯನ್ನು ಕೇಳಿದ್ದರೆಂದು ಕಂಡುಬರುತ್ತದೆ. "ಇದು ಎಲ್ಲಿಂದ ಬಂದಿರುತ್ತದೆ? ಸತ್ತೂ ಇಲ್ಲದೆ ಅಸತ್ತೂ ಇಲ್ಲದೆ ಇದ್ದಾಗ ಕತ್ತಲೆಯು ಕತ್ತಲೆಯಲ್ಲಿ ಅವಿತುಕೊಂಡಿದ್ದಾಗ ಈ ವಿಶ್ವವನ್ನು ಸೃಷ್ಟಿಸಿದವರು ಯಾರು? ಹೇಗೆ? ಇದರ ಗುಟ್ಟನ್ನು ಯಾರು ಬಲ್ಲವರು?"#

ಈ ಪ್ರಶ್ನೆಯು ಈಗಿನ ಕಾಲದಲ್ಲಿ ನಮ್ಮಲ್ಲಿಗೂ ಬಂದಿರುತ್ತದೆ. ಅದಕ್ಕೆ ಉತ್ತರವನ್ನು ಹೇಳುವದಕ್ಕೆ ಲಕ್ಷಗಟ್ಟಲೆ ಪ್ರಯತ್ನಗಳನ್ನು ಮಾಡಿದ್ದಾಗಿದೆ, ಇನ್ನು ಮೇಲೆಯೂ ಲಕ್ಷಗಟ್ಟಲೆಯಾಗಿ ಅದಕ್ಕೆ ಉತ್ತರ ಹೇಳಬೇಕಾಗುತ್ತದೆ. ಒಂದೊಂದು ಉತ್ತರವೂ ತಪ್ಪಾಯಿತೆಂದೇನೂ ಅಭಿಪ್ರಾಯವಲ್ಲ; ಈ ಪ್ರಶ್ನೆಯು ಪ್ರತಿಯೊಂದು

* ವೇದವು ಪ್ರಪಂಚದ ವಾಙ್ಮಯದಲ್ಲಿ ಅತ್ಯಂತ ಪುರಾತನವಾದದ್ದೆಂದು ಪಾಶ್ಚಾತ್ಯ ವಿದ್ವಾಂಸರು ಬಗೆಯುತ್ತಾರೆ.

# ಋಗ್ವೇದದಲ್ಲಿರುವ 'ನಾಸದಾಸೀತ್' ಎಂಬ ಸೂಕ್ತ ಮಂತ್ರವೊಂದರ ಅಭಿಪ್ರಾಯವಿದು.

ಉತ್ತರದಲ್ಲಿಯೂ ನಿಜದಂಶವು ಇದ್ದೇ ಇತ್ತು. ಬರುಬರುತ್ತಾ ಈ ನಿಜವು ಬಲವಾಗುತ್ತಾ ಬರುತ್ತಿದೆ. ಇಂಡಿಯದ ತತ್ತ್ವಜ್ಞಾನಿಗಳಿಂದ ನಾನು ಕೂಡಿ ಹಾಕಿರುವ ಉತ್ತರದ ರೂಪರೇಖೆಯನ್ನು ಈಗಿನ ತಿಳಿವಳಿಕೆಗೆ ಹೊಂದಿಸಿ ನಿಮ್ಮ ಮುಂದೆ ಇಡುವದಕ್ಕೆ ಪ್ರಯತ್ನಿಸುತ್ತೇನೆ.

ಈ ಅತ್ಯಂತ ಪುರಾತನವಾದ ವಿಚಾರದಲ್ಲಿ ಕೆಲಕೆಲವು ವಿಷಯಗಳು ಆಗಲೇ ನಿಶ್ಚಯವಾಗಿದ್ದವೆಂದು ಕಂಡುಬರುತ್ತದೆ. "ಸತ್ತೂ ಇಲ್ಲದೆ ಅಸತ್ತೂ ಇಲ್ಲದೆ ಇದ್ದ." ಈ ಪ್ರಪಂಚವೇ ಇಲ್ಲದೇ ಇದ್ದ ಒಂದಾನೊಂದು ಕಾಲವಿತ್ತೆಂಬುದು ಮೊದಲನೆಯ ನಿರ್ಣಯವು. ಈ ಭೂಮಾತೆಯು, ಇದರ ಮೇಲಿರುವ ಸಮುದ್ರಗಳು, ಸಾಗರಗಳು, ನದಿಗಳು, ಬೆಟ್ಟಗಳು, ಹಳ್ಳಿಗಳು, ಪಟ್ಟಣಗಳು, ಮನುಷ್ಯಕುಲಗಳು, ಪ್ರಾಣಿಗಳು, ಗಿಡಗಳು, ಪಕ್ಷಿಗಳು, ಗ್ರಹಗಳು, ನಕ್ಷತ್ರಗಳು– ಈ ಅನಂತ ಪ್ರಕಾರವಾಗಿರುವ ಸೃಷ್ಟಿಯೇ ಇಲ್ಲದಿದ್ದ ಕಾಲವೊಂದಿತ್ತು. ಇದು ಖಂಡಿತವೋ? ಈ ನಿರ್ಣಯವು ಹೇಗೆ ಆಗುವದೆಂಬುದನ್ನು ಸ್ವಲ್ಪ ಸಮೂಲವಾಗಿ ವಿಚಾರಿಸೋಣ. ಮನುಷ್ಯನ ಸುತ್ತಮುತ್ತಲೂ ಕಾಣುತ್ತಿರುವದೇನು? ಒಂದು ಸಣ್ಣ ಗಿಡವನ್ನು ತೆಗೆದುಕೊಳ್ಳಿ. ಮನುಷ್ಯನು ನೆಲದಲ್ಲಿ ಒಂದು ಬೀಜವನ್ನು ಬಿತ್ತುತ್ತಾನೆ. ಸ್ವಲ್ಪ ಹೊತ್ತಾದ ಮೇಲೆ ಒಂದು ಮೊಳಕೆಯು ತಲೆದೋರಿ ಮೆಲ್ಲಗೆ ನೆಲದ ಮೇಲಕ್ಕೆದ್ದು ಬೆಳೆಯುತ್ತಾ ಬೆಳೆಯುತ್ತಾ ಕೊನೆಗೊಂದು ಮಹಾವೃಕ್ಷವಾಗಿಬಿಡುತ್ತದೆ. ಕೊನೆಗೆ ಅದು ಒಣಗಿಹೋಗಿ ಬೀಜವೊಂದೇ ಉಳಿದುಕೊಳ್ಳುತ್ತದೆ. ಹೀಗೆ ವೃತ್ತವು ಪೂರ್ಣವಾಗುತ್ತದೆ. ಅದು ಬೀಜದಿಂದ ಬಂದು, ಮರವಾಗಿ ಬೀಜದಲ್ಲಿಯೇ ಕೊನೆಗಾಣುತ್ತದೆ. ಒಂದು ಹಕ್ಕಿಯನ್ನು ನೋಡಿರಿ. ಅದು ಒಂದು ಮೊಟ್ಟೆಯಿಂದ ಹುಟ್ಟಿ, ಜೀವಮಾನವನ್ನು ಮುಗಿಸಿದ ಬಳಿಕ ಮುಂದಿನ ಪಕ್ಷಿಗಳಿಗೆ ಬೀಜವಾದ ಮತ್ತೆ ಕೆಲವು ಮೊಟ್ಟೆಗಳನ್ನು ಬಿಟ್ಟು ಸಾಯುತ್ತದೆ. ತಿರ್ಯಕ್‌ಪ್ರಾಣಿಗಳ ವಿಷಯವೂ ಹೀಗೆಯೇ, ಮಾನವನ ವಿಷಯವೂ ಹೀಗೆಯೇ. ಪ್ರಕೃತಿಯಲ್ಲಿ ಪ್ರತಿಯೊಂದು ಕೆಲಕೆಲವು ಬೀಜಗಳಿಂದ, ಕೆಲಕೆಲವು ಮೂಲರೂಪಗಳಿಂದ, ಕೆಲಕೆಲವು ಸೂಕ್ಷ್ಮರೂಪಗಳಿಂದ ಮೊದಲಾಗಿ, ಸ್ಥೂಲಸ್ಥೂಲವಾಗುತ್ತಾ ಸ್ವಲ್ಪಕಾಲದವರೆಗೆ ಬೆಳೆಯುತ್ತಾ ಇದ್ದು ಮತ್ತೆ ಅದೇ ಸೂಕ್ಷ್ಮರೂಪಕ್ಕೆ ಹೋಗಿ ಲಯವಾಗಿಬಿಡುತ್ತದೆ. ಸುಂದರ ಬಿಸಿಲಿನ ಕಿರಣವು ಲೀಲೆಯಾಡುತ್ತಿರುವ ಮಳೆಯ ಹನಿಯು ಆವಿಯ ರೂಪದಿಂದ ಸಾಗರದಿಂದ ಬಂದು ಮೇಲಕ್ಕೆ ಅಂತರಿಕ್ಷದವರೆಗೂ ಹೋಗಿ ಒಂದಾನೊಂದು ಸ್ಥಳದಲ್ಲಿ ನೀರಾಗಿ ಈಗಿನ ರೂಪದಲ್ಲಿ ಕೆಳಕ್ಕೆ ಬಿದ್ದಿರುತ್ತದೆ, ಮತ್ತೆ ಅದು ಆವಿಯಾಗಿ ಹೋಗಬೇಕಾಗಿರುತ್ತದೆ. ನಮ್ಮ ಸುತ್ತಲೂ ಇರುವ ಪ್ರತಿಯೊಂದರ ವಿಚಾರವೂ ಹೀಗೆಯೇ. ದೊಡ್ಡ ದೊಡ್ಡ ಪರ್ವತಗಳ ಮೇಲೆ ಹರಿಯುತ್ತಿರುವ

ಹಿಮಪ್ರವಾಹಗಳೂ ನದಿಗಳೂ ಮೆಲ್ಲಮೆಲ್ಲಗೆ ಅವುಗಳ ಮೇಲೆ ಪರಿಣಾಮವನ್ನುಂಟು ಮಾಡುತ್ತಾ ಅವುಗಳನ್ನು ತಪ್ಪದೆ ಪುಡಿಮಾಡುತ್ತಿವೆಯೆಂದು ಆ ಮರಳು ಸಾಗರಕ್ಕೆ ಕೊಚ್ಚಿಕೊಂಡು ಹೋದ ಮೇಲೆ ಅದರ ತಳಕ್ಕೆ ಇಳಿದು ಪದರಪದರವಾಗಿ ಹರಡಿಕೊಂಡು ಬಂಡೆಯ ಹಾಗೆ ಗಟ್ಟಿಯಾಗುತ್ತಾ ಆಗುತ್ತಾ ಇದೆಯೆಂದು ನಮಗೆ ತಿಳಿದೇ ಇದೆ. ಕೊನೆಗೆ ಅದು ಮುಂದೆ ಯಾವದೋ ಒಂದು ತಲಾಂತರದಲ್ಲಿ ಪರ್ವತವೇ ಆಗಿ ರಾಶಿಯಾಗಿ ನಿಲ್ಲುವದು. ಮತ್ತೆ ಆ ಪರ್ವತಗಳೂ ಕುಟ್ಟಿ ಪುಡಿಯಾಗಿಹೋಗುವವು. ಹೀಗೆಯೇ ನಡೆಯುತ್ತಿರುತ್ತದೆ. ಮರಳಿನಿಂದಲೇ ಈ ಬೆಟ್ಟಗಳು ಎದ್ದಿವೆ, ಅವು ಮರಳಿನಲ್ಲಿಯೇ ಲಯವಾಗುತ್ತವೆ.

ಪ್ರಕೃತಿಯು ಎಲ್ಲೆಲ್ಲಿಯೂ ಒಂದೇ ನಿಯಮದಿಂದ ವ್ಯಾಪಾರ ಮಾಡುತ್ತಿರುವದೆಂಬುದು ನಿಯಮವಾದರೆ, ಒಂದು ಸಣ್ಣ ಮರಳಿನ ಕಣವನ್ನು ಸೃಷ್ಟಿಮಾಡುವ ಕ್ರಮವೇ ಮಹಾಮಹಾ ಸೂರ್ಯ ನಕ್ಷತ್ರಗಳ ಮತ್ತು ಎಲ್ಲಾ ಪ್ರಪಂಚದ ಸೃಷ್ಟಿಯಲ್ಲಿಯೂ ಇರುವದೆಂಬುದು ನಿಜವಾದರೆ- ಹಾಗಿಲ್ಲವೆನ್ನುವದಕ್ಕೆ ಮಾನವನ ಯಾವ ಅನುಭವವೂ ಇದುವರೆಗೆ ಪ್ರಮಾಣವಾಗಿರುವದಿಲ್ಲ- ಪರಮಾಣುವು ಸೃಷ್ಟಿಯಾಗಿರುವ ನಿಯಮದಲ್ಲಿಯೇ ಚಾಚೂ ತಪ್ಪದಂತೆ ಈ ಇಡಿಯ ವಿಶ್ವವು ಸಷ್ಟಿಯಾಗಿರುವದೆಂಬುದು ನಿಜವಾದರೆ, ಈ ಇಡಿಯ ವಿಶ್ವದಲ್ಲೆಲ್ಲ ಒಂದೇ ನಿಯಮವು ಆಳುತ್ತಿರುವದೆಂಬುದು ನಿಜವಾದರೆ, ಆಗ ವೇದಗಳಲ್ಲಿ ಹೇಳಿರುವಂತೆ "ಒಂದು ಮಣ್ಣಿನ ಮುದ್ದೆಯನ್ನು ತಿಳಿದುಕೊಂಡರೆ ಈ ವಿಶ್ವದಲ್ಲಿರುವ ಮಣ್ಣಿನ ಸ್ವಭಾವವನ್ನೆಲ್ಲ ಅರಿತಂತೆ ಆಗುತ್ತದೆ". (ಛಾ. 6-1-4) ಒಂದು ಗಿಡವನ್ನು ತೆಗೆದುಕೊಂಡು ಅದರ ಜೀವನ ಕ್ರಮವನ್ನು ಆಲೋಚನೆಮಾಡಿದರೆ ವಿಶ್ವದ ಯಥಾರ್ಥ್ಯವನ್ನೇ ತಿಳಿದುಕೊಂಡಂತೆ ಆಗುತ್ತದೆ. ಒಂದೇ ಒಂದು ಮರಳಿನ ಕಣವನ್ನು ಚೆನ್ನಾಗಿ ಅರಿತುಕೊಂಡರೆ ಈ ಇಡಿಯ ವಿಶ್ವದ ಗುಟ್ಟನ್ನೇ ಅರಿತುಕೊಂಡಂತೆ ಆಗುತ್ತದೆ. ಹೊರಗಿನ ದೃಶ್ಯಗಳಿಗೆಲ್ಲ ಈ ಯುಕ್ತಿಯನ್ನು ಹೊಂದಿಸಿದರೆ ಮೊದಲನೆಯದಾಗಿ ತಿಳಿದುಬಿಡುವದೇನೆಂದರೆ ಪ್ರತಿಯೊಂದೂ ಮೊದಲೂ ಕೊನೆಗೂ ಸ್ವಲ್ಪ ಹೆಚ್ಚು ಕಡಿಮೆಯಾಗಿ ಒಂದೇ ರೂಪವಾಗಿರುತ್ತದೆ. ಪರ್ವತವು ಮರಳಿನಿಂದ ಬರುತ್ತದೆ, ಮರಳಿಗೇಹೋಗಿ ಸೇರುತ್ತದೆ; ನದಿಯು ಆವಿಯಿಂದ ಬರುತ್ತದೆ, ಆವಿಯಲ್ಲೇ ಲಯವಾಗುತ್ತದೆ; ಮರಗಿಡಗಳು ಬೀಜದಿಂದ ಬರುತ್ತವೆ, ಬೀಜದಲ್ಲಿಯೇ ಲಯವಾಗುತ್ತದೆ; ಮಾನವ ಜೀವವು ಮಾನವಬೀಜಾಣುಗಳಿಂದ ಬರುತ್ತದೆ, ಮಾನವಬೀಜಾಣುಗಳಲ್ಲಿಯೇ ಲಯವಾಗುತ್ತದೆ. ನಕ್ಷತ್ರಗಳಿಂದಲೂ ಗ್ರಹಗಳಿಂದಲೂ ಕೂಡಿರುವ ವಿಶ್ವವು ಅವ್ಯಕ್ತ ತೇಜದಿಂದ ಬಂದಿರುತ್ತದೆ, ಆ ಸ್ಥಿತಿಯನ್ನೇ ಮತ್ತೆ ಸೇರುತ್ತದೆ.

ಇದರಿಂದ ನಮಗೇನು ತಿಳಿದಂತಾಯಿತು? ವ್ಯಕ್ತವಾಗಿರುವ ಸ್ಥೂಲಸ್ಥಿತಿಯು ಕಾರ್ಯವೆಂದೂ ಸೂಕ್ಷ್ಮವಾಗಿರುವ ಸ್ಥಿತಿಯು ಕಾರಣವೆಂದೂ ತಿಳಿದಂತೆ ಆಗುವದಿಲ್ಲವೆ? ಸಾವಿರಾರು ವರ್ಷಗಳ ಕೆಳಗೆ ತತ್ತ್ವಶಾಸ್ತ್ರಕ್ಕೆಲ್ಲ ಪ್ರವರ್ತಕನಾದ ಕಪಿಲ ಮಹರ್ಷಿಯು ನಾಶವೆಂದರೆ ಕಾರಣದಲ್ಲಿ ಲಯವಾಗುವದೇ ಎಂಬುದನ್ನು ಸಿದ್ಧಪಡಿಸಿಕೊಟ್ಟನು. ಇಲ್ಲಿರುವ ಈ ಮೇಜನ್ನು ನಾಶಗೊಳಿಸಿದರೆ ಅದು ತನ್ನ ಕಾರಣದಲ್ಲಿ ಲಯವಾಗುತ್ತದೆ. ಯಾವ ಸೂಕ್ಷ್ಮರೂಪಗಳಿಂದಲೂ ಅಣುಗಳಿಂದಲೂ ಸಂಯೋಗದಿಂದ ಈ ಮೇಜೆಂಬ ಆಕೃತಿಯಾಗಿರುವದೋ ಆ ಸೂಕ್ಷ್ಮವಾದ ರೂಪಗಳು ಮತ್ತು ಅಣುಗಳು- ಇವನ್ನೇ ಸೇರಿಕೊಂಡುಬಿಡುತ್ತದೆ. ಒಬ್ಬ ಮನುಷ್ಯನು ಸತ್ತರೆ ಅವನ ಶರೀರವನ್ನುಂಟುಮಾಡಿದ ಭೂತಗಳಲ್ಲಿಯೇ ಅವನು ಲಯವಾಗುತ್ತಾನೆ. ಈ ಭೂಮಿಯು ನಾಶವಾದರೆ ಅದರ ರೂಪವನ್ನುಂಟುಮಾಡಿದ ಭೂತಗಳನ್ನೇ ಅದು ಸೇರಿಕೊಳ್ಳುವದು. ಇದೇ, ಹೀಗೆ ಕಾರಣದಲ್ಲಿ ಲಯವಾಗುವದೆಂಬುದೇ, ನಾಶವೆನ್ನುವದು. ಆದ್ದರಿಂದ ಕಾರ್ಯವೆಂಬುದು ಕಾರಣವೇ ಹೊರತು ಬೇರೆಯಲ್ಲವೆಂದು ತಿಳಿದಂತೆ ಆಯಿತು. ಆದರೆ ಅದು ರೂಪಾಂತರದಲ್ಲಿರುತ್ತದೆ, ಅಷ್ಟೆ. ಈ ಗಾಜೆಂಬುದು ಒಂದು ಕಾರ್ಯವು; ಇದಕ್ಕೊಂದು ಕಾರಣವಿತ್ತು, ಆ ಕಾರಣವೇ ಈ ಕಾರ್ಯರೂಪದಲ್ಲಿ ಇಲ್ಲಿರುತ್ತದೆ. ಗಾಜೆಂದು ನಾವು ಕರೆಯುವ ಮೂಲವಾದ ಆ ವಸ್ತುವಿನ ಒಂದಿಷ್ಟು ಭಾಗವೂ ಕೈಗಾರಿಕೆಯವನ ಕೈಯಲ್ಲಿದ್ದ ಶಕ್ತಿಯೂ ಸೇರಿ ಇದಕ್ಕೆ ಕಾರಣವಾಗಿರುತ್ತವೆ, ಉಪಾದಾನಕಾರಣವೂ ನಿಮಿತ್ತಕಾರಣವೂ ಆಗಿರುತ್ತವೆ; ಅವರೆಡೂ ಸೇರಿ ಈ ಗಾಜೆಂಬ ಆಕಾರವಿಶೇಷವನ್ನುಂಟುಮಾಡಿರುತ್ತವೆ. ಕೈಗಾರಿಕೆಯವನ ಕೈಗಳಲ್ಲಿದ್ದ ಶಕ್ತಿಯು ಈ ಗಾಜಿನಲ್ಲಿ ಸ್ನೇಹಾಕರ್ಷಣಶಕ್ತಿಯ ರೂಪದಲ್ಲಿ ಗಾಜಿನಲ್ಲಿದ್ದುಕೊಂಡಿರುತ್ತದೆ, ಅದಿಲ್ಲದಿದ್ದರೆ ಇದರ ಅಣುಗಳು ಒಂದನ್ನೊಂದು ಅಗಲಿ ಹೋಗಿಬಿಡುತ್ತಿದ್ದವು. ಗಾಜಿನ ಉಪಾದಾನವಸ್ತುವೂ ಇದರಲ್ಲಿರುತ್ತದೆ. ಗಾಜೆಂಬುದು ರೂಪಾಂತರದಲ್ಲಿರುವ ಈ ಸೂಕ್ಷ್ಮಕಾರಣಗಳ ಅಭಿವ್ಯಕ್ತಿಯೇ ಆಗಿರುತ್ತದೆ; ಅದು ಚೂರು ಚೂರಾಗಿ ಒಡೆದರೆ ಅದರಲ್ಲಿ ಸ್ನೇಹಾಕರ್ಷಣ ಶಕ್ತಿಯು ರೂಪದಲ್ಲಿರುವ ಶಕ್ತಿಯು ತಿರುಗಿ ತನ್ನ ಮೂಲವಸ್ತುವನ್ನೇ ಸೇರಿಕೊಳ್ಳುತ್ತದೆ, ಗಾಜಿನ ಅಣುಗಳೂ ಮತ್ತೆ ರೂಪಾಂತರವನ್ನು ಹೊಂದುವವರೆಗೂ ಹಾಗೆಯೇ ಇರುತ್ತವೆ. ಈ ರೀತಿಯಲ್ಲಿ ನೋಡಿದರೆ ಕಾರ್ಯವೆಂಬುದು ಕಾರಣಕ್ಕಿಂತ ಯಾವಾಗಲೂ ಬೇರೆಯಲ್ಲವೆಂದು ತಿಳಿದುಬರುತ್ತದೆ. ಈ ಕಾರ್ಯವೆಂಬುದು ಸ್ಥೂಲರೂಪದಲ್ಲಿ ಕಾರಣವು ಮತ್ತೆ ಕಾಣಿಸಿಕೊಳ್ಳುವದೇ ಆಗಿರುತ್ತದೆ.

ನಮಗೆ ತಿಳಿದು ಬರುವ ಮತ್ತೊಂದು ವಿಷಯವೇನೆಂದರೆ, ಗಿಡಮರಗಳು, ಪ್ರಾಣಿಗಳೂ, ಮನುಷ್ಯರು-ಎಂದು ನಾವು ಕರೆಯುತ್ತಿರುವ ಆಕಾರವಿಶೇಷಗಳೆಲ್ಲ,

ಏಳುವದು, ಬೀಳುವದು- ಹೀಗೆ ಅನಂತವಾಗಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತಲೇ ಇರುವವು. ಬೀಜದಿಂದ ಮರವಾಗುತ್ತದೆ, ಮರದಿಂದ ಬೀಜವಾಗುತ್ತೆ, ಮತ್ತೆ ಅದರಿಂದ ಮತ್ತೊಂದು ಮರವಾಗುತ್ತದೆ; ಹೀಗೆಯೇ ಆಗುತ್ತಾ ಹೋಗುತ್ತದೆ, ಇದಕ್ಕೆ ಕೊನೆಯೇ ಇಲ್ಲ. ನೀರಹನಿಗಳು ಪರ್ವತಗಳಿಂದಿಳಿದು ಸಾಗರವನ್ನು ಸೇರುತ್ತದೆ, ಮತ್ತೆ ಆವಿಯಾಗಿ ಮೇಲಕ್ಕೆದ್ದು ಪರ್ವತಗಳಿದ್ದಲ್ಲಿಗೆ ಹಿಂತೆರಳಿ ಮತ್ತೂ ಸಾಗರಕ್ಕೆ ಬರುತ್ತವೆ. ಹೀಗೆಯೇ ಏಳುವದು, ಬೀಳುವದು- ಈ ಸುತ್ತಾಟವು ನಡೆದೇ ಇರುತ್ತದೆ. ಎಲ್ಲಾ ಬಗೆಯ ಜೀವಿಗಳ ವಿಚಾರವೂ ಹೀಗೆಯೇ. ನಮಗೆ ಕಾಣುವ, ವೇದನೆಯಿಂದ ಗೊತ್ತಾಗುವ, ಕೇಳುವ ಅಥವಾ ಕಲ್ಪನೆಯಿಂದ ಗೊತ್ತಾಗುವ ಇರವೆಲ್ಲವೂ ಹೀಗೆಯೇ, ನಮ್ಮ ಜ್ಞಾನಕ್ಷೇತ್ರದಲ್ಲಿರುವ ಪ್ರತಿಯೊಂದೂ ಹೀಗೆಯೇ. ಮನುಷ್ಯ ಶರೀರದಲ್ಲಿ ನಡೆಯುವ ಉಚ್ಛ್ವಾಸ ನಿಃಶ್ವಾಸಗಳಂತೆ ನಡೆಯುತ್ತಲೇ ಇರುತ್ತದೆ. ಈ ಸೃಷ್ಟಿಯಲ್ಲಿ ಪ್ರತಿಯೊಂದೂ ಒಂದು ಅಲೆ ಏಳುವದು, ಮತ್ತೊಂದು ಬೀಳುವದು, ಮತ್ತೆ ಏಳುವದು, ಮತ್ತೆ ಬೀಳುವದು- ಹೀಗೆಯೇ ನಡೆಯುತ್ತಿರುತ್ತದೆ. ಒಂದೊಂದು ಅಲೆಗೂ ಒಂದೊಂದು ಟೊಳ್ಳು ಇರುತ್ತದೆ. ಒಂದೊಂದು ಟೊಳ್ಳಿಗೂ ತನ್ನ ತನ್ನ ಅಲೆ ಇರುತ್ತದೆ. ಈ ಇಡಿಯ ವಿಶ್ವವೂ ಒಂದೇ ನಿಯಮಕ್ಕೊಳಪಟ್ಟಿರುವದರಿಂದ ಎಲ್ಲೆಲ್ಲಿಯೂ ಇದೇ ನಿಯಮವು ಹೊಂದಬೇಕಾಗಿರುತ್ತದೆ. ಈ ವಿಶ್ವವು ತನ್ನ ಕಾರಣಗಳಲ್ಲಿ ಲಯವಾಗಲೇಬೇಕು, ಸೂರ್ಯ, ಚಂದ್ರ, ನಕ್ಷತ್ರಗಳು, ಭೂಮಿ, ಶರೀರ, ಮನಸ್ಸು, ಈ ವಿಶ್ವದಲ್ಲಿರುವ ಪ್ರತಿಯೊಂದೂ ತಮ್ಮ ತಮ್ಮ ಸೂಕ್ಷ್ಮಕಾರ್ಯಗಳಲ್ಲಿ ಲಯವಾಗಲೇಬೇಕು, ಕಾಣದಂತಾಗಿ ಒಂದು ಬಗೆಯಲ್ಲಿ ನಾಶವಾಗಲೇಬೇಕು. ಆದರೆ ಅವು ಆ ಕಾರಣಗಳಲ್ಲಿ ಸೂಕ್ಷ್ಮರೂಪವಾಗಿ ಇದ್ದೇ ಇರುವವು. ಈ ಸೂಕ್ಷ್ಮರೂಪಗಳಿಂದ ಮತ್ತೆ ಹೊರಕ್ಕೆ ಬಂದು ಭೂಮಿಗಳಾಗಿಯೂ ಚಂದ್ರರಾಗಿಯೂ ನಕ್ಷತ್ರಗಳಾಗಿಯೂ ಕಾಣಿಸಿಕೊಳ್ಳುವವು.

ಈ ಏಳುಬೀಳುಗಳ ವಿಷಯದಲ್ಲಿ ನಾವು ತಿಳಿದುಕೊಳ್ಳತಕ್ಕದ್ದು ಮತ್ತೊಂದು ವಿಷಯವಿದೆ. ಬೀಜವು ಮರದಿಂದ ಬರುತ್ತದೆ; ಆದರೆ ಅದು ಕೂಡಲೆ ಮರವಾಗುವದಿಲ್ಲ; ಸ್ವಲ್ಪಹೊತ್ತು ಏನೂ ಮಾಡದೆ ಇರುತ್ತದೆ; ಅಥವಾ ಬಹುಸೂಕ್ಷ್ಮವಾದ ಅವ್ಯಕ್ತವಾದ ಕ್ರಿಯೆಯನ್ನು ಮಾಡುತ್ತಾ ಇರುತ್ತದೆಯೆಂದು ಹೇಳುವದು ಉತ್ತಮ. ಬೀಜವು ಸ್ವಲ್ಪ ಕಾಲ ನೆಲದ ಕೆಳಗೆ ಕೆಲಸ ಮಾಡುತ್ತಿರಬೇಕಾಗುತ್ತದೆ. ಅದು ಚೂರುಚೂರಾಗಿ ಒಡೆದುಕೊಂಡು, ಒಂದು ಬಗೆಯಿಂದ ಕ್ಷಯವಾಗುತ್ತಾ ಹೋಗುತ್ತದೆ, ಆ ಕ್ಷಯವಾದ ಮೇಲೆ ಅದರಿಂದ ಪುನರುತ್ಪತ್ತಿಯುಂಟಾಗುತ್ತದೆ. ಪ್ರಾರಂಭದಲ್ಲಿ ಈ ಇಡಿಯ ವಿಶ್ವವೇ ಈ ರೀತಿಯಲ್ಲಿ

ಸ್ವಲ್ಪ ಕಾಣದಂತೆಯೋ, ವ್ಯಕ್ತವಾಗದೆಯೋ, ಇರಬೇಕಾಗುತ್ತದೆ. ಅದಕ್ಕೆ ಅವ್ಯಾಕೃತವೆಂದು ಹೆಸರು. ಅದರಿಂದ ಮತ್ತೊಂದು ಹೊಸ ಸೃಷ್ಟಿಯುಂಟಾಗುತ್ತದೆ. ಈ ವಿಶ್ವವು ಹೊರತೋರಿಕೊಂಡು ಸೂಕ್ಷ್ಮರೂಪವನ್ನು ತಳೆದು ಕೆಲವು ಕಾಲ ಹಾಗೆಯೇ ಇದ್ದ ಬಳಿಕ ಮತ್ತೆ ಹೊರಕ್ಕೆ ಬರುವ ಕಾಲವನ್ನೆಲ್ಲ ಒಟ್ಟಾಗಿ ಸಂಸ್ಕೃತದಲ್ಲಿ ಕಲ್ಪ ಎಂದು ಕರೆಯುತ್ತಾರೆ.

ಇನ್ನು ಮತ್ತೊಂದು ಮುಖ್ಯವಾದ ವಿಷಯವುಂಟು; ಅದು ವಿಶೇಷಾಗಿ ಈಗಿನ ಕಾಲಕ್ಕೆ ಬಹು ಮುಖ್ಯವಾಗಿರುತ್ತದೆ. ಸೂಕ್ಷ್ಮವಾದ ರೂಪಗಳು ಮೆಲ್ಲಮೆಲ್ಲಗೆ ಬೆಳದುಕೊಂಡು ಕ್ರಮಕ್ರಮವಾಗಿ ಹೆಚ್ಚು ಹೆಚ್ಚು ಸ್ಥೂಲವಾಗುತ್ತಾ ಬರುವದು ಕಂಡುಬರುತ್ತದೆ. ಕಾರಣವೆಂಬುದೇ ಕಾರ್ಯವು, ಕಾರ್ಯವೆಂಬುದು ರೂಪಾಂತರದಲ್ಲಿರುವ ಕಾರಣವೇ ಎಂಬುದನ್ನು ಆಗಲೇ ತಿಳಿಸಿದ್ದಾಗಿರುತ್ತದೆ. ಆದ್ದರಿಂದ ಈ ಇಡಿಯ ವಿಶ್ವವು ಶೂನ್ಯದಿಂದ ಉಂಟಾಗಿರಲಾರದು; ಕಾರಣವಿಲ್ಲದೆ ಯಾವದೊಂದೂ ಉಂಟಾಗಲಾರದು, ಕಾರಣವೇ ರೂಪಾಂತರವನ್ನು ಹೊಂದಿ ಕಾರ್ಯವೆನಿಸಿಕೊಳ್ಳುತ್ತದೆ. ಹಾಗಾದರೆ ಈ ವಿಶ್ವವು ಏತರಿಂದ ಉಂಟಾಗಿದೆ? ಹಿಂದಿದ್ದ ಸೂಕ್ಷ್ಮವಾದ ಪ್ರಪಂಚದಿಂದ. ಮಾನವನು ಏತರಿಂದ ಉಂಟಾಗಿರುತ್ತಾನೆ? ಹಿಂದಿದ್ದ ಸೂಕ್ಷ್ಮರೂಪದಿಂದ ಮರವು ಏತರಿಂದ ಉಂಟಾಗಿದೆ? ಬೀಜದಿಂದ, ಇಡಿಯ ಮರವೇ ಬೀಜದಲ್ಲಿದ್ದುಕೊಂಡಿತ್ತು. ಅದು ಹೊರಕ್ಕೆ ಬಂದು ವ್ಯಕ್ತವಾಗುತ್ತದೆ. ಇದರಂತೆಯೇ ಈ ಇಡಿಯ ವಿಶ್ವವು ಸೂಕ್ಷ್ಮರೂಪದಲ್ಲಿದ್ದ ಇದೇ ವಿಶ್ವದಿಂದಲೇ ಉಂಟಾಗಿರುತ್ತದೆ. ಅದು ಈಗ ವ್ಯಕ್ತವಾಗಿರುತ್ತದೆ. ಅದು ಮತ್ತೆ ಆ ಸೂಕ್ಷ್ಮರೂಪವನ್ನು ಹೊಂದಿ ಇನ್ನೂ ಒಂದು ಸಲ ವ್ಯಕ್ತವಾಗುತ್ತದೆ. ಸೂಕ್ಷ್ಮವಾದ ರೂಪಗಳು ಮೆಲ್ಲಮೆಲ್ಲಗೆ ಹೊರಕ್ಕೆ ಬಂದು ಹೆಚ್ಚು ಹೆಚ್ಚು ಸ್ಥೂಲರೂಪವನ್ನು ತಳೆಯುತ್ತಾ ಕೊನೆಗೆ ಬೆಳವಣಿಗೆಯ ಎಲ್ಲೆಕಟ್ಟನ್ನು ಮುಟ್ಟುವವೆಂದೂ ಆ ಪರಮಾವಧಿಯನ್ನು ಮುಟ್ಟಿದ ಮೇಲೆ ಹಿಂದು ಹಿಂದಕ್ಕೆ ತೆರಳುತ್ತಾ ಹೆಚ್ಚು ಹೆಚ್ಚು ಸೂಕ್ಷ್ಮವಾಗುವದೆಂದೂ ಕಂಡು ಬರುತ್ತದೆಯಷ್ಟೆ. ಹೀಗೆ ಸೂಕ್ಷ್ಮರೂಪದಿಂದ ಬಂದು ಅವಯವಗಳ ಅನುಕ್ರಮವನ್ನು ಮಾರ್ಪಡಿಸಿಕೊಂಡ ಮಾತ್ರದಿಂದಲೇ ಸ್ಥೂಲವಾಗುವದೆಂಬುದನ್ನು ಈಗಿನ ಕಾಲದಲ್ಲಿ "ವಿಕಾಸ" ಎಂದು ಕರೆಯುತ್ತಾರೆ. ಇದು ಸತ್ಯವೇ ಆಗಿರುತ್ತದೆ, ಸಂಪೂರ್ಣವಾಗಿ ಸತ್ಯವಾಗಿರುತ್ತದೆ; ಅದು ನಮ್ಮ ಜೀವಮಾನದಲ್ಲಿಯೇ ಕಂಡುಬರುತ್ತದೆ. ಈ ವಿಕಾಸವಾದಿಗಳೊಡನೆ ಮಾತನಾಡುವಾಗ ವಿವೇಕಿಯಾದವನು ಯಾರೂ ಭಿನ್ನಾಭಿಪ್ರಾಯವುಳ್ಳವನಾಗಲಾರನು. ಆದರೆ ನಾವು ಇನ್ನೊಂದು ಸಂಗತಿಯನ್ನು ತಿಳಿದುಕೊಳ್ಳತಕ್ಕದ್ದು ಅಗತ್ಯ; ಇನ್ನೊಂದು ಹೆಜ್ಜೆ ಮುಂದಕ್ಕಿಡುವದು ಅಗತ್ಯ. ಅದೇನೆಂದರೆ, ಪ್ರತಿಯೊಂದು ವಿಕಾಸಕ್ಕೂ ಹಿಂದೆ

ಒಂದು ಸಂಕೋಚವಿರಬೇಕು. ಬೀಜವು ಮರಕ್ಕೆ ಜನಕನು, ಆದರೆ ಆ ಬೀಜಕ್ಕೆ ಮತ್ತೊಂದು ಮರವು ಜನಕನಾಗಿತ್ತು. ಬೀಜವೆಂಬ ಸೂಕ್ಷ್ಮರೂಪದಿಂದ ಮಹಾ ವೃಕ್ಷವು ಬಂದಿರುತ್ತದೆಯಷ್ಟೆ' ಆದರೆ ಆ ಬೀಜರೂಪಕ್ಕೆ ಸಂಕುಚಿತವಾಗಿರುವ ಮತ್ತೊಂದು ಮಹಾವೃಕ್ಷವು ಅದರ ಹಿಂದೆ ಇತ್ತು. ಈ ಇಡಿಯ ವಿಶ್ವವೇ ಸೂಕ್ಷ್ಮವಾದ ವಿಶ್ವದಲ್ಲಿ ಅಡಕವಾಗಿತ್ತು. ಆಮೇಲೆ ಮಾನವನಾಗುವ ಜೀವಾಣುವಿದೆಯಲ್ಲ, ಅದು ಸಂಕುಚಿತವಾಗಿರುವ ಮನುಷ್ಯನೇ; ಅದೇ ಆಮೇಲೆ ಮನುಷ್ಯನಾಗಿ ವಿಕಸಿತವಾಗುತ್ತದೆ. ಇಷ್ಟೊಂದು ಸ್ಪಷ್ಟವಾಗಿಬಿಟ್ಟರೆ, ನಮಗೂ ವಿಕಾಸವಾದಿಗಳಿಗೂ ಯಾವ ಭೇದವೂ ಇರುವದಿಲ್ಲ; ಏಕೆಂದರೆ ಅವರು ಇದೊಂದು ವಿಚಾರದ ಮೆಟ್ಟಿಲನ್ನು ಒಪ್ಪಿಕೊಂಡು ಬಿಟ್ಟರೆ ಅವರು ಧರ್ಮವನ್ನು ನಾಶಮಾಡುವದಕ್ಕೆ ಬದಲು ಅವರೇ ಅದಕ್ಕೆ ಪರಮರಕ್ಷಕರಾಗಿಬಿಡುತ್ತಾರೆ.

ಅಂತೂ ಶೂನ್ಯದಿಂದ ಏನೊಂದೂ ಸೃಷ್ಟಿಯಾಗಲಾರದೆಂದಾಯಿತು. ಪ್ರತಿಯೊಂದೂ ಯಾವಾಗಿನಿಂದಲೂ ಇದ್ದುಕೊಂಡೇ ಇರುತ್ತದೆ, ಮುಂದೆಯೂ ಎಂದೆಂದಿಗೂ ಇದ್ದುಕೊಂಡೇ ಇರುತ್ತದೆ. ಆದರೆ ಅದು ಅಲೆಗಳಾಗುವದು, ಪೊಳ್ಳಾಗುವದು, ಸೂಕ್ಷ್ಮರೂಪಗಳಲ್ಲಿ ಲಯವಾಗುವದು, ಸ್ಥೂಲರೂಪಾಂತರಗಳನ್ನು ತಳೆಯುವುದು- ಹೀಗೆ ಮತ್ತೆ ಮತ್ತೆ ಆಗುತ್ತಲೇ ಇರುತ್ತದೆ, ಅಷ್ಟೆ. ಇಡಿಯ ಪ್ರಕೃತಿಯಲ್ಲಿಯೇ ಈ ಸಂಕೋಚವಿಕಾಸಗಳು* ಆಗುತ್ತಲಿರುವವು. ಪ್ರಾಣದ ತೀರ ಕಡಿಮೆಯ ರೂಪದಿಂದ ಮೊದಲಾಗಿ ಅತ್ಯಂತ ಹೆಚ್ಚಿನ ರೂಪವನ್ನು ಎಂದರೆ ಅತ್ಯಂತ ಪರಿಪೂರ್ಣನಾದ ಮಾನವನ ರೂಪವನ್ನು ತಳೆಯುವವರೆಗಿನ ಇಡಿಯ ವಿಕಾಸ ಶ್ರೇಣಿಯೇ ಯಾವದೋ ಒಂದರ ಸಂಕೋಚವಾಗಿದ್ದಿರಬೇಕು. ಇಲ್ಲಿ ನಾವು ಕೇಳುವದು ಇಷ್ಟೆ, ಅದು ಏತರ ಸಂಕುಚಿತರೂಪವು? ಅದರಲ್ಲಿ ಸಂಕುಚಿತಸ್ಥಿತಿಯಲ್ಲಿದ್ದದ್ದು ಯಾವದು? ದೇವರೇ. ಇಲ್ಲಿ ವಿಕಾಸವಾದಿಯು ಹೇಳುವದೇನೆಂದರೆ, ಈಶ್ವರನೇ ಈ ಸಂಕುಚಿತರೂಪದಲ್ಲಿದ್ದನೆಂಬುದು ತಪ್ಪು; ಏಕೆಂದರೆ ಈಶ್ವರನು ಚೈತನ್ಯರೂಪನೆಂಬುದು ನಿಮ್ಮ ಮತವು, ಆದರೆ ಚೈತನ್ಯವೆಂಬುದು ಎಷ್ಟೋ ಈಚೆಗೆ ಕಾಣಿಸಿಕೊಳ್ಳುವದಾಗಿರುತ್ತದೆ. ಮನುಷ್ಯನಲ್ಲಿಯೂ ಮೇಲಿನ ತರಗತಿಯ ಪ್ರಾಣಿಗಳಲ್ಲಿಯೂ ಬುದ್ಧಿಯು ಕಾಣಿಸಿಕೊಳ್ಳುತ್ತದೆ; ಆದರೆ ಈ ಬುದ್ಧಿಯೆಂಬುದು ಕಾಣಿಸಿಕೊಳ್ಳುವದಕ್ಕೆ ಎಷ್ಟೋ ಕೋಟಿ ವರ್ಷಗಳು ಆಗಬೇಕಾಯಿತಲ್ಲ! ವಿಕಾಸವಾದಿಗಳು ಹೇಳುವ ಈ ಆಕ್ಷೇಪವು ನಿಲ್ಲತಕ್ಕದ್ದಲ್ಲ; ನಮ್ಮ ನಿಯಮವನ್ನು ಇಲ್ಲಿಯೂ ಹೊಂದಿಸಿದರೆ ಕೂಡಲೆ ಇದು

* ಇಡಿಯ ವಿಶ್ವವು ಸೃಷ್ಟಿಯಾಗಿ ಮತ್ತೆ ಕಾರಣದಲ್ಲಿ ಲಯವಾಗುವದನ್ನು 'ಸಂಚರ ಪ್ರತಿಸಂಚರ'ಗಳೆಂದು ಸಾಂಖ್ಯರು ಕರೆಯುತ್ತಾರೆ.

ಸ್ಪಷ್ಟವಾಗುತ್ತದೆ. ಮರವು ಬೀಜದಿಂದ ಬಂದಿರುತ್ತದೆ, ಬೀಜದಲ್ಲಿಯೇ ಲಯವಾಗುತ್ತದೆ; ಅದರ ಆದಿಯೂ ಅಂತವೂ ಎರಡೂ ಒಂದೇ. ಭೂಮಿಯು ತನ್ನ ಕಾರಣದಿಂದ ಬಂದು ಆ ಕಾರಣದಲ್ಲಿಯೇ ಲಯವಾಗುತ್ತವೆ. ಆದಿಯನ್ನು ಕಂಡಕೂಡಲೆ ಅಂತವನ್ನು ಕಂಡುಹಿಡಿಯಬಹುದೆಂಬುದು ನಮಗೆ ಗೊತ್ತೇ ಇದೆ; ಇದಕ್ಕೆ ವಿಪರ್ಯಯವಾಗಿ ಅಂತವನ್ನು ಕಂಡುಕೊಂಡರೆ ಆದಿಯನ್ನು ಕಂಡುಹಿಡಿಯಬಹುದೆಂದು ಹೇಳಬಹುದು. ಇದು ನಿಜವಾದರೆ ಜೀವಾಣುವಿನಿಂದ ಹಿಡಿದು ಪರಿಪೂರ್ಣನಾದ ಮಾನವನಿರುವ **ಕೋಟಿಯ**ವರೆಗಿನ ಇಡಿಯ ಶ್ರೇಣಿಯನ್ನು ತೆಗೆದುಕೊಂಡರೆ ಇದೆಲ್ಲವೂ ಒಂದೇ ಪ್ರಾಣವೆಂದು ಹೇಳಬಹುದಾಗುತ್ತದೆ. ಕೊನೆಯಲ್ಲಿ ಪರಿಪೂರ್ಣನಾದ ಮಾನವನು ಇರುತ್ತಾನೆ, ಆದ್ದರಿಂದ ಮೊದಲೂ ಅವನೇ ಇದ್ದುಕೊಂಡಿರಬೇಕಾಯಿತು. ಆದ್ದರಿಂದ ಜೀವಾಣುವೆಂಬುದು ತೀರ ಮೇಲ್ತರದ ಬುದ್ಧಿಯ ಸಂಕುಚಿತರೂಪವಾಗಿರಬೇಕು. ಅದು ನಿಮಗೆ ಕಾಣಿಸದೆ ಇರಬಹುದು, ಆದರೆ ಆ ಸಂಕುಚಿತವಾದ ಬುದ್ಧಿಯೇ ಬಿಚ್ಚಿಕೊಳ್ಳುತ್ತಾ ಕೊನೆಗೆ ಅತ್ಯಂತಪರಿಪೂರ್ಣ ಮಾನವನಲ್ಲಿ ಕಾಣಿಸಿಕೊಳ್ಳುತ್ತದೆ ಅದನ್ನು ಶಾಸ್ತ್ರೀಯವಾಗಿ ಸಿದ್ಧಪಡಿಸಿಕೊಡಬಹುದಾಗಿರುತ್ತದೆ. **ಶಕ್ತಿಸತ್ಕಾರ್ಯವಾದ**ವೆಂಬುದು* ನಿಜವಾದರೆ ಯಾವ ಯಂತ್ರದಿಂದಲೂ ಅದರಲ್ಲಿ ನಾವು ಮೊದಲೇ ಹಾಕದಿರುವ ಶಕ್ತಿಯನ್ನು ತೆಗೆಯುವದಕ್ಕೆ ಆಗಲಾರದು. ಒಂದಾನೊಂದು ಎಂಜಿನ್ನಿನಿಂದ ಎಷ್ಟು ಕೆಲಸಮಾಡಿಸಬಹುದೆಂದರೆ 'ನೀರು, ಕಲ್ಲಿದ್ದಲು- ಇವುಗಳ ರೂಪದಲ್ಲಿ ಅದರೊಳಗೆ ಎಷ್ಟು ಶಕ್ತಿ ಹಾಕಿರುವೆವೋ ಅಷ್ಟೇ, ಹೆಚ್ಚೂ ಇಲ್ಲ ಕಡಿಮೆಯೂ ಇಲ್ಲ. ನಾನು ಈಗ ಮಾಡುತ್ತಿರುವ ಕೆಲಸವು ಗಾಳಿ, ಆಹಾರ- ಮುಂತಾದ ರೂಪದಿಂದ ನನ್ನೊಳಗೆ ನಾನು ಎಷ್ಟು ಹಾಕಿಕೊಂಡಿದ್ದೇನೋ ಅಷ್ಟೇ ಆಗಿರುತ್ತದೆ. ಈ ವಿಶ್ವದ ಆಡಳಿತದಲ್ಲಿ ಒಂದು ಅಣುವಿನಷ್ಟು ವಸ್ತುವನ್ನಾಗಲಿ ಅಥವಾ ಒಂದು ಫುಟ್‌ಪೌಂಡ್@ ಶಕ್ತಿಯನ್ನಾಗಲಿ ಕಡಿಮೆ ಮಾಡುವದಕ್ಕೂ ಆಗುವದಿಲ್ಲ.# ಹೀಗಿದ್ದರೆ ಈ ಬುದ್ಧಿಯೆಂಬುದು ಯಾವದು? ಅದು ಜೀವಾಣುವಿನಲ್ಲಿಲ್ಲದಿದ್ದರೆ ಅದು ಇದ್ದಕ್ಕಿದ್ದ ಹಾಗೆಯೇ ಹೇಗೋ ಬಂದಿರಬೇಕು, ಶೂನ್ಯದಿಂದ ಯಾವದೋ ಒಂದುಂಟಾಗುವದೆಂದಾಗಬೇಕು. ಆದರೆ ಇದು

* ವಿಶ್ವದಲ್ಲಿರುವ ಶಕ್ತಿ ಸಮಷ್ಟಿಯು ಇಂತಿಷ್ಟೇ ಇರಬೆಕೆಂಬ ನಿಯಮವುಂಟು; ನಮ್ಮ ಸುತ್ತಮುತ್ತಲೂ ಎಷ್ಟೇ ಮಾರ್ಪಾಡುಗಳು ಆಗುತ್ತಿರಲಿ, ಶಕ್ತಿ ರಾಶಿಯ ಪರಿಮಾಣವು ಎಂದಿಗೂ ಮಾರ್ಪಡದು- ಎಂಬ ನಿಯಮಕ್ಕೆ ಶಕ್ತಿ ಸತ್ಕಾರ್ಯ ನಿಯಮ (Law of Conservation of Energy) ಎಂದು ಹೆಸರು; ಈ ನಿಯಮದ ವಿಷಯದಲ್ಲಿ ಈಗ ಭಿನ್ನಾಭಿಪ್ರಾಯವಿದೆ. ಆದರೂ ವೇದಾಂತತತ್ತ್ವಕ್ಕೇನೂ ಅದರಿಂದ ಹಾನಿಯಾಗುವದಿಲ್ಲ.

@ ಒಂದು ಪೌಂಡ್ ತೂಕದ ವಸ್ತುವನ್ನು ಒಂದು ಫೂಟು (ಅಡಿ) ಎತ್ತರಕ್ಕೆ ಎತ್ತುವಷ್ಟು ಶಕ್ತಿಯನ್ನು ಒಂದು ಫಟ್‌ಪೌಂಡ್ ಶಕ್ತಿಯೆಂದು ವಿಜ್ಞಾನಶಾಸ್ತ್ರದಲ್ಲಿ ಕರೆಯುತ್ತಾರೆ.

ಯುಕ್ತವಲ್ಲ. ಆದ್ದರಿಂದ ನಿಶ್ಚಿತವಾಗಿ ಏನು ಸಿದ್ಧವಾಯಿತೆಂದರೆ, ಪರಿಪೂರ್ಣನಾದ ಮಾನವನು, ಸ್ವತಂತ್ರನಾದ ಮಾನವನು, ಎಂದರೆ ಪ್ರಕೃತಿನಿಯಮಗಳನ್ನೆಲ್ಲ ಮೀರಿ ಎಲ್ಲಕ್ಕೂ ಅತೀತನಾಗಿ ಈ ವಿಕಾಸ ವ್ಯಾಪಾರಕ್ಕೆ ಮತ್ತೆ ಒಳಗಾಗುವದಿಲ್ಲದೆ ಇರುವ, ಜನನಮರಣಗಳ ಕೋಟಲೆಯಿಲ್ಲದೆ ಇರುವ ಮಾನವನು, ಕ್ರಿಸ್ತಿಯನರು 'ಕ್ರೈಸ್ತಮಾನವ'ನೆಂದೂ ಭೌದ್ಧರು 'ಬುದ್ಧಮಾನವ'ನೆಂದೂ ಯೋಗಿಗಳು 'ಮುಕ್ತ'ನೆಂದೂ ಕರೆಯುತ್ತಿರುವ ವಿಕಾಸಶೃಂಖಲೆಯ ಕೊನೆಯ ಕೊಂಡಿಯಾಗಿರುವ ಪರಿಪೂರ್ಣಮಾನವನು, ಅದೇ ಶೃಂಖಲೆಯ ಮತ್ತೊಂದು ಕೊಂಡಿಯಾಗಿ ಜೀವಾಣುವಿನ ಮೂಲಜೀವಕೋಶದಲ್ಲಿ ಸಂಕುಚಿತನಾಗಿದ್ದನೆಂದು ಸ್ಪಷ್ಟವಾಗುತ್ತದೆ.

ಈ ಇಡಿಯ ವಿಶ್ವಕ್ಕೇ ಈ ಯುಕ್ತಿಯನ್ನು ಜೋಡಿಸಿದರೆ, ಚೈತನ್ಯವೇ ಸೃಷ್ಟಿಗೆ ಈಶ್ವರನಾಗಿ ಕಾರಣವಾಗಿರಬೇಕೆಂದು ಕಂಡುಬರುತ್ತದೆ. ಈ ವಿಶ್ವದ ವಿಷಯಕ್ಕೆ ಮನುಷ್ಯನಿಗೆ ಉಂಟಾಗಿರುವ ಅತ್ಯಂತ ವಿಕಸಿತಭಾವವು ಯಾವದು? ಅದೇ ಜ್ಞಾನವು, ಒಂದು ಭಾಗವು ಮತ್ತೊಂದು ಹೊಂದುಗೆಯಾಗಿರುವದು, ವಿಜ್ಞಾನದ ಅಭಿವ್ಯಕ್ತಿಯು, ಪ್ರಾಚೀನರ ರಚನಾಸಿದ್ಧಾಂತವಾದವೆಂಬುದು* ಇದನ್ನು ತಿಳಿಸುವ ಪ್ರಯತ್ನವೇ ಆಗಿತ್ತು. ಆದ್ದರಿಂದ ಆದಿಯು ಜ್ಞಾನಸ್ವರೂಪವಾಗಿತ್ತು. ಮೊಟ್ಟಮೊದಲು ಆ ಜ್ಞಾನವು ಸಂಕುಚಿತವಾಗಿರುತ್ತದೆ, ಕೊನೆಯಲ್ಲಿ ಅದು ವಿಕಸಿತವಾಗುತ್ತದೆ. ಆದ್ದರಿಂದ ಈ ವಿಶ್ವದಲ್ಲಿ ಕಾಣಬರುವ ಜ್ಞಾನಸಮಷ್ಟಿಯು ಸಂಕುಚಿತವಾದ ವಿಜ್ಞಾನ ಸಾಮಾನ್ಯದ ವಿಕಾಸವೇ ಎಂದಾಯಿತು. ಈ ವಿಜ್ಞಾನ ಸಾಮಾನ್ಯವೇ ನಾವು ಈಶ್ವರನೆಂಬುದು, ಇದಕ್ಕೆ ಮತ್ತೆ ಯಾವ ಹೆಸರನ್ನಾದರೂ ಕೊಡಿರಿ. ಮೊಟ್ಟಮೊದಲು ಆ ಅನಂತವಾದ ವಿಜ್ಞಾನ ಸಾಮಾನ್ಯವು ಇದ್ದುಕೊಂಡಿರುವದೆಂಬುದು ಕಡುಖಂಡಿತವಾಗಿರುತ್ತದೆ. ಈ ವಿಜ್ಞಾನ ಸಾಮಾನ್ಯವು ಸಂಕುಚಿತವಾಗಿ, ಹೊರತೋರಿಕೊಂಡು ವಿಕಾಸವಾಗುತ್ತಾ ಕೊನೆಗೆ ಅದು ಪರಿಪೂರ್ಣ ಮಾನವನಾಗುತ್ತದೆ, 'ಕ್ರೈಸ್ತಮಾನವ'ನಾಗುತ್ತದೆ, 'ಬುದ್ಧಮಾನವ'ನಾಗುತ್ತದೆ. ಆದ್ದರಿಂದ ಎಲ್ಲಾ ಧರ್ಮಗ್ರಂಥಗಳೂ "ಆತನಲ್ಲಿಯೇ ನಾವು ಜೀವಿಸಿರುತ್ತೇವೆ, ವ್ಯವಹರಿಸುತ್ತೇವೆ, ನಮ್ಮ ಇರವನ್ನು ಪಡೆದಿರುತ್ತೇವೆ"#

# ವಸ್ತು ಸತ್ಕಾರ್ಯವಾದ (Conservation of Matter), ಶಕ್ತಿಸತ್ಕಾರ್ಯವಾದ (Conservation of energy) - ಎಂಬ ವಾದಗಳನ್ನು ಹತ್ತೊಂಬತ್ತನೆಯ ಶತಮಾನದ ಭೌತಿಕ ವಿಜ್ಞಾನಶಾಸ್ತ್ರಜ್ಞರು ಪರಮಸಿದ್ಧಾಂತವಾಗಿ ಭಾವಿಸಿದ್ದರು. ಈಗ ಇವುಗಳ ವಿಷಯಕ್ಕೆ ಶಾಸ್ತ್ರಜ್ಞರ ಅಭಿಪ್ರಾಯವು ಸ್ವಲ್ಪ ಭಿನ್ನವಾಗಿದೆ.

* ವಿಭಾಗಗಳು ಒಂದೊಕ್ಕೊಂದು ಹೊಂದಿಗೆಯಾಗಿರುವದರಿಂದಲೂ ಪ್ರಯೋಜನಕ್ಕೆ ತಕ್ಕಂತೆ ಸಾಧನಗಳು ಏರ್ಪಟ್ಟಿರುವದರಿಂದಲೂ ಈಶ್ವರನ ಸಂಕಲ್ಪವು ವ್ಯಕ್ತವಾಗುವದೆಂದು ಹೇಳುವವರವಾದವು. ಇದನ್ನು ಇಂಗ್ಲಿಷಿನಲ್ಲಿ "Design Theory" ಎನ್ನುತ್ತಾರೆ.

(ಬೈಬಲ್) ಎಂದು ಹೇಳುತ್ತಿರುವವು. ಆದ್ದರಿಂದಲೇ ನಾವು ಈಶ್ವರನಿಂದ ಬಂದಿರುತ್ತೇವೆಂದೂ ಈಶ್ವರನನ್ನೇ ಕುರಿತು ಹಿಂತೆರಳುವೆವೆಂದೂ ಎಲ್ಲಾ ಧರ್ಮಗ್ರಂಥಗಳೂ ಹೇಳುತ್ತಿರುವವು. ಕೇವಲ ಪಾರಿಭಾಷಿಕ ಶಬ್ದಗಳನ್ನು ನೋಡಿ ಅಂಜಿಕೆಯಾಗುವದಾದರೆ ನೀವು ತತ್ತ್ವಜಿಜ್ಞಾಸುಗಳಾಗಲು ಅರ್ಹರಲ್ಲ. ಧರ್ಮವಾದಿಗಳು ಈಶ್ವರನೆಂದು ಕರೆಯುವದು ಈ ವಿಜ್ಞಾನ ಸಾಮಾನ್ಯವನ್ನೇ.

ನನ್ನನ್ನು ಜನರು "ಆ ದೇವರೆಂಬ ಹಳೆಯ ಮಾತನ್ನು ಏಕೆ ಉಪಯೋಗಿಸುತ್ತೀರಿ?" ಎಂದು ಮತ್ತೆ ಮತ್ತೆ ಕೇಳುತ್ತಾರೆ. ಏಕೆಂದರೆ ಇದೇ ನಮ್ಮ ಅಭಿಪ್ರಾಯವನ್ನು ತಿಳಿಸುವದಕ್ಕೆ ತಕ್ಕ ಅತ್ಯಂತೋತ್ತಮವಾದ ಶಬ್ದವು: ಅದಕ್ಕಿಂತ ಉತ್ತಮವಾದ ಶಬ್ದವು ಸಿಕ್ಕಲೇ ಆರದು. ಏಕೆಂದರೆ ಮಾನವವರ್ಗದ ಆಶೆಗಳು, ಪ್ರತೀಕ್ಷೆಗಳು, ಸುಖ-ಇವೆಲ್ಲವೂ ಆ ಒಂದು ಶಬ್ದವನ್ನು ಕೇಂದ್ರೀಕರಿಸಿಕೊಂಡು ನಿಂತಿರುತ್ತವೆ. ಆ ಮಾತನ್ನು ಬಿಟ್ಟು ಬೇರೊಂದನ್ನು ಈಗ ಉಪಯೋಗಿಸುವದೆಂಬುದು ಆಗುವ ಹಾಗೆಯೇ ಇಲ್ಲ. ಇಂಥ ಶಬ್ದಗಳನ್ನು ಮೊಟ್ಟಮೊದಲು ಮಹಾಮಹಾತ್ಮರುಗಳು ನಿರ್ಮಿಸಿದರು; ಅವರಿಗೆ ಅವುಗಳ ಅವಯವಾರ್ಥವು ಮನದಟ್ಟಾಗಿತ್ತು. ಅವುಗಳ ಅರ್ಥವು ಚೆನ್ನಾಗಿ ಗೊತ್ತಿತ್ತು. ಆದರೆ ಜನಸಮಾಜದಲ್ಲಿ ಇಂಥ ಮಾತುಗಳು ಬಳಕೆಯಾದ ಹಾಗೆಲ್ಲ ಮೂಢರು ಅವುಗಳನ್ನು ಉಪಯೋಗಿಸುವದಕ್ಕೆ ಮೊದಲು ಮಾಡಲು ಅವುಗಳ ಭಾವವೂ ಮಹಿಮೆಯೂ ಹೋಗಿಬಿಡುತ್ತದೆ. ದೇವರೆಂಬ ಮಾತನ್ನು ಅನಾದಿಕಾಲದಿಂದಲೂ ಉಪಯೋಗಿಸುತ್ತಾ ಬಂದಿರುತ್ತಾರೆ. ಆ ಮಾತಿನಲ್ಲಿ ಈ ವಿಜ್ಞಾನ ಸಾಮಾನ್ಯವೂ ಅತ್ಯಂತಮಹತ್ತೂ ಪವಿತ್ರವೂ ಆದದ್ದೆಲ್ಲವೂ ಸೇರಿಕೊಂಡುಬಿಟ್ಟಿದೆ. ಹೀಗಿರುವಲ್ಲಿ ಯಾವನೋ ಒಬ್ಬ ಅವಿವೇಕಿಯು ಅದು ಸರಿಯಲ್ಲವೆಂದು ಹೇಳಿದ ಮಾತ್ರದಿಂದ ಅದನ್ನು ನಾವು ಎಸೆದುಬಿಡಬೇಕೇನು? ಮತ್ತೊಬ್ಬನು ಬಂದು 'ನನ್ನ ಶಬ್ದವನ್ನುಪಯೋಗಿಸಿರಿ' ಎನ್ನಬಹುದು. ಮಗುದೊಬ್ಬನು 'ನನ್ನ ಶಬ್ದವನ್ನು ಉಪಯೋಗಿಸಿರಿ' ಎನ್ನಬಹುದು. ಆಗ ಅಂಥ ಅವಿವೇಕದ ಮಾತುಗಳಿಗೆ ಕೊನೆಯೇ ಇಲ್ಲದಂತಾಗುವದು. ಆದ್ದರಿಂದ ಹಳೆಯ ಮಾತನ್ನೇ ಉಪಯೋಗಿಸಿರಿ; ಆದರೆ ಅದನ್ನು ಭಾವಗರ್ಭಿತವಾಗಿಯೇ ಉಪಯೋಗಿಸಿರಿ. ಅದರಲ್ಲಿರುವ ಅಂಧ ಶ್ರದ್ಧೆಯನ್ನೆಲ್ಲಾ ಒರಸಿಹಾಕಿರಿ. ಈ ಪುರಾತನವಾದ ಮಹಾಶಬ್ದದ ಅರ್ಥವೇನೆಂಬುದನ್ನು ಚೆನ್ನಾಗಿ ಮನವರಿಕೆಮಾಡಿಕೊಳ್ಳಿರಿ. ಸಾಹಚರ್ಯ

# ತೈತ್ತಿರೀಯ 3-1, ಛಾಂದೋಗ್ಯ 6-8-4 ಮುಂತಾದ ಉಪನಿಷದ್ವಾಕ್ಯಗಳನ್ನೂ ಇಲ್ಲಿ ಉದಾಹರಿಸಬಹುದು.

ನಿಯಮದ* ಶಕ್ತಿಯನ್ನು ತಿಳಿದುಕೊಂಡಾಗ ನಿಮಗೆ ಈ ಮಾತುಗಳಿಗೂ ಅಸಂಖ್ಯಾತರಾದ ಗಂಭೀರವಾದ ಓಜಸ್ವಿಯಾದ ಭಾವಗಳಿಗೂ ಸಂಬಂಧವಾಗಿ ಬಿಟ್ಟಿರುವದೆಂಬುದು ಗೊತ್ತಾಗುತ್ತದೆ. ಈ ಶಬ್ದಗಳನ್ನು ಲಕ್ಷಗಟ್ಟಲೆಯ ಮಾನವರು ಬಳಸಿ ಗೌರವಿಸಿರುತ್ತಾರೆ; ಅತ್ಯಂತ ಉತ್ಕೃಷ್ಟವಾದದ್ದೆಲ್ಲವನ್ನೂ ಅತ್ಯಂತ ಉತ್ತಮವಾದದ್ದೆಲ್ಲವನ್ನೂ ಅತ್ಯಂತ ಯುಕ್ತಿಯುಕ್ತವಾದದ್ದೆಲ್ಲವನ್ನೂ ಪ್ರಿಯವಾದದ್ದೆಲ್ಲವನ್ನೂ ಮಾನವಸ್ವಭಾವದಲ್ಲಿ ಹೆಚ್ಚಿನದಾಗಿ ಅದ್ಭುತವೆನಿಸಿರುವದೆಲ್ಲವನ್ನೂ ಅವುಗಳಿಗೆ ಸಂಬಂಧಿಸಿರುತ್ತಾರೆ. ಆ ಮಾತುಗಳು ಈ ಸಂಬಂಧ ವಿಶೇಷಗಳ ಸೂಚಕಗಳಾಗಿರುತ್ತವೆಯಾದ್ದರಿಂದ ಅವುಗಳನ್ನು ಕೈಬಿಡುವದು ಆಗಲಾರದು. ಇದೆಲ್ಲವನ್ನೂ ತಿಳಿಸುವದಕ್ಕೆಂದು ನಾನು ಸುಮ್ಮನೆ ದೇವರು ವಿಶ್ವವನ್ನು ಸೃಷ್ಟಿಸಿದವನು' ಎಂದಿಷ್ಟೇ ಹೇಳಿದ್ದರೆ ಅದಕ್ಕೇನೂ ನಿಮಗೆ ಅರ್ಥವಾಗುತ್ತಿರಲಿಲ್ಲ. ಇದು ಹೇಗಾದರೂ ಇರಲಿ, ಇಷ್ಟೆಲ್ಲಾ ಹೆಣಗಾಟದವಾದ ಮೇಲೆ ಕೊನೆಗೆ ನಾವು ಆತನ ಬಳಿಗೇ, ಆ ಪುರಾಣನಾದ ಪರಮೇಶ್ವರನ ಬಳಿಗೇ ಬಂದಂತಾಗಿರುತ್ತದೆ.

ಭೌತಿಕವಸ್ತು, ಮನೋವೃತ್ತಿ, ಶಕ್ತಿ, ವಿಜ್ಞಾನ-ಮುಂತಾದ ವಿಶ್ವಶಕ್ತಿಯ ಬಗೆಬಗೆಯ ರೂಪವಿಶೇಷಗಳೆಲ್ಲ ಆ ಒಂದು ವಿಶ್ವಚೈತನ್ಯದ ವಿಭೂತಿ ಮಾತ್ರವೆಂದೂ ನಮಗೆ ಈಗ ಗೊತ್ತಾಯಿತಷ್ಟೆ.. ಇನ್ನು ಮೇಲೆ ಈ ವಿಶ್ವಚೈತನ್ಯವನ್ನು ಇನ್ನು ಮುಂದೆ ನಾವು ಪರಮೇಶ್ವರನೆಂದು ಕರೆಯೋಣ. ನಮಗೆ ಕಾಣಿಸುವದೆಲ್ಲವೂ, ನಮ್ಮ ಮನಸ್ಸಿಗೆ ತೋರುವದೆಲ್ಲವೂ, ಅಥವಾ ಕೇಳಿಸುವದೆಲ್ಲವೂ ಈ ಇಡಿಯ ವಿಶ್ವವೇ, ಆತನು ಹುಟ್ಟಿಸಿದ್ದು, ಅಥವಾ ಇನ್ನೂ ಸ್ವಲ್ಪ ಕರಾರುವಾಕವಾಗಿ ಹೇಳಿದರೆ ಇದೆಲ್ಲವೂ ಆತನ ಸೃಷ್ಟಿಯು; ಅಥವಾ ಇನ್ನೂ ಯುಕ್ತಿಯುಕ್ತವಾಗಿ ಹೇಳುವದಾದರೆ ಆ ಪರಮೇಶ್ವನೇ ಇದು. ಸೂರ್ಯನಾಗಿಯೂ ನಕ್ಷತ್ರಗಳಾಗಿಯೂ ಹೊಳೆಯುತ್ತಿರುವಾತನು ಆತನೇ: ಆತನೇ ಭೂಮಾತೆಯು, ಆತನೇ ಸಾಗರವು, ಆತನೇ ಹೂಮಳೆಯಾಗಿ ಸುರಿಯುತ್ತಾನೆ, ನಾವು ಉಚ್ಛ್ವಾಸಕ್ಕೆ ತೆಗೆದುಕೊಳ್ಳುವ ಶಾಂತವಾಯುವು ಆತನೇ, ಶರೀರದಲ್ಲಿ ಶಕ್ತಿರೂಪದಿಂದ ವ್ಯಾಪಾರಮಾಡುತ್ತಿರುವವನೂ ಆತನೇ. ಮಾತನಾಡಿದ ಮಾತೂ ಆತನೇ, ಮಾತನಾಡುತ್ತಿರವವನೂ ಆತನೇ, ಇಲ್ಲಿ ಎದುರಿಗೆ ಕೇಳುತ್ತಿರುವ ಸಭಿಕರೂ ಆತನೇ. ನಾನು ನಿಂತಿರುವ ಈ ಪೀಠವೂ ಆತನೇ, ನಿಮ್ಮಗಳ ಮುಖವನ್ನು ನನಗೆ ತೋರಿಸುವ ಬೆಳಕೂ ಆತನೇ. ಇದೆಲ್ಲ ಆತನೇ. ಈ ವಿಶ್ವಕ್ಕೆ ಉಪಾದಾನಕಾರಣನೂ ಆತನೇ, ನಿಮಿತ್ತ ಕಾರಣನೂ ಆತನೇ, ಅತ್ಯಂತ ಸೂಕ್ಷ್ಮವಾದ ಜೀವಾಣುವಿನಲ್ಲಿ

* ಒಂದು ಶಬ್ದವನ್ನುಚ್ಚರಿಸಿದ ಕೂಡಲೆ ಅದರ ಸಂಬಂಧವಾದ ಪದಾರ್ಥದ ಅನೇಕ ವಿಷಯಗಳು ನಮಗೆ ನೆನಪಿಗೆ ಬರುವವೆಂಬ ನಿಯಮವನ್ನು ಇಲ್ಲಿ ಸಾಹಚರ್ಯನಿಯಮವೆಂದು ಕರೆದಿದೆ.

ಸಂಕುಚಿತನಾಗಿರುವವನೂ ಆತನೇ, ಮತ್ತೆ ವಿಕಾಸವಾಗಿ ಈಶ್ವರನಾಗುವವನೂ ಆತನೇ, ಕೆಳಕ್ಕಿಳಿದು ಅತ್ಯಂತ ಸೂಕ್ಷ್ಮವಾದ ಪರಮಾಣುವಾಗುವವನೂ ಆತನೇ, ಮತ್ತು ಮೆಲ್ಲಮೆಲ್ಲಗೆ ತನ್ನ ರೂಪವನ್ನು ಬಿಚ್ಚಿಕೊಂಡು ತನ್ನನ್ನೇ ಸೇರಿಕೊಳ್ಳುವವನೂ ಆತನೇ, ಇದೇ ಈ ವಿಶ್ವದ ರಹಸ್ಯವು. "ನೀನೇ ಗಂಡಸು, ನೀನೇ ಹೆಂಗಸು, ನೀನೇ ಯೌವನಭರದಿಂದ ಓಡಾಡುವ ಕುಮಾರನು, ಮತ್ತು ಕುಮಾರಿಯು: ಮುಪ್ಪಿನಿಂದ ಕೋಲು ಹಿಡಿದುಕೊಂಡು ಹೊಯ್ದಾಡುತ್ತಾ ನಡೆಯುವ ಮುದುಕನೂ ನೀನೇ, ಎಲ್ಲದರಲ್ಲಿಯೂ ಇರುವೆ, ಎಲೈ ಪರಮೇಶ್ವರನೆ, ನೀನು ಎಲ್ಲವೂ ಆಗಿರುವೆ" (ಶ್ವೇ. 4,3). ಮಾನವನ ಬುದ್ಧಿಗೆ ತೃಪ್ತಿಯನ್ನು ಕೊಡುವಂತೆ ವಿಶ್ವದ ತೊಡಕನ್ನು ಬಿಚ್ಚುವದಕ್ಕೆ ಇದೊಂದೇ ಸರಿಯಾದ ಕ್ರಮವು. ಒಂದೇ ಮಾತಿನಲ್ಲಿ ಹೇಳಿದರೆ: "ನಾವು ಆತನಿಂದಲೇ ಹುಟ್ಟಿರುವೆವು, ನಾವು ಆತನಲ್ಲಿಯೇ ಬದುಕಿರುವೆವು, ಆತನಲ್ಲಿಯೇ ನಾವು ಸೇರುವೆವು"

----------

# 12. ಪ್ರಪಂಚ-ಪಿಂಡಾಂಡ

ಮಾನವನಮನಸ್ಸು ಸ್ವಭಾವದಿಂದಲೇ ಹೊರಗೆ ಹಾಯಬೇಕೆನ್ನುತ್ತಿರುವದು, ಶರೀರದಿಂದಾಚೆಗೆ ಇಂದ್ರಿಯದ್ವಾರಗಳಿಂದ ಇಣಿಕಿನೋಡಬೇಕೆನ್ನುವದೋ ಎನ್ನುವಂತಿರುವದು. ಕಣ್ಣು ನೋಡಬೇಕು, ಕಿವಿಯು ಕೇಳಬೇಕು, ಇಂದ್ರಿಯಗಳು ಹೊರಗಿನ ಪ್ರಪಂಚವನ್ನೆಲ್ಲ ಸನ್ನಿಕರ್ಷದಿಂದ ಅರಿಯಬೇಕು. ಆದ್ದರಿಂದ ಸ್ವಾಭಾವಿಕವಾಗಿಯೇ ಪ್ರಕೃತಿಯ ಸೌಂದರ್ಯಗಳೂ ಘನತೆಗಳೂ ಮೊಟ್ಟಮೊದಲೇ ಮನುಷ್ಯನ ಚಿತ್ತವನ್ನು ತಮ್ಮ ಕಡೆಗೆ ಸೆಳೆಯುತ್ತವೆ. ಮಾನವನ ಮನದಲ್ಲಿ ಮೊಟ್ಟಮೊದಲು ತೋರಿಕೊಂಡ ಆಲೋಚನೆಗಳು ಬಾಹ್ಯ ಪ್ರಪಂಚದ ವಿಷಯವಾಗಿಯೇ ಇರುತ್ತಿದ್ದವು. ಆಕಾಶದ, ನಕ್ಷತ್ರಗಳ, ಗ್ರಹಗಳ, ಭೂಮಿಯ, ನದಿಗಳ, ಪರ್ವತಗಳ, ಸಾಗರದ ರಹಸ್ಯವೇನೆಂಬುದನ್ನು ಬಿಚ್ಚುವದಕ್ಕೆ ಮೊದಲು ಜನರು ಹೊರಟರು. ಆದ್ದರಿಂದಲೇ ಪ್ರಾಚೀನ ಧರ್ಮಗಳಲ್ಲೆಲ್ಲ ಮಾನವನ ಮನಸ್ಸು ಅಲ್ಲಲ್ಲಿ ತಡಕಾಡುತ್ತಿದ್ದು ಮೊದಲು ಯಾವಯಾವದು ಹೊರಗೆ ಇತ್ತೋ ಅದೆಲ್ಲವನ್ನೂ ಹಿಡಿದುಕೊಳ್ಳುತ್ತಿತ್ತೆಂದು ಕಂಡುಬರುತ್ತದೆ. ಆಗ ನದೀದೇವತೆ, ಆಕಾಶದೇವತೆ, ಮೇಘದೇವತೆ, ಮಳೆಯ ದೇವತೆ- ಎಂದು ಬಗೆಬಗೆಯ ದೇವತೆಗಳಿದ್ದವು; ಹೊರಗೆ ಕಾಣುವ ಪ್ರತಿಯೊಂದೂ ಈಗ ನಾವು ಪ್ರಕೃತಿಯ ಶಕ್ತಿಗಳೆಂದು* ಕರೆಯುತ್ತಿರುವುಗಳಲ್ಲಿ ಪ್ರತಿಯೊಂದೂ ರೂಪಾಂತರವನ್ನು ಹೊಂದಿ ಬೇರೊಂದು ಆಕಾರವನ್ನು ತಳೆದು ಇಚ್ಛಾಶಕ್ತಿಯುಳ್ಳದ್ದಾಗಿಯೂ ದೇವತೆಯಾಗಿಯೂ ಸ್ವರ್ಗದ ದೂತನಾಗಿಯೂ ಮಾರ್ಪಟ್ಟಿತು. ವಿಚಾರವು ಒಳಹೊಕ್ಕು ನಡೆದಂತೆಲ್ಲ ಈ ಹೊರಗಿನ ರೂಪ ವಿಶೇಷಗಳು ಮಾನವನ ಮನಸ್ಸಿಗೆ ಸಾಕಾಗದೆ ಹೋದವು, ಆಮೇಲೆ ಈ ಶಕ್ತಿಯು ಒಳಕ್ಕೆ ತಿರುಗಿಕೊಂಡಿತು, ಆಮೇಲೆ ಮಾನವನ ಆತ್ಮದ ವಿಷಯಕ್ಕೇ ವಿಚಾರವು ನಡೆಯಿತು. ವಿಚಾರವು ಬ್ರಹ್ಮಾಂಡವನ್ನು ಬಿಟ್ಟು ಪಿಂಡಾಂಡದ ಕಡೆಗೆ ತೆರಳಿತು, ಆಧಿಭೌತಿಕದಿಂದ ವಿಚಾರವು ಆಧ್ಯಾತ್ಮಿಕಕ್ಕೆ ತಿರುಗಿತು. ಬಾಹ್ಯ ಪ್ರಕೃತಿಯನ್ನು ಬಿಚ್ಚಿನೋಡುವದರಿಂದ ಮನುಷ್ಯನು ಆಧ್ಯಾತ್ಮಿಕ ಪ್ರಕೃತಿಯನ್ನು ವಿಚಾರಮಾಡುವ ಕುತೂಹಲ ವುಳ್ಳವನಾಗುತ್ತಾನೆ. ಈ ಆಧ್ಯಾತ್ಮಿಕ ಪುರುಷನ ವಿಚಾರವು ಹೆಚ್ಚಿನ ನಾಗರೀಕತೆಯಿಂದ ಪ್ರಕೃತಿಯ ವಿಷಯದಲ್ಲಿ ಹೆಚ್ಚು ಸೂಕ್ಷ್ಮವಾದ ತಿಳಿವಳಿಕೆಯಿಂದ ಮುನ್ನಡೆಯಲ್ಲಿ ಹೆಚ್ಚಿನ ಸ್ಥಿತಿಯನ್ನು ಪಡೆಯುವದರಿಂದ, ಉಂಟಾಗುತ್ತದೆ.

* ಪ್ರಕೃತಿಯ ಶಕ್ತಿಗಳನ್ನೇ ದೇವತೆಗಳೆಂದು ಹಿಂದಿನವರು ಕರೆಯುತ್ತಿದ್ದರೆಂಬುದು ಈಗಿನ ಪುರಾತತ್ತ್ವ ಶೋಧಕರ ಅಭಿಪ್ರಾಯ. ಶಕ್ತಿಗಳೇ ಬೇರೆ, ಅಧಿಷ್ಠಾತೃದೇವತೆಗಳೇ ಬೇರೆ ಎಂದು ಪ್ರಾಚೀನ ವಿಮರ್ಶಕರು ಹೇಳುತ್ತಿದ್ದರು. ಬ್ರ.ಸೂ.ಭಾ.1-3-33ನ್ನು ನೋಡಿ.

ಈ ಸಾಯಂಕಾಲ ನಾವು ವಿಚಾರಮಾಡುವದು ಈ ಒಳಗಿನ ಪುರುಷನ ವಿಷಯದಲ್ಲಿ, ಈ ಒಳಗಿನ ಪುರುಷನ ವಿಚಾರದಷ್ಟು ಮಾನವನ ಹೃದಯಕ್ಕೆ ಅಚ್ಚುಮೆಚ್ಚಾಗಿರುವದು ಮತ್ತೆ ಯಾವದೂ ಇರುವದಿಲ್ಲ. ಈ ವಿಚಾರವನ್ನು ಎಷ್ಟು ದಹಲಕ್ಷಗಟ್ಟಲೆಯಾಗಿ, ಎಷ್ಟು ದೇಶಗಳಲ್ಲಿ ಮಾಡಿರುತ್ತಾರೆ, ನೋಡಿ! ಋಷಿಗಳೂ ದೊರೆಗಳೂ ಹಣವಂತರೂ ಬಡವರೂ ಮಹಾತ್ಮರೂ ಪಾಪಿಗಳೂ ಪ್ರತಿಯೊಬ್ಬ ಪುರುಷನೂ ಪ್ರತಿಯೊಬ್ಬ ಸ್ತ್ರೀಯೂ ಈ ಪ್ರಶ್ನೆಯನ್ನು ಆಗಿಂದಾಗ್ಗೆ ಕೇಳುತ್ತ ಬಂದಿರುತ್ತಾರೆ; "ಈ ನಶ್ವರವಾದ ಮಾನವನ ಬಾಳಿನಲ್ಲಿ ನಿತ್ಯವಾದದ್ದು ಯಾವದೊಂದೂ ಇಲ್ಲವೇ? ಈ ಶರೀರವು ಸತ್ತು ಹೋಗುವಾಗ ಸಾಯದೆ ಇರುವದು ಯಾವದೊಂದೂ ಇಲ್ಲವೆ? ಅಸ್ಥಿಪಂಜರವು ಮಣ್ಣಾದಬಳಿಕವೂ ಬದುಕಿರುವದು ಯಾವದೋ ಒಂದು ಇದೆಯಲ್ಲವೆ? ಬೆಂಕಿಯು ಶರೀರವನ್ನು ಸುಟ್ಟು ಬೂದಿಯಾಗಿಸಿದ ಮೇಲೆಯೂ ಉಳಿಯುವದು ಯಾವದೋ ಒಂದು ಇದೆಯಲ್ಲವೆ? ಅದು ಇರುವದಾದರೆ ಅದರ ಗತಿಯೇನು? ಅದು ಎಲ್ಲಿಗೆ ಹೋಗುತ್ತದೆ? ಅದು ಎಲ್ಲಿಂದ ಬಂತು? ಈ ಪ್ರಶ್ನೆಗಳನ್ನು ಮತ್ತೆ ಮತ್ತೆ ಕೇಳುತ್ತಲೇ ಬಂದಿರುತ್ತಾರೆ; ಈ ಸೃಷ್ಟಿಯು ಇರುವವರೆಗೂ, ವಿಚಾರಮಾಡಬಲ್ಲ ಮಾನವರ ಮೆದುಳು ಇರುವವರೆಗೂ, ಈ ಪ್ರಶ್ನೆಯನ್ನು ಕೇಳುತ್ತಲೇ ಇರಬೇಕಾಗುವದು.

ಹೀಗಿದ್ದರೂ ಈ ಪ್ರಶ್ನೆಗೆ ಉತ್ತರವೇ ಬರಲಿಲ್ಲವೆಂದಲ್ಲ, ಒಂದೊಂದು ಸಲವೂ ಉತ್ತರವು ಬಂದಿತು; ಕಾಲವು ಉರುಳಿಕೊಂಡುಹೋದಂತೆಲ್ಲ ಈ ಉತ್ತರವು ಸಬಲವಾಗುತ್ತಲೂ ಹೋಗುತ್ತದೆ. ಈ ಉತ್ತರವನ್ನು ಸಾವಿರಾರು ವರ್ಷಗಳ ಹಿಂದೆಯೇ ಸುನಿಶ್ಚಿತವಾಗಿ ಹೇಳಿಯೇ ಬಿಟ್ಟಿರುತ್ತದೆ, ಅಲ್ಲಿಂದೀಚೆಗೆ ಅದನ್ನೇ ಮತ್ತೆ ರೂಪಾಂತರದಲ್ಲಿ ಹೇಳುವದು,ಬೇರೆ ದೃಷ್ಟಾಂತಗಳಿಂದ ಸ್ಪಷ್ಟಗೊಳಿಸುವದು, ನಮ್ಮ ಬುದ್ಧಿಗೆ ಇನ್ನೂ ಚೆನ್ನಾಗಿ ಹಿಡಿಯುವಂತೆ ಮಾಡುವದು- ಹೀಗೆ ಮಾಡುತ್ತಾ ಬಂದಿರುತ್ತಾರೆ. ಆದ್ದರಿಂದ ನಾವು ಈಗ ಮಾಡಬೇಕಾದದ್ದೇನೆಂದರೆ, ಅದೇ ಉತ್ತರವನ್ನೇ ಮತ್ತೊಂದು ರೂಪದಲ್ಲಿಡುವದು. ಈ ಸರ್ವಚಿತ್ತಾಕರ್ಷಕವಾದ ಸಮಸ್ಯೆಗಳನ್ನು ಮತ್ತೊಂದು ಹೊಸ ರೀತಿಯಲ್ಲಿ ಬಿಡಿಸುತ್ತೇವೆಂದೇನೂ ನಾವು ಹೇಳುವದಿಲ್ಲ; ಆ ಪ್ರಾಚೀನತತ್ತ್ವವನ್ನು ಈಗಿನ ಭಾಷೆಯಲ್ಲಿಡುತ್ತೇವೆ, ಪ್ರಾಚೀನರ ವಿಚಾರಗಳನ್ನು ಈಗಿನವರ ಭಾಷೆಯಲ್ಲಿಡುತ್ತೇವೆ. ತತ್ತ್ವಜ್ಞಾನಿಗಳ ವಿಚಾರಗಳನ್ನು ಜನರ ಭಾಷೆಯಲ್ಲಿಡುತ್ತೇವೆ. ದೇವತೆಗಳ ವಿಚಾರಗಳನ್ನು ಮಾನವನ ಭಾಷೆಯಲ್ಲಿಡುತ್ತೇವೆ, ಪರಮೇಶ್ವರನ ವಿಚಾರಗಳನ್ನು ಸಾಮಾನ್ಯ ಮಾನವ ಬಾಷೆಯಲ್ಲಿಟ್ಟು ಮಾನವನಿಗೆ ತಿಳಿಯುವಂತೆ ಮಾಡುತ್ತೇವೆ. ಈ ಭಾವನೆಗಳು

ಯಾವ ಪರಮಾರ್ಥತತ್ತ್ವದಿಂದ ಹಿಂದೆ ಹೊರಟಮೋ ಅದೇ ತತ್ತ್ವವು ಎಂದೆಂದಿಗೂ ಮಾನವನ ಹೃದಯದಲ್ಲಿದ್ದುಕೊಂಡಿರುತ್ತದೆಯಾಗಿ ಅವನು ಅವನ್ನು ಯಾವಾಗಲೂ ತಿಳಿದುಕೊಳ್ಳಬಲ್ಲವನಾಗಿರುತ್ತಾನೆ.

ನಾನು ನಿಮ್ಮನ್ನು ನೋಡುತ್ತಿದೇನಷ್ಟೆ, ಈ ದೃಷ್ಟಿಗೆ ಎಷ್ಟು ಪದಾರ್ಥಗಳು ಬೇಕು? ಮೊದಲನೆಯದಾಗಿ ಕಣ್ಣುಗಳು ಬೇಕು; ಮಿಕ್ಕ ಎಲ್ಲಾ ವಿಷಯಗಳಲ್ಲಿ ಪರಿಪೂರ್ಣನಾಗಿದ್ದು ನನಗೆ ಕಣ್ಣುಗಳು ಇಲ್ಲದೇ ಇದ್ದರೆ ನನಗೆ ನೀವು ಕಾಣಿಸುವದೇ ಇಲ್ಲ. ಎರಡನೆಯದಾಗಿ ಚಕ್ಷುರಿಂದ್ರಿಯಗಳು ಬೇಕು; ಕಣ್ಣುಗಳೇ ಇಂದ್ರಿಯಗಳಲ್ಲ, ಅವು ಚಕ್ಷುರಿಂದ್ರಿಯಗಳ ಗೋಳಕಗಳು, ಅಷ್ಟೆ. ಅವುಗಳ ಹಿಂದೆ ಇಂದ್ರಿಯವಿದೆ, ಇಂದ್ರಿಯವೆಂದರೆ ಮೆದುಳಿನಲ್ಲಿರುವ ನರಗಳ ಸ್ಥಾನ ವಿಶೇಷವು.* ಆ ಸ್ಥಾನಕ್ಕೆ ಏನಾದರೂ ಅಪಾಯವಾದರೆ, ಮನುಷ್ಯನಿಗೆ ಅತ್ಯಂತ ಸ್ವಚ್ಛವಾದ ಕಣ್ಣುಗಳಿದ್ದರೂ ಅವನಿಗೆ ಏನು ಕಾಣಿಸಲಾರದು. ಆದ್ದರಿಂದ ಈ ಸ್ಥಾನವು ಅಥವಾ ನಿಜವಾದ ಇಂದ್ರಿಯ ಇರಬೇಕಾದದ್ದು ಅವಶ್ಯ. ಹೀಗೆಯೇ ಮಿಕ್ಕ ಇಂದ್ರಿಯಗಳಿಗೂ ಊಹಿಸಬೇಕು. ಹೊರಗಿನ ಕಿವಿಯೆಂಬುದು ಶಬ್ದ ಕಂಪನೆಯನ್ನು ಒಳಗಿರುವ ಸ್ಥಾನವಿಶೇಷಕ್ಕೊಯ್ಯುವ ಸಾಧನಮಾತ್ರವಾಗಿರುತ್ತದೆ. ಆದರೆ ಇಷ್ಟೇ ಸಾಲದು. ನಿಮ್ಮ ಪುಸ್ತಕಭಂಡಾರದಲ್ಲಿ ಕುಳಿತು ನೀವು ಒಂದು ಪುಸ್ತಕವನ್ನೋದುವದರಲ್ಲಿ ಮಗ್ನರಾಗಿದೀರೆಂದೂ, ಆಗ ಒಂದು ಗಡಿಯಾರವು ಹೊಡೆಯುತ್ತದೆಯೆಂದೂ ಇಟ್ಟುಕೊಳ್ಳಿರಿ. ಆದರೂ ಅದು ನಿಮಗೆ ಕೇಳಿಸುವದೇ ಇಲ್ಲ. ಶಬ್ದವೇನೋ ಇರುತ್ತದೆ. ವಾಯುವಿನಲ್ಲಿ ಆಗುವ ಕಂಪನೆಗಳೂ ಇವೆ. ಕಿವಿಯೂ ಇಂದ್ರಿಯವೂ ಇರುತ್ತವೆ; ಈ ಕಂಪನೆಗಳನ್ನು ಕಿವಿಯ ಮೂಲಕವಾಗಿ ಇಂದ್ರಿಯಸ್ಥಾನಕ್ಕೆ ಒಯ್ದುದ್ದೂ ಆಗಿರುತ್ತದೆ. ಆದರೂ ನಿಮಗೆ ಅದು ಕೇಳಿಸುವದಿಲ್ಲವಲ್ಲ! ಇಲ್ಲಿ ಯಾವುದರ ಕೊರತೆಯಿದೆ?– ಎಂದರೆ ಮನಸ್ಸಿರುವದಿಲ್ಲ. ಆದ್ದರಿಂದ ಇಲ್ಲಿ ಮನಸ್ಸೆಂಬ ಮೂರನೆಯ ವಸ್ತುವು ಇರಬೇಕೆಂದು ಕಂಡುಬರುತ್ತದೆ. ಮೊದಲನೆಯದಾಗಿ ಇಂದ್ರಿಯಗೋಳಕಗಳು, ಆಮೇಲೆ ಈ ಗೋಳಕಗಳೆಂಬ ಸಾಧನಗಳಿಂದ ವೇದನೆಯು ಯಾವ ಇಂದ್ರಿಯಕ್ಕೆ ಹೋಗುತ್ತದೆಯೋ ಅದು ಕೊನೆಯದಾಗಿ ಇಂದ್ರಿಯಕ್ಕೂ ಮನಸ್ಸಿಗೂ ಸಂಯೋಗವಾಗಬೇಕು. ಮನಸ್ಸಿಗೂ ಇಂದ್ರಿಯಕ್ಕೂ ಸಂಯೋಗವಾಗದೆ ಇದ್ದರೆ ಇಂದ್ರಿಯದಲ್ಲಿಯೂ ಕಿವಿಯಲ್ಲಿಯೂ ಹೊರಗಿನ ಪ್ರತಿಮುದ್ರೆಯಾದರೂ ನಮಗೆ ಅದರ ಅರಿವಾಗುವದಿಲ್ಲ– ಇನ್ನು ಮನಸ್ಸು ಕೂಡ ವೇದನೆಯನ್ನು ಒಯ್ಯುವ ಸಾಧನವೇ ಆಗಿರುತ್ತದೆ; ಅದು

* ನರಗಳ ಸ್ಥಾನವೇ ಇಂದ್ರಿಯವೆಂಬುದು ನಮ್ಮ ಪ್ರಾಚೀನಗ್ರಂಥಗಳಲ್ಲಿಲ್ಲ; ಇಂದ್ರಿಯಗಳ ವ್ಯಾಪಾರವು ನರಗಳ ಸ್ಥಾನದಲ್ಲಿ ಕಾಣಿಸಿಕೊಳ್ಳಬಹುದು, ಅಷ್ಟೆ.

ವೇದನೆಯನ್ನು ಇನ್ನೂ ಮುಂದಕ್ಕೆ ಒಯ್ದು ಬುದ್ಧಿಗೆ ಒಪ್ಪಿಸಬೇಕಾಗಿರುತ್ತದೆ. ಬುದ್ಧಿಯು ನಿಶ್ಚಯಮಾಡತಕ್ಕ ವೃತ್ತಿಯು. ಅದು ತನ್ನಲ್ಲಿಗೆ ಬಂದದ್ದನ್ನೆಲ್ಲ ಗೊತ್ತುಪಡಿಸುತ್ತದೆ. ಆದರೆ ಇದೂ ಸಾಲದು. ಬುದ್ಧಿಯೂ ಇದನ್ನು ಮುಂದಕ್ಕೊಯ್ದು ಶರೀರದಲ್ಲಿರುವ ಯಜಮಾನನಿಗೆ, ಸಿಂಹಾಸನದ ಮೇಲೆ ಕುಳಿತಿರುವ ಮಾನವ ಜೀವನೆಂಬ ದೊರೆಗೆ, ಒಪ್ಪಿಸಬೇಕು. ಅವನಿಗೆ ಇದು ಅರ್ಪಿತವಾಗುತ್ತಲೇ ಅವನಿಂದಲೇ ಯಾವದನ್ನು ಮಾಡಬೇಕು, ಯಾವದನ್ನು ಮಾಡಬಾರದು- ಎಂಬ ಬಗ್ಗೆ ಅಪ್ಪಣೆಯು ಹೊರಡುತ್ತದೆ. ಈ ಅಪ್ಪಣೆಯು ಮೇಲಿನಿಂದ ಕೆಳಕ್ಕೆ ಇದೇ ಕ್ರಮದಲ್ಲಿಯೇ, ಎಂದರೆ ಮೊದಲು ಬುದ್ಧಿಗೆ, ಆಮೇಲೆ ಮನಸ್ಸಿಗೆ, ಅಲ್ಲಿಂದ ಇಂದ್ರಿಯಗಳಿಗೆ, ಆಮೇಲೆ ಗೋಳಕಕ್ಕೆ ಬರುತ್ತದೆ. ಆಗ ಪ್ರತ್ಯಕ್ಷವು ಪರಿಪೂರ್ಣವಾಗುತ್ತದೆ.

ಗೋಳಕಗಳು ಹೊರಗಿನ ಶರೀರದಲ್ಲಿ, ಮನುಷ್ಯನ ಸ್ಥೂಲಶರೀರದಲ್ಲಿ, ಇರುತ್ತದೆ; ಆದರೆ ಮನಸ್ಸೂ ಬುದ್ಧಿಯೂ ಅಲ್ಲಿರುವದಿಲ್ಲ. ಹಿಂದೂ ತತ್ತ್ವ ಶಾಸ್ತ್ರದಲ್ಲಿ ಸೂಕ್ಷ್ಮ ಶರೀರವೆಂದೂ, ಕ್ರಿಸ್ತಿಯರ ಮತತತ್ತ್ವಶಾಸ್ತ್ರದಲ್ಲಿ ಮನುಷ್ಯನ ಅಧ್ಯಾತ್ಮಶರೀರವೆಂದೂ (Spiritual body) ಕರೆಯುವ ಶರೀರದಲ್ಲಿ ಅವುಗಳಿರುತ್ತವೆ. ಅದು ಈ ಶರೀರಕ್ಕಿಂತ ಸೂಕ್ಷ್ಮವಾಗಿ ಎಷ್ಟೋ ಹೆಚ್ಚು ಸೂಕ್ಷ್ಮವಾಗಿರುತ್ತೆ, ಆದರೆ ಅದು ಆತ್ಮನಲ್ಲ. ಆತ್ಮನು ಅವುಗಳೆಲ್ಲಕ್ಕೂ ಆಚೆ ಇರುತ್ತದೆ. ಹೊರಗಿನ ಶರೀರವು ಕೆಲವು ವರ್ಷಗಳಲ್ಲಿ ನಾಶವಾಗಿಬಿಡುತ್ತದೆ; ಯಾವದಾದರೊಂದು ಸಾಮಾನ್ಯ ಕಾರಣದಿಂದ ಅದಕ್ಕೆ ಅಸ್ವಾಸ್ಥ್ಯವಾಗಿ ಅದು ನಾಶವಾಗಿಬಿಡಬಹುದು. ಸೂಕ್ಷ್ಮ ಶರೀರವು ಅಷ್ಟು ಸುಲಭವಾಗಿ ನಾಶವಾಗುವದಿಲ್ಲ; ಆದರೂ ಅದು ಕೆಲವು ವೇಳೆ ಕಂದುತ್ತಲೂ ಕೆಲವು ವೇಳೆ ಬಲವಾಗುತ್ತಲೂ ಇರುತ್ತದೆ. ಮುದುಕನಲ್ಲಿ ಅದು ನಿರ್ಬಲವಾಗುವದೂ ಶರೀರವು ಸಬಲವಾಗಿರುವಾಗ ಅದು ಸಬಲವಾಗಿರುವದೂ ಔಷಧಿಗಳಿಂದಲೂ ಚಿಕಿತ್ಸೆಗಳಿಂದಲೂ ಅದು ಮಾರ್ಪಾಡನ್ನು ಹೊಂದುತ್ತಿರುವದೂ ಹೊರಗಿನ ಯಾವದೊಂದೇ ಆದರೂ ಅದರ ಮೇಲೆ ಪರಿಣಾಮವನ್ನುಂಟುಮಾಡುವದೂ ನಮಗೆ ತಿಳಿದಿರುವ ವಿಷಯ. ಶರೀರಕ್ಕೆ ಹೇಗೆ ಬೆಳವಣಿಗೆಯೂ ಕೃಶವಾಗುವದೂ ಉಂಟೋ ಹಾಗೆಯೇ ಮನಸ್ಸಿಗೂ ಉಂಟು; ಆದ್ದರಿಂದ ಮನಸ್ಸು ಆತ್ಮವಲ್ಲ. ಏಕೆಂದರೆ ಆತ್ಮಕ್ಕೆ ಬೆಳವಣಿಗೆಯೂ ಇಲ್ಲ, ಕೃಶವಾಗುವಿಕೆಯೂ ಇಲ್ಲ.

ಇದು ಹೇಗೆ ಗೊತ್ತು? ಈ ಮನಸ್ಸಿಗ ಆಧಾರವಾಗಿ ಇದರ ಹಿಂದೆ ಯಾವದೋ ಒಂದು ಇದ್ದು ಕೊಂಡಿದೆ ಎಂದು ನಾವು ತಿಳಿದುಕೊಳ್ಳುವದು ಹೇಗೆ? ಎಂದರೆ, ಸ್ವಯಂಪ್ರಕಾಶವಾದ ಅರಿವಿಗೆಲ್ಲ ಆಧಾರವಾದ ಜ್ಞಾನವು

ಜಡವಾದ ನಿಶ್ಚೇತನವಾದ ಭೌತಿಕವಸ್ತುವಿಗೆ ಸೇರಿದ ಧರ್ಮವಲ್ಲ. ಯಾವ ಸ್ಥೂಲಭೌತಿಕ ವಸ್ತುವೇ ಆಗಲಿ ಚೇತನಸ್ವರೂಪವಾಗಿದ್ದದ್ದು ಕಂಡಿಲ್ಲ. ಯಾವ ಜಡ ನಿರ್ಜೀವ ವಸ್ತುವೂ ತನ್ನನ್ನು ತಾನೇ ಬೆಳಗಿಕೊಳ್ಳಲಾರದು. ಜ್ಞಾನವೇ ಭೌತಿಕವಸ್ತುವನ್ನೆಲ್ಲ ಬೆಳಗಬಲ್ಲದು. ಜ್ಞಾನದ ಆಧಾರದಿಂದಲೇ ಈ ಸಭಾಂಗಣವು ನಿಂತಿರುವದು; ಏಕೆಂದರೆ ಯಾವದಾದರೊಂದು ಸಜ್ಞಾನಪ್ರಾಣಿಯು ಅದನ್ನು ನಿರ್ಮಾಣ ಮಾಡದೆ ಇದ್ದರೆ ಸಭಾಂಗಣರೂಪದಲ್ಲಿ ಅದರ ಸತ್ವವು ಯಾರಿಗೂ ಗೋಚರವಾಗುತ್ತಿರಲಿಲ್ಲ. ಈ ಶರೀರವು ಸ್ವಯಂಪ್ರಕಾಶವಲ್ಲ; ಅದು ಸ್ವಯಂಪ್ರಕಾಶವಾಗಿದ್ದಿದ್ದರೆ ಸತ್ತವನ ಶರೀರವೂ ಹಾಗಿರಬೇಕಾಗಿತ್ತು. ಇದರಂತೆ ಮನಸ್ಸಾಗಲಿ ಸೂಕ್ಷ್ಮಶರೀರವಾಗಲಿ ಸ್ವಯಂಪ್ರಕಾಶವಾಗಿರಲಾರವು. ಅವು ಜ್ಞಾನಸ್ವರೂಪವಲ್ಲ. ಯಾವದು ಸ್ವಯಂಪ್ರಕಾಶವೋ ಅದು ಕೃಶವಾಗಲಾರದು. ಯಾವದು ಮತ್ತೊಂದರ ಬೆಳಕಿನಿಂದ ಬೆಳಗುತ್ತಿರುವದೋ ಅದರ ಪ್ರಕಾಶವು ಬರುತ್ತಲೂ ಹೋಗುತ್ತಲೂ ಇರುತ್ತದೆ; ಆದರೆ ಯಾವದು ಸಾಕ್ಷಾತ್ ಪ್ರಕಾಶವೇ ಆಗಿರುತ್ತದೆಯೋ ಅದನ್ನು ಬಂದು ಹೋಗುವಂತೆಯೂ ಬೆಳೆದು ಕುಂದುವಂತೆಯೂ ಮಾಡಬಲ್ಲದ್ದು ಯಾವದಿರುವದು? ಚಂದ್ರನಿಗೆ ಕಲಾಭಿವೃದ್ಧಿಯೂ ಕಲಾಕ್ಷಯೂ ಇರುವದು ನಮಗೆ ಗೊತ್ತಿದೆ, ಸೂರ್ಯನಿಂದ ಎರವಲಾಗಿ ತೆಗೆದುಕೊಂಡಿರುವ ಬೆಳಕಿನಿಂದ ಬೆಳಗುತ್ತಿರುವದೇ ಅದರ ಈ ವೃದ್ಧಿಕ್ಷಯಗಳಿಗೆ ಕಾರಣ. ಒಂದು ಕಬ್ಬಿಣದ ತುಂಡನ್ನು ಬೆಂಕಿಯಲ್ಲಿ ಹಾಕಿ ಕೆಂಪಗೆ ಕಾಯಿಸಿದರೆ ಅದು ನಿಗಿನಿಗಿ ಹೊಳೆಯುತ್ತಾ ಬೆಳಗುತ್ತಿರುತ್ತದೆ; ಆದರೆ ಅದರ ಬೆಳಕು ಮತ್ತೊಂದರಿಂದ ಬಂದದ್ದಾದ್ದರಿಂದ ಆ ಬೆಳಕು ಕಾಣದೆ ಹೋಗಿಬಿಡುತ್ತದೆ. ಆದ್ದರಿಂದ ಯಾವದು ಸ್ವರೂಪಪ್ರಕಾಶವಲ್ಲವೋ ಯಾವದು ಮತ್ತೊಂದರಿಂದುಂಟಾಗಿರುವ ಪ್ರಕಾಶವೋ ಅದಕ್ಕೆ ಮಾತ್ರ ಕ್ಷಯವಾಗಬಹುದೆಂದು ಇದರಿಂದ ಗೊತ್ತಾಗುತ್ತದೆ. ಶರೀರವೆಂಬ ಹೊರಗಿನ ಆಕಾರವಿಶೇಷಕ್ಕೆ ಸ್ವರೂಪಪ್ರಕಾಶವಿಲ್ಲವೆಂತಲೂ ಅದು ಸ್ವಯಂ ಪ್ರಕಾಶವಲ್ಲವೆಂತಲೂ ಆದ್ದರಿಂದ ಅದು ತನ್ನನ್ನು ತಾನು ಅರಿತುಕೊಳ್ಳಲಾರದೆಂತಲೂ ನಮಗೆ ತಿಳಿದೇ ಇದೆ. ಮನಸ್ಸೂ ತನ್ನನ್ನು ತಾನು ಅರಿತುಕೊಳ್ಳಲಾರದು. ಏಕೆ? ಎಂದರೆ ಮನಸ್ಸಿಗೆ ವೃದ್ಧಿಕ್ಷಯಗಳುಂಟು.ಅದು ಒಂದು ಕಾಲದಲ್ಲಿ ಬಲವಾಗಿಯೂ ಮತ್ತೊಂದು ಕಾಲದಲ್ಲಿ ದುರ್ಬಲವಾಗಿಯೂ ಇರುತ್ತದೆ; ಯಾವದೇ ಆದರೂ ಅದರ ಮೇಲೆ ಪರಿಣಾಮವನ್ನುಂಟುಮಾಡಬಹುದಾಗಿರುತ್ತದೆ. ಆದ್ದರಿಂದ ಮನಸ್ಸಿನಲ್ಲಿ ಕಾಣಿಸಿಕೊಳ್ಳುತ್ತಿರುವ ಬೆಳಕು ಅದರದ್ದೇ ಅಲ್ಲ. ಹಾಗಾದರೆ ಅದು ಯಾವದು? ಅದು ಎಂದಿಗೂ ಸಬಲವಾಗಿಯೂ ದುರ್ಬಲವಾಗಿಯೂ ಆಗಲಾರದ ತತ್ತ್ವವೊಂದಕ್ಕೆ ಸೇರಿದ್ದಾಗಿರಬೇಕು. ಅದು ಸ್ವಯಂಪ್ರಕಾಶವಾಗಿರುತ್ತದೆ,

ಪ್ರಕಾಶಸ್ವರೂಪವೇ ಆಗಿರುತ್ತದೆ. ಆತ್ಮವು ಅರಿಯುತ್ತದೆ ಎಂಬುದು ಸರಿಯಲ್ಲ, ಅದೇ ಅರಿವಾಗಿರುತ್ತದೆ; ಆತ್ಮಕ್ಕೆ ಇರವು ಇದೆಯೆಂಬುದು ಸರಿಯಲ್ಲ, ಅದೇ ಇರವಾಗಿರುತ್ತದೆ; ಅದಕ್ಕೆ ಆನಂದವಿರುತ್ತದೆ ಎಂಬುದು ಸರಿಯಲ್ಲ, ಅದೇ ಆನಂದವಾಗಿರುತ್ತದೆ. ಯಾವದು ಸುಖವಾಗಿರುತ್ತದೆಯೋ ಅದರ ಸುಖವು ಮತ್ತೊಂದರಿಂದ ಬಂದದ್ದು; ಯಾವದಕ್ಕೆ ಅರಿವಿರುತ್ತದೆಯೋ ಅದರ ಅರಿವು ಮತ್ತೊಂದರಿಂದ ಬಂದದ್ದು; ಯಾವದಕ್ಕೆ ಸಾಪೇಕ್ಷವಾದ ಇರವು ಇದೆಯೋ ಅದಕ್ಕೆ ಇರವಿನ ಆಭಾಸವು ಮಾತ್ರ ಇರುತ್ತದೆ. ಎಲ್ಲೆಲ್ಲಿ ಗುಣಗಳಿರುತ್ತವೆಯೋ ಅಲ್ಲಿ ಈ ಗುಣಗಳು ದ್ರವ್ಯದಲ್ಲಿ ಪ್ರತಿಬಿಂಬಿಸಿರುತ್ತವೆ; ಆದರೆ ಆತ್ಮಕ್ಕೆ ಅರಿವು, ಇರವು, ಆನಂದ- ಇವು ಗುಣಗಳಲ್ಲ; ಅವು ಆತ್ಮದ ಸ್ವರೂಪವೇ ಆಗಿರುತ್ತವೆ.

ಒಳ್ಳೆಯದು, ಹೀಗೆಂದು ನಾವೇಕೆ ಒಪ್ಪಬೇಕು?- ಎಂದು ಯಾರಾದರೂ ಕೇಳಬಹುದು. ಆತ್ಮಕ್ಕೆ ಅರಿವು, ಆನಂದ, ಇರವು- ಇವು ಸ್ವರೂಪವಾಗಿರುವವೇ ಹೊರತು, ಎರವಲಾಗಿ ಮತ್ತೊಂದರಿಂದ ಬಂದಿಲ್ಲವೆಂದು ನಾವೇಕೆ ಒಪ್ಪಬೇಕು? ಆತ್ಮದ ಬೆಳಕು, ಆತ್ಮದ ಆನಂದವು, ಆತ್ಮದ ಅರಿವು, ಮನಸ್ಸಿನಿಂದಲೇ ಬಂದಿರುವದೆಂದೇಕೆ ತಿಳಿಯಬಾರದು?- ಎಂದು ಯಾರಾದರೂ ವಾದಿಸಬಹುದು. ಹೀಗೆ ತರ್ಕಮಾಡುವದರಲ್ಲಿರುವ ಹೇತ್ವಾಭಾಸವೇನೆಂದರೆ, ಇಲ್ಲಿ ಅನವಸ್ಥೆಯಾಗುತ್ತದೆ. ಇವು ಯಾರಿಂದ ತೆಗೆದುಕೊಂಡವುಗಳು? ಅವು ಮತ್ತೊಂದು ಕಡೆಯಿಂದ ಬಂದಿರುವವೆಂದು ಹೇಳಿದರೆ ಮತ್ತೆ ಅದೇ ಪ್ರಶ್ನೆಯನ್ನು ಕೇಳಬೇಕು. ಆದ್ದರಿಂದ ಲಾಘವಕ್ಕಾಗಿ ಸ್ವಯಂಪ್ರಕಾಶವು ಎಲ್ಲಿ ಕಾಣುವದೋ ಅಲ್ಲಿಗೆ ನಿಂತು ಮುಂದಕ್ಕೆ ಹೋಗದೇ ಇರುವದೇ ಯುಕ್ತವಾಗಿರುತ್ತದೆ.*

ಅಂತೂ ಈ ಮಾನವಪ್ರಾಣಿಗೆ ಮೊದಲನೆಯದಾಗಿ ಶರೀರವೆಂಬ ಈ ಹೊರಗಿನ ಕೋಶವೊಂದು ಇದೆ, ಎರಡನೆಯದಾಗಿ ಮನಸ್ಸು, ಬುದ್ಧಿ, ಅಹಂಕಾರ- ಎಂಬಿವುಗಳಿಂದಾಗಿರುವ ಸೂಕ್ಷ್ಮಶರೀರವಿದೆ- ಎಂದು ಸಿದ್ಧವಾಯಿತು. ಇವೆರಡರ ಆಚೆಗೆ ಮನುಷ್ಯನ ನಿಜವಾದ ಆತ್ಮವಿದೆ. ಸ್ಥೂಲ ಶರೀರದ ಗುಣಗಳೆಲ್ಲವೂ ಶಕ್ತಿಗಳೆಲ್ಲವೂ ಮನಸ್ಸಿನಿಂದ ಬಂದವುಗಳಾಗಿವೆ; ಮನಸ್ಸು, ಸೂಕ್ಷ್ಮಶರೀರವು,

* ಇದು ಸರಿಯಾಗಿ ಕಾಣುವದಿಲ್ಲ. ಏಕೆಂದರೆ ಆತ್ಮವು ಸ್ವಯಂಪ್ರಕಾಶವೋ ಮನಸ್ಸು ಸ್ವಯಂಪ್ರಕಾಶವೋ?- ಎಂಬ ಪ್ರಶ್ನೆಯಿರುವಾಗ ಆತ್ಮಕ್ಕೆ ಮನಸ್ಸಿನಿಂದ ಪ್ರಕಾಶ ಬರುವದಿಲ್ಲವೆಂದೂ ಆತ್ಮದಲ್ಲಿಯೇ ಇರುವದೆಂದೂ ವಾದಿಸುವದಕ್ಕೆ ಆಧಾರವೇನೂ ಇರುವದಿಲ್ಲ. ಅನವಸ್ಥಾದೋಷವು ಬರುತ್ತದೆಯೆಂದರೆ 'ಬರಲಿ' ಎಂದು ಹೇಳುವವರಿಗೆ ಉತ್ತರವಿರುವದಿಲ್ಲ. ಆತ್ಮವು ಮನಸ್ಸನ್ನು ಅರಿಯುವದು ಅನುಭವದಲ್ಲಿದೆ, ಮನಸ್ಸಿಲ್ಲದ ಸುಷುಪ್ತಿಯೇ ಮುಂತಾದವುಗಳಲ್ಲಿಯೂ ಆತ್ಮನ ಅರಿವು ಇದೆ; ಆದ್ದರಿಂದ ಆತ್ಮವು ಸ್ವಯಂ ಪ್ರಕಾಶವು ಎಂಬುದೇ ಅನುಭವಾನುಸಾರಿಯಾದ ಉತ್ತರವು.

ತನ್ನ ಶಕ್ತಿಗಳನ್ನೂ ಪ್ರಕಾಶವನ್ನೂ ಹಿಂದೆ ಇರುವ ಆತ್ಮದಿಂದ ಎರವಲಾಗಿ ತೆಗೆದುಕೊಂಡಿರುತ್ತದೆ.

ಈ ಆತ್ಮದ ವಿಷಯವಾಗಿ ಅನೇಕ ವಿಚಾರಗಳು ಈಗ ಎದ್ದುಕೊಳ್ಳುತ್ತವೆ. ಆತ್ಮವು ಸ್ವಯಂಪ್ರಕಾಶವೆಂಬ ಯುಕ್ತಿಯಿಂದ# ಅದರ ಇರವನ್ನು ಸಾಧಿಸುವದಾದರೆ, ಜ್ಞಾನವು ಇರವೂ ಆನಂದವೂ ಅದರ ಸ್ವರೂಪವೇ ಆಗಿರುವದೆಂದು ಯುಕ್ತಿಯಿಂದ ಸಿದ್ಧವಾಗುವದಾದರೆ, ಈ ಆತ್ಮವು ಎಂದಿಗೂ ಸ್ಪಷ್ಟವಾಗಿಲ್ಲವೆಂದು ತಾನೇ ಏರ್ಪಡುತ್ತದೆ. ಮತ್ತೆ ಯಾವದೊಂದು ಇರವನ್ನೂ ಅವಲಂಬಿಸದೆ ಸ್ವಪ್ರಕಾಶವಾಗಿರುವ ಇರವು ಮತ್ತೆ ಯಾವದೊಂದರ ಕಾರ್ಯವೂ ಆಗಿರಲಾರದು. ಅದು ಯಾವಾಗಲೂ ಇದ್ದೇ ಇತ್ತು, ಅದು ಇಲ್ಲದ ಕಾಲವೇ ಇರಲಿಲ್ಲವೆನ್ನಬೇಕು. ಏಕೆಂದರೆ ಆತ್ಮವೇ ಇಲ್ಲದಿದ್ದರೆ ಕಾಲವೆಂಬುದೆಲ್ಲಿ ಬರಬೇಕು? ಕಾಲವು ಆತ್ಮದಲ್ಲಿಯೇ ಇರುತ್ತದೆ; ಆತ್ಮವು ತನ್ನ ಶಕ್ತಿಗಳನ್ನು ಮನಸ್ಸಿನ ಮೇಲೆ ಪ್ರತಿಬಿಂಬಿಸಿದಾಗ* ಕಾಲವುಂಟಾಗುತ್ತದೆ. ಆತ್ಮವೇ ಇಲ್ಲದಾಗ ವಿಚಾರವೂ ಇರುವದಿಲ್ಲ, ವಿಚಾರವೇ ಇಲ್ಲದೆ ಕಾಲವೂ ಇರಲಾರದು. ಕಾಲವೆಂಬುದೇ ಆತ್ಮದಲ್ಲಿರುವಾಗ ಆತ್ಮವು ಕಾಲದಲ್ಲಿದೆ ಎಂಬುದು ಹೇಗೆ ಸರಿಯಾದೀತು? ಅದಕ್ಕೆ ಹುಟ್ಟೂ ಇಲ್ಲ, ಸಾವೂ ಇಲ್ಲ; ಆದರೆ ಈ ಬೇರೆ ಬೇರೆ ಅವಸ್ಥೆಗಳಲ್ಲೆಲ್ಲ ಅದು ಇದ್ದುಕೊಂಡಿರುತ್ತದೆ. ಕೆಳಗಿನ ಸ್ಥಿತಿಯಿಂದ ಮೇಲಿನ ಸ್ಥಿತಿಗೆ ಬಂದು ಕಾಣಿಸಿಕೊಂಡಿರುತ್ತದೆ. ಮತ್ತೂ ಮೇಲಿನ ಸ್ಥಿತಿಗೆ ಬಂದು ಕಾಣಿಸಿಕೊಳ್ಳುತ್ತದೆ. ಇತ್ಯಾದಿ. ಅದು ತನ್ನ ಮಹಿಮೆಯನ್ನು ಪ್ರಕಟಿಸಿಕೊಳ್ಳುತ್ತಲೂ ಮನಸ್ಸಿನ ಮೂಲಕವಾಗಿ ಶರೀರದ ಮೇಲೆ ಪರಿಣಾಮವನ್ನುಂಟುಮಾಡುತ್ತಲೂ ಶರೀರದ ಮೂಲಕವಾಗಿ ಹೊರಗಿನ ಪ್ರಪಂಚವನ್ನು ಗ್ರಹಿಸಿ ಅದನ್ನು ಅರಿತುಕೊಳ್ಳುತ್ತಲೂ ಇರುತ್ತದೆ; ಆ ಶರೀರವು ಉಪಯೋಗವಿಲ್ಲವಂತೆ ಆಗಿ ಜೀರ್ಣವಾಗಲು ಮತ್ತೊಂದು ಶರೀರವನ್ನು ತೆಗೆದುಕೊಳ್ಳುತ್ತದೆ. ಹೀಗೆಯೇ ನಡೆಯುತ್ತಿರುತ್ತದೆ.

ಇಲ್ಲೊಂದು ವಿಚಾರಣೀಯವಾದ ವಿಷಯವು ಬರುತ್ತದೆ; ಅದಕ್ಕೆ ಸಾಮಾನ್ಯವಾಗಿ ಜೀವನ ಪುನರ್ಜನ್ಮವಾದವೆಂದು ಹೆಸರುಕೊಡುತ್ತಾರೆ. ಈ ಮಾತನ್ನು ಕೇಳಿದ ಮಾತ್ರದಿಂದ ಕೆಲವು ವೇಳೆ ಜನರಿಗೆ ಅಂಜಿಕೆಯಾಗುತ್ತದೆ.

# ಸ್ವಯಂ ಪ್ರಕಾಶತ್ವವು ಯುಕ್ತಿಯಿಂದ ಸಿದ್ಧವಾಗುವದಿಲ್ಲ; ಮೇಲೆ ಹೇಳಿರುವಂತೆ ಅನುಭವದಿಂದಲೇ ಸಿದ್ಧವಾಗುತ್ತದೆ.

* ಈ ವಾಕ್ಯದ ಅರ್ಥವು ಸ್ಪಷ್ಟವಾಗಿಲ್ಲ; ಆತ್ಮನೆಂದರೆ ಜೀವಾತ್ಮನೆಂದಾದರೆ ಜೀವಾತ್ಮವೂ ಕಾಲವೂ ಜೊತೆಯಲ್ಲಿಯೇ ಇರುವವಾದ್ದರಿಂದ ಅವೆರಡೂ ಒಂದರಿಂದೊಂದು ಉಂಟಾಗುವದೆಂದು ಹೇಳುವದು ಯುಕ್ತವಾಗುವದಿಲ್ಲ. ಪರಮಾರ್ಥವಾಗಿ ಆತ್ಮಸ್ವರೂಪಕ್ಕೆ ಕಾಲವು ಅಂಟಿಕೊಂಡಿಲ್ಲವೆಂಬುದು ಸುಷುಪ್ತ್ಯಾದಿಗಳಲ್ಲಿ ಸ್ಪಷ್ಟವಾಗುತ್ತದೆ.

ಮೂಢಭಕ್ತಿಯು ಎಷ್ಟು ಬಲವಾಗಿರುವದೆಂದರೆ ವಿಚಾರಶೀಲರಾದ ಜನರು ಕೂಡ ತಾವು ಶೂನ್ಯದಿಂದ ಉಂಟಾಗಿರುವೆವೆಂದು ಭಾವಿಸಿಕೊಳ್ಳುತ್ತಿದ್ದಾರೆ; ಹೀಗೆ ನಂಬಿ ಒಂದು ಮಹಾತರ್ಕವನ್ನವಲಂಬಿಸಿ ತಾವು ಶೂನ್ಯದಿಂದ ಬಂದಿರುವೆವಾದರೂ ಇನ್ನು ಮೇಲೆ ಎಂದೆಂದಿಗೂ ಇದ್ದುಕೊಂಡಿರುವೆವೆಂಬ ಸಿದ್ಧಾಂತವನ್ನು ಸ್ಥಾಪಿಸುವದಕ್ಕೆ ಹೊರಡುತ್ತಾರೆ. ಯಾರು ಸೊನ್ನೆಯಿಂದ ಬಂದಿರುವರೋ ಅವರು ಸೊನ್ನೆಯಲ್ಲಿಯೇ ಲಯವಾಗಿಬೇಕು. ನೀವಾಗಲಿ ನಾನಾಗಲಿ ಇಲ್ಲಿರುವ ಮತ್ತೆ ಯಾರೇ ಆಗಲಿ ಸೊನ್ನೆಯಿಂದ ಬಂದಿಲ್ಲ. ಸೊನ್ನೆಯನ್ನು ಸೇರುವದೂ ಇಲ್ಲ. ನಾವು ಎಂದೆಂದಿನಿಂದಲೂ ಇದ್ದುಕೊಂಡೇ ಇರುತ್ತೇವೆ, ಮುಂದೆಯೂ ಎಂದೆಂದಿಗೂ ಇದ್ದೇ ಇರುವೆವು; ಈ ಸೂರ್ಯನ ಕೆಳಗಿನ ಲೋಕದಲ್ಲಾಗಲಿ ಮೇಲಿನ ಲೋಕದಲ್ಲಾಗಲಿ ನಿಮ್ಮ ಅಥವಾ ನನ್ನ ಇರವನ್ನು ಇಲ್ಲವಾಗಿಸಬಲ್ಲ, ಅಥವಾ ನಮ್ಮನ್ನು ಸೊನ್ನೆಯಲ್ಲಿ ಲಯವಮಾಡಬಲ್ಲ, ಶಕ್ತಿ ವಿಶೇಷವು ಯಾವದೂ ಇರುವದಿಲ್ಲ. ಈ ಪುನರ್ಜನ್ಮವಾದವು ಅಂಥ ಭೀಕರವಾದವಲ್ಲವೆಂಬುದು ಹಾಗಿರಲಿ, ಮಾನವ ಕುಲದ ನೀತಿಯು ಬೆಳೆಯುವದಕ್ಕೆ ಅತ್ಯಂತ ಅವಶ್ಯವಾಗಿರುತ್ತದೆ. ವಿಚಾರಪರರಾದವರು ಮಾಡಿಕೊಳ್ಳಬಹುದಾದ ಯುಕ್ತಿ ಯುಕ್ತವಾದ ನಿರ್ಣಯವು ಇದೊಂದೇ. ಇನ್ನು ಮೇಲೆ ನೀವು ಎಂದೆಂದಿಗೂ ಇರುವದು ನಿಜವಾದರೆ ನೀವು ಹಿಂದೆಯೂ ಎಂದೆಂದಿಗೂ ಇದ್ದಿರಬೇಕೆನ್ನುವದು ಅತ್ಯವಶ್ಯವಾಗುತ್ತದೆ; ಇದನ್ನು ಬಿಟ್ಟು ಬೇರೆ ಗತಿಯಿಲ್ಲ.

ಈ ವಾದದ ಮೇಲೆ ಹೊರಿಸುವ ಕೆಲವು ಆಕ್ಷೇಪಗಳಿಗೆ ಉತ್ತರವನ್ನು ಹೇಳಲು ಇಲ್ಲಿ ಪ್ರಯತ್ನಿಸುತ್ತೇನೆ. ನಿಮ್ಮಲ್ಲನೇಕರಿಗೆ ಇವೆಂಥ ಅವಿವೇಕದ ಆಕ್ಷೇಪಗಳೆಂದು ತೋರಬಹುದು; ಆದರೂ ನಾವು ಅವಕ್ಕೆ ಪರಿಹಾರವನ್ನು ಹೇಳಲೇಬೇಕು. ಏಕೆಂದರೆ ಕೆಲವು ವೇಳೆಗಳಲ್ಲಿ ಅತ್ಯಂತ ವಿಚಾರಶೀಲರೂ ಅತ್ಯಂತ ಅವಿವೇಕದ ಭಾವನೆಗಳನ್ನು ಮುಂದಕ್ಕೆ ತರುವದಕ್ಕೆ ಸಿದ್ಧರಾಗಿರುತ್ತಾರೆ. ಎಷ್ಟೇ ನಗೆಪಾಟಲಾದ ಅಭಿಪ್ರಾಯವಿರಲಿ, ಅದಕ್ಕ ರಕ್ಷಕರಾದ ತತ್ತ್ವಶಾಸ್ತ್ರಜ್ಞರು ಇದ್ದೇ ಇರುವರೆಂಬದೊಂದು ಸೂಕ್ತಿಯುಂಟು.

ಮೊದಲನೆಯ ಆಕ್ಷೇಪವಿದು; ನಮಗೆ ಹಿಂದಿನ ಜನ್ಮದ ನೆನಪೇಕೆ ಇರುವದಿಲ್ಲ? ಇದಕ್ಕೆ ಉತ್ತರ ಈ ಜನ್ಮದಲ್ಲಿಯೇ ಹಿಂದೆ ನಡೆದದ್ದೆಲ್ಲ ನಿಮಗೆ ನೆನಪಿದೆಯೆ? ಕೂಸುಗಳಾಗಿದ್ದಾಗ ನೀವು ಏನೇನು ಮಾಡಿದಿರೆಂಬುದು ನಿಮ್ಮಲ್ಲಿ ಎಷ್ಟು ಮಂದಿಗೆ ನೆನಪಿನಲ್ಲಿದೆ? ನಿಮ್ಮಲ್ಲಿ ಯಾರೊಬ್ಬರಿಗೂ ನಿಮ್ಮ ಶೈಶವದ ನೆನಪಿರುವದಿಲ್ಲ. ನಿಮ್ಮ ಇರವು ನೆನಪನ್ನೇ ಅವಲಂಬಿಸಿರುವದಾದರೆ, ನೀವು

ನಿಮ್ಮ ಶೈಶವವನ್ನು ನೆನಪಿನಲಿಟ್ಟಿರುವದಿಲ್ಲವಾದ್ದರಿಂದ ನೀವು ಮಕ್ಕಳಾಗಿರಲೇ ಇಲ್ಲವೆಂದು ಈ ವಾದದಿಂದ ಏರ್ಪಡುತ್ತದೆ. ನಾವು ಇದ್ದಿರಬೇಕಾದರೆ ಅದನ್ನು ನೆನಪಿನಲ್ಲಿಟ್ಟುಕೊಂಡೇ ತೀರಬೇಕೆಂಬುದು ಶುದ್ಧ ಅವಿವೇಕವು. ಹಿಂದಿನದೆಲ್ಲವನ್ನೂ ನೆನಪಿನಲ್ಲಿಟ್ಟುಕೊಂಡೇ ಇರಬೇಕೆಂಬುದೇನು? ಆ ಮೆದುಳು ಹೋಗಿಬಿಟ್ಟಿದೆ, ಅದೆಲ್ಲವೂ ಪುಡಿಪುಡಿಯಾಗಿ ಹೋಗಿ ಹೊಸದೊಂದು ಮೆದುಳು ನಿರ್ಮಾಣವಾಗಿದೆ. ಈ ಮೆದುಳಿಗೆ ಬಂದಿರುವದೇನೆಂದರೆ ನಮ್ಮ ಹಿಂದಿನ ಜನ್ಮದಲ್ಲಿ ಉಂಟಾದ ವಾಸನೆಗಳ ಒಟ್ಟು ಫಲಿತಾಂಶವು, ಆ ಫಲಿತಾಂಶದೊಡನೆ ಒಂದು ಮನಸ್ಸು ಈ ಶರೀರವನ್ನು ಸೇರಿಕೊಂಡಿರುತ್ತದೆ. ನಾನು, ಇಲ್ಲಿ ನಿಂತಿರುವ ನಾನು, ನನಗೆ ಸೇರಿಕೊಂಡಿರುವ ಅನಂತಭೂತಕಾಲದ ಕಾರ್ಯವು, ಫಲವು. ಹೀಗಿರುವಾಗ ನಾನು ಆ ಎಲ್ಲಾ ಭೂತವಿಷಯಗಳನ್ನೂ ನೆನಪಿನಲ್ಲಿಡಬೇಕಾದ ಅವಶ್ಯಕತೆಯೇನು? ಹಿಂದಿನ ಮಹರ್ಷಿಯೊಬ್ಬನು, ಮಹಾತ್ಮನೊಬ್ಬನು, ಪ್ರವಾದಿಯೊಬ್ಬನು, ತತ್ತ್ವವನ್ನು ಸಾಕ್ಷಾತ್ತಾಗಿ ಕಂಡು ಏನನ್ನಾದರೂ ಹೇಳಿದರೆ, ಈಗಿನವರು ನಿಂತು 'ಓಹೋ, ಆತನೇ, ಅವನೊಬ್ಬ ಹುಚ್ಚನು!' ಎನ್ನುವರು. ಆದರೆ ಮತ್ತೊಂದು ಹೆಸರನ್ನು ಹೇಳಿರಿ. 'ಹಕ್ಸ್ಲಿಯು ಹೀಗೆನ್ನುತ್ತಾನೆ, ಟಿಂಡಾಲನು ಹೀಗೆನ್ನುತ್ತಾನೆ'*, ಎನ್ನಿರಿ; ಆಗ ಅದು ನಿಜವಾಗಿಯೇ ಇರಬೇಕು ಎಂದು ಅವರು ಅದನ್ನು ಸರಿಯೆಂದು ಇಟ್ಟುಕೊಂಡು ಬಿಡುತ್ತಾರೆ! ಪ್ರಾಚೀನ ಮೂಢವಿಶ್ವಾಸಗಳ ಸ್ಥಾನದಲ್ಲಿ ಅರ್ವಾಚೀನ ಮೂಢವಿಶ್ವಾಸಗಳನ್ನು ನಿರ್ಮಿಸಿರುತ್ತಾರೆ, ಹಿಂದಿನ ಧರ್ಮದ ಪೋಪರು (ಮಠಾಧಿಪತಿ)ಗಳ ಬದಲು ಈಗಿನ ವಿಜ್ಞಾನ ಶಾಸ್ತ್ರದ ಪೋಪರುಗಳನ್ನು ಗದ್ದುಗೆಯಲ್ಲಿ ಕುಳ್ಳಿರಿಸಿರುತ್ತಾರೆ, ಅಷ್ಟೆ. ಆದ್ದರಿಂದ ಈ ನೆನಪಿನ ಸಂಬಂಧದ ಆಕ್ಷೇಪವು ಸರಿಯಲ್ಲವೆಂದು ಸ್ಪಷ್ಟವಾಯಿತು. ಆದರೆ ಇದೊಂದೇ ಈ ವಾದಕ್ಕೆ ಎದುರಾಗಿರುವ ಮಹಾಆಕ್ಷೇಪವು. ಈ ವಾದಕ್ಕೆ ಹಿಂದಿನ ಜನ್ಮ ನೆನಪಿಗೆ ಬರುವದು ಅವಶ್ಯವಿಲ್ಲವೆಂದು ತೋರಿಸಿಕೊಟ್ಟೇ ಇರುತ್ತೇವಾದರೂ ಈ ನೆನಪು ಬಂದೇ ಬಂದು ಈ ಪ್ರಪಂಚವು ಬರಿಯ ಕನಸೇ ಎಂಬುದು ಗೊತ್ತಾಗುವದೆಂತಲೂ ಹೇಳುವದಕ್ಕೆ ಸಾಧನಗಳಿವೆ.$ ಈ ಪ್ರಪಂಚವೆಂಬುದೊಂದು ರಂಗಸ್ಥಳವೆಂದೂ ನೀವುಗಳು ಇಲ್ಲಿ ಕೇವಲ

* ಟಾಮಸ್ ಹೆನ್ರಿ ಹಕ್ಸ್ಲಿ (Thomas Henry Huxley) ಎಂಬಾತನೂ (1825-1895) (John Tyndal) ಎಂಬಾತನೂ (1820-1895) ಹತ್ತೊಂಬತ್ತನೆಯ ಶತಮಾನದಲ್ಲಿ ಪ್ರಸಿದ್ಧರಾಗಿದ್ದ ಭೌತಿಕ ವಿಜ್ಞಾನಶಾಸ್ತ್ರಜ್ಞರು.

$ ಕೆಲಕೆಲವು ಸಾಧನಗಳನ್ನು ಮಾಡಿದರೆ ಜಾತಿಸ್ಮರಣೆಬರುವದೆಂದು ಸ್ಮೃತಿಗಳಲ್ಲಿ ಹೇಳಿರುತ್ತದೆ; ಸ್ವಾಮಿಗಳು ಇಲ್ಲಿ ಹೇಳಿರುವದು ಆ ಸ್ಥಿತಿಯಲ್ಲ, ಜ್ಞಾನವು ಬಂದಾಗ ವಾಮದೇವಾದಿಗಳಿಗೆ ಆದಂತೆ ಅನೇಕ ಜನ್ಮಾಂತರಗಳು ಕನಸಿನಂತೆ ಕಾಣುವ ಸ್ಥಿತಿವಿಶೇಷವಿದು.

ಪಾತ್ರವನ್ನು ವಹಿಸಿರುವವರೆಂದೂ ನಿಮಗೆ ನಿಮ್ಮ ಅಂತರಾತ್ಮದಲ್ಲಿ ಗೊತ್ತಾಗುವದು ಆಗಲೇ. ಅನಾಸಕ್ತಿಯೆಂಬ ಭಾವನೆಯು ಗುಡುಗಿನ ಧ್ವನಿಯಿಂದ ನಿಮಗೆ ತಟ್ಟುವು ಆಗಲೇ. ಆಗ ಈ ಭೋಗಾಸಕ್ತಿಯೆಂಬುದೆಲ್ಲವೂ ಈ ವ್ಯವಹಾರಕ್ಕೂ ಪ್ರಪಂಚಕ್ಕೂ ಅಂಟಿಕೊಂಡಿರವದೆಂಬುದೆಲ್ಲವೂ ಎಂದೆಂದಿಗೂ ಕಣ್ಮರೆಯಾಗುವದು. ಆಗ ಹಾಡಿಹಗಲಿನ ಬೆಳಕಿನಲ್ಲಿ ಕಂಡಹಾಗೆ ಇವೆಲ್ಲವೂ ಎಷ್ಟೆಷ್ಟು ಸಲ ನಿಮಗೆ ಬಂದು ಹೋಗಿರುವವೆಂಬುದೂ ನಿಮಗೆ ಎಷ್ಟು ದಹಲಕ್ಷಸಲ ಬೇರೆ ಬೇರೆ ತಂದೆತಾಯಿಗಳು ಗಂಡುಮಕ್ಕಳೂ ಹೆಣ್ಣುಮಕ್ಕಳೂ ಗಂಡಂದಿರೂ ಹೆಂಡತಿಯರೂ ನೆಂಟರೂ ಇಷ್ಟರೂ, ಧನವೂ ಅಧಿಕಾರವೂ, ಬಂದು ಹೋಗಿರುವವೆಂಬುದೂ ಮನವರಿಕೆಯಾಗುತ್ತದೆ. ಅವೆಲ್ಲವೂ ಬಂದವು, ಹೋದವು. ನೀವು ಎಷ್ಟು ಸಲ ಅಲೆಯ ತುಟ್ಟತುದಿಯನ್ನೇರಲಿಲ್ಲ! ಎಷ್ಟುಸಲ ನಿರಾಶಾಸಮುದ್ರದ ತಳವನ್ನು ಸೇರಿರಲಿಲ್ಲ! ಮೇಧಾಶಕ್ತಿಯಿಂದ ಇವೆಲ್ಲವೂ ನಿಮಗೆ ತಿಳಿದಾಗ, ಆಗಲೇ, ನೀವು ಧೀರರಾಗಿ ನಿಂತು ಪ್ರಪಂಚವೇ ನಿಮ್ಮನ್ನು ಹುಬ್ಬುಗಂ ಟಿಕ್ಕಿನೋಡುತ್ತಿದ್ದರೂ ನಸುನಗುತ್ತಿರುವಿರಿ, ಆಗಲೇ ನೀವು ನಿಂತು "ಎಲೈ ಮರಣವೆ, ನಿನಗೂ ನಾನು ಅಂಜೆನು; ನಿನ್ನಲ್ಲಿ ನನಗೆ ಏತರ ಅಂಜಿಕೆ?" ಎನ್ನುತ್ತಿರುವಿರಿ. ಇದು ಎಲ್ಲರಿಗೂ ಬರುವದು.

ಈ ಜೀವನಿಗೆ ಜನ್ಮಾಂತರವುಂಟೆಂಬುದರ ಪರವಾಗಿ ಯಾವದಾದರೂ ವಾದಗಳು, ಯಾವದಾದರೂ ಉಪಪತ್ತಿಗಳು ಉಂಟೇನು? ಇಲ್ಲಿಯವರೆಗೆ ನಾವು ವ್ಯತಿರೇಕ ಕ್ರಮವನ್ನು ಅನುಸರಿಸುತ್ತಿದ್ದೇವೆ. ಇದಕ್ಕೆ ವಿರುದ್ಧವಾದ ಯುಕ್ತಿಗಳು ಸರಿಯಿಲ್ಲವೆಂದಿಷ್ಟನ್ನೇ ತೋರಿಸಿಕೊಟ್ಟಿರುತ್ತೇವೆ. ಇದಕ್ಕೆ ಸಾಧಕಯುಕ್ತಿಗಳು ಏನಾದರೂ ಇವೆಯೇನು? ಇವೆ, ಅವು ಅತ್ಯಂತ ಸಮಂಜಸವಾದ ಯುಕ್ತಿಗಳೂ ಆಗಿವೆ. ಜ್ಞಾನಸಂಪಾದನೆಯನ್ನು ಮಾಡುವದರಲ್ಲಿ ಮಾನವರಲ್ಲಿ ಕಂಡುಬರುವ ಶಕ್ತಿತಾರತಮ್ಯವನ್ನು ಸಕಾರಣವಾಗಿವಾಗಿ ಉಪಪಾದನೆಮಾಡುವದಕ್ಕೆ ಜನ್ಮಾಂತರವಾದದಂತೆ ಮತ್ತೆ ಯಾವ ವಾದವೂ ತಕ್ಕದ್ದಾಗಿರುವದಿಲ್ಲ. ಮೊದಲನೆಯದಾಗಿ ಜ್ಞಾನವುಂಟಾಗುವ ಪ್ರಕ್ರಿಯೆಯನ್ನು ಕುರಿತು ವಿಚಾರಮಾಡೋಣ. ಬೀದಿಗೆ ಹೋಗಿ ನಾನೊಂದು ನಾಯಿಯನ್ನು ಕಾಣುತ್ತೇನೆಂದಿಟ್ಟುಕೊಳ್ಳಿ, ಅದೊಂದು ನಾಯಿಯೆಂಬುದು ನನಗೆ ಹೇಗೆ ಗೊತ್ತಾಗುತ್ತದೆ? ಅದನ್ನು ನನ್ನ ಮನಸ್ಸಿನಲ್ಲಿ ಪರಾಮರ್ಶೆಮಾಡುತ್ತೇನೆ; ನನ್ನ ಮನಸ್ಸಿನಲ್ಲಿ ನನ್ನ ಹಿಂದಿನ ಅನುಭವಗಳೆಲ್ಲ ವರ್ಗೀಕೃತವಾಗಿ ಅಲ್ಲಲ್ಲಿ ಸ್ವಸ್ಥಾನದಲ್ಲಿ ಸುವ್ಯಸ್ಥಿತವಾಗಿದ್ದು ಕೊಂಡಿರುತ್ತವೆ. ಹೊಸದೊಂದು ಅನುಭವವುಂಟಾಯಿತೋ ಇಲ್ಲವೋ ಅದನ್ನು ಗ್ರಹಿಸಿ ಹಳೆಯ ಸ್ಥಾನಗಳಿಗೆ ಹೋಲಿಸಿನೋಡಿ ಇದೇ

ಬಗೆಯ ಅನುಭವದ ವಾಸನಾರಾಶಿಯು ಕಂಡಿತೋ ಇಲ್ಲವೋ ಕೂಡಲೆ ಆ ಪಂಗಡಕ್ಕೆ ಅದನ್ನು ಸೇರಿಸಿಬಿಡುತ್ತೇನೆ. ಆಗ ನನಗೆ ಸಮಾಧಾನವಾಗುತ್ತದೆ. ನನ್ನ ಮನಸ್ಸಿನಲ್ಲಿ ಆಗಲೇ ಇದ್ದುಕೊಂಡಿರುವ ವಾಸನಾವಿಶೇಷಗಳಿಗೆ ಹೊಂದಿಕೊಳ್ಳುವದರಿಂದ ಇದೊಂದು ನಾಯಿಯೇ ಎಂದು ನಿಶ್ಚಯವಾಗುತ್ತದೆ. ಈ ಹೊಸ ಅನುಭವಕ್ಕೆ ಸಜಾತೀಯವಾದದ್ದು ನನ್ನ ಮನಸ್ಸಿನೊಳಗೆ ಕಾಣದೆ ಇರುವಾಗ ನನಗೆ ಸಮಾಧಾನವಾಗದೆ ಹೋಗುತ್ತದೆ. ಯಾವಾದಾದರೊಂದು ಅನುಭವದ ಸಜಾತೀಯವಾದ ವಾಸನೆಯು ಸಿಕ್ಕದೆ ನಮಗೆ ಅತೃಪ್ತಿಯಾದರೆ ಆ ಮನಃಸ್ಥಿತಿಗೆ 'ಅಜ್ಞಾನ'ವೆಂದು ಹೆಸರು; ಆದರೆ ಒಂದು ಅನುಭವದ ಸಜಾತೀಯವನ್ನು ಕಂಡುಕೊಂಡು ನಾವು ತೃಪ್ತರಾದರೆ ಇದಕ್ಕೆ 'ಜ್ಞಾನ' ಎಂದು ಹೆಸರು. ಒಂದೇ ಒಂದು ಸೇಬುಹಣ್ಣು ಬಿದ್ದದ್ದನ್ನು ನೋಡಿದಾಗ ಜನರಿಗೆ ಅತೃಪ್ತಿಯಾಗಿತ್ತು; ಆಮೇಲೆ ಮೆಲ್ಲಮೆಲ್ಲಗೆ ಅವರಿಗೆ ಅದರ ಸಜಾತೀಯವಾದವಾದ ಅನುಭವಗಳ ಪಂಗಡವು ತಿಳಿಯಿತು. ಅವರಿಗೆ ಕಂಡುಬಂದ ಆ ಪಂಗಡವು ಯಾವದು? ಎಲ್ಲಾ ಸೇಬುಗಳೂ ಹೇಗೆ ಬೀಳುತ್ತಿರುವವೆಂಬುದೇ ಆ ಪಂಗಡವು. ಆಗ ಅವರು ಅದಕ್ಕೆ **ಆಕರ್ಷಣಶಕ್ತಿ**ಯೆಂದು ಹೆಸರುಕೊಟ್ಟರು.* ಹೀಗೆ ನೋಡಿದರೆ ಮೊದಲೇ ನಮ್ಮಲ್ಲಿ ಒಂದಾನೊಂದು ಅನುಭವರಾಶಿಯು ಇಲ್ಲದೆ ಯಾವದೊಂದೂ ಅನುಭವವೂ ಆಗಲೇ ಆರದೆಂದು ಸಿದ್ಧವಾಗುತ್ತದೆ; ಏಕೆಂದರೆ ಈ ಹೊಸ ಅನುಭವವನ್ನು ಹೊಂದಿಸಿ ಪರಾಮರ್ಶಮಾಡಿ ನೋಡುವದಕ್ಕೆ ಯಾವದೊಂದು ಆಗ ಇರುವದೇ ಇಲ್ಲ. ಆದ್ದರಿಂದ ಕೆಲವು ಯುರೋಪಿನ ತತ್ತ್ವಶಾಸ್ತ್ರಜ್ಞರು# ಹೇಳಿರುವಂತೆ ಒಂದು ಮಗು ಹುಟ್ಟಿದಾಗ ಅದರ ಮನಸ್ಸು ಯಾವದೊಂದನ್ನೂ ಬರೆಯದೆ ಇರುವ ಬರಿಯ ಹಲಗೆಯಂತೆ (***Tabula rasa***) ಇರುವದೇ ನಿಜವಾದರೆ ಅಂಥ ಮಗುವಿಗೆ ತಕ್ಕಮಟ್ಟಿನ ಬುದ್ಧಿಶಕ್ತಿಯು ಕೂಡ ಉಂಟಾಗಲಾರದು; ಏಕೆಂದರೆ ಅದಕ್ಕೆ ತನ್ನ ಹೊಸ ಅನುಭವಗಳನ್ನೂ ಪರಾಮರ್ಶಮಾಡಿನೋಡುವದಕ್ಕೆ ಯಾವದೊಂದೂ ಇರುವದೇ ಇಲ್ಲ. ಬೇರೆ ಬೇರೆ ವ್ಯಕ್ತಿಗಳಲ್ಲಿ ಜ್ಞಾನಸಂಪಾದನಾಶಕ್ತಿಯೂ ತಾರತಮ್ಯದಿಂದ ಇರುವದು ಕಂಡುಬರುತ್ತದೆಯಷ್ಟೆ; ನಾವು ಪ್ರತಿಯೊಬ್ಬರೂ ನಮ್ಮನಮ್ಮಲ್ಲಿ ಬೇರೆಬೇರೆ

* ನ್ಯೂಟನ್ ಎಂಬಾತನು ಆಕರ್ಷಣಶಕ್ತಿಯನ್ನು ಕಂಡುಹಿಡಿದದ್ದು ಹೀಗೆಎಂದು ಭೌತಕಶಾಸ್ತ್ರಜ್ಞರು ಹೇಳುತ್ತಾರೆ.

# ಲಾಕ್ ಎಂಬ ತತ್ತ್ವಶಾಸ್ತ್ರಜ್ಞನು ಮನುಷ್ಯನು ಹುಟ್ಟುವಾಗ ಅವನ ಮನಸ್ಸಿನಲ್ಲಿ ಯಾವದೊಂದು ಸಹಜಭಾವನೆಯೂ ಇರುವದೇ ಇಲ್ಲವೆಂದೂ ಅವನ ಮನಸ್ಸು ಏನೂ ಬರೆಯದೆ ಇರುವ ಹಲಗೆಯಂತೆ ಇರುವದೆಂದೂ ಆಮೇಲೆ ಇಂದ್ರಿಯಗಳ ಮೂಲಕವೇ ಜ್ಞಾನವೆಲ್ಲವೂ ಬರುವದೆಂದೂ ಹೇಳಿರುತ್ತಾನೆ.

ವಾಸನಾರಾಶಿಯನ್ನಿಟ್ಟುಕೊಂಡು ಬಂದಿದೇವೆಂದು ಇದರಿಂದ ತಿಳಿಯಬೇಕಾಗಿದೆ. ತಿಳಿವಳಿಕೆಯು ಒಂದೇ ಒಂದು ಮಾರ್ಗದಿಂದ ಬರುತ್ತದೆ, ಅದೇ ಅನುಭವದ ಮಾರ್ಗವು. ತಿಳಿಯುವದಕ್ಕೆ ಬೇರೆ ಯಾವ ಮಾರ್ಗವೂ ಇಲ್ಲವೇ ಇಲ್ಲ. ಒಂದು ವಿಷಯವನ್ನು ನಾವು ಈ ಜನ್ಮದಲ್ಲಿ ಅನುಭವಿಸದೆ ಇದ್ದರೆ ಬೇರೆ ಜನ್ಮಗಳಲ್ಲಿ ಅನುಭವಿಸಿರಬೇಕು. ಸಾವಿನ ಅಂಜಿಕೆಯು ಎಲ್ಲೆಲ್ಲಿಯೂ ಇರುವದಲ್ಲ. ಇದೇಕೆ? ಒಂದು ಕೋಳಿಪಿಳ್ಳೆಯು ಈಗತಾನೆ ಮೊಟ್ಟೆಯಿಂದ ಹೊರಕ್ಕೆ ಬಂದಿರುತ್ತದೆ; ಒಂದು ಗಿಡುಗವು ಬಂದಿತೋ ಇಲ್ಲವೋ, ಅದು ಅಂಜಿಕೆಯಿಂದ ತನ್ನ ತಾಯಿಯ ಬಳಿಗೆ ಹಾರಿಬರುತ್ತದೆ. ಇದಕ್ಕೆ ಒಂದಾನೊಂದು ಕಾರಣವನ್ನು ಕೊಟ್ಟು ಉಪಪತ್ತಿಯನ್ನು ಹೇಳುವರು; ಇದನ್ನು ಉಪಪತ್ತಿ ಎಂಬ ಘನವಾದ ಹೆಸರಿನಿಂದ ಕರೆಯುವದೇ ಸರಿಯಲ್ಲವೆಂದು ನನ್ನ ಅಬಿಪ್ರಾಯ. ಇದಕ್ಕೆ **ನೈಸರ್ಗಿಕ ಭಾವನೆ** (Instinct) ಎಂದು ಹೆಸರನ್ನಿಟ್ಟಿರುತ್ತಾರೆ. ಆಗತಾನೆ ಮೊಟ್ಟೆಯಿಂದ ಹೊರಕ್ಕೆ ಬಂದಿರುವ ಕೋಳಿಪಿಳ್ಳೆಯು ಸಾವಿಗೆ ಅಂಜುವದಕ್ಕೆ ಕಾರಣವೇನು? ಒಂದು ಹೆಣ್ಣು ಬಾತು ಹಡೆದ ಚಿಕ್ಕಮರಿಯು ನೀರಿನ ಬಳಿಗೆ ಬಂತೋ ಇಲ್ಲವೋ ಅದರೊಳಕ್ಕೆ ಹಾರಿ ಈಜಾಡುವದಕ್ಕೆ ಪ್ರಾರಂಭಿಸುವದಲ್ಲ, ಇದೇಕೆ? ಅದು ಈ ಮೊದಲು ಎಂದೂ ಈಜಿರಲಿಲ್ಲ, ಯಾರೊಬ್ಬರು ಈಜಿದ್ದನ್ನೂ ನೋಡಿರಲಿಲ್ಲವಲ್ಲ! ಜನರು ಇದಕ್ಕೆ ನೈಸರ್ಗಿಕಭಾವನೆ ಎಂಬ ಹೆಸರುಕೊಟ್ಟಿರುತ್ತಾರೆ. ಅದೊಂದು ದೊಡ್ಡ ಶಬ್ದವೇ ಸರಿ, ಆದರೆ ಅದನ್ನು ಕೇಳಿದಮೇಲೂ ನಾವು ಮೊದಲಿದ್ದಲ್ಲಿಯೇ ಇರುತ್ತೇವೆ. ಈ ನೈಸರ್ಗಿಕಭಾವನೆಯ ದೃಶ್ಯವನ್ನೊಂದಿಷ್ಟು ಪರಿಶೀಲಿಸೋಣ. ಒಬ್ಬ ಹುಡುಗಿಯು ಒಂದು ರಾಗಮಾಲಿಕೆಯನ್ನು ಬಾರಿಸುವದಕ್ಕೆ ಮೊದಲು ಮಾಡುತ್ತಾಳೆನ್ನಿ; ಮೊದಮೊದಲು ಅವಳು ತಾನು ಬೆರಳಿನಿಂದ ಮುಟ್ಟುವ ಒಂದೊಂದು ರಾಗಸ್ಥಾನವನ್ನೂ ಲಕ್ಷ್ಯವಿಟ್ಟು ನೋಡಿಕೊಳ್ಳುತ್ತಿರಬೇಕಾಗುತ್ತದೆ, ಹೀಗೆಯೇ ತಿಂಗಳುಗಟ್ಟಲೆ, ವರ್ಷಗಟ್ಟಲೆ, ಬಾರಿಸುತ್ತಿದ್ದರೆ ಅದನ್ನು ಬಾರಿಸುವದು ಅಯತ್ನಪೂರ್ವಕವಾಗಿ ನೈಸರ್ಗಿಕವಾಗಿಬಿಡುತ್ತದೆ. ಮೊದಲು ಸಂಕಲ್ಪ ಪೂರ್ವಕವಾಗಿ ಮಾಡುತ್ತಿದ್ದದ್ದೇ ಈಗ ಸಂಕಲ್ಪ ನಿರಪೇಕ್ಷವಾಗುತ್ತದೆ. ನೈಸರ್ಗಿಕವಾದದ್ದು ಮೊದಲು ಅನುಭವಿಸಿದ್ದೇ ಆಗಿರುವದೆಂಬುದಕ್ಕೆ ಇದು ಪೂರ್ಣೋಪಪತ್ತಿಯಲ್ಲ. ಇದು ಅರ್ಧ ಉಪಪತ್ತಿಯಾಯಿತು. ಇನ್ನೊಂದರ್ಧ ಉಪಪತ್ತಿಯೇನೆಂದರೆ, ಈಗ ನೈಸರ್ಗಿಕವಾಗಿರುವ ಸ್ವಲ್ಪ ಹೆಚ್ಚು ಕಡಿಮೆ ಎಲ್ಲಾ ಕೃತಿಗಳೂ ಸಂಕಲ್ಪಕ್ಕೆ ವಶವಾಗುವಂತೆ ಮಾಡಿಕೊಳ್ಳಬಹುದಾಗಿರುತ್ತದೆಯೆಂಬುದು. ಶರೀರದಲ್ಲಿರುವ ಪ್ರತಿಯೊಂದು ಮಾಂಸಖಂಡವನ್ನೂ ನಮ್ಮ ವಶಕ್ಕೆ ತೆಗೆದುಕೊಳ್ಳಬಹುದಾಗಿರುತ್ತದೆ. ಇದು ಸುಪ್ರಸಿದ್ಧವಾಗಿರುತ್ತದೆ. ಆದ್ದರಿಂದ ಈ

ಪ್ರಕ್ರಿಯಾದ್ವಯದಿಂದ ಈಗ ನಾವು ನೈಸರ್ಗಿಕವೆಂದು ಕರೆಯುತ್ತಿರುವದು ಇಚ್ಛಾಧೀನಕೃತಿಯಾಗಿದ್ದು ಕೆಳಕ್ಕಿಳಿದದ್ದೇ ಎಂದು ಪೂರ್ಣ ಉಪಪತ್ತಿಯಿಂದ ಸಿದ್ಧವಾಯಿತು. ಆದ್ದರಿಂದ ಇದೇ ಉಪಮಾನವನ್ನು ಇಡಿಯ ಸೃಷ್ಟಿಗೆ ಅನ್ವಯಿಸಬಹುದಾದರೆ ಕೀಳುಪ್ರಾಣಿಗಳಲ್ಲಿಯೂ ಮಾನವರಲ್ಲಿಯೂ ನೈಸರ್ಗಿಕ ಭಾವನೆಯಾಗಿರುವದೆಲ್ಲ ಸಂಕಲ್ಪದ ಕೀಳುರೂಪವೆಂದೇ ಏರ್ಪಡುತ್ತದೆ.

ಬ್ರಹ್ಮಾಂಡ ನಿರೂಪಣೆಯಲ್ಲಿ ನಾವು ವಿವರಿಸಿದ ನಿಯಮವನ್ನು, ಎಂದರೆ ಒಂದೊಂದು ಸಂಕೋಚದಲ್ಲಿಯೂ ಒಂದೊಂದು ವಿಕಾಸವು ಸೇರಿಕೊಂಡಿರುವದೆಂದೂ ಒಂದೊಂದು ವಿಕಾಸದಲ್ಲಿಯೂ ಒಂದೊಂದು ಸಂಕೋಚವು ಸೇರಿಕೊಂಡಿರುವದೆಂದೂ ಹೇಳಿದ ನಿಯಮವನ್ನು, ಇದಕ್ಕೂ ಹೊಂದಿಸಿ ನೋಡಿದರೆ ನೈಸರ್ಗಿಕ ಭಾವನೆಯೆಂಬುದು ಸಂಕುಚಿತಬುದ್ಧಿಯೇ ಎಂದು ಸಿದ್ಧವಾಗುತ್ತದೆ. ಮಾನವರಲ್ಲಿಯೂ ಕೀಳುಪ್ರಾಣಿಗಳಲ್ಲಿಯೂ ನೈಸರ್ಗಿಕಭಾವನೆ ಎಂದು ನಾವು ಕರೆಯುತ್ತಿರುವದೆಲ್ಲ ಸಂಕುಚಿತವಾದ, ಕೀಳುಸ್ಥಿತಿಗಿಳಿದ, ಇಚ್ಛಾಧೀನಕೃತಿಗಳೇ ಎಂಬುದು ಇದರಿಂದ ಸಿದ್ಧವಾಗುತ್ತದೆ. ಇಚ್ಛಾಧೀನಕೃತಿಗಳು ಅನುಭವವಿಲ್ಲದೆ ಆಗಲೇ ಆರವು. ಅನುಭವವೇ ಆ ತಿಳಿವಳಿಕೆಯನ್ನುಂಟುಮಾಡಿದ್ದು, ಆದ್ದರಿಂದಲೇ ಆ ತಿಳಿವಳಿಕೆಯು ಅಲ್ಲಿರುತ್ತದೆ. ಸಾವಿನ ಅಂಜಿಕೆಯೂ ಬಾತಿನಮರಿಯು ನೀರಿಗೆ ಹರಿಯುವದೂ ಮಾನವಪ್ರಾಣಿಯಲ್ಲಿರುವ ಎಲ್ಲಾ ಬಗೆಯ ಅನಿಚ್ಛಾಕೃತಿಗಳೂ ನೈಸರ್ಗಿಕವಾಗಿರುವದು ಹಿಂದಿನ ಅನುಭವಗಳ ಫಲವೇ ಆಗಿದೆ. ಇಲ್ಲಿಯವರೆಗೆ ಅತ್ಯಂತ ಸ್ಪಷ್ಟರೀತಿಯಲ್ಲಿ ನಾವು ವಾದಿಸಿರುತ್ತೇವೆ, ಇಲ್ಲಿಯವರೆಗೆ ಅತ್ಯಂತ ಆಧುನಿಕ ಭೌತಿಕವಿಜ್ಞಾನವೂ ನಮ್ಮ ಪಕ್ಷವನ್ನೇ ವಹಿಸಿರುತ್ತದೆ.

ಆದರೆ ಇಲ್ಲಿ ಮತ್ತೊಂದು ಕಷ್ಟವುಂಟಾಗುತ್ತದೆ. ಅತ್ಯಂತ ಆಧುನಿಕರಾದ ಶಾಸ್ತ್ರಜ್ಞರು ಪುರಾತನ ಋಷಿಗಳ ಪಕ್ಷವನ್ನೇ ಅವಲಂಬಿಸುತ್ತಿದ್ದಾರೆ, ಅವರು ಎಷ್ಟರಮಟ್ಟಿಗೆ ವಹಿಸಿರುತ್ತಾರೋ ಅಷ್ಟಮಟ್ಟಿಗೆ ಇಬ್ಬರಿಗೂ ಪೂರ್ಣ ಸಮ್ಮತಿಯಾಗಿರುತ್ತದೆ. ಒಬ್ಬೊಬ್ಬ ಮನುಷ್ಯನೂ ಒಂದೊಂದು ಪ್ರಾಣಿಯೂ ವಾಸನಾರಾಶಿಯ ಸಹಿತವಾಗಿಯೇ ಹುಟ್ಟುವವೆಂದೂ ಈ ಮನಸ್ಸಿನಲ್ಲಿರುವ ವೃತ್ತಿಗಳೆಲ್ಲವೂ ಹಿಂದಿನ ಅನುಭವದ ಫಲವೇ ಎಂದೂ ಅವರೂ ಒಪ್ಪಿಕೊಳ್ಳುತ್ತಾರೆ. ಆದರೆ ಅವರು "ಅನುಭವವು ಆತ್ಮನಿಗೆ ಸೇರಿದ್ದೆಂದೇಕೆ ಹೇಳಬೇಕು? ಅದು ಶರೀರಕ್ಕೆ, ಶರೀರಕ್ಕೇ ಸೇರಿದ್ದೆಂದೇಕೆ ಹೇಳಿಬಿಡಬಾರದು? ಅದು ವಂಶಕ್ರಮಾನುಗತ ವಾಗಿರುವದೆಂದೇಕೆ ಹೇಳಬಾರದು?" ಎಂದು ಕೇಳುತ್ತಾರೆ. ಇದೇ ಕೊನೆಯ ವಿಚಾರವು. ನಾನು ಯಾವ ಯಾವ ಅನುಭವದ ಸಹಿತವಾಗಿ ಹುಟ್ಟಿರುವೆನೋ ಅದೆಲ್ಲವೂ ನನ್ನ ಹಿಂದಿನವರ ಅನುಭವದ

ಫಲವೆಂದೇಕೆ ಹೇಳಬಾರದು? ಅತ್ಯಂದ ಸಣ್ಣ ಜೀವಾಣುವಿನಿಂದ ಹಿಡಿದು ಅತ್ಯಂತ ಮೇಲಿನ ಮಾನವಪ್ರಾಣಿಯವರೆಗಿನ ಅನುಭವದ ಫಲವೆಲ್ಲ ನನ್ನಲ್ಲಿರುತ್ತದೆ; ಆದರೆ ಅದು ವಂಶಪಾರಂಪರ್ಯಾಗತವಾಗಿ ಒಂದು ಶರೀರದಿಂದ ಒಂದು ಶರೀರಕ್ಕೆ ಸೇರಿಕೊಳ್ಳುತ್ತಾ ಬಂದಿರುತ್ತದೆ. ಹೀಗೆಂದರೇನು ಕಷ್ಟ?

ಈ ಪ್ರಶ್ನೆಯು ಬಹಳ ಚೆನ್ನಾಗಿರುತ್ತದೆ. ಈ ವಂಶಪಾರಂಪರ್ಯ ಕ್ರಮದಿಂದ ಸ್ವಭಾವವು ಬರುವದೆಂಬುದರಲ್ಲಿ ಒಂದಂಶವನ್ನು ನಾವೂ ಒಪ್ಪಿಕೊಳ್ಳುತ್ತೇವೆ. ಎಷ್ಟರಮಟ್ಟಿಗೆ ಒಪ್ಪಿಕೊಳ್ಳುತ್ತೇವೆಂದರೆ ಅದು ಬೇಕಾಗುವ ಭೌತಿಕವಸ್ತುವನ್ನೊದಗಿಸುತ್ತದೆ ಎಂಬವರೆಗೆ. ನಾವು ಹಿಂದೆ ಮಾಡಿದ ಕರ್ಮಗಳಿಂದ ಒಂದಾನೊಂದು ಶರೀರದಲ್ಲಿ ಒಂದಾನೊಂದು ಜನ್ಮವನ್ನು ಪಡೆಯುತ್ತೇವೆ; ಆ ಜೀವನು ತಮ್ಮ ಸಂತತಿಯಾಗುವದಕ್ಕೆ ತಕ್ಕ ಯೋಗ್ಯತೆಯನ್ನು ಸಂಪಾದಿಸಿಕೊಂಡಿರುವ ತಂದೆತಾಯಿಗಳಿಂದಲೇ ಆ ಶರೀರಕ್ಕೆ ತಕ್ಕ ಉಪಾದಾನ ವಸ್ತುವು ಸಿಕ್ಕುತ್ತದೆ. ಕೇವಲ ವಂಶಪರಂಪರಾಧಾನವನ್ನು ಹೇಳುವ ಸಿದ್ಧಾಂತದಲ್ಲಿ ಮಾನಸಾನುಭವವು ಭೌತಿಕವಸ್ತುವಿನಲ್ಲಿ ಸಂಸ್ಕಾರವನ್ನುಂಟು ಮಾಡಬಹುದೆಂಬ ಅತ್ಯಂತ ಆಶ್ಚರ್ಯಜನಕವಾದ ಅಭಿಪ್ರಾಯವನ್ನು ಯಾವದೊಂದು ರುಜುವಾತೂ ಇಲ್ಲದೆ ಇಟ್ಟುಕೊಂಡುಬಿಟ್ಟಿರುತ್ತದೆ. ನಾನು ನಿಮ್ಮನ್ನು ನೋಡುವಾಗ ನನ್ನ ಚಿತ್ತಸರೋವರದಲ್ಲಿ ಒಂದಾನೊಂದು ಅಲೆಯುಂಟಾಗುತ್ತದೆ. ಆಮೇಲೆ ಅಲೆಯು ಕೆಳಕ್ಕಿಳಿಯುತ್ತದೆ; ಆದರೆ ಸಂಸ್ಕಾರರೂಪದಿಂದ ಸೂಕ್ಷ್ಮರೂಪದಲ್ಲಿ ಉಳಿದುಕೊಳ್ಳುತ್ತದೆ. ಭೌತಿಕಸಂಸ್ಕಾರವು ಶರೀರದಲ್ಲಿರಬಹುದೆಂದರೆ ನಮಗೆ ಅರ್ಥವಾಗುತ್ತದೆ. ಆದರೆ ಮಾನಸಸಂಸ್ಕಾರವು ಶರೀರದಲ್ಲಿರಬಹುದೆಂಬುದಕ್ಕೆ ಪ್ರಮಾಣವೇನು? ಶರೀರವು ಕ್ಷಯಿಸಿಹೋಗುವದಿಲ್ಲವೆ? ಅದನ್ನು ತೆಗೆದುಕೊಂಡುಹೋಗುವ ಆಶ್ರಯವು ಯಾವದು? ಪ್ರತಿಯೊಂದು ಮಾನಸಸಂಸ್ಕಾರವೂ ಶರೀರದಲ್ಲಿರಬಹುದೆಂದು ಒಪ್ಪಿಕೊಂಡರೂ, ಆದಿಮಾನವನಿಂದ ಹಿಡಿದು ನನ್ನ ತಂದೆಯವರೆಗಿನ ವಾಸನೆಯೂ ನನ್ನ ತಂದೆಯ ಶರೀರದಲ್ಲಿತ್ತೆಂದು ಒಪ್ಪಿಕೊಂಡರೂ, ಅದು ನನ್ನಲ್ಲಿಗೆ ಬರುವದು ಹೇಗೆ? ಜೀವಾಣುಕೋಶದಿಂದಲೇ? ಅದು ಹೇಗೆ ಆದೀತು? ತಂದೆಯ ಶರೀರವು ಮಗುವಿಗೆ ಸಂಪೂರ್ಣವಾಗಿ ಬರುವದಿಲ್ಲ. ಅದೇ ತಂದೆತಾಯಿಗಳಿಗೆ ಅನೇಕ ಮಕ್ಕಳು ಆಗಬಹುದಷ್ಟೆ. ಆಗ ಈ ವಂಶಪರಂಪರಾನುಕ್ರಮವಾದವನ್ನು ಇಟ್ಟುಕೊಂಡರೆ, ಸಂಸ್ಕಾರಕವೂ ಸಂಸ್ಕಾರ್ಯವೂ ಒಂದೇ. ಸಂಸ್ಕಾರ್ಯವಾದ ವಸ್ತುವೂ ಅದೇ ಆಗಿರುವದರಿಂದ ಒಂದೊಂದು ಮಗುವು ಹುಟ್ಟಿದಾಗ ತಂದೆತಾಯಿಗಳಲ್ಲಿರುವ ಸಂಸ್ಕಾರಗಳು ಕೆಲವು ಹೋಗಿಬಿಡಬೇಕು; ಇಲ್ಲವೆ ತಂದೆತಾಯಿಗಳು ತಮ್ಮ ಪೂರ ಸಂಸ್ಕಾರವನ್ನು ಕೊಟ್ಟುಬಿಡುವದಾದರೆ ಮೊಟ್ಟಮೊದಲನೆಯ ಮಗು ಹುಟ್ಟಿದಕೂಡಲೆ ಅವರ

ಮನಸ್ಸು ಸರ್ವಸಂಸ್ಕಾರ ಶೂನ್ಯವಾಗಬೇಕು. ಇದೂ ಅಲ್ಲದೆ ಜೀವಾಣುಕೋಶದಲ್ಲಿ ಅನಾದಿಕಾಲದಿಂದಲೂ ಆಗಿರುವ ಅನಂತಸಂಸ್ಕಾರಗಳೂ ಹೊಕ್ಕಿರುವವಾದರೆ ಅವು ಎಲ್ಲಿ ಹೇಗೆ ಸೇರಿರುತ್ತವೆ? ಇದು ಅತ್ಯಂತ ಅಸಾಧ್ಯವಾದ ಮಾತು; ಈ ಭೌತಿಕ ಶಾಸ್ತ್ರಜ್ಞರು ಹೇಗೆ ಎಲ್ಲಿ ಈ ಸಂಸ್ಕಾರಗಳು ಆ ಕೋಶಾಣುವಿನಲ್ಲಿದ್ದು ಕೊಂಡಿರುವವೆಂಬುದನ್ನು ತೋರಿಸಿಕೊಡುವವರೆಗೂ ಮಾನಸಸಂಸ್ಕಾರವು ಭೌತಿಕಕೋಶಾಣುವಿನಲ್ಲಿ ಅವ್ಯಕ್ತವಾಗಿರುವದೆಂದರೇನೆಂಬುದನ್ನು ತಿಳಿಸಿಕೊಡುವವರೆಗೂ, ಅವರ ವಾದವನ್ನು ಅಂಗೀಕರಿಸುವದಕ್ಕೆ ಆಗುವದೇ ಇಲ್ಲ. ಅಂತೂ ಇಲ್ಲಿಯವರೆಗಿನ ವಿಚಾರದಿಂದ ಏನೇನು ಸಿದ್ಧವಾಯಿತೆಂದರೆ, ಈ ಸಂಸ್ಕಾರವು ಮನಸ್ಸಿನಲ್ಲಿಯೇ ಇದೆ; ಮನಸ್ಸು ಮತ್ತೆ ಮತ್ತೆ ಹುಟ್ಟುವಾಗ ತನ್ನ ಕಾರ್ಯಕ್ಕೆ ಯಾವದು ಅತ್ಯಂತ ಅರ್ಹವಾಗಿರುತ್ತದೆಯೋ ಅದನ್ನು ಉಪಯೋಗಿಸಿಕೊಳ್ಳುತ್ತದೆ; ಮನಸ್ಸು ಇಂಥದ್ದೊಂದು ಶರೀರಕ್ಕೆ ತಕ್ಕದ್ದೆಂದಾಗಿರುವಾಗ ಅಂಥ ಉಪಾದಾನವಸ್ತುವು ಸಿಕ್ಕುವವರೆಗೂ ಕಾದುಕೊಂಡಿರಬೇಕಾಗುತ್ತದೆ. ಇದೆಲ್ಲವೂ ನಮಗೆ ಅರ್ಥವಾಗುವಂತೆ ಇದೆ. ಅಂತೂ ಈ ಸಿದ್ಧಾಂತವು ಎಲ್ಲಿಗೆ ಬಂದು ನಿಂತಿತೆಂದರೆ ಜೀವನಿಗೆ ಶರೀರಕ್ಕೆ ಬೇಕಾಗಿರುವ ವಸ್ತುವಿನ ವಿಷಯಕ್ಕೆ ಮಾತ್ರ ವಂಶಪಾರಂಪರ್ಯ ಪದ್ಧತಿಯು ಹೊಂದುತ್ತದೆ.

ಆದರೆ ಜೀವನು ಸಂಸಾರದಲ್ಲಿ ತೊಳಲುತ್ತಾ ಒಂದು ಶರೀರವಾದ ಮೇಲೊಂದು ಶರೀರವನ್ನು ಮಾಡಿಕೊಳ್ಳುತ್ತಲೇ ಇರುತ್ತದೆ; ನಾವು ಯೋಚಿಸುವ ಪ್ರತಿಯೊಂದು ಯೋಚನೆಯೂ ನಾವು ಮಾಡುವ ಪ್ರತಿಯೊಂದು ಕ್ರಿಯೆಯೂ ಅದರಲ್ಲಿ ಸೂಕ್ಷ್ಮರೂಪಗಳಲ್ಲಿ ರಾಶಿಯಾಗಿದ್ದುಕೊಂಡು ಮತ್ತೊಂದು ಸಲ ಮೇಲಕ್ಕೆದ್ದು ರೂಪಾಂತರವನ್ನು ತಳೆಯುವದಕ್ಕೆ ಸಜ್ಜಾಗಿರುತ್ತದೆ. ನಾನು ನಿಮ್ಮನ್ನು ನೋಡುವಾಗ ನನ್ನ ಚಿತ್ತದಲ್ಲಿ ಒಂದು ಅಲೆಯು ಎದ್ದುಕೊಳ್ಳುತ್ತದೆ. ಆಮೇಲೆ ಅದು ಕೆಳಕ್ಕೆಮುಳುಗಿಂದಂತಾಗಿ ಸೂಕ್ಷ್ಮ ಸೂಕ್ಷ್ಮತರವಾಗಿ ಪರಿಣಮಿಸುತ್ತಲೇ ಇರುತ್ತದೆ; ಆದರೆ ಅದು ಸಂಪೂರ್ಣವಾಗಿ ನಾಶವಾಗಿಹೋಗುವದಿಲ್ಲ. ಅದು ಮತ್ತೆ ನೆನಪಿನ ಆಕಾರದಲ್ಲಿ ಮತ್ತೊಂದು ಅಲೆಯಾಗಿ ಎದ್ದುಕೊಳ್ಳುವದಕ್ಕೆ ಸಿದ್ಧವಾಗಿರುತ್ತದೆ. ಹೀಗೆ ಸಂಸ್ಕಾರಗಳೆಲ್ಲ ನನ್ನ ಮನಸ್ಸಿನಲ್ಲಿದ್ದುಕೊಂಡಿದ್ದು ನಾನು ಸಾಯುವಾಗ ಅವುಗಳ ಫಲಿತಶಕ್ತಿಯೆಲ್ಲ ನನ್ನಲ್ಲಿ ಉಳಿದುಕೊಳ್ಳುತ್ತದೆ. ಇಲ್ಲೊಂದು ಚಂಡಿದೆ. ನಾವೆಲ್ಲರೂ ಒಂದೊಂದು ದಾಂಡನ್ನು ತೆಗೆದುಕೊಂಡು ಆ ಚಂಡನ್ನು ಎಲ್ಲಾಕಡೆಯಿಂದಲೂ ಹೊಡೆಯುತ್ತಲೇ ಇದೇವೆಂದು ಇಟ್ಟುಕೊಳ್ಳಿರಿ; ಆ ಚಂಡು ಕೋಣೆಯ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುತ್ತಲೇ ಇದ್ದು ಬಾಗಿಲಿಗೆ ಬರುತ್ತಲೂ ಹೊರಕ್ಕೆ ಹಾರಿಬಿಡುತ್ತದೆ. ಅದು ಹೊರಕ್ಕೆ ಹೋಗುವಾಗ

ತನ್ನೊಡನೆ ತೆಗೆದುಕೊಂಡುಹೋಗುವದೇನು? ಈ ಪೆಟ್ಟುಗಳೆಲ್ಲದರ ಫಲಿತವನ್ನು. ಅದೇ ಅದಕ್ಕೆ ಇಂಥ ದಿಕ್ಕಿಗೆ ಹೋಗುವಂತೆ ಮಾಡಿದ್ದು. ಇದರಂತೆ ಜೀವನ ಶರೀರವು ಸಾಯುವಾಗ ಜೀವನಿಗೆ ದಿಕ್ಕುತೋರಿಸುವದು ಯಾವದು? ಅದು ಮಾಡಿರುವ ಎಲ್ಲಾ ಕರ್ಮಗಳ, ಅದು ಯೋಚಿಸಿರುವ ಎಲ್ಲಾ ಯೋಜನೆಗಳ ಫಲವು. ಈ ಫಲಿತದ ಸ್ವಭಾವದಿಂದ ಮತ್ತೆ ಬೇರೆ ಅನುಭವಕ್ಕಾಗಿ ಜೀವವು ಮತ್ತೊಂದು ಶರೀರವನ್ನು ಮಾಡಿಕೊಳ್ಳಬೇಕಾಗಿದ್ದರೆ ಆ ಶರೀರಕ್ಕೆ ತಕ್ಕ ಉಪಾದಾನ ವಸ್ತುವನ್ನು ಕೊಡಬಲ್ಲಂಥ ತಂದೆತಾಯಿಗಳಲ್ಲಿಗೆ ಅದು ಹೋಗುತ್ತದೆ. ಹೀಗೆ ಅದು ಶರೀರದಿಂದ ಶರೀರಕ್ಕೆ ಹೋಗುತ್ತಲೇ ಇರುತ್ತದೆ; ಕೆಲವು ವೇಳೆ ಸ್ವರ್ಗಕ್ಕೆ ಹೋಗಿ ಮರಳಿ ಭೂಮಿಗೆ ಬಂದು ಮನುಷ್ಯನಾಗಿಯೋ ಅಥವಾ ಯಾವದಾದರೊಂದು ಕೀಳು ಪ್ರಾಣಿಯಾಗಿಯೋ ಆಗುತ್ತದೆ. ಹೀಗೆ ತನ್ನ ಅನುಭವವನ್ನೆಲ್ಲ ಮುಗಿಸಿ ವೃತ್ತವನ್ನು ಪೂರ್ಣವಾಗಿಸುವವರೆಗೂ ಅದು ತೊಳಲುತ್ತಲೇ ಇರುತ್ತದೆ. ಆಮೇಲೆ ಅದಕ್ಕೆ ತನ್ನ ಸ್ವಭಾವವು ತಿಳಿಯುತ್ತದೆ. ತಾನು ಯಾರೆಂಬುದರ ಅರಿವಾಗುತ್ತದೆ, ಅಜ್ಞಾನವು ತೊಲಗುತ್ತದೆ, ಅದರ ಶಕ್ತಿಗಳು ವ್ಯಕ್ತವಾಗುತ್ತವೆ, ಅದು ಪರಿಪೂರ್ಣವಾಗುತ್ತದೆ. ಇನ್ನುಮೇಲೆ ಈ ಭೌತಿಕ ಶರೀರಗಳಲ್ಲಿ ವ್ಯವಹರಿಸಬೇಕಾದದ್ದೇನೂ ಇರುವದಿಲ್ಲ; ಸೂಕ್ಷ್ಮತರವಾದ ಮಾನಸಶರೀರಗಳಲ್ಲಿ ವ್ಯವಹರಿಸಬೇಕಾದದ್ದೂ ಇರುವದಿಲ್ಲ. ಅದು ತನ್ನ ಬೆಳಕಿನಿಂದ ತಾನು ಬೆಳಗುತ್ತಾ ಮುಕ್ತವಾಗಿಬಿಡುತ್ತದೆ; ಇನ್ನು ಮೇಲೆ ಹುಟ್ಟುವದೂ ಇಲ್ಲ, ಸಾಯುವದೂ ಇಲ್ಲ.

ಇದರ ವಿವರವನ್ನೇನೂ ನಾವು ಈಗ ವಿಚಾರಿಸಬೇಕಾದದ್ದಿಲ್ಲ. ಆದರೆ ಈ ಜನ್ಮಾಂತರವಾದದ ವಿಷಯಕ್ಕೆ ಮತ್ತೊಂದು ವಿಷಯವನ್ನೀಗ ನಿಮ್ಮ ಮುಂದೆ ಇಡುತ್ತೇನೆ. ಈ ವಾದವೇ ಮಾನವಜೀವನ ಪೌರುಷವನ್ನು ಮುಂದಕ್ಕೆ ತರುವ ವಾದವು. ನಮ್ಮ ದೌರ್ಬಲ್ಯದ ತಪ್ಪನ್ನು ಮತ್ತೊಬ್ಬರ ತಲೆಯ ಮೇಲೆ ಹೊರಿಸದೆ ಇರುವದೆಂದರೆ ಇದೊಂದು ವಾದವೇ; ಹೀಗೆ ಮತ್ತೊಬ್ಬರ ಮೇಲೆ ತಪ್ಪುಹೊರಿಸುವದು ಮಾನವನಲ್ಲಿ ಕಂಡುಬರುವ ಸಾಧಾರಣ ದೋಷವೆಂಬುದು ತಿಳಿದೇ ಇದೆ. ನಮಗೆ ನಮ್ಮ ನಮ್ಮ ತಪ್ಪುಗಳು ಕಾಣಿಸುವದೇ ಇಲ್ಲ. ಕಣ್ಣುಗಳಿಗೆ ಮತ್ತೆಲ್ಲರ ಕಣ್ಣುಗಳೂ ಕಾಣಿಸುತ್ತದೆಯಾದರೂ ಅವಕ್ಕೆ ತಮ್ಮನ್ನು ನೋಡಿಕೊಳ್ಳುವ ಶಕ್ತಿಯಿಲ್ಲ. ಮಾನವಪ್ರಾಣಿಗಳಾದ ನಮಗೆ ನಮ್ಮ ನಮ್ಮ ದೌಬಲ್ಯವು, ನಮ್ಮ ನಮ್ಮ ತಪ್ಪುಗಳು ಗೊತ್ತಾಗಬೇಕಾದರೆ ಬಹುದೀರ್ಘಕಾಲಬೇಕು; ನಮಗೆ ಯಾರೊಬ್ಬರ ಮೇಲಾದರೂ ತಪ್ಪುಹೊರಿಸುವದಕ್ಕೆ ಅವಕಾಶವಿರುವವರೆಗೂ ಅವು ಗೊತ್ತಾಗುವದೇ ಇಲ್ಲ. ಸಾಮಾನ್ಯವಾಗಿ ಜನರು ತಮ್ಮ ನೆರೆಯವರ ಮೇಲೋ, ಅದಿಲ್ಲದಿದ್ದರೆ ಈಶ್ವರನ ಮೇಲೋ, ತಮ್ಮ ಜೀವನದ ದೋಷದ ಹೊರೆಯನ್ನು ಹೇರುವರು; ಅದೂ ಇಲ್ಲದಿದ್ದರೆ ಒಂದು ಭೂತವನ್ನು ಕಲ್ಪಿಸಿಕೊಂಡು ಅದನ್ನು ಅದೃಷ್ಟವೆಂದು ಕರೆಯುವರು. ಅದೃಷ್ಟವೆಂದರೆ ಏನು?

ಈ ಅದೃಷ್ಟನೆಂಬುವನು ಯಾರು? ನಾವು ಬಿತ್ತಿದ್ದನ್ನುನಾವು ಬೆಳೆಯುತ್ತೇವೆ: ನಮ್ಮ ನಮ್ಮ ಅದೃಷ್ಟಕ್ಕೆ ನಾವೇ ಕಾರಣರು. ಇದರ ಕೆಟ್ಟ ಹೆಸರು ಮತ್ತೆ ಯಾರದೂ ಅಲ್ಲ, ಕೀರ್ತಿಯು ಯಾರದೂ ಅಲ್ಲ. ಗಾಳಿಯು ಬೀಸುತ್ತಿರುತ್ತದೆ; ಯಾವ ಹಡಗುಗಳ ಧ್ವಜಪಟಗಳು ಬಿಚ್ಚಿರುತ್ತವೆಯೋ ಅವು ಅದನ್ನು ಹಿಡಿದುಕೊಂಡು ತಮ್ಮ ದಾರಿಯಲ್ಲಿ ತಾವು ಹೋಗುತ್ತವೆ; ಆದರೆ ಯಾವ ಹಡಗುಗಳು ಧ್ವಜಗಳು ಮುಚ್ಚಿಕೊಂಡಿರುವವೋ ಅವಕ್ಕೆ ಗಾಳಿಯು ಸಿಕ್ಕುವದಿಲ್ಲ. ಅದು ಗಾಳಿಯ ತಪ್ಪೆ? ಯಾವಾತನ ಕರುಣೆಯೆಂಬ ಗಾಳಿಯು ಹಗಲೂ ಇರುಳೂ ತಪ್ಪದೆ ಬೀಸುತ್ತಿರುವದೋ, ಯಾವಾತನ ಕರುಣೆಗೆ ನಾಶವೇ ಇಲ್ಲವೋ, ನಮ್ಮಲ್ಲಿ ಕೆಲವರು ಸುಖದಿಂದಲೂ ಮತ್ತೆ ಕೆಲವು ದುಃಖದಿಂದಲೂ ಕೂಡಿದ್ದರೆ ಅದು - ಕರುಣಾಕರನಾದ ಸರ್ವಪಿತನಾದ ಆ ಪರಮೇಶ್ವರನ ತಪ್ಪೇ? ನಾವು ನಾವು ನಮ್ಮ ನಮ್ಮ ಗತಿಗೆ ಕಾರಣರಾಗಿರುವೆವು. ಆತನ ಸೂರ್ಯನು ದುರ್ಬಲರಿಗೂ ಸಬಲರಿಗೂ ಒಂದೇ ಸಮನಾಗಿ ಕಾಯುತ್ತಿರುತ್ತಾನೆ; ಆತನ ಗಾಳಿಯು ಮಹಾತ್ಮನಿಗೂ ಪಾಪಿಗೂ ಒಂದೇ ಸಮನಾಗಿ ಬೀಸುತ್ತಿರುತ್ತದೆ; ಆತನು ಎಲ್ಲರಿಗೂ ಈಶ್ವರನು, ಎಲ್ಲರಿಗೂ ತಂದೆಯು, ದಯಾವಂತನು, ನಿಷ್ಪಕ್ಷಪಾತಿಯು. ಸೃಷ್ಟಿಗೊಡೆಯನಾದ ಆ ಈಶ್ವರನು ಈ ನಮ್ಮ ಜೀವನದ ಈ ಪುಡಿವಿಷಯಗಳನ್ನು ನಾವು ಭಾವಿಸುವಂತೆಯೇ ಭಾವಿಸುತ್ತಾನೆನ್ನಬಹುದೇನು? ಹಾಗೆಂದರೆ ಈಶ್ವರನ ವಿಷಯದಲ್ಲಿ ಅದೆಂಥ ಕೀಳು ಕಲ್ಪನೆಯಾದೀತು! ನಾವು ಇಲ್ಲಿ ತಲೆಹೋಗುವ ಕೆಲಸವೆಂದು ನಂಬಿ ಹೊಡೆದಾಡುತ್ತಿರುವ ಸಣ್ಣಪುಟ್ಟ ನಾಯಿಕುನ್ನಿಗಳಂತೆ ಇರುತ್ತೇವೆ; ಈಶ್ವರನು ಕೂಡ ನಮ್ಮಂತೆಯೇ ಈ ವ್ಯವಹಾರಕ್ಕೆ ಇಷ್ಟೇ ಬೆಲೆಯನ್ನು ಕೊಡುತ್ತಾನೆಂದು ಅವಿವೇಕದಿಂದ ನಂಬುತ್ತಿರುತ್ತೇವೆ. ಈ ನಾಯಿಕುನ್ನಿಗಳ ಆಟದ ಅರ್ಥವೇನೆಂಬುದನ್ನು ಆತನು ಬಲ್ಲನು. ಆತನ ಮೇಲೆ ತಪ್ಪನ್ನು ಹೊರಿಸಿ, ಆತನು ದಂಡಿಸುವನೆಂದೂ ಫಲದಾತನೆಂದೂ ಎಣಿಸುವದು ಕೇವಲ ಅವಿವೇಕವು. ಆತನ ಅಪಾರವಾದ ದಯೆಯು ಪ್ರತಿಯೊಬ್ಬನಿಗೂ ಯಾವಾಗಲೂ ಎಲ್ಲೆಲ್ಲಿಯೂ ಎಲ್ಲಾ ಅವಸ್ಥೆಗಳಲ್ಲಿಯೂ ಸ್ವಲ್ಪವೂ ತಪ್ಪದೆ, ಸ್ವಲ್ಪವೂ ಚಾಚೂ ಅತ್ತಿತ್ತ ಅಲುಗದೆ ದೊರಕುವಂತಿರುತ್ತದೆ. ಅದನ್ನು ನಾವು ಹೇಗೆ ಉಪಯೋಗಿಸುವವೆಂಬುದು ನಮ್ಮನ್ನೇ ಅವಲಂಬಿಸಿರುತ್ತದೆ. ನಾವು ಅದನ್ನು ಹೇಗೆ ಉಪಯೋಗಕ್ಕೆ ತರುವೆವೆಂಬುದು ನಮ್ಮನ್ನೇ ಸೇರಿಕೊಂಡಿರುತ್ತದೆ. ಮನುಷ್ಯನನ್ನಾಗಲಿ, ಈಶ್ವರನನ್ನಾಗಲಿ, ಈ ಪ್ರಪಂಚದಲ್ಲಿ ಮತ್ತೆ ಯಾರನ್ನಾಗಲಿ ತಪ್ಪೆಣಿಸಿ ದೂರದಿರಿ. ನಿಮಗೆ ಕಷ್ಟ ಒದಗಿದರೆ ನೀವೇ ಅದಕ್ಕೆ ಕಾರಣರೆಂದುಕೊಂಡು ಇನ್ನು ಮೇಲೆ ಸರಿಯಾಗಿ ನಡೆಯುವುದಕ್ಕೆ ಪ್ರಯತ್ನ ಮಾಡಿರಿ.

ಈ ತೊಡಕನ್ನು ಬಿಚ್ಚುವದಕ್ಕೆ ಇದೊಂದೇ ಮಾರ್ಗವು. ಮತ್ತೊಬ್ಬರನ್ನು ದೂರುವವರು- ಅಂಥವರ ಸಂಖ್ಯೆಯು ದಿನದಿನಕ್ಕೂ ಹೆಚ್ಚುತ್ತಿರುವದೊಂದೇ ಶೋಚನೀಯುವಾದದ್ದು, ಅಂಥವರು -ಸಾಮಾನ್ಯವಾಗಿ ದುಃಖಕ್ಕೀಡಾಗಿರುತ್ತಾರೆ, ಅವರ ಮೆದುಳಿಗೆ ಏನೇನೂ ಹಿಡಿಯುವಂತಿರುವದಿಲ್ಲ; ತಮ್ಮ ತಪ್ಪಿನಿಂದಲೇ ಅವರು ಆ ಸ್ಥಿತಿಗೆ ಬಂದವರಾಗಿದ್ದರೂ ಮತ್ತೊಬ್ಬರನ್ನು ಅದಕ್ಕಾಗಿ ದೂರುತ್ತಿರುತ್ತಾರೆ, ಆದರೆ ಅದರಿಂದೇನೂ ಅವರ ಸ್ಥಿತಿಯು ಬೇರ್ಪಡುವದಿಲ್ಲ. ಅದರಿಂದ ಅವರಿಗೆ ಯಾವ ಪ್ರಯೋಜನವೂ ಆಗುವದಿಲ್ಲ. ಮತ್ತೊಬ್ಬರ ಮೇಲೆ ತಪ್ಪನ್ನು ಹೊರಿಸುವ ಈ ಪ್ರಯತ್ನದಿಂದ ಅವರು ಇನ್ನಷ್ಟು ದುರ್ಬಲರಾಗುತ್ತಾರೆ. ಆದ್ದರಿಂದ ನಿಮ್ಮ ತಪ್ಪಿಗೆ ಮತ್ತೊಬ್ಬರನ್ನು ದೂರದಿರಿ, ನಿಮ್ಮ ಕಾಲ ಮೇಲೆ ನೀವು ನಿಂತುಕೊಳ್ಳಿರಿ, ಪೂರ್ಣ ಹೊಣೆಗಾರಿಕೆಯನ್ನು ನೀವೇ ತೆಗೆದುಕೊಳ್ಳಿರಿ, "ನನ್ನನ್ನು ವ್ಯಥೆಗೊಳಿಸುತ್ತಿರುವ ಈ ದುಃಖಕ್ಕೆ ನಾನೇ ಕಾರಣನು. ಆದ್ದರಿಂದಲೇ ಇದನ್ನು ನಾನೇ ಸರಿಗೊಳಿಸಬೇಕೆಂದು ಸಿದ್ಧವಾಗುತ್ತದೆ" ಎಂದುಕೊಳ್ಳಿರಿ. ನಾನು ಯಾವದನ್ನು ಸೃಷ್ಟಿಸಿದೆನೋ ಅದನ್ನು ನಾನು ನಾಶಮಾಡಲಾಪೆನು; ಮತ್ತೊಬ್ಬರು ಮಾಡಿರುವದನ್ನು ನಾನು ಎಂದಿಗೂ ನಾಶಗೊಳಿಸಲಾಪೆನು. ಆದಕಾರಣ ಎದ್ದುನಿಂತುಕೊಳ್ಳಿರಿ, ಧೈರ್ಯವನ್ನು ತಂದುಕೊಳ್ಳಿರಿ, ಬಲವನ್ನು ತಂದುಕೊಳ್ಳಿರಿ, ಒಟ್ಟುಹೊಣೆಗಾರಿಕೆಯನ್ನು ನಿಮ್ಮ ತಲೆಯ ಮೇಲೆಯೇ ಹಾಕಿಕೊಳ್ಳಿರಿ. ನಿಮ್ಮ ನಿಮ್ಮ ಗತಿಯನ್ನು ನೀವು ನೀವೇ ಕಂಡುಕೊಳ್ಳಬೇಕೆಂಬುದನ್ನು ನಿಶ್ಚಯಿಸಿಕೊಳ್ಳಿರಿ. ನಿಮಗೆ ಬೇಕಾಗಿರುವ ಬಲವೆಲ್ಲ, ಸಹಾಯವೆಲ್ಲ, ನಿಮ್ಮೊಳಗೇ ಇರುತ್ತದೆ. ಆದ್ದರಿಂದ ನಿಮ್ಮ ನಿಮ್ಮ ಭವಿಷ್ಯವನ್ನು ನೀವೇ ಸೃಷ್ಟಿಸಿಕೊಳ್ಳಿರಿ, ಆದದ್ದು ಆಗಿಹೋಯಿತು. ಅದಕ್ಕೆ ಚಿಂತಿಸಿ ಫಲವೇನು? ನಿಮ್ಮ ಮುಂದೆ ಅನಂತವಾದ ಭವಿಷ್ಯತ್ಕಾಲವಿದೆ. ಒಂದೊಂದು ಮಾತೂ ಒಂದೊಂದು ವಿಚಾರವೂ ಒಂದೊಂದು ಕೃತ್ಯವೂ ನಿಮಗೆ ವಾಸನೆಗಳ ಸಂಸ್ಕಾರವನ್ನುಂಟುಮಾಡುವದೆಂಬುದನ್ನು ಯಾವಾಗಲೂ ನೆನಪಿನಲ್ಲಿಡಿರಿ. ಕೆಟ್ಟ ಭಾವನೆಗಳೂ ಕೆಟ್ಟ ಕರ್ಮಗಳೂ ಹುಲಿಗಳಂತೆ ಟಂಗನೆ ಹಾರುವದಕ್ಕೆ ಹೇಗೆ ಸಿದ್ಧವಾಗಿರುವವೋ ಅದರಂತೆ ಒಳ್ಳೆಯ ಕೃತ್ಯಗಳೂ ನೂರು ಸಾವಿರ ದೇವತೆಗಳ ಶಕ್ತಿಯನ್ನು ಹೊಂದಿ ನಿಮ್ಮನ್ನು ಯಾವಾಗಲೂ ಎಂದೆಂದಿಗೂ ಕಾಪಾಡುವದಕ್ಕೆ ಸಿದ್ಧವಾಗಿರುವದೆಂಬ ಆಶಾಭರದಿಂದ ವಿಶ್ವಸ್ತರಾಗಿರಿ.

------

# ಸ್ವಾಮಿ ವಿವೇಕಾನಂದರ ಸ್ಮರಣೆ

ಶ್ರೀ ವಿವೇಕಾನಂದ ಸ್ವಾಮಿಗಳವರು ಪಾಶ್ಚಾತ್ತ್ಯ ದೇಶಗಳಿಗೆ ಹೋಗಿಬಂದ ದಿಗ್ವಿಜಯ ಯಾತ್ರೆಯಿಂದ ಲೋಕವಿಖ್ಯಾತರಾಗಿ ಹಿಂತಿರುಗುವ ವೇಳೆಗೆ ನಾವು ಕಂದೆರೆದು ಎಚ್ಚತ್ತಿದ್ದೆವು. ಐಹಿಕಸಂಪದ್ಭರಿತರಾದ ಪಾಶ್ಚಾತ್ತ್ಯದೇಶಗಳವರೂ ಕೇಳಿ ತಲೆದೂಗುವಂಥ ಉದಾತ್ತವಿಚಾರಗಳೂ ಉಪದೇಶಗಳೂ ನಮ್ಮ ಮತದಲ್ಲಿವೆ ಎಂಬುದನ್ನು ನಮಗೆ ಅವರು ಆ ವಿಜಯಯಾತ್ರೆಯಿಂದ ಮನವರಿಕೆಮಾಡಿಕೊಟ್ಟರು. ಆರ್ಥಿಕಸ್ಥಿತಿಯಲ್ಲಿ ನಾವು ಕೆಳಕ್ಕೆ ಬಿದ್ದಿದ್ದರೂ ನಮ್ಮ ಪೂರ್ವದ ಋಷಿಗಳ ಅನುಗ್ರಹದಿಂದ ನಮ್ಮ ಆಚಾರವಿಚಾರಗಳು ಮಿಕ್ಕವರ ಆಚಾರವಿಚಾರಗಳಿಗಿಂತ ಉತ್ತಮವಾಗಿವೆ – ಎಂಬುದನ್ನು ಅವರು ಮನಗಾಣಿಸಿಕೊಟ್ಟರು. ನಮ್ಮ ಸಮಾಜದಲ್ಲಿ ಎಷ್ಟೇ ಕೊರತೆಗಳಿದ್ದರೂ ಈಗ ಇರುವ ಸ್ಥಿತಿಯಲ್ಲಿಯೂ ಇಂಥ ಸುವ್ಯವಸ್ಥಿತಸಮಾಜವು ಮತ್ತೆಲ್ಲಿಯೂ ರೂಪಿತವಾಗಿಲ್ಲವೆಂಬುದನ್ನು ಅವರು ನಮ್ಮ ಅವಧಾನಕ್ಕೆ ತಂದುಕೊಟ್ಟರು. ಪಶ್ಚಿಮದೇಶಗಳಿಂದ ಬಂದಿರುವ ಹೊಸ ವಿಚಾರಗಳನ್ನೂ ಒಗ್ಗಟ್ಟಿನ ಭಾವನೆಯ ಹಿರಿಮೆಯನ್ನೂ ನಮ್ಮ ಪ್ರಾಚೀನಸಂಸ್ಕೃತಿಗೆ ಸೇರಿಸಿಕೊಂಡು ನಮ್ಮ ಲೋಪದೋಷಗಳನ್ನು ನಿವಾರಿಸಿಕೊಂಡರೆ ನಿರುಪಮಾನಸ್ಥಿತಿಗೆ ಏರುವದಕ್ಕೆ ನಮಗೆ ಅವಕಾಶವಿದೆ ಎಂಬುದನ್ನು ಅವರು ನಮಗೆ ಒಪ್ಪಾಗುವಂತೆ ತಿಳಿಸಿಕೊಟ್ಟರು. ಐತಿಹಾಸಿಕ ಕಾಲದಲ್ಲಿ ನಮಗೂ ಪರದೇಶಗಳಿಗೂ ಯಾವಾಗ ಸಂಪರ್ಕವಾಯಿತೋ ಆಗಾಗಲೆಲ್ಲ ನಮ್ಮ ದೇಶದ ಆಧ್ಯಾತ್ಮಿಕವಿಚಾರಗಳ ಪ್ರಭಾವವು ಪರದೇಶದವರಮೇಲೂ ಬೀರಿತೆಂದೂ ಇನ್ನುಮುಂದೆಯೂ ನಾವು ಭೂಮಂಡಲದಲ್ಲಿ ಆಧ್ಯಾತ್ಮಿಕಪರಿವರ್ತನೆಯನ್ನು ಮಾಡಲೆಂದೇ ನಮ್ಮ ಜನಾಂಗವು ಈಗಲೂ ಇನ್ನೂ ಜೀವಂತವಾಗಿದೆ ಎಂಬ ಭವ್ಯವಾದ ಅಭ್ಯುದಯದ ನಿರೀಕ್ಷಣೆಯನ್ನೂ ಅವರು ನಮ್ಮ ಲಕ್ಷ್ಯದಲ್ಲಿಟ್ಟರು.

ಅವರ ಈ ಉಪಕಾರಸ್ಮರಣೆಯನ್ನು ಭಾರತದೇಶದ ಏಳಿಗೆಯಲ್ಲಿ ಬದ್ಧಾದರರಾಗಿರುವವರೆಲ್ಲರೂ ಮನಸ್ಸಿನಲ್ಲಿ ಎಬ್ಬಿಸಿಕೊಳ್ಳಬೇಕು. ಅವರು ಹಾಕಿಕೊಟ್ಟ ಮೇಲುಪಙ್ಕ್ತಿಯನ್ನೇ ಅನುಸರಿಸಿ ನಮ್ಮ ಜೀವನವನ್ನು ಹೇಗೆ ವಿಕಾಸಗೊಳಿಸಿಕೊಳ್ಳಬಹುದು, ದೇಶದ ಸುಸಂಸ್ಕೃತಿಯ ತಂಬೆಳಕು ನಮ್ಮ ಮೇಲೂ ಪರದೇಶದವರಮೇಲೂ ಬಿದ್ದು ಹೇಗೆ ಅವರಿಗೆ ನೆಮ್ಮದಿಯನ್ನುಂಟು ಮಾಡಬಹುದು ? – ಎಂಬುದನ್ನು ಪರ್ಯಾಲೋಚಿಸಬೇಕು.

ಕಾಲಮಹಿಮೆಯಿಂದ ಭೂಲೋಕದ ನಾಗರಿಕದೇಶಗಳಲ್ಲೆಲ್ಲ ಜನರ ಮನಸ್ಸು ಕದಡಿಹೋಗಿರುತ್ತದೆ. ಭೌತಿಕವಿಜ್ಞಾನದ ವಿಕಾಸದಿಂದ ಜನರು ಐದು ಭೂತಗಳ ಕ್ಷೇತ್ರಗಳಲ್ಲಿಯೂ ತಮ್ಮ ಪ್ರಭಾವವನ್ನು ವಿಸ್ತರಿಸಿಕೊಳ್ಳುತ್ತಿದಾರೆ. ಜೀವನಕ್ಕೆ ಬೇಕಾದ ಸೌಕರ್ಯಗಳ ಉಪಕರಣಗಳನ್ನು ಪರಿಶೋಧಿಸಿಕೊಳ್ಳುತ್ತಾಬಂದಿರುತ್ತಾರೆ. ಶರೀರಮನಸ್ಸುಗಳ ಸ್ವಾಸ್ಥ್ಯಕ್ಕೆ ಬೇಕಾದ ಸಾಧನಗಳನ್ನು ಹಲವು ಯಂತ್ರಗಳ ಮೂಲಕ ಹೊಸದಾಗಿ ಕಂಡುಹಿಡಿದಿರುತ್ತಾರೆ. ಆದರೆ ಇದರಿಂದ ಆಗಬೇಕಾದ ಸತ್ಫಲದ ಪ್ರಾಪ್ತಿಗೆ ನೆರವಾಗಬಹುದಾಗಿದ್ದ ಧರ್ಮನೀತಿಗಳು ಆದರ್ಶಜೀವಿಗಳಾದ ಆಚಾರ್ಯರ ಅಭಾವದಿಂದ ಹ್ರಾಸವಾಗುತ್ತಿವೆ. ನಾಗರಿಕಜನಾಂಗದವರೆಂದು ಕೊಚ್ಚಿಕೊಳ್ಳುತ್ತಿರುವವರುಕೂಡ ಪರಸ್ಪರವಾಗಿ ಈರ್ಷ್ಯಾಸೂಯೆಗಳಿಂದ ನಡೆಯುತ್ತಾ ಲೋಕಕ್ಷಯಕ್ಕೆ ಕಾರಣವಾದ ಆಟಮ್‌ಬಾಂಬ್ ಮುಂತಾದ ಮಾರಕಾಸ್ತ್ರಗಳನ್ನು ಒಟ್ಟಲುಹಾಕಿಕೊಳ್ಳುತ್ತಿದಾರೆ. ಕಾಮಕ್ರೋಧಮಾನಮದ ದಂಭದರ್ಪಗಳು ತಾಂಡವವಾಡುತ್ತಾ ಬಂದಿವೆ. ಈ ಅಧರ್ಮದ ಬಿರುಗಾಳಿಯು ನಮ್ಮ ಭಾರತ ಭೂಮಿಯಮೇಲೂ ನುಗ್ಗಿಬಂದಿದೆ.

ಶ್ರೀವಿವೇಕಾನಂದಸ್ವಾಮಿಗಳವರು ಲೋಕೋಪಕಾರಕ್ಕೆಂದು ಏರ್ಪಡಿಸಿರುವ ರಾಮಕೃಷ್ಣಮಿಷನ್ನಿನವರು ಈಗಿನ ಜನಮನದಲ್ಲಾಗಿರುವ ಮಹಾಪರಿವರ್ತನೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳುವದು ಅತ್ಯವಶ್ಯವೆಂದು ನಮಗೆ ತೋರುತ್ತಿದೆ. ಆ ಸ್ವಾಮಿಗಳು ವಿಜಯಯಾತ್ರೆಯಿಂದ ಹಿಂತೆರಳಿದಾಗ್ಗೆ, ಸಿಂಹಳದಿಂದ ಹಿಮಾಲಯದವರೆಗೆ ದೇಶನಿವಾಸಿಗಳು ಪರಮೋತ್ಸಾಹದಿಂದ ಅವರಿಗೆ ಏರ್ಪಡಿಸಿದ ಸ್ವಾಗತೋತ್ಸವಗಳ ಕಾಲದಲ್ಲಿ ಜನರ ಮನಃಸ್ಥಿತಿ ಹೇಗಿತ್ತು ? - ಎಂಬುದು ಮಿಷನ್ನಿನವರು ಪ್ರಕಟಿಸಿರುವ (Lectures From Colombo to Almora ಎಂಬ) ಗ್ರಂಥವನ್ನು ಸಾವಧಾನವಾಗಿ ಓದಿದರೆ ಮನಸ್ಸಿಗೆ ತಟ್ಟೀತು. ಶ್ರೀ ವಿವೇಕಾನಂದರು (1) "ನಮ್ಮ ದೇಶದಲ್ಲಿ ನೇಗಿಲುಹಿಡಿದವನೊಬ್ಬನನ್ನು ರಾಜಕಾರಣದ ವಿಚಾರವಾಗಿ ಕೇಳಿದರೆ 'ಹಾಗೆಂದರೇನು ?' ಎನ್ನುತ್ತಾನೆ ; ನಿಮ್ಮ ಮತವು ಯಾವದು ?- ಎಂದು ಕೇಳಿದರೊ, 'ನನ್ನ ಹಣೆಯನ್ನು ನೋಡಿರಿ' ಎಂದು ತಿಲಕವನ್ನು ತೋರಿಸುತ್ತಾನೆ : ಈಶ್ವರಭಕ್ತಿಯ ವಿಚಾರಕ್ಕೆ ಒಂದೆರಡು ಮಾತನ್ನೂ ಹೇಳಿಯಾನು!" (7) ಎಂದಿರುತ್ತಾರೆ. ಆದರೆ ಈಗ ? ಹಳ್ಳಿಯಿಂದ ಡಿಲ್ಲಿಯವರೆಗೂ ಎಲ್ಲರೂ ರಾಜಕಾರಣಧುರೀಣರು ! ಎಲ್ಲರೂ ಮತದಾನ, ಕಾಂಗ್ರೆಸ್ಸು ಮುಂತಾದ ಪಾರ್ಟಿ, ವಿಧಾನ ಸಭೆಗಳ ವಿಚಾರ - ಇವುಗಳ ಮಾತನ್ನಾಡುತ್ತಿರುವರು : ಆಚಾರವಿಚಾರಗಳ ಬಗ್ಗೆ ಯಾರಿಗೂ ಆದರವಿಲ್ಲವಾಗಿದೆ. ಸ್ಕೂಲುಗಳಲ್ಲಿ ಕೂಡ ಮತವಿಚಾರದ ಶಿಕ್ಷಣವಿಲ್ಲ. ಇನ್ನು ಕೆಲವೇ ವರ್ಷಗಳಲ್ಲಿ ರಾಮಾಯಣ ಮಹಾಭಾರತವಿಚಾರದ ಕಥೆಯನ್ನು ತಿಳಿದ ಪಂಡಿತರು ಸಿಕ್ಕುವದೂ ದುರ್ಲಭವಾದೀತೇನೊ, ಎನ್ನಿಸುತ್ತಿದೆ ! (2) ಜಾತಿಪದ್ಧತಿಯು ಅನಿವಾರ್ಯವಾಗಿದೆ. ನಮ್ಮ ದೇಶದ ಜಾತಿಪದ್ಧತಿಯು ಎಷ್ಟೋ ಉತ್ತಮ ; ಮನಃಶುದ್ಧಿ, ಸಂಸ್ಕೃತಿ, ಸ್ವಾರ್ಥತ್ಯಾಗ - ಇವುಗಳ ಜಾತಿಯೇ ನಮಗಿರಲಿ! ಡಾಲರುನಾಣ್ಯಗಳ ಜಾತಿಯು ಖಂಡಿತ ಬೇಡ !' (108)-ಎಂದಿದ್ದರು ಸ್ವಾಮಿಗಳು. ಈಗ ? ಜಾತಿಯನ್ನು ಕಂಡರೆ ಎಲ್ಲರೂ ಮೂಗುಮುರಿಯುವವರೇ, ರಾಜಕೀಯಪಾರ್ಟಿಗಳ ಜಾತಿಯೇ ನಮ್ಮ ಜನರಿಗೆ ಬೇಕು ! (3) 'ನಮ್ಮದು ಪುಣ್ಯಭೂಮಿ ! ಈಶ್ವರಸಾಮೀಪ್ಯವನ್ನು ಹೊಂದುವದಕ್ಕೆ ಭೂಲೋಕದ ಜೀವರೆಲ್ಲರೂ ಇಲ್ಲಿ ಹುಟ್ಟಲೇಬೇಕು ! ಅಂತರ್ದೃಷ್ಟಿ, ಆಧ್ಯಾತ್ಮಿಕಭಾವ - ಇವುಗಳಿಗೆ ತೌರೂರು ನಮ್ಮ ದೇಶ, ಭೂಲೋಕದ ಚಾರ್ವಾಕಬುದ್ಧಿಯನ್ನು ಅಧ್ಯಾತ್ಮಕ್ಕೆ ತಿರುಗಿಸುವ ತರಂಗವು ಇಲ್ಲಿಂದಲೇ ಏಳಬೇಕಾಗಿದೆ' (3) ಎಂದರು, ಸ್ವಾಮಿಗಳು. ಈಗ ? ಇಂಗ್ಲೆಂಡ್, ಜರ್ಮನಿ, ಅಮೆರಿಕ - ಮುಂತಾದ ಪ್ರಾಂತಗಳಿಗೆ ಯಾತ್ರೆಹೋಗಿ ಅಲ್ಲಿ ಜ್ಞಾನಸ್ನಾನವನ್ನು ಹೊಂದಿದವರೇ ಋಷಿಗಳು ! ಪಾಶ್ಚಾತ್ತ್ಯರ ನಾಗರಿಕತೆಯ, ಮತ್ತು ಅವರ ಸಂಸ್ಕೃತಿಯ ಮೆರುಗಿಲ್ಲದೆ ನಮಗೆ ಮೋಕ್ಷವಿಲ್ಲ ! - ಎಂಬ ಕೂಗು ದೇಶವೆಲ್ಲವನ್ನೂ ವ್ಯಾಪಿಸುತ್ತಿದೆ. (4) 'ತಪೋಯಜ್ಞಾದಿಗಳುಈ ಯುಗಕ್ಕೆ ಸಾಧ್ಯವಿಲ್ಲ ; ದಾನವೊಂದೇ ಕಲಿಯುಗಕ್ಕೆ ಹೇಳಿಸಿದ್ದು - ಎಂಬುದು ವ್ಯಾಸರ ಮತ. ಅಧ್ಯಾತ್ಮ ಹಿಂದಿನದಾಗದಿದ್ದರೆ ಮುಂದುಮುಂದಿನ ದಾನವನ್ನಾದರೂಮಾಡಬೇಕು' (35) ಎಂದಿದ್ದರು ಸ್ವಾಮಿಗಳು. ಈಗ ? ಪರಮಾತ್ಮವಿಮುಖರು, ವಿದ್ಯಾವಿಹೀನರು, ಹೇಡಿಗಳು, ಹೊಟ್ಟೆಗಿಲ್ಲದವರು - ಹೇರಳವಾಗಿರುವಲ್ಲಿ ಯಾವ ದಾನವನ್ನು ಮಾಡಲಾದೀತು? ಅಮೆರಿಕ, ಆಸ್ಟ್ರೇಲಿಯಗಳಿಂದ ಹೊಟ್ಟೆಗೆ ಬೇಕಾದ ಧಾನ್ಯಬರಬೇಕಾಗಿದೆ, ನಮಗೆ ! (5) ಪ್ರತಿಯೊಬ್ಬನೂ 'ಸಂಸಾರಭೋಗವನ್ನುಸವಿದಾದ ಮೇಲೆ ಜೀವನದ ಅಂತ್ಯಭಾಗದಲ್ಲಿ ಸರ್ವತ್ಯಾಗವನ್ನೂ ಮಾಡುವ ಸಂನ್ಯಾಸಿಯಾಗಬೇಕು. ಹಾಗೆ ಮಾಡದವನು ಹಿಂದುವೆನಿಸಲಾರನು" ಎಂದಿದ್ದರು, ಸ್ವಾಮಿಗಳು. ಈಗ ? ಸ್ಥಾನಮಾನಗಳು ಕೀರ್ತಿ, ವಿಲಾಸಜೀವನ - ಇವುಗಳನ್ನು ಮೋಸ, ಕಾಪಟ್ಯ, ದುರ್ವಾಣಿಜ್ಯ, ಲಂಚ, ಹೇಗಾದರೂ

ಮಾಡಿ 'ಗಾನ, ಪೀನ, ಬಜಾನ' ಎಂಬ ಗುರಿಯ ಭೋಗಜೀವನವನ್ನು ಸಂಪಾದಿಸುವದೇ ನಮ್ಮ ದೇಶದ ಗುರಿ ಎಂದು ಕಾಣುತ್ತಿದೆ.

**ವಿವೇಕಾನಂದಸ್ವಾಮಿಗಳನ್ನು ಹಾಡಿಹೊಗಳುವ ಭಾರತನಿವಾಸಿಗಳಿರಾ, ಏಳಿ, ಎಚ್ಚತ್ತು ಕಣ್ಣು ತೆರೆಯಿರಿ.** ಅಧ್ಯಾತ್ಮವಿವೇಕದಿಂದ ನಿತ್ಯಾನಂದವನ್ನು ಪಡೆಯುವದೇ ಜೀವನದ ಗುರಿ ಎಂಬುದನ್ನು ಮರೆಯದಿರಿ ! ದೇಹದಲ್ಲಿ ಶಕ್ತಿಯಿರುವಾಗ ಮೈಮುರಿದು ಕೆಲಸಮಾಡುತ್ತಲೇ ಇದ್ದು ಗುರುಸೇವೆಯಿಂದ ಅಧ್ಯಾತ್ಮವಿದ್ಯೆಯನ್ನು ಸಂಪಾದಿಸಿಕೊಳ್ಳಿರಿ ! ಹಿಂದಿನ ಬ್ರಹ್ಮರ್ಷಿಗಳನ್ನು ಧ್ಯೇಯವಾಗಿಟ್ಟುಕೊಂಡು ವೇದಾಂತವಿದ್ಯೆಯನ್ನು ಸಂಪಾದಿಸುವದಕ್ಕೆ ಸರ್ವಪ್ರಯತ್ನವನ್ನೂ ಮಾಡಿರಿ ! ನಿಮ್ಮೊಳಗೆ ಹುದುಗಿರುವ ಪರಮಾತ್ಮತತ್ತ್ವವನ್ನು ಜೀವನದಲ್ಲೆಲ್ಲ ಕಂಡುಕೊಳ್ಳಿರಿ! ವೇದಾಂತವೇ ನಮ್ಮ ದೇಶದ ಗುರಿ !

**ಸಮಾಜಸುಧಾರಕರಿರಾ, ನಿಮ್ಮ ಸುಧಾರಣೆಯನ್ನು ಮೊದಲು ಮಾಡಿಕೊಳ್ಳಿರಿ.** ಶ್ರೇಷ್ಠರ ಆಚರಣೆಯನ್ನೇ ಸಾಮಾನ್ಯರು ಅನುಕರಿಸುವರೆಂಬುದನ್ನು ಅರಿತುಕೊಳ್ಳಿರಿ. ನಮ್ಮ ದೇಶದ ಉತ್ತಮವಾದ ಆಚಾರವಿಚಾರಗಳ ಮರ್ಮವನ್ನು ಮನದಟ್ಟಿ ತೊಡಿಕೊಂಡು ನಿಮ್ಮ ಆಚರಣೆಯ ಉದಾಹರಣೆಯಿಂದಲೇ ಜನರನ್ನು ಸುಶಿಕ್ಷಿತರನ್ನಾಗಿ ಮಾಡಿರಿ ! ಸಮಾಜವನ್ನು ಹಳಿಯುವದನ್ನೂ ಕಾಮಚಾರ, ಕಾಮಭಕ್ಷಣ, ಸಂಕೀರ್ಣವಿವಾಹ, ವಿವಾಹವಿಚ್ಛೇದ-ಮುಂತಾದ ಸ್ವೈರಾಚರಣೆಯಿಂದ **ಜಾತಿಕುಲಗೋತ್ರಗಳ ಸಂಕರಮಾಡುವದೇ ಸಮಾಜಶುದ್ಧಿ ಎಂಬ ಕುಬುದ್ಧಿಯನ್ನೂ ತ್ಯಜಿಸಿರಿ !**

**ದೇಶದ ಮೂಲಸ್ತಂಭವಾಗಿರಬೇಕಾದ ಸಾಧುಗಳಿರ, ಸಂನ್ಯಾಸಿಗಳಿರ !** ವಿಶೇಷವಾಗಿ ಶ್ರೀವಿವೇಕಾನಂದಸ್ವಾಮಿಗಳ ಪರಮೋದ್ದೇಶವನ್ನು ಅನುಷ್ಠಾನದಿಂದ ಈಡೇರಿಸುವದಕ್ಕೆಂದು ಟೊಂಕವನ್ನು ಕಟ್ಟಿರುವ ಭಾರತವಾಸಿಗಳಾದ **ರಾಮಕೃಷ್ಣಮಿಷನ್ನಿನೊಳಗಿನ ಸಂನ್ಯಾಸಿಗಳಿರ !** ನಿಮ್ಮ ಮೇಲೆ ದೊಡ್ಡದೊಂದು ಹೊಣೆಗಾರಿಕೆಯು ಬಿದ್ದಿದೆ. ಸ್ವಾಮಿಗಳವರು ದೇಶಾಂತರಗಳಿಗೆ ಹೋಗಿ ಅವರಿಗೆ ಅರ್ಥವಾಗುವ ವೇಷಭಾಷೆಗಳನ್ನು ಧರಿಸಿ, ಅವರ ಮನಸ್ಸನ್ನು ಅತ್ಯಂತಪ್ರಾಚೀನವಾದ ವೇದಾಂತವಿದ್ಯೆಗೆ ಒಲಿಸಿದರು ; ಅದರ ಮೂಲಕ ನಮ್ಮನ್ನು ಎಚ್ಚರಿಸಿ ನಮ್ಮ ದೇಶದ ಸಂಸ್ಕೃತಿಯಲ್ಲಿ ಅಭಿಮಾನವನ್ನುಮೂಡಿಸಿದರು. ಈಗ ನೀವು ನಮ್ಮ ದೇಶದ ಆಚಾರವಿಚಾರಗಳನ್ನುಅನುಸರಿಸಿ ಜನರಿಗೆ ವೇದದಲ್ಲಿಯೂ ಈಶ್ವರನಲ್ಲಿಯೂ ಶ್ರದ್ಧಾದರಗಳುಂಟಾಗುವಂತೆ ಅವರ ಭಾಷೆಯ ದ್ವಾರದಿಂದಲೇ ಬೋಧಿಸಿರಿ. ಜಗತ್ತು ಅನಾದಿಯಿಂದಲೂ ಪರಮಾತ್ಮನನ್ನೇ ಆಶ್ರಯಿಸಿಕೊಂಡು ಸೃಷ್ಟಿಸ್ಥಿತಿಪ್ರಲಯಗಳನ್ನು ಹೊಂದುತ್ತಿರುವದನ್ನೂ ಜೀವರು ತಮ್ಮ ಕರ್ಮಾನುಸಾರವಾಗಿ ಹೊಸಹೊಸ ಜನ್ಮಾಂತರಗಳನ್ನು ಪಡೆಯುತ್ತಿರುವದನ್ನೂ ತಿಳಿಸಿಕೊಡಿರಿ. ಆಹಾರಶುದ್ಧಿ, ವರ್ಣಾಶ್ರಮಧರ್ಮ, ವಿವೇಕವೈರಾಗ್ಯಗಳಿಂದ ಗುರುಸೇವೆಯನ್ನು ಮಾಡಿ ತಮ್ಮ ನಿತ್ಯಶುದ್ಧಬುದ್ಧಮುಕ್ತಸ್ವಭಾವವಾದ ಬ್ರಹ್ಮರೂಪದಲ್ಲಿ ನೆಲೆನಿಲ್ಲಬಹುದೆಂಬುದನ್ನು ಜನರಿಗೆ ಮನಗಾಣಿಸಿರಿ ! ಆಗಲೇ ನೀವು ಪರಮಾರ್ಥಸಂನ್ಯಾಸಿಗಳೆನಿಸುವಿರಿ ! ವಿವೇಕಾನಂದರ ಸಚ್ಛಿಷ್ಯರೆನಿಸುವಿರಿ !

1. ಕಂಸದಲ್ಲಿ ಹಾಕಿರುವ ಇಂಗ್ಲಿಷು ಅಂಕಿಗಳು (Lectures From Colombo to Almora) ಎಂಬ ಗ್ರಂಥದ ಪುಟಗಳು.

# ಸಂಸ್ಥಾಪಕರ ಸ್ಮರಣೆ



ವೇದಧರ್ಮದ ಪುನರುತ್ಥಾನ ಮತ್ತು ವೇದಾಂತಕ್ಕೊಂದು ನವಚೇತನ ತುಂಬಿದ ಮಹತ್ಕಾರ್ಯ ಸರ್ವದಾ ಸ್ಮರಣೀಯರಾದ ಶ್ರೀಶಂಕರಭಗವತ್ಪಾದರದು. **ಬ್ರಹ್ಮೀಭೂತ ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳವರು** (ಪೂರ್ವಾಶ್ರಮದ ಶ್ರೀ ಯಲ್ಲಂಬಳಸೆ ಸುಬ್ರಹ್ಮಣ್ಯಶರ್ಮರು– ವೈ. ಸುಬ್ಬರಾಯರು, ಜನನ 5–1–1880) ಶ್ರೀ ಶಂಕರರ ವೇದಾಂತ ಸರಣಿಯಿಂದ ಆಕರ್ಷಿತರಾಗಿ, ಆಳವಾದ ಅಧ್ಯಯನ, ಚಿಂತನ ಮಂಥನಗಳಿಂದ, ತಮ್ಮ ವಿಶಿಷ್ಟ ಸಂಶೋಧನಾ ಪ್ರವೃತ್ತಿಯನ್ನು ಬಳಸಿ, ಶಂಕರರ ಅಮೋಘವಾದ ಪ್ರಸ್ಥಾನತ್ರಯ ಭಾಷ್ಯಗಳಿಗೆ ಹತ್ತಿದ್ದ ಕಳೆಯನ್ನು ಮುತ್ತಿದ್ದ ಧೂಳನ್ನು ತೊಡೆದು, ಶಾಂಕರವೇದಾಂತದ ನೈಜ ತಿರುಳನ್ನು ಕಂಡುಕೊಂಡರು. ಶಾಂಕರ ವೇದಾಂತಕ್ಕೆ 20ನೇ ಶತಮಾನದ ಅಧಿಕೃತ ವಕ್ತಾರರಾದರು, ಪ್ರತಿಪಾದಕರಾದರು, 'ಅಭಿನವ ಶಂಕರ' ರಾದರು.

'ಬೆಳಿಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿನಿಂದ ಬದುಕಿರುವವರೆಗೂ ವೇದಾಂತ ಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು' ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀ ಶ್ರೀಗಳವರು ತಮ್ಮ ಬಾಲದಿಂದ 96 ನೇ ವಯಸ್ಸಿನವರೆಗೂ ವೇದಾಂತ ಗ್ರಂಥ ಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದು, **'ಪುರುಷ ಸರಸ್ವತಿ'** ಎಂಬ ಅನ್ವರ್ಥನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲೀಷ್, ಸಂಸ್ಕೃತ ಭಾಷೆಗಳ ಇನ್ನೂರಕ್ಕೂ ಮೀರಿ ಕೃತಿಗಳು ವೇದಾಂತ ಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಸಂಸ್ಕೃತ ಬಾರದ ಅಧ್ಯಾತ್ಮ ವಿಚಾರದ ಜಿಜ್ಞಾಸುಗಳಿಗೆ ಒಂದು ವರಪ್ರದಾನವಾಗಿದೆ.

ಶಾಲಾ ಉಪಾಧ್ಯಾಯರಾಗಿ ಸೇವೆ ಸಲ್ಲಿಸುವಾಗಲೇ ಅಧ್ಯಾತ್ಮ ಒಲವಿನಿಂದ ಸಂಸ್ಕೃತ ಕಲಿತು ಸಾಧಕರಾದರು. ಆ ಸಮಯದಲ್ಲಿ ಶ್ರೀ ಹೊಸಕೆರೆ ಚಿದಂಬರಯ್ಯನವರ, ಶ್ರೀ ಮಹಾಭಾಗವತರ ಸಂಪರ್ಕ, ಅಧ್ಯಾತ್ಮ ಬಾಂಧವ್ಯ, ಆತ್ಮೀಯತೆ, ಅನಂತರ ಶ್ರೀ ಗೋಂದಾವಲಿ ಮಹಾರಾಜರಲ್ಲಿ ಶ್ರೀರಾಮತಾರಕ ಮಂತ್ರೋಪದೇಶ, ಶೃಂಗೇರಿ ಜಗದ್ಗುರುಗಳು ಶ್ರೀ ಸಚ್ಚಿದಾನಂದ ಶಿವಾಭಿನವನೃಸಿಂಹ ಭಾರತೀ ಮಹಾಸ್ವಾಮಿಗಳವರಿಂದ ಭಾಷ್ಯಶಾಂತಿ ಪಾಠಗಳು ಅವರ ಶ್ರದ್ಧಾಕಾರ್ಯತತ್ಪರತೆಗೆ ಮೆರುಗನ್ನು ನೀಡಿದವು.

1937 ರಲ್ಲಿ ಹೊಳೆನರಸೀಪುರದಲ್ಲಿ ನೆಲೆಸಿದ ಮೇಲೆ ತಮ್ಮನ್ನು ಪೂರ್ಣವಾಗಿ ಶಾಂಕರ ವೇದಾಂತಕ್ಕೆ ಅರ್ಪಿಸಿಕೊಂಡರು. 1948 ರಲ್ಲಿ ಸಂನ್ಯಾಸ ಸ್ವೀಕಾರ ಮಾಡಿದರು. ಶುದ್ಧಾತತ್ತ್ವಾನ್ವೇಷಣೆ, ನಿಖರವಾದ ಬರವಣಿಗೆ, ಆಚಾರನಿಷ್ಠೆ ಮತ್ತು ಕಠೋರನಿಯಮಪಾಲನೆಗೆ ಶ್ರೀ ಶ್ರೀಗಳವರು ಹೆಸರಾದವರು. **ಅವರು ಸ್ಥಾಪಿಸಿರುವ (1920) ಅಧ್ಯಾತ್ಮಪ್ರಕಾಶ ಕಾರ್ಯಾಲಯವು ಈಗಲೂ ನಿಜವಾದ ಅಧ್ಯಾತ್ಮವಿದ್ಯಾ ಪ್ರಸಾರ ಕೇಂದ್ರವಾಗಿದೆ.**

ಪೂಜ್ಯರು 1975 ನೇ ಆಗಸ್ಟ್ 5 ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿ ಪೀಠವು ಹೊಳೇನರಸೀಪುರದಲ್ಲಿದೆ. ಇಂದಿಗೂ ಚೈತನ್ಯ ಸ್ವರೂಪಿಗಳಾಗಿ ಕಾರ್ಯಾಲಯದ ಮೂಲ ಶಕ್ತಿಯಾಗಿದ್ದಾರೆ.

ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹಿ
ತನ್ನಃ ಸಚ್ಚಿದಾನಂದಃ ಪ್ರಚೋದಯಾತ್ ॥

ಪ್ರತಿಯೊಂದು ಧರ್ಮದಲ್ಲಿಯೂ ಮೂರು ಭೂಮಿಕೆಗಳಿರುವವು; ಮೊದಲು ದೇವರು ಅತ್ಯಂತ ದೂರದಲ್ಲಿರುವನೆಂದು ತೋರುವುದು, ಆಮೇಲೆ ನಾವು ಆತನ ಹತ್ತಿರ ಹತ್ತಿರಕ್ಕೆ ಬಂದು ಅವನಿಗೆ ಸರ್ವ ವ್ಯಾಪಕತ್ವವನ್ನು ಕೊಡುವೆವು, ಆಗ ನಾವು ಆತನಲ್ಲಿಯೇ ಇದ್ದುಕೊಂಡಿರುವೆವು, ಕೊನೆಗೆ ನಾವೇ ಆತನೆಂಬುದುನ್ನು ಕಂಡುಕೊಳ್ಳುವೆವು. ಹೊರಗೆ ದೇವರಿದ್ದಾನೆಂಬ ಭಾವನೆಯೇನೂ ಸುಳ್ಳಲ್ಲ. ನಾನೇ ದೇವರಾಗಿದ್ದರೆ ನನ್ನ ಅಂತಃಕರಣವು ದೇವಾಲಯ, ನನ್ನ ಪ್ರತಿಯೊಂದು ವ್ಯಾಪಾರವು ಆರಾಧನೆ - ಹೀಗೆ ನಮ್ಮ ಧರ್ಮವೆಂದರೆ ವಿಕಾಸವಾಗುವುದು, ಸಾಕ್ಷಾತ್ಕರಿಸುವದು, ನೇರಾಗಿ ಕಂಡುಕೊಳ್ಳುವುದು, ಸುಮ್ಮನೆ ಮಾತುಗಳನ್ನು ಮುಟಗುಟ್ಟುವದಲ್ಲ ಮೊಳಕಾಲು ಮುಡಿಯುವದಲ್ಲ, ಮಾನವನು ದಿನದಿನಕ್ಕೂ ಈಶ್ವರತ್ವವನ್ನು ಸಾಕ್ಷಾತ್ಕಸಿಕೊಳ್ಳುತ್ತಾ ಅನಂತ ಕಾಲದ ಅಭ್ಯಾಸದಿಂದ ಪರಮೇಶ್ವರ ನಾಗತಕ್ಕದ್ದು.

—ಸ್ವಾಮಿ ವಿವೇಕಾನಂದ

